ಪಾಂಡವಾಶ್ಚ ಮಹೀಪಾಲಾ ಯಜ್ಞದರ್ಶನಮಿಚ್ಛವಃ ।
ಆಹೂತಾ ವಾಸುದೇವೇನ ದ್ವಾರಕಾಮಾಯಯುರ್ನೃಪ ॥ ೯ ॥

ತಸ್ಮಿಂಸ್ತಥಾ ವರ್ತಮಾನೇ ಹಯಮೇಧೇ ಮಹೋತ್ಸವೇ ।
ಆಸಂಸ್ತೃಪ್ತಾ ದ್ವಿಜಾ ಭೋಜ್ಯವಸ್ತ್ರಗೋಭೂಮಿಕಾಂಚನೈಃ ॥ ೧೦ ॥

ದೀಕ್ಷಾಂ ಪ್ರವಿಶ್ಯ ಗೋವಿಂದಃ ಕಾಮ್ಯೈಸ್ತರ್ಪಯತಿ ದ್ವಿಜಾನ್ ।
ಭುಂಜಾನೇಷು ದ್ವಿಜಾಗ್ರ್ಯೇಷು ಪ್ರತ್ಯಗೃಹ್ಣಾತ್ ಸುವಾಂಛಿತಮ್ ॥ ೧೧ ॥

ಆಸೀನೇಷು ಯಥಾಯೋಗಂ ಭೂಪಾಲೇಷು ಸಮಂತತಃ ।
ವದತ್ಸು ಮಾ ಶಬ್ದ ಇತಿ ವೇತ್ರಝರ್ಝರಪಾಣಿಷು ॥ ೧೨ ॥

ತೃಣಮೂಲಧರಃ ಕಶ್ಚಿದ್ ಬ್ರಾಹ್ಮಣೋಽಭ್ಯೇತ್ಯ ಸತ್ವರಃ ।
ಚುಕ್ರೋಶ ಆರ್ತ ಉದ್ಬಾಹುರ್ಯಜ್ಞವಾಟಮುಖೇ ಸ್ಥಿತಃ ॥ ೧೩ ॥

ಕ್ಷುತ್‌ಕ್ಷಾಮಕಂಠಃ ಶುಷ್ಕಾಸ್ಯೋ ಗಲದ್ಬಾಷ್ಪಾಕುಲೇಕ್ಷಣಃ ।
ಇದಂ ಚೋವಾಚ ವಿಲಪನ್ನಾತುರೋ ದೀನಮಾನಸಃ ॥ ೧೪ ॥

ಬ್ರಹ್ಮದ್ವಿಷಃ ಶಠಧಿಯೋ ಲುಬ್ಧಸ್ಯ ವಿಷಯಾತ್ಮನಃ ।
ಕ್ಷತ್ರಬಂಧೋಃ ಕರ್ಮದೋಷಾತ್ಪಂಚತ್ವಂ ಮೇ ಗತಾಃ ಸುತಾಃ ॥ ೧೫ ॥

ಹಿಂಸಾವಿಹಾರಂ ನೃಪತಿಂ ದುಃಶೀಲಮಜಿತೇಂದ್ರಿಯಮ್ ।
ಪ್ರಜಾ ಭಜಂತ್ಯಃ ಸೀದಂತಿ ದರಿದ್ರಾ ನಿತ್ಯದುಃಖಿತಾಃ ॥ ೧೬ ॥

ಏವಂ ದ್ವಿತೀಯಂ ವಿಪ್ರರ್ಷಿಸ್ತೃತೀಯಂ ತ್ವೇವಮೇವ ಚ ।
ಇತ್ಯುಕ್ತ್ವಾ ಸ ಪುನಶ್ಚೈವ ಚುಕ್ರೋಶ ಭೃಶದುಃಖಿತಃ ॥ ೧೭ ॥

ತದಾಕರ್ಣ್ಯಾರ್ಜುನೋ ಮಾನೀ ಸಮುತ್ಥಾಯ ವರಾಸನಾತ್ ।
ಅಪೃಚ್ಛತ್ ಸ್ವಯಮಾಸಾದ್ಯ ಬ್ರಾಹ್ಮಣಂ ಕೇಶವಾಂತಿಕಾತ್ ॥ ೧೮ ॥

ಕಿಮಾಸನ್ನರ್ಭಕಾ ಬ್ರಹ್ಮಂಸ್ತವ ಕೇನಾಸಿ ದುಃಖಿತಃ ।
ಬ್ರೂಹಿ ತತ್ತ್ವಮಶೇಷೇಣ ತ್ವಾಮದ್ಯ ಸುಖಯಾಮ್ಯಹಮ್ ॥ ೧೯ ॥

ಇತ್ಯುಕ್ತೋ ಬ್ರಾಹ್ಮಣಃ ಪ್ರಾಹ ಜಾತೋಜಾತೋಽರ್ಭಕೋ ಮಮ ।
ನೀಯತೇ ತಾತ ಕೇನಾಪಿ ತತ್‌ಕ್ಷಣೇ ಸೂತಿಕಾಗೃಹಾತ್ ॥ ೨೦ ॥

ತದಾಕರ್ಣ್ಯಾರ್ಜುನಃ ಪ್ರಾಹ ಸ್ಮಯಮಾನ ಇವ ದ್ವಿಜಮ್ ।
ಕಿಂ ಬ್ರಾಹ್ಮಣ ತ್ವನ್ನಿವಾಸೇ ಇಹ ನಾಸ್ತಿ ಧನುರ್ಧರಃ ॥ ೨೧ ॥

ರಾಜನ್ಯಬಂಧೋರೇತೇ ವೈ ಬ್ರಾಹ್ಮಣಾಃ ಸತ್ರಮಾಸತೇ ॥ ೨೨ ॥

ಧನದಾರಾತ್ಮಜಪೃಕ್ತಾ ಯತ್ರ ಶೋಚಂತಿ ಬ್ರಾಹ್ಮಣಾಃ ।
ತೇ ವೈ ರಾಜನ್ಯವೇಷೇಣ ನಟಾ ಜೀವಂತ್ಯಸುಂಭರಾಃ ॥ ೨೩ ॥

ಅಹಂ ಪ್ರಜಾ ವಾಂ ರಕ್ಷಿಷ್ಯೇ ಭಗವನ್ ದೀನಯೋರಿಹ ।
ಅನಿಸ್ತೀರ್ಣಪ್ರತಿಜ್ಞೋಽಗ್ನಿಂ ಪ್ರವೇಕ್ಷ್ಯೇಽಹತಕಲ್ಮಷಃ ॥ ೨೪ ॥

ಬ್ರಾಹ್ಮಣ ಉವಾಚ

ಸಂಕರ್ಷಣೋ ವಾಸುದೇವಃ ಪ್ರದ್ಯುಮ್ನೋ ಧನ್ವಿನಾಂ ವರಃ ।
ಅನಿರುದ್ಧೋಽಪ್ರತಿರಥೋ ನ ತ್ರಾತುಂ ಶಕ್ನುವಂತಿ ಯತ್ ॥ ೨೫

ತತ್ಕಥಂ ನು ಭವಾನ್ ಕರ್ಮ ದುಷ್ಕರಂ ಜಗದೀಶ್ವರೈಃ ।
ಚಿಕೀರ್ಷತೀಹ ಬಾಲಿಶ್ಯಾತ್ತನ್ನ ಶ್ರದ್ದಧ್ಮಹೇ ವಯಮ್ ॥ ೨೬

ಅರ್ಜುನ ಉವಾಚ

ನಾಹಂ ಸಂಕರ್ಷಣೋ ಬ್ರಹ್ಮನ್ನ ಕೃಷ್ಣಃ ಕಾರ್ಷ್ಣಿರೇವ ಚ ।
ಅಹಂ ಧನಂಜಯೋ ನಾಮ ಗಾಂಡೀವಂ ಪಶ್ಯ ಕಾರ್ಮುಕಮ್ ॥ ೨೭ ॥

ಮಾವಮಂಸ್ಥಾ ಮಮ ಬ್ರಹ್ಮನ್ ವೀರ್ಯಂ ತ್ರ್ಯಂಬಕತೋಷಣಮ್ ।
ಮೃತ್ಯುಂ ವಿಜಿತ್ಯ ಪ್ರಧನೇಽಪ್ಯಾನಯಿಷ್ಯೇ ತವ ಪ್ರಜಾಃ ॥ ೨೮ ॥

ಇತಿ ವಿಸ್ರಂಭಯಿತ್ವಾ ತಂ ಕೃಷ್ಣಮಾಹಾರ್ಜುನೋ ನೃಪ ।
ಅನುಜ್ಞಾಂ ದೇಹಿ ಭಗವನ್ ಬ್ರಾಹ್ಮಣಾರ್ಥೇ ಪ್ರಯಾಸ್ಯತಃ ॥ ೨೯ ॥

ಯಜತಾಂ ವಾಜಿಮೇಧೇನ ಭವಾನೇಭಿರ್ಮಹಾತ್ಮಭಿಃ ।
ಇತಿ ಬ್ರುವಂತಂ ಬೀಭತ್ಸುಮನುಜ್ಞಾಂ ಪ್ರೇಪ್ಸುಮಚ್ಯುತಃ
ಬದ್ಧತೂಣಂ ಸಗಾಂಡೀವಂ ಸ್ಮಯಮಾನೋಽಬ್ರವೀದ್ವಚಃ । ॥ ೩೦ ॥

ಶ್ರೀಭಗವಾನುವಾಚ

ಅಹಮೇವಾಗಮಿಷ್ಯಾಮಿ ನ ತ್ವಯಾ ಶಕ್ಯತೇಽರ್ಜುನ ।
ತಮಸಾಧಾರಣಂ ಭೂತಂ ಮನ್ಯೇ ಯೇನ ಹತೋಽರ್ಭಕಃ ॥ ೩೧ ॥

ಅರ್ಜುನ ಉವಾಚ

ಸಲೋಕಪಾಲೋ ದೇವೇಂದ್ರಃ ಖಾಂಡವೇ ವಿಜಿತೋ ಮಯಾ ।
ಕಿರಾತರೂಪೀ ಯುದ್ಧೇನ ತೋಷಿತಶ್ಚ ತ್ರಿಯಂಬಕಃ ॥ ೩೨ ॥

ನಿವಾತಕವಚಾಶ್ಚೈವ ವಾಸವೇನಾಪಿ ದುರ್ಜಯಾಃ ।
ಮಯ್ಯೈವ ನಿಹತಾಃ ಸಂಖ್ಯೇ ಹಿರಣ್ಯಪುರವಾಸಿನಃ ॥ ೩೩ ॥

ತೇಭ್ಯೋಽಧಿಕತರಂ ಭೂತಂ ಕಿಂ ನು ದಾನವಸೂದನ ।
ವಿಭೀಷಯಸಿ ಮಾಂ ಕಸ್ಮಾದನುಜ್ಞಾಂ ದೇಹಿ ಸಾಂಪ್ರತಮ್ ॥ ೩೪ ॥

ಶ್ರೀಶುಕ ಉವಾಚ

ಇತ್ಯುಕ್ತಃ ಪ್ರದದೌ ಕೃಷ್ಣಸ್ತ್ವನುಜ್ಞಾಂ ಸವ್ಯಸಾಚಿನೇ ।
ನಿರ್ಯಯೌ ಯಜ್ಞಶಾಲಾಯಾಃ ಸ ಗೃಹೀತಶರಾಸನಃ ॥ ೩೫ ॥

~~ರಥಮಾಸ್ಥಾಯ ವಿಪುಲಂ ಸಮುಚ್ಛ್ರಿತಕಪಿಧ್ವಜಮ್ ।~~
ಅಗ್ರೇ ಬ್ರಾಹ್ಮಣಮಾರೋಪ್ಯ ತದ್‌ಗ್ರಾಮಮಭಿತೋ ಯಯೌ ॥ ೩೬ ॥

ತತ್ರ ಗತ್ವಾ ಪ್ರವಿಷ್ಟಾಯಾಂ ತತ್ಪತ್ನ್ಯಾಂ ಸೂತಿಕಾಗೃಹಮ್ ।
ಬ್ರಾಹ್ಮಣಂ ಪ್ರಾಹ ಬೀಭತ್ಸುರವರೋಪ್ಯ ರಥಾನ್ನೃಪ ॥ ೩೭ ॥

ಅರ್ಜುನ ಉವಾಚ

ಯಾಹಿ ಸ್ವಭವನಂ ಬ್ರಹ್ಮನ್ನಭಯಂ ತವ ಸರ್ವತಃ ।
ದತ್ತಂ ಮಯಾಽದ್ಯ ತದ್ಭೀತಾಂ ಪತ್ನೀಮಾಶ್ವಾಸಯಾಶು ತೇ ॥ ೩೮ ॥

ಇತಿ ವಿಸ್ರಂಭಿತೋ ವಿಪ್ರಃ ಫಾಲ್ಗುನೇನ ಪರಂತಪ ।
ಜಗಾಮ ಸ್ವಗೃಹೇ ಪ್ರೀತ್ಯಾ ಪಾರ್ಥವೀರ್ಯಂ ನಿಶಮ್ಯ ತತ್ ॥ ೩೯ ॥

ಪ್ರಸೂತಿಕಾಲ ಆಸನ್ನೇ ಭಾರ್ಯಾಯಾ ದ್ವಿಜಸತ್ತಮಃ ।
ಪ್ರೋವಾಚ ದ್ರುತಮಭ್ಯೇತ್ಯ ಪಾರ್ಥಂ ಶಸ್ತ್ರಭೃತಾಂ ವರಮ್ ॥ ೪೦ ॥

ಬ್ರಾಹ್ಮಣ ಉವಾಚ

ಏಹಿ ಪಾರ್ಥ ಮಹಾಬಾಹೋ ಯತ್ತೋ ಭವ ಯುಧಾಂ ವರ ।
ಅತ್ರ ಪೂರ್ವಕೃತಾನಾಂ ಹಿ ಪೌರುಷಾಣಾಂ ನಿದರ್ಶನಮ್ ॥ ೪೧ ॥

ಶ್ರೀಶುಕ ಉವಾಚ

ಇತ್ಯುಕ್ತೋ ರಥಮಾರುಹ್ಯ ಸಜ್ಯಂ ಕೃತ್ವಾ ತು ಗಾಂಡಿವಮ್ ।
ತ್ವರನ್ ಜಗಾಮ ಬೀಭತ್ಸುಃ ಸೂತಿಕಾಭವನಾಂತಿಕಮ್ ॥ ೪೨ ॥

ಬ್ರಾಹ್ಮಣೋಽಪಿ ಪ್ರವಿಶ್ಯಾಹ ಮುಹೂರ್ತೇ ಸೂತಿಕಾಗೃಹೇ ।
ಗತೇ ತು ಪಾಹಿಪಾಹೀತಿ ಮೃತ್ಯೋರರ್ಜುನಮಾತುರಃ ॥ ೪೩ ॥

ಸ ಉಪಸ್ಪೃಶ್ಯ ಶುಚ್ಯಂಭೋ ನಮಸ್ಕೃತ್ಯ ಮಹೇಶ್ವರಮ್ ।
ದಿವ್ಯಾಸ್ತ್ರಾಣಿ ಚ ಸಂಸ್ಮೃತ್ಯ ಸಜ್ಯಂ ಗಾಂಡೀವಮಾದದೇ ॥ ೪೪

ನ್ಯರುಣತ್ಸೂತಿಕಾಗಾರಂ ಶರೈರ್ನಾನಾಸ್ತ್ರಯೋಜಿತೈಃ ।
ತಿರ್ಯಗೂರ್ಧ್ವಮಧಃ ಪಾರ್ಥಶ್ಚಕಾರ ಶರಪಂಜರಮ್ ॥ ೪೫

ತತಃ ಕುಮಾರಃ ಸಂಜಾತೋ ವಿಪ್ರಪತ್ನ್ಯಾ ರುದನ್ಮುಹುಃ ।
ಸದ್ಯೋಽದರ್ಶನಮಾಪೇದೇ ಸಶರೀರೋ ವಿಹಾಯಸಾ ॥ ೪೬ ..

ತದಾಽಽಹ ವಿಪ್ರೋ ವಿಜಯಂ ವಿನಿಂದನ್ ಕೃಷ್ಣಸನ್ನಿಧೌ ॥
ಮೌಢ್ಯಾದ್ಯಸ್ಯ ತವಾಹಂ ವೈ ಶ್ರದ್ದಧೇ ಕ್ಲೀಬ ಕತ್ಥನಮ್ ॥ ೪೭ ॥

ನ ಪ್ರದ್ಯುಮ್ನೋಽನಿರುದ್ಧೋ ವಾ ನ ರಾಮೋ ನ ಚ ಕೇಶವಃ ।
ಯಸ್ಯ ಶೇಕುಃ ಪರಿತ್ರಾತುಂ ಕೋಽನ್ಯಸ್ತದಧಿಕೇಶ್ವರಃ ॥ ೪೮ ॥

ಧಿಗರ್ಜುನಂ ವೃಥಾವಾಚಂ ಧಿಗಾತ್ಮಶ್ಲಾಘಿನೋ ಧನುಃ ।
ದೈವೋಪಸೃಷ್ಟಯೋರ್ಮೌಢ್ಯಾದಾನಿನೀಷತಿ ದುರ್ಮತಿಃ ॥ ೪೯ ॥

ಏವಂ ಶಪತಿ ವಿಪ್ರರ್ಷೌ ವಿದ್ಯಾಮಾಸ್ಥಾಯ ಫಾಲ್ಗುನಃ ।
ಯಯೌ ಸಂಯಮನೀಮಾಶು ಯತ್ರಾಸ್ತೇ ಭಗವಾನ್ ಯಮಃ ॥ ೫೦ ॥

ವಿಪ್ರಾಪತ್ಯಮಚಕ್ಷಾಣಸ್ತತ ಐಂದ್ರೀಮಗಾತ್ಪುರಮ್ ।
ಆಗ್ನೇಯೀಂ ನೈರ್ಋತೀಂ ಸೌಮ್ಯಾಂ ವಾಯವೀಂ ವಾರುಣೀಮಥ ೫೧

ರಸಾತಲಂ ನಾಗಪುರಂ ಧಿಷ್ಣ್ಯಾನ್ಯನ್ಯಾನ್ಯುದಾಯುಧಃ ।
ತತೋಽಲಬ್ಧದ್ವಿಜಸುತೋ ಹ್ಯನಿಸ್ತೀರ್ಣಪ್ರತಿಶ್ರುತಃ ॥ ೫೨ ॥

ಅಗ್ನಿಂ ವಿವಿಕ್ಷುಃ ಕೃಷ್ಣೇನ ಪ್ರತ್ಯುಕ್ತಃ ಪ್ರತಿಷೇಧತಾ ।
ದರ್ಶಯೇ ದ್ವಿಜಸೂನೂಂಸ್ತೇ ಮಾ ವಧ್ಯಾತ್ಮಾನಮಾತ್ಮನಾ ॥ ೫೩ ॥

ಏತೇನ ಕೀರ್ತಿಂ ವಿಮಲಾಂ ಮಾನುಷ್ಯಂ ಸ್ಥಾಪಯಿಷ್ಯಸಿ ।
ಇತಿ ಸಂಭಾಷ್ಯ ಭಗವಾನರ್ಜುನಂ ಸ ಮಹೇಶ್ವರಃ ॥ ೫೪ ॥

ಸಹೈವ ರಥಮಾಸ್ಥಾಯ ಪ್ರಾಚೀಂ ದಿಶಮವೀವಿಶತ್ ।
ಸಪ್ತದ್ವೀಪಾನ್ ಸಪ್ತಸಿಂಧೂನ್ ಸಪ್ತಸಪ್ತ ಗಿರೀನಥ ॥
ಲೋಕಾಲೋಕಂ ತಥಾಽತೀತ್ಯ ವಿವೇಶ ಸುಮಹತ್ತಮಃ ॥ ೫೫ ॥

ತತ್ರಾಶ್ವಾಃ ಶೈಬ್ಯಸುಗ್ರೀವಮೇಘಪುಷ್ಪಬಲಾಹಕಾಃ ।
ತಮಸಾ ಭ್ರಷ್ಟಗತಯೋ ಬಭೂವುರ್ಭರತರ್ಷಭ ॥ ೫೬ ॥

ತಾನ್ ದೃಷ್ಟ್ವಾ ಭಗವಾನ್ ಕೃಷ್ಣೋ ಮಹಾಯೋಗೇಶ್ವರೇಶ್ವರಃ ।
ಸಹಸ್ರಾದಿತ್ಯಸಂಕಾಶಂ ಸ್ವಚಕ್ರಂ ಪ್ರಾಹಿಣೋತ್ಪುರಃ ॥ ೫೭ ॥

ತಮಃ ಸುಘೋರಂ ಗಗನಚ್ಛದಂ ಮಹ-
ದ್ವಿದಾರಯದ್ಭೂರಿತರೇಣ ರೋಚಿಷಾ ।
ಮನೋಜವಂ ನಿರ್ವಿವಿಶೇ ಸುದರ್ಶನಂ
ಗುಣಚ್ಯುತೋ ರಾಮಶರೋ ಯಥಾ ಚಮೂಃ ॥ ೫೮ ॥

ದ್ವಾರೇಣ ಚಕ್ರಾನುಪಥೇ ಯದೂತ್ತಮಂ
ಪರಾತ್ಪರಂ ಜ್ಯೋತಿರನಂತಪಾರಮ್ ।
ಸಮಶ್ನುವಾನಂ ಪ್ರಸಮೀಕ್ಷ್ಯ ಫಲ್ಗುನಃ
ಪ್ರದೀಪಿತಾಕ್ಷಃ ಪಿದಧೇಽಕ್ಷಿಣೀ ಉಭೇ ॥ ೫೯ ॥

ತತಃ ಪ್ರವಿಷ್ಟಃ ಸಲಿಲಂ ನಭಸ್ವತಾ
ಬಲೀಯಸೈಜದ್ಬೃಹದೂರ್ಮಿಭೀಷಣಮ್ ।
ತತ್ರಾದ್ಭುತಂ ವೈ ಭವನಂ ದ್ಯುಮತ್ತಮಂ
ಭ್ರಾಜನ್ಮಣಿಸ್ತಂಭಸಹಸ್ರಶೋಭಿತಮ್ ॥ ೬೦ ॥

ತಸ್ಮಿನ್ ಮಹಾಭೀಮಮನಂತಮದ್ಭುತಂ
ಸಹಸ್ರಮೂರ್ಧನ್ಯಫಣಾಮಣಿದ್ಯುತಿಮ್ ।
ವಿಭ್ರಾಜಮಾನಂ ದ್ವಿಗುಣೇಕ್ಷಣೋಲ್ಬಣಂ
ಸಿತಾಂಬರಾಭಂ ಶಿತಿಕಂಠಜಿಹ್ವಗಮ್ ॥ ೬೧ ॥

ದದರ್ಶ ತದ್ಭೋಗಸುಖಾಸನಂ ವಿಭುಂ
ಮಹಾನುಭಾವಂ ಪುರುಷೋತ್ತಮೋತ್ತಮಮ್ ।
ಸಾಂದ್ರಾಂಬುದಾಭಂ ಸುಪಿಶಂಗವಾಸಸಂ
ಪ್ರಸನ್ನವಕ್ತ್ರಂ ರುಚಿರಸ್ಮಿತೇಕ್ಷಣಮ್ ॥ ೬೨ ॥

ಮಹಾಮಣಿವ್ರಾತಕಿರೀಟಕುಂಡಲ-
ಪ್ರಭಾಪರಿಕ್ಷಿಪ್ತಸಹಸ್ರಕುಂತಲಮ್ ।
ಪ್ರಲಂಬಚಾರ್ವಷ್ಟಭುಜಂ ಸಕೌಸ್ತುಭಂ
ಶ್ರೀವತ್ಸಲಕ್ಷ್ಮಂ ವನಮಾಲಯಾಽಽವೃತಮ್ ॥ ೬೩ ॥

ಸುನಂದನಂದಪ್ರಮುಖೈಶ್ಚ ಪಾರ್ಷದೈ-
ಶ್ಚಕ್ರಾದಿಭಿರ್ಮೂರ್ತಿಧರೈರ್ನಿಜಾಯುಧೈಃ ।
ಪುಷ್ಟ್ಯಾ ಶ್ರಿಯಾ ಕೀರ್ತ್ಯಜಯಾಽಖಿಲರ್ದ್ಧಿಭಿ-
ರ್ನಿಷೇವ್ಯಮಾಣಂ ಪರಮೇಷ್ಠಿನಾಂ ಪತಿಮ್ ॥ ೬೪ ॥

ವವಂದ ಆತ್ಮಾನಮನಂತಮಚ್ಯುತೋ
ಜಿಷ್ಣುಶ್ಚ ತದ್ದರ್ಶನಜಾತಸಾಧ್ವಸಃ ।
ಸ ಚಾಹ ಭೂಮಾ ಪರಮೇಷ್ಠಿನಾಂ ಪ್ರಭು
ರ್ಬದ್ಧಾಂಜಲೀ ಸಸ್ಮಿತಪೂರ್ವಯಾ ಗಿರಾ ॥ ೬೫ ॥

ದ್ವಿಜಾತ್ಮಜಾ ಮೇ ಯುವಯೋರ್ದಿದೃಕ್ಷುಣಾ
ಮಯೋಪನೀತಾ ಭುವಿ ಧರ್ಮಗುಪ್ತಯೇ ।
ಕಲಾವತೀರ್ಣಾವವನೇರ್ಭರಾಸುರಾನ್
ಹತ್ವೇಹ ಭೂಯಸ್ತ್ವರಯೇತಮಂತಿ ಮೇ ॥ ೬೬ ॥

ಪೂರ್ಣಕಾಮಾವಪಿ ಯುವಾಂ ನರನಾರಾಯಣಾವೃಷೀ ।
ಧರ್ಮಮಾಚರತಾಂ ಸ್ಥಿತ್ಯೈ ವೃಷಭೌ ಲೋಕಸಂಗ್ರಹಮ್ ॥ ೬೭ ॥

ಇತ್ಯಾದಿಷ್ಟೌ ಭಗವತಾ ತೌ ಕೃಷ್ಣೌ ಪರಮೇಷ್ಠಿನಾ ।
ಓಮಿತ್ಯಾನಂದಭೂಮಾನಮಾದಾಯ ದ್ವಿಜದಾರಕಾನ್ ॥ ೬೮ ॥

ನ್ಯವರ್ತತಾಂ ಸ್ವಕಂ ಧಾಮ ಸಂಪ್ರಹೃಷ್ಟೌ ಯಥಾಗತಮ್ ।
ವಿಪ್ರಾಯ ದದತುಃ ಪುತ್ರಾನ್ ಯಥಾರೂಪಂ ಪ್ರಸೂಯತಾಮ್ ॥ ೬೯ ॥

ನಿಶಮ್ಯ ವೈಷ್ಣವಂ ಧಾಮ ಪಾರ್ಥಃ ಪರಮವಿಸ್ಮಿತಃ ।
ಯತ್ಕಿಂಚಿತ್ಪೌರುಷಂ ಪುಂಸಾಂ ಮೇನೇ ಕೃಷ್ಣಾನುಕಂಪಿತಮ್ ॥ ೭೦ ॥

ತಥಾ ಪ್ರವಿಶ್ಯ ಗೋವಿಂದೋ ಯಜ್ಞವಾಟಂ ಪುನಃ ಸ್ವಯಮ್ ।
~~ಪೂರ್ಣಂ ಪುರೋಹಿತೈರ್ವಿಪ್ರೈರ್ಋತ್ವಿಗ್ಭಿಃ ಕ್ಷತ್ರಿಯರ್ಷಭೈಃ ॥ ೭೧ ॥~~

ಪ್ರಾಯಶ್ಚಿತ್ತಂ ತು ಚಲನೇ ದೀಕ್ಷಾಯಾಂ ಯ ಉದಾಹೃತಃ ।
ತಂ ಚಕಾರ ಯಥಾನ್ಯಾಯಂ ಬ್ರಾಹ್ಮಣೈರನುಮೋದಿತಃ ॥ ೭೨ ॥

ಸಮಾಪ್ಯ ಯಜ್ಞಂ ವಿಧಿವತ್ತರ್ಪಯಿತ್ವಾರ್ಥಿನೋ ದ್ವಿಜಾನ್ ।
ಋತ್ವಿಗ್ಭ್ಯಃ ಪೂಜಯಿತ್ವಾನ್ಯಾನೃಷೀಂಶ್ಚ ಕುರುಸತ್ತಮ ॥ ೭೩ ॥

ಯಮುನಾಯಾಂ ಮಹಾನದ್ಯಾಂ ಕೃತ್ವಾವಭೃಥಮಜ್ಜನಮ್ ।
ವಿಜಹಾರ ಯಥಾಕಾಮಂ ಮಹರ್ಷಿಭಿರ್ಯದೂತ್ತಮಃ ॥ ೭೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಅಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದಶಮಸ್ಕಂಧೇ ಉತ್ತರಾರ್ಧೇ ದ್ವ್ಯಧಿಕಶತತಮೋಽಧ್ಯಾಯಃ

❖

ಅಥ ತ್ರ್ಯಧಿಕಶತತಮೋಽಧ್ಯಾಯಃ

ಶ್ರೀಶುಕ ಉವಾಚ

ಉದ್ವಾಪನಸ್ನಾನಹೇತೋರ್ಯಮುನಾತೀರಮಾಗತಮ್ ।
ಶ್ರುತ್ವಾ ತೂರ್ಣಂ ಕಲಿಂಗೇಶೋ ದಂತವಕ್ರಃ ಸಹಾನುಜಃ ॥ ೧ ॥

ಮಹತ್ಯಾ ಸೇನಯಾ ಯುಕ್ತೋ ಗಜಾನೀಕಸಮನ್ವಿತಃ ।
ಗಚ್ಛಂತಂ ದ್ವಾರಕಾಂ ಕೃಷ್ಣಂ ಪಥಿ ರೋದ್ಧುಂ ಸಮಾಯಯೌ ॥ ೨ ॥

ಸೋಽಭ್ಯೇತ್ಯ ಪಥಿ ಗಚ್ಛಂತಂ ವೃತಂ ಯದುಕುಮಾರಕೈಃ ।
ಕಾಂತಾಷೋಡಶಸಾಹಸ್ರಶಿಬಿಕಾಪರಿವಾರಿತಮ್ ॥ ೩ ॥

ರಾಜನ್ಯಸಾರ್ಥಾನುಗತಂ ಮಹರ್ಷಿಗಣಸೇವಿತಮ್ ।
ಋತ್ವಿಕ್ಪುರೋಹಿತಾಚಾರ್ಯಬ್ರಾಹ್ಮಣೈಶ್ಚ ಸಮನ್ವಿತಮ್ ॥ ೪ ॥

ದಂತವಕ್ರೋಽರುಣನ್ಮೂಢೋ ಮೃಗೇಂದ್ರಂ ಜಂಬುಕೋ ಯಥಾ ।
ರುಕ್ಮಿಣಃ ಶಿಶುಪಾಲಸ್ಯ ಪೌಂಡ್ರಕಸ್ಯ ಚ ದುರ್ಮತೇಃ ॥ ೫ ॥

ಪರಲೋಕಗತಾನಾಂ ಚ ಕುರ್ವನ್ ಪಾರೋಕ್ಷ್ಯಸೌಹೃದಮ್ ।
ಪದಾತಿಃ ಪಥಿ ಸಂರೋದ್ಧುಂ ಗದಾಪಾಣಿಃ ಪ್ರಕಂಪಯನ್ ॥ ೬ ॥

ಪದ್ಭ್ಯಾಂ ಮಹೀಂ ಮಹಾರಾಜ ಮಹಾಸತ್ತ್ವೋ ವ್ಯದೃಶ್ಯತ ।
ತಂ ತಥಾಽಽಯಾಂತಮಾಲೋಕ್ಯ ಗದಾಮಾದಾಯ ಸತ್ವರಃ ॥ ೭ ॥

ಅವಪ್ಲುತ್ಯ ರಥಾತ್ಕೃಷ್ಣಃ ಸಿಂಧುಂ ವೇಲೇವ ಪ್ರತ್ಯಗಾತ್ ।
ಗದಾಮುದ್ಯಮ್ಯ ಕಾಲಿಂಗೋ ಮುಕುಂದಂ ಪ್ರಾಹ ದುರ್ಮದಃ ॥ ೮ ॥

ದಿಷ್ಟ್ಯಾ ಕೃಷ್ಣ ಭವಾನದ್ಯ ಮಮ ದೃಷ್ಟಿಪಥಂ ಗತಃ ।
ತ್ವಾಮದ್ಯ ದ್ವಂದ್ವಯುದ್ಧೇನ ಹನಿಷ್ಯಾಮ್ಯವಿಲಂಬಿತಮ್ ॥ ೯ ॥

ತ್ವಂ ಮಾತುಲೇಯೋ ನಃ ಕೃಷ್ಣ ಮಿತ್ರಧ್ರುಕ್ ಪಾರದಾರಿಕಃ ।
ವಿಶ್ವಾಸಘಾತೀ ಬಂಧುಘ್ನಃ ಸತತಂ ಕಲಹಪ್ರಿಯಃ ॥ ೧೦ ॥

ಪೌಂಡ್ರಕಂ ಮಾತುಲೇಯಂ ಮೇ ಸಂಖೇ ಸೂದಿತವಾನಸಿ ।
ರುಕ್ಮೀ ಚ ಶಿಶುಪಾಲಶ್ಚ ಭ್ರಾತರೌ ಮೇ ತ್ವಯಾ ಹತೌ ॥ ೧೧ ॥

ಅತಸ್ತ್ವಾಂ ಗದಯಾ ಮಂದ ಹನಿಷ್ಯೇ ವಜ್ರಕಲ್ಪಯಾ ।
ತೇನಾನೃಣ್ಯಮುಪೈಮ್ಯಜ್ಞ ಮಿತ್ರಾಣಾಂ ಮಿತ್ರವತ್ಸಲಃ ॥ ೧೨ ॥

ಬಂಧುರೂಪಮರಿಂ ಹತ್ವಾ ವ್ಯಾಧಿಂ ದೇಹಚರಂ ಯಥಾ ।
ಇತಿ ಲೋಕಪ್ರವಾದೋಽಸ್ತಿ ತೇನ ದೋಷೋಽಪಿ ನಾಸ್ತಿ ಮೇ ॥ ೧೩ ॥

ಏವಂ ರೂಕ್ಷೈಶ್ಚ ವಚನೈಃ ಕೃಷ್ಣಂ ತೋತ್ರೈರಿವ ದ್ವಿಪಮ್ ।
ಗದಯಾಽತಾಡಯತ್ಕೃಷ್ಣಂ ಸಿಂಹವದ್ ವ್ಯನದಚ್ಚ ಸಃ ॥ ೧೪ ॥

ಗದಯಾಽಭಿಹತೋಽಪ್ಯಾಜೌ ನ ಚಚಾಲ ಯದೂತ್ತಮಃ ।
ಗದಯಾ ವ್ಯಹನದ್ದುರ್ವ್ಯಾ ಕೌಮೋದಕ್ಯಾ ಸ್ತನಾಂತರೇ ॥ ೧೫ ॥

ಗಾಢನಿರ್ಭಿಣ್ಣಹೃದಯ ಉದ್ವಮನ್ ರುಧಿರಂ ಮುಖಾತ್ ।
ಪ್ರಸಾರ್ಯ ಕೇಶಬಾಹ್ವಂಘ್ರೀಂ ಗತಾಸುರ್ವ್ಯಪತದ್ಭುವಿ ॥ ೧೬ ॥

ತತಃ ಸೂಕ್ಷ್ಮತರಂ ಜ್ಯೋತಿಃ ಕೃಷ್ಣಮಾವಿಶದದ್ಭುತಮ್ ।
ಪಶ್ಯತಾಂ ಸರ್ವಭೂತಾನಾಂ ಯಥಾ ಚೈದ್ಯಸ್ಯ ಸಂಗರೇ ॥ ೧೭ ॥

ಭ್ರಾತರಂ ನಿಹತಂ ದೃಷ್ಟ್ವಾ ದಂತವಕ್ರಂ ವಿದೂರಥಃ ।
ಮೂರ್ಛಿತೋ ಭ್ರಾತೃಶೋಕೇನಾಪ್ಯಸಿಚರ್ಮ ಸಮಾದದೇ ॥ ೧೮ ॥

ಸೋಽವಪ್ಲುತ್ಯ ರಥಾತ್ತೂರ್ಣಂ ವಿಧುನ್ವನ್ ಖಡ್ಗಮುತ್ತಮಮ್ ।
ಅಭಿದುದ್ರಾವ ಗೋವಿಂದಂ ಪದ್ಭ್ಯಾಮುರ್ವೀಂ ಪ್ರಕಂಪಯನ್ ॥ ೧೯ ॥

ತಸ್ಯ ಬಾಣೇನ ಚಿಚ್ಛೇದ ಖಡ್ಗಂ ಯಾದವನಂದನಃ ।
ತತೋ ಜಗ್ರಾಹ ನಿಶಿತಾಂ ಶಕ್ತಿಂ ಘೋರಾಂ ವಿದೂರಥಃ ॥ ೨೦ ॥

ತಯಾ ಪ್ರಹರ್ತುಂ ಗೋವಿಂದಮಭಿನಿಶ್ಚಿತ್ಯ ಸಂಗರೇ ।
ಕ್ಷಣೇನಾಭಿಸಸಾರಾಜ್ಞಶ್ಚಾಪಮುಕ್ತೋ ಯಥಾ ಶರಃ ॥ ೨೧ ॥

ತಸ್ಯ ಚಾಪತತಃ ಕೃಷ್ಣಶ್ಚಕ್ರೇಣ ಕ್ಷುರನೇಮಿನಾ ।
ಶಿರೋ ಜಹಾರ ರಾಜೇಂದ್ರ ಸಕಿರೀಟಂ ಸಕುಂಡಲಮ್ ॥ ೨೨ ॥

ಏವಂ ನಿಹತ್ಯ ಸಮರೇ ದಂತವಕ್ರವಿದೂರಥೌ ।
ಕಾಲಯಾಮಾಸ ತತ್ಸೈನ್ಯಂ ಜಗೃಹೇ ವಾರಣಾದಿಕಮ್ ॥ ೨೩ ॥

ಭೂಯಃ ಪುಷ್ಪರಥಂ ದಿವ್ಯಮಾರುಹ್ಯ ಸಮಲಂಕೃತಮ್ ।
ಸಹಿತಃ ಸಾತ್ವತಗಣೈರೀಡಿತಃ ಸುರಮಾನವೈಃ ॥ ೨೪ ॥

ಮುನಿಭಿಃ ಸಿದ್ಧಗಂಧರ್ವೈರ್ವಿದ್ಯಾಧರಮಹೋರಗೈಃ ।
ಅಪ್ಸರೋಭಿಃ ಪಿತೃಗಣೈರ್ಯಕ್ಷಕಿನ್ನರಚಾರಣೈಃ ॥ ೨೫ ॥

ಉಪಗೀಯಮಾನವಿಜಯಃ ಕುಸುಮೈರಭಿವರ್ಷಿತಃ ।
ವೃತಶ್ಚ ವೃಷ್ಣಿಪ್ರವರೈರ್ವಿವೇಶಾಲಂಕೃತಂ ಪುರಮ್ ॥ ೨೬ ॥

ಏವಂ ಯೋಗೇಶ್ವರಃ ಕೃಷ್ಣೋ ಭಗವಾನ್ ದೇವಕೀಸುತಃ ।
ಈಯತೇ ಪಶುದೃಷ್ಟೀನಾಂ ಜೀಯತೇ ಜಯತೀತಿ ಸಃ ॥ ೨೭ ॥

ತಸ್ಯ ಕರ್ಮಾಣ್ಯುದಾರಾಣಿ ಪುಣ್ಯಶ್ಲೋಕಸ್ಯ ಭಾರತ ।
ಶಕ್ಯಂತೇ ಕಥಿತುಂ ನೈವ ವರ್ಷಾಣಾಮಯುತೈರಪಿ ॥ ೨೮ ॥

ಏವಮಾರಭ್ಯ ರಾಕ್ಷಸ್ಯಾಃ ಪೂತನಾಯಾಃ ಪರಂತಪ ।
ಭೂಭಾರಭೂತಾನಸುರಾನ್ ಜಘಾನ ಮಧುಸೂದನಃ ॥ ೨೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಅಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದಶಮಸ್ಕಂಧೇ ಉತ್ತರಾರ್ಧೇ ತ್ರ್ಯಧಿಕಶತತಮೋಽಧ್ಯಾಯಃ

❖

ಅಥ ಚತುರಧಿಕಶತತಮೋಽಧ್ಯಾಯಃ

ಶ್ರೀಶುಕ ಉವಾಚ

ಸುಖಂ ಸ್ವಪುರ್ಯಾಂ ನ್ಯವಸದ್ ದ್ವಾರಕಾಯಾಂ ಶ್ರಿಯಃಪತಿಃ ।
ಸರ್ವಸಂಪತ್ಸಮೃದ್ಧಾಯಾಂ ಜುಷ್ಟಾಯಾಂ ವೃಷ್ಣಿಪುಂಗವೈಃ ॥ ೧ ॥

ಸ್ತ್ರೀಭಿಶ್ಚೋತ್ತಮವೇಷಾಭಿರ್ನವಯೌವನಕಾಂತಿಭಿಃ ।
ಕಂದುಕೈರ್ಹರ್ಮ್ಯಸೌಧೇಷು ಕ್ರೀಡಂತೀಭಿಸ್ತಡಿದ್ದ್ಯುಭಿಃ ॥ ೨ ॥

ನಿತ್ಯಂ ಸಂಕುಲಮಾರ್ಗಾಯಾಂ ಮದಚ್ಯುದ್ಭಿರ್ಮತಂಗಜೈಃ ।
ಸ್ವಲಂಕೃತೈರ್ಭಟೈರಶ್ವೈ ರಥೈಶ್ಚ ಕನಕೋಜ್ಜ್ವಲೈಃ ॥ ೩ ॥

ಉದ್ಯಾನೋಪವನಾಢ್ಯಾಯಾಂ ಪುಷ್ಪಿತದ್ರುಮರಾಜಿಷು ।
ನಿರ್ವಿಶದ್ಭೃಂಗವಿಹಗೈರ್ನಾದಿತಾಯಾಂ ಸಮಂತತಃ ॥ ೪ ॥

ರೇಮೇ ಷೋಡಶಸಾಹಸ್ರಪತ್ನೀನಾಮೇಕವಲ್ಲಭಃ ।
ತಾವಂತಿ ಬಿಭ್ರದ್ರೂಪಾಣಿ ತದ್ಗೃಹೇಷು ಮಹರ್ದ್ಧಿಷು ॥ ೫ ॥

ಪ್ರೋತ್ಫುಲ್ಲೋತ್ಪಲಕಹ್ಲಾರಕುಮುದಾಂಭೋಜರೇಣುಭಿಃ ।
ವಾಸಿತಾಮಲತೋಯೇಷು ಕೂಜದ್‌ದ್ವಿಜಕುಲಾದಿಭಿಃ ॥ ೬ ॥

ವಿಜಹಾರ ವಿಗಾಹ್ಯಾಂಭೋ ಹ್ರದಿನೀಷು ಮಹೋದಯಃ
ಕುಚಕುಂಕುಮಲಿಪ್ತಾಂಗಃ ಪರಿರಬ್ಧಃ ಸ್ವಯೋಷಿತಾಮ್ ॥ ೭ ॥

ಉಪಗೀಯಮಾನೋ ಗಂಧರ್ವೈರ್ಮೃದಂಗಪಣವಾನಕಾನ್ ।
ವಾದಯದ್ಭಿರ್ಮುದಾ ವೀಣಾಃ ಸೂತಮಾಗಧಬಂದಿಭಿಃ ॥ ೮ ॥

ಸೇವ್ಯಮಾನೋಽಚ್ಯುತಸ್ತಾಭಿರ್ಹಸಂತೀಭಿಶ್ಚ ರೇಚಕೈಃ ।
ಪ್ರತಿಷಿಂಚನ್ ವಿಚಿಕ್ರೀಡೇ ಮುಖರಃ ಶಕ್ತಿಭಿಃ ಸ್ವಯಮ್ ॥ ೯ ॥

ತಾಃ ಕ್ಲಿನ್ನವಸ್ತ್ರವಿವೃತೋರುಕುಚಪ್ರದೇಶಾಃ
ಸಿಂಚಂತ್ಯ ಉದ್ಧೃತಬೃಹತ್ಕಬರಪ್ರಸೂನಾಃ ।

ಕಾಂತಸ್ಯ ರೇಚಕಜಿಹೀರ್ಷತಯೋಪಗುಹ್ಯ
ಜಾತಸ್ಮರೋತ್ಸ್ಮಯಲಸದ್ವದನಾ ವಿರೇಜುಃ ॥ ೧೦ ॥

ಕೃಷ್ಣಸ್ತು ತತ್ಸ್ತನವಿಷಜ್ಜಿತಕುಂಕುಮಸ್ರಕ್-
ಕ್ರೀಡಾಭಿಸಂಗತಸಕುಂತಲಕುಂದಗಂಧಃ ।
ಸಿಂಚನ್ಮುಹುರ್ಯುವತಿಭಿಃ ಪರಿಷಿಚ್ಯಮಾನೋ
ರೇಮೇ ಕರೇಣುಭಿರಿವೇಭಪತಿಃ ಪರೀತಃ ॥ ೧೧ ॥

ಗೃಹೇಷು ತಾಸಾಮನಿವಾರ್ಯ ಈಶ್ವರೋ
ನಿರಸ್ತಸಾಮ್ಯಾತಿಶಯೋ ವ್ಯವಸ್ಥಿತಃ ।
ರೇಮೇ ರಮಾಭಿರ್ನಿಜಸೌಖ್ಯಸಂಪ್ಲುತೋ
ಯಥೇತರೋ ಗಾರ್ಹಕಮೇಧಿಕಾಂಶ್ಚರನ್ ॥ ೧೨ ॥

ಇತ್ಥಂ ರಮಾಪತಿಮವಾಪ್ಯ ಪತಿಂ ಸ್ತ್ರಿಯಸ್ತಾ
ಬ್ರಹ್ಮಾದಯೋಽಪಿ ಪದವೀಂ ನ ವಿದುರ್ಯದೀಯಾಮ್ ।
ಭೇಜುರ್ಮುದಾಽವಿರತಮೇಧಿತಯಾಽನುರಾಗ-
ಹಾಸಾವಲೋಕನವಸಂಗಮಲಜ್ಜಯೈವ ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಅಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ದಶಮಸ್ಕಂಧೇ ಉತ್ತರಾರ್ಧೇ ಚತುರಧಿಕಶತತಮೋಽಧ್ಯಾಯಃ

❖

ಅಥ ಪಂಚಾಧಿಕಶತತಮೋಽಧ್ಯಾಯಃ

ಶ್ರೀಶುಕ ಉವಾಚ

ಏವಂ ವೇದೋದಿತಂ ಧರ್ಮಮನುತಿಷ್ಠನ್ ಸತಾಂ ಗತಿಃ ।
ಗೃಹೇ ಧರ್ಮಾರ್ಥಕಾಮಾನಾಂ ಮುಹುಃ ಸಂದರ್ಶಯನ್ ಪದಮ್ ॥೧॥

ಏವಂ ಶಾಸತಿ ಭೂಚಕ್ರಂ ಚಕ್ರಪಾಣೌ ಜನಾರ್ದನೇ ।
ದ್ವಾರಕಾ ವೃಷ್ಣಿನಿಲಯಾ ಯೋಜನದ್ವಾದಶಾಯತಾ ॥ ೨ ॥

ಮುನಿಭಿರ್ಬ್ರಾಹ್ಮಣೈಶ್ಚೈವ ಕ್ಷತ್ರಿಯೈಶ್ಚಾಪಿ ಬಂದಿಭಿಃ ।
ಆಸೀತ್ಪೂರ್ಣಾ ಕುರುಶ್ರೇಷ್ಠ ಸತತಂ ಸಮಲಂಕೃತಾ ॥ ೩ ॥

ಪಿಂಡಾರಕಾತ್ಕುರುಕ್ಷೇತ್ರಾಚ್ಛಾಲಗ್ರಾಮಾಚ್ಚ ಪುಷ್ಕರಾತ್ ।
ವಾರಾಣಸ್ಯಾಃ ಪ್ರಯಾಗಾಚ್ಚ ವೇಂಕಟಾಚ್ಛ್ರೀಗಿರೇರಪಿ ॥ ೪ ॥

ಸ್ಯಾನಂದೂರಾಚ್ಚ ಗೋಕರ್ಣಾಚ್ಚಂದ್ರತೀರ್ಥಾಚ್ಚ ಶೋಭನಾತ್ ।
ಸಹ್ಯಾದ್ರೇಶ್ಚ ಭೃಗುಕ್ಷೇತ್ರಾತ್ಕುಮಾರನಿಲಯಾದಪಿ ॥ ೫ ॥

ಗೋದಾವರೀತಟಾತ್ಪುಣ್ಯಾನ್ನರ್ಮದಾನಿಕಟಾದಪಿ ।
ಶೂರ್ಪಾಕಾರಾತ್ಪ್ರಭಾಸಾಚ್ಚ ಪುಣ್ಯಾದ್ಬದರಿಕಾಶ್ರಮಾತ್ ॥ ೬ ॥

ಪಾವನಾನ್ನೈಮಿಷಾರಣ್ಯಾದ್ ಬ್ರಹ್ಮದುರ್ಗಾಚ್ಚ ದುರ್ಗಮಾತ್ ।
ಆಯಯುರ್ಮುನಯಃ ಶಾಂತಾ ನಿತ್ಯವ್ರತಪರಾಯಣಾಃ ॥ ೭ ॥

ಅಬ್ಭಕ್ಷಾ ವಾಯುಭಕ್ಷಾಶ್ಚ ನಿರಾಹಾರಾ ದೃಢವ್ರತಾಃ ।
ವಲ್ಕಲಾಜಿನಸಂವೀತಾ ಜಟಿನಶ್ಚಾಪಿ ಮುಂಡಿನಃ ॥ ೮ ॥

ತ್ರಿಕಾಲಸ್ನಾಯಿನಶ್ಚೈವ ಮೌನವ್ರತಪರಾಯಣಾಃ ।
ವೇದಸ್ವಾಧ್ಯಾಯನಿರತಾಃ ಸ್ತುತಿಸ್ತೋತ್ರಪರಾಯಣಾಃ ॥ ೯ ॥

ಧ್ಯಾನೈಕತಾನಮನಸಃ ಸಮಾಧೌ ಕೃತನಿಶ್ಚಯಾಃ ।
ತ್ವಗಸ್ಥಿಮಾತ್ರಾವಯವಾಃ ಶಿರಾಧಮನಿಸಂತತಾಃ ॥ ೧೦ ॥

ಆಗತ್ಯ ಮುನಯೋ ರಾಜನ್ ಸರ್ವತಃ ಶಾಂತಚೇತಸಃ ।
ಉಪಾಸತ ಮಹಾರಾಜ ನಿತ್ಯಂ ತತ್ತ್ವೈಕಚಿಂತಕಾಃ ॥ ೧೧ ॥

ಕ್ಷತ್ರಿಯೈಶ್ಚ ಮಹಾವೀರ್ಯೈರ್ಬ್ರಾಹ್ಮಣೈಶ್ಚ ತಪೋಧನೈಃ ।
ಸೂತೈಶ್ಚ ಮಾಗಧೈಶ್ಚೈವ ಶ್ಲೋಕಸ್ತುತಿಪರಾಯಣೈಃ ॥ ೧೨ ॥

ಪೂರ್ಣಮಂಗಲಘೋಷೈಶ್ಚ ವಾದಿತ್ರಾಣಾಂ ಚ ನಿಃಸ್ವನೈಃ ।
ನಿರ್ಘುಷ್ಟಾ ಬ್ರಹ್ಮಘೋಷೈಶ್ಚ ದ್ವಾರಕಾ ಕುರುನಂದನ ॥ ೧೩ ॥

ಕ್ಷೇತ್ರಾಣಾಮಪಿ ಸರ್ವೇಷಾಂ ತೀರ್ಥಾನಾಂ ಚಾಘಹಾರಿಣಾಮ್ ।
ದೇವದೇವಸ್ಯ ಸಾನ್ನಿಧ್ಯಾದಗ್ರಣ್ಯಾ ಚ ಬಭೂವ ಸಾ ॥ ೧೪ ॥

ಆಸ್ಥಿತಸ್ಯ ಪರಂ ಧರ್ಮಂ ಕೃಷ್ಣಸ್ಯ ಗೃಹಮೇಧಿನಃ ।
ಆಸನ್ ಷೋಡಶಸಾಹಸ್ರಮಹಿಷ್ಯಸ್ತು ಶತಾಧಿಕಾಃ ॥ ೧೫ ॥

ತಾಸಾಂ ಸ್ತ್ರೀರತ್ನಭೂತಾನಾಮಷ್ಟೌ ಯಾಃ ಪ್ರಾಗುದಾಹೃತಾಃ ।
ರುಕ್ಮಿಣೀಪ್ರಮುಖಾ ರಾಜಂಸ್ತತ್ಪುತ್ರಾಶ್ಚಾನುಪೂರ್ವಶಃ ॥ ೧೬

ಏಕೈಕಸ್ಯಾಂ ದಶದಶ ಕೃಷ್ಣೋಽಜೀಜನದಾತ್ಮಜಾನ್ ।
ಯಾವಂತ್ಯ ಆತ್ಮನೋ ಭಾರ್ಯಾಸ್ತ್ವಮೋಘಗತಿರೀಶ್ವರಃ ॥ ೧೭

ತೇಷಾಮುದ್ದಾಮವೀರ್ಯಾಣಾಮಷ್ಟಾದಶ ಮಹಾರಥಾಃ ।
ಆಸನ್ನುದಾರಯಶಸಸ್ತೇಷಾಂ ನಾಮಾನಿ ಮೇ ಶೃಣು ॥ ೧೮

ಪ್ರದ್ಯುಮ್ನಶ್ಚಾರುದೇಷ್ಣಶ್ಚ ದೀಪ್ತಿಮಾನ್ ಭಾನುರೇವ ಚ ।
ಸಾಂಬೋ ಮಿತ್ರೋ ಬೃಹದ್ಭಾನುರ್ಭಾನುವಿಂದೋ ವೃಕೋಽರುಣಃ ೧೯

ಪುಷ್ಕರೋ ದೇವಬಾಹುಶ್ಚ ಚಕ್ರದೇವಃ ಸುನಂದನಃ ।
ಚಿತ್ರಭಾನುರ್ವರೂಥಶ್ಚ ಕವಿರ್ನ್ಯಗ್ರೋಧ ಏವ ಚ ॥ ೨೦ ॥

ತ್ರಿವಕ್ರಾಯಾ ವಿಶೋಕಶ್ಚ ಪುತ್ರಃ ಕೃಷ್ಣಮನುವ್ರತಃ ।
ಆಸೀಚ್ಛಿಷ್ಯೋ ನಾರದಸ್ಯ ದದೌ ಚಿತ್ತಮಖಂಡಿತಮ್ ॥ ೨೧ ॥

ಯೇನೋಕ್ತಂ ಸಾತ್ವತಂ ತಂತ್ರಂ ಯಜ್‌ಜ್ಞಾತ್ವಾ ಮೂರ್ತಿಮಾನ್ ಭವೇತ್।
ಯತ್ರ ಸ್ತ್ರೀಶೂದ್ರದಾಶಾನಾಂ ಸಂಸ್ಕಾರೋ ವೈಷ್ಣವಃ ಸ್ಮೃತಃ ॥ ೨೨ ॥

ಏತೇಷಾಮಪಿ ರಾಜೇಂದ್ರ ತನುಜಾನಾಂ ಮಧುದ್ವಿಷಃ ।
ಪ್ರದ್ಯುಮ್ನ ಆಸೀತ್ಪ್ರಥಮಃ ಪಿತೃವದ್ರುಕ್ಮಿಣೀಸುತಃ ॥ ೨೩ ॥

ಸ ರುಕ್ಮಿಣೋ ದುಹಿತರಮುಪಯೇಮೇ ಮಹಾರಥಃ ।
ತಸ್ಯಾಂ ತತೋಽನಿರುದ್ಧೋಽಭೂನ್ನಾಗಾಯುತಬಲಾನ್ವಿತಃ ॥ ೨೪ ॥

ಸ ಚಾಪಿ ರುಕ್ಮಿಣಃ ಪೌತ್ರೀಂ ದೌಹಿತ್ರೀಂ ಜಗೃಹೇ ತತಃ ।
ವಜ್ರಸ್ತಸ್ಯಾಮಭೂದ್ಯಸ್ತು ಮೌಸಲಾದವಶೇಷಿತಃ ॥ ೨೫ ॥

ಪ್ರತಿಬಾಹುರಭೂತ್ತಸ್ಮಾತ್ ಸುಬಾಹುಸ್ತಸ್ಯ ಚಾತ್ಮಜಃ ।
ಸುಬಾಹೋರುಗ್ರಸೇನೋಽಭೂಚ್ಛ್ರುತಸೇನಸ್ತು ತತ್ಸುತಃ ॥ ೨೬ ॥

ನ ಹ್ಯೇತಸ್ಮಿನ್ ಕುಲೇ ಜಾತಾ ಅಧನಾ ಅಬಹುಪ್ರಜಾಃ ।
ಅಲ್ಪಾಯುಷೋಽಲ್ಪವೀರ್ಯಾಶ್ಚ ಅಬ್ರಹ್ಮಣ್ಯಾಶ್ಚ ಜಜ್ಞಿರೇ ॥ ೨೭ ॥

ಯದುವಂಶೇ ಪ್ರಸೂತಾನಾಂ ಪುಂಸಾಂ ವಿಖ್ಯಾತಕರ್ಮಣಾಮ್ ।
ಸಂಖ್ಯಾ ನ ಶಕ್ಯತೇ ಕರ್ತುಮಪಿ ವರ್ಷಾಯುತೈರ್ನೃಪ ॥ ೨೮ ॥

ತಿಸ್ರಃ ಕೋಟ್ಯಃ ಸಹಸ್ರಾಣಾಮಷ್ಟಾಶೀತಿಶತಾನಿ ಚ ।
ಆಸನ್ ಯದುಕುಮಾರಾಣಾಮಾಚಾರ್ಯಾ ಇತಿ ನಃ ಶ್ರುತಮ್ ॥ ೨೯ ॥

ಸಂಖ್ಯಾನಂ ಯಾದವಾನಾಂ ಕಃ ಕರಿಷ್ಯತಿ ಮಹಾತ್ಮನಾಮ್ ।
ಯತ್ರಾಯುತಾನಾಮಯುತಂ ರಕ್ಷನ್ನಾಸ್ತೇ ಸ ಆಹುಕಃ ॥ ೩೦ ॥

ದೇವಾಸುರಾಹವಹತಾ ಯೇ ದೈತೇಯಾಃ ಸುದಾರುಣಾಃ ।
ತೇ ಚೋತ್ಪನ್ನಾ ಮನುಷ್ಯೇಷು ಪ್ರಜಾ ದೃಪ್ತಾ ಬಬಾಧಿರೇ ॥ ೩೧ ॥

ತನ್ನಿಗ್ರಹಾಯ ಹರಿಣಾ ಪ್ರೋಕ್ತಾ ದೇವಾ ಯದೋಃ ಕುಲೇ ।
ಅವತೀರ್ಣಾಃ ಕುಲಶತಂ ಯೇಷಾಮೇಕಾಧಿಕಂ ನೃಪ ॥ ೩೨ ॥

ತೇಷಾಂ ಪ್ರಮಾಣಂ ಭಗವಾನ್ ಪ್ರಭುತ್ವೇ ಚಾಭವದ್ಧರಿಃ ।
ಯೇ ಚಾನುವರ್ತಿನಸ್ತಸ್ಯ ವವೃಧುಃ ಸರ್ವಯಾದವಾಃ ॥ ೩೩ ॥

ಶಯ್ಯಾಸನಾಟನಾಲಾಪಕ್ರೀಡಾಸ್ನಾನಾಶನಾದಿಷು ।
ನ ವಿದುಃ ಸಂತಮಾತ್ಮಾನಂ ವೃಷ್ಣಯಃ ಕೃಷ್ಣಚೇತಸಃ ॥ ೩೪ ॥

ಈಜೇ ಕ್ರತುಭಿರಾತ್ಮಾನಂ ಸರ್ವವೇದಾರ್ಥಸಂಗ್ರಹಮ್ ।
ಸ್ವಯೋಗಮಾಯಾರಚಿತೈಃ ಕುರುಕ್ಷೇತ್ರೇ ದ್ವಿಷಟ್ಸಮಾಃ ॥ ೩೫ ॥

ಕೃಷ್ಣಗಾಧ್ಯಸಿತಾವಂತಿರಾಮಾಚಾರ್ಯೋದ್ಧವೇಶ್ವರಃ ।
ದೀಕ್ಷಿತೋಽಗ್ರಣ್ಯಪತ್ನೀಭಿಃ ಪುಣ್ಯಶ್ಲೋಕಃ ಸಹಾಗ್ರಣೀಃ ॥ ೩೬ ॥

ತೀರ್ಥಂ ಚಕ್ರೇ ನೃಣಾಂ ಯೋ
ಯದಜನಿ ಯದುಷು ಸ್ವಃಸರಿತ್ಪಾದಶೌಚಂ ।
ಷಡ್ಭಿಶ್ಚಾಪ್ತಂ ಸ್ವರೂಪಂ
ಪರ ಉರಸಿ ರಮಾ ಸರ್ವದಾ ಯಸ್ಯ ಚಾಸ್ತೇ ।
ಯಚ್ಛಾಸ್ತ್ರಂ ಚ ಪ್ರಮಾಣಂ
ಯದನು ಚ ಸದಸದ್ವ್ಯಕ್ತಯೋ ಯತ್ರ ಧರ್ಮಾಃ
ಕೃಷ್ಣಸ್ಯೈತನ್ನ ಚಿತ್ರಂ
ಕ್ಷಿತಿಭರಹರಣಂ ಕಾಲಚಕ್ರಾಯುಧಸ್ಯ ॥ ೩೭ ।

ಜಯತಿ ಜನನಿವಾಸೋ ದೇವಕೀಜನ್ಮವಾದೋ
ನಿಯಮಕೃತಪದಾಬ್ಜೈರ್ದಸ್ಯುಪೀಡಾಂ ಸ್ವದೋರ್ಭಿಃ ।
ಮುದಮುಭಯದೃಶೀನಾಂ ಶ್ರೀನಿಕೇತಾತ್ಮಮೂರ್ತ್ಯಾ
ಸ್ಮರವಪುರಬಲಾನಾಂ ಸ್ನಿಗ್ಧಹಾಸೇಕ್ಷಯಾ ಚ ॥ ೩೮ ॥

ಯೋ ಹ್ಯಾತ್ಮಾ ಜಗದಾದಿಮಧ್ಯನಿಧನೋ ಯೋಽವ್ಯಕ್ತಜೀವೇಶ್ವರೋ
ಯಃ ಸೃಷ್ಟ್ವೇದಮನುಪ್ರವಿಷ್ಟ ಋಷಿಣಾ ಚಕ್ರೇ ಪುನಃ ಸಂಹಿತಾಮ್ ।
ಯಂ ಸಂಪದ್ಯ ಜಹಾತ್ಯಜಾಮನುಶಯೀ ಸುಪ್ತಃ ಕುಲಾಯಂ ಯಥಾ
ತಂ ಕೈವಲ್ಯನಿರಸ್ತಯೋನಿಮಭಯಂ ಧ್ಯಾಯೇದಜಸ್ರಂ ಹರಿಮ್
॥ ೩೯ ॥

ಇತ್ಥಂ ಪರಸ್ಯ ನಿಜಧರ್ಮರಿರಕ್ಷಯಾತ್ತ-
ಲೀಲಾತನೋಸ್ತದನುರೂಪವಿಡಂಬನಾನಿ ।
ಕರ್ಮಾಣಿ ಕರ್ಮಕಷಣಾನಿ ಯದೂತ್ತಮಸ್ಯ
ಗಾಯೇದಮುಷ್ಯ ಪದಯೋರನುವೃತ್ತಿಮಿಚ್ಛನ್ ॥ ೪೦ ॥

ಮರ್ತ್ಯಸ್ತಯಾಽನುಸವಮೇಧಿತಯಾಽನುವೃತ್ತ್ಯಾ
ಶ್ರೀಮತ್ಕಥಾಶ್ರವಣಕೀರ್ತನಚಿಂತಯೈತಿ ।
ತದ್ಧಾಮ ದುಷ್ಕರಕೃತಂ ಜನತಾಪವರ್ಗಂ
ಗ್ರಾಮಾದ್ವನಂ ಕ್ಷಿತಿಭುಜೋಽಪಿ ಯಯುರ್ಯದರ್ಥೇ ॥ ೪೧ ॥

ಸೂತ ಉವಾಚ

ಯ ಇದಮನುಶೃಣೋತಿ ಶ್ರಾವಯೇದ್ವಾ ಮುರಾರೇ-
ಶ್ಚರಿತಮಮೃತಕೀರ್ತೇರ್ವರ್ಣಿತಾಂ ವ್ಯಾಸಪುತ್ರೈಃ ।
ಜಗದಘಭಿದಲಂ ತದ್ಭಕ್ತಕರ್ಣಾವತಂಸಂ
ಭಗವತಿ ಕೃತಚಿತ್ತೋ ಯಾತಿ ತತ್ಕ್ಷೇಮಧಾಮ ॥ ೪೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ
ಅಷ್ಟಾದಶಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಂ

ದಶಮಸ್ಕಂಧೇ ಉತ್ತರಾರ್ಧೇ ಪಂಚಾಧಿಕಶತತಮೋಽಧ್ಯಾಯಃ

❖

ಇತಿ ದಶಮಸ್ಕಂಧಃ ಸಂಪೂರ್ಣಃ

|| ಶ್ರೀಗುರುಭ್ಯೋ ನಮಃ ಹರಿಃ ಓಂ ||

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತಃ

ಶ್ರೀಮದ್ ಭಾಗವತತಾತ್ಪರ್ಯನಿರ್ಣಯಃ

ದಶಮ ಸ್ಕಂಧಃ (ಉತ್ತರ ಭಾಗಃ)

ಅಧ್ಯಾಯ - ೬೦

ಅಧ್ಯಾಯ ಸಾರಾಂಶ

|| ಓಂ ನಮೋ ಭಗವತೇ ವಾಸುದೇವಾಯ ||

ಸೂರ್ಯದೇವ ಸತ್ರಾಜಿತರಾಜನಿಗೆ ಪ್ರೀತಿಯಿಂದ ಸಮಂತಕ ಮಣಿಯನ್ನಿತ್ತ. ರಾಜ ಅದನ್ನು ಕೊರಳಲ್ಲಿ ಧರಿಸಿದಾಗ ಸೂರ್ಯನಂತೆಯೆ ಬೆಳಗಿದ. ಕಣ್ಣು ಕುಕ್ಕುವಂಥ ಪ್ರಭೆಯಿಂದ ರಾಜನನ್ನು ಜನರು ಸೂರ್ಯನೆಂದೇ ಭ್ರಮಿಸಿ ಭಯಪಟ್ಟರು. ಕೃಷ್ಣನ ಬಳಿಗೆ ಬಂದು, 'ನಿನ್ನನ್ನು ಕಾಣಲು ಸೂರ್ಯ ಇಳಿದು ಬರುತ್ತಿದ್ದಾನೆ' ಎಂದರು. ಶ್ರೀಕೃಷ್ಣನೆಂದ, 'ಅವನು ಸೂರ್ಯನಲ್ಲ, ಮಣಿಯಿಂದ ಬೆಳಗುವ ಸತ್ರಾಜಿತ ರಾಜ'.

ರಾಜ ಮಣಿಯನ್ನು ತಂದು ತನ್ನ ದೇವರಮನೆಯಲ್ಲಿ ವಿಧ್ಯುಕ್ತವಾಗಿ ಪ್ರತಿಷ್ಠೆ ಮಾಡಿಸಿದ.

ಮಣಿ ಪ್ರತಿದಿನ ಎಂಟು ಭಾರ, ಅಂದರೆ ತೊಂಬತ್ತಾರು ಮಣ ಚಿನ್ನ ಕೊಡುತ್ತಿತ್ತು. ರಾಜ್ಯದಲ್ಲಿ ಎಲ್ಲಿಯಾದರೂ ಮಣಿಯನ್ನು ಪೂಜಿಸಿದರೂ ಆ ರಾಜ್ಯದಲ್ಲಿ ದುರ್ಭಿಕ್ಷೆ ಅಕಾಲ ಮರಣಗಳಿರುತ್ತಿರಲಿಲ್ಲ. ಪಾಪವ್ಯಾಧಿಗಳು ಕಪಟ ಒಂದೂ ಇರಲಿಲ್ಲ. ಶ್ರೀಕೃಷ್ಣ ಆ ಮಣಿಯನ್ನು ಉಗ್ರಸೇನರಾಜನಿಗಾಗಿ ಬೇಡಿದರೂ ಸತ್ರಾಜಿತ ಕೊಡಲಿಲ್ಲ. ಅದಕ್ಕೆ ಆತ 'ಇದರಿಂದ ನನಗೇನು ಅನಿಷ್ಟ ಕಾದಿದೆಯೋ!' ಎಂದು ಮನಸ್ಸಿನಲ್ಲಿ ಆತಂಕಗೊಂಡ. ಅದು ಹಾಗೇ ಆಯಿತು. ಸತ್ರಾಜಿತನ

ತಮ್ಮ ಪ್ರಸೇನ ಒಮ್ಮೆ ಮಣಿಯನ್ನು ಧರಿಸಿ ಕುದುರೆಯೇರಿ ಬೇಟೆಗೆ ಹೋಗಿದ್ದಾಗ ಸಿಂಹ ಅವನನ್ನು ಕೊಂದಿತು. ಮಣಿಯನ್ನು ಬಾಯಲ್ಲಿ ಕಚ್ಚಿಕೊಂಡು ಗುಹೆಗೆ ಹೋಯಿತು. ಅದನ್ನು ಜಾಂಬವಂತ ನೋಡಿದ. ಸಿಂಹವನ್ನು ಕೊಂದು ಮಣಿಯನ್ನು ತಂದು ತನ್ನ ಮಗುವಿಗೆ ಆಟಿಕೆಯಾಗಿ ದಾದಿಯ ಕೈಗೆ ಕೊಟ್ಟ.

ಇತ್ತ ಪ್ರಸೇನ ಬೇಟೆಯಿಂದ ಹಿಂತಿರುಗಿ ಬಾರದಿದ್ದಾಗ ಸತ್ರಾಜಿತನಿಗೆ ಕೃಷ್ಣನ ಮೇಲೆಯೇ ಅನುಮಾನ ಹುಟ್ಟಿತು. ಮಣಿಗಾಗಿ ಕೃಷ್ಣನೇ ಪ್ರಸೇನನನ್ನು ಕೊಂದಿರಬಹುದೆಂದು ಜನರು ಎಲ್ಲೆಡೆ ಆಡಿಕೊಳ್ಳ ತೊಡಗಿದರು. ಕೃಷ್ಣ ಕೆಲವು ಪ್ರಮುಖ ಯಾದವರೊಂದಿಗೆ ಕಾಡಿಗೆ ಹೋಗಿ ಪ್ರಸೇನ ಸಿಂಹದಿಂದ ಹತನಾಗಿದ್ದುದನ್ನೂ ಸಿಂಹವೂ ಜಾಂಬವಂತನಿಂದ ಹತನಾಗಿದ್ದುದನ್ನೂ ತೋರಿಸಿದ. ಜಾಂಬವಂತನ ಗುಹೆಯ ಹೊರಗೆ ಜನರನ್ನು ನಿಲ್ಲಿಸಿ ತಾನು ಒಳಗೆ ಪ್ರವೇಶಿಸಿದ. ಅಲ್ಲಿ ದಾದಿ ಭಯದಿಂದ ಕೂಗಿಕೊಂಡಳು. ಆ ಧ್ವನಿಗೆ ಜಾಂಬವಂತ ಬಂದು

ಶ್ರೀಕೃಷ್ಣನನ್ನು ಸಾಮಾನ್ಯಮಾನವನೆಂದು ಬಗೆದು ಅವನ ಮೇಲೆರಗಿದ. ಇಪ್ಪತ್ತೆಂಟು ದಿನಗಳ ಕಾಲ ಆಯುಧಗಳಿಂದ ಕಲ್ಲು ಮರಗಳಿಂದ, ಕೊನೆಗೆ ವಜ್ರದಂತೆ ಕಠಿಣವಾದ ಮುಷ್ಟಿಗಳಿಂದಲೆ ಹಗಲು ರಾತ್ರಿ ಎನ್ನದೆ ಅವಿರತವಾಗಿ ಇಬ್ಬರೂ ಹೋರಾಡಿದರು, ಮಾಂಸಕ್ಕಾಗಿ ಹೋರಾಡುವ ಗಿಡುಗಗಳಂತೆ. ಹೊರಗೆ ಜನರು ಏಳುದಿನಗಳ ಕಾಲ ಕಾದಿದ್ದು ಬಳಿಕ ಹೊರಟು ಹೋದರು. ಇತ್ತ ಹೋರಾಟದಲ್ಲಿ ಕೃಷ್ಣನ ಮುಷ್ಟಿ ಏಟಿಗೆ ಜಾಂಬವನ ಮೈಯ ಕೀಲುಗಳು ಮುರಿದುವು. ಮೈ ಬೆವರಿತು. ಶ್ರೀಕೃಷ್ಣ ತನ್ನ ಪ್ರಭುವಾದ ಶ್ರೀರಾಮನೆ ಎಂದು ಜ್ಞಾನೋದಯವಾಯಿತು. ಆಗ ಶ್ರೀಕೃಷ್ಣ ಕರುಣೆಯಿಂದ ಅಮೃತ ಹಸ್ತದಿಂದ ಮೈದಡವಿ ಹೇಳಿದ, 'ಮಣಿಯಿಂದಾಗಿ ನನ್ನ ಮೇಲೆ ಸುಳ್ಳು ಅಪವಾದ ಬಂದಿದೆ. ಅದನ್ನು ಮಣಿಯಿಂದಲೆ ಪರಿಹರಿಸಿಕೊಳ್ಳಲೆಂದು ಬಂದಿದ್ದೇನೆ'. ಜಾಂಬವ ಸಂತೋಷದಿಂದ ಮಣಿಯೊಂದಿಗೆ ತನ್ನ ಮಗಳಾದ ಜಾಂಬವತಿಯನ್ನೂ ನೀಡಿದ. ದ್ವಾರಕೆಯ ಜನರು ಅಷ್ಟುಕಾಲ ಶ್ರೀಕೃಷ್ಣನ ವಿರಹದಿಂದ ಕೊರಗುತ್ತ ಅವನ ಕ್ಷೇಮಕ್ಕಾಗಿ ದುರ್ಗಾದೇವಿಯನ್ನು ಪೂಜಿಸಿದರು. ಶ್ರೀಕೃಷ್ಣ ಮಣಿಯೊಂದಿಗೆ

ಕನ್ಯಾಮಣಿಯನ್ನೂ ತಂದು ತೋರಿದಾಗ ಅವರಿಗೆ ಅಪಾರ ಆನಂದ ಉಂಟಾಯಿತು.

ಶ್ರೀಕೃಷ್ಣ ರಾಜಸಭೆಯಲ್ಲಿ ಸತ್ರಾಜಿತನನ್ನು ಕರೆಸಿ ಮಣಿಯ ಪೂರ್ವೋತ್ತರಗಳನ್ನು ಬಣ್ಣಿಸಿ ಹೇಳಿ ಮಣಿಯನ್ನು ನೀಡಿದ. ಸತ್ರಾಜಿತ ನಾಚಿಕೆಯಿಂದ ತಲೆ ಎತ್ತಲಾರದೆ, ಕೃಷ್ಣನ ಮೇಲೆ ಸುಳ್ಳು ಅಪವಾದ ಹೊರಿಸಿದ್ದಕ್ಕೆ ಮನಸ್ಸಿನಲ್ಲಿ ನೊಂದುಕೊಂಡು ಅರಮನೆಗೆ ನಡೆದ. ಕೃಷ್ಣನನ್ನು ಹೇಗೆ ಒಲಿಸಿಕೊಳ್ಳಲಿ ಎಂದು ಯೋಚಿಸಿ, ಮಣಿಯೊಂದಿಗೆ ಮಗಳಾದ ಸತ್ಯಭಾಮೆಯನ್ನೂ ತಾನಾಗಿಯೇ ಒತ್ತಾಯಪೂರ್ವಕ ವಾಗಿ ಕೃಷ್ಣನಿಗೆ ಅರ್ಪಿಸಿದ. ಶ್ರೀಕೃಷ್ಣ ಭಾಮೆಯನ್ನು ಸ್ವೀಕರಿಸಿ ವಿವಾಹವಾದ. 'ಮಣಿ ನನಗೆ ಬೇಕಾಗಿಲ್ಲ. ಸೂರ್ಯದೇವ ನಿನಗೆ ಅನುಗ್ರಹಿಸಿದ ಮಣಿ, ನಿನ್ನಲ್ಲಿಯೇ ಇರಲಿ. ನಾವು ದೇಶಸುಭಿಕ್ಷ ಮುಂತಾದ ಅದರ ಫಲಕ್ಕೆ ಮಾತ್ರ ಭಾಗಿಯಾಗುವೆವು' ಎಂದು ಮಣಿಯನ್ನು ರಾಜನಿಗೇ ತಿರುಗಿ ಕೊಟ್ಟುಬಿಟ್ಟ.

❖❖❖

ಅಧ್ಯಾಯ - ೬೧

ಅಧ್ಯಾಯ ಸಾರಾಂಶ

ಪಾಂಡವರೂ ಕುಂತಿಯೂ ಅರಗಿನ ಮನೆಯಲ್ಲಿ ಸುಟ್ಟುಹೋದರೆಂಬ ವಾರ್ತೆ ಕೇಳಿ ಬಂದಾಗ ಶ್ರೀಕೃಷ್ಣ ಅವರ ಬಂಧುಗಳಿಗೆ ಸಾಂತ್ವನ ಹೇಳಲು ಬಲರಾಮನೊಂದಿಗೆ ಹಸ್ತಿನಾವತಿಗೆ ಬಂದ. ವಾಸ್ತವ ವೃತ್ತಾಂತವನ್ನು ತಾನು ಬಲ್ಲವನೆ ಆಗಿದ್ದರೂ ಭೀಷ್ಮ ಮುಂತಾದವರೊಂದಿಗೆ ತಾನೂ 'ಅಯ್ಯೋ' ಎಂದ. ಅತ್ತ ದ್ವಾರಕೆಯಲ್ಲಿ ಅಕ್ರೂರ ಕೃತವರ್ಮರು ಶತಧನ್ವನಿಗೆ ಹೇಳಿದರು, 'ಸತ್ರಾಜಿತನನ್ನು ಕೊಂದು ನಾವು ಮಣಿಯನ್ನೇಕೆ ಅಪಹರಿಸಬಾರದು?' ಅವನು ಕನ್ಯಾರತ್ನವನ್ನು ನಮಗೆ ವಾಗ್ದಾನ ಮಾಡಿ ಕೃಷ್ಣನಿಗೆ ಕೊಟ್ಟಿದ್ದಾನೆ. ಅದರಿಂದ ತಮ್ಮನ ಹಾದಿಯನ್ನೇ ಅಣ್ಣ ಹಿಡಿಯಲಿ.'. ಶತಧನ್ವನಿಗೆ ಇದು ಸರಿಯೆನಿಸಿತು. ಆತ ಸ್ವಭಾವದಿಂದ ದುಷ್ಟದೈತ್ಯ. ರಾತ್ರಿ ಮಲಗಿದ್ದ ಸತ್ರಾಜಿತನನ್ನು ಕೊಂದುಬಿಟ್ಟ. ಮಣಿಯನ್ನೆತ್ತಿಕೊಂಡು ಪಲಾಯನ ಮಾಡಿದ. ಅಂತಃಪುರ ಸ್ತ್ರೀಯರು ಗೋಳಿಡುವಾಗ ಸತ್ಯಭಾಮೆಯೂ ಶೋಕವನ್ನು ಅಭಿನಯಿಸಿದಳು. ತಂದೆಯ ಮೃತ ಶರೀರವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿ ಇರಿಸಿ ವಾರಣಾಮತಕ್ಕೆ ಹೋಗಿ ಶ್ರೀಕೃಷ್ಣನಿಗೆ ನಡೆದ ಸಂಗತಿಯನ್ನು ತಿಳಿಸಿದಳು.

ಶ್ರೀಕೃಷ್ಣ ಪತ್ನೀಸಮೇತನಾಗಿ ಬಲರಾಮನೊಂದಿಗೆ ದ್ವಾರಕೆಗೆ ಹಿಂತಿರುಗಿ ಬಂದ. ಶತಧನ್ವನನ್ನು ಕೊಲ್ಲಬೇಕು ಮಣಿಯನ್ನು ಅವನಿಂದ ಅಪಹರಿಸಬೇಕು ಎಂದು ಮೂವರೂ ಮಾತನಾಡಿಕೊಂಡರು. ಇದು ಶತಧನ್ವನಿಗೆ ಹೇಗೋ ತಿಳಿದುಹೋಯಿತು. ಆತ ಭೀತನಾಗಿ ಕೃತವರ್ಮನ ಸಹಾಯವನ್ನು ಬೇಡಿದ. ಕೃತವರ್ಮನೆಂದ, 'ಸರ್ವಶಕ್ತರಾದ ರಾಮಕೃಷ್ಣರಲ್ಲಿ ನಾನು ಅಪಚಾರ ಗೈಯಲಾರೆ. ಕಂಸನನ್ನು ಪರಿವಾರ ಸಮೇತ ಕೊಂದವನು ಜರಾಸಂಧನನ್ನು ಹದಿನೇಳು ಬಾರಿ ಪರಾಭವಗೊಳಿಸಿ ಓಡಿಸಿದವನು ಶ್ರೀಕೃಷ್ಣ'. ಅಕ್ರೂರನೂ ಶತಧನ್ವನಿಗೆ ಸಹಾಯಗೈಯಲು ನಿರಾಕರಿಸಿದ. 'ಕೈಲಾಸವಾಸಿ ಶಿವ ಶ್ರೀಕೃಷ್ಣನಿಗೆ ಮಣಿಯುತ್ತಾನೆ. ಶಿವವರದಿಂದ

ಕೊಬ್ಬಿದ್ದ ಹಂಸಡಿಭಿಕರನ್ನು ಗೆದ್ದವನು ಶ್ರೀಕೃಷ್ಣ ಕಾಲಿಯನನ್ನು ಯಮುನೆಯ ಮಡುವಿನಿಂದ ಹೊರಗೆ ಅಟ್ಟಿದವನು ಶ್ರೀಕೃಷ್ಣ ಪ್ರಪಂಚ ಸೃಷ್ಟಿ ಸ್ಥಿತಿ ಲಯ ಕಾರಣನಾದ ಅವನು ಏಳು ವರ್ಷದ ಸಣ್ಣವನಾಗಿದ್ದಾಗಲೆ ಶಿಶು ನಾಯಿಕೊಡೆಯನ್ನು ಎತ್ತುವಂತೆ ಒಂದು ಕೈಯಿಂದ ಗೋವರ್ಧನ ಬೆಟ್ಟವನ್ನು ಲೀಲೆಯಿಂದ ಕಿತ್ತು ಎತ್ತಿ ಹಿಡಿದ. ಅಂಥ ಭಗವಾನ್ ಕೃಷ್ಣನಿಗೆ ಇದೊ ನಮಸ್ಕಾರ!' ಎಂದ.

ಈ ನಡುವೆ ದ್ರುಪದರಾಜನ ಆಹ್ವಾನದಂತೆ ಶ್ರೀಕೃಷ್ಣ ಬಲರಾಮನೊಂದಿಗೆ ದ್ರೌಪದೀ ಸ್ವಯಂವರಕ್ಕೆ ಹೋಗಬೇಕಾಯಿತು. ಅಲ್ಲಿ ಪಾಂಡವರು ಬ್ರಾಹ್ಮಣವೇಷದಿಂದ ಬಂದು ಲಕ್ಷ್ಯವೇಧ ಮಾಡಿ ದ್ರೌಪದಿಯನ್ನು ಗೆದ್ದಾಗ ಅವರನ್ನು ಗುರುತಿಸಿದ ಶ್ರೀಕೃಷ್ಣ ಕುಂಬಾರನ ಮನೆಯಲ್ಲಿ ಅವರನ್ನು ಭೆಟ್ಟಿ ಮಾಡಿದ. ಕುಂತಿಗೆ ನಮಸ್ಕಾರ ಮಾಡಿದ. ಹೋಗಿ ಬರುವೆವೆನ್ನುತ್ತ ವೇಗದಿಂದ ಶತಧನ್ವನ ವಧೆಗಾಗಿ ದ್ವಾರಕೆಗೆ ಧಾವಿಸಿ ಬಂದ.

ಶತಧನ್ವ ಪ್ರಾಣಭಯದಿಂದ ಮಣಿಯನ್ನು ಅಕ್ರೂರನಲ್ಲಿ ನ್ಯಾಸವಾಗಿರಿಸಿ ದಿನಕ್ಕೆ ಒಮ್ಮೆಗೆ ನೂರುಯೋಜನ ಮಾತ್ರ ಓಡಬಲ್ಲ ಹೆಣ್ಣು ಕುದುರೆಯನ್ನೇರಿ ಪಲಾಯನ ಮಾಡತೊಡಗಿದ. ರಾಮಕೃಷ್ಣರು ಮಹಾವೇಗದ ಕುದುರೆಗಳನ್ನು ಕಟ್ಟಿದ ಗರುಡಧ್ವಜ ರಥವನ್ನೇರಿ ಶತಧನ್ವನನ್ನು ಬೆನ್ನಟ್ಟಿದರು. ಶತಧನ್ವನ ಕುದುರೆ ಮಿಥಿಲೆಯ ಉಪವನದಲ್ಲಿ ಬಂದೊಡನೆ ಬಿದ್ದು ಸತ್ತುಹೋಯಿತು. ಆತ ಕಾಲ್ನಡಿಗೆಯಿಂದ ಓಡಲು ತೊಡಗಿದ. ಶ್ರೀಕೃಷ್ಣ ರಥದಲ್ಲಿ ಬಲರಾಮನನ್ನು ಬಿಟ್ಟು ಒಬ್ಬನೆ ಕಾಲ್ನಡಿಗೆಯಿಂದಲೆ ಶತಧನ್ವನನ್ನು ಬೆನ್ನಟ್ಟಿದ. ಎರಡು ಕ್ರೋಶ ದೂರದವರೆಗೆ ಬೆನ್ನಟ್ಟಿ ಹೋಗಿ ಚಕ್ರದಿಂದ ಅವನ ಶಿರವನ್ನು ಕತ್ತರಿಸಿದ. ಅವನ ವಸ್ತ್ರಗಳಲ್ಲಿ ಮಣಿಯನ್ನು ಶೋಧಿಸಿ ಕಾಣದೆ ಹಿಂತಿರುಗಿ ಬಂದು ಬಲರಾಮನ ಮುಂದೆ ಹೇಳಿದ 'ನಾವು ಶತಧನ್ವನನ್ನು ವ್ಯರ್ಥವಾಗಿ ಕೊಂದಂತಾಯಿತು, ಮಣಿ ಅವನಲ್ಲಿಲ್ಲ' ಎಂದು. ಕೃಷ್ಣ ಸುಳ್ಳು ಹೇಳುತ್ತಿದ್ದಾನೆ ಎಂದು ಮುನಿಸಿಕೊಂಡ ಬಲರಾಮ. ಅದನ್ನು ಹೊರಗೆ ತೋರಿಕೊಳ್ಳದ 'ಮಣಿಯನ್ನು ಶತಧನ್ವ ಬೇರೆ ಯಾರಲ್ಲಾದರೂ ನ್ಯಾಸವಾಗಿಟ್ಟಿರಬಹುದು. ಅದನ್ನು ಶೋಧಿಸು, ದ್ವಾರಕೆಗೆ ಹಿಂತಿರುಗು. ನಾನು ನನಗೆ

ಪ್ರಿಯನಾದ ವಿದೇಹರಾಜನನ್ನು ಕಾಣುವೆನು' ಎಂದ. ವಿದೇಹರಾಜನ ಬಳಿಯಲ್ಲಿ ಐದು ವರ್ಷಕಾಲ ಇದ್ದುಬಿಟ್ಟ.

ಶ್ರೀಕೃಷ್ಣ ದ್ವಾರಕೆಗೆ ಹಿಂತಿರುಗಿ ಬಂದು ಸತ್ಯಭಾಮೆಯನ್ನು ಸಂತೈಸಿ ಮೃತ ಸತ್ರಾಜಿತನಿಗೆ ಉತ್ತರಕ್ರಿಯೆ ನಡೆಸಿದ. ಶತಧನ್ವನ ವಧೆಯ ವೃತ್ತಾಂತವನ್ನು ತಿಳಿದ ಅಕ್ರೂರ ಕೃತವರ್ಮರು ದ್ವಾರಕೆಯಿಂದ ಪಲಾಯನ ಮಾಡಿದರು. ಬಳಿಕ ದ್ವಾರಕೆಯಲ್ಲಿ ಅರಿಷ್ಟಗಳು ಆಧ್ಯಾತ್ಮಿಕಾದಿ ತಾಪತ್ರಯಗಳು ಕಾಣಿಸಿಕೊಂಡವು. ಯಾದವರಿಗೆ ಆಚ್ಚರಿಯಾಯಿತು. ಶ್ರೀಕೃಷ್ಣನೂ ಕೇಳಿದ, 'ಏಕೆ ಈ ಅರಿಷ್ಟದರ್ಶನ ಉಂಟಾಗಿದೆ?' ಹಿರಿಯರು ಬೇರೆ ಕಾರಣವೇನೂ ತಿಳಿಯದೆ 'ಕಾಶಿಯಲ್ಲಿ ಮಳೆಯಾಗದಿದ್ದಾಗ ಅಲ್ಲಿಗೆ ಬಂದ ಶ್ವಫಲ್ಕನಿಗೆ ಕಾಶಿರಾಜ ಗೋದಾನ ಕನ್ಯಾದಾನಗಳನ್ನು ಮಾಡಿದ. ಒಡನೆ ಮಳೆಯಾಯಿತು. ಶ್ವಫಲ್ಕನ ಮಗ ಅಕ್ರೂರನೂ ಹಾಗೇ ತಂದೆಯಂತೆಯೆ ಪ್ರಭಾವಉಳ್ಳವನು. ಅವನು ದೇಶಾಂತರಕ್ಕೆ ಹೋಗಿರುವುದು ಅರಿಷ್ಟ ದರ್ಶನಕ್ಕೆ ಕಾರಣವಿರಬಹುದು ಎಂದರು. ಬಲರಾಮನಿಗೆ ಕೃಷ್ಣನ ಮೇಲೆ ಮಣಿಯ ವಿಷಯದಲ್ಲಿ ಅವಿಶ್ವಾಸ ಉಂಟಾದುದೇ ನಿಜವಾದ ಕಾರಣ ಎನ್ನುವ ಅಭಿಪ್ರಾಯದಿಂದ 'ಇಷ್ಟೇ ಕಾರಣವಲ್ಲ' ಎಂದು ಹೇಳಿ ಶ್ರೀಕೃಷ್ಣ ಬಲರಾಮನನ್ನೂ ಅಕ್ರೂರನನ್ನೂ ದೂತರ ಮೂಲಕ ಕರೆಸಿಕೊಂಡ.

ರಾಜಸಭೆಯಲ್ಲಿ ಶ್ರೀಕೃಷ್ಣ ಅಕ್ರೂರನಿಗೆ ನಯವಾಗಿ ನುಡಿದ, 'ಅಕ್ರೂರ! ಶತಧನ್ವ ಅಂದು ಮಣಿಯನ್ನು ನಿನ್ನ ಕೈಯಲ್ಲಿ ಇರಿಸಿದ್ದನೆಂದು ಅಂದೇ ನನಗೆ ಗೊತ್ತಿತ್ತು. ನಿನ್ನ ಹೊರತು ಬೇರೆ ಯಾರೂ ಆ ಮಣಿಯನ್ನು ಧರಿಸಲು ಶಕ್ತರಲ್ಲ. ಹೀಗಾಗಿ ನಿನ್ನ ಕೈಗೆ ಬಂದ ಮಣಿ ನಿನ್ನಲ್ಲೇ ಇರಲಿ ಎಂದು ಸುಮ್ಮನಿದ್ದೆ. ಆದರೆ ಈಗ ನಮ್ಮಣ್ಣನಿಗೆ ಮಣಿಯ ವಿಷಯದಲ್ಲಿ ನನ್ನಲ್ಲಿ ಪೂರ್ತಿ ವಿಶ್ವಾಸ ಇನ್ನೂ ಇಲ್ಲ. ಆದರಿಂದ ನೀನು ಮಣಿಯನ್ನು ತೆಗೆದು ತೋರಿಸು. ನಮ್ಮಲ್ಲಿ ಉಂಟಾಗಿರುವ ಮನಸ್ತಾಪವನ್ನು ಶಾಂತಿಮಾಡು'. ಹೀಗೆ ಶ್ರೀಕೃಷ್ಣ ಸಮಾಧಾನದಿಂದ ಮಾತನಾಡಿದಾಗ ಅಕ್ರೂರ ಬಟ್ಟೆಯಲ್ಲಿ ಕಟ್ಟಿ ಕೊಂಡಿದ್ದ ಮಣಿಯನ್ನು ತೆಗೆದು ತೋರಿಸಿದ. ಬಲರಾಮನಿಗೆ ಇದ್ದ ಅನುಮಾನ ದೂರವಾಯಿತು.

ಅಕ್ರೂರ ಕೊಟ್ಟ ಸ್ಯಮಂತಕಮಣಿಯನ್ನು ಶ್ರೀಕೃಷ್ಣ ತಿರುಗಿ ಅವನಿಗೇ ಕೊಟ್ಟ. ಏಕೆಂದರೆ ಬಲರಾಮನಿಗೆ ಅದರಲ್ಲಿ ಆಸೆ ಇತ್ತು, ಜಾಂಬವತಿಯೂ ಕೂಡ ತನ್ನ ತಂದೆ ವರದಕ್ಷಿಣೆಯಾಗಿ ಕೊಟ್ಟ ಮಣಿ ಎಂದು ಆಸೆಪಟ್ಟಿದ್ದಳು. ಇದರಿಂದ ಬಂಧುಗಳಲ್ಲಿ ಪರಸ್ಪರ ಅಸೂಯೆ ಉಂಟಾಗದಿರಲೆಂದು ಮಣಿಯನ್ನು ಅಕ್ರೂರನಿಗೇ ಕೊಟ್ಟ ಶ್ರೀಕೃಷ್ಣ

ಈ ಸ್ಯಮಂತಕೋಪಾಖ್ಯಾನ ಶ್ರೀಕೃಷ್ಣನ ಮಹಿಮೆಯನ್ನು ಹೇಳುವುದರಿಂದ ಅಪಕೀರ್ತಿ ಅಪವಾದ ಪಾಪಗಳನ್ನು ತೊಡೆದು ಮೋಕ್ಷ ನೀಡಬಲ್ಲುದು.

❖❖❖

ಅಧ್ಯಾಯ - ೬೨

ಅಧ್ಯಾಯ ಸಾರಾಂಶ

ಶ್ರೀಕೃಷ್ಣ ಪಾಂಡವರನ್ನು ನೋಡಲು ಇಂದ್ರಪ್ರಸ್ಥಕ್ಕೆ ಬಂದ. ಮುಖ್ಯಪ್ರಾಣನಿಲ್ಲದಿದ್ದಾಗ ನಿಶ್ಚೇಷ್ಟರಾದ ಇಂದ್ರಿಯ ದೇವತೆಗಳು ಮುಖ್ಯಪ್ರಾಣ ಬಂದಾಗ ಪುನಶ್ಚೇತನಗೊಳ್ಳುವಂತೆ ಶ್ರೀಕೃಷ್ಣ ಬಂದಾಗ ಪಾಂಡವರಿಗೆ ಹೊಸ ಚೈತನ್ಯ ಬಂದಂತಾಯಿತು. ಅವರು ಆತನನ್ನು ಆಲಿಂಗಿಸಿದರು. ನಮಿಸಿದರು. ಆತನೂ ಧರ್ಮರಾಜ ಭೀಮರಿಗೆ ನಮಿಸಿದ. ಕುಂತಿಗೂ ನಮಿಸಿದ. ಕುಂತಿ ನುಡಿದಳು. 'ಅಂದು ನೀನು ನಮ್ಮ ಯೋಗಕ್ಷೇಮವನ್ನು ವಿಚಾರಿಸಲು ಅಕ್ರೂರನನ್ನು ಕಳಿಸಿದೆ. ದ್ರೌಪದೀಸ್ವಯಂವರ ಕಾಲದಲ್ಲಿ ಸ್ವತಃ ನಮ್ಮನ್ನು ಕಾಣಲು ಬಂದೆ. ಹೀಗೆ ನಮ್ಮ ಯೋಗಕ್ಷೇಮ ನೋಡಿಕೊಳ್ಳುವವನು ನೀನಿರುವಿ ಎಂದು ದುರ್ಜನರಿಗೆ ನೀನೇ ತಿಳಿಸುವ ಮೂಲಕ ನಮಗೆ ಕ್ಷೇಮ ಉಂಟುಮಾಡುತ್ತಿರುವೆ.' ಶ್ರೀಕೃಷ್ಣನೆಂದ, 'ದ್ರೌಪದೀಸ್ವಯಂವರ ಕಾಲದಲ್ಲಿ ನಿಮ್ಮನ್ನು ಭೇಟ್ಟಿ ಮಾಡಿದ ಬಳಿಕ ಆ ದಿನವೆ ತಡಮಾಡದೆ ಸತ್ರಾಜಿತನ ಹಂತಕನಾದ ಶತಧನ್ವನ ವಧೆಗಾಗಿ ಹೊರಟುಹೋದೆ. ಶತಧನ್ವನ ವಧೆಯಾದ ಬಳಿಕ ಅಣ್ಣ ಬಲರಾಮನಿಗೆ ಮಣಿನಿಮಿತ್ತವಾಗಿ ನನ್ನಲ್ಲಿ ಬೇಸರ ಉಂಟಾಯಿತು. ಕೋಪದಿಂದ ವಿದೇಹನಗರಕ್ಕೆ ಹೊರಟು ಹೋದ. ಅವನು ಹಿಂತಿರುಗಿ ಬರುವುದನ್ನೆ ಕಾಯುತ್ತ ಐದು ವರ್ಷಗಳ ದೀರ್ಘಕಾಲ ನಾನು ದ್ವಾರಕೆಯಲ್ಲಿ ಇರಬೇಕಾಯಿತು. ಕೆಲಸ ಕಾರ್ಯಗಳಲ್ಲಿ ನಿರತನಾಗಿ ಎಲ್ಲಿಯೂ ಹೋಗಲಿಲ್ಲ.'

ಧರ್ಮರಾಜನ ಆದರೋಪಚಾರವನ್ನು ಸ್ವೀಕರಿಸುತ್ತ ಇಂದ್ರಪ್ರಸ್ಥದ ಪ್ರಜೆಗಳಿಗೆ ಕಣ್ಣಿಗೆ ಹಬ್ಬ ಉಂಟುಮಾಡುತ್ತ ಶ್ರೀಕೃಷ್ಣ ಮಳೆಗಾಲದ ನಾಲ್ಕು ತಿಂಗಳ ಕಾಲ ಸುಖವಾಗಿ ಅಲ್ಲಿಯೇ ವಾಸಮಾಡಿದ.

ಒಮ್ಮೆ ಕೃಷ್ಣಾರ್ಜುನರು ಬೇಟೆಯಾಡಿ ಬಾಯಾರಿ ಯಮುನೆಗೆ

ಬಂದರು. ಅಲ್ಲಿ ತಪಸ್ಸು ಮಾಡುತ್ತಿದ್ದ ಕಾಳಿಂದಿಯನ್ನು ಕಂಡರು. ಆಕೆ ವಿಷ್ಣುವೇ ತನಗೆ ಪತಿಯಾಗಿ ದೊರಕಬೇಕೆಂದು ತಪಸ್ಸು ಮಾಡುತ್ತಿದ್ದುದನ್ನು ಅರ್ಜುನ ತಿಳಿದು ಬಂದು ಕೃಷ್ಣನಿಗೆ ಹೇಳಿದ. ಕೃಷ್ಣ ಅವಳನ್ನು ರಥದಲ್ಲಿ ಹತ್ತಿಸಿಕೊಂಡು ಇಂದ್ರಪ್ರಸ್ಥಕ್ಕೆ ಕರೆದುಕೊಂಡು ಬಂದ. ದ್ವಾರಕೆಯಲ್ಲಿ ವಿವಾಹವಾದ.

ಅವಂತಿಯ ರಾಜರಾದ ವಿಂದ ಅನುವಿಂದರು ವಸುದೇವನ ತಂಗಿಯಾದ ರಾಜಾಧಿದೇವಿಯ ಮಕ್ಕಳು ದುರ್ಯೋಧನನ ಕಡೆಯವರು. ತಂಗಿ ಮಿತ್ರವಿಂದಾದೇವಿ ಕೃಷ್ಣನನ್ನು ವರಿಸಿದಾಗ ಇವರು ತಡೆದರು. ಆದರೆ ಕೃಷ್ಣ ಅವಳನ್ನು ಬಲಾತ್ಕಾರವಾಗಿ ತಂದು ಮದುವೆಯಾದ.

ಕೋಸಲದೇಶದ ರಾಜ ನಗ್ನಜಿತ. ಪರಮಧಾರ್ಮಿಕ. ಅವನ ಮಗಳು ಸತ್ಯಾದೇವಿ. ನೀಲಾ ಎಂದು ಅವಳಿಗೆ ಇನ್ನೊಂದು ಹೆಸರು. ಅವಳು ಕೃಷ್ಣನನ್ನೆ ಬಯಸಿದಳು. ಆದರೆ ರಾಜ ಸ್ವಯಂವರವನ್ನು ಘೋಷಿಸಿದ್ದ. ಯಾರ ಅಂಕೆಗೂ ಬಾರದ ಏಳು ಗೂಳಿಗಳನ್ನು ಒಬ್ಬನೆ ವಶಕ್ಕೆ ತಂದುಕೊಳ್ಳುವವನೇ ಕನ್ಯೆಯನ್ನು ವಿವಾಹವಾಗಬೇಕಾಗಿತ್ತು. ಶ್ರೀಕೃಷ್ಣ ಕೋಸಲರಾಜಧಾನಿಗೆ ಬಂದಾಗ ರಾಜ ಸತ್ಕಾರ ಮಾಡಿ 'ಪೂರ್ಣಕಾಮನಾದ ನಿನಗೆ ನಾನೇನು ಸೇವೆ ಮಾಡಬಲ್ಲೆ? ನಮ್ಮೊಳಗಿದ್ದು ಲೀಲೆಯಿಂದ ನೀನೇ ನಿನ್ನ ಪೂಜೆ ಮಾಡಿಸಿಕೊಂಡು ನನ್ನನ್ನು ಅನುಗ್ರಹಿಸು' ಎಂದ. ಶ್ರೀಕೃಷ್ಣ ಗೂಳಿಗಳನ್ನು ಹಿಡಿದು ಕಟ್ಟಿಹಾಕಿ ಕನ್ಯೆಯನ್ನು ವಿವಾಹವಾದ. ರಾಜ ಅಳಿಯನಿಗೆ ಬಳುವಳಿಯಾಗಿ ಹತ್ತು ಸಾವಿರ ಗೋವುಗಳನ್ನೂ ಮೂರುಸಾವಿರ ದಾಸಿಯರನ್ನೂ, ಒಂಬತ್ತು ಸಾವಿರ ಆನೆ, ಅದಕ್ಕೆ ನೂರರಷ್ಟು ರಥ, ಅವರ ನೂರರಷ್ಟು ಕುದುರೆ, ಅದಕ್ಕೂ ನೂರರಷ್ಟು ಅಂದರೆ ಒಂಬತ್ತು ಪದ್ಮಸಂಖ್ಯೆಯಲ್ಲಿ ಕಾಲಾಳುಗಳನ್ನೂ ನೀಡಿದ.

ಬಳಿಕ ಶ್ರೀಕೃಷ್ಣ ಸೋದರತ್ತೆಯಾದ ಶ್ರುತಿಕೀರ್ತಿಯಲ್ಲಿ ಕೇಕಯರಾಜ ಧೃಷ್ಟಕೇತುವಿನ ಮಗಳಾಗಿ ಜನಿಸಿದ ಭದ್ರಾದೇವಿಯನ್ನು ವಿವಾಹ

ವಾದ. ಅವಳ ಅಣ್ಣಂದಿರಾದ ಸಂತರ್ದನ ಮುಂತಾದವರು ಕನ್ಯಾದಾನ ಮಾಡಿದರು.

ಮದ್ರದೇಶದ ರಾಜನಾದ ಬೃಹತ್ಸೇನನ ಮಗಳು ಲಕ್ಷಣಾದೇವಿ. ಅಮೃತವನ್ನು ಗರುಡ ಗೆದ್ದು ತಂದಂತೆ ಶ್ರೀಕೃಷ್ಣ ಸ್ವಯಂವರದಲ್ಲಿ ಲಕ್ಷಣೆಯನ್ನು ಗೆದ್ದು ತಂದ.

ಶ್ರೀಕೃಷ್ಣ ನರಕಾಸುರನನ್ನು ಕೊಂದು ಅವನ ಕಾರಾಗಾರದಲ್ಲಿ ಬಂಧಿತರಾಗಿದ್ದ ಹದಿನಾರು ಸಾವಿರ ಕನ್ಯೆಯರನ್ನೂ ತಂದು ಮದುವೆಯಾದ.

❖❖❖

ಅಧ್ಯಾಯ - ೬೩

ಅಧ್ಯಾಯ ಸಾರಾಂಶ

ನರಕಾಸುರ ಇಂದ್ರನ ರಕ್ಷಣೆಯಲ್ಲಿದ್ದ ವರುಣನ ಛತ್ರವನ್ನೂ ದೇವಮಾತೆಯಾದ ಅದಿತಿದೇವಿಯ ಕುಂಡಲಗಳನ್ನೂ ಮಂದರ ಪರ್ವತದ ಶಿಖರಗಳಲ್ಲಿ ಒಂದಾದ ಮಣಿಪರ್ವತವನ್ನೂ ಅಪಹರಿಸಿದ್ದ. ಇಂದ್ರನ ಪ್ರಾರ್ಥನೆಯಂತೆ ನರಕಾಸುರನನ್ನು ಸಂಹರಿಸಲು ಸತ್ಯಭಾಮಾಸಮೇತನಾಗಿ ಗರುಡನ ಮೇಲೇರಿ ಪ್ರಾಗ್‌ಜ್ಯೋತಿಷ ಪುರಕ್ಕೆ ಪ್ರಯಾಣ ಮಾಡಿದ. ಹಿಮಾಲಯದ ಉನ್ನತ ಶಿಖರ ಒಂದರಲ್ಲಿ ಗಿರಿ-ಶಸ್ತ್ರ-ಜಲ-ಅಗ್ನಿ-ವಾಯು ದುರ್ಗಗಳಿಂದಲೂ ಆರುಸಾವಿರ ಮುರುಪಾಶ ದುರ್ಗಗಳಿಂದಲೂ ಅಭೇದ್ಯವಾಗಿತ್ತು ಆ ನಗರ. ಶ್ರೀಕೃಷ್ಣ ಗರುಡ ವಾಹನನಾಗಿ ಹೋಗಿ ಗದೆಯಿಂದ ಗಿರಿದುರ್ಗವನ್ನು, ಬಾಣಗಳಿಂದ ಶಸ್ತ್ರದುರ್ಗಗಳನ್ನೂ ಸುದರ್ಶನ ಚಕ್ರದಿಂದ ಮುರುಪಾಶಗಳನ್ನೂ ನಂದಕ ಖಡ್ಗದಿಂದ ಆ ಪಾಶಗಳಲ್ಲಿದ್ದ ಕತ್ತಿಗಳ ಸಾಲನ್ನೂ ಕತ್ತರಿಸಿದ. ವಾಯವ್ಯಾಸ್ತ್ರದಿಂದ ಜಲದುರ್ಗವನ್ನೂ ವಾರುಣಾಸ್ತ್ರದಿಂದ ಅಗ್ನಿದುರ್ಗವನ್ನೂ ನಾಶ ಮಾಡಿದ. ರಾಕ್ಷಸರ ಎದೆನಡುಗುವಂತೆ ಶಂಖನಾದಗೈದ.

ಅದರ ಧ್ವನಿಗೆ ನೀರಿನಲ್ಲಿ ಮಲಗಿದ್ದ ಐದು ತಲೆಯ ಮುರಾಸುರ ನೀರಿನಿಂದ ಮೇಲೆದ್ದ. ಪ್ರಳಯಕಾಲದ ಸೂರ್ಯ ಅಗ್ನಿಗಳಂತೆ ಜ್ವಲಿಸುವ ಕಣ್ಣುಗಳಿಂದ ದಿಟ್ಟಿಸಿ ನೋಡುತ್ತ ಐದು ಮುಖಗಳಿಂದ ಮೂಲೋಕವನ್ನು ನುಂಗುವಂತಿದ್ದ ಅಸುರ ತ್ರಿಶೂಲಹಿಡಿದು, ಗರುಡನ ಮೇಲೆ ಹಾವು ಎರಗುವಂತೆ, ಕೃಷ್ಣನ ಮೇಲೇರಿ ಬಂದ. ತ್ರಿಶೂಲವನ್ನು ಗರುಡನ ಮೇಲೆಸೆದು ಬ್ರಹ್ಮಾಂಡ ಕಟಾಹವ ಬಿರಿಯುವಂತೆ ಸಿಂಹಗರ್ಜನೆ ಮಾಡಿದ. ಶ್ರೀಕೃಷ್ಣ ಬಾಣಗಳಿಂದ ತ್ರಿಶೂಲವನ್ನು ಕತ್ತರಿಸಿದ. ಅಸುರನ ಬಾಯೊಳಗೂ ಬಾಣಗಳನ್ನು ತುಂಬಿದ. ಆತ ಗದೆಯನ್ನು ಕೃಷ್ಣನ ಮೇಲೆಸೆದರೆ ಅದನ್ನೂ ತನ್ನ ಗದೆಯಿಂದ ಕೃಷ್ಣ ಸಾವಿರ ತುಂಡುಗಳಾಗಿ ಪುಡಿಗೈದ. ಅಸುರ ತೋಳುಗಳನ್ನೆತ್ತಿ ದಿಕ್ಕುದಿಕ್ಕುಗಳಿಗೆ ಓಡಲು ತೊಡಗಿದರೆ ಕೃಷ್ಣ ಅವನ

ಐದು ತಲೆಗಳನ್ನೂ ಚಕ್ರದಿಂದ ಲೀಲಾಜಾಲವಾಗಿ ಕತ್ತರಿಸಿದ. ಇಂದ್ರನ ವಜ್ರಾಯುಧದಿಂದ ರೆಕ್ಕೆ ಕಡಿದುಕೊಂಡು ಬೆಟ್ಟ ಬಿದ್ದಂತೆ ಕುತ್ತಿಗೆ ಕೊಯ್ದುಕೊಂಡ ಮುರಾಸುರ ನೀರಲ್ಲಿ ಸತ್ತುಬಿದ್ದ. ಶ್ರೀಕೃಷ್ಣನ ಮೇಲೆ ಹೂಮಳೆ ಸುರಿಯಿತು.

ಧ್ರುವ ಚರಿಷ್ಣು ಶ್ರವಣ ವಿಭಾವಸು ನಭ ವಸು ಅನರಣ ಎಂಬ ಏಳು ಮಂದಿ ಮುರಾಸುರನ ಮಕ್ಕಳೂ ಬಂದು ಶಕ್ತಿ ಋಷ್ಟಿ ಖಡ್ಗಶೂಲ ಗಳನ್ನು ಎಸೆದರು. ಶ್ರೀಕೃಷ್ಣ ಅವರೆಲ್ಲರನ್ನೂ ಯಮಸದನಕ್ಕೆ ಅಟ್ಟಿದ. ತನ್ನ ಸೇನಾಪತಿಗಳೆಲ್ಲರೂ ಹೀಗೆ ಹತರಾಗುವುದನ್ನು ನರಕಾಸುರ ತನ್ನ ಅರಮನೆ ಮಾಳಿಗೆ ಮೇಲಿಂದ ನೋಡಿ, ಕ್ಷೀರಸಾಗರದಿಂದ ಹುಟ್ಟಿದ ಮದ್ದಾನೆಗಳೊಂದಿಗೆ, ಯುದ್ಧಕ್ಕೆ ಬಂದ. ಶತಘ್ನೀ ಎಂಬ ಕಬ್ಬಿಣದ ಶಕ್ತ್ಯಾಯುಧವನ್ನೆಸೆದ. ಶ್ರೀಕೃಷ್ಣ ಅದನ್ನು ನುಂಗಿ ಕ್ಷಣಕಾಲ ಮೂರ್ಛೆಯನ್ನು ನಟಿಸಿದ. ಆಗ ಸತ್ಯಭಾಮೆ ಬಿಲ್ಲು ಹಿಡಿದಳು. ಸ್ವಲ್ಪಕಾಲ ಯುದ್ಧಮಾಡಿ ತಾನೂ ಶ್ರಮವನ್ನು ನಟಿಸಿದಳು. ಬಳಿಕ ಶ್ರೀಕೃಷ್ಣನೆ ನರಕಾಸುರನೆಸೆದ ಬಾಣಗಳನ್ನು ಬಾಣಗಳಿಂದ ಕತ್ತರಿಸಿ ಅವನ ಸೈನ್ಯವನ್ನು ನಾಶಪಡಿಸಿದ.

❖❖❖

ಅಧ್ಯಾಯ - ೬೪

ಅಧ್ಯಾಯ ಸಾರಾಂಶ

ಗರುಡ ರೆಕ್ಕೆಗಳಿಂದ ಹೊಡೆದು ಆನೆಗಳನ್ನೂ ಕುದುರೆಗಳನ್ನೂ
ನಾಶಪಡಿಸಿದ. ನರಕಾಸುರ ಗರುಡನಮೇಲೆ ಶಕ್ತ್ಯಾಯುಧವನ್ನೆಸೆದ.
ಅದು ಆನೆಯನ್ನು ಹೂಮಾಲೆಯಿಂದ ಹೊಡೆದಂತಾಯಿತು.
ನರಕಾಸುರ ಅರ್ಧಚಂದ್ರಾಕಾರದ ಬಾಣವನ್ನು ಬಿಲ್ಲಿಗೆ ಹೂಡಿದಾಗ
ಶ್ರೀಕೃಷ್ಣ ಬಿಲ್ಲನ್ನೇ ಕತ್ತರಿಸಿದ. ಅವನು ಎಸೆದ ಗದೆ ಪರಶುಗಳನ್ನೂ
ಎಪ್ಪತ್ತೈದು ಈಟಿಗಳನ್ನೂ ಕತ್ತರಿಸಿದ. ಆನೆಯ ಮೇಲೆ ಕುಳಿತಿದ್ದ
ನರಕಾಸುರ ಶೂಲವನ್ನು ಎತ್ತುವಾಗಲೆ ಅವನ ತಲೆಯನ್ನು ಚಕ್ರದಿಂದ
ಕತ್ತರಿಸಿದ. ದೇವತೆಗಳು ಕೃಷ್ಣನ ಮೇಲೆ ಹೂಮಾಲೆಗಳನ್ನು ಸುರಿದರು.

ನಗರದ ಪ್ರಮುಖರು ಕೃಷ್ಣನನ್ನು ನಗರದೊಳಗೆ ಕರೆಸಿಕೊಂಡರು.
ಮರುತ್ತುಗಳಿಂದಲೂ ಲೋಕಪಾಲಕರಿಂದಲೂ ಕೂಡಿಕೊಂಡು
ಸತ್ಯಭಾಮಾ ಸಮೇತನಾಗಿ ಶ್ರೀಕೃಷ್ಣ ನಗರದರ್ಶನಕ್ಕೆ ಹೊರಟ.
ಸುಂದರವಾದ ಮಣಿಪರ್ವತವನ್ನೂ ಅಮೃತವನ್ನು ಸುರಿಸುವ ವರುಣನ
ಛತ್ರವನ್ನೂ ಕಂಡ. ದೇವತೆಗಳನ್ನು ಹೊರಗೇ ಬಿಟ್ಟು ತಾನೊಬ್ಬನೇ
ನರಕಾಸುರನ ಅರಮನೆಯನ್ನು ಪ್ರವೇಶಿಸಿದ. ಧರಾದೇವಿ ಕೃಷ್ಣನ
ಬಳಿಗೆ ಬಂದು ಚಿನ್ನದಿಂದ ಮಾಡಿದ ಮುತ್ತುರತ್ನಗಳಿಂದ ಹೊಳೆಯುವ
ಅದಿತಿಯ ಕುಂಡಲಗಳನ್ನು ಅರ್ಪಿಸಿದಳು. ಮೊಮ್ಮಗನಾದ
ಭಗದತ್ತನನ್ನೂ ವೈಜಯಂತೀಮಾಲೆ ಯನ್ನೂ ಅರ್ಪಿಸಿ ಭಕ್ತಿಯಿಂದ
ಸ್ತುತಿಸಿದಳು. ಭಗದತ್ತನ ತಲೆಯ ಮೇಲೆ ಕರಕಮಲವನ್ನಿಡಲು
ಬೇಡಿದಳು. ಶ್ರೀಕೃಷ್ಣ ಭಗದತ್ತನನ್ನು ಕಿರಾತರಾಜ್ಯದಲ್ಲಿ ನೇಮಿಸಿದ.
ನರಕಾಸುರನ ಬಂಧನದಲ್ಲಿದ್ದ ಹದಿನಾರು ಸಾವಿರದ ನೂರುಮಂದಿ
ಕನ್ಯೆಯರನ್ನು ಬಂಧನದಿಂದ ಬಿಡಿಸಿದ. ತನ್ನಲ್ಲೇ ಮನಸ್ಸಿಟ್ಟಿದ್ದ ಆ
ಕನ್ಯೆಯರಿಗೆ ಸುಂದರ ವಸ್ತ್ರಗಳನ್ನು ಉಡಿಸಿ ದ್ವಾರಕೆಗೆ ಕಳಿಸಿದ.
ಮದಿಸಿದ ನಾಲ್ಕು ದಾಡೆಗಳ ಐರಾವತಕುಲದ ಬಿಳಿ ಆನೆಗಳನ್ನೂ
ಮಹಾ ಧನರಾಶಿಯನ್ನೂ ಕಳಿಸಿದ. ಆನೆಗಳಲ್ಲಿ ಸುಪ್ರತೀಕ ಎಂಬ
ಒಂದು ಆನೆಯನ್ನು ಭಗದತ್ತನಿಗೆ ಕೊಟ್ಟು ಉಳಿದ ಅರವತ್ತನಾಲ್ಕು
ಆನೆಗಳನ್ನು ದ್ವಾರಕೆಗೆ ಕಳಿಸಿದ.

ಅಧ್ಯಾಯ - ೬೫

ಅಧ್ಯಾಯ ಸಾರಾಂಶ

ಶ್ರೀಕೃಷ್ಣ ನರಕಾಸುರನನ್ನು ಕೊಂದ ಬಳಿಕ ಗರುಡಾರೂಢನಾಗಿ ದೇವಮಾತೆಯಾದ ಅದಿತಿಯನ್ನು ವಂದಿಸುವುದಕ್ಕಾಗಿ ಅಮರಾವತಿಗೆ ಪ್ರಯಾಣ ಮಾಡಿದ. ದ್ವಾರದಲ್ಲಿ ಶಂಖಧ್ವನಿ ಮಾಡಿದ. ದೇವತೆಗಳು ಅರ್ಘ್ಯಪಾದ್ಯಗಳೊಂದಿಗೆ ಇದಿರುಗೊಂಡರು. ಬಳಿಕ ಕೃಷ್ಣ ಸ್ವರ್ಗವನ್ನು ಪ್ರವೇಶಿಸಿ ಶಚೀ ಸಮೇತನಾದ ದೇವೇಂದ್ರನಿಂದ ಸತ್ಕಾರ ಪಡೆದು ತಾಯಿ ಅದಿತಿದೇವಿಯ ಭವನಕ್ಕೆ ಸತ್ಯಭಾಮಾ ಸಮೇತನಾಗಿ ಹೋಗಿ ವಂದಿಸಿದ. ಅವಳ ಪ್ರೀತಿಯ ಆಶೀರ್ವಾದವನ್ನು ಸ್ವೀಕರಿಸಿದ. ಅವನ ಪ್ರೇರಣೆಯಿಂದ ಸತ್ಯಭಾಮೆ ಅತ್ತೆಯ ಪಾದಗಳಲ್ಲಿ ಕುಂಡಲಗಳನ್ನಿಟ್ಟು ನಮಿಸಿದಳು. 'ನಿನಗೆ ಎಂದೂ ಮುಪ್ಪು ಬಾರದಿರಲಿ, ಕುರೂಪ ಉಂಟಾಗದಿರಲಿ. ಪತಿಯೊಂದಿಗೆ ವಿರಸ ಉಂಟಾಗದಿರಲಿ' ಎಂದು ಆಶೀರ್ವಾದವನ್ನು ಪಡೆದಳು. ಬಳಿಕ 'ಹೋಗಿ ಬರುವೆವೆ'ಂದು ಹೇಳಿ ಶ್ರೀಕೃಷ್ಣ ಸತ್ಯಭಾಮೆಯೊಂದಿಗೆ ಗರುಡನನ್ನೇರಿ ದ್ವಾರಕೆಗೆ ಹೊರಟ.

ಆಕಾಶಮಾರ್ಗದಲ್ಲಿ ಹೋಗುವಾಗ ದಾರಿಯಲ್ಲಿ ನಂದನವನ ಸಿಕ್ಕಿತು. ಅಲ್ಲಿ ಮುಹೂರ್ತಕಾಲ ವಿಹರಿಸಲು ಕೃಷ್ಣಭಾಮೆಯರು ಗರುಡನಿಂದ ಕೆಳಗೆ ಇಳಿದರು. ವನವನ್ನು ಪ್ರವೇಶಿಸಿ ಪಾರಿಜಾತ ವೃಕ್ಷವನ್ನು ಕಂಡರು. ಅದು ಲೋಕದಲ್ಲಿಯೆ ಆಶ್ಚರ್ಯಕರವಾದ ವೃಕ್ಷ. ಅದರ ವೇದಿಕೆ ವೈದೂರ್ಯಮಯ. ಬೇರು ಹವಳ. ಕಾಂಡ ಬಂಗಾರ. ಎಲೆಗಳು ಇಂದ್ರನೀಲ. ಹೂಗಳು ಮಾಣಿಕ್ಯ. ಫಲಗಳು ಮುತ್ತು. ಬಿದ್ದು ಹರವಿದ್ದ ಹೂಗಳು ಗೋಮೇದ. ಹೂವಿನ ಕೇಸರಗಳು ವಜ್ರ. ಕೊಂಬೆಗಳು ಮರಕತ ಮಯವಾಗಿದ್ದುವು. ಭಾಮೆ ನುಡಿದಳು 'ದ್ವಾರಕೆಯಲ್ಲಿ ನಾನು ಈ ಮರದ ನೆರಳಿನಲ್ಲಿ ಕುಳಿತಿರಬೇಕು. ನಿನ್ನ ಬೇರೆ ಪತ್ನಿಯರು ಅದನ್ನು ನೋಡಿ ಭಾಮೆ ನಾನೇ ನಿನಗೆ ಎಲ್ಲರಿಗಿಂತ ಹೆಚ್ಚು ಪ್ರಿಯಳೆಂದು ತಿಳಿಯಬೇಕು' ಎಂದು. ಶ್ರೀಕೃಷ್ಣನೆಂದ 'ಕ್ಷೀರಸಮುದ್ರ

ಮಥನದಿಂದ ಉದಿಸಿಬಂದ ಈ ವೃಕ್ಷವನ್ನು ದೇವತೆಗಳು ಇಂದ್ರನಿಗೆ ನೀಡಿದರು. ಸ್ನೇಹಿತನಾದ ಇಂದ್ರನ ವೃಕ್ಷ ನಾನು ಅಪಹರಿಸುವುದು ಧರ್ಮವಲ್ಲ ಮತ್ತು ಇದರಿಂದ ನಮಗೆ ದೇವತೆಗಳೊಂದಿಗೆ ಭಯಂಕರ ಯುದ್ಧ ವಾಗುವುದು'. ಭಾಮೆ ನುಡಿದಳು- 'ದುರಾಚಾರೆಯಾದ ಶಚಿ ನಾನು ಅವಳ ಮನೆಗೆ ಹೋದರೆ ಪಾರಿಜಾತದ ಹೂ ನೀಡಿ ಸತ್ಕರಿಸಲಿಲ್ಲ. ಗಂಡನ ಪರಾಕ್ರಮದ ಬಗ್ಗೆ ಅವಳಿಗೆ ಗರ್ವ ಹೆಚ್ಚಿದೆ. ನಾನು ನಿನಗೆ ಪ್ರಿಯೆಯಾಗಿದ್ದರೆ ವೃಕ್ಷವನ್ನು ಒಯ್ಯಲೇಬೇಕು. ಇಲ್ಲದಿದ್ದರೆ ಸುಮ್ಮನಿರು, ನಾನು ನಿನ್ನನ್ನು ಪೀಡಿಸುವುದಿಲ್ಲ' ಶ್ರೀಕೃಷ್ಣ ಪಾರಿಜಾತ ವೃಕ್ಷವನ್ನು ಕಿತ್ತು ಗರುಡನ ಮೇಲಿರಿಸಿದ.

ವನಪಾಲಕರಿಂದ ಈ ವಾರ್ತೆಯನ್ನು ಕೇಳಿದ, ದೇವೇಂದ್ರ. ಶಚಿಯೊಡನೆ ಕುಳಿತಿದ್ದ ದೇವೇಂದ್ರನಿಗೆ ಅವರು ಹೇಳಿದರು. 'ಎಲ್ಲ ದೇವತೆಗಳನ್ನೂ ನಿನ್ನನ್ನೂ ಶಚಿಯನ್ನೂ ಅಲಕ್ಷ್ಯಮಾಡಿ ಸತ್ಯಭಾಮ ಪಾರಿಜಾತವನ್ನು ಒಯ್ದಳು. ನಾವು ತಡೆದರೂ ಲೆಕ್ಕಿಸದೆ ಪತಿಯ ಪರಾಕ್ರಮದ ಕೊಬ್ಬಿನಿಂದ ನಮ್ಮನ್ನೆ ಚೆನ್ನಾಗಿ ಬೈದಳು'. ದೇವೇಂದ್ರ ಬಳಿಯಲ್ಲಿಯೇ ಕುಳಿತಿದ್ದ ಶಚಿಯನ್ನು ನೋಡಿ, ಈ ಪರಾಭವವನ್ನು ಸಹಿಸದೆ, ಕೋಲಿನಿಂದ ಹೊಡೆಸಿಕೊಂಡ ಹಾವಿನಂತಾದ. ಯುದ್ಧ ತಯಾರಿಗೆ ಎಲ್ಲೆಡೆ ಘೋಷಣಮಾಡಿಸಿ ಸೈನಿಕರೊಂದಿಗೆ ಎಲ್ಲ ಲೋಕಪಾಲಕರೊಂದಿಗೆ ಐರಾವತವನ್ನೇರಿ ವಜ್ರಾಯುಧವನ್ನು ಹಿಡಿದು ಹೊರಟ. ಅಗ್ನಿದೇವ ತನ್ನ ವಾಹನವಾದ ಮೇಕೆಯನ್ನೇರಿ ಶತಘ್ನಿಯನ್ನು ಹಿಡಿದು ಅವನನ್ನು ಹಿಂಬಾಲಿಸಿದ. ಯಮರಾಜ ಕೋಣವನ್ನೇರಿ ಯಮದಂಡವನ್ನು ಹಿಡಿದು ಮೃತ್ಯು ಕಾಲ ಮುಂತಾದವರೊಂದಿಗೆ ಇಂದ್ರನನ್ನು ಹಿಂಬಾಲಿಸಿದ. ನಿರ್ಋತಿ ಖಡ್ಗಪಾಣಿಯಾಗಿ ಭಯಂಕರ ಮನುಷ್ಯನನ್ನೇರಿ ಹೊರಟ. ವರುಣ ಪಾಶವನ್ನು ಹಿಡಿದು ಮೊಸಳೆಯನ್ನೇರಿ ಹೊರಟ. ವಾಯು ಈಟಿಯನ್ನು ಹಿಡಿದು ಕೃಷ್ಣಮೃಗವನ್ನೇರಿ ಹೊರಟ. ಕುಬೇರ ಮುದ್ಗರವನ್ನು ಹಿಡಿದು ನಾಲ್ಕು ಜನರು ಹೊರುವ ಮೇನೆಯನ್ನು ಹತ್ತಿ ಹೊರಟ. ಶಿವ ಶೂಲವನ್ನು ಹಿಡಿದು ನಂದಿಯನ್ನೇರಿ ಭೂತಗಣಗಳೊಂದಿಗೆ ಹೊರಟ. ಭೇರಿ ಶಂಖ ಮೃದಂಗ ಪಣವ ಆನಕ ಗೋಮುಖ ಕಹಳೆ

ತಾಳ ಧ್ವನಿಗಳಿಂದಲೂ ರಥಚಕ್ರಗಳ ಕುದುರೆಗಳ ಧ್ವನಿಗಳಿಂದಲೂ ಕೂಡಿ ದೇವತೆಗಳು ಸಿಂಹನಾದ ಗೈದರು. ತೊಡೆ ಭುಜಗಳನ್ನು ತಟ್ಟಿಕೊಂಡರು. ನಾ ಮುಂದು ತಾ ಮುಂದೆಂದು ಉತ್ಸಾಹದಿಂದ ನುಗ್ಗಿದರು. ಅವರೊಂದಿಗೆ ಕೂಡಿಕೊಂಡು ಲೋಕಪಾಲಕರು ಧನುಷ್ಟಂಕಾರ ಸಿಂಹನಾದಗಳನ್ನು ಮಾಡುತ್ತ ನರಿಗಳು ಸಿಂಹವನ್ನು ಹೇಗೋ ಹಾಗೆ ಶ್ರೀಕೃಷ್ಣನನ್ನು ಇದಿರಿಸಲು ಹೊರಟರು.

❖❖❖

ಅಧ್ಯಾಯ - ೬೬

ಅಧ್ಯಾಯ ಸಾರಾಂಶ

'ಭಾಮೆ, ನಿನಗೆ ಅತಿಥಿಗಳಾಗಿ ದೇವತೆಗಳು ಬಂದಿದ್ದಾರೆ ನೋಡು' ಎನ್ನುತ್ತ ಕೃಷ್ಣ ಭಾಮೆಗೆ ಧನುರ್ಬಾಣಗಳನ್ನು ನೀಡಿದ. ಕುಬೇರ ಚಿನ್ನದ ಕೋಟಿ ಉಳ್ಳ ತಾಳೆ ಮರಗಾತ್ರದ ಬಿಲ್ಲಿಗೆ ಚಿನ್ನದ ರೆಕ್ಕೆ ಉಳ್ಳ ಬಾಣಗಳನ್ನು ಹೂಡಿ ಎಸೆದ. ಭಾಮೆ ಮರ್ಮಭೇದಕವಾದ ಐದು ಬಾಣಗಳನ್ನು ಅವನ ದೊಡ್ಡ ಹೊಟ್ಟೆಗೆ ಎಸೆದಳು. ಅವನ ಮೂರು ಭಲ್ಲೆಗಳನ್ನು ಅರ್ಧಚಂದ್ರಾಕಾರದ ಮೂರು ಬಾಣಗಳಿಂದ ಕತ್ತರಿಸಿದಳು. ಎಂಟು ವತ್ಸದಂತ ಬಾಣಗಳಿಂದ ಅವನ ಹಣೆಗೆ ಹೊಡೆದಳು. ಅವನು ಹೂಡಿದ ಇಪ್ಪತ್ತೊಂದು ಬಾಣಗಳನ್ನೂ ನಿಮಿಷಾರ್ಧದಲ್ಲಿ ಏಳು ಬಾಣಗಳಿಂದ ಒಂದೊಂದನ್ನೂ ಮೂರು ಮೂರಾಗಿ ತುಂಡರಿಸಿದಳು. ಬಿಲ್ಲನ್ನೂ ಅರ್ಧಚಂದ್ರಾಕಾರ ಬಾಣದಿಂದ ಕಡಿದಳು. ಕುಬೇರ ಇನ್ನೊಂದು ಬಿಲ್ಲನ್ನೆತ್ತಿಕೊಂಡು ಹೆದೆ ಏರಿಸಿ ಕೋಪದಿಂದ ಹಾವಿನಂತೆ ಬುಸುಗುಟ್ಟುತ್ತ ಬಾಣಗಳ ಮಳೆಗರೆದ. ದೇವಿ ಬಾಗಿದ ಗೆಣ್ಣುಗಳುಳ್ಳ ಬಾಣಗಳಿಂದ ಲೀಲಾಜಾಲವಾಗಿ ಅವನ್ನು ಕತ್ತರಿಸಿದಳು. ಕುಬೇರ ಅರ್ಧಚಂದ್ರಾಕಾರದ ಬಾಣವನ್ನು ಬಿಲ್ಲಿಗೆ ಹೂಡುತ್ತಿದ್ದಂತೆ ದೇವಿ ಆ ಬಿಲ್ಲನ್ನೂ ಖಡ್ಗದಿಂದ ಕಡಿದಳು. ಕುಬೇರ ದಾನವರಿಗೆ ಭಯ ನೀಡುವ ಮಹಾಘೋರವಾದ ಮುದ್ಗರವನ್ನು ನೂರುಬಾರಿ ತಿರುಗಿಸಿ ದೇವಿಯ ಮೇಲೆಸೆದ. ಆ ಮುದ್ಗರ ಬರುತ್ತಿದ್ದಂತೆ ಶ್ರೀಕೃಷ್ಣ ಎಡಗೈಯಿಂದ ಹಿಡಿದು ಜೋರಾಗಿ ನಕ್ಕ. ಆಗ ಕುಬೇರ ಯುದ್ಧವನ್ನು ನಿಲ್ಲಿಸಿ ಪಲಾಯನಗೈದ. ಶ್ರೀಕೃಷ್ಣ ದೇವಿಯನ್ನು ಆಲಿಂಗಿಸಿ ಅಭಿನಂದಿಸಿದ.

ವರುಣ ಪಾಶವನ್ನೆತ್ತಿಕೊಂಡು ಕೃಷ್ಣನ ಮುಂದೆ ನುಗ್ಗಿ ಬಂದ. ಆಗ ಗರುಡ ಗೂಳಿಯ ಮೇಲೆ ಹುಲಿಯಂತೆ ವರುಣನ ಮೇಲೆರಗಿದ. ವರುಣ ಗರುಡನ ಕೊರಳಿಗೆ ಪಾಶವನ್ನು ಹಾಕಿ ಸೆಳೆದ. ಗರುಡ ರೆಕ್ಕೆಯ ಅಂಚಿನಿಂದ ವರುಣನನ್ನು ಎತ್ತಿ ಕಾಲುಗಳಿಂದ ಮೊಸಳೆಯನ್ನು ಹಿಡಿದೆತ್ತಿ ಸಮುದ್ರಕ್ಕೆ ಎಸೆದ. ಹೀಗೆ ವಾಹನ

ಹೊರಟುಹೋದಾಗ ವರುಣ ಪಾಶವನ್ನೆತ್ತಿಕೊಂಡು ಕಾಲುನಡಿಗೆ ಯಿಂದಲೇ ಸಮುದ್ರಕ್ಕೆ ಹಿಂತಿರುಗಿದ.

ವಾಯು ಅಗ್ನಿಗಳು ಜೊತೆಗೂಡಿ ಬಂದರು. ಅಗ್ನಿ ಐದು ಬಾಣಗಳಿಂದ, ವಾಯು ಮೂರು ಬಾಣಗಳಿಂದ ಕೃಷ್ಣನನ್ನು ಇದಿರಿಸಿದರು. ಕೃಷ್ಣ ನಕ್ಕು ಒಂದು ಬಾಣದಿಂದ ಅಗ್ನಿಯನ್ನು, ಏಳು ಬಾಣಗಳಿಂದ ವಾಯುವನ್ನೂ ಹೊಡೆದ. ಒಂದು ಬಾಣದಿಂದಲೆ ಬಲವಾಗಿ ಹೊಡೆಸಿಕೊಂಡ ಅಗ್ನಿ ಕೃಷ್ಣ ಸಾಮಾನ್ಯನಲ್ಲ ಎಂದು ತಿಳಿದು ಪಲಾಯನ ಮಾಡಿದ. ಅದನ್ನು ನೋಡಿ ವಾಯುವೂ ಗಾಬರಿ ಗೊಂಡು ಕೃಷ್ಣ ಸಾಕ್ಷಾತ್ ವಿಷ್ಣುವೆ ಎಂದು ತಿಳಿದು ಪಲಾಯನಗೈದ.

ಯಮ ದಂಡವನ್ನೆತ್ತಿಕೊಂಡು ಬಂದಾಗ ಶ್ರೀಕೃಷ್ಣ ಅದನ್ನು ಗದೆಯಿಂದ ಹೊಡೆದು ನೆಲಕ್ಕೆ ಬೀಳಿಸಿದ. ಯಮನ ಕೈ ಭಯದಿಂದ ನಡುಗಿತು. ಕೋಣವನ್ನು ಹಿಂತಿರುಗಿಸಿ ಪಲಾಯನಗೈದ. ಯಮ ಓಡಿದ್ದನ್ನು ಕಂಡು ನಿರ್ಋತಿ ಭಯ ವಿಹ್ವಲನಾಗಿ ಯುದ್ಧಕ್ಕೆ ಮುಂದೆ ಬರಲೇ ಇಲ್ಲ.

ನಂದಿವಾಹನ ತ್ರಿಶೂಲಧಾರಿ ಶಿವ ಭೂತಗಣಗಳೊಂದಿಗೆ ನುಗ್ಗಿ ಬಂದ. ಶಿವಕೇಶವರು ಘೋರಯುದ್ಧ ಮಾಡಿದರು. ಶಿವ ಹತ್ತು ಬಾಣಗಳಿಂದ ಕೃಷ್ಣನನ್ನೂ ಐದು ಬಾಣಗಳಿಂದ ಗರುಡನನ್ನೂ ಹೊಡೆದ. ಕೃಷ್ಣ ಮೂವತ್ತು ಬಾಣಗಳಿಂದ ಒಮ್ಮೆಲೆ ಶಿವನನ್ನು ಹೊಡೆದ. ಗರುಡ ಕಾಲು ರೆಕ್ಕೆ ಕೊಕ್ಕುಗಳಿಂದ ನಂದಿಯನ್ನು ಮರ್ದಿಸಿದ. ಕೃಷ್ಣ ಮತ್ತೆ ಐವತ್ತು ಬಾಣಗಳಿಂದ ಶಿವನನ್ನು ಹೊಡೆದ. ಶಿವ ತ್ರಿಶೂಲವನ್ನೆತ್ತಿ ಎಸೆಯಲು ಬಂದಾಗ ಕೃಷ್ಣ ಗದೆಯನ್ನೆಸೆದ. ಆ ಗದೆ ಶೂಲಗಳು ಆಕಾಶದಲ್ಲಿ ಪರಸ್ಪರ ಕಾದಾಡಿ ಜೊತೆಯಾಗಿ ಸಮುದ್ರದಲ್ಲಿ ಬಿದ್ದುವು. ಬಳಿಕ ಗದೆ ಕೃಷ್ಣನ ಕೈಗೂ ಶೂಲ ಶಿವನ ಕೈಗೂ ಬಂದುವು. ಶಿವ ಖಡ್ಗವನ್ನೆತ್ತಿಕೊಂಡು ಬಂದಾಗ ಗರುಡ ನಂದಿಯ ಕೋಡುಗಳನ್ನು ಕೈಗಳಿಂದ ಹಿಡಿದು ಶಿವನ ಸಮೇತವಾಗಿ ನೂರು ಧನುಃ ಪ್ರಮಾಣದಷ್ಟು ದೂರಕ್ಕೆ ಎಸೆದುಬಿಟ್ಟ. ಶಿವ ಯುದ್ಧವನ್ನು ತೊರೆದು ಪ್ರಮಥರೊಂದಿಗೆ ಬಂದ ಹಾದಿಯಿಂದಲೇ ಹಿಂದಿರುಗಿಹೋದ.

❖❖❖

ಅಧ್ಯಾಯ - ೬೭

ಅಧ್ಯಾಯ ಸಾರಾಂಶ

ದೇವೇಂದ್ರ, ಶಚಿ ಹೇಳಿದ್ದ 'ಪಾರಿಜಾತವೃಕ್ಷವನ್ನು ತಿರುಗಿ ತಾ' ಎಂಬ ಮಾತನ್ನೆ ನೆನೆಯುತ್ತ ಐರಾವತವನ್ನೇರಿ ಬಿಲ್ಲು ಬತ್ತಳಿಕೆಗಳನ್ನು ಹಿಡಿದು ಆನೆ ಸಿಂಹವನ್ನು ಇದಿರಿಸುವಂತೆ ಕೃಷ್ಣನನ್ನು ಇದಿರಿಸಿ ನಿಂತ. ಕೃಷ್ಣ ಶಂಖನಾದ ಗೈದ. ಇಂದ್ರ ಎದೆಗೆ ಬಾಣವೆಸೆದಾಗ ಕೃಷ್ಣ ನಕ್ಕು 'ನೀನು ಇಂದ್ರ ತಾನೆ? ಹೀಗೆ ಮಾಡುವುದು ನಿನಗೆ ಒಪ್ಪುತ್ತದೆ' ಎಂದ. ಇಂದ್ರ ಕೃಷ್ಣನ ಮಾತಿಗೆ ಬೆಲೆಗೊಡದೆ ಹತ್ತು ಬಾಣ ಎಸೆದ. ಕೃಷ್ಣ ಒಂದು ಬಾಣದಿಂದ ಅವನ್ನು ಮೂರು ಮೂರಾಗಿ ಕತ್ತರಿಸಿ ಹತ್ತು ಬಾಣಗಳಿಂದ ಇಂದ್ರನನ್ನು ಹೊಡೆದ. ಇಂದ್ರನ ಕವಚ ಪುಡಿಯಾಯಿತು. ಮೈ ರಕ್ತದಿಂದ ತೊಯ್ದಿತು. ಅವನು ತಿರುಗಿ ಹದಿನಾರು ಬಾಣಗಳನ್ನೆಸೆದ. ಕೃಷ್ಣ ಮೂರು ಬಾಣಗಳಿಂದ ಅವನ್ನೂ ಕತ್ತರಿಸಿದ. ಮೂವತ್ತು ಬಾಣಗಳನ್ನು ಅವನೆದೆಗೆ ಎಸೆದ. ಇಂದ್ರ ಕುಪಿತನಾಗಿ ಅಂಕುಶದಿಂದ ಐರಾವತವನ್ನು ತಿವಿದು ಗರುಡನ ಮೇಲೆ ನುಗ್ಗಿಸಿದ. ಆನೆ ಗರುಡನ ಎರಡು ಭುಜಗಳ ನಡುವೆ ನಾಲ್ಕು ದಂತಗಳಿಂದ ತಿವಿಯಿತು. ಗರುಡ ಆನೆಯನ್ನು ಕೊಕ್ಕುರೆಕ್ಕೆ ಉಗುರುಗಳಿಂದ ಹೊಡೆದ. ಇಂದ್ರ ವಜ್ರಾಯುಧವನ್ನೆತ್ತಿ ಕೃಷ್ಣನ ಮೇಲೆ ಬೀಸಿದ. ಶ್ರೀಕೃಷ್ಣ ಅದನ್ನು ಎಡಗೈಯಿಂದ ಹಿಡಿದು ನಕ್ಕ. ಇಂದ್ರನೀಗ ನಿರಾಯುಧ. ಅವನ ಐರಾವತವೂ ಗರುಡನಿಂದ ಗಾಯಗೊಂಡಿದೆ. ನಾಚಿ ತಲೆತಗ್ಗಿಸಿಕೊಂಡು ಪಲಾಯನ ಮಾಡಲು ತೊಡಗಿದ.

ಸತ್ಯಭಾಮೆ ನುಡಿದಳು–'ಬಾ ಇಂದ್ರ, ಶಚಿಯ ಗಂಡನಿಗೆ ಹೀಗೆ ಪಲಾಯನ ಮಾಡುವುದು ಒಪ್ಪುವುದಿಲ್ಲ. ಐಶ್ವರ್ಯ ಮದದಿಂದ ಗಂಡನ ಪರಾಕ್ರಮದಿಂದ ಕೊಬ್ಬಿರುವ ಶಚಿ ಯುದ್ಧದಲ್ಲಿ ಸೋತಿರುವ ನಿನ್ನನ್ನು ಅಪಮಾನಿಸದಿರಲಾರಳು'.

ಇಂದ್ರ ನುಡಿದ– ಮೂಲೋಕದೊಡೆಯ ಯುದ್ಧಕ್ಕೆ ನಿಂತನೆಂದರೆ ಅವನ ಮುಂದೆ ಯಾರು ಸೋಲದಿರುತ್ತಾರೆ? ಕರು ಹಾಲುಣ್ಣುವ

ಸಮಯದಲ್ಲಿ ತಾಯಿಹಸುವಿನ ಕೆಚ್ಚಲಿಗೆ ಗುದ್ದುವಂತೆ ನಾವೂ ಕೃಷ್ಣನೊಡನೆ ಸೆಣಸಿ ನಮ್ಮ ಹುಡುಗತನವನ್ನು ತೋರಿಸುತ್ತೇವೆ' ಹೀಗೆ ಹೇಳಿ ದೇವಿಗೆ ಕೈಜೋಡಿಸಿ ನಮಿಸಿ ಕೃಷ್ಣನಿಗೆ ಹೇಳಿದ.

'ಜಗನ್ನಾಥ, ನಾನು ಮಾಡಿದ ಅಪರಾಧವನ್ನು ಕ್ಷಮಿಸು. ಶರಣಾಗತ ವತ್ಸಲ ನೀನು. ನನ್ನನ್ನು ಮೂರ್ಖ, ಸಹನೆ ಇಲ್ಲದವನೆಂದು ಕೈಬಿಡಬೇಡ. ಈ ಐರಾವತ ವಜ್ರಾಯುಧ ಪಾರಿಜಾತವೃಕ್ಷ ದೇವರಾಜ್ಯ ಈ ಅಮರಾವತಿ ಎಲ್ಲವೂ ನಿನ್ನವು. ನಾನು ನಿನ್ನ ಆಜ್ಞಾಧಾರಕ. ನಿನಗೆ ಯಾವುದು ಒಯ್ಯಬೇಕೆನಿಸುವುದೋ ಅದನ್ನು ಯಥೇಚ್ಛ ಒಯ್ಯು. ಆದರೆ, ನೀನು ಮನುಷ್ಯಲೋಕಕ್ಕೆ ಪಾರಿಜಾತವನ್ನು ಒಯ್ದರೆ ಭೂಲೋಕ ಸ್ವರ್ಗಕ್ಕೆ ಸರಿ ಮಿಗಿಲೆನಿಸೀತು'.

ಶ್ರೀಕೃಷ್ಣನೆಂದ, 'ಇಂದ್ರ! ನೀನೇನೂ ಅಪರಾಧ ಮಾಡಲಿಲ್ಲ. ನಾನೇ ಮಾಡಿಸಿದೆ, ನಾನೆ ಮಾಡಿದೆ. ಇಬ್ಬರಲ್ಲಿ ನಮ್ಮಲ್ಲಿ ಭೇದವಿಲ್ಲ. ನಾನು ~~ಪರಂಧಾಮಕ್ಕೆ ಹೋದೊಡನೆ ಪಾರಿಜಾತ ನನ್ನಾಜ್ಞೆಯಂತೆ~~ ತಾನಾಗಿಯೇ ನಂದನವನಕ್ಕೆ ಬಂದು ಬಿಡುತ್ತದೆ' ಇಂದ್ರ ಕೃಷ್ಣಭಾಮೆಯರನ್ನೂ ಗರುಡನನ್ನೂ ಪ್ರಸನ್ನರಾಗಲು ಬೇಡಿಕೊಂಡ. 'ನಿನ್ನ ತಂಗಿಯ ಗಂಡನಾದ ಅರ್ಜುನ ನನ್ನ ಮಗ. ಅವನನ್ನು ನೀನು ರಕ್ಷಿಸಬೇಕು' ಎಂದು ಮತ್ತೆಮತ್ತೆ ಪ್ರಾರ್ಥಿಸಿ ಬೀಳ್ಕೊಂಡ.

ಗರುಡ ಲೀಲಾಜಾಲವಾಗಿ ಕೃಷ್ಣಸತ್ಯಭಾಮೆಯರನ್ನೂ ಪಾರಿಜಾತ ವನ್ನೂ ಹೊತ್ತು ದ್ವಾರಕೆಗೆ ಬಂದ, ಯಾದವರು ಶ್ರೀಕೃಷ್ಣನನ್ನು ಮಂಗಲವಾದ್ಯ ವೇದಘೋಷಗಳಿಂದ ಎದುರುಗೊಂಡರು. ಸತ್ಯಭಾಮೆಯ ಮನೆಯಂಗಳದಲ್ಲಿ ಪಾರಿಜಾತವನ್ನು ಶ್ರೀಕೃಷ್ಣ ನೆಟ್ಟ. ಹದಿನಾರು ಸಾವಿರ ಸ್ತ್ರೀಯರೊಂದಿಗೆ ಶ್ರೀಕೃಷ್ಣ ದ್ವಾರಕೆಗೆ ಬಂದಿರುವುದನ್ನು ಕೇಳಿ ಎಲ್ಲ ಯಾದವ ಸ್ತ್ರೀಯರೂ ನೋಡಲು ಬಂದರು. ರುಕ್ಮಿಣೀ ಮುಂತಾದ ಏಳುಮಂದಿ ಮಹಿಷಿಯರೂ, ಬಲರಾಮನ ಪತ್ನಿ ರೇವತಿ, ತ್ರಿವಕ್ರೆ ಏಕಾಂಗನೆ ಸುಭದ್ರೆಯರೂ ಬಂದರು. ಎಲ್ಲರೂ ಆನಂದದಿಂದ ಜೊತೆಗೂಡಿ ಅರಳು ಹೂ ಅಕ್ಷತೆಕಾಳುಗಳನ್ನು ಶ್ರೀಕೃಷ್ಣನ ತಲೆಯ ಮೇಲೆ ಹಾಕಿ ಹೋದರು.

❖❖❖

ಅಧ್ಯಾಯ - ೬೮

ಅಧ್ಯಾಯ ಸಾರಾಂಶ

ಶ್ರೀಕೃಷ್ಣ ಕೈಲಾಸಕ್ಕೆ ಹೋಗಿ ಶಿವನಿಂದ ವರಪಡೆದು, ಹಿಂದೆ ಶಿವನ ನೇತ್ರಾಗ್ನಿಯಲ್ಲಿ ಸುಟ್ಟುಹೋಗಿದ್ದ ಮನ್ಮಥನನ್ನು ಪ್ರದ್ಯುಮ್ನ ಎಂಬ ಹೆಸರಿನಿಂದ ರುಕ್ಮಿಣಿಯಲ್ಲಿ ಮಗನನ್ನಾಗಿ ಹುಟ್ಟಿಸಿದ. ಪ್ರದ್ಯುಮ್ನ ಎಂಬ ಭಗವಂತನ ವ್ಯೂಹರೂಪದ ಆವೇಶದಿಂದ ಮನ್ಮಥ ಪ್ರದ್ಯುಮ್ನನೆನಿಸಿದ. ಆತ ಹುಟ್ಟಿ ಇನ್ನೂ ಹತ್ತು ದಿವಸವಾಗುವುದರೊಳಗೆ ಶಂಬರಾಸುರ ಅವನನ್ನು ಶತ್ರುವೆಂದು ತಿಳಿದು ಮಾಯೆಯಿಂದ ಅವನನ್ನು ಎತ್ತಿ ತಂದು ಸಮುದ್ರದಲ್ಲಿ ಎಸೆದು ಹೊರಟುಹೋದ. ಮಗುವನ್ನು ಒಂದು ದೊಡ್ಡ ಮೀನು ನುಂಗಿತು. ಮೀನುಗಾರರ ಬಲೆಯಲ್ಲಿ ಸಿಕ್ಕಿ ಬಿದ್ದಿತು. ಅವರು ಅದನ್ನು ಶಂಬರಾಸುರನಿಗೆ ಕಾಣಿಕೆಯಾಗಿ ಇತ್ತರು. ಆಗ ಅಡಿಗೆಯವರು ಅದನ್ನು ಕತ್ತಿಯಿಂದ ಕತ್ತರಿಸಿದಾಗ ಹೊಟ್ಟೆಯೊಳಗೆ ಶಿಶುವನ್ನು ಕಂಡರು. ರಾಣಿಯಾದ ಮಾಯಾವತಿಯ ಕೈಗಿತ್ತರು. ಈ ಮಗು ಯಾರು, ಯಾರದೆಂದು ಎಲ್ಲ ಸಂಗತಿಗಳನ್ನು ನಾರದರ ಮುಖದಿಂದ ಕೇಳಿ ತಿಳಿದಳು. ಈ ಮಾಯಾವತಿ ಮನ್ಮಥನ ರಾಣಿಯಾದ ರತಿಯೇ ಆಗಿದ್ದಳು. ಪತಿಯ ಶರೀರ ಸುಟ್ಟುಹೋದ ಬಳಿಕ ಅವನಿಗೆ ಇನ್ನೊಂದು ಶರೀರ ಬರುವುದನ್ನೇ ಕಾದಿದ್ದಳು.

ಮಾಯಾವತಿಯ ಮಡಿಲಲ್ಲಿ ಪ್ರದ್ಯುಮ್ನ ಬೆಳೆದು ಅಲ್ಪಕಾಲದಲ್ಲಿಯೇ ಯೌವನ ಪಡೆದು ಮನುಷ್ಯಲೋಕದಲ್ಲೇ ಅತ್ಯಂತ ಸುಂದರ ಪುರುಷನಾಗಿ ಬೆಳೆದುನಿಂತ. ರತಿದೇವಿ ಈಗ ನಾಚುತ್ತ ನಸುನಗುತ್ತ ಪ್ರಣಯವಿಲಾಸ ಕಡೆಗಣ್ಣ ನೋಟಗಳಿಂದ ತನ್ನ ಪ್ರಣಯ ಸರ್ವಸ್ವವನ್ನು ಒಪ್ಪಿಸಿ ಎದುರಲ್ಲಿ ನಿಂತಳು. ಅಮ್ಮ! ಇದೇನೆಂದು ಪ್ರದ್ಯುಮ್ನನಿಗೆ ಅಚ್ಚರಿಯಾಯಿತು. ಆಕೆ ಎಲ್ಲ ಸಂಗತಿಯನ್ನೂ ಅವನಿಗೆ ಹೇಳಿದಳು. 'ನೀನು ಕೃಷ್ಣನ ಪುತ್ರನಾಗಿ ಜನಿಸಿದ ಮನ್ಮಥ. ಹೆರಿಗೆ ಮನೆಯಿಂದಲೇ ನಿನ್ನನ್ನು ಶಂಬರಾಸುರ ಎತ್ತಿ ತಂದು ಸಮುದ್ರದಲ್ಲಿ ಎಸೆದ. ಮೀನು ನಿನ್ನನ್ನು ನುಂಗಿತು. ಅದರ ಹೊಟ್ಟೆಯೊಳಗಿಂದ

ನೀನು ನನ್ನ ಕೈಗೆ ಬಂದಿರುವೆ. ಅಸುರ ನಿನ್ನ ತಂದೆಯಲ್ಲ, ಶತ್ರು. ಮಾಯಾವಿ. ನೀನು ಮಾಯೆಯಿಂದ ಅವನನ್ನು ನಾಶಮಾಡು. ನಿನ್ನ ತಾಯಿ ರುಕ್ಮಿಣೀದೇವಿ ನಿನಗಾಗಿ ಕೊರಗುತ್ತಿದ್ದಾಳೆ'. ಹೀಗೆ ಹೇಳಿ ಮಾಯಾವತಿ ಎಲ್ಲ ಆಸುರೀ ಮಾಯೆಗಳನ್ನು ನಾಶಗೊಳಿಸುವ ವಿದ್ಯೆಯನ್ನು ಹೇಳಿಕೊಟ್ಟಳು.

ಪ್ರದ್ಯುಮ್ನ ಶಂಬರನನ್ನು ಯುದ್ಧಕ್ಕೆ ಆಹ್ವಾನಿಸಿದ. ಅವನೆಸೆದ ಗದೆಯನ್ನು ತನ್ನ ಗದೆಯಿಂದ ನಿವಾರಿಸಿಕೊಂಡ. ಅವನು ಮಾಯೆ ಯಿಂದ ಕಲ್ಲಿನ ಮಳೆ ಸುರಿಸಿದಾಗ, ಎಲ್ಲ ಆಸುರೀಮಾಯೆಗಳನ್ನು ನಾಶಮಾಡುವ ಬಲಜ್ಞಾನಸ್ವರೂಪಿ ಪರಶುರಾಮ ದೇವತಾಕವಾದ ಮಹಾವಿದ್ಯೆಯನ್ನು ಪ್ರಯೋಗಿಸಿ ಪ್ರದ್ಯುಮ್ನ ಅಜೇಯನಾಗಿ ನಿಂತ. ಬಳಿಕ ಗುಹ್ಯಕ ಗಂಧರ್ವ ಪಿಶಾಚ ಉರಗ ರಾಕ್ಷಸ ಮುಂತಾದ ನೂರಾರು ಮಾಯೆಗಳನ್ನು ಶಂಬರ ಪ್ರಯೋಗಿಸಿದರೂ ಅವೆಲ್ಲವನ್ನೂ ಪ್ರದ್ಯುಮ್ನ ನಾಶಗೊಳಿಸಿದ. ಕೊನೆಯಲ್ಲಿ ಅವನ ಶಿರವನ್ನು ಖಡ್ಗದಿಂದ ತರಿದು 'ಶಂಬರಾರಿ' ಎನಿಸಿದ. ದೇವತೆಗಳು ಅವನ ಮೇಲೆ ಹೂ ಮಳೆಗರೆದರು. ಪ್ರಶಂಸೆ ಮಾಡಿದರು.

ಆಕಾಶದಲ್ಲಿ ಸಂಚರಿಸಬಲ್ಲವಳು ರತಿ ತಾನೆ ಪ್ರದ್ಯುಮ್ನನನ್ನು ಆಕಾಶ ಮಾರ್ಗವಾಗಿ ದ್ವಾರಕೆಗೆ ಕರೆತಂದಳು. ಅವನನ್ನು ಅಂತಃಪುರದಲ್ಲಿ ಸ್ತ್ರೀಯರು ಕಂಡಾಗ ಮೊದಲಿಗೆ ಕೃಷ್ಣನೆಂದೇ ಭ್ರಮಿಸಿದರು. ಬಳಿಕ ನಿಧಾನವಾಗಿ ಕೃಷ್ಣನಲ್ಲ ಎಂದು ತಿಳಿದರು. ತಾಯಿ ರುಕ್ಮಿಣಿಯೂ 'ತಾವರೆಗಣ್ಣಿನ ಈತ ಯಾರ ಮಗ? ಕೃಷ್ಣನನ್ನೇ ಹೋಲುತ್ತಿದ್ದಾನೆ. ನನ್ನ ಕಳೆದುಹೋದ ಮಗ ಈತನೇ ಇರಬಹುದೆ?' ಎಂದು ಆಲೋಚಿಸಿದಳು. ಅಷ್ಟರಲ್ಲಿ ಶ್ರೀಕೃಷ್ಣ ವಸುದೇವ ದೇವಕಿಯ ರೊಂದಿಗೆ ಅಂತಃಪುರವನ್ನು ಪ್ರವೇಶಿಸಿದ. ಪ್ರದ್ಯುಮ್ನನ ಬಗ್ಗೆ ಎಲ್ಲವನ್ನೂ ಬಲ್ಲವನೇ ಆಗಿದ್ದರೂ ಸುಮ್ಮನಿದ್ದ. ನಾರದರು ಬಂದು, ಪ್ರದ್ಯುಮ್ನ ಶಂಬರಾಸುರನಿಂದ ಅಪ್ಪಹತನಾದುದರಿಂದ ತೊಡಗಿ ಎಲ್ಲ ವೃತ್ತಾಂತವನ್ನು ತಿಳಿಸಿದರು. ಪ್ರದ್ಯುಮ್ನ ಶ್ರೀನಿವಾಸನ ಪ್ರತಿಬಿಂಬನಾದ ಕಾಮದೇವನಾದ್ದರಿಂದ ಅವನನ್ನು ಕಂಡಾಗಲೆಲ್ಲ ಕೃಷ್ಣಪತ್ನಿಯರಿಗೆ ಕೃಷ್ಣನ ಬಳಿ ವಿಹರಿಸುವ ಆಸೆ ಉಂಟಾಗುತ್ತಿತ್ತು.

❖❖❖

ಅಧ್ಯಾಯ - ೬೯

ಅಧ್ಯಾಯ ಸಾರಾಂಶ

ಶ್ರೀಕೃಷ್ಣ ಕೈಲಾಸಕ್ಕೆ ಹೋಗಿದ್ದಾಗ ದ್ವಾರಕೆಯಲ್ಲಿ ಅವನಿಲ್ಲವೆಂದು ತಿಳಿದು ರಾತ್ರಿಕಾಲದಲ್ಲಿ ಪೌಂಡ್ರಕವಾಸುದೇವ ಬಹು ಸೈನ್ಯ ಸಮೇತನಾಗಿ ಬಂದು ಮುತ್ತಿಗೆ ಹಾಕಿದ. ಬಲರಾಮ ಸಾತ್ಯಕಿ ವಸುದೇವ ಉದ್ಧವ ಉಗ್ರಸೇನ ಮುಂತಾದ ಯಾದವರು ಅವನನ್ನು ಪರಾಭವಗೊಳಿಸಿದರು.

ಈ ಪೌಂಡ್ರಕ ವಸುದೇವನ ಮಗನೆ, ಕಾಶಿರಾಜನಿಗೆ ಗಂಡು ಮಕ್ಕಳಿರಲಿಲ್ಲ. ಸುತನು ಎಂಬ ಕನ್ಯೆಯನ್ನು ವಸುದೇವನಿಗಿತ್ತು ವರದಕ್ಷಿಣೆಯಾಗಿ ರಾಜ್ಯವನ್ನೂ ನೀಡಿದ. ಆ ಕನ್ಯೆಯಲ್ಲಿ ಹುಟ್ಟಿ ದವನು ಪೌಂಡ್ರಕ. ವಸುದೇವನ ಪುತ್ರನಾದ್ದರಿಂದ ವಾಸುದೇವ ನೆನಿಸಿದ. ಅವನಿಗೆ ವಸುದೇವ ರಾಜ್ಯವನ್ನು ವಹಿಸಿಕೊಟ್ಟು ದೇವಕಿಯನ್ನು ವಿವಾಹವಾದ. ಬಳಿಕ ಕಂಸನ ಕಾರಾಗಾರದಲ್ಲೇ ಇದ್ದುದರಿಂದ ಆತ ಎಂದೂ ಕಾಶಿಗೆ ಹೋಗಲಿಲ್ಲ. ಇದೇ ರೀತಿ ಕರವೀರಪುರದ ರಾಜನಿಗೂ ಗಂಡುಮಕ್ಕಳಿರಲಿಲ್ಲ. ಅವನೂ ತನ್ನ ಮಗಳಾದ ವಡವಾಳನ್ನು ವಸುದೇವನಿಗೆ ನೀಡಿದ್ದ. ಅವಳಲ್ಲಿ ಸೃಗಾಲವಾಸುದೇವ ಜನಿಸಿದ ಬಳಿಕ ವಸುದೇವ ಕರವೀರಪುರಕ್ಕೂ ಹೋಗಲಿಲ್ಲ. ತನ್ನ ತಾಯಿಗೆ ದೇವಕಿ ಸವತಿಯಾದುದು, ಪೌಂಡ್ರಕ ಸೃಗಾಲರಿಬ್ಬರಿಗೂ ಸಹನೆಯಾಗದಿದ್ದರಿಂದ ಅವರು ಯಾದವರನ್ನೇ ದ್ವೇಷಿಸಿದರು.

ಶ್ರೀಕೃಷ್ಣ ದ್ವಾರಕೆಗೆ ಹಿಂತಿರುಗಿ ಬಂದ ಬಳಿಕ ಒಂದುದಿನ ಪೌಂಡ್ರಕ ಒಬ್ಬ ದೂತನನ್ನು ಶ್ರೀಕೃಷ್ಣನಿಗೆ ಕಳಿಸಿದ. 'ವಾಸುದೇವನಾಗಿ ಅವತರಿಸಿದ ಸಾಕ್ಷಾತ್ ನಾರಾಯಣ ತಾನೇ ಹೊರತು ಕೃಷ್ಣನಲ್ಲ, ಕೃಷ್ಣ ವಾಸುದೇವನಾಮವನ್ನೂ ನಾರಾಯಣನ ಚಿಹ್ನೆಯಾದ ಶಂಖ ಚಕ್ರಾದಿಗಳನ್ನೂ ಬಿಡಬೇಕು, ಶರಣಾಗಬೇಕು, ಇಲ್ಲವೆ ಯುದ್ಧ ಮಾಡಬೇಕು' ಎಂದು ತನ್ನಾಜ್ಞೆಯನ್ನು ದೂತನ ಮೂಲಕ ಹೇಳಿ

ಕಳಿಸಿದ. ಯಾದವರೆಲ್ಲರೂ ಅದನ್ನು ಕೇಳಿ ನಕ್ಕರು. ಶ್ರೀಕೃಷ್ಣ 'ನಿನ್ನ ಚಕ್ರ ಮುಂತಾದ ಚಿಹ್ನೆಗಳನ್ನು ಯುದ್ಧದಲ್ಲಿ ನಿನ್ನ ಮೇಲೆಯೆ ಎಸೆಯುತ್ತೇನೆ. ರಣರಂಗದಲ್ಲಿ ನೀನು ಸತ್ತು ಬಿದ್ದು ನರಿನಾಯಿಗಳಿಗೆ ತುತ್ತಾಗುವಿ' ಎಂದು ದೂತನ ಮೂಲಕ ಹೇಳಿ ಕಳಿಸಿದ.

ಬಳಿಕ ರಣರಂಗದಲ್ಲಿ ಪೌಂಡ್ರಕ ರಥದ ಮಧ್ಯದಲ್ಲಿ ಚಿನ್ನದ ಗರುಡನ ಮೇಲೆ ಕುಳಿತ. ಚಿನ್ನದ ಎರಡು ಬೇರೆ ಕೈಗಳನ್ನು ಕಟ್ಟಿಕೊಂಡ. ಶಂಖ ಚಕ್ರಾದಿಗಳನ್ನೂ ನಾಲ್ಕು ಕೈಗಳಲ್ಲಿ ಧರಿಸಿದ. ಶ್ರೀವತ್ಸ ಚಿಹ್ನೆ ಕೌಸ್ತುಭಮಣಿ ವನಮಾಲೆ ಪೀತಾಂಬರ ಮಾಲೆ ಆಭರಣಗಳು ಮಕರಕುಂಡಲಗಳು ಗರುಡಧ್ವಜ ಇವೆಲ್ಲವನ್ನೂ ಕೃಷ್ಣನ ಸಾಮ್ಯ ಬರಬೇಕೆಂದು ಧರಿಸಿದ. ರಂಗಸ್ಥಳದಲ್ಲಿ ಬಂದು ನಿಲ್ಲುವ ನಟನಂತೆ ಆತ ಕೃತ್ರಿಮವೇಷ ಧರಿಸಿದ್ದನ್ನು ಕಂಡು ಕೃಷ್ಣ ಜೋರಾಗಿ ನಕ್ಕ. ಯುದ್ಧ ಪ್ರಾರಂಭವಾಯಿತು. ಪೌಂಡ್ರಕನ ಎರಡು ಅಕ್ಷೋಹಿಣಿ ಸೈನ್ಯದೊಂದಿಗೆ ಕಾಶಿರಾಜ ತಂದಿದ್ದ ಮೂರು ಅಕ್ಷೋಹಿಣಿ ಸೈನ್ಯವೂ ಸೇರಿತ್ತು. ಆದರೆ ಶ್ರೀಕೃಷ್ಣ ಆ ಎಲ್ಲ ಸೈನ್ಯವನ್ನೂ ನಾಶಮಾಡಿ ಪೌಂಡ್ರಕನ ರಥವನ್ನೂ ಬಾಣಗಳಿಂದ ಪುಡಿಮಾಡಿದ. ಇಂದ್ರ ವಜ್ರಾಯುಧದಿಂದ ಪರ್ವತದ ರೆಕ್ಕೆಯನ್ನು ಕಡಿದಂತೆ, ಚಕ್ರದಿಂದ ಪೌಂಡ್ರಕನ ಶಿರವನ್ನು ಕಡಿದ. ಬಾಣಗಳಿಂದ ಕಾಶಿರಾಜನ ಶಿರವನ್ನೂ ತರಿದು, ಗಾಳಿ ಕಮಲದ ಹೂವನ್ನು ಹಾರಿಸುವಂತೆ, ಆ ಶಿರವನ್ನು ಹಾರಿಸಿ ಕಾಶಿಪಟ್ಟಣದಲ್ಲಿ ಬೀಳಿಸಿದ.

ಕಾಶಿರಾಜನ ತಲೆ ಊರ ಹೆಬ್ಬಾಗಿಲಲ್ಲಿ ಬಂದು ಬಿದ್ದಾಗ ಅವನ ಪತ್ನಿ ಮುಂತಾದವರು ಶೋಕಪೀಡಿತರಾದರು. ಅವನ ಮಗನಾದ ಸುದಕ್ಷಿಣ ತಂದೆಗೆ ಉತ್ತರಕ್ರಿಯೆ ಮಾಡಿ, 'ನಾನು ತಂದೆಯ ಹಂತಕನನ್ನು ಕೊಂದು ತಂದೆಯ ಋಣವನ್ನು ತೀರಿಸುವೆನೆಂ'ದು ನಿಶ್ಚಯಿಸಿ ಶಿವನನ್ನು ಆರಾಧಿಸಿದ. ಶಿವನೊಲಿದು ಮೈದೋರಿ ನುಡಿದ 'ದಕ್ಷಿಣಾಗ್ನಿಯನ್ನು ವೇದೋಕ್ತ ಶತ್ರುಮಾರಣಯಜ್ಞದಿಂದ ಆರಾಧಿಸಿ ಬ್ರಾಹ್ಮಣರಲ್ಲಿ ಭಕ್ತಿ ಇಲ್ಲದವನ ಮೇಲೆ ಆ ಅಗ್ನಿಯನ್ನು ಪ್ರಯೋಗಿಸು. ಆತ ನನ್ನ ಪ್ರಮಥಗಣಗಳೊಂದಿಗೆ ಸೇರಿ ನಿನ್ನ ಶತ್ರುವನ್ನು ನಾಶಮಾಡುತ್ತಾನೆ' ಎಂದ. ಸುದಕ್ಷಿಣ ಹಾಗೇ ಮಾಡಿ ಶ್ರೀಕೃಷ್ಣನ ಮೇಲೆ ಪ್ರಯೋಗಿಸಿದ. ಆಗ ಆ ದಕ್ಷಿಣಾಗ್ನಿದೇವ ಕಾಯಿಸಿದ

ತಾಮ್ರದಂತೆ ಕೆಂಪಾದ ಜಡೆಯಿಂದ, ಮೀಸೆಯಿಂದ, ಕೆಂಡಕಾರುವ ಕಣ್ಣಿಂದ, ಭೀಕರವಾಗಿರುವ ಆಕಾರದಿಂದ ಪ್ರಾದು ರ್ಭವಿಸಿದ. ಕೋರೆದಾಡೆಗಳು ಭಯಂಕರ ಹುಬ್ಬುಗಂಟುಗಳು. ಉರಿವ ತ್ರಿಶೂಲವನ್ನು ಝಳಪಿಸುತ್ತ ತಾಳೆ ಮರದ ಗಾತ್ರದ ಕಾಲುಗಳಿಂದ ಹೆಜ್ಜೆಯಿಟ್ಟು ಭೂಮಿಯನ್ನು ಕಂಪಿಸುತ್ತ ಭೂತಗಣ ಗಳೊಂದಿಗೆ ದಿಕ್ಕುಗಳನ್ನೆಲ್ಲ ಸುಡುತ್ತ ದ್ವಾರಕೆಯ ಕಡೆಗೆ ಧಾವಿಸಿದ.

ಅಭಿಚಾರಾಗ್ನಿ ಹೀಗೆ ಬರುವುದನ್ನು ಕಂಡು ದ್ವಾರಕಾವಾಸಿಗಳು ಕಾಳ್ಗಿಚ್ಚನ್ನು ಕಂಡ ಮೃಗಗಳಂತೆ ಬೆದರಿದರು. ಕೃಷ್ಣನ ಬಳಿಗೆ ಬಂದು 'ಕಾಪಾಡು ಕಾಪಾಡು' ಎಂದರು. ಶ್ರೀಕೃಷ್ಣ ಅವರಿಗೆ ಅಭಯ ನೀಡಿ ಸುದರ್ಶನಚಕ್ರಕ್ಕೆ ಆಜ್ಞೆ ಮಾಡಿದ. ಕೋಟಿ ಸೂರ್ಯರಂತೆ ಪ್ರಳಯಾಗ್ನಿಯಂತೆ ಹೊಳೆಯುತ್ತ ಆ ಚಕ್ರ ಆಕಾಶ ದಿಕ್ಕು ಭೂಮಿ ಅಂತರಿಕ್ಷಗಳನ್ನು ಬೆಳಗಿತು. ಆ ತೇಜಸ್ಸಿನ ಆಘಾತದಿಂದ ದಕ್ಷಿಣಾಗ್ನಿ ಹಿಮ್ಮೆಟ್ಟಿದ. ಮುಖಭಂಗ ಹೊಂದಿದ. ಹಿಂತಿರುಗಿ ಕಾಶಿಗೇ ಬಂದು ತನ್ನನ್ನು ಪ್ರಯೋಗಿಸಿದ ಸುದಕ್ಷಿಣನನ್ನೇ ಮರ್ದಿಸಿ ಸುಟ್ಟುಹಾಕಿದ. ಬಳಿಕ ಸುದರ್ಶನಚಕ್ರ ಕಾಶಿಯನ್ನು ಪ್ರವೇಶಿಸಿ ಇಡೀ ಪಟ್ಟಣವನ್ನು ಸುಟ್ಟು ಶ್ರೀಕೃಷ್ಣನ ಬಳಿಗೇ ಬಂದಿತು.

ಈ ಕಥೆಯನ್ನು ಕೇಳುವ ಹೇಳುವವರಿಬ್ಬರೂ ಬ್ರಹ್ಮಹತ್ಯಾದಿ ಪಾಪಮುಕ್ತರಾಗಿ ವಿಷ್ಣುಲೋಕ ಭಾಗಿಗಳಾಗುತ್ತಾರೆ.

❖❖❖

ಅಧ್ಯಾಯ - ೭೦

ಅಧ್ಯಾಯ ಸಾರಾಂಶ

ಒಮ್ಮೆ ಖಗ್ರಾಸ ಸೂರ್ಯಗ್ರಹಣದಲ್ಲಿ ಸ್ನಾನಾದಿ ಕರ್ಮಾಚರಣೆಗಾಗಿ ಭರತಖಂಡದ ಎಲ್ಲ ಜನರೂ ಸಮಂತಪಂಚಕವಿರುವ ಕುರುಕ್ಷೇತ್ರಕ್ಕೆ ಬಂದರು. ಶ್ರೀಪರಶುರಾಮ ಹಿಂದೆ ದುಷ್ಟಕ್ಷತ್ರಿಯರನ್ನು ಸಂಹರಿಸಿ ಅವರ ನೆತ್ತರ ಪ್ರವಾಹದಿಂದ ಐದು ದೊಡ್ಡ ಮಡುಗಳನ್ನು ನಿರ್ಮಿಸಿದ. ರಾಜರನ್ನು ಕೊಂದ ಪಾಪ ಪರಿಹಾರದ ನೆಪದಿಂದ ಕುರುಕ್ಷೇತ್ರದಲ್ಲಿ ಯಜ್ಞ ಮಾಡಿದ. ಅಂಥ ಪವಿತ್ರ ಕ್ಷೇತ್ರಕ್ಕೆ ಹದಿನಾರು ಸಾವಿರ ಪತ್ನಿಯರ ಮೇನೆಗಳೊಂದಿಗೆ ಶ್ರೀಕೃಷ್ಣನೂ ಬಂದ. ಅಕ್ರೂರ ಗದ ವಸುದೇವ ಮುಂತಾದ ಯಾದವರೆಲ್ಲರೂ ಬಂದರು. ವೇದಘೋಷ ~~ವಾದ್ಯಘೋಷಗಳಿಂದ ಕೂಡಿ ಕೃಷ್ಣ ಕೃಷ್ಣ ಗೋವಿಂದ ಎನ್ನುತ್ತ~~ ಪ್ರಯಾಣ ಮಾಡಿದರು. ಸಮಂತಪಂಚಕದಲ್ಲಿ ಬಂದು ಸೇರಿ ಹುಲ್ಲು ಎಲೆಗಳಿಂದ ಮನೆ ಕಟ್ಟಿಕೊಂಡರು. ಕಂಬಳಿ ಚರ್ಮ ಬಟ್ಟೆಗಳ ಸಾವಿರಾರು ರಾಜಶಿಬಿರಗಳನ್ನೂ ನಿರ್ಮಿಸಿಕೊಂಡರು. ಎಲ್ಲರೂ ಗ್ರಹಣ ಸ್ನಾನ ಮಾಡಿದರು. ಕೃಷ್ಣನ ಧ್ಯಾನ ಮಾಡಿದರು. ಬ್ರಾಹ್ಮಣರಿಗೆ ಗೋದಾನ ಮಾಡಿದರು. ಅನ್ನ ನೀಡಿದರು. ತಾವೂ ಉಂಡು ಮರಗಳ ನೆರಳುಗಳಲ್ಲಿ ವಿಶ್ರಮಿಸಿದರು.

ಮತ್ಸ್ಯ ಉಶೀನರ ಕೋಸಲ ವಿದರ್ಭ ಕುರು ಸೃಂಜಯ ಕಾಂಬೋಜ ಕೇಕಯ ಮದ್ರ ಕುಂತಿ ಗಾಂಧಾರ ಕೇರಲಗಳಿಂದ ಬಂದ ನೂರಾರು ರಾಜರುಗಳನ್ನು ಬೆಟ್ಟಿ ಮಾಡಿದರು. ಬಹುಕಾಲದಿಂದ ನೋಡಲು ಉತ್ಕಂಠಿತರಾಗಿದ್ದ ಸ್ನೇಹಿತರಾದ ನಂದಗೋಪ ಮುಂತಾದ ಗೋಪಗೋಪಿಯರನ್ನು ಕಂಡರು. ಪರಸ್ಪರ ಆಲಿಂಗಿಸಿದರು. ಜ್ಯೇಷ್ಠರನ್ನು ನಮಿಸಿದರು. ಚಿಕ್ಕವರಿಂದ ನಮಿಸಿಕೊಂಡರು. ಪರಸ್ಪರ ಕೃಷ್ಣಕಥೆಗಳನ್ನು ಹೇಳಿದರು ಕೇಳಿದರು.

ಕುಂತಿ ವಸುದೇವನ ಮುಂದೆ ಹೇಳಿದಳು, 'ಅಣ್ಣ! ನಮಗೆ ಬಹಳ ಆಪತ್ತುಗಳು ಬಂದಾಗ ನೀವು ನಮ್ಮನ್ನು ನೆನೆಯಲಿಲ್ಲ. ಏಕೆಂದರೆ

ನಾವು ಪುಣ್ಯ ಮಾಡಿಲ್ಲ.' ವಸುದೇವನೆಂದ, 'ಅಮ್ಮ ನಾವೆಲ್ಲ ಭಗವಂತನ ಆಟದ ಬೊಂಬೆಗಳು. ಯಾರೂ ಸ್ವತಂತ್ರರಲ್ಲ ಅವನು ಆಡಿಸಿದಂತೆ ಆಡುತ್ತೇವೆ. ಕಂಸನ ಪೀಡೆಯಿಂದ ನಾವು ಯಾದವರೆಲ್ಲರೂ ಹತ್ತು ದಿಕ್ಕುಗಳಿಗೆ ವಲಸೆ ಹೋಗಿ ತಲೆಮರೆಸಿಕೊಂಡಿದ್ದೆವು. ಅದೃಷ್ಟವಶದಿಂದ ಈಗತಾನೇ ತಿರುಗಿ ನಮ್ಮ ಸ್ಥಳಗಳಿಗೆ ಬಂದಿದ್ದೇವೆ.'

ಭೀಷ್ಮ ದ್ರೋಣ ಕೃಪ ಧೃತರಾಷ್ಟ್ರ ಗಾಂಧಾರಿ ಅವಳ ಮಕ್ಕಳು ಪಾಂಡವರು ಕುಂತಿ ಸಂಜಯ ವಿದುರ ಕುಂತಿಭೋಜ ವಿರಾಟ ಭೀಷ್ಮಕ ದ್ರುಪದ ಮುಂತಾದ ರಾಜರು ಶ್ರೀಕೃಷ್ಣನ ದರ್ಶನ ಮಾಡಿದರು. ಕೃಷ್ಣರಾಮರಿಂದ ಸತ್ಕಾರ ಪಡೆದರು. ಕೃಷ್ಣಪತ್ನಿಯರನ್ನೂ ಸೇವಕರನ್ನೂ ನೀವೇ ಭಾಗ್ಯವಂತರೆಂದು ಕೊಂಡಾಡಿದರು. 'ಯೋಗಿಗಳಿಗೂ ಕಾಣಲು ಸಿಗದ ಕೃಷ್ಣನನ್ನು ಸದಾ ನೋಡುತ್ತಿರುವಿರಿ. ನಾವು ಅವನ ಪಾದಜಲವಾದ ಗಂಗೆಯನ್ನೂ ವೇದಶಾಸ್ತ್ರವನ್ನೂ ಸೇವಿಸುತ್ತಿದ್ದೇವೆ. ಕಲಿಕಾಲದ ಬೇಗೆಯಲ್ಲಿ ಭೂಮಿಯ ಶಕ್ತಿಸಾಮರ್ಥ್ಯ ಹುರಿದ ಕಾಳಿನಂತಾಗಿದ್ದರೂ ಕೃಷ್ಣನ ಪಾದಕಮಲ ಸ್ಪರ್ಶದಿಂದ ಇದು ಪುನಶ್ಚೇತನಗೊಂಡು ಸಕಲ ಸಂಪತ್ತನ್ನು ನೀಡುತ್ತಿದೆ.' ಎಂದರು.

ವಸುದೇವ ನಂದಗೋಪನನ್ನು ಆಲಿಂಗಿಸಿ, ತಾನು ಗೋಕುಲದಲ್ಲಿ ಮಗನನ್ನು ನ್ಯಾಸವಾಗಿ ಇಟ್ಟಿದ್ದನ್ನೂ ಅಂದಿನಿಂದ ಕಂಸ ಕೊಟ್ಟ ಕಷ್ಟಗಳನ್ನೂ ನೆನೆದು ಪ್ರೇಮವಿಹ್ವಲನಾದ, ಕೃಷ್ಣರಾಮರು ನಂದಯಶೋದೆಯರನ್ನು ಆಲಿಂಗಿಸಿ ಅಭಿವಾದನ ಮಾಡಿ ಕಣ್ಣಲ್ಲಿ ಆನಂದಬಾಷ್ಪ ತುಂಬಿಕೊಂಡರು. ಅವರು ಇಬ್ಬರು ಮಕ್ಕಳನ್ನು ತೊಡೆಯೇರಿಸಿಕೊಂಡು ತಬ್ಬಿಕೊಂಡರು. ರೋಹಿಣಿ ದೇವಕಿಯರು ಯಶೋದೆಯನ್ನು ಆಲಿಂಗಿಸಿ 'ಈ ಎರಡು ಮಕ್ಕಳು ಹುಟ್ಟಿದಂದಿನಿಂದ ತಂದೆತಾಯಿಗಳನ್ನು ಕಂಡರಿಯದವರು. ಅವರಿಗೆ ನೀವೆ ತಂದೆತಾಯಿಗಳಾಗಿ ಮುದ್ದು ಮಾಡಿದಿರಿ. ಕಣ್ಣುಗಳನ್ನು ರೆಪ್ಪೆಗಳಂತೆ ಕಾಪಾಡಿದಿರಿ. ನಿಮ್ಮ ಸ್ನೇಹಕ್ಕೆ ಪ್ರತಿಯಾಗಿ ಇಂದ್ರಪದವಿ ನೀಡಿದರೂ ಸಾಲದು' ಎಂದರು.

ಗೋಪಿಯರು ತಾವು ಬಹುದಿನಗಳಿಂದ ನೋಡಲು ಬಯಸಿದ್ದ ಕೃಷ್ಣನನ್ನು ಕಂಡು ಅವನನ್ನು ನೋಡುವ ಕಣ್ಣಿಗೆ ಅಡ್ಡವಾಗುತ್ತಿದ್ದ ರೆಪ್ಪೆಗಳನ್ನು ನಿರ್ಮಿಸಿದ ಬ್ರಹ್ಮನನ್ನು ಶಪಿಸಿದರು. ಯೋಗಿಗಳಿಗೂ

ಕಾಣಲು ಸಿಗದ ಕೃಷ್ಣನನ್ನು ಕಣ್ಣಿಂದ ನೋಡಿ ಕಣ್ಣುಗಳ ಮೂಲಕ ಎದೆಯೊಳಗೆ ತಂದಿಟ್ಟುಕೊಂಡು ಆಲಿಂಗಿಸಿದರು. ಹೆಚ್ಚು ಭಕ್ತಿ ಮಾಡಿದರು.

ಏಕಾಂತದಲ್ಲಿ ಬಳಿಗೆ ಬಂದ ಗೋಪಿಯರನ್ನು ಆಲಿಂಗಿಸಿ ನಗುತ್ತ ಕೃಷ್ಣ ನುಡಿದ– 'ಸಖಿಯರೆ, ನಾನು ಬಂಧುಗಳಾದ ಯಾದವರಿಗೆ ಉಪಕಾರ ಮಾಡಲು ಮಧುರೆಗೆ ಹೋದವನು ಮುಂದೆ ಬೇರೆ ಬೇರೆ ಕಾರ್ಯಗಳಲ್ಲಿ ಮಗ್ನನಾದೆ. ನಿಮ್ಮನ್ನು ನೋಡಲು ಬರಲಾಗಲಿಲ್ಲ. ನಮ್ಮನ್ನು ನಿಮ್ಮನ್ನು ಜೊತೆಗೆ ಸೇರಿಸುವವನೂ ದೂರ ಮಾಡುವವನೂ ಭಗವಂತ. ಮೋಡಗಳನ್ನು ಹುಲ್ಲುಕಡ್ಡಿ ದೂಳಿನ ಕಣಗಳನ್ನು ಗಾಳಿ ಜೊತೆಗೆ ಸೇರಿಸಿ ದೂರಮಾಡುತ್ತದೆ. ಹಾಗೇ ಇದು. ಅನಾಯಾಸವಾಗಿ ನನ್ನ ವಿಯೋಗದಿಂದ ನಿಮಗೆ ನನ್ನಲ್ಲಿ ಭಕ್ತಿ ಉಂಟಾಗಿದೆ. ಅದು ನಿಮಗೆ ಸ್ವರೂಪಾನಂದಾಭಿವ್ಯಕ್ತಿಗೆ ಕಾರಣ ವಾಗುವುದು. ನಾನು ಎಲ್ಲರೊಳಗೂ ಹೊರಗೂ ಇರುವ ಭಗವಂತನೆಂದು ತಿಳಿಯಿರಿ.'

ಹೀಗೆ ಶ್ರೀಕೃಷ್ಣ ನೀಡಿದ ಅಧ್ಯಾತ್ಮೋಪದೇಶದಿಂದ ಗೋಪಿಯರು **ತತ್ವಜ್ಞಾನವನ್ನು** ಪಡೆದು ಲಿಂಗದೇಹಾಭಿಮಾನವನ್ನು ತೊರೆದು **ಜನ್ಮಜನ್ಮಗಳಲ್ಲಿಯೂ** ಅವನ ಪಾದಕಮಲ ಧ್ಯಾನ ಲಭಿಸಲಿ ಎಂದು **ಬೇಡಿಕೊಂಡರು.**

❖❖❖

ಅಧ್ಯಾಯ - ೭೧

ಅಧ್ಯಾಯ ಸಾರಾಂಶ

ಶ್ರೀಕೃಷ್ಣ ಧರ್ಮರಾಜನಲ್ಲಿ ಮತ್ತು ಎಲ್ಲ ಬಂಧುಗಳಲ್ಲಿ ಕುಶಲಪ್ರಶ್ನೆ ಮಾಡಿದಾಗ ಅವರು ನುಡಿದರು 'ನಿನ್ನ ಕಥಾಶ್ರವಣ ಮಾಡಿದರೆ ಸಾಕು' ಅವರಿಗೆ ಅಮಂಗಲವೆಲ್ಲಿಯದು? ಕೇವಲ ಹೊಟ್ಟೆ ತುಂಬಿಸಿಕೊಳ್ಳುವುದರಲ್ಲಿಯೆ ನಿರತರಾಗುವ ಬೇರೆ ಜನರ ಪಾಡನ್ನು ನೋಡಿಯೇ ಅವರಿಗಾಗಿ ನಿಟ್ಟುಸಿರು ಬಿಡುತ್ತಾರಷ್ಟೆ!'

ಶ್ರೀಕೃಷ್ಣನ ಪತ್ನಿಯರೂ ಕುರುಪತ್ನಿಯರೂ ಒಂದೆಡೆ ಸೇರಿ ಕೃಷ್ಣಕಥೆಗಳನ್ನು ಪರಸ್ಪರ ಹೇಳಿಕೊಂಡರು. ದ್ರೌಪದಿ 'ಶ್ರೀಕೃಷ್ಣ ನಿಮ್ಮಲ್ಲಿ ಯಾರನ್ನು ಯಾವ ರೀತಿಯಿಂದ ವಿವಾಹವಾದನೆಂಬುದನ್ನು ನಮಗೆ ಹೇಳಿರಿ' ಎಂದು ಕೇಳಿದಳು.

ರುಕ್ಮಿಣಿ ನುಡಿದಳು– ಜರಾಸಂಧಾದಿ ರಾಜರೆಲ್ಲರೂ ನನ್ನನ್ನು ಶಿಶುಪಾಲನಿಗೆ ಕೊಡಿಸಲು ಸಿದ್ಧರಾಗಿ ನಿಂತಿದ್ದಾಗ ಅವರಾರನ್ನೂ ಲೆಕ್ಕಿಸದೆ ಸಿಂಹ ತನಗೆ ಬೇಕಾದ ಕೊಳ್ಳೆಯನ್ನು ಎತ್ತಿಕೊಳ್ಳುವಂತೆ ಶ್ರೀಕೃಷ್ಣ ನನ್ನನ್ನೆತ್ತಿಕೊಂಡು ಬಂದ, ಅದು ತನ್ನ ಚರಣಸೇವೆಗೆ ಅವಕಾಶವನ್ನು ನನಗೆ ನೀಡುವ ಉದ್ದೇಶದಿಂದ.

ಸತ್ಯಭಾಮೆ ನುಡಿದಳು– 'ಮಣಿಗಾಗಿ ತಮ್ಮನನ್ನು ಕೊಂದವನು ಶ್ರೀಕೃಷ್ಣನೇ ಇರಬೇಕೆಂ'ದು ನಮ್ಮ ತಂದೆ ಸುಳ್ಳು ಅಪವಾದ ಹೊರಿಸಿದ್ದಕ್ಕೆ ಶ್ರೀಕೃಷ್ಣ ಜಾಂಬವಂತನನ್ನು ಗೆದ್ದು ಮಣಿಯನ್ನು ತಂದಿತ್ತ, ತಂದೆ ತಾನು ಮಾಡಿದ ತಪ್ಪಿಗೆ ನಾಚಿ ಮಣಿಯೊಂದಿಗೆ ನನ್ನನ್ನು ಶ್ರೀಕೃಷ್ಣನಿಗೆ ನೀಡಿದ.

ಜಾಂಬವತಿ– 'ನನ್ನ ತಂದೆ, ಇಪ್ಪತ್ತೇಳು ದಿನಗಳ ಕಾಲ ಶ್ರೀಕೃಷ್ಣ ನೊಡನೆ ಯುದ್ಧ ಮಾಡಿ ಸೋತು, ಶ್ರೀಕೃಷ್ಣ ಶ್ರೀರಾಮನಾಗಿ ದರ್ಶನ ಕೊಟ್ಟಾಗ, ಪಶ್ಚಾತ್ತಾಪದಿಂದ ಕಾಲು ಹಿಡಿದು ಮಣಿಯೊಂದಿಗೆ ನನ್ನನ್ನು ಅವನಿಗೆ ಕೊಟ್ಟ. ಆದರಿಂದ ನಾನು ಈಗ ಈತನ ದಾಸಿ' ಎಂದಳು.

ಕಾಲಿಂದಿ– ನಾನು ಶ್ರೀಕೃಷ್ಣನ ಪಾದಸ್ಪರ್ಶ ಮಾಡುವ ಬಯಕೆಯಿಂದ

ತಪಸ್ಸು ಮಾಡುತ್ತಿದ್ದುದನ್ನು ಅರ್ಜುನನ ಮೂಲಕ ತಿಳಿದು ಶ್ರೀಕೃಷ್ಣ ತಾನೆ ಬಂದು ನನ್ನ ಪಾಣಿಗ್ರಹಣ ಮಾಡಿಕೊಂಡ' ಎಂದಳು.

ಮಿತ್ರವಿಂದೆ– 'ನಾನು ಶ್ರೀಕೃಷ್ಣನಲ್ಲಿಯೆ ಮನಸ್ಸಿಟ್ಟಿದ್ದೆ. ನನ್ನ ಸೋದರರು ವಿರೋಧ ಮಾಡಿದರೂ ಲೆಕ್ಕಿಸದೆ ಶ್ರೀಕೃಷ್ಣ ನಾಯಿಗಳ ನಡುವಿಂದ ಸಿಂಹ ತನ್ನ ಆಹಾರವನ್ನು ಒಯ್ಯುವಂತೆ, ನನ್ನನ್ನು ಒಯ್ದು ವಿವಾಹವಾದ' ಎಂದಳು.

ನೀಲೆ– 'ನಮ್ಮ ತಂದೆ ನನ್ನ ಸ್ವಯಂವರದಲ್ಲಿ ಏಳು ಬಲಿಷ್ಠ ಗೂಳಿಗಳನ್ನು ಒಬ್ಬನೇ ಹಿಡಿದು ಕಟ್ಟಿಹಾಕಬೇಕೆಂಬ ಪಣವಿಟ್ಟಾಗ ಶ್ರೀಕೃಷ್ಣ ಬಂದು ಕುರಿಮರಿಗಳನ್ನು ಕಟ್ಟುವಂತೆ ಒಬ್ಬನೆ ಅನಾಯಾಸ ವಾಗಿ ಎಲ್ಲ ಗೂಳಿಗಳನ್ನು ಕಟ್ಟಿ ನನ್ನನ್ನು ಪಡೆದುಕೊಂಡ' ಎಂದಳು.

ಭದ್ರೆ– 'ನಾನು ಸೋದರಮಾವನ ಮಗನಾದ ಕೃಷ್ಣನಲ್ಲಿ ಮನಸ್ಸಿಟ್ಟಿದ್ದೆ. ಅದರಿಂದ ನನ್ನ ತಂದೆ ಕೃಷ್ಣನನ್ನು ಕರೆಸಿಕೊಂಡು ನನ್ನನ್ನು ವಿವಾಹ ಮಾಡಿಕೊಟ್ಟ' ಎಂದಳು.

ಲಕ್ಷಣೆ ನುಡಿದಳು– 'ನಾರದರ ಮುಖದಿಂದ ಕೃಷ್ಣನ ಬಗ್ಗೆ ಬಹಳ ಕೇಳಿದ್ದ ನನಗೆ ಅವನಲ್ಲಿಯೆ ಮನಸ್ಸು ನೆಟ್ಟಿತ್ತು. ನನ್ನ ತಂದೆ ಬೃಹತ್ಸೇನ ಕೃಷ್ಣನನ್ನೇ ಅಳಿಯನನ್ನಾಗಿ ಪಡೆಯಲು ಉಪಾಯ ಮಾಡಿದ. ದ್ರೌಪದಿ, ನಿನ್ನ ಸ್ವಯಂವರದಲ್ಲಿ ಅರ್ಜುನನೇ ದೊರಕಲೆಂದು ನಿನ್ನ ತಂದೆ ಮತ್ಸ್ಯಯಂತ್ರಭೇದವನ್ನು ಏರ್ಪಡಿಸಿದ್ದ. ಹಾಗೇ ನಮ್ಮ ತಂದೆಯೂ ಮಾಡಿದ. ಆದರೆ ಈ ಯಂತ್ರ ಹೊರಗೆ ಆವೃತವಾಗಿದ್ದು ನೀರಿನಲ್ಲಿ ಅದರ ಪ್ರತಿಬಿಂಬವೂ ಕಾಣುತ್ತಿರಲಿಲ್ಲ. ಅದರ ಡಬ್ಬದ ಪ್ರತಿಬಿಂಬವನ್ನು ನೀರಿನಲ್ಲಿ ಕಂಡು ಬಾಣ ಎಸೆಯಬೇಕಾಗಿತ್ತು. ಬಾಣ ಡಬ್ಬದ ಮೇಲ್ಭಾಗದ ರಂಧ್ರದಲ್ಲಿ ಒಳಗೆ ಹೋಗಿ ಮತ್ಸ್ಯಯಂತ್ರವನ್ನು ಭೇದಿಸಬೇಕಾಗಿತ್ತು. ನರಕಾಸುರ ಜರಾಸಂಧರು ಬಿಲ್ಲಿಗೆ ಹೆದೆ ಏರಿಸಿ ಬಿದ್ದರು. ದುರ್ಯೋಧನ ಕರ್ಣರಿಗೆ ಲಕ್ಷ್ಯವೆ ಕಾಣಲಿಲ್ಲ. ಭೀಮಸೇನ ಲಕ್ಷ್ಯವನ್ನು ನೋಡಲು ನಿರಾಕರಿಸಿದ. ಕೃಷ್ಣನಿಗೇ ಸೇರಿದ ಕಾರ್ಯದಲ್ಲಿ ತಾನು ಯತ್ನಿಸುವುದೂ ಅಪರಾಧವೆಂದು ಕೊಂಡ. ಅರ್ಜುನನೂ ಅದೇ ಭಾವನೆಯಿಂದ ಲಕ್ಷ್ಯವನ್ನು ಭೇದಿಸದೆ ಕೇವಲ ಸ್ಪರ್ಶಿಸುವಂತೆ ಬಾಣ ಪ್ರಯೋಗ ಮಾಡಿದ. ಆಗ ಶ್ರೀಕೃಷ್ಣ

ಅನಾಯಾಸವಾಗಿ ಲಕ್ಷ್ಯಭೇದ ಮಾಡಿ ನನ್ನನ್ನು ಗೆದ್ದುಕೊಂಡ. ನಾನು ಲಜ್ಜೆಯ ನಸುನಗು ಬೀರುತ್ತ ರಂಗಸ್ಥಳಕ್ಕೆ ಬಂದು ಕೃಷ್ಣನಿಗೆ ಮಾಲೆ ಹಾಕಿದೆ. ಬಳಿಕ ಶ್ರೀಕೃಷ್ಣ ವಿರೋಧಿಗಳಾದ ರಾಜರೆಲ್ಲರನ್ನೂ ಬಾಣಗಳಿಂದ ಹೊಡೆದೋಡಿಸಿ ದ್ವಾರಕೆಗೆ ನನ್ನನ್ನು ತಂದು ವಿವಾಹವಾದ. ಹೀಗೆ ನಾವೆಲ್ಲರೂ ಸ್ವರಮಣನಾದ ಶ್ರೀಕೃಷ್ಣನಿಗೆ ಚರಣದಾಸಿಯರು.'

ಹದಿನಾರು ಸಾವಿರದ ನೂರು ಪತ್ನಿಯರು ನುಡಿದರು– 'ನರಕಾಸುರ ದಿಗ್ವಿಜಯಕಾಲದಲ್ಲಿ ರಾಜಕುಮಾರಿಯರಾದ ನಮ್ಮನ್ನು ಬಲಾತ್ಕಾರದಿಂದ ತಂದು ಕಾರಾಗಾರದಲ್ಲಿ ಇರಿಸಿದ್ದ. ಶ್ರೀಕೃಷ್ಣ ನಮ್ಮನ್ನು ಸಂಸಾರದಿಂದಲೆ ಬಿಡುಗಡೆ ಮಾಡುವವನು ನರಕಾಸುರನನ್ನು ಕೊಂದು ನಮ್ಮನ್ನು ಬಿಡುಗಡೆ ಮಾಡಿ ವಿವಾಹವಾದ. ನಮಗೆ ಸಾಮ್ರಾಜ್ಯ ಸ್ವಾರಾಜ್ಯಗಳಾಗಲಿ ಯಾವುದೇ ಪದವಿಯಾಗಲಿ ಬೇಡ. ಶ್ರೀಕೃಷ್ಣನ ಪಾದಕಮಲಗಳ ಧೂಳಿ ದೊರೆತರೆ ಸಾಕು

ದನಮೇಸುತ್ತಿದ್ದಾಗ ಕೃಷ್ಣನ ಪಾದಸ್ಪರ್ಶವನ್ನು ಗೊಲ್ಲತಿಯರೂ ಬೇಡಿತಿಯರೂ ಹುಲ್ಲು ಬಳ್ಳಿಗಳೂ ಕೂಡ ಬಯಸಿದುವು ಎಂದಮೇಲೆ ನಾವು ಬಯಸುವುದೇನಾಶ್ಚರ್ಯ?'

❖❖❖

ಒಮ್ಮೆ ಸೂರ್ಯಗ್ರಹಣಕಾಲದಲ್ಲಿ ಎಲ್ಲ ರಾಜರುಗಳೂ ಸಮಂತಪಂಚಕ ಕ್ಷೇತ್ರದಲ್ಲಿ ಸೇರಿದ್ದರು. ಆಗ ನಡೆದ ಮಹಿಳಾಗೋಷ್ಠಿಯಲ್ಲಿ ದ್ರೌಪದಿ ಕೃಷ್ಣ ಮಹಿಷಿಯರಲ್ಲಿ 'ನಿಮ್ಮ ನಿಮ್ಮ ವಿವಾಹ ವೃತ್ತಾಂತವನ್ನು ನೀವು ಹೇಳಿರಿ' ಎಂದಾಗ ಸತ್ಯಭಾಮೆ ಹೇಳಿದಳು.

ಯೋ ಮೇ ಸನಾಭಿವಧತಪ್ತಹೃದಾ ತತೇನ
ಲಿಪ್ತಾಭಿಶಾಪಮಪಮಾರ್ಷ್ಟುಮುಪಾಜಹಾರ ।
ಜಿತ್ವರ್ಕ್ಷರಾಜಮಥ ರತ್ನಮದಾತ್ಸ ತೇನ
ನೀತಚ್ಛಿದಾದಿಶತ ಮಾಂ ಪ್ರಭವೇಽಪಿ ದತ್ತಾಮ್ ॥ ೯ ॥

ಸತ್ಯಭಾಮೆ ನುಡಿದಳು–

ನನ್ನ ತಂದೆ ತನ್ನ ಸೋದರ ಪ್ರಸೇನ ಹತನಾದುದಕ್ಕೆ ಮನದಲ್ಲಿ ನೊಂದು ಕೃಷ್ಣನ

ಮೇಲೆ ಕೊಲೆಯಾರೋಪ ಹೊರಿಸಿದಾಗ ಕೃಷ್ಣ ತನಗೆ ಅಂಟಿದ ಆ ಅಪವಾದ ಪರಿಮಾರ್ಜನೆಗಾಗಿ ಜಾಂಬವಂತನನ್ನು ಗೆದ್ದು ಮಣಿಯನ್ನು ತಂದುಕೊಟ್ಟ. ಆಗ ತಂದೆ ತಾನು ಕೃಷ್ಣನ ಮೇಲೆ ವೃಥಾ ಅಪವಾದ ಹೊರಿಸಿ ಅಪರಾಧ ಮಾಡಿದ್ದರಿಂದ ಕೃಷ್ಣನಿಗೆ ತನ್ನಲ್ಲಿ ಮನಸ್ತಾಪ ಉಂಟಾಗಿರಬಹುದೆಂದುಕೊಂಡು, ನನ್ನನ್ನು ಹಿಂದೆ ಬೇರೆಯವರಿಗೆ ಕೊಡುವುದಾಗಿ ವಾಗ್ದಾನ ಮಾಡಿದ್ದರೂ, ಕೃಷ್ಣನಿಗೇ ಕೊಟ್ಟು ಮದುವೆ ಮಾಡಿದ.

ಇಲ್ಲಿ 'ನೀತಚ್ಛಿದಾದಿಶತ ಮಾಂ' ಎಂಬಲ್ಲಿ ಬೇರೆ ವ್ಯಾಖ್ಯಾನಕಾರರು

'ಭೀತಃ ಪಿತಾದಿಶತ ಮಾಂ' ಎಂದು ಪಾಠವಿಟ್ಟುಕೊಂಡು,

'ಸ್ಯಮಂತಕಮಣಿಯನ್ನು ಕೃಷ್ಣ ಕೇಳಿದರೂ ನಾನು ಕೊಡಲಿಲ್ಲ ಅದಕ್ಕೆ ಆತ ನನ್ನ ತಮ್ಮನನ್ನು ಕೊಂದು ಮಣಿಯನ್ನು ಅಪಹರಿಸಿದನೆಂ'ದು ನಾನು ಸುಳ್ಳು ಅಪವಾದ ಹೊರಿಸಿ ಬಿಟ್ಟೆ. ಸಮರ್ಥನಾದ ಕೃಷ್ಣ ನನಗೆ ಏನು ಅಪಾಯ ಮಾಡುವನೋ' ಎಂದು ಹೆದರಿ ನನ್ನನ್ನು ಕೃಷ್ಣನಿಗೆ ಮದುವೆ ಮಾಡಿಕೊಟ್ಟನೆಂದು ಸತ್ಯಭಾಮೆ ಹೇಳುತ್ತಾಳೆ. ಸತ್ರಾಜಿತನಿಗೆ ಕೃಷ್ಣನೆಂದರೆ ಭಯ. ಏಕೆಂದರೆ ಅವನು ಪ್ರಭು, ಸಮರ್ಥ. ~~ಪ್ರಭುಶಬ್ದದಿಂದ ಸತ್ರಾಜಿತನಿಗೆ ಕೃಷ್ಣನಲ್ಲಿದ್ದ ಭಯವನ್ನು ಸಮರ್ಥಿಸಿದ್ದಾಳೆ ಭಾಮೆ~~ ಎನ್ನುತ್ತಾರೆ.

ವಸ್ತುತಃ 'ಶ್ರೀಕೃಷ್ಣ ತನಗೆ ಪ್ರಭು ಸ್ವಾಮಿ' ಎಂದು ಭಾಮೆ ಹೇಳುತ್ತಿದ್ದಾಳೆ **ಹೊರತು 'ಸತ್ರಾಜಿತನಿಗೆ ಪ್ರಭು'** ಎಂದಲ್ಲ. ಸತ್ರಾಜಿತ ಉಗ್ರಸೇನನಂತೆ ಒಬ್ಬ ಹಿರಿಯ ಯಾದವ. **ಕೃಷ್ಣ 'ಪ್ರಭು'**ವಾಗಿ ಮಣಿಯನ್ನು ಸತ್ರಾಜಿತನಿಂದ ಪಡೆಯಲು ಬಯಸಲಿಲ್ಲ, **ಪ್ರಭು ಉಗ್ರಸೇನನಿಗಾಗಿ** ಕೇಳಿದ.

ಮುಂದೆ ಎಲ್ಲ ಮಹಿಷಿಯರೂ ಶ್ರೀಕೃಷ್ಣ ಪ್ರಭು, ತಾವು ಅವನಿಗೆ ದಾಸಿಯರು ಎನ್ನುತ್ತಾರೆ. ಆ ಸಂದರ್ಭದಲ್ಲಿ ಬಂದ ಭಾಮೆಯ ಮಾತಿನಲ್ಲಿಯೂ ಅದೇ ಭಾವವಿರುವುದು ಸಹಜ.

ಸ ಚಾತಿವ್ರೀಡಿತೋ ರತ್ನಂ ಗೃಹಿತ್ವಾಽವಾಙ್ಮುಖಸ್ತತಃ ।
ಅನುತಪ್ಯನ್ ಸ್ವಭವನಂ ಅಗಮತ್ ಸ್ವೇನ ಪಾಪ್ಮನಾ ।
ಸೋಽನುಧ್ಯಾಯನ್ ತದೇವಾಘಂ ಬಲವದ್ವಿಗ್ರಹಾಕುಲಃ ।
ಕಥಂ ಮೃಜಾಮ್ಯಾತ್ಮರಜಃ ಪ್ರಸೀದೇದ್ವಾಽಚ್ಯುತಃ ಕಥಂ ।
ಕಿಂ ಕೃತ್ವಾ ಸಾಧು ಮಹ್ಯಂ ಸ್ಯಾನ್ನ ಶಪೇದ್ವಾ ಜನೋ ಯಥಾ ।
ಅದೀರ್ಘದರ್ಶನಂ ಧಿಙ್ಮಾಂ ಮೂಢಂ ದ್ರವಿಣಲೋಲುಪಂ ।
ದಾಸ್ಯೇ ದುಹಿತರಂ ತಸ್ಮೈ ಸ್ತ್ರೀರತ್ನಂ ರತ್ನಮೇವ ಚ ।
ಉಪಾಯೋಽಯಂ ಸಮೀಚೀನಸ್ತಸ್ಯ ಶಾಂತಿರ್ನ ಚಾನ್ಯಥಾ। (೬೦.೩೯-೪೨)

'ಸತ್ರಾಜಿತ ಮಣಿಯನ್ನು ಸ್ವೀಕರಿಸಿ ಬಹಳ ಲಜ್ಜಿತನಾದ. ತಾನು **ಮಾಡಿದ ತಪ್ಪಿಗೆ** ನಾಚಿ ತಲೆ ತಗ್ಗಿಸಿಕೊಂಡು ಪಶ್ಚಾತ್ತಾಪ ಪಡುತ್ತ ತನ್ನ ಅರಮನೆಗೆ **ಬಂದ. ತಾನು** ಕೃಷ್ಣನಿಗೆ ಮಾಡಿದ ಆ ಅಪರಾಧವನ್ನೇ ಮತ್ತೆಮತ್ತೆ ನೆನೆದು, ದೊಡ್ಡ**ವರಲ್ಲಿ ವಿರೋಧ** ಮಾಡಿದ್ದಕ್ಕೆ ನೊಂದು, 'ಈ ತನ್ನ ಪಾಪವನ್ನು ಹೇಗೆ ತೊಡೆದುಕೊಳ್ಳ**ಲಿ. ಕೃಷ್ಣ ತನ್ನಲ್ಲಿ** ಹೇಗೆ ಪ್ರಸನ್ನನಾದಾನು? ನಾನೇನು ಮಾಡಿದರೆ, ಒಳ್ಳೆಯದಾದೀತು? **ಜನರು ನನ್ನ** ಬಗ್ಗೆ ಆಡಿಕೊಳ್ಳದಂತಾದೀತು? ದೂರಾಲೋಚನೆಯಿಲ್ಲದೆ **ಮೂರ್ಖನಾಗಿ** ಸಂಪತ್ತಿನ ಮೋಹಕ್ಕೊಳಗಾದ ನನಗೆ ಧಿಕ್ಕಾರವಿರಲಿ. ಸ್ಯಮಂತಕಮಣಿ**ಯನ್ನೂ ನನ್ನ** ಮಗಳಾದ ಸ್ತ್ರೀರತ್ನವನ್ನೂ ಅವನಿಗೆ ಕೊಡುತ್ತೇನೆ. ಇದೇ ಒಳ್ಳೆಯ **ಉಪಾಯ**. ನನ್ನ ಅಪರಾಧ ಪರಿಮಾರ್ಜನೆ ಬೇರೆ ರೀತಿಯಿಂದ ಆಗಲಾರದು' ಎಂದು ಆಲೋಚಿಸಿದ, ಸತ್ರಾಜಿತ. ಇಲ್ಲಿ ತಾನು ಮಾಡಿದ ಅಪರಾಧಕ್ಕೆ ಲಜ್ಜೆ **ಪಶ್ಚಾತ್ತಾಪ**, ಕೃಷ್ಣನನ್ನು ಹೇಗೆ ಒಲಿಸಿಕೊಳ್ಳಲಿ ಎಂಬ ಚಿಂತೆ, ತನ್ನ ಲೋಭಕ್ಕೆ **ಮೂರ್ಖತನಕ್ಕೆ** ಜನರು ಆಡಿಕೊಳ್ಳದಿರಬೇಕಾದರೆ ಏನು ಮಾಡಲಿ, ಏನು ಮಾ**ಡಿದರೆ ಪಾಪ** ಪರಿಹಾರವಾದೀತು ಎಂದು ಮುಂತಾಗಿ ಕಳವಳ ಆಕುಲತೆಗಳನ್ನು **ತೋರುತ್ತಾನೆ**. ಕೃಷ್ಣನ ಭಯ, ಅವನು ಸಮರ್ಥನಾದ್ದರಿಂದ ನನಗೆ ಅನಿಷ್ಟ ಉಂಟು ಮಾ**ಡುವನೆ** ಎಂಬ ಶಂಕೆ, ಸರ್ವಥಾ ಕಾಣುವುದಿಲ್ಲ. ವಿಷ್ಣುಪುರಾಣದಲ್ಲಿಯೂ,

ಸತ್ರಾಜಿದಪಿ ಮಯಾಸ್ಯಾಭೂತಮಲಿನಮಾರೋಪಿತಮಿತಿ
ಜಾತಸಂತ್ರಾಸಾತ್ ಸ್ವಸುತಾಂ ಸತ್ಯಭಾಮಾಂ
ಭಗವತೇ ಭಾರ್ಯಾರ್ಥಂ ದದೌ (೪.೧೩.೬೪)

'ಅಭೂತ ಮಲಿನ' ಅಂದರೆ ಮಿಥ್ಯಾಕಲಂಕವನ್ನು ಭಗವಂತನಿ**ಗೆ ತಾನು** ತೊಡಿಸಿದೆನೆಂದು ಪಾಪಭಯದಿಂದ ಸತ್ರಾಜಿತ ಮಗಳನ್ನು **ಕೊಟ್ಟನೆಂದಿದೆ**. ಅದರಿಂದ ಸತ್ರಾಜಿತನಿಗೆ ಪಾಪ ಅಪಕೀರ್ತಿಗಳ ಭಯವೇ **ಹೊರತು, ಕೃಷ್ಣ**ನೇನಾದರೂ ಅನಿಷ್ಟ ಮಾಡಿಯಾನೆಂಬ ಭಯವಿಲ್ಲ. ಸ್ತ್ರೀರತ್ನ ಸ್ಯಮಂತ**ಕರತ್ನಗಳನ್ನು** ದಾನ ಮಾಡಿದರೆ ಪಾಪ ಪರಿಹಾರ, ಲೋಭಿ ಎನ್ನುವ ಅಪಕೀರ್ತಿ **ಪರಿಹಾರ ಎಂದು** ಆತ ಭಾವಿಸಿದ. ಅದರಿಂದ 'ಭೀತಃ ಪಿತಾದಿಶತ' ಎಂಬ ಪಾಠ **ಸ್ವರಸವಲ್ಲ**. ಶ್ರೀಮದಾಚಾರ್ಯರು ಸರಿಯಾದ ಪಾಠವನ್ನು ಹಿಡಿದು ವ್ಯಾಖ್ಯಾನಿಸು**ತ್ತಾರೆ**—

ನೀತಚ್ಛಿತ್ ಭಗವತಾ ಪ್ರಾಪ್ತಭೇದಃ ।

'ನೀತಾ ಪ್ರಾಪ್ತಾ ಛಿತ್ ಭಗವತಾ ಸಹ ಭೇದಃ ವಿರೋಧಃ ಯೇನ ಸಃ' 'ಭಗವಂತನೊಡನೆ ವಿರೋಧ ಮಾಡಿದವನು, ಅವನಲ್ಲಿ ಅಪರಾಧಗೈದವನು' ಎಂದರ್ಥ.

ಅಧ್ಯಾಯ - ೭೨

ಅಧ್ಯಾಯ ಸಾರಾಂಶ

ಕೃಷ್ಣಪತ್ನಿಯರು ತಮ್ಮ ವಿವಾಹಗಳ ಬಗ್ಗೆ ಹೇಳಿಕೊಂಡಾಗ ಕುಂತಿ ಗಾಂಧಾರಿ ದ್ರೌಪದಿ ಮುಂತಾದ ಸ್ತ್ರೀಯರು ಅವರಿಗೆ ಕೃಷ್ಣನಲ್ಲಿದ್ದ ಪ್ರೀತಿ ಭಕ್ತಿಗಳನ್ನು ತಿಳಿದು ಆನಂದಾಶ್ಚರ್ಯಗಳಿಂದ ಕಣ್ಣಲ್ಲಿ ನೀರು ತುಂಬಿಕೊಂಡರು.

ಕೃಷ್ಣರಾಮರ ದರ್ಶನಕ್ಕಾಗಿ ಶ್ರೀವೇದವ್ಯಾಸರು ನಾರದ ಚ್ಯವನ ದೇವಲ ಅಸಿತ ವಿಶ್ವಾಮಿತ್ರ ಶತಾನಂದ ಭರದ್ವಾಜ ಗೌತಮ ಶ್ರೀಪರಶುರಾಮ ವಸಿಷ್ಠ ವಾಮದೇವ ಮುಂತಾದ ಸಕಲ ಮುನಿಗಳು ಶಿಷ್ಯರೊಂದಿಗೆ ಸಮಂತಪಂಚಕಕ್ಕೆ ಬಂದರು. ಕೃಷ್ಣನ ದರ್ಶನ ಮಾಡಿ ಕುಳಿತಿದ್ದ ರಾಜರು, ಪಾಂಡವರು ಮತ್ತು ಕೃಷ್ಣರಾಮರೂ ಕೂಡ ಮುನಿಗಳಿಗೆ ಪ್ರಣಾಮ ಮಾಡಿದರು. ಸ್ವಾಗತ ಆಸನಪಾದ್ಯಾದಿಗಳನ್ನಿತ್ತು ಸತ್ಕರಿಸಿದರು. 'ಮುನಿಗಳೆ, ನಿಮ್ಮ ದರ್ಶನದಿಂದ ನಮ್ಮ ಜನ್ಮ ಸಾರ್ಥಕವಾಯಿತು. ಏಕೆಂದರೆ ತಮ್ಮ ದರ್ಶನ ದೇವತೆಗಳಿಗೂ ದುರ್ಲಭ. ಪ್ರತಿಮೆಗಳಲ್ಲಿಯೇ ದೇವರನ್ನು ಪೂಜಿಸುವ ಅಶಕ್ತರಿಗೆ ಅಲ್ಪಮತಿಗಳಿಗೆ ನಿಮ್ಮ ದರ್ಶನ ಸ್ಪರ್ಶನ ಸಂಭಾಷಣ ಪಾದಸೇವನಗಳು ದುರ್ಲಭವೆಂದು ಬೇರೇನು ಹೇಳಬೇಕು? ನೀರಿನ ತೀರ್ಥಗಳಾಗಲಿ ಕಲ್ಲಿನ ದೇವರಾಗಲಿ ದರ್ಶನ ಮಾತ್ರದಿಂದಲೇ ಪಾವಿತ್ರ್ಯ ತಂದುಕೊಡುವುದಿಲ್ಲ. ಬಹುಕಾಲ ತೀರ್ಥಯಾತ್ರೆ ಮಾಡುತ್ತಿದ್ದರೆ, ಅಲ್ಲಿಗೆ ಬರುವ ನಿಮ್ಮಂಥ ಗುರುಗಳ ಸಂಗಮವಾಗುವುದು. ಒಡನೆ ಅವರ ದರ್ಶನ ಮಾತ್ರ ದಿಂದಲೇ ಉಪದೇಶದಿಂದ ಪಾವಿತ್ರ್ಯ ಲಭಿಸುವುದು. ಮತ್ತು ಅಗ್ನಿ ಸೂರ್ಯ ಚಂದ್ರ ನಕ್ಷತ್ರ ಭೂಮಿ ಜಲ ಮುಂತಾದುವು ಅವುಗಳನ್ನೇ ದೇವತೆಗಳೆಂದು ತಿಳಿದರೆ ಅಂಥ ಮಿಥ್ಯಾಜ್ಞಾನಿಗೆ ದೇವತೆಗಳು ಪಾವಿತ್ರ್ಯ ನೀಡುವುದಿಲ್ಲ. ಶಾಪ ನೀಡುತ್ತಾರೆ. ಗುರುಗಳು ಹಾಗಲ್ಲ. ಅವರಲ್ಲಿ ಈ ಎಲ್ಲ ತೀರ್ಥಕ್ಷೇತ್ರ ದೇವತೆಗಳಿರುವುದರಿಂದ ಅವರು

ಮಿಥ್ಯಾಜ್ಞಾನವನ್ನು ಕಳೆದು ಪಾವಿತ್ರ್ಯ ತಂದುಕೊಡುವರು. ದೇವತೆಗಳು ಕಣ್ಣಿಗೆ ಕಾಣದಿರುವುದರಿಂದ ಹಾಗೆ ಮಾಡುವುದಿಲ್ಲ. ಅದರಿಂದ ಶರೀರವನ್ನೆ ತಾನೆಂದು, ಹೆಂಡತಿ ಮಕ್ಕಳನ್ನೇ ತನ್ನವರೆಂದು, ಪ್ರತಿಮೆಯನ್ನೇ ದೇವರೆಂದು ನೀರನ್ನೇ ತೀರ್ಥವೆಂದು ತಿಳಿದು ಪೂಜಿಸುತ್ತ ಜ್ಞಾನಿ ಜನರನ್ನು ಕಡೆಗಣಿಸುವವನು ಮನುಷ್ಯನೇ ಅಲ್ಲ. ಅವನೊಬ್ಬ ಕತ್ತೆಯೇ ಸರಿ' ಎಂದು ಶ್ರೀಕೃಷ್ಣ ನುಡಿದ.

ಮೇಲುನೋಟಕ್ಕೆ ಪ್ರತಿಮೆಗಳಲ್ಲಿರುವ ದೇವತೆಗಳಿಗಿಂತ ತನಗಿಂತ ಋಷಿಗಳೇ ಮೇಲೆಂದು ಶ್ರೀಕೃಷ್ಣ ಹೇಳಿದಂತೆ ಕಾಣುವುದರಿಂದ ಅವನ ಮಾತಿಗೆ ಮುನಿಗಳು ತಬ್ಬಿಬ್ಬಾದರು. ಬಳಿಕ ನಗುತ್ತ ನುಡಿದರು. 'ಶ್ರೀಕೃಷ್ಣ ನಿನ್ನ ಲೀಲೆ ವಿಚಿತ್ರವಾಗಿದೆ. ನೀನು ನಿನ್ನ ನಿಜಸ್ವರೂಪವನ್ನು ಮರೆ ಮಾಡಿ ವಿನಯವನ್ನು ಪ್ರದರ್ಶಿಸುವೆ. ತಪಸ್ಸು ವೇದಾಧ್ಯಯನಗಳಿಂದ ನಿರ್ಮಲವಾಗಿರುವ ಬ್ರಾಹ್ಮಣಜಾತಿ ನಿನಗೆ ಬಲುಪ್ರಿಯ. ವೇದದಿಂದ ಮಾತ್ರ ವ್ಯಕ್ತನಾಗುವ ನಿನಗೆ ಉತ್ತಮವಾದ ವಾಸಸ್ಥಾನ ಬ್ರಾಹ್ಮಣಜಾತಿ. ಅವರನ್ನು ನೀನು ಆದರಿಸುವಿ. ಅದರಿಂದ ಇಂದು ಜನ್ಮಸಾರ್ಥಕ್ಯ ಬಂದುದು ನಿನ್ನ ದರ್ಶನದಿಂದ ನಮಗೇ ಹೊರತು ನಿನಗಲ್ಲ. ಪರಮಾತ್ಮನೆ, ನಿನಗಿದೋ ನಮಸ್ಕಾರ! ಮಾಯೆಯ ಪರದೆಯಲ್ಲಿ ಮರೆಮಾಡಿಕೊಂಡಿರುವ ನಿನ್ನನ್ನು ಈ ರಾಜರಾಗಲಿ ನಿನ್ನ ಬಳಿಯೇ ಇರುವ ಈ ಯಾದವರಾಗಲಿ ತಿಳಿದುಕೊಳ್ಳಲಾರರು.'

ಹೀಗೆ ಹೇಳಿ ಮುನಿಗಳು ಕೃಷ್ಣರಾಮರನ್ನೂ ಧೃತರಾಷ್ಟ್ರಯುಧಿಷ್ಠಿರರನ್ನೂ ಬೇರೆ ರಾಜರ್ಷಿಗಳನ್ನೂ ಬೀಳ್ಕೊಂಡು ಹೊರಡಲು ಬಯಸಿದರು. ಆದರೆ ವಸುದೇವ ಎಲ್ಲರನ್ನೂ ನಮಸ್ಕರಿಸಿ ಕರ್ಮದಿಂದ ಕರ್ಮಬಂಧನವನ್ನು ತೊಡೆದುಕೊಳ್ಳುವುದು ಹೇಗೆ ಎಂಬ ಸಮಸ್ಯೆಯನ್ನು ಮುಂದಿಟ್ಟ. ನಾರದರು ಮುನಿಗಳಿಗೆ ಹೇಳಿದರು, 'ಈ ವಸುದೇವ ಶ್ರೀಕೃಷ್ಣನನ್ನು ಮಗನೆಂದು ಬಗೆದು ತನ್ನ ಶ್ರೇಯಸ್ಸನ್ನು ನಮ್ಮಿಂದ ತಿಳಿಯಲು ಬಯಸಿದ್ದಾನೆ. ಮನುಷ್ಯರಿಗೆ ದೇವತೆಗಳು ಬಳಿಯಲ್ಲಿ ಇದ್ದರೆ ಹೀಗೆ ಅನಾದರ ಉಂಟಾಗುವುದು. ಗಂಗೆಯ ಬಳಿ ಇರುವವನು ಸ್ನಾನಕ್ಕೆ ಬೇರೆಯೇ ನೀರನ್ನು ಅರಸಿ ಹೋಗುತ್ತಾನೆ. ಶ್ರೀಕೃಷ್ಣನ ಶಕ್ತಿ ಸಾಮರ್ಥ್ಯ ಯಾವುದೇ ಕಾರಣದಿಂದ

ಕುಂಠಿತವಾಗುವುದಿಲ್ಲ. ಮೋಡಮಂಜುಗಳು ಮುಸುಕಿರುವಾಗ ಅಥವಾ ಗ್ರಹಣಕಾಲದಲ್ಲಿ ಸೂರ್ಯ ಮಂಕಾದಂತೆ ಕಾಣಿಸಿಕೊಳ್ಳು ತ್ತಾನೆ. ಹಾಗೇ ಕೃಷ್ಣನೂ ಅವತಾರದಲ್ಲಿ ಸಾಮಾನ್ಯ ಮಾನವನಂತೆ ಕಾಣಿಸಿಕೊಳ್ಳುತ್ತಾನೆ. ಅದರಿಂದ ವಸುದೇವ ಕೃಷ್ಣನನ್ನು ಕೇಳದೆ ನಮ್ಮನ್ನು ಕೇಳುತ್ತಿರುವುದು ಆಶ್ಚರ್ಯವೇನಲ್ಲ.'

ಮುನಿಗಳು ವಸುದೇವನಿಗೆ ಹೇಳಿದರು, 'ನಿಷ್ಕಾಮಕರ್ಮದಿಂದ ಭಗವಂತನನ್ನು ಆರಾಧಿಸಿ ಮನಸ್ಸನ್ನು ವಿಷಯಪದಾರ್ಥಗಳಿಂದ ಹಿಂತೆಗೆದುಕೊಂಡು ಭಗವಂತನಲ್ಲಿ ನೆಲೆ ನಿಲ್ಲಿಸಬೇಕು. ಅದಕ್ಕೆ ಯಜ್ಞದಾನಾದಿಗಳಿಗೆಂದೇ ಹಣ ಗಳಿಸಬೇಕು. ಆಗ ಹಣದ ಮೋಹ ತೊಲಗುವುದು. ಹೆಂಡತಿ ಮಕ್ಕಳನ್ನು ಸಾಕುವುದು ಗೃಹಸ್ಥನ ಧರ್ಮ ಎಂಬ ಭಾವನೆ ಇದ್ದರೆ ಅವರ ಮೇಲಿನ ಮೋಹ ಕಡಿಮೆ ಯಾಗುವುದು. ಸ್ವರ್ಗದಲ್ಲಿ ದೇವತೆಗಳಿಂದ ತತ್ವಜ್ಞಾನ ಸಿಕ್ಕೀತೆಂದೇ ~~ಸ್ವರ್ಗ ಬಯಸಿ ಕರ್ಮ ಮಾಡಿದರೆ ಸ್ವರ್ಗಸುಖದಾಸೆ ಉಂಟಾಗದು.~~ ಇದು ಕರ್ಮದಿಂದ ಕರ್ಮನಾಶ ಮಾಡಿಕೊಳ್ಳುವ ಶ್ರುತ್ಯುಕ್ತವಾದ ವಿಧಾನ. ಯಜ್ಞ ಮಾಡುವುದು ದೇವಋಣ ಪರಿಹಾರಕ್ಕಾಗಿ, ಅಧ್ಯಯನ ಪಿತೃಋಣಪರಿಹಾರಕ್ಕಾಗಿ, ಪುತ್ರ ಸಂಪಾದನೆ ಪಿತೃಋಣ ಪರಿಹಾರಕ್ಕಾಗಿ ಹೊರತು ತನ್ನ ಸುಖಕ್ಕಾಗಿ ಅಲ್ಲ ಎಂಬ ಭಾವನೆ ಇದ್ದರೆ ಯಜ್ಞ ಅಧ್ಯಯನ ಪುತ್ರಸಂಪಾದನೆಗಳೆಂಬ ಕರ್ಮಗಳು ಬಂಧಕ ವಾಗುವುದಿಲ್ಲ. ತನ್ನ ಸುಖಕ್ಕಾಗಿ ಎಂಬ ಭಾವನೆ ಇದ್ದರೆ ಬಂಧಕ ವಾಗುವುದು. ವಸುದೇವ, ನೀನು ನಿಶ್ಚಯವಾಗಿಯೂ ಬಹು ಜನ್ಮಗಳಲ್ಲಿ ನಿಷ್ಕಾಮನೆಯಿಂದ ಭಕ್ತಿಯಿಂದಲೆ ಕರ್ಮ ಮಾಡಿರುವಿ, ಕರ್ಮನಾಶ ಮಾಡಿಕೊಂಡಿರುವಿ. ಅದರಿಂದಲೆ ಭಗವಂತ ನಿನಗೆ ಪುತ್ರನಾಗಿ ಅವತರಿಸಿದ್ದಾನೆ' ಎಂದರು.

❖❖❖

ಸಮಂತಪಂಚಕದಲ್ಲಿ ಕೃಷ್ಣರಾಮರಿದ್ದಾಗ ಅವರನ್ನು ಕಾಣಲು ವ್ಯಾಸ ನಾರದ ಮೊದಲಾದ ಮಹಾಮುನಿಗಳು ಬರುತ್ತಾರೆ. 'ನಿಮ್ಮ ದರ್ಶನದಿಂದ ನಮ್ಮ ಜನ್ಮ ಸಫಲವಾಯಿತು' ಎನ್ನುತ್ತ ಶ್ರೀಕೃಷ್ಣ 'ತೀರ್ಥಕ್ಷೇತ್ರಗಳಿಗಿಂತ ಸಜ್ಜನರೇ ಬೇಗನೆ ಪಾಪಿಗಳನ್ನು ಪವಿತ್ರಗೊಳಿಸುತ್ತಾರೆ' ಎನ್ನುತ್ತಾನೆ.

ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ ।
ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ ॥ ೧೧ ॥

ನೀರಿನ ತೀರ್ಥಗಳಾಗಲಿ ಕಲ್ಲಿನ ದೇವರಾಗಲಿ ದರ್ಶನ ಮಾತ್ರದಿಂದಲೇ ಪ್ರಾವಿತ್ರ್ಯ ನೀಡುವುದಿಲ್ಲ, ಬಹುಕಾಲ ಸೇವೆ ಮಾಡಬೇಕಾಗುತ್ತದೆ. ಗುರುಗಳು ನೀವು ದರ್ಶನ ಮಾತ್ರದಿಂದಲೆ ಪಾವಿತ್ರ್ಯ ತಂದುಕೊಡುವಿರಿ.

ನಾಗ್ನಿರ್ನ ಸೂರ್ಯೋ ನಚ ಚಂದ್ರತಾರಕಂ
ನ ಭೂರ್ಜಲಂ ಖಂ ಶ್ವಸನೋಽಥ ವಾಙ್ಮನಃ ।
ಉಪಾಸಿತಾ ಭೇದಕೃತೋ ಹರಂತ್ಯಘಂ
ವಿಪಶ್ಚಿತೋ ಘ್ನಂತಿ ಮುಹೂರ್ತಸೇವಯಾ ॥ ೧೨ ॥

ಅಗ್ನಿ ಸೂರ್ಯ ಚಂದ್ರ ನಕ್ಷತ್ರ ಭೂಮಿ ಜಲ ಆಕಾಶ ವಾಕ್ ಮನಸ್ಸು ಇವುಗಳನ್ನೇ ದೇವರೆಂದು ಉಪಾಸನೆ ಮಾಡಿದರೂ ಆ ಅನ್ಯಥಾಜ್ಞಾನಿಗೆ ಅವರು ಪಾಪಪರಿಹಾರಕರಾಗುವುದಿಲ್ಲ. ಜ್ಞಾನಿಗಳಾದ ಗುರುಗಳು ಮಾತ್ರ ಮುಹೂರ್ತ ಕಾಲದ ಸೇವೆಯಿಂದಲೇ ಉಪದೇಶದಿಂದ ಪಾಪ ಪರಿಹಾರಮಾಡುತ್ತಾರೆ.

ಯಸ್ಯಾತ್ಮಬುದ್ಧಿಃ ಕುಣಪೇ ತ್ರಿಧಾತುಕೇ
ಸ್ವಧೀಃ ಕಲತ್ರಾದಿಷು ಭೌಮ ಇಜ್ಯಧೀಃ ।
ಯತ್ತೀರ್ಥಬುದ್ಧಿಶ್ಚ ಜಲೇ ನ ಕರ್ಹಿಚಿ-
ಜ್ಜನೇಷ್ವಭಿಜ್ಞೇಷು ಸ ಏವ ಗೋಖರಃ ॥ ೧೩ ॥

ಯಾರಿಗೆ ವಾತಪಿತ್ತಕಫ ಎಂಬ ತ್ರಿಧಾತುಮಯವಾದ ಶರೀರದಲ್ಲಿ ಆತ್ಮ ಎಂಬ ಭಾವನೆ ಹೆಂಡತಿ ಮಕ್ಕಳಲ್ಲಿ ತನ್ನವರೆಂಬ ಭಾವನೆ ಮಣ್ಣಬೊಂಬೆಯಲ್ಲಿ ದೇವರೆಂಬ ಭಾವನೆ ನೀರಿನಲ್ಲಿ ತೀರ್ಥ ಎಂಬ ಭಾವನೆ ಹೊರತು ಜ್ಞಾನಿಜನರಲ್ಲಿ ಪೂಜ್ಯತಾ ಭಾವನೆ ಇಲ್ಲವೋ ಅವನು ಮನುಷ್ಯನಲ್ಲ, ಭೂಮಿಯಲ್ಲಿ ಕತ್ತೆಯೇ ಸರಿ.

[೧]ಶ್ರೀಧರವ್ಯಾಖ್ಯಾನದಲ್ಲಿ ಈ ಮೂರು ಶ್ಲೋಕಗಳಿಗೆ ವ್ಯಾಖ್ಯಾನ ಮಾಡುತ್ತ ಹೀಗೆ ಹೇಳಿದೆ—

---

೧. ಸ್ವಲ್ಪ ತಪಸಾಂ । ತೀರ್ಥಸ್ನಾನಾದಿ ಮಾತ್ರೇ ತಪೋಬುದ್ಧಿರ್ಯೇಷಾಂ ತಥಾಽರ್ಚಾಯಾಂ ಪ್ರತಿಮಾಯಾಂ ದೇವ ಇತಿ ಚಕ್ಷುರ್ದೃಷ್ಟಿರ್ಯೇಷಾಂ ತೇಷಾಂ। ಏತತ್ ಪ್ರಪಂಚಯತಿ ನ ಹ್ಯಮ್ಮಯಾನೀತಿ ತ್ರಿಭಿಃ।....ವಾಙ್ಮನಸಯೋರಪಿ ಉಪಾಸನಾವಿಷಯತ್ವಂ ಯೋ ವಾಚಂ ಬ್ರಹ್ಮೇತ್ಯುಪಾಸ್ತೇ ಯೋ ಮನೋ ಬ್ರಹ್ಮೇತ್ಯುಪಾಸ್ತೇ ಇತಿ ಶ್ರುತೇಃ। ಅಘಂ ತನ್ಮೂಲಮಜ್ಞಾನಂ

'ನೀರನ್ನೇ ತೀರ್ಥ ಎಂದು, ಪ್ರತಿಮೆಯನ್ನೇ ದೇವರೆಂದು ಉಪಾಸನ ಮಾಡುವುದರಿಂದ ತೀರ್ಥಗಳೂ ದೇವರೂ ಭೇದಜ್ಞಾನವನ್ನು ಕೊಡುತ್ತಾರೆ. ಅಥವಾ ಹೀಗೆ ಉಪಾಸನೆ ಮಾಡುವವನು ಭೇದಜ್ಞಾನಿ. ಭೇದಜ್ಞಾನಿಗೆ ತೀರ್ಥಗಳಾಗಲಿ ದೇವರಾಗಲಿ ಪಾಪವನ್ನೂ ಅದಕ್ಕೆ ಮೂಲವಾದ ಅಜ್ಞಾನವನ್ನೂ ಪರಿಹರಿಸುವುದಿಲ್ಲ. ಅದ್ವೈತಜ್ಞಾನಿಗಳಾದ ಸಾಧುಗಳು ಮುಹೂರ್ತ ಸೇವೆಯಿಂದಲೇ ಪಾಪವನ್ನೂ ಅಜ್ಞಾನವನ್ನೂ ಪರಿಹರಿಸುತ್ತಾರೆ.'

ಆದರೆ ಈ ಭಾಗವತ ವ್ಯಾಖ್ಯಾನ ಭಾಗವತಕ್ಕೇ ವಿರುದ್ಧ. 'ಯಚ್ಛೌಚನಿಃಸೃತಸರಿತ್‌ಪ್ರವರೋದಕೇನ' ಎಂದು ಗಂಗಾಸ್ನಾನವನ್ನೂ 'ಬರ್ಹಾಯಿತೇ ನಯನೇ ನರಾಣಾಂ' ಎಂದು ಪ್ರತಿಮಾದರ್ಶನವನ್ನೂ 'ಅಗ್ನೌ ಗುರಾವಾತ್ಮನಿ ಎಂದು ಅಗ್ನಿ ಮುಂತಾದ ಪ್ರತೀಕಗಳಲ್ಲಿ ಆರಾಧನೆಯನ್ನೂ ಪ್ರಶಂಸೆ ಮಾಡುತ್ತಿ ಭಾಗವತ. ಇದು ಶುಕದೇವ ವ್ಯಾಖ್ಯಾನದಲ್ಲಿ ಸ್ಪಷ್ಟವಿದೆ.

'ಯೋ ವಾಚಂ ಬ್ರಹ್ಮೇತ್ಯುಪಾಸ್ತೇ' ಎಂದು ವಾಗಾದಿ ಪ್ರತಿಮೆಗ ~~ಬ್ರಹ್ಮೋಪಾಸನೆಗಳು ಛಾಂದೋಗ್ಯದಲ್ಲಿ ಉಕ್ತವಾಗಿವೆ ಎಂದು ಶ್ರೀಧರವ್ಯಾಖ್ಯಾನ~~ ಹೇಳುತ್ತಿದೆ. ಶ್ರುತ್ಯುಕ್ತವಾದ ಉಪಾಸನೆಗಳು ಪಾಪ ಪರಿಹಾರ ಮಾಡುವುದಿಲ್ಲ ಎಂದು ಭಾಗವತ ಹೇಳುವುದೆ?

ನಿರ್ಗುಣ ಬ್ರಹ್ಮೋಪಾಸನೆಯನ್ನು ಒತ್ತಿಹೇಳುವ ಅದ್ವೈತವೇದಾಂತವೂ ಕೂಡ ಭೇದಜ್ಞಾನಿಗಳಿಗೆ ತೀರ್ಥಯಾತ್ರೆ ವಿಗ್ರಹಾರಾಧನೆ ಮುಂತಾದ ದ್ವೈತೋಪಾಸನೆಯನ್ನು ವಿಧಿಸಿದೆ—

ನಿರ್ವಿಶೇಷಂ ಪರಂ ಬ್ರಹ್ಮ ಸಾಕ್ಷಾತ್ಕರ್ತುಮನೀಶ್ವರಾಃ ।
ಯೇ ಮಂದಾಸ್ತೇಽನುಕಂಪ್ಯಂತೇ ಸವಿಶೇಷನಿರೂಪಣೈಃ ॥ -ಕಲ್ಪತರು

ಪಾಪಪರಿಹಾರ ಮಾಡದಿದ್ದರೆ ದ್ವೈತೋಪಾಸನೆಯನ್ನು ಏಕೆ ವಿಧಿಸಲಾಗಿದೆ?

'ತೀರ್ಥಯಾತ್ರೆ ಮುಂತಾದವು ಪಾಪಪರಿಹಾರ ಮಾಡುವುದು ನಿಜವೆ. ಆದರೂ ಬಹುಕಾಲ ಬೇಕಾಗುತ್ತದೆ. ಬಹುಕಾಲ ಈ ದ್ವೈತೋಪಾಸನೆ ಮಾಡಿದ

ಚ ಅಜ್ಞಾದಯೋ ನ ಹರಂತಿ। ಅತ್ರ ಹೇತುಃ ಭೇದಕೃತೋ ಭೇದಕರ್ತಾರಃ। ಯದ್ವಾ ಭೇದಬುದ್ಧಿಂ ಕುರ್ವತಃ ಪುಂಸಃ। ವಿಪಶ್ಚಿತೋ ನಿರಸ್ತಭೇದಾಃ। ತೇ ತು ಮುಹೂರ್ತ ಮಾತ್ರ ಸೇವಯೈವಾಘಂ ಘ್ನಂತೀತಿ। ಅತಃ ಸಾಧೂನ್ ವಿಹಾಯಾನ್ಯತ್ರಾತ್ಮಬುದ್ಧ್ಯಾ ಸಜ್ಜಮಾನೋಽತೀವ ಮಂದ ಇತ್ಯಾಹ ಯಸ್ಯೇತಿ। ಆತ್ಮಬುದ್ಧಿ ರಹಮಿತಿ ಬುದ್ಧಿಃ।

-ಶ್ರೀಧರಃ

ಬಳಿಕ ಅದ್ವೈತೋಪಾಸನೆ ಬೇರೆ ಮಾಡಬೇಕು. ಆಗ ಪಾಪಪರಿಹಾರ ಎನ್ನುವುದು ಭಾಗವತದ ಅಭಿಪ್ರಾಯ. ಅದ್ವೈತಜ್ಞಾನಿಗಳಾದ ಸಾಧುಗಳು ಅದ್ವೈತವನ್ನು ಉಪದೇಶಿಸುವುದ ರಿಂದ ಮುಹೂರ್ತಸೇವೆಯಿಂದಲೇ ಪಾಪಪರಿಹಾರ ಸಾಧ್ಯ ಎಂದು ಭಾಗವತ ಹೇಳುತ್ತಿದೆ'—ಹೀಗೆ ಹೇಳಿದರೂ ತಪ್ಪಾಗುತ್ತದೆ. ಭೇದಜ್ಞಾನಿಗೆ ಈ ಸಾಧುಗಳು ಮುಹೂರ್ತಸೇವೆ ಮಾಡಿದೊಡನೆ ಅದ್ವೈತವನ್ನು ಬೋಧಿಸುವುದಿಲ್ಲ. ಬಹುಕಾಲ ದ್ವೈತೋಪಾಸನೆ ಮಾಡಿಸಿಯೆ ಕೊನೆಯಲ್ಲಿ ಅದ್ವೈತವನ್ನು ಉಪದೇಶಿಸುತ್ತಾರೆ! ಒಂದುವೇಳೆ ಮೊದಲಿಗೇ ಅದ್ವೈತವನ್ನು ಬೋಧಿಸಿದರೂ ಬಹುಜನ್ಮಗಳಲ್ಲಿ ಬಹುಕಾಲ ಅದ್ವೈತ ಉಪಾಸನೆ ಮಾಡಿ ಚರಮವೃತ್ತಿ ಬರುವತನಕ ಕಾಯಬೇಕು. ಆಗ ಸಕಲ ಪಾಪಪರಿಹಾರ ಮತ್ತು ಪಾಪಮೂಲವಾದ ಅಜ್ಞಾನ ಪರಿಹಾರ ಉಂಟಾದೀತು.

ಅದರಿಂದ ಇಲ್ಲಿ 'ಭೇದಜ್ಞಾನ'ವೆಂದರೆ ಭೇದದ ಜ್ಞಾನವಲ್ಲ. ವಸ್ತುಸ್ಥಿತಿಗಿಂತ ಬೇರೆಯಾಗಿ ವಸ್ತುವನ್ನು ಗ್ರಹಿಸುವ ಜ್ಞಾನ ವಿವಕ್ಷಿತ. ಪ್ರತಿಮೆ ದೇವರಲ್ಲ ಎನ್ನುವುದು ವಸ್ತುಸ್ಥಿತಿ. ಅದಕ್ಕಿಂತ ಬೇರೆಯಾಗಿ ಗ್ರಹಿಸುವ ಜ್ಞಾನ, ಪ್ರತಿಮೆಯೇ ದೇವರೆನ್ನುವ ಉಪಾಸನೆ ಭೇದಜ್ಞಾನ. ಮುಹೂರ್ತಸೇವೆಯಿಂದ ಸಾಧುಗಳು ಈ ಭೇದಜ್ಞಾನವನ್ನು ಕಳೆದು ಅದರಿಂದ ಬಂದಿರಬಹುದಾದ ಪಾಪವನ್ನು ಕಳೆಯುತ್ತಾರೆ.

'ಶ್ರುತಿಸ್ಮೃತಿಗಳಲ್ಲಿ ಬಹಳ ಆದರದಿಂದ ಉಕ್ತವಾದ ತೀರ್ಥಸ್ನಾನ ವಿಗ್ರಹಾರಾಧನೆ ಮುಂತಾದುವನ್ನು ಪಾಪಪರಿಹಾರಕವಲ್ಲವೆಂದು ಭಾಗವತ ಹೇಳುತ್ತಿಲ್ಲ, ಹಾಗೆ ಹೇಳುವ ಉದ್ದೇಶ ಅದಕ್ಕೆ ಇಲ್ಲ' ಎಂದು ವೀರರಾಘವ ವ್ಯಾಖ್ಯಾನ ಹೇಳುತ್ತದೆ. ಪೂರ್ವಮೀಮಾಂಸೆಯ ನಹಿನಿಂದಾ ನ್ಯಾಯದಿಂದ ತೀರ್ಥಕ್ಷೇತ್ರಗಳ ನಿಂದೆಯ ಮೂಲಕ ಸಾಧುಗಳ ಪ್ರಶಂಸೆ ವಿವಕ್ಷಿತವಾಗಿದೆ ಎನ್ನುತ್ತದೆ. ಆದರೆ 'ತೀರ್ಥಕ್ಷೇತ್ರ ದೇವತೆಗಳು ಬಹುಕಾಲಾನಂತರ ಪಾಪಪರಿಹಾರ ಮಾಡುತ್ತಾರೆ. ಸಾಧುಗಳು ದರ್ಶನ ಮಾತ್ರದಿಂದ ಪಾಪಪರಿಹಾರಕರು' ಎಂದು ಕಾರಣಕೊಟ್ಟು ಭಾಗವತ ಸಮರ್ಥಿಸುತ್ತಿದೆ. ಕಾರಣಕೊಟ್ಟು ಹೇಳುವಾಗ, ಹೇಳುವ ವಿವಕ್ಷೆಯಿಲ್ಲ, ತಾತ್ಪರ್ಯವಿಲ್ಲ ಎನ್ನಲಾಗದು. ಉಪಪತ್ತಿ ಎಂಬುದು ಒಂದು ಮುಖ್ಯವಾದ ತಾತ್ಪರ್ಯಲಿಂಗ ಎಂದು ಪ್ರಸಿದ್ಧವಿದೆ.

[೨]ತೀರ್ಥಕ್ಷೇತ್ರ ದೇವತೆಗಳು ಪಾಪಪರಿಹಾರಕ್ಕೆ ಬಹುಕಾಲ ತೆಗೆದುಕೊಳ್ಳಲು

೨. ಅಲ್ಪಂ ತಪಃ ಪುಣ್ಯಂ ಯೇಷಾಂ ತೇ । ಅರ್ಚಾಯಾಂ ಪ್ರತಿಮಾಯಾಂ ಏವ ದೇವ ಚಕ್ಷುರ್ದೇವತಾಬುದ್ಧಿರ್ಯೇಷಾಂ।... ಅಮ್ಮಯಾನಿ ತೀರ್ಥಾನಿ ಮೃಣ್ಮಯಾಃ ಶಿಲಾಮಯಾಶ್ಚ ದೇವಾಶ್ಚ ದರ್ಶನಾದೇವ ನ ಪುನಂತಿ। ಕಿಂತು ಉರುಕಾಲೇನ। ಸಾಧವಸ್ತು ದರ್ಶನಾದೇವ

ಕಾರಣ, ಅವರು ಉಪಾಸಕನ ಭೇದಜ್ಞಾನವನ್ನು ಕಳೆಯಲಾರರು, ಸಾಧುಗಳು ಬೇಗನೆ ಕಳೆಯಬಲ್ಲರು ಎನ್ನುತ್ತದೆ ವೀರರಾಘವ ವ್ಯಾಖ್ಯಾನ. ಭೇದಜ್ಞಾನವೆಂದರೇನು? ಒಬ್ಬ ಆತ್ಮನಿಗೆ ಜನ್ಮಜನ್ಮಗಳಲ್ಲಿ ಬೇರೆಬೇರೆ ಶರೀರಗಳು ಬರುತ್ತವೆ. ಶರೀರ ಆತ್ಮಗಳಿಗೆ ಅಭೇದವನ್ನು ಉಪಾಸಕನು ತಿಳಿಯುವುದರಿಂದ ಶರೀರಭೇದ ಪ್ರಯುಕ್ತವಾಗಿ ಆತ್ಮಭೇದವನ್ನು ತಿಳಿಯುತ್ತಾನೆ. ಅಂಥವನ ಪಾಪಪರಿಹಾರವನ್ನು ದೇವತೆಗಳು ಮಾಡಲಾರರು. ಆತ್ಮ ಪರಮಾತ್ಮ ತತ್ವಗಳನ್ನು ಅರಿತಿರುವ ಸಾಧುಗಳು ಬೇಗನೆ ಭೇದಜ್ಞಾನವನ್ನು ಕಳೆದು ಪಾಪಪರಿಹಾರ ಮಾಡುತ್ತಾರೆ ಎಂದು ವೀರರಾಘವವ್ಯಾಖ್ಯಾನ ಹೇಳಿದೆ. ಆದರೆ ಅನಾದಿವಾಸನಾ ಜನ್ಯವಾದುದು ಭೇದಜ್ಞಾನ. ಶರೀರಾತ್ಮಭೇದೋಪಾಸನೆಯಿಂದ ಮಾತ್ರ ಹೋಗಬಲ್ಲುದು. ೭ ಉಪದೇಶ ಮಾಡಿದ ಮಾತ್ರಕ್ಕೆ ಹೋಗುವಂಥದ್ದಲ್ಲ. ಅದರಿಂದ ದಶ ಮಾತ್ರದಿಂದ ಅಥವಾ ಮುಹೂರ್ತಸೇವಾಮಾತ್ರದಿಂದ ಭೇದಜ್ಞಾನ ಪ್ರಯುಕ್ತ ಪಾಪಪರಿಹಾರ ಮಾಡುವುದು ಯಾರಿಂದಲೂ ಸಾಧ್ಯವಿಲ್ಲ.

~~[೩] ಜೀವಗೋಸ್ವಾಮಿವ್ಯಾಖ್ಯಾನದ ಪ್ರಕಾರ ಭೇದಜ್ಞಾನ ದೇವತೆಗ~~ ಇರುತ್ತದೆ. ಸಾಧುಗಳಿಗೆ ಇಲ್ಲ. ದೇವತೆಗಳು ಉಪಾಸಕನಿಗೆ ನಾನು ಇಂದ್ರ, ಈತ ವರುಣ ಎಂದು ತಮ್ಮಲ್ಲಿರುವ ಭೇದವನ್ನು ಹೇಳುತ್ತಾರೆ ಹೊರತು ಎಲ್ಲರೊಳಗೆ ಅಂತರ್ಯಾಮಿಯಾಗಿರುವ ಭಗವಂತನನ್ನು ಅವರು ಕಾಣುವುದೂ ಇಲ್ಲ, ಹೇಳುವುದೂ ಇಲ್ಲ. ಸಾಧುಗಳು ಭಗವಂತನನ್ನೇ ಕಾಣುತ್ತಾರೆ, ಹೇಳುತ್ತಾರೆ.

ಪುನಂತೀತ್ಯರ್ಥಃ। ತೀರ್ಥಾನೀತಿ ದೃಷ್ಟಾಂತಾರ್ಥಂ। ದೇವಾ ಉರುಕಾಲೇನೈವ **ಪುನಂತೀತ್ಯೇತತ್** ಪ್ರಪಂಚಯತಿ ನಾಗ್ನಿರಿತಿ। ಭೂ ಜಲಾದಿ ಶಬ್ದೈಃ ತದಭಿಮಾನಿದೇವತಾ **ಲಕ್ಷ್ಯಂತೇ। ತಾ ಅಗ್ನ್ಯಾದಯಶ್ಚೋಪಾಸಿತಾ** ಭೇದಕೃತಃ ಆತ್ಮನಿ ದೇಹಗತ ಭೇದಂ **ಕುರ್ವಾಣಸ್ಯ ಅಘಂ ಹರಂತಿ** ಉರುಕಾಲ ಸೇವಯಾ ಹರಂತೀತ್ಯರ್ಥಃ। ವಿಪಶ್ಚಿತಃ ಸಾಧವಸ್ತು **ಮುಹೂರ್ತ ಸೇವಯೈವ ಹರಂತೀತಿ।** ಯಸ್ಯ ಪುಂಸಃ ಪಾರ್ಥಿವಪ್ರತಿಮಾದೌ ಇಜ್ಯಧೀಃ, ಜಲೇ ಗಂಗಾದಿಜಲ ಏವ ತೀರ್ಥಬುದ್ಧಿಃ, ಕರ್ಹಿಚಿದಪ್ಯಭಿಜ್ಞೇಷು ಸ್ವಾತ್ಮ ಪರಮಾತ್ಮ ಯಾಥಾರ್ಥ್ಯಾಭಿಜ್ಞೇಷು ಭವಾದೃಶೇಷು ನೇಜ್ಯಧೀಃ, ನ ತೀರ್ಥಬುದ್ಧಿಶ್ಚ ಸ ಪುಮಾನ್ ಗೋಖರ ಏವ। ನಹಿನಿಂದಾ ನ್ಯಾಯೇನೇಯಂ ಸಾಧುಜನಪ್ರಶಂಸಾ। -ವೀರರಾಘವಃ

೩. ಕಾಕ್ವಾ ಅಮ್ಮಯಾನಿ ಜಲಾವಯವರೂಪಾಣಿ ನದ್ಯಾದೀನಿ ತೀರ್ಥಾನಿ ಪಾವನಾನಿ ನ ಭವಂತಿ ಕಿಂ? ತಥಾ ಮೃಚ್ಛಿಲಾಮಯಾಃ ತದ್ವಿಕಾರಾಃ ಪ್ರತಿಮಾದಯೋಽಪಿ ದೇವಾಃ ತದಧಿಷ್ಠಾನತ್ವೇನ ತತ್ತಾದಾತ್ಮ್ಯಾಪನ್ನತಯಾ ಪಾವನಾನಿ ನ ಭವಂತಿ ಕಿಂ? ಕಿಂತು ತೇ ಪುನಂತೀತ್ಯಾದಿ। ಅಸ್ತು ತಾವತ್ ತತ್ತತ್ಪ್ರತಿಮಾಯಾಂ ತತ್ತದ್ದೃಷ್ಟ್ಯೋಪಾಸನಂ ತತ್ತನ್ನಿರ್ಮಿತ ತೀರ್ಥ ಸೇವಾ ವಾ। ಸಾಕ್ಷಾತ್ ತತ್ತದುಪಾಸನಮಪಿ ನ್ಯೂನಂ। ತತೋ ಭೂ ಪ್ರಭೃತಿ ಜಡೋಪಾಸನಂ ತು ಸುತರಾಮಿತಿ, ಭವದ್ವಿಧೋಪಾಸನಮೇವ ಸರ್ವೋತ್ತಮಮಿತ್ಯಾಹ ನಾಗ್ನಿರಿತಿ।

ಅದರಿಂದ ಪ್ರತಿಮೆಯನ್ನು ದೇವರೆಂದು ಉಪಾಸನೆ ಮಾಡುವುದು ಸಾಧುಸೇವೆಗಿಂತ ಕಡಿಮೆಯೆ. ಅದಕ್ಕಿಂತ ಕಡಿಮೆಯದು ಕೇವಲ ದೇವತೆಗಳ ಉಪಾಸನೆ, ಅದಕ್ಕಿಂತ ಕಡಿಮೆಯಾದುದು ಕೇವಲ ಪ್ರತಿಮೆಗಳ ಉಪಾಸನೆ. ಪ್ರತಿಮೆಯನ್ನು ದೇವರೆಂದು ಉಪಾಸನೆ ಮಾಡುವುದನ್ನು ಭಾಗವತ 'ಅಮ್ಮಯಾನಿ ನ ತೀರ್ಥಾನಿ, ಮೃಚ್ಛಿಲಾಮಯಾ ನ ದೇವಾಃ' ಎಂದು ನಿಷೇಧಿಸುವಂತೆ ಕಂಡರೂ ಅಲ್ಲಿ ಕಾಕುಸ್ವರದಿಂದ ಆಕ್ಷೇಪಾಭಿಪ್ರಾಯವನ್ನು ಗ್ರಹಿಸಬೇಕು. 'ಅಮ್ಮಯಾನಿ ತೀರ್ಥಾನಿ ನ ಕಿಂ? ಮೃಚ್ಛಿಲಾಮಯಾ ದೇವಾ ನ ಕಿಂ? ತೀರ್ಥಾನ್ಯೇವ, ದೇವಾ ಏವ' ಗಂಗಾದಿಜಲ ಪವಿತ್ರವಲ್ಲವೇನು? ವೆಂಕಟೇಶಾದಿ ಪ್ರತಿಮೆ ದೇವರಲ್ಲವೇನು? ಪವಿತ್ರವೆ, ದೇವರೆ ಎಂದು ವಿವಕ್ಷಿತವಾಗಿದೆ ಎನ್ನುತ್ತಾರೆ.

ವಸ್ತುತಃ ಪ್ರತಿಮೆ ದೇವರಲ್ಲ, ಆದರೆ ದೇವರೆಂದು ಉಪಾಸನೆ ಮಾಡಲು ಭಾಗವತ ವಿಧಿಸುತ್ತದೆ ಮತ್ತು ಆ ಉಪಾಸನೆಯನ್ನು ಶ್ರೇಷ್ಠವೆನ್ನುತ್ತದೆ ಎನ್ನುವುದು ತೀರ ಅಸಂಗತ. ಮಿಥ್ಯೋಪಾಸನೆಯಾದ್ದರಿಂದ ಇದು ಪಾಪಕರ. ಕೇವಲ ದೇವತೋಪಾಸನೆ ಕಡಿಮೆಯದು ಎನ್ನುತ್ತಾರೆ. ಆದರೆ ಪ್ರತಿಮೆ ಇಲ್ಲದೆ ಕೇವಲ ದೇವತೆಗಳನ್ನು ಉಪಾಸನೆ ಮಾಡುವುದೇ ಅಶಕ್ಯ. ಕೇವಲ ಪ್ರತಿಮೆಯ ಉಪಾಸನೆ ಶಾಸ್ತ್ರದಲ್ಲಿ ಎಲ್ಲಿಯೂ ಉಕ್ತವಾಗಿಲ್ಲ, ಅಚೇತನೋಪಾಸನೆ ನಿಷಿದ್ಧವೂ ಆಗಿದೆ.

ದೇವತೆಗಳಿಗೆ 'ನಾನು ಇಂದ್ರ ಈತ ವರುಣ' ಎಂದು ಭೇದಜ್ಞಾನ ಇದ್ದರೆ ಅದರಲ್ಲಿ ಏನು ತಪ್ಪಿದೆ? ಇರುವ ಭೇದವನ್ನು ತಿಳಿಯಬಾರದು ಹೇಳಬಾರದು ಎನ್ನುವುದು ನ್ಯಾಯವೆ? ಎಲ್ಲರೊಳಗೆ ಇರುವ ಭಗವಂತನನ್ನು ದೇವತೆಗಳು ನೋಡುವುದಿಲ್ಲ ಏಕೆ? ಅವರೂ ಭಕ್ತರೆ ತಾನೆ? ಭಕ್ತರಲ್ಲದಿದ್ದರೆ ಅವರ ಉಪಾಸನ ಪಾಪಕರವೇ ಆದೀತು, ಪಾಪಪರಿಹಾರಕವಲ್ಲ.

[೪]ವಲ್ಲಭ ವ್ಯಾಖ್ಯಾನದಲ್ಲಿಯೂ 'ಭೇದಜ್ಞಾನವೆಂದರೆ ಅಖಂಡ ಬ್ರಹ್ಮನಲ್ಲಿ ಭೇದಕಲ್ಪನೆ. ಉಪಾಸಕನಲ್ಲಿ ಅದು ಇದ್ದರೆ ಅವನು ತೀರ್ಥಾದಿಸೇವನೆ ಮಾಡಿಯೂ

ಭೇದಕರ್ತಾರಃ ಅಹಮಿಂದ್ರೋಽಯಂ ವರುಣ ಇತಿ ಜ್ಞಾಪಯಿತಾರಃ। ನತು ಸರ್ವತ್ರಾ ಭಿನ್ನಂ ಪರಮೇಶ್ವರಂ ಜ್ಞಾಪಯಿತಾರಃ। ಯದ್ವಾ ತಾದೃಶ ಪರಮೇಶ್ವರಾದರ್ಶಿನಃ ಸರ್ವತ್ರ ತತ್ತದ್‌ಭೇದಬುದ್ಧಿಂ ಕುರ್ವತಃ ಪುಂಸ ಇತಿ। ವಿಪಶ್ಚಿತಸ್ತು ಪರಮೇಶ್ವರೈಕ ದರ್ಶಿನಃ ತಾದೃಶಂ ಪರಮೇಶ್ವರಮೇವ ಜ್ಞಾಪಯಂತಿ। ತಸ್ಮಾತ್ ತದಜ್ಞಾನ ಮೂಲಮಪರಾಧಂ ಮುಹೂರ್ತ ಸೇವಯಾ ಘ್ನಂತೀತಿ। -ಜೀವಗೋಸ್ವಾಮಿ ಕೃತ ವೈಷ್ಣವತೋಷಿಣಿ

೪. ನಹಿ ನಿಂದಾ ನಿಂದಯಿತುಂ ಪ್ರವರ್ತತೇ ಅಪಿತು ವಿಧೇಯಂ ಸ್ತೋತವ್ಯಮಿತಿ। ಪೂಜಾಯಾಂ ಪ್ರಾಪ್ತಾಯಾಂ ಮೃಣ್ಮಯಾದ್ಯಪೇಕ್ಷಯಾ ಸಾಧವಃ ಪೂಜ್ಯಾಃ। ತೀರ್ಥಗಮನಾಪೇಕ್ಷಯಾ

ಕೃತಾರ್ಥನೆನಿಸುವುದಿಲ್ಲ. ಏಕೆಂದರೆ ಪಾಪಪರಿಹಾರವಾದರೂ ಜ್ಞಾನಲಾಭವಾಗುವುದಿಲ್ಲ. ಅದಕ್ಕೆ ಸಾಧುಸಂಗವೇ ಬೇಕಾಗುತ್ತದೆ. ಹೀಗಾಗಿ ತೀರ್ಥಸೇವನೆ ಮುಂತಾದವುಗಳಿಗಿಂತ ಸಾಧುಸೇವೆ ಶ್ರೇಷ್ಠ. ಈ ಅಭಿಪ್ರಾಯದಿಂದಲೆ 'ತೀರ್ಥಸೇವೆ ಪಾಪಪರಿಹಾರಕವಲ್ಲ' ಎಂದು ನಿಂದಿಸುತ್ತಿದೆ ಭಾಗವತ. ನಹಿನಿಂದಾ ನ್ಯಾಯದಿಂದ ತೀರ್ಥಸೇವೆಗಿಂತ ಸಾಧುಸೇವೆ ಹೆಚ್ಚಿನದೆಂಬ ಅಭಿಪ್ರಾಯವನ್ನೇ ಗ್ರಹಿಸಬೇಕು' ಎನ್ನುತ್ತಾರೆ. ಈ ವ್ಯಾಖ್ಯಾನದಲ್ಲಿಯೂ ಅದ್ವೈತವಿಶಿಷ್ಟಾದ್ವೈತದಂತೆ ಈ ಶುದ್ಧಾದ್ವೈತದಲ್ಲಿಯೂ ಭೇದಜ್ಞಾನ ಅನಾದಿಯಾದ್ದರಿಂದ ಸಾಧುಗಳ ದರ್ಶನ ಮಾತ್ರದಿಂದ ಅದು ಪರಿಹಾರವಾಗಲಾರದೆಂಬ ದೋಷವಿದ್ದೇ ಇದೆ. 'ಭೇದಕೃತಃ' ಎಂಬ ಉಪಪತ್ತಿಯನ್ನು ಹೇಳಿದ್ದರಿಂದ ನಿಂದೆಯಲ್ಲಿ ತಾತ್ಪರ್ಯವಿಲ್ಲವೆನ್ನುವುದು ಕೂಡುವುದಿಲ್ಲ.

[ಶಿ]ವಿಶ್ವನಾಥವ್ಯಾಖ್ಯಾನದಲ್ಲಿ ಹೇಳಿದೆ—''ಭೇದಜ್ಞಾನವೆಂದರೆ ತನ್ನಂ ಪರರನ್ನೆಣಿಸದಿರುವುದು, ಮತ್ಸರ ದ್ವೇಷಾದಿ ಭಾವನೆ. ಇಂಥ ಭೇದಜ್ಞಾನ ಉ ಉಪಾಸಕ ತೀರ್ಥಾದಿಸೇವೆ ಮಾಡಿದರೂ ದೇವತೆಗಳು ಅವನ ಮಾತ್ಸರ್ಯಾ ದೋಷಗಳನ್ನು ಪರಿಹರಿಸುವುದಿಲ್ಲ. ಸಾಧುಗಳು ಪರಿಹರಿಸುತ್ತಾರೆ. ಅದರಿಂ ಕೇವಲ ಸಾಧುಸೇವೆ ಮಾಡುವವರು ಬಹಳ ಶ್ರೇಷ್ಠರು. ತೀರ್ಥಸೇವೆಯೊಂದಿಗೆ

ಸಾಧವ ಏವಾಭಿಗಂತವ್ಯಾಃ ಇತಿ। ನ ತು ಲೋಕಸಿದ್ಧಂ ನಿಂದ್ಯತೇ। ಏತೇ ಸರ್ವೇ **ಭಗವದ್‌ಬುದ್ಧ್ಯಾ ಪೂಜಿತಾ** ಅಘಂ ಹರಂತಿ ಪಾಪಕ್ಷಯಮೇವ ಕುರ್ವಂತಿ, ನ ತ್ವಧಿಕಂ। ತತ್ರ **ಹೇತುಃ ಭೇದಕೃತ** ಇತಿ। ಭೇದಮಂಗೀಕೃತ್ಯ ಹಿ ಸ ಪ್ರವರ್ತತೇ ಯೋಹ್ಯಖಂಡಂ ಭಿನ್ನತ್ತಿ ಸ **ಕಥಂ ಕೃತಾರ್ಥೋ ಭವೇತ್?** ವಿಪಶ್ಚಿತಸ್ತು ಭೇದಂ ದೂರೀಕುರ್ವಂತಿ। ತಾವತ್ಯೆವ **ಜ್ಞಾನೋದಯಃ ಸರ್ವಪಾಪಕ್ಷಯಃ** ಅನಾಯಾಸೇನ ಭವತಿ। -ವಲ್ಲಭಃ

ಶಿ. **ಕ್ಷುತ್‌ಪಿಪಾಸಾದಿಭಿಃ ಆದರಪ್ರಾಪ್ತ್ಯಾದಿಭಿಶ್ಚಾತ್ಮಪರಯೋಃ** ಸಾಮ್ಯೇಽಪಿ ಭೇದಂ ಕರೋತೀತಿ **ಭೇದಕೃತ್। ತಸ್ಯಾಘಂ ಭೇದೋತ್ಥಮವಜ್ಞೋಪೇಕ್ಷಾಮಾತ್ಸರ್ಯಾದಿಕಂ** ಘ್ನಂತಿ। ಅತ್ರ ಯಸ್ಯಾತ್ಮಬುದ್ಧಿಃ **ಕುಣಪ ಏವ, ನತ್ವಭಿಜ್ಞೇಷ್ವಿತ್ಯುಕ್ತ್ಯಾ** ಉಭಯತ್ರಾತ್ಮಬುದ್ಧ್ಯೋ ನ ಗೋಚರಾಃ ಇತ್ಯಾಯಾತಂ। **ಅಭಿಜ್ಞೇಷ್ವೇವಾತ್ಮ ಬುದ್ಧ್ಯಯ ಸ್ತ್ವತಿಶ್ರೇಷ್ಠಾ** ಏವೇತಿ ಭಾವಃ। ಅತ್ರ ಭೌಮೇ ಭಗವತ್‌ಪ್ರತಿಮಾಭಿನ್ನೇ **ಇತಿವ್ಯಾಖ್ಯೇಯಂ।**

ಅರ್ಚಾಯಾಮೇವ **ಹರಯೇ ಪೂಜಾಂ** ಯಃ ಶ್ರದ್ಧಯೇಹತೇ।
ನ ತದ್ಭಕ್ತೇಷು **ಚಾನ್ಯೇಷು ಸ ಭಕ್ತಃ ಪ್ರಾಕೃತಃ** ಸ್ಮೃತಃ॥

ಇತ್ಯೇಕಾದಶೋಕ್ತೇಃ **ಅಭಿಜ್ಞೇಷ್ವಿಜ್ಯಬುದ್ಧ್ಯ**ಭಾವೇಽಪಿ ತತ್‌ಪ್ರತಿಮಾಸೇವಿನಃ ಕನಿಷ್ಠಭಕ್ತತ್ವೋಕ್ತೇಃ। ಏವಂ **ಸಲಿಲ** ಇತ್ಯತ್ರಾಪಿ ಗಂಗಾ ಯಮುನಾದಿಭಿನ್ನೇ ಇತಿ ವ್ಯಾಖ್ಯೇಯಂ ತಾದೃಶವಚನ ಪರಃಸಹಸ್ರೇಭ್ಯ ಇತಿ। -ವಿಶ್ವನಾಥಃ

ಸಾಧುಸೇವೆ ಮಾಡುವವರು ಮಧ್ಯಮರು. ಕೇವಲ ತೀರ್ಥಪ್ರತಿಮಾ **ಸೇವಕರು** ಕನಿಷ್ಠರು ಎಂದು ಭಾಗವತದ ಅಭಿಪ್ರಾಯ. ಏಕೆಂದರೆ 'ಶರೀರದಲ್ಲಿ **ಮಾತ್ರವೇ** ಆದರ ಅಭಿಮಾನಗಳುಳ್ಳವನು, ಸಾಧುಜನರಲ್ಲಿ ಅವು ಇಲ್ಲದವನು ಕತ್ತೆ' **ಎಂದು** ಹೇಳುವ ಮೂಲಕ ಎರಡರಲ್ಲಿಯೂ ಅಭಿಮಾನ ಬೇಕೆಂದೇ ಭಾಗವತ **ಹೇಳಿದೆ.** 'ಜಲದಲ್ಲಿಯೇ ತೀರ್ಥ ಎಂಬ ಭಾವನೆ ಇಟ್ಟುಕೊಂಡವನು ಕತ್ತೆ' ಎಂದು **ನಿಷೇಧಿ** ಸುವಾಗ ಜಲವೆಂದರೆ ಸಾಮಾನ್ಯವಾದ ಕೆರೆಬಾವಿ ನೀರು ಹೊರತು **ಗಂಗಾದಿ** ಪವಿತ್ರಜಲವಲ್ಲ ಎಂದಿಟ್ಟುಕೊಳ್ಳಬೇಕು. ಇಲ್ಲದಿದ್ದರೆ, ಗಂಗಾದಿ ಜಲದಲ್ಲಿ **ಮಾತ್ರ** ತೀರ್ಥವೆಂಬ ಭಾವನೆ ಇಟ್ಟುಕೊಂಡವನನ್ನು ಕನಿಷ್ಠ ಭಕ್ತನೆಂದು ಏಕಾದಶಸ್ಕಂಧ (೨.೪೭)ದಲ್ಲಿ ಹೇಳಿದ್ದು ಕೂಡಲಾರದು. ಅವನನ್ನು ಕತ್ತೆ ಎಂದು ಇಲ್ಲಿ ನಿಷೇಧಿಸಿದೆ ತಾನೆ?''

ಆದರೆ ಇಲ್ಲಿ ಜಲವೆಂದರೆ ಸಾಮಾನ್ಯ ನೀರೆಂದು ಇಟ್ಟುಕೊಳ್ಳುವ ಪಕ್ಷದಲ್ಲಿ 'ಕೇವಲ ಗಂಗಾದಿ ತೀರ್ಥಸೇವಕ, ತೀರ್ಥ-ಸಾಧುಸೇವಕ ಮತ್ತು ಕೇವಲ ಸಾಧುಸೇವಕರನ್ನು ಇಲ್ಲಿ ಹೇಳಿದಂತಾಗುವುದಿಲ್ಲ. ಆದರಿಂದ ಗಂಗಾದಿಜಲವೆಂದೇ ಇಟ್ಟುಕೊಳ್ಳಬೇಕು. ಅದನ್ನು ಮಾತ್ರ ಸೇವಿಸುವವನು 'ಕತ್ತೆ' ಎಂದು ನಿಂದಿಸುವುದು, ನಹಿನಿಂದಾ ನ್ಯಾಯದಿಂದ ಕೇವಲ ಸಾಧುಸೇವಕನು ಉತ್ತಮನೆಂದೂ, ಗಂಗಾದಿಜಲ ಸಾಧುಗಳೆರಡನ್ನೂ ಆದರಿಸುವವನು ಮಧ್ಯಮನೆಂದೂ, ಕೇವಲ ಗಂಗಾಜಲ ವನ್ನಾದರಿಸುವವನು ಕನಿಷ್ಠನೆಂದೂ ತಿಳಿಸುವ ಅಭಿಪ್ರಾಯದ್ದು ಎಂದೇ ಹೇಳಬೇಕಾಗುತ್ತದೆ. ಅದಕ್ಕೆ, 'ಭೇದಕೃತಃ' ಎಂದು ಉಪಪತ್ತಿಯನ್ನು ಹೇಳಿದುದು ಸಮಸ್ಯೆಯಾಗುತ್ತದೆ.

ಭೇದಜ್ಞಾನರೂಪವಾದ ಮಾತ್ಸರ್ಯ ದ್ವೇಷಾದಿದೋಷಗಳನ್ನು ಪ್ರತಿಮಾರ್ಚನಾದಿಗಳು ಕಳೆಯುವುದಿಲ್ಲ ಎನ್ನುವುದೂ ಸಾಹಸವಾಗುತ್ತದೆ.

ಮಾನಸಾನ್ ವಾಚಿಕಾನ್ ದೋಷಾನ್ ಕ್ಷಮಸ್ವ ಪುರುಷೋತ್ತಮ ।
ವೈಷ್ಣವದ್ವೇಷ ಹೇತೂನ್ಮೇ ಭಸ್ಮಸಾತ್ ಕುರು ಮಾಧವ ॥

'ದ್ವೇಷಾದಿ ತ್ರಿಕರಣದೋಷಗಳನ್ನು ಕಳೆ' ಎಂದು **ಬೇಡಿಕೊಂಡೇ** ಪ್ರತಿಮಾರ್ಚನೆ ಮಾಡುತ್ತೇವೆ.

[೬]ಶುಕದೇವವ್ಯಾಖ್ಯಾನದ ಪ್ರಕಾರ 'ಪ್ರತಿಮೆಯನ್ನು ಹರಿಗಿಂತ **ಅಭಿನ್ನವೆಂದೇ**

---

೬. ಭೇದಂ ಕರೋತೀತಿ ಭೇದಕೃತ್ ತಸ್ಯ। ಐತದಾತ್ಮ್ಯಮಿದಂ **ಸರ್ವಮಿತಿ ಶ್ರುತೇಃ।** ಜಗತ್ಕಾರಣಾತ್ ಅಗ್ನ್ಯಾದ್ಯೇಕತಮಂ ಸ್ವೋಪಾಸ್ಯಂ ಪೃಥಕ್ **ಮನ್ಯಮಾನಸ್ಯೇಶ್ವರಃ।। ಅಥ**

ತಿಳಿಯಬೇಕು. ಭಿನ್ನವೆಂದು ತಿಳಿಯುವವನು ಭೇದಕೃತ್. ಅವನ ಪಾಪ ಪರಿಹಾರ ವಾಗುವುದಿಲ್ಲ.' ಆದರೆ ಭೇದಾಭೇದವನ್ನು ಹೇಳುವ ಇವರು ಭೇದಜ್ಞಾನವನ್ನು ಹೇಗೆ ನಿರಾಕರಿಸುತ್ತಾರೆ? ಭೇದವನ್ನು ನಿರಾಕರಿಸುವುದಾದರೆ ಅಭೇದವನ್ನೂ ನಿರಾಕರಿಸ ಬೇಕಾಗುತ್ತದೆ ತಾನೆ? ಪ್ರತಿಮೆಯನ್ನು ಹರಿ ಎಂದು ಉಪಾಸನೆ ಮಾಡುವುದು 'ನ ಪ್ರತೀಕೇ ನಹಿ ಸಃ' ಎಂದು ಬ್ರಹ್ಮಸೂತ್ರದಲ್ಲಿ ಯುಕ್ತಿಯುಕ್ತವಾಗಿ ನಿರಾಕೃತವಾಗಿದೆ.

ಹೀಗೆ ಬೇರೆ ವ್ಯಾಖ್ಯಾನಕಾರರು ನೀಡುವ ವಿವರಣೆಗಳು ಸಮರ್ಪಕವಾಗಿಲ್ಲ. ಶ್ರೀಮದಾಚಾರ್ಯರ ವಿವರಣೆ ಯುಕ್ತಿಯುಕ್ತ ಹಾಗೂ ಶ್ರುತಿಸ್ಮೃತಿಗಳಿಗೆ ಸಂಮತವೂ ಆಗಿರುತ್ತದೆ.

ಅಮ್ಮಯಾದ್ಯಭಿಮಾನಿನೋ ದೇವಾ ಉರುಕಾಲೇನೈವ ಪುನಂತಿ, ಗುರೂಪದೇಶಂ ಪ್ರಾಪಯಿತ್ವಾ।

'ಗಂಗಾದಿ ತೀರ್ಥಾಭಿಮಾನಿ ದೇವತೆಗಳು ಬಹುಕಾಲಾನಂತರವೇ ಪವಿತ್ರೀಕರಿಸುತ್ತಾರೆ. ಏಕೆಂದರೆ ಗುರೂಪದೇಶವನ್ನು ಕೊಡಿಸಿಯೇ ಹಾಗೆ ಮಾಡುತ್ತಾರೆ.'

ಭೇದಕೃತಃ ಅನ್ಯಥಾಜ್ಞಾನಿನಃ। ವಿಪಶ್ಚಿತಸ್ತು ಪ್ರತ್ಯಕ್ಷದರ್ಶನಾದ್ ಅನ್ಯಥಾಜ್ಞಾನಮೇವಾಪನಯಂತಿ।

ಭೇದಕಾರಿಗೆ ಎಂದರೆ ಅನ್ಯಥಾಜ್ಞಾನಿಗೆ ಎಂದರ್ಥ. ಜ್ಞಾನಿಗಳು ಮಾತ್ರ ಪ್ರತ್ಯಕ್ಷ ಕಾಣುವವರಾದ್ದರಿಂದ ಅಜ್ಞಾನಿಗಳಿಗೆ ಕಣ್ಣಿಗೆ ಬಿದ್ದು ಅವರ ಅನ್ಯಥಾಜ್ಞಾನವನ್ನೇ ದೂರಮಾಡುತ್ತಾರೆ.

ಗಂಗಾದಿ ತೀರ್ಥಾಭಿಮಾನಿ ದೇವತೆಗಳು ಕೇವಲ ದರ್ಶನ ಮಾತ್ರದಿಂದ ಪವಿತ್ರಿಕರಿಸುವುದಿಲ್ಲ, ಏಕೆಂದರೆ ಅವರು ಪರೋಕ್ಷಪ್ರಿಯರು. ಪರೋಕ್ಷವಾಗಿದ್ದೇ ಗುರುಗಳ ಮೂಲಕ ಅನುಗ್ರಹಿಸುವವರು. ಯೋಗ್ಯ ಕಾಲ ಬಂದಾಗ ಗುರುಗಳನ್ನು

ತನ್ಮೂಲಮಜ್ಞಾನಂ ನ ಹರಂತಿ। ಅನೇನ ಜಗತ್ಕಾರಣಸ್ಯ ಪುರುಷೋತ್ತಮಸ್ಯ ಸಂಬಂಧೀನಿ ತೀರ್ಥಾನಿ ತತ್ಪ್ರಿಮಾಃ ತದಾತ್ಮಕತಯಾ ಸೇವ್ಯಮಾನಾ ಅಗ್ನ್ಯಾದಯಶ್ಚಾತ್ರ ನ ಗೃಹ್ಯಂತ ಇತಿ ಭಗವತೋಽಭಿಪ್ರಾಯಃ। ಅತ್ರೈವ 'ಯತ್‌ಪಾದನಿಃಸೃತ ಸರಿತ್ಪ್ರವರೋದಕೇನ' 'ಬರ್ಹಾಯಿತೇ ತೇ ನಯನೇ ನರಾಣಾಂ ಲಿಂಗಾನಿ ವಿಷ್ಣೋರ್ನ ನಿರೀಕ್ಷತೋ ಯೇ' 'ಅಗ್ನೌ ಗುರಾವಾತ್ಮನಿ ಚ' ಇತ್ಯಾದೌ ತೇಷಾಂ ಪರಮಾದರಣೀಯತ್ವೋಕ್ತೇಶ್ಚ। ವಿಪಶ್ಚಿತಸ್ತು ಮುಹೂರ್ತ ಮಾತ್ರ ಸೇವಯಾ ಘ್ನಂತಿ ಸರ್ವಾತ್ಮೋಪದೇಶಾದಿನೇತಿ ಭಾವಃ। -ಶುಕದೇವಃ

ಕಳಿಸಿ ಅವರ ಮೂಲಕ ಉಪದೇಶ ಕೊಡಿಸುತ್ತಾರೆ. ಅದಕ್ಕೇ ಅವರು **ಗುರುಗಳಲ್ಲಿ** ಅಂತರ್ಗತರಾಗಿರುತ್ತಾರೆ. ಅಜ್ಞರಿಗೆ ಗುರುಗಳೇ ದರ್ಶನ **ಮಾತ್ರದಿಂದ** ಪವಿತ್ರೀಕರಿಸಿದಂತೆ ಕಾಣುತ್ತದೆ. ತೀರ್ಥಾಭಿಮಾನಿಗಳು ವಿಲಂಬ **ಮಾಡಿದಂತೆಯೇ** ಕಾಣುತ್ತದೆ. ಅವರು ಗುರುಗಳ ಮೂಲಕವೇ ಅನುಗ್ರಹಿಸುವುದರಿಂದ **ವಿಲಂಬವಾಗು**ತ್ತದೆ. ಭೇದಕಾರಿ ಎಂದರೆ ಅನ್ಯಥಾಜ್ಞಾನಿ. ವಸ್ತುಸ್ಥಿತಿಗಿಂತ **ಬೇರೆಯಾಗಿ** ತಿಳಿಯುವವನು ಎಂದರ್ಥ. ಹೊರತು ಭೇದವನ್ನು ತಿಳಿಯುವವನು ಎಂದರ್ಥ**ವಲ್ಲ** ಅಭೇದವಿರುವಲ್ಲಿ ಭೇದವನ್ನು ತಿಳಿಯುವುದು ಹೇಗೋ ಹಾಗೆ ಭೇದವಿರುವ**ಲ್ಲಿ** ಅಭೇದವನ್ನು ತಿಳಿಯುವುದೂ ಕೂಡ ವಸ್ತುಸ್ಥಿತಿಗಿಂತ ಬೇರೆಯಾಗಿ ಗ್ರಹಿಸುವುದರಿಂದ ಭೇದಜ್ಞಾನ, ಅನ್ಯಥಾಜ್ಞಾನವೆಂದೇ ಸ್ಕಂದಪುರಾಣದಲ್ಲಿ ಉಕ್ತವಾಗಿದೆ. ಅನ್ಯಥಾಜ್ಞಾನವು ಅನೇಕ ಬಗೆಯಾಗಿದೆ ಎಂದೂ ಅಲ್ಲಿ ಹೇಳಿದೆ.

ಪ್ರಾಕೃತೈರ್ದೃಶ್ಯಮಾನಂ ತು ನ ದ್ರವಂ ತೀರ್ಥಮುಚ್ಯತೇ ।
ದೇವಾಶ್ಚ ನ ಶಿಲಾಮಾತ್ರಾಃ ಕಿಂತು ತತ್ರಾಂತರಸ್ಥಿತಾಃ ।
ಗುರೂಪದೇಶಂ ತು ವಿನಾ ನ ತೇ ದೃಶ್ಯಾಃ ಕಥಂಚನ ।
ನ ಜ್ಞಾಯತೇ ಚ ತದ್ರೂಪಂ ಅನ್ಯಥಾಜ್ಞಾನಿನಾಂ ಚ ತೇ ।
ಕೋಪಾಚ್ಛಾಪಂ ಪ್ರಯಚ್ಛಂತಿ ತಸ್ಮಾದ್ ಗುರುಮುಪಾವ್ರಜೇತ್ ।
ತಸ್ಮಾತ್ ತೀರ್ಥಾನಿ ದೇವಾಶ್ಚ ನಿತ್ಯಂ ವಿದ್ವತ್ಸು ಸಂಸ್ಥಿತಾಃ ॥
ಇತಿ ಗಾರುಡೇ ॥

'ಅಜ್ಞಾನಿಗಳಿಗೆ ಕಣ್ಣಿಗೆ ಕಾಣುವ ನೀರು ತೀರ್ಥವಲ್ಲ. ಕಲ್ಲೇ ದೇವರೂ ಅಲ್ಲ. ನೀರಿನಲ್ಲಿರುವ ದೇವತೆಯೇ ತೀರ್ಥ. ಕಲ್ಲೊಳಗಿರುವ ದೇವತೆಯೇ ದೇವರು. ಇವರು ಗುರೂಪದೇಶವಿಲ್ಲದೆ ಸರ್ವಥಾ ಪ್ರತ್ಯಕ್ಷ ಕಂಡುಬರುವುದಿಲ್ಲ. ನೀರನ್ನೇ ತೀರ್ಥವೆಂದೂ ಕಲ್ಲನ್ನೇ ದೇವರೆಂದೂ ಅನ್ಯಥಾ ತಿಳಿಯುವವರಿಗೆ ಈ ತೀರ್ಥಗಳ ದೇವತೆಗಳ ಸ್ವರೂಪ ತಿಳಿದಿರುವುದಿಲ್ಲ. ಅದರಿಂದ ಅವರು ಆ ಅನ್ಯಥಾಜ್ಞಾನಿಗಳಿಗೆ ಕೋಪದಿಂದ ಶಾಪಕೊಡುತ್ತಾರೆ. ಅದರಿಂದ ಸರಿಯಾದ ತಿಳುವಳಿಕೆಗಾಗಿ ಗುರುವನ್ನು ಆಶ್ರಯಿಸಬೇಕು. ಅದಕ್ಕಾಗಿ ತೀರ್ಥಗಳೂ ದೇವರುಗಳೂ ಸದಾ ಜ್ಞಾನಿಗಳಾದ ಗುರುಗಳಲ್ಲಿ ಸನ್ನಿಹಿತರಾಗಿರುತ್ತಾರೆ' ಎಂದು ಗರುಡಪುರಾಣದಲ್ಲಿ ಉಕ್ತವಾಗಿದೆ.

ಭಿನ್ನಸ್ಯಾಭೇದತೋ ದೃಷ್ಟಿರಪಿ ಭೇದದೃಶಿರ್ಮತಾ ।
ವಸ್ತುಯಾಥಾತ್ಮ್ಯತಸ್ತಸ್ಯ ಭಿನ್ನತ್ವಾದಿತಿ ಸೂರಿಭಿಃ ।
ಅನ್ಯಥಾಜ್ಞಾನಮೇವಾತೋ ಭೇದಜ್ಞಾನಂ ವಿನಿಂದಿತಂ ।
ನ ವಿದ್ಯಮಾನಭೇದಸ್ಯ ದರ್ಶನಂ ನಿಂದಿತಂ ಕ್ವಚಿತ್ ।
ಶಿಲಾ ದೇವ ಇತಿ ಜ್ಞಾನಂ ದೇವೋಽಸ್ಮೀತಿ ತು ಯಾ ದೃಶಿಃ ।
ಉತ್ತಮಸ್ಯಾಧಮತ್ವೇನ ನೀಚಸ್ಯೋಚ್ಚತಯಾ ದೃಶಿಃ ।
ಅಸಮಸ್ಯ ಸಮತ್ವೇನ ಸಮಸ್ಯಾಸಮದರ್ಶನಂ ।
ದ್ರವಂ ತೀರ್ಥಮಿತಿ ಜ್ಞಾನಂ ದೇಹೋಽಹಮಿತಿ ಯಾ ಮತಿಃ ।
ಅಸದ್ಭಾರ್ಯಾದಿಷು ಸ್ವೀಯದರ್ಶನಂ ಚೈವಮಾದಿಕಂ ।
ಭೇದಜ್ಞಾನಮಿತಿ ಪ್ರೋಕ್ತಂ ಯಾ ಚಾನ್ಯಾಽಪ್ಯನ್ಯಥಾಮತಿಃ ।
ತಸ್ಮಾತ್ ತದಪಹಾನಾಯ ಸಂಸೇವ್ಯಾ ಗುರವೋ ವರಾಃ ।
ತತ್ರಸ್ಥಾ ದೇವತಾಃ ಸರ್ವಾಃ ಪ್ರೀಯಂತೇ ಗುರುಪೂಜಯಾ ।
ನೈವಾನ್ಯಥೈಷಾಂ ಪ್ರೀತಿಃ ಸ್ಯಾದ್ ಗುರೂಕ್ತಿಮಪಹಾಯ ತು ।
ತಸ್ಮಾತ್ ಪೂಜಾ ವಿಶೇಷೇಣ ಸತಾಂ ಕಾರ್ಯಾ ನೃಣಾಂ ಸದಾ ।
ಭಕ್ತಿಸ್ತು ತಾರತಮ್ಯೇನ ವಿಶಿಷ್ಟೇ ತ್ವಧಿಕಾ ಭವೇತ್ ॥ ಇತಿ ಸ್ಕಾಂದೇ ॥

'ಭಿನ್ನವಾದ ವಸ್ತುವನ್ನು ಅಭಿನ್ನವೆಂದು ತಿಳಿಯುವುದು ಕೂಡ ಭೇದಜ್ಞಾನವೆ. ಏಕೆಂದರೆ ವಸ್ತುಸ್ಥಿತಿ ಹೇಗೆ ಇರುವುದೋ ಅದಕ್ಕೆ ವ್ಯತಿರಿಕ್ತವಾಗಿ ಈ ಜ್ಞಾನ ಗ್ರಹಿಸುತ್ತದೆ. ಅದರಿಂದ ಅನ್ಯಥಾಜ್ಞಾನ ರೂಪವಾಗಿರುವ ಭೇದಜ್ಞಾನ ಶಾಸ್ತ್ರದಲ್ಲಿ ನಿಂದಿತವಾಗಿದೆ ಹೊರತು ವಾಸ್ತವಿಕ ಭೇದದ ಜ್ಞಾನ ಎಲ್ಲಿಯೂ ನಿಂದಿತವಾಗಿಲ್ಲ. ಉತ್ತಮರನ್ನು ಅಧಮರೆಂದು ಅಧಮರನ್ನು ಉತ್ತಮರೆಂದು ಅಸಮಾನನನ್ನು ಸಮಾನ ನೆಂದು ಸಮಾನನನ್ನು ಅಸಮಾನನೆಂದು ನೀರನ್ನು ತೀರ್ಥವೆಂದು ದೇಹವನ್ನು ತಾನೆಂದು ಕೆಟ್ಟ ಹೆಂಡತಿ ಮುಂತಾದವರನ್ನು ತನ್ನವರೆಂದು ಮುಂತಾಗಿ ತಪ್ಪಾಗಿ ತಿಳಿಯುವುದು ಮತ್ತು ಬೇರೆ ಎಲ್ಲ ಅನ್ಯಥಾಜ್ಞಾನವೂ ಭೇದಜ್ಞಾನವೆನಿಸುತ್ತದೆ. ಅದರಿಂದ ಅದನ್ನು ದೂರ ಮಾಡಿಕೊಳ್ಳುವುದ ಕ್ಕಾಗಿ ಉತ್ತಮ ಗುರುಗಳ್ನು ಸೇವಿಸಬೇಕು. ಗುರುಗಳನ್ನು ಸೇವಿಸಿದರೆ ಅವರೊಳಗಿರುವ ಎಲ್ಲ ದೇವತೆಗಳೂ ಪ್ರೀತರಾಗುತ್ತಾರೆ.

ಗುರೂಪದೇಶವನ್ನು ಬಿಟ್ಟು ಬೇರೆ ರೀತಿಯಿಂದ ಪೂಜಿಸಿದರೆ ದೇವತೆಗಳಿಗೆ ಸಂತೋಷವಾಗುವುದೇ ಇಲ್ಲ. ಅದರಿಂದ ಮಾನವರು ಸಾಧುಜನರ ಪೂಜೆಯನ್ನು ವಿಶೇಷವಾಗಿ ಮಾಡಬೇಕು. ಭಕ್ತಿಯನ್ನು ತಾರತಮ್ಯದಿಂದ ಮಾಡಬೇಕು. ಉತ್ತಮರಲ್ಲಿ ಹೆಚ್ಚು ಭಕ್ತಿಯನ್ನೇ ಮಾಡಬೇಕು' ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ.

ಉತ್ತಮಾ ಅಪಿ ದೇವೇಶಾ ಅವರಾನ್ ವಿದುಷೋ ನೃಣಾಂ ।
ಪೂಜಾಯೈ ಸಂಪ್ರಯಚ್ಛಂತಿ ಪರೋಕ್ಷತ್ವಪ್ರಿಯಾ ಯತಃ ।
ತೇಷು ಸ್ಥಿತ್ವಾ ಸ್ವಯಂ ಪೂಜಾಂ ಗೃಹ್ಣಂತ್ಯನುಪಮಾಂ ಸದಾ ।
ಜ್ಞಾನಾನಿ ಚ ಪ್ರಯಚ್ಛಂತಿ ತಸ್ಮಾದೇವಂವಿದಾ ಸದಾ ।
ಪೂಜಿತಾಃ ಸ್ಯುಃ ಸುರವರಾಃ ಸಬ್ರಹ್ಮಾಣಃ ಸಕೇಶವಾಃ ॥
ಇತಿ ವಾಮನೇ ॥

'ದೇವೋತ್ತಮರು ಗುರುಗಳಿಗಿಂತ ಉತ್ತಮರೇ ಆಗಿದ್ದರೂ, ಮಾನವರು ತಮ್ಮ ಆರಾಧನೆ ನಡೆಸಲು ಆ ದೇವೋತ್ತಮರು ತಮಗಿಂತ ಕಡಿಮೆಯವರಾದ ಆ ಗುರುಗಳನ್ನೇ ಮಾನವರ ಬಳಿಗೆ ಕಳಿಸುತ್ತಾರೆ; ಪ್ರತ್ಯಕ್ಷವಾಗಿ ತಾವೇ ಆರಾಧನೆ ಮಾಡಿಸಿಕೊಳ್ಳುವುದಿಲ್ಲ. ಏಕೆಂದರೆ ಪರೋಕ್ಷವಾಗಿ ಆರಾಧನೆಯನ್ನು ಸ್ವೀಕರಿಸುವುದೇ ಅವರಿಗೆ ಪ್ರಿಯವಾಗಿರುತ್ತದೆ. ಗುರುಗಳಲ್ಲಿದ್ದೇ ತಮಗೆ ಇಷ್ಟವಾದ ಆ ಉತ್ತಮ ಪೂಜೆಯನ್ನು ತಾವು ಸ್ವೀಕರಿಸುತ್ತಾರೆ. ಗುರುಗಳ ಮೂಲಕವೇ ಮಾನವರಿಗೆ ಜ್ಞಾನಾದಿಗಳನ್ನು ನೀಡುತ್ತಾರೆ. ಹೀಗೆ ತಿಳಿದೇ ಬ್ರಹ್ಮ ವಿಷ್ಣು ಮುಂತಾದ ದೇವೋತ್ತಮರನ್ನು ಸದಾ ಪೂಜಿಸಬೇಕು' ಎಂದು ವಾಮನಪುರಾಣದಲ್ಲಿ ಉಕ್ತವಾಗಿದೆ.

❖❖❖

ಸಮಂತಪಂಚಕದಲ್ಲಿ ಶ್ರೀಕೃಷ್ಣ ಮುನಿಗಳನ್ನು ಬಹಳ ಪ್ರಶಂಸೆ ಮಾಡಿದಾಗ ಮುನಿಗಳು ನಿನ್ನ ಈ ಮಾತು ಬ್ರಾಹ್ಮಣಜಾತಿಯ ಮೇಲೆ ವೇದದ ಮೇಲೆ ನಿನಗೆ ಇರುವ ಪ್ರೀತಿಯನ್ನು ವ್ಯಕ್ತಮಾಡುತ್ತದೆ ಎನ್ನುತ್ತಾರೆ.

ಬ್ರಹ್ಮ ತೇ ಹೃದಯಂ ಶುಕ್ಲಂ ತಪಃಸ್ವಾಧ್ಯಾಯಸಂಯಮೈಃ ।
ಯತ್ರೋಪಲಬ್ಧಂ ಸುವ್ಯಕ್ತಮವ್ಯಕ್ತಂ ಚ ತತಃ ಪರಮ್ ॥ ೧೯ ॥

ತಪಸ್ಸು ವೇದಾಧ್ಯಯನ ಇಂದ್ರಿಯನಿಗ್ರಹಗಳಿಂದ ನಿರ್ಮಲವಾಗಿರುವ

ಬ್ರಾಹ್ಮಣ ಜಾತಿ ನಿನಗೆ ಬಲು ಪ್ರಿಯ. ಅದು ಉತ್ತಮ. ಏಕೆಂದರೆ ಅವ್ಯಕ್ತನಾಗಿರುವ ನೀನು ಅವರಿಗೆ ಸ್ಪಷ್ಟವಾಗಿ ವ್ಯಕ್ತನಾಗುವೆ.

ಇಲ್ಲಿ 'ಹೃದಯಂ' ಎಂದರೆ ಶ್ರೀಧರ ವೀರರಾಘವ ವಲ್ಲಭವ್ಯಾಖ್ಯಾನಗಳ ಪ್ರಕಾರ ಅಂತರಂಗ, ಅಂದರೆ ಪ್ರಿಯ ಎಂದು ಲಕ್ಷಣಾವೃತ್ತಿಯನ್ನಿಟ್ಟುಕೊಂಡಂತೆ ಕಾಣುತ್ತದೆ. ಏಕೆಂದರೆ ರೂಢಿಗೆ ಪ್ರಮಾಣವನ್ನು ಉದಾಹರಿಸಿಲ್ಲ.

ಜೀವಗೋಸ್ವಾಮಿಯ ಬೃಹತ್‌ಕ್ರಮಸಂದರ್ಭದಲ್ಲಿ 'ಹೃತ್ ಅಯತಿ' ಎಂದು ಯೋಗವನ್ನು ತೋರಿಸಿದ್ದಾರೆ. 'ತವ ಹೃದ್ಯೇವ ಬ್ರಹ್ಮಾಸ್ತಿ, ತ್ವಮೇವ ವೇದವಕ್ತಾ' ಃ ಹೃದಯದಲ್ಲಿಯೇ ವೇದವಿರುತ್ತದೆ, ನೀನೇ ವೇದೋಪದೇಶಕ ಎಂದಿದ್ದಾರೆ. ಆ ಬ್ರಹ್ಮಾದಿ ದೇವತೆಗಳ ಹೃದಯದಲ್ಲಿಯೂ ವೇದ ಇದೆ. ಅವರೂ ಉಪದೇಶಕ ಇರುವಾಗ ನೀನೇ ಉಪದೇಶಕ ಎನ್ನುವುದು ಕೂಡುವುದಿಲ್ಲ.

ಶುಕದೇವ ವ್ಯಾಖ್ಯಾನದಲ್ಲಿ 'ಹೃದಯಂ ಹೃದ್‌ಗತಂ' ಎಂದು ಯೋಗವ ಹೇಳಿದರೂ ವೇದವನ್ನು ತಿಳಿದವನು ಶ್ರೀಹರಿ ಎಂದಿಷ್ಟೇ ವಿವಕ್ಷಿತವಾಗಿದೆ.

ವಸ್ತುತಃ ಹೃದ್ಗತ ಹೃದ್ಯ ಹೃದಯಂಗಮ ಮುಂತಾದ ಶಬ್ದಗಳಿಗೆ 'ಅಭಿಪ್ರೇತ, ಇಷ್ಟ, ಪ್ರಿಯ' ಎಂಬ ಅರ್ಥ ವ್ಯವಹಾರದಲ್ಲಿ ಇದೆ.

ತವೋ ಮೇ ಹೃದಯಂ ಸಾಕ್ಷಾತ್ (ಭಾಗ. ೨.೯.೨೨)

ಎಂಬಲ್ಲಿ

ಪ್ರಿಯಂ ಹೃದಯಮುದ್ರಿಕ್ತಂ ಕಾಂತಮಿತ್ಯಭಿಧೀಯತೇ ।

ಇತ್ಯಭಿಧಾನಾತ್ ।

ಎಂದು ತಾತ್ಪರ್ಯ(೨.೯.೨೩)ದಲ್ಲಿ ಹೃದಯಶಬ್ದಕ್ಕೆ ಪ್ರಿಯ ಎಂಬ ಅರ್ಥದಲ್ಲಿ **ರೂಢಿ ಉಕ್ತವಾಗಿದೆ. 'ಹೃತ್** ಅಯತಿ' ಎಂದು ಯೋಗವೂ ಪ್ರಿಯ ಎಂಬ ಅರ್ಥದಲ್ಲಿ ಇದೆ. ಲಕ್ಷಣಾವೃತ್ತಿಯ ಆವಶ್ಯಕತೆ ಇಲ್ಲ.

ಹೃದಯಂ ಪ್ರಿಯಂ ಹೃದ್ಯಯನಾತ್ ।

'ಹೃದಯ' ಎಂದರೆ ಪ್ರಿಯ. ಈ ಅರ್ಥದಲ್ಲಿ ರೂಢಿ ಮಾತ್ರವಲ್ಲದೆ 'ಹೃದಿ ಅಯತೇ' ಎಂದು ಯೋಗವೂ ಇದೆ. ಲಕ್ಷಣೆ ಮಾಡುವ ಆವಶ್ಯಕತೆ ಇಲ್ಲ.

❖❖❖

ಅಧ್ಯಾಯ - ೭೩

ಅಧ್ಯಾಯ ಸಾರಾಂಶ

ಮುನಿಗಳು ಹೇಳಿದ್ದನ್ನು ಕೇಳಿ ವಸುದೇವ ಅವರನ್ನು ತನ್ನ ಯಜ್ಞದಲ್ಲಿ ಋತ್ವಿಜರಾಗಲು ಕೇಳಿಕೊಂಡ. ಅವರು ಒಪ್ಪಿ ಅವನಿಂದ ಉತ್ತಮವಾದ ರಾಜಸೂಯಕ್ಕೆ ಸಮಾನವಾದ ಯಜ್ಞಗಳನ್ನು ಮಾಡಿಸಿದರು. ಮೈಗೆ ಬೆಣ್ಣೆ ಲೇಪಿಸಿಕೊಂಡು ಕಣ್ಣಿಗೆ ಕಾಡಿಗೆ ಹಚ್ಚಿಕೊಂಡ ವಸುದೇವನಿಗೆ ಋತ್ವಿಜರು ವಿಧ್ಯುಕ್ತವಾಗಿ ಅಭಿಷೇಕ ನಡೆಸಿದರು. ಹದಿನೆಂಟು ಪತ್ನಿಯರಿಂದೊಡಗೂಡಿದ ವಸುದೇವ ಇಪ್ಪತ್ತೇಳು ನಕ್ಷತ್ರಗಳಿಂದ ಕೂಡಿದ ಚಂದ್ರನಂತೆ ಶೋಭಿಸಿದ. ಹದಿನೇಳು ಮಂದಿ ಋತ್ವಿಜರು ಅವನಿಗೆ ಸಾಂಗವಾಗಿ ಪ್ರಧಾನ ಯಾಗಗಳನ್ನು ಮಾಡಿಸಿ, ಪತ್ನೀಸಂಯಾಜ ಮತ್ತು ಅವಭೃಥೇಷ್ಟಿಗಳನ್ನೂ ಮಾಡಿಸಿ ಯಜಮಾನನೊಂದಿಗೆ ಪರಶುರಾಮನಿರ್ಮಿತವಾದ ಮಡುವಿನಲ್ಲಿ ಅವಭೃಥ ಸ್ನಾನ ಮಾಡಿದರು. ಸ್ನಾನವಾದ ಬಳಿಕ ನಾಲ್ಕೂ ವರ್ಣಗಳಿಗೂ ಎಲ್ಲ ಪ್ರಾಣಿಗಳಿಗೂ ವಸುದೇವ ಅನ್ನದಾನದಿಂದ ತೃಪ್ತಿಪಡಿಸಿದ. ಋತ್ವಿಜರೂ ದೇವ ಮನುಷ್ಯ ಭೂತ ಪಿತೃ ಚಾರಣರೂ ಶ್ರೀಕೃಷ್ಣನ ಬಳಿಗೆ ಬಂದು ಯಜ್ಞವನ್ನು ಪ್ರಶಂಸೆ ಮಾಡಿ ತೆರಳಿದರು.

ಧೃತರಾಷ್ಟ್ರ ವಿದುರ ದ್ರೋಣ ಭೀಷ್ಮ ಅಶ್ವತ್ಥಾಮ ಕೃಪ ನಾರದರು ಭಗವಾನ್ ವ್ಯಾಸರು ಎಲ್ಲರೂ ಬಂಧುಗಳಾದ ಯಾದವರನ್ನು ಪ್ರೇಮಾರ್ದ್ರಹೃದಯದಿಂದ ಆಲಿಂಗಿಸಿ ತಮ್ಮೂರುಗಳಿಗೆ ತೆರಳಿ ದರು. ನಂದಗೋಪ ಮಾತ್ರ ಗೋಪಾಲಕರೊಂದಿಗೆ ಬಂಧುವಾತ್ಸಲ್ಯ ದಿಂದ ಅಲ್ಲಿಯೇ ಉಳಿದ. ವಸುದೇವ ನಂದಗೋಪನ ಕೈಹಿಡಿದು ಹೇಳಿದ, 'ನೀವು ನಮ್ಮಲ್ಲಿ ಮಾಡಿದ ಪ್ರೀತಿಗೆ ಪ್ರತಿಯಾಗಿ ನಾವೇನೂ ಕೊಡಲಾರೆವು. ಆದರೆ ಎಂದೂ ಬತ್ತಲಾರದ ಪ್ರೀತಿಯನ್ನು ಮಾಡುತ್ತೇವೆ. ಕಂಸನ ದಬ್ಬಾಳಿಕೆ ನಡೆಯುತ್ತಿದ್ದ ಕಾಲದಲ್ಲಿ ನಿಮಗೆ ನಾವೇನೂ ಉಪಕಾರ ಮಾಡಲಾಗಲಿಲ್ಲ. ಈಗ ಧನಮದದಿಂದ ನಾವು ಕುರುಡರಾಗಿರುವ ಕಾಲ, ಏನೂ ಉಪಕಾರ ಮಾಡುತ್ತಿಲ್ಲ.' ಹೀಗೆ ಹೇಳಿ ವಸುದೇವ ಕಣ್ಣಲ್ಲಿ ನೀರು ತುಂಬಿಕೊಂಡು ಅತ್ತುಬಿಟ್ಟ.

ವಸುದೇವನ ಸಂತೋಷಕ್ಕಾಗಿ ಮತ್ತು ಕೃಷ್ಣರಾಮರ ಮೇಲಿನ ಪ್ರೀತಿಯಿಂದ ನಂದಗೋಪ ತಾನು ಊರಿಗೆ ಹೊರಡುವುದನ್ನು ಇಂದು ನಾಳೆ ಎಂದು ಮುಂದುಹಾಕುತ್ತ ಮೂರು ತಿಂಗಳ ಕಾಲ ಅಲ್ಲೇ ವಾಸಮಾಡಿದ.

ಬಳಿಕ ವಸುದೇವ ಮುಂತಾದವರು ನಂದಗೋಪನಿಗೂ ಗೋಪಾಲಕರಿಗೂ ಅಮೂಲ್ಯ ವಸ್ತ್ರಾಭರಣಾದಿಗಳನ್ನಿತ್ತರು. ನಂದಗೋಪ ಸ್ವೀಕರಿಸಿ ಅವರಿಂದ ಬೀಳ್ಕೊಂಡು ಮಧುರೆಗೆ ತೆರಳಿದ. ಗೋಪಗೋಪಿಯರು ಕೃಷ್ಣನ ಪಾದಕಮಲಗಳಲ್ಲಿ ನೆಟ್ಟ ತಮ್ಮ ಮನಸ್ಸನ್ನು ಕೀಳಲಾಗದೆ ಕಷ್ಟದಿಂದ ಮಧುರೆಗೆ ತೆರಳಿದರು. ಮಹಾತ್ಮರಾದ ಪಾಂಡವರೂ ಕುಂತಿಯೂ ಕೃಷ್ಣನಿಂದ ಬೀಳ್ಕೊಂಡು ಬಂಧುಪರಿವಾರದೊಂದಿಗೆ ಇಂದ್ರಪ್ರಸ್ಥಕ್ಕೆ ತೆರಳಿದರು. ಯಾದವರು ಕೃಷ್ಣನೊಂದಿಗೆ ದ್ವಾರಕೆಗೆ ಮರಳಿದರು.

ಅಧ್ಯಾಯ - ೭೪

ಅಧ್ಯಾಯ ಸಾರಾಂಶ

ಮುನಿಗಳು ಕೃಷ್ಣರಾಮರ ಮಹಿಮೆಯನ್ನು ಹೊಗಳಿ ನುಡಿದುದನ್ನು ಕೇಳಿ ವಸುದೇವ ಅವರ ಸಾಮರ್ಥ್ಯದಲ್ಲಿ ವಿಶ್ವಾಸ ಹೊಂದಿದ್ದ. ಒಂದುದಿನ ಅವರು ತನಗೆ ಪಾದಾಭಿವಂದನೆ ಮಾಡಿದಾಗ ನುಡಿದ. 'ಎಲ್ಲಿ ಯಾವ ಸಾಧನದಿಂದ, ಯಾವ ವಸ್ತುವಿನಿಂದ, ಯಾರ ಪ್ರಯತ್ನದಿಂದ ಯಾರಿಗಾಗಿ ಯಾವ ಯಾವ ವಸ್ತು ಯಾವ ಆಕಾರದಿಂದ ಯಾವಾಗ ನಿರ್ಮಾಣವಾಗುವುದೋ ಅದೆಲ್ಲ ನಿನ್ನಾಧೀನ. ಸೃಷ್ಟಿಕರ್ತರೆನಿಸಿರುವ ಬ್ರಹ್ಮಾದಿ ದೇವತೆಗಳ ವಿಶೇಷ ಶಕ್ತಿಗಳೂ ಕೂಡ ನಿನ್ನ ಅಧೀನವೆ. ಅವರು ಪರತಂತ್ರರು ನೀನು ಸ್ವತಂತ್ರ. ಇಂದ್ರಿಯಗಳೂ ಇಂದ್ರಿಯ ದೇವತೆಗಳೂ ನಿನ್ನ ಅಧೀನರು. ಸತ್ವರಜಸ್ತಮೋಗುಣಗಳು ನಿನ್ನಿಚ್ಛೆಯಂತೆ ನಿನ್ನಲ್ಲಿ ಆಶ್ರಯಪಡೆದಿರುತ್ತವೆ. ಇಲ್ಲದಿದ್ದರೆ ಅವುಗಳಿಗೆ ಅಸ್ತಿತ್ವವೆ ಇಲ್ಲವಾಗುತ್ತಿತ್ತು. ಅಜ್ಞಾನಿಗಳು ಇದನ್ನರಿಯದೆ ಅಹಂಕಾರದಿಂದ ಕರ್ಮಾಧೀನವಾಗಿ ಜನನ ಮರಣ ರೂಪವಾದ ಸಂಸಾರದಲ್ಲಿ ತಿರುಗುತ್ತಾರೆ. ಪ್ರಭು, ಪುಣ್ಯವಶದಿಂದ ಮಾನವಜನ್ಮ ಪಡೆದೂ ಕೂಡ ನಾನು ನಿನ್ನಿಚ್ಛೆಯಿಂದ ಪುರುಷಾರ್ಥ ಸಾಧನೆಯನ್ನು ಮರೆತುಬಿಟ್ಟೆ. ದುರ್ಲಭವಾದ ನನ್ನ ವಯಸ್ಸು ವ್ಯರ್ಥವಾಗಿ ಕಳೆದುಹೋಯಿತು. ನೀವು ನನ್ನ ಮಕ್ಕಳಲ್ಲ, ಪ್ರಕೃತಿ ಜೀವನಿಯಾಮಕರು. ಭೂಭಾರಹರಣಕ್ಕಾಗಿ ಅವತರಿಸಿದವರು. ನನಗೆ ನಶ್ವರ ದೇಹದಲ್ಲಿ ನಾನೇ ಎನ್ನುವಷ್ಟು ಅಭಿಮಾನ, ನಿಮ್ಮಲ್ಲಿ ಮಕ್ಕಳೆಂಬ ಭ್ರಾಂತಿಗಳು ನನ್ನನ್ನು ಕಾಡುತ್ತಿವೆ. ಇದು ಇನ್ನು ಸಾಕು. ಹೆರಿಗೆ ಮನೆಯಲ್ಲಿಯೇ ಅಂದು ನೀನು ನಿನ್ನ ಸ್ವರೂಪವನ್ನು ತಿಳಿಸಿರುವೆ. ಆದರೂ ನಮಗೆ ಮೋಹ ಆಗಾಗ ಕವಿಯುತ್ತಿದೆ. ಪೂರ್ಣನಾದ ನಿನ್ನ ಸಾಮರ್ಥ್ಯವನ್ನು ಯಾರು ಅರಿಯಬಲ್ಲ?'

ಶ್ರೀಕೃಷ್ಣನೆಂದ, 'ಅಪ್ಪ ನೀನು ಹೇಳಿದುದು ಯುಕ್ತವೇ ಆಗಿದೆ. ನೀವು, ಈ ನನ್ನ ಅಣ್ಣ, ಈ ದ್ವಾರಕಾನಿವಾಸಿಗಳು, ಈ ಚರಾಚರ ಪ್ರಪಂಚ ಎಲ್ಲವೂ ನನ್ನ ಅಧೀನವಾಗಿವೆ. ಮಹಾಪರಿಮಾಣ ಉಳ್ಳ ನಾನು

ಅಚಿಂತ್ಯಶಕ್ತಿಯಿಂದ ಅಣುವಿನಲ್ಲಿ ಅಣುವಾಗಿ ಮಹತ್ತಿನಲ್ಲಿ ಮಹತ್ತಾಗಿ ಏಕದಲ್ಲಿ ಏಕನಾಗಿ ಅನೇಕದಲ್ಲಿ ಅನೇಕನಾಗಿ ಇರುತ್ತೇನೆ' ವಸುದೇವನಿಗೆ ಸಂತೋಷವಾಯಿತು.

ದೇವಕಿ ಒಮ್ಮೆ ಮಕ್ಕಳನ್ನು ಕರೆದು ಹೇಳಿದಳು. ನೀವು ಸರ್ವನಿಯಾಮಕರಾದ ಆದಿಪುರುಷರು ಎಂದು ನಾನು ಬಲ್ಲೆ. ನೀವು ಅಂದು ಗುರುವಿಗೆ ಎಂದೋ ಮೃತನಾದ ಪುತ್ರನನ್ನು ಯಮಲೋಕ ದಿಂದ ತಂದು ಕೊಟ್ಟಿರಿ. ಹಾಗೇ ನನ್ನ ಅಭಿಲಾಷೆಯನ್ನೂ ಪೂರೈಸಿರಿ. ಕಂಸನಿಂದ ಹತರಾದ ನನ್ನ ಆರುಮಂದಿ ಪುತ್ರರನ್ನು ನೋಡಲು ಬಯಸುತ್ತೇನೆ.' ತಾಯಿ ಹೀಗೆ ಹೇಳಿದಾಗ ರಾಮಕೃಷ್ಣರು ಯೋಗಮಾಯೆಯಿಂದ ಸುತಲ ಲೋಕಕ್ಕೆ ಹೋಗಿ ಅಲ್ಲಿ ದೈತ್ಯರಾಜನಾದ ಬಲಿಯ ಬಳಿಗೆ ಬಂದರು. ಬಲಿ ಅವರನ್ನು ಸಂತೋಷದಿಂದ ಸ್ವಾಗತಿಸಿ ಆಸನವಿತ್ತು ಪಾದಗಳನ್ನು ತೊಳೆದ. ಪಾದಜಲವನ್ನು ಕುಟುಂಬ ಸಹಿತನಾಗಿ ಶಿರದಲ್ಲಿ ಧರಿಸಿದ. ವಸ್ತ್ರಾಭರಣಗಳನ್ನು ಮಾತ್ರವಲ್ಲದೆ ಕುಲ ಧನ ದೇಹಗಳನ್ನೂ ಅವರಿಗೆ ಅರ್ಪಿಸಿದ. ಭಗವಂತನ ಪಾದಗಳಿಗೆ ಮತ್ತೆ ಮತ್ತೆ ಪ್ರದಕ್ಷಿಣೆ ಮಾಡಿ ಕಣ್ಣುಗಳಲ್ಲಿ ಬಾಷ್ಪ ಸುರಿಸುತ್ತ ರೋಮಾಂಚಗೊಂಡು ಗದ್ಗದ ಕಂಠದಿಂದ ಸ್ತುತಿಸಿದ, 'ನಿಮ್ಮ ದರ್ಶನ ಜನರಿಗೆ ದುರ್ಲಭ. ರಜೋಗುಣ ತಮೋಗುಣದವರಾದ ಅಸುರ ಜಾತಿಯ ನಮಗೆ ಅತ್ಯಂತ ದುರ್ಲಭ. ನಾವು ದೈತ್ಯರು ನಿನ್ನಲ್ಲಿ ಸದಾ ವೈರ ಮಾಡುವುದು ನಮ್ಮ ಸ್ವಭಾವವಾಗಿದೆ. ಆದರೂ ನಾನು ನಿನ್ನ ಪಾದಸೇವೆಯಿಂದಲೆ ಬದುಕುತ್ತಿದ್ದೇನೆ. ಹೀಗೇ ಮುಂದೆಯೂ ವಿಷಯಾಸಕ್ತಿಯನ್ನು ತೊರೆದು ನಿನ್ನ ಭಕ್ತರ ಸಂಗದಲ್ಲಿ ಬದುಕುವಂತೆ ನನಗೆ ಅನುಗ್ರಹಿಸು. ಪ್ರಭು, ನನಗೆ ಆಜ್ಞೆ ಮಾಡು. ನಿನ್ನಾಜ್ಞೆಯಂತೆ ನಡೆಯುವವನೇ ಸಂಸಾರದಿಂದ ಮುಕ್ತನಾಗುತ್ತಾನೆ.'

ಶ್ರೀಕೃಷ್ಣ ನುಡಿದ, 'ಸ್ವಾಯಂಭುವ ಮನ್ವಂತರದಲ್ಲಿ ಮರೀಚಿ ಮುನಿಯಿಂದ ಊರ್ಣಾ ಎಂಬ ಪತ್ನಿಯಲ್ಲಿ ಆರುಮಂದಿ ಪುತ್ರರು ಜನಿಸಿದರು. ದೇವಲಮುನಿ ಕೃಶರಾಗಿದ್ದು ಮಕ್ಕಳನ್ನು ಶಪಿಸಲು ಉದ್ಯುಕ್ತರಾದಾಗ ಇವರು ಕಂಡು ಹಾಸ್ಯ ಮಾಡಿ ನಕ್ಕರು. ಈ ಪಾಪದಿಂದ ಕಾಲನೇಮಿಯ ಮಕ್ಕಳಾಗಿ ಅಸುರ ಜನ್ಮ ಪಡೆದರು.

ಬ್ರಹ್ಮನಿಂದ ಅವಧ್ಯತ್ವ ವರ ಪಡೆದರು. ವರ ಕೊಡಲು ತಾನಿರುವಾಗ ಬ್ರಹ್ಮನಲ್ಲಿ ಏಕೆ ವರ ಪಡೆದಿರೆಂದು ಹಿರಣ್ಯಕಶಿಪು ಸಿಟ್ಟಾಗಿ 'ನೀವು ಕಾಲನೇಮಿಯಿಂದಲೇ ಹತರಾಗಿರಿ' ಎಂದು ಶಾಪ ನೀಡಿದ. ಕಾಲನೇಮಿಯೆ ಕಂಸನಾದ್ದರಿಂದ ದೇವಕಿಯಲ್ಲಿ ಜನಿಸಿದ ಇವರನ್ನು ಕಂಸ ಸಂಹರಿಸಿದ. ನಮ್ಮ ತಾಯಿ ದೇವಕಿ ಈಗ ಆ ಮಕ್ಕಳನ್ನು ನೆನೆದು ಶೋಕಿಸುತ್ತಿದ್ದಾಳೆ. ಅದಕ್ಕೆ ಅವರನ್ನು ಕರೆದೊಯ್ಯುತ್ತೇವೆ. ಬಳಿಕ ಅವರು ಶಾಪ ಮುಕ್ತರಾಗಿ ತಮ್ಮ ಲೋಕವನ್ನು ಹೋಗಿ ಸೇರುತ್ತಾರೆ. ಸ್ಮರ ಉದ್ಗೀಥ ಪರಿಷ್ವಂಗ ಪತಂಗ ಕ್ಷುದ್ರಭೃತ್ ಘೃಣಿ ಇವರೇ ಆ ಆರು ಪುತ್ರರು.' ಹೀಗೆ ಹೇಳಿ ರಾಮಕೃಷ್ಣರು ಮಕ್ಕಳನ್ನು ತಂದು ತಾಯಿಗೆ ನೀಡಿದರು.

ದೇವಕಿ ಅವರನ್ನು ತೊಡೆಯ ಮೇಲಿರಿಸಿಕೊಂಡು ನೆತ್ತಿಯನ್ನು ಆಘ್ರಾಣಿಸಿ ಮಕ್ಕಳ ಸ್ಪರ್ಶದಿಂದ ಸುರಿಯಲು ತೊಡಗಿದ ಎದೆ ಹಾಲನ್ನು ಉಣಿಸಿದಳು. ಸೃಷ್ಟಿ ನಡೆಸಲು ಕಾರಣವಾದ ವಿಷ್ಣುಮಾಯೆಯಿಂದ ಅವಳು ಮೋಹಿತಳಾಗಿದ್ದಳು. ಅಂದು ಶ್ರೀಕೃಷ್ಣ ಕುಡಿದು ಉಳಿದಿದ್ದ ಅಮೃತತುಲ್ಯವಾದ ದೇವಕಿಯ ಎದೆಹಾಲನ್ನು ಕುಡಿದುದರಿಂದಲೂ ಶ್ರೀಕೃಷ್ಣನ ಕರಸ್ಪರ್ಶದಿಂದಲೂ ಅವರಿಗೆ ತತ್ವಜ್ಞಾನ ಲಭಿಸಿತು. ಕೃಷ್ಣರಾಮರನ್ನೂ ವಸುದೇವ ದೇವಕಿಯರನ್ನೂ ನಮಸ್ಕರಿಸಿ ಎಲ್ಲ ಜನರು ನೋಡುತ್ತಿದ್ದಂತೆ ಆಕಾಶಮಾರ್ಗದಿಂದ ಅವರು ತಮ್ಮ ಲೋಕಕ್ಕೆ ತೆರಳಿದರು.

ಶ್ರೀಕೃಷ್ಣನ ಈ ಪಾವನ ಚರಿತ್ರೆ ಭಕ್ತರ ಕಿವಿಗಳಿಗೆ ಭೂಷಣವಾಗಿದ್ದು ಕೇಳುವ ಹೇಳುವವರೆಲ್ಲರಿಗೂ ಮುಕ್ತಿ ನೀಡಬಲ್ಲುದು.

❖❖❖

ಅಧ್ಯಾಯ - ೭೫

ಅಧ್ಯಾಯ ಸಾರಾಂಶ

ಶ್ರೀಕೃಷ್ಣನಿಗೆ ಎಲ್ಲ ಮಹಿಷಿಯರಿಗಿಂತ ರುಕ್ಮಿಣಿಯಲ್ಲಿ ಹೆಚ್ಚು ಪ್ರೀತಿ. ಅವಳೊಡನೆ ಒಮ್ಮೆ ಆತ ಪ್ರೇಮಕಲಹವಾಡಿದ. ದೇವಿ ಮಂಚದಲ್ಲಿ ಸುಖವಾಗಿ ಕುಳಿತಿದ್ದ ಕೃಷ್ಣನಿಗೆ ಚಾಮರ ಬೀಸುತ್ತ ಬಳಿಯಲ್ಲಿ ನಿಂತಿದ್ದಳು. ಹರಿಯ ಅವತಾರಗಳಿಗೆ ಅನುಗುಣವಾಗಿ ಅವತಾರ ತಾಳುವವಳು, ಹರಿಯ ಲೀಲೆಗೆ ಅನುಗುಣವಾಗಿ ಲೀಲೆ ಮಾಡುವವಳು ಹರಿಯೊಬ್ಬನನ್ನೇ ಆಶ್ರಯಿಸುವವಳು ಲಕ್ಷ್ಮೀ ಸ್ವರೂಪಳು ರುಕ್ಮಿಣಿ. ಶ್ರೀಕೃಷ್ಣ ನುಡಿದ, 'ರಾಜಕುಮಾರಿ, ದೇವೋತ್ತಮರಂತಹ ಶಿಶುಪಾಲ ಮುಂತಾದ ರಾಜರು ಕಾಮಾಂಧರಾಗಿ ನಿನ್ನನ್ನು ಬಯಸಿ ಬಂದರು. ನಿಮ್ಮಣ್ಣನೂ ತಂದೆಯೂ ನಿನ್ನನ್ನು ಅವರಿಗೆ ಕೊಡುವುದಾಗಿ ವಾಗ್ದಾನವನ್ನೂ ಮಾಡಿದ್ದರು. ಅವರನ್ನು ಬಿಟ್ಟು ನೀನು ನನ್ನನ್ನೇಕೆ ವರಿಸಿದೆ? ನಾನು ಬಲಿಷ್ಠರಾದ ಜರಾಸಂಧಾದಿಗಳ ವಿರೋಧ ಕಟ್ಟಿಕೊಂಡು ಹೆದರಿ ಸಮುದ್ರಮಧ್ಯದ್ವೀಪದಲ್ಲಿ ಮನೆ ಮಾಡಿಕೊಂಡವನು. ಯಯಾತಿಯ ಶಾಪವಿರುವುದರಿಂದ ರಾಜ ಸಿಂಹಾಸನದ ಆಸೆ ತೊರೆದವನು. ನನ್ನ ನಡತೆ ಎಲ್ಲವೂ ವಿಲಕ್ಷಣ. ಲೋಕವಿಲಕ್ಷಣವಾದ ಮಾರ್ಗದಲ್ಲಿ ನಡೆಯುವ ನಮ್ಮಂಥವರ ಮಾರ್ಗ ಹಿಡಿದರೆ ಸ್ತ್ರೀಯರಿಗೆ ಕಷ್ಟವೆ. ನಾನು ನಿಷ್ಕಿಂಚನ, ದರಿದ್ರ. ನಿಷ್ಕಿಂಚನರಿಗೇ ಬೇಕಾದವನು. ಪ್ರಾಯಃ ಧನಿಕರು ನನ್ನ ಬಳಿಗೆ ಬರುವುದಿಲ್ಲ. ವಿವಾಹವಾಗಲಿ ಮೈತ್ರಿಯಾಗಲಿ ಕೂಡಬೇಕಾದರೆ ಧನಸಂಪತ್ತು ಮನೆತನ ಅಧಿಕಾರ ಶರೀರಾಕೃತಿ ಸೌಂದರ್ಯಗಳು ಪರಸ್ಪರ ಸಮಾನವಾಗಿರಬೇಕು. ವ್ಯತ್ಯಾಸ ವಾಗಿದ್ದರೆ ಬಹಳ ಮೇಲಿನವರಿಗೂ ಕೆಳಗಿನವರಿಗೂ ಪರಸ್ಪರ ಸಂಬಂಧ ಕೂಡುವುದಿಲ್ಲ. ನೀನು ಈ ಬಗ್ಗೆ ದೀರ್ಘಾಲೋಚನೆ ಮಾಡದೆ ನನ್ನನ್ನು ವರಿಸಿಬಿಟ್ಟೆ. ಭಿಕ್ಷುಗಳು ಸುಮ್ಮನೆ ನನ್ನನ್ನು ಹೊಗಳಿದರು ಹೊಸತು ನನ್ನಲ್ಲಿ ತಕ್ಕ ಗುಣವಿಲ್ಲ. ಇನ್ನಾದರೂ ನೀನು ನಿನಗೆ ಅನುರೂಪನಾದ ಒಬ್ಬ ಶ್ರೇಷ್ಠ ರಾಜನನ್ನು ಮದುವೆಯಾಗು. ನನಗೆ ನೀನು ಬೇಕಾಗಿಲ್ಲ. ಶಿಶುಪಾಲ

ಮುಂತಾದ ರಾಜರೂ ರುಕ್ಮಿಯೂ ನನ್ನನ್ನು ದ್ವೇಷಿಸಿದ್ದರಿಂದ ಅಹಂಕಾರಿಗಳಾದ ಆ ದುಷ್ಟರ ತೇಜೋವಧೆಗಾಗಿ ನಿನ್ನನ್ನು ನಾನು ಅಪಹರಿಸಿ ತಂದೆನಷ್ಟೆ. ನಾನು ಹೆಂಡತಿ ಮಕ್ಕಳು ಮುಂತಾದವರ ವಿಷಯದಲ್ಲಿ ಉದಾಸೀನ. ಅವರ ಅಪೇಕ್ಷೆ ಇಲ್ಲದವನು. ಸ್ವರಮಣ ಆತ್ಮಾನಂದದಿಂದಲೆ ತೃಪ್ತನಾಗಿರು ವವನು. ನನ್ನ ಕೆಲಸ ಕಾರ್ಯಗಳು ಎಲ್ಲರಂತಲ್ಲ.'

'ಕೃಷ್ಣ ತನ್ನನ್ನೆಂದು ಬಿಡಲಾರ, ತಾನು ಅವನಿಗೆ ಪ್ರಾಣಪ್ರಿಯೆ' ಎಂದು ಭಾವಿಸಿದ್ದ ರುಕ್ಮಿಣಿಯ ಗರ್ವವನ್ನು ಇಳಿಸುವುದಕ್ಕೆ ಶ್ರೀಕೃಷ್ಣ ಇಷ್ಟು ಹೇಳಿ ಸುಮ್ಮನಾದ. ದೇವಿ ತನ್ನನ್ನು ಪತಿ ಪರಿತ್ಯಾಗ ಮಾಡುವನೆ? ಎಂದು ಭೀತಳಾದಳು. ದುಃಖ ಭಯ ಶೋಕಗಳಿಂದ ಅತ್ತು ಮೈಮರೆತು ನಡುಗುತ್ತ ಬಿರುಗಾಳಿಯ ವೇಗಕ್ಕೆ ಸಿಲುಕಿದ ಬಾಳೆಗಿಡದಂತೆ ದೊಪ್ಪನೆ ಬಿದ್ದಳು.

'ತಾನು ನಟನೆಗಾಗಿ ಹಾಸ್ಯ ಮಾಡಿದೆನೆಂದು ಅರಿಯದ ಮುಗ್ಧೆ ಈಕೆ' ಎಂದು ಅನುಕಂಪೆಯಿಂದ ಶ್ರೀಕೃಷ್ಣ ಬೇಗನೆ ಮಂಚದಿಂದ ಕೆಳಗಿಳಿದು ನಾಲ್ಕೂ ತೋಳುಗಳಿಂದ ಹಿಡಿದೆತ್ತಿ ಕೆದರಿದ ಕೇಶಪಾಶವನ್ನು ಸರಿಪಡಿಸಿದ. ಮುಖವನ್ನು ನೇವರಿಸಿದ. ಕಣ್ಣೊರೆಸಿ ಆಲಿಂಗಿಸಿದ. ಸಂತೈಸಿ ನುಡಿದ–

'ಬೇಡ ದೇವಿ, ನನ್ನ ಮಾತನ್ನು ತಪ್ಪಾಗಿ ತಿಳಿಯಬೇಡ. ನೀನು ನನ್ನನ್ನೇ ನಂಬಿದವಳೆಂದು ನನಗೆ ಗೊತ್ತು. ನಿನ್ನ ಪ್ರಣಯ ಕೋಪದ ಮಾತನ್ನು ಕೇಳಬೇಕು. ಕೋಪದಿಂದ ನಿನ್ನ ತುಟಿಗಳು ಅದುರುವುದನ್ನು ಹುಬ್ಬುಗಂಟಿಕ್ಕುವುದನ್ನು ನೋಡಬೇಕು ಎಂದೇ ನಾನು ಹೀಗೆ ಮಾಡಿದೆ. ಗೃಹಸ್ಥರಿಗೆ ರಾತ್ರಿಯಲ್ಲಿ ಸ್ವಲ್ಪಕಾಲವಾದರೂ ಪ್ರಿಯೆಯೊಡನೆ ಹೀಗೆ ಸರಸವಾಡುವುದು ಬೇಕೆನಿಸುತ್ತದೆ.

ದೇವಿಗೆ ಸಮಾಧಾನವಾಯಿತು. ನಾಚಿಕೆಯಿಂದ ಓರೆನೋಟದಿಂದ ನೋಡುತ್ತ ನಸುನಗುತ್ತ ನುಡಿದಳು–

'ಹೇ ಕಮಲಾಕ್ಷ, ನಿನಗೆ ಸನರಿಲ್ಲ. ನಾವಿಬ್ಬರು ಸಮಾನರಲ್ಲ ಎಂದು ನೀನು ಹೇಳಿದ್ದು ತಪ್ಪಲ್ಲ. ಪೂರ್ಣನಾದ ನಿನಗೆ ನೀನೆ ಸಮ. ಆತ್ಮಾನಂದ ಮಗ್ನನಾದ ಸರ್ವೇಶ್ವರ ನೀನೆಲ್ಲಿ? ತ್ರಿಗುಣಾಭಿಮಾನಿನಿ

ನಿನ್ನ ಚರಣದಾಸಿ ನಾನೆಲ್ಲಿ? ರಾಜರಿಗೆ ಹೆದರಿ ನೀನು ಸಮುದ್ರಮಧ್ಯದಲ್ಲಿ ಮನೆಮಾಡಿ ಕೊಂಡಿದ್ದು ಮಾತ್ರ ನಿಜವಲ್ಲ. ಬಂಧಕಶಕ್ತಿಯನ್ನು ತೋರುತ್ತ ವಿರಾಜಮಾನವಾಗುವ ತ್ರಿಗುಣಗಳೇ ರಾಜರು. ಅವರಿಗೆ ಹೆದರುವ ಸಂಸಾರಿ ಜೀವರು ಸಮುದ್ರ ಮಧ್ಯದಲ್ಲಿ ತಪಸ್ಸು ಮಾಡಬೇಕೆಂದು ತೋರಿಸಲು ನೀನು ಸಮುದ್ರಮಧ್ಯದಲ್ಲಿ ಮನೆ ಮಾಡಿದೆ. ಬಲಿಷ್ಠರೊಂದಿಗೆ ನೀನು ವಿರೋಧ ಕಟ್ಟಿಕೊಂಡಿದ್ದು ನಿಜವೆ. ಬಲಿಷ್ಠವಾದ ಪ್ರಾಕೃತ ಇಂದ್ರಿಯಗಳಿಗೂ ನಿನಗೂ ಸದಾ ವಿರೋಧ. ನಿತ್ಯಮುಕ್ತನಾದ್ದರಿಂದ ನಿನ್ನನ್ನು ಅವು ಎಂದೂ ಪೀಡಿಸುವುದಿಲ್ಲ. ರಾಜಸಿಂಹಾಸನವನ್ನೂ ನೀನು ತ್ಯಾಗ ಮಾಡಿಲ್ಲ. ರಾಜಸಿಂಹಾಸನದಲ್ಲಿ ಕುಳಿತು ಕರ್ತವ್ಯ ಕರ್ಮ ಮಾಡದೆ ಹೆಸರಿಗೆ ಮಾತ್ರ ರಾಜರೆನಿಸಿದ ಜರಾಸಂಧಾದಿ ರಾಜರೆ 'ರಾಜಸಿಂಹಾಸನ'ರು, ರಾಜಸಿಂಹಾಸನ ಉಳ್ಳವರು. ಅವರನ್ನು ನೀನು ನಿನ್ನ ಲೋಕದಲ್ಲಿ ಆದರಿಸುವುದಿಲ್ಲ, ತ್ಯಾಗಮಾಡಿ ಅಂಧಂತಮಸ್ಸಿಗೆ ತಳ್ಳುವೆ.

ನಿನ್ನ ನಡತೆ ಧರ್ಮವೆ ಅಧರ್ಮವೆ ಎಂದು ತಿಳಿಯದೆ ಗೊಂದಲ **ಉಂಟಾಗುವುದೂ ಸರಿಯೆ.** ನಿನ್ನ ಭಕ್ತರಾದ ಜ್ಞಾನಿಗಳ ನಡೆತೆಯೇ **ಹೀಗೆ ಗೊಂದಲಕ್ಕೀಡಾಗುವಾಗ** ನಿತ್ಯಮುಕ್ತನಾದ ನಿನ್ನ ನಡತೆ **ಅಜ್ಞಾನಿಗಳಿಗೆ** ಗೊಂದಲ ಉಂಟು ಮಾಡುವುದರಲ್ಲಿ ಏನು **ಆಶ್ಚರ್ಯ?** ಜ್ಞಾನಿಗಳಿಗೂ ನಿನ್ನ ನಡತೆ ಗೊಂದಲ **ಉಂಟುಮಾಡುತ್ತಿರುವಾಗ** ಅಜ್ಞಾನಿಗಳಿಗೆ ಹಾಗೆ ಮಾಡುವುದು **ಏನಾಶ್ಚರ್ಯ? ಜ್ಞಾನಿಗಳು** ಪ್ರಾರಬ್ಧವಶದಿಂದ ಅಧರ್ಮಾಚರಣ **ಮಾಡುವುದು ಹರಿಪ್ರೀತಿಕರವೇ** ಆದ್ದರಿಂದ ಅದು ಅವರಿಗೆ ಧರ್ಮವೆ. ನೀನು **ಲೋಕವಿಲಕ್ಷಣನಾದ್ದರಿಂದ** ಏನು ಮಾಡಿದರೂ ಅದು ನಿನಗೆ **ಇಷ್ಟವಾದ್ದರಿಂದ ಧರ್ಮವೆ.** ಸ್ವಪ್ರಯೋಜನದ ಉದ್ದೇಶವಿಲ್ಲದೆ ನೀನು ಕರ್ಮ**ಮಾಡುವಾಗ ನಾನೂ** ನಿನ್ನನ್ನು ಅನುಸರಿಸಿ ನಿನ್ನ ಮಾರ್ಗವನ್ನೇ ಹಿಡಿದು **ಫಲಾಪೇಕ್ಷೆ ಇಲ್ಲದೆ** ನಿನ್ನ ಸಂತೋಷಕ್ಕಾಗಿ ಕರ್ಮ ಮಾಡಿ ಸದಾ ಸುಖವನ್ನೇ **ಹೊಂದುತ್ತಿದ್ದೇನೆ.**

ನೀನು ನಿಷ್ಕಿಂಚನ **ಹೌದು. ಆದರೆ** ದರಿದ್ರನಲ್ಲ. 'ಕಿಂಚನ' ಅಂದರೆ ಕಿಂಚಿತ್ತಾದ ಅಲ್ಪವಾದ **ಪ್ರಾಕೃತಸಂಪತ್ತು** ನಿನ್ನದಲ್ಲ. ನಿನಗೆ ಅದು ಬೇಕಾಗಿಲ್ಲ. ನಿನ್ನದು ಅಪ್ರಾಕೃತವಾದ ಮಹತ್ತಾದ ಜ್ಞಾನಾದಿಸಂಪತ್ತು.

ಈ ಅರ್ಥದಲ್ಲಿ ನೀನು 'ನಿಷ್ಕಿಂಚನ' ಹೌದು. ನೀನು ಭಕ್ತರಿಗೆ ನೀಡುವ ಸಂಪತ್ತು ಕೂಡ ಅಲ್ಪವಾದುದಲ್ಲ. ಮಹತ್ತಾದ ಮೋಕ್ಷ ಸಂಪತ್ತನ್ನು ನೀಡುವವನು. ಅದರಿಂದಲೂ ನೀನು 'ನಿಷ್ಕಿಂಚನ' ಧನಮದದಿಂದ ಕುರುಡಾದ ಧನಿಕರು ನಿನ್ನ ಬಳಿಗೆ ಬರುವುದಿಲ್ಲ [illegible] ನೀನು ಹೇಳಿದುದೂ ನಿಜವೆ. ಈ ಧನಿಕರು ತಮ್ಮೊಳಗೇ ಅಂತರ್ಯಾಮಿಯಾಗಿರುವ ನಿನ್ನನ್ನು ನೋಡದ ಕುರುಡರಾಗಿರುತ್ತಾರೆ. ಅವರು ಇಂದ್ರಿಯವಿಷಯಗಳನ್ನು ನೋಡುತ್ತ ಉಣ್ಣುತ್ತಲಿ ಇರುವವರು, ನಿನ್ನನ್ನು ಸಹಜವಾಗಿಯೇ ತಿರಸ್ಕರಿಸುತ್ತಾರೆ ಹೊರತು ಮನ್ನಿಸುವುದಿಲ್ಲ.

ನಿನಗೆ ಸಮಾನರು ಯಾರೂ ಇಲ್ಲ ಏಕೆಂದರೆ, ನಿನ್ನ ಗುಣಗಳೆಲ್ಲವೂ ಪ್ರಶಸ್ತ. ಅನ್ಯರ ಗುಣಗಳು ನಿನ್ನ ಗುಣಗಳಿಗೆ ಹೋಲಿಸಿದರೆ ಸರ್ವಥಾ ಪ್ರಶಸ್ತವಲ್ಲ. ಅದರಿಂದ ನಿನ್ನಲ್ಲಿ ಅನ್ಯರಲ್ಲಿ ಇಬ್ಬರಲ್ಲಿಯೂ ಸಮಾನವಾದ ಗುಣಗಳೇ ಇಲ್ಲ. 'ವೇದಗಳು ನಿನಗೂ ಬೇಕು, ಅನ್ಯರಿಗೂ ಬೇಕು, ಹೀಗೆ ಸಾಮ್ಯವಿದೆ' ಎನ್ನಲೂ ಬರುವುದಿಲ್ಲ. ಏಕೆಂದರೆ ಅನ್ಯರಿಗೆ ನಿನ್ನ ಸ್ತೋತ್ರ ಮಾಡಲು ನಿನ್ನ ಪೂಜೆ ಮಾಡಲು ವೇದ ಬೇಕು. ನಿನಗೆ ಸ್ತೋತ್ರ ಮಾಡಿಸಿಕೊಳ್ಳಲು ಪೂಜೆ ಮಾಡಿಸಿಕೊಳ್ಳಲು ವೇದ ಬೇಕೆಂದು ವೈಷಮ್ಯವೇ ಇದೆ. ಸ್ವರೂಪ ಸುಖಾಭಿವ್ಯಕ್ತಿ ಮುಕ್ತರಿಗೂ ನಿನಗೂ ಸಮಾನ ಎನ್ನಲೂ ಬರುವುದಿಲ್ಲ, ಏಕೆಂದರೆ ಮುಕ್ತರಿಗೆ ಹಿಂದೆ ಸಂಸಾರದಲ್ಲಿ ದುಃಖವಿತ್ತು, ನಿನಗೆ ಎಂದೂ ಸಂಸಾರವಿರಲಿಲ್ಲ. ದುಃಖವಿರಲಿಲ್ಲ.

'ಭಿಕ್ಷುಗಳು ಸುಮ್ಮನೆ ಹೊಗಳುತ್ತಾರೆ' ಎನ್ನುವುದೂ ಸರಿಯೆ ಭಿಕ್ಷುಗಳು ನಿನ್ನಿಂದ ಏನೂ ಬಹುಮಾನವನ್ನು ಬಯಸುವುದಿಲ್ಲ. ಸುಮ್ಮನೆಯೆ ಹೊಗಳುತ್ತಾರೆ. 'ನಿನ್ನಲ್ಲಿ ಗುಣವಿಲ್ಲ' ಎಂದರೆ ತ್ರಿಗುಣವಿಲ್ಲ ಎನ್ನುವುದು ನಿಜವೆ. 'ಗುಣಗಳಿಂದ ಹೀನ' ಎನ್ನುವುದೂ ನಿಜವೆ. ಗುಣಗಳಿಂದ 'ಹಿ' 'ಇನ' ಪ್ರಸಿದ್ಧನಾದ ಸ್ವಾಮಿ ನೀನು. ಸದ್ಗುಣಗಳೇ ಹೊರತು ದುರ್ಗುಣ ಒಂದೂ ನಿನ್ನಲ್ಲಿಲ್ಲ ಎಂಬುದು ಪ್ರಸಿದ್ಧವೇ ಆಗಿದೆ. ಅದರಿಂದ ನಿನ್ನನ್ನು ಸ್ವಾಮಿ ಎಂದೇ ನಾನು ವರಿಸಿದ್ದೇನೆ. 'ತಿಳಿಯದೆ ವರಿಸಿದ್ದೇನೆ' ಎಂದು ನೀನು ಹೇಳಿದ್ದೂ ಸರಿಯೆ. ನಿನ್ನ ಮಾತಿನಲ್ಲಿ ಮೇಲುನೋಟಕ್ಕೆ ಕಾಣುವ ಅಸಂಗತ ಅರ್ಥವನ್ನು ನಾನು ತಿಳಿಯದೆ,

ನಿಜವಾದ ಒಳ್ಳೆಯ ಅರ್ಥವನ್ನು ತಿಳಿದೇ ನಿನ್ನನ್ನು ವರಿಸಿದ್ದೇನೆ. 'ವೈದರ್ಭಿ' ಎಂದು ನೀನು ನನ್ನನ್ನು ಕರೆದುದು ಬಹಳ ಉಚಿತವೇ ಆಗಿದೆ. ನಮ್ಮ ಕುಲ 'ವಿದರ್ಭ' 'ವಿದ್ ಅರ್ಭ' ಅರ್ಭಕರು ಮಕ್ಕಳೂ ಕೂಡ 'ವಿದ್' ತತ್ತ್ವವೇತ್ತರಾಗಿರುತ್ತಾರೆ ಎಂದು ನೀನು ಹೊಗಳಿದಂತಾಯಿತು. 'ಅದೀರ್ಘ ಸಮೀಕ್ಷ'ಳು ದೀರ್ಘಾಲೋಚನೆ ಇಲ್ಲದವಳೆಂದು ನನ್ನನ್ನು ನೀನು ತೆಗಳಿದಂತೆ ಕಂಡರೂ ವಸ್ತುತಃ ಬ್ರಹ್ಮಾದಿಗಳ ಆಯುಷ್ಯ ಅದೀರ್ಘ, ದೀರ್ಘವಲ್ಲವೆಂದು ಆಲೋಚನ ಮಾಡಿಯೇ ನಾನು ನಿನ್ನನ್ನು ಅಂದು ಕ್ಷೀರಸಮುದ್ರ ಮಥನಕಾಲದಲ್ಲಿ ಉದ್ಭವಿಸಿದಾಗ ವರಿಸಿದ್ದೇನೆ. ಇಂದೂ ಕೂಡ ಶಿಶುಪಾಲಾದಿಗಳ ಆಯುಷ್ಯ ದೀರ್ಘವಲ್ಲವೆಂದು ದೀರ್ಘ ಆಲೋಚನೆಯಿಂದಲೇ ಅವರನ್ನು ತೊರೆದು, ನಿನ್ನನ್ನು ವರಿಸಿದ್ದೇನೆ.

ರಾಜರಿಗೆ ಭಯ ಪಟ್ಟವನೆಂದು ನೀನು ಹೇಳಿಕೊಂಡರೂ ಜರಾಸಂಧಾದಿ ರಾಜರಿಗೆ ನೀನು ಭಯಪಟ್ಟಿದ್ದು ಸುಳ್ಳು. ಸಿಂಹ ಬೇರೆ ಮೃಗಗಳನ್ನು ಓಡಿಸಿ ತನ್ನ ಕೊಳ್ಳೆಯನ್ನು ಒಯ್ಯುವಂತೆ ನೀನು ಬಿಲ್ಲಿನ ಟಂಕಾರದಿಂದ ಆ ರಾಜರನ್ನು ಓಡಿಸಿಯೇ ನನ್ನನ್ನು ಅಪಹರಿಸಿ ತಂದಿರುವೆ ತಾನೆ? ಅವರ ಭಯದಿಂದ ನೀನು ಸಮುದ್ರದಲ್ಲಿ ಮನೆ ಮಾಡಿದೆಯೇನು? ಸರ್ವಥಾ ಇಲ್ಲ.

ಧರ್ಮದ ಸೋಗಿನಿಂದ ಅಧರ್ಮ ಮಾಡುವವರ ಮಾರ್ಗವನ್ನು ಹಿಡಿದರೆ ಸ್ತ್ರೀಯರಿಗೆ ಸುಖವಿಲ್ಲ, ನಿಜ. ಆದರೆ ನಿನ್ನನ್ನು ಹೊಂದುವ ಬಯಕೆಯಿಂದ ಅಂಗರಾಜ ಪೃಥು ಭರತ ಮುಂತಾದ ರಾಜರು ನಿನ್ನ ಮಾರ್ಗವನ್ನು ಹಿಡಿದು ಕಾಡಿಗೆ ಹೋದರು. ಆಗ ಅವರ ಮಾರ್ಗ ವನ್ನು ಪತ್ನಿಯರು ಹಿಡಿದರು. ಅವರಿಗೆ ದುಃಖವಾಯಿತೆ?

ನೀನು 'ಅರ್ಥ' ಪರಮಪುರುಷಾರ್ಥ. ಬೇರೆ ಎಲ್ಲರೂ 'ಪ್ರತ್ಯರ್ಥ'ರು 'ಅರ್ಥ'ಕ್ಕೆ ಪ್ರತಿಬಿಂಬಭೂತರು. ಸ್ವತಃ ಅರ್ಥರಲ್ಲ, ಎಂದು ತಿಳಿದ ಯಾವ ಸ್ತ್ರೀ ಇಹಪರಗಳೆರಡರಲ್ಲಿಯೂ ಕಾಮಿತಾರ್ಥ ಪ್ರದನಾದ ನಿನ್ನನ್ನು ಬಿಡುತ್ತಾಳೆ ಮತ್ತು ನಶ್ವರ ಲೌಕಿಕ ಸಂಪತ್ತನ್ನು ಕೂಡಿಟ್ಟು ಅದು ನಾಶವಾದೀತೆಂದು ಭಯಪಡುವ ಬೇರೆ ಯವರನ್ನು ವರಿಸುತ್ತಾಳೆ?

ನನ್ನನ್ನು 'ಭ್ರಮತಿ' ಎಂದು, 'ಭ್ರಮಿಸುವ ಸ್ವಭಾವದ ದುರ್ಜನರನ್ನು

ನಿತ್ಯ ನರಕದಲ್ಲಿ ತಳ್ಳುವವಳೆಂ'ದು ಶ್ರುತಿಗಳು ಕೊಂಡಾಡುತ್ತಿವೆ. ನನಗೆ ಅಂಥ ಸಾಮರ್ಥ್ಯ ನೀಡಿದ ನಿನ್ನನ್ನೇ ನಾನು ವರಿಸುವುದು ನ್ಯಾಯವಾಗಿದೆ.

ನೀನು ಹೇಳಿದ ಶಿಶುಪಾಲಾದಿ ರಾಜರು ಊರಿಗೆ ಅರಸರಾದರೂ ಹೆಂಡತಿಗೆ ಗುಲಾಮರು. ಬ್ರಹ್ಮರುದ್ರಾದಿಗಳ ಸಭೆಗಳಲ್ಲಿ ಕೊಂಡಾಡಲ್ಪಡುವ ನಿನ್ನ ಕಥೆ ಅವರ ಕಿವಿಯ ಬಳಿಗೇ ಹೋಗಲಾರದು. ಅಂಥವರು ಯಾವ ಸ್ತ್ರೀಗೆ ಪತಿಗಳಾದಾರು?

ಬೇರೆ ರಾಜರುಗಳ ರಕ್ತ ಮಾಂಸ ಮಲ ಮೂತ್ರಮಯವಾದ ಹೇಯವಾದ ಜಡಶರೀರವನ್ನು ಕಾಮಿಸಿ ವರಿಸುವವಳು ನಾನಲ್ಲ. ಚಿನ್ಮಯಿಯಾದ ನಾನು ಚಿನ್ಮಯನಾದ ನಿನ್ನ ಪವಿತ್ರ ಸುಂದರ ಶರೀರವನ್ನೇ ಬಯಸುತ್ತೇನೆ.

ನೀನು ಸ್ವರಮಣನಾದರೂ ಉದಾಸೀನನಲ್ಲ. ನಮ್ಮ ಭಕ್ತಿಗೆ ಒಂದಿಷ್ಟೂ ಹೆಚ್ಚು ಕಡಿಮೆ ಇಲ್ಲದೆ ಅನುಗ್ರಹದೃಷ್ಟಿ ಬೀರುವವನು ನೀನು. ತ್ರಿಗುಣಗಳಿಂದ ಜಗತ್ತನ್ನು ಸೃಜಿಸುವ ಕಾಲದಲ್ಲಿ ತ್ರಿಗುಣಾಭಿಮಾನಿನಿಯಾದ ನನ್ನ ಮೇಲೆ ಅಮೋಘವಾದ ಅನುಗ್ರಹ ದೃಷ್ಟಿ ಹಾಯಿಸುವಿ.

ಹೇ ಮಧುಸೂದನ, ಕನ್ಯಾದಾನದ ಮಾತುಕತೆಗಳಲ್ಲಿ ತಾಯಿಯ ಆಸಕ್ತಿ ತೋರಿಕೆಯದಲ್ಲ. ಅವಳು ಪ್ರೀತಿಪೂರ್ವಕವಾಗಿ ಆಡುವ ಮಾತು ಪ್ರಾಯಃ ಸುಳ್ಳಾಗುವುದಿಲ್ಲ. ಹಾಗೇ ನಿನ್ನ ಮಾತೂ ಎಂದೂ ಸುಳ್ಳಾಗುವುದಿಲ್ಲ.

ವ್ಯಭಿಚಾರ ನಿರತಳಾದ ಸ್ತ್ರೀಯನ್ನು ಯಾರೂ ಪರಿಗ್ರಹಿಸುವುದಿಲ್ಲ, ಪರಿಗ್ರಹಿಸಬಾರದು. ಅಂಥ ಪಿಂಗಳೆಯಂಥ ಸ್ತ್ರೀಯೂ ನಿನ್ನನ್ನು ಒಮ್ಮೆ ಸೇರಿದಳೆಂದರೆ ಸದಾ ಸಂತೋಷದಿಂದ ನಿನ್ನನ್ನೇ ಭಜಿಸುವಳೆಂದ ಮೇಲೆ ನಾನು ನಿನ್ನ ನಿತ್ಯಾವಿಯೋಗಿನಿ ಪತ್ನಿಯಾಗಿರುವುದರಲ್ಲಿ ಏನಾಶ್ಚರ್ಯ?

ಹೀಗೆ ರುಕ್ಮಿಣಿ ಶ್ರೀಕೃಷ್ಣನಲ್ಲಿ ಎಳ್ಳಷ್ಟೂ ದೋಷ ಕಲ್ಪನೆಯನ್ನು ಸಹಿಸಲಾರದವಳು ಎನ್ನುವುದು ಅವಳ ಮಾತಿನಿಂದ ವ್ಯಕ್ತವಾಯಿತು. ಶ್ರೀಕೃಷ್ಣ ಅವಳಿಗೆ ತನ್ನಲ್ಲಿ ಕೋಪಬರಿಸಲು ನಾನಾ ರೀತಿ ಯತ್ನಿಸಿದರೂ

ಅವಳಿಗೆ ಆತನಲ್ಲಿ ಪ್ರೀತಿ ಕಿಂಚಿತ್ತೂ ಕಡಿಮೆಯಾಗಲಿಲ್ಲ. ಅವಳಂತೆ ಪತಿಪ್ರೇಮ ಉಳ್ಳವಳು ಪ್ರಪಂಚದಲ್ಲಿಯೇ ಇನ್ನೊಬ್ಬಳಿಲ್ಲ. ಸ್ವಯಂವರಕಾಲದಲ್ಲಿ ಶ್ರೀಕೃಷ್ಣನ ಆಗಮನದಲ್ಲಿ ಸ್ವಲ್ಪ ವಿಲಂಬ ವಾಯಿತೆಂದು ದೇವಿಗೆ ಶರೀರತ್ಯಾಗ ಮಾಡಬೇಕೆನಿಸಿತು. 'ಇಂಥ ಪ್ರೀತಿಗೆ ಪ್ರತಿಯಾಗಿ ತಾನು ಅವಳಿಗೆ ಏನು ಕೊಡಬಲ್ಲೆ? ಕೇವಲ ಅಭಿನಂದಿಸಬಲ್ಲೆ' ಎನ್ನುತ್ತಾನೆ ಶ್ರೀಕೃಷ್ಣ

❖❖❖

ಶ್ರೀಕೃಷ್ಣ ರುಕ್ಮಿಣಿಯೊಂದಿಗೆ ಪ್ರೇಮಕಲಹವಾಡುವಾಗ ತಾನು ತನ್ನ ಬಗ್ಗೆ ಆಡಿದ ನಿಂದೆಯ **ಮಾತುಗಳಿಗೆ ರುಕ್ಮಿಣಿ** ಸ್ತುತಿಪರವಾಗಿ ವ್ಯಾಖ್ಯಾನ ಮಾಡುತ್ತಿದ್ದಾಳೆ.

ತಾನ್ ಪ್ರಾಪ್ತಾನರ್ಥಿನೋ ಹಿತ್ವಾ ಚೈದ್ಯಾದೀನ್ ಸ್ಮರದುರ್ಮದಾನ್ ।
ದತ್ತಾ ಭ್ರಾತ್ರಾ ಸ್ವಪಿತ್ರಾ ಚ ಕಸ್ಮಾದ್ ದೇವವೃಷೋಪಮಾನ್ ॥

ಎಂದು ಶ್ರೀಕೃಷ್ಣ ಕೇಳಿದ್ದಕ್ಕೆ ಉತ್ತರವಾಗಿ ಹೀಗೆ ಹೇಳುತ್ತಿದ್ದಾಳೆ—

ನನ್ವೇತದೇವಮರವಿಂದವಿಲೋಚನಾಹ
ಯದ್ವೈ ಭವಾನ್ನ ಭವತಃ ಸದೃಶೋ ವಿಭೂಮ್ನಃ ।
ಕ್ವ ಸ್ವೇ ಮಹಿಮ್ನ್ಯಭಿರತೋ ಭಗವಾಂಸ್ತ್ರ್ಯಧೀಶಃ
ಕ್ವಾಹಂ ಗುಣಪ್ರಕೃತಿರಜ್ಞಗೃಹೀತಪಾದಾ ॥ ೩೮ ॥

ಹೇ ಕಮಲಾಕ್ಷ ನೀನು ದೇವೋತ್ತಮರಿಗೆ ಸಮನಲ್ಲ ಎಂದು ನೀನು ಹೇಳಿದುದು ನಿಜ. **ಪೂರ್ಣನಾದ** ನಿನಗೆ ಪೂರ್ಣನಾದ ನೀನೇ ಸಮ. ನಾನೂ ನಿನಗೆ ಸಮಳಲ್ಲ. **ಸ್ವಾನಂದಾನುಭವ** ಮಗ್ನನಾದ ತ್ರಿಲೋಕಸ್ವಾಮಿ ತ್ರಿಗುಣಸ್ವಾಮಿಯಾದ ಭಗವಂತ ನೀನೆಲ್ಲಿ, **ತ್ರಿಗುಣಾತ್ಮಕ** ಪ್ರಕೃತ್ಯಭಿಮಾನಿನಿ, ನಿನ್ನ ಪಾದಗಳನ್ನಾಶ್ರಯಿಸಿ ದವಳು ನಾನೆಲ್ಲಿ?

ಇಲ್ಲಿ 'ಯದ್ ವೈ **ಭವಾನ್** ನ ಭವತಃ ಸದೃಶೋ ವಿಭೂಮ್ನಃ' ಎಂಬ ನಮ್ಮ ಪ್ರಾಚೀನಪಾಠವನ್ನು ತಿದ್ದಿ **'ಯದ್ ವೈ ಭವಾನ್** ಭಗವತೋಽಸದೃಶೀ ವಿಭೂಮ್ನಃ' ಎಂದು ಪರಿವರ್ತನೆ **ಮಾಡಿ, 'ಕಸ್ಮಾದ್** ದೇವವೃಷೋಪಮಾನ್' ಎಂಬುದನ್ನು 'ಕಸ್ಮಾನ್ನೋ ವವೃಷೇಽಸಮಾನ್' ಎಂದು ಪರಿವರ್ತಿಸಿಕೊಂಡಿದ್ದಾರೆ ಬೇರೆ ವ್ಯಾಖ್ಯಾನ ಕಾರರು. ಶ್ರೀಕೃಷ್ಣ ತಾನು ತನ್ನನ್ನು ರುಕ್ಮಿಣಿಗೆ 'ಅಸಮ' ಅಂದರೆ ಸಮಾನನಲ್ಲ

ವೆನ್ನುತ್ತಿದ್ದಾನೆ. ರುಕ್ಮಿಣಿ ಅದಕ್ಕೆ ಉತ್ತರವಾಗಿ 'ತಾನೇ ತನ್ನನ್ನು ಕೃಷ್ಣನಿಗೆ **ಸಮಾನಳಲ್ಲ** ಅಸದೃಶೀ' ಎನ್ನುತ್ತಿದ್ದಾಳೆ. ಜೊತೆಗೆ, 'ನೀನು ನಿನ್ನನ್ನು ನನಗೆ ಸಮಾನನಲ್ಲ **ಎಂದುದು** ತಪ್ಪು' ಎನ್ನದೆ, 'ನೀನು ಹೇಳಿದ್ದು ಸರಿಯೆ' ಎನ್ನುತ್ತಿದ್ದಾಳೆ! ಇದು **ವ್ಯಾಹತ**.

ಈ ವ್ಯಾಹತಿ ಪರಿಹಾರಕ್ಕಾಗಿ ಜೀವಗೋಸ್ವಾಮಿ ವೀರರಾಘವ **ವ್ಯಾಖ್ಯಾನಗಳಲ್ಲಿ** 'ಅಸದೃಶೀ' 'ತಾನು ಕೃಷ್ಣನಿಗೆ ಸಮಾನಳಲ್ಲ' ಎಂದು ಕೃಷ್ಣ ಹೇಳಿದ್ದು **ಸರಿಯೆ** ಎಂದು ವಿವರಣೆ ನೀಡಿದ್ದಾರೆ. 'ಅಸದೃಶೀ' ಎನ್ನುವುದು ಕೃಷ್ಣ ಹೇಳಿದ್ದರ **ಅನುವಾದ**[೧] ಎಂದಿದ್ದಾರೆ. ಆದರೆ ಕೃಷ್ಣ 'ಅಸಮಾನ್' ಎಂದು ತನ್ನನ್ನು ರುಕ್ಮಿಣಿಗೆ **ಸಮಾನನಲ್ಲ** ಎಂದಿದ್ದಾನೆ. ಇದು ಅಸದನುವಾದವಾಗುವುದು. ಈ ಪ್ರಶ್ನೆಯನ್ನು **ಎತ್ತಿಕೊಂಡು** ವೀರರಾಘವವ್ಯಾಖ್ಯಾನದಲ್ಲಿ 'ತನ್ನನ್ನು ರುಕ್ಮಿಣಿಗೆ ಸಮಾನನಲ್ಲ ಎಂದಿದ್ದ**ರೂ ರುಕ್ಮಿಣಿ** ತನಗೆ ಸಮಾನಳಲ್ಲ ಎನ್ನುವುದು ಅಭಿಪ್ರಾಯವಾಗಿತ್ತು ಎಂದಿದೆ. **ಇದು ಸರಿಯಲ್ಲ** ಶ್ರೀಕೃಷ್ಣ ತನ್ನನ್ನು ತಾನು ಶಿಶುಪಾಲಾದಿರಾಜರಿಗೆ ಸಮನಲ್ಲ, ರಾಜನೆ ಅ**ಲ್ಲ ನಿಷ್ಕಿಂಚನ**, ದರಿದ್ರ ಎಂದು ಮುಂತಾಗಿ ಮೊದಲಿಂದ ಕೊನೆವರೆಗೂ ಹೇಳುತ್ತ **ರುಕ್ಮಿಣಿಗೆ ನಾನು** ಸಮನಲ್ಲ, ಆದರೂ ರಾಜರ ಕೊಬ್ಬನ್ನು ಇಳಿಸುವುದಕ್ಕಾಗಿ ರುಕ್ಮಿಣಿಯನ್ನು ಬ**ಲಾತ್ಕಾರ**ಇ ತಂದೆ ಎನ್ನುತ್ತಾನೆ ಹೊರತು ರುಕ್ಮಿಣಿ ನನಗೆ ಸಮಾನಳಲ್ಲ ಎಂದು ಎಲ್ಲಿ**ಯೂ ಹೇಳಲ್ಲ**.

'ಪ್ರಕೃತಿರ್ವಾವ ಸಮಾಸಮಾ' ಎಂದು ಶ್ರುತಿ ಇರುವುದರಿಂದ **ರುಕ್ಮಿಣಿ ಕೃಷ್ಣನಿಗೆ** ಸಮಳೂ, ಅಸಮಳೂ ಆಗಿರುವಾಗ ಸಮಳಲ್ಲ ಎನ್ನುವ ಅಭಿಪ್ರಾಯ**ವೂ ಅವಳಿಗೆ** ಇರಲಾರದು. ಆದರೂ ದೇಶಕಾಲಗಳಲ್ಲಿ ಸಮಳಾದರೂ ಗುಣದ**ಲ್ಲಿ ಸಮಳಲ್ಲ** ಎಂದು ಹೇಳುತ್ತಾಳೆ ವಿನಯದಿಂದ.

ಅದರಿಂದ 'ಭಗವತೋಽ ಸದೃಶೀ ವಿಭೂಮ್ನಃ' ಎಂಬ ಪಾಠ **'ಕಸ್ಮಾನ್ನೋ** ವವೃಷೇಽಸಮಾನ್' ಎಂಬ ಶ್ಲೋಕಪಾಠಕ್ಕೆ ಹೊಂದಿಕೆಯಾಗುವುದಿಲ್ಲ. **ಈ ಎರಡೂ** ಆಧುನಿಕ ಪಾಠಗಳನ್ನು ತ್ಯಜಿಸಬೇಕು. ಪ್ರಾಚೀನ ಪಾಠಗಳನ್ನಿಟ್ಟುಕೊಂಡು **ವ್ಯಾಖ್ಯಾನಿಸ**ಬೇಕು. ಅದು ಹೀಗೆ—'ಶಿಶುಪಾಲಾದಿಗಳು ದೇವೋತ್ತಮರಿಗೆ **ಸಮಾನರು** 'ದೇವವೃಷೋಪಮಾನ್' ತಾನು ಅಂಥವನಲ್ಲ, ಆದರೆ ಅವರ **ಕೊಬ್ಬನ್ನೂ** ಇಳಿಸಿದವನು ನಾನು.- ನನಗೆ ಸಮಾನ ಇಲ್ಲ' ಎನ್ನುತ್ತಾನೆ **ಶ್ರೀಕೃಷ್ಣ ರುಕ್ಮಿಣಿ** ಹೇಳುತ್ತಾಳೆ, 'ನೀನು ಹೇಳುವುದು ಸರಿಯೆ. ನೀನು ಯಾರಿಗೂ **ಸಮಾನನಲ್ಲ** ನನಗೆ

---

೧. ಅಹಂ ಭವತೋಽ ಸದೃಶೀ ಅಸಮಾನೇತಿ ಯದ್ ಭವಾನು**ವಾಚೇತ್ಯನುವಾದಃ।** ಯದ್ಯಪ್ಯಸಮಾನಿತಿ ಭಗವದುಕ್ತ್ಯಾಭವತ್ಯಾ ಅಹಮಸಮಃ ಇತಿ ಪ್ರ**ತೀಯತೇ। ಏವಂಚ ಮಮ** ಭವಾನಸಮ ಇತಿ ಯದಿತ್ಯೇವಮೇವಾನುವದಿತವ್ಯಂ। ತಥಾಪಿ **ಭಗವದಭಿಪ್ರಾಯ-**ಕ್ರೋಡೀಕಾರೇಣಾನೂದಿತಂ। **-ವೀರರಾಘವಃ**

ಸಮಾನನೂ ಯಾರು ಇಲ್ಲ. 'ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ' ಬಾನಿಗೆ ಬಾನೇ ಸಮ, ಕಡಲಿಗೆ ಕಡಲೇ ಸಮ ಎಂಬಂತೆ ನೀನು ನಿನಗೇ ಸಮಾನ. ನೀನೇ ನಿನಗೆ ಸಮಾನ. 'ಭವಾನೇವ ಭವತಃ ಸದೃಶಃ' ಎಂದು.

ಭವಾನೇವ ಭವತಃ ಸದೃಶಃ ।

ನೀನೇ ನಿನಗೆ ಸಮಾನ.

❖❖❖

ಪ್ರಣಯಕಲಹದಲ್ಲಿ ಶ್ರೀಕೃಷ್ಣ 'ಪ್ರಾಯಸ್ತ್ಯಕ್ತನೃಪಾಸನಾನ್' 'ನಾನು ರಾಜ ಸಿಂಹಾಸನ ತ್ಯಾಗ ಮಾಡಿದವನು' ಎಂದುದಕ್ಕೆ ರುಕ್ಮಿಣಿ ಅದರ ಅಂತರಾರ್ಥವನ್ನು ಹೇಳುತ್ತಾಳೆ.

ಸತ್ಯಂ ಭಯಾದಿವ ಗುಣೇಭ್ಯ ಉರುಕ್ರಮಾಂತಃ
ಶೇತೇ ಸಮುದ್ರ ಉಪಲಂಭನಮಾತ್ರ ಆತ್ಮಾ ।
ಯೋಽನಿತ್ಯಕೇಂದ್ರಿಯಗಣೈಃ ಕೃತವಿಗ್ರಹಸ್ತ್ವಂ
ತ್ವತ್ಸೇವಯಾ ನೃಪಪದಂ ವಿಧುತಂ ತಮೋಽಂಧಮ್ ॥ ೩೯ ॥

ಹೇ ತ್ರಿವಿಕ್ರಮ, ಅಪ್ರಾಕೃತ ಜ್ಞಾನ ಮಾತ್ರ ಸ್ವರೂಪನಾದ ಜಗದೊಡೆಯನಾದ ನೀನು ಸಮುದ್ರದಲ್ಲಿ ಮನೆ ಮಾಡಿಕೊಂಡಿದ್ದು ನಿಜವೆ. ಆದರೆ ಜರಾಸಂಧಾದಿ ರಾಜರಿಗೆ ಹೆದರಿ ಹಾಗೆ ಮಾಡಿಲ್ಲ. ಪ್ರಕೃತಿಯ ಸತ್ವರಜಸ್ತಮೋಗುಣಗಳೇ 'ರಾಜ'ರು. ತಮ್ಮ ಬಂಧಕ ಶಕ್ತಿಯನ್ನು ಪ್ರದರ್ಶಿಸುತ್ತ ವಿರಾಜಮಾನರಾಗುವ ರಾಜರು. ಅವರಿಗೆ ಹೆದರುವ ಸಂಸಾರಿಜೀವರು ಸಮುದ್ರ ಮಧ್ಯದಲ್ಲಿ ತಪಸ್ಸು ಗೈಯಬೇಕು. ('ದಶಕಲ್ಪಂ ತಪಶ್ಚೀರ್ಣಂ' ಅನುವ್ಯಾಖ್ಯಾನ. ಜಲಧಿಯೊಳು ಹತ್ತು ಕಲ್ಪದಿ ತಪವ ಗೈದು- ಹರಿ.ಸಾ.೧-೧೧) ಎಂದು ತಿಳಿಸಲು ನೀನು ಸಮುದ್ರ ಮಧ್ಯದಲ್ಲಿ ವಾಸ ಮಾಡುವೆ. ಬಲಿಷ್ಠರೊಂದಿಗೆ ನೀನು ವಿರೋಧ ಕಟ್ಟಿಕೊಂಡಿದ್ದೂ ನಿಜವೆ. ಆದರೆ ಬಲಿಷ್ಠರು, ಪ್ರಾಕೃತ ಅನಿತ್ಯ ಇಂದ್ರಿಯಗಣಗಳು. ಅವರು ಪ್ರಬಲರಾಗಿದ್ದು ಸಂಸಾರಿಗಳಾದ ದೇವತೆಗಳಿಂದಲೂ ವಿಷಯಾಸಕ್ತಿಯ ಮೂಲಕ ಪಾಪ ಮಾಡಿಸುವರು. ಅವರನ್ನು ನೀನು ವಿರೋಧಿಸುವೆ. ನಿತ್ಯಮುಕ್ತನಾಗಿದ್ದು ಪ್ರಾಕೃತೇಂದ್ರಿಯವಶನಾಗದ ನೀನು ಅವರ ವಿರೋಧ ಕಟ್ಟಿಕೊಂಡಿರುವೆ. 'ಕೃತವಿಗ್ರಹ'ನಾಗಿರುವೆ. ಅವರು ನಿನ್ನಿಂದ ಬಲುದೂರವಿರುತ್ತಾರೆ. 'ತ್ಯಕ್ತನೃಪಾಸನ'ನೆಂದು ನೀನು ನಿನ್ನನ್ನು ಹೇಳಿಕೊಂಡಿದ್ದೂ ನಿಜವೆ. 'ನೃಪಾಸನ'ರು ರಾಜಸಿಂಹಾಸನದಲ್ಲಿ ಕುಳಿತು ಹೆಸರಿಗೆ ಮಾತ್ರ ರಾಜರೆನಿಸಿದ

ಜರಾಸಂಧಾದಿ ದುಷ್ಟ ರಾಜರು. ಇಂಥಾ ರಾಜರನ್ನು ನೀನು ನಿನ್ನ ಸೇವಕಳಾದ ನನ್ನ ಮೂಲಕ ಅಂಧಂತಮಸಿನಲ್ಲಿ ತ್ಯಕ್ತ ಮಾಡಿದವನು, ಎಸೆದವನು ನೀನು. ಅಂಧಂತಮಸ್ಸಿಗೆ ಅಭಿಮಾನಿನಿ ದುರ್ಗೆ ನಾನು, ನಿನ್ನ ಸೇವೆಯ ಬಲದಿಂದ ಈ ಕಾರ್ಯವನ್ನು ಮಾಡುತ್ತಿದ್ದೇನೆ.

ಇಲ್ಲಿ 'ತ್ವತ್ಸೇವಯಾ' ಎಂಬುದನ್ನು ಬೇರೆ ವ್ಯಾಖ್ಯಾನಕಾರರು 'ತ್ವತ್ಸೇವಕೈಃ' ಎಂದು ವ್ಯತ್ಯಾಸಮಾಡಿದ್ದಾರೆ. ನಿನ್ನ ಸೇವಕರು ಕೂಡ ರಾಜಸಿಂಹಾಸನವನ್ನು ಬಯಸುವುದಿಲ್ಲ. ಇನ್ನು ನೀನೇಕೆ ಬಯಸುವೆ? ಎಂದರ್ಥ ಎನ್ನುತ್ತಾರೆ.

ಆದರೆ ಭಗವಂತನ ಸೇವಕರಾದ ಉಗ್ರಸೇನ ಯುಧಿಷ್ಠಿರ ಮುಂತಾದವರು ರಾಜಸಿಂಹಾಸನದಲ್ಲಿ ಕುಳಿತರು. ಶ್ರೀಕೃಷ್ಣನೇ ಅವರನ್ನು ಕೂಡಿಸಿದ. ಮತ್ತು ಅವರಿಗೆ ರಾಜಸಿಂಹಾಸನ 'ಅಂಧಂತಮಸ್ಸೆ'ನಿಸಲೂ ಇಲ್ಲ. ಅಂಧಂತಮಸ್ಸೆಂದರೆ [೧]ವೀರ ರಾಘವ ವ್ಯಾಖ್ಯಾನ ಹೇಳುವಂತೆ ನರಕಸಾಧನ. ಉಗ್ರಸೇನ ಯುಧಿಷ್ಠಿರ ಮುಂತಾದವರಿಗೆ ನರಕಸಾಧನವಾಗಲಿಲ್ಲ. [೨]ಶ್ರೀಧರವ್ಯಾಖ್ಯಾನ ಹೇಳುವಂತೆ ರಾಜ ~~ಸಿಂಹಾಸನ ಅವಿವೇಕಕ್ಕೆ ಕಾರಣ. ಉಗ್ರಸೇನ ಯುಧಿಷ್ಠಿರಾದಿಗಳಿಗೆ ರಾಜಸಿಂಹಾಸನ~~ ದಲ್ಲಿ ಕುಳಿತಿದ್ದರಿಂದ ಅವಿವೇಕವೇನೂ ಉಂಟಾಗಲಿಲ್ಲ. ರಾಜಸಿಂಹಾಸನದಲ್ಲಿ ಕುಳಿತವರು ಉಗ್ರಸೇನಾದಿಗಳು ಅಂಧರಾಗಲಿಲ್ಲ, ಸಜ್ಜನವಿರೋಧಿಗಳಾಗಲೂ ಇಲ್ಲ. 'ತ್ಯಕ್ತ ನೃಪಾಸನಾನ್' ಎಂದಿಷ್ಟೇ ಹೇಳದೆ 'ಪ್ರಾಯಸ್ತ್ಯಕ್ತನೃಪಾಸನಾನ್' ಎಂದಿದ್ದರಿಂದ, ಕೆಲವು ಉಗ್ರಸೇನ ಮುಂತಾದವರನ್ನು ಬಿಟ್ಟರೆ, ವೇನ ಮುಂತಾದವರೆಲ್ಲರೂ ಪ್ರಾಯಃ ಅಂಧರಾಗಿ ಸಜ್ಜನವಿರೋಧ ಮಾಡಿ ನರಕ ಭಾಗಿಗಳಾದರು ಎಂದು ಅಭಿಪ್ರಾಯ ಇಟ್ಟುಕೊಂಡರೆ ತಪ್ಪಿಲ್ಲ. ಆದರೆ [೩]ವಲ್ಲಭ ವ್ಯಾಖ್ಯಾನ ಹೇಳುವಂತೆ 'ಪ್ರಾಯಃ' ಎಂಬ ಶಬ್ದಕ್ಕೆ ಈ ಅಭಿಪ್ರಾಯವಿಲ್ಲ. 'ರಾಜಸಿಂಹಾಸನ ಪಾರಮಾರ್ಥಿಕ ದೃಷ್ಟಿಯಿಂದ

---

೧. ನೃಪಾಣಾಂ ಪರಮಾಸನಮಂಧಂ ಗಾಢಂ ತಮ ಏವ। ತಮಃ ಶಬ್ದೋಽತ್ರ ನರಕಪರ್ಯಾಯಸ್ತದ್ಧೇತುಪರಃ। ನರಕಾವಹಮಿತ್ಯರ್ಥಃ। ಹೇತುಗರ್ಭಮಿದಂ। ತತ್ತಾನ್ನೃಪಪದಂ ತ್ವತ್ಸೇವಕೈರೇವ ವಿಧುತಂ ತುಚ್ಛೀಕೃತ್ಯ ತ್ಯಕ್ತಂ। ಕಿಂ ಪುನಸ್ತ್ವಯೋಭಯ ವಿಭೂತಿ ನಾಯಕೇನ ತ್ಯಕ್ತಮಿತಿ। -ವೀರರಾಘವಃ

೨. ಯದುಕ್ತಂ ತ್ಯಕ್ತನೃಪಾಸನಾನಿತಿ ತದಪಿ ಯುಕ್ತಮೇವೇತ್ಯಾಹ ತ್ವತ್‌ಸೇವಕೈರಿತಿ– ನೃಪಾಣಾಂ ಪದಮಾಸನಮಂಧಂ ಗಾಢಂ ತಮ ಏವ ತತ್ ಅವಿವೇಕ ಬಹುಲತ್ವಾತ್। ತ್ವತ್ಸೇವಕೈರೇವ ತತ್ತ್ಯಕ್ತಂ। ಕಿಂ ಪುನರ್ವಕ್ತವ್ಯಂ ತ್ವಯಾ ತ್ಯಕ್ತಮಿತಿ। -ಶ್ರೀಧರಃ

೩. ಸ್ಪಷ್ಟಂ ತದ್ಗತಂ ದೋಷಮಾಹ ತಮೋಽಂಧಮಿತಿ। ತತ್ರೋಪವಿಷ್ಟೋಽಂಧೋ ಭವತಿ। ತಮ ಇವ ಸದ್ವಿರೋಧೀ ಚ ಭವತಿ। ಪ್ರಾಯಃ ಪದಂ ಲೌಕಿಕ ದೃಷ್ಟ್ಯಾಽಪೇಕ್ಷಿತಮಿತಿ ನ ನಿರಾಕೃತಂ। -ವಲ್ಲಭಃ

ನರಕಾದ್ಯನರ್ಥಸಾಧನವಾದರೂ ಲೌಕಿಕ ದೃಷ್ಟಿಯಿಂದ ಅದನ್ನು ನಿನ್ನ ಸೇವಕರು ಕೂಡ ಅಪೇಕ್ಷಿಸುತ್ತಾರೆ' ಈ ಅಭಿಪ್ರಾಯದಿಂದ 'ಪ್ರಾಯಃ' ಎಂದು ಶ್ಲೋಕದಲ್ಲಿ ಇದೆ ಎಂದು ವಲ್ಲಭಾಚಾರ್ಯ ವ್ಯಾಖ್ಯಾನ ಹೇಳಿದೆ. ವಸ್ತುತಃ ಪಾರಮಾರ್ಥಿಕ ದೃಷ್ಟಿಯಿಂದ ರಾಜಸಿಂಹಾಸನ ಭಗವಂತನ ಸೇವಕರಿಗೆ ನರಕಸಾಧನವಾದುದು ಎಲ್ಲೂ ಕಂಡಿಲ್ಲ. ಅವರಿಗೆ ಅದು ಶ್ರೇಯಃಸಾಧನವೇ ಆಗಿದೆ. 'ಪುಣ್ಯಶ್ಲೋಕೋ ನಲೋ ರಾಜಾ' ಎನ್ನುವಂತೆ ಭಗವದ್ಭಕ್ತರಾದ ರಾಜರೆಲ್ಲರೂ ಪುಣ್ಯಕೀರ್ತಿಶಾಲಿಗಳಾಗಿ ಮೆರೆದರು. ಅವರು ಲೌಕಿಕದೃಷ್ಟಿಯಿಂದ ರಾಜಸಿಂಹಾಸನವನ್ನು ಬಯಸಿದವರಲ್ಲ. ಪ್ರಿಯವ್ರತ ರಾಜನನ್ನು ಬ್ರಹ್ಮದೇವರು ಸ್ವತಃ ಬಂದು ಒತ್ತಾಯ ಮಾಡಿ ಸಿಂಹಾಸನದಲ್ಲಿ ಕೂಡಿಸಿದರೆಂದು ಭಾಗವತವೇ ಹೇಳಿದೆ. ರಾಜಸಿಂಹಾಸನ ಪ್ರಿಯವ್ರತನಿಗೆ ಪಾರಮಾರ್ಥಿಕವಾಗಿ ಶ್ರೇಯಃ ಸಾಧನವಾಗಿತ್ತು.

ಹೀಗೆ, 'ಭಗವದ್ಭಕ್ತರು ರಾಜಸಿಂಹಾಸನವನ್ನು ನರಕಸಾಧನವೆಂದು ತುಚ್ಛೀಕರಿಸಿ ತ್ಯಜಿಸಿದರು' ಎನ್ನುವುದೇ ಸತ್ಯಕ್ಕೆ ದೂರವೆಂದ ಮೇಲೆ 'ನೀನು ತ್ಯಜಿಸಿರುವೆ ಎಂದು ಬೇರೇನು ಹೇಳಬೇಕು?' ಎಂಬ ಕೈಮುತ್ಯನ್ಯಾಯಕ್ಕೆ ಅವಕಾಶವಿಲ್ಲ. ಹೀಗಾಗಿ 'ತ್ವತ್ಸೇವಕೈಃ' ಎಂಬ ಪಾಠ ಯುಕ್ತವಲ್ಲ. 'ತ್ವತ್ಸೇವಯಾ' ಎಂದಾಗಬೇಕು. 'ನಿನ್ನ ಸೇವೆಯಿಂದ ನಿನ್ನ ಸೇವೆಗಾಗಿ ನಾನು 'ನೃಪಾಸನ'ರನ್ನು, ಅಂದರೆ ನೃಪಾಸನದಲ್ಲಿ ಕುಳಿತ ದುಷ್ಟರಾದ ವೇನ ಮುಂತಾದ ರಾಜರನ್ನು ಅಂಧಂತಮಸ್ಸಿಗೆ ಎಸೆದಿದ್ದೇನೆ. ಹೀಗೆ ನನ್ನ ಮೂಲಕ ನೀನೇ 'ನೃಪಾಸನ'ರನ್ನು ನರಕದಲ್ಲಿ 'ತ್ಯಕ್ತ'ರನ್ನಾಗಿ ಮಾಡಿರುವೆ. ಅದರಿಂದ ನೀನು 'ತ್ಯಕ್ತ ನೃಪಾಸನ' ನೆನಿಸಿರುವೆ, ಹೊರತು ರಾಮಾವತಾರದಲ್ಲಿ ಸಾರ್ವಭೌಮರಾಜನಾಗಿದ್ದ ನೀನು ರಾಜಸಿಂಹಾಸನವನ್ನು ತ್ಯಾಗ ಮಾಡಿದವನಲ್ಲ. ನೀನು ರಾಜಸಿಂಹಾಸನವನ್ನು ಉಗ್ರಸೇನನಿಗೆ ಬಿಟ್ಟುಕೊಟ್ಟರೂ ಅದು ನರಕಸಾಧನವೆಂಬ ಅಭಿಪ್ರಾಯದಿಂದಲ್ಲ. ಉಗ್ರಸೇನನಿಗೆ ಶ್ರೇಯಃ ಸಾಧನವೆಂದೇ ಅಭಿಪ್ರಾಯದಿಂದ' ಎನ್ನುತ್ತಿದ್ದಾಳೆ ದೇವಿ.

ನೃಪಪದಂ ನೃಪಶಬ್ದ ವಾಚ್ಯಮಾತ್ರಂ, ನ ತು ಮುಖ್ಯತೋ ನೃಪಾಲಕಂ ಅಂಧಂತಮಃ ಪ್ರತಿ ವಿಧುತಂ ॥

'ನೃಪಪದ' ಎಂದರೆ ಇಲ್ಲಿ ರಾಜಸಿಂಹಾಸನ ಎಂದರ್ಥವಲ್ಲ. 'ನೃಪ', 'ರಾಜ' ಎಂದು ಹೆಸರು ಮಾತ್ರ ಉಳ್ಳ ರಾಜರ ಸಮೂಹ. ಹೆಸರಿಗೆ ಮಾತ್ರ ನೃಪರು. ನೃಪರ ಕರ್ತವ್ಯವನ್ನು ಸಜ್ಜನರ ಪರಿಪಾಲನೆಯನ್ನು ಮಾಡುವುದಿಲ್ಲ. ಅಂಥ ಜರಾಸಂಧ ಮುಂತಾದ ರಾಜರು, ಮುಖ್ಯವಾಗಿ ನೃಪಾಲಕರಲ್ಲ. ಅವರನ್ನು ನಾನು 'ಅಂಧಂತಮಸ್ಸಿಗೆ ಎಸೆದಿದ್ದೇನೆ'

ಎನ್ನುತ್ತಿದ್ದಾಳೆ ದೇವಿ. (ಅಂಧಂತಮಸ್ಸಿಗೆ ದೇವಿಯೇ ದುರ್ಗಾರೂಪದಿಂದ ಅಭಿಮಾನಿಯಾದ್ದ ರಿಂದ ಹಾಗೆ ಹೇಳುತ್ತಿದ್ದಾಳೆ.)

❖❖❖

ಪ್ರಣಯಕಲಹದ ಪ್ರಸಂಗದಲ್ಲಿ,

ಅಸ್ಪಷ್ಟವರ್ತ್ಮನಾಂ ಪುಂಸಾಮಲೋಕಪಥಮೀಯುಷಾಂ ।

ಆಸ್ಥಿತಾಃ ಪದವೀಂ ಸುಭ್ರು ಪ್ರಾಯಃ ಸೀದಂತಿ ಯೋಷಿತಃ ॥

ಎಂದು ಶ್ರೀಕೃಷ್ಣ ಹೇಳಿದ್ದಕ್ಕೆ ರುಕ್ಮಿಣೀದೇವಿ ಅದರ **ಅಂತರಾರ್ಥವನ್ನು** ಹೇಳುತ್ತಾಳೆ.

ತ್ವತ್ಪಾದಪದ್ಮಮಕರಂದಜುಷಾಂ ಮುನೀನಾಂ
ವರ್ತ್ಮ ಸ್ಫುಟಂ ನೃಪಶುಭಿರ್ನನು ದುರ್ವಿಭಾವ್ಯಮ್ ।
ಯಸ್ಮಾದಲೌಕಿಕಮಿವೇಹಿತಮೀಶ್ವರಸ್ಯ
ಭೂಮಂಸ್ತವೇಹಿತಮಥೋ ಅನು ಮೇ ಭವಂತಿ ॥ ೪೦ ॥

ನಿನ್ನ ಪಾದಕಮಲ ಮಕರಂದವನ್ನು ಸೇವಿಸುವ ಮುನಿಗಳ **ಮಾರ್ಗವೆ** ಕೆಲವೊಮ್ಮೆ ಅದು ಧರ್ಮವೆ ಅಧರ್ಮವೆ ಎಂದು ನರಪಶುಗಳಿಗೆ **ಅಜ್ಞಾನವರಿಗೆ** ಸ್ಪಷ್ಟವಾಗುವುದಿಲ್ಲ. ಎಂದಮೇಲೆ ನಿನ್ನ ಮಾರ್ಗವನ್ನು ಏನೆಂದು **ಹೇಳಲಿ? ನಿನ್ನ** ಮಾರ್ಗ ಮುನಿಗಳಿಗೇ ಸ್ಪಷ್ಟವಾಗುವುದಿಲ್ಲ ಎಂದಮೇಲೆ ನರಪಶುಗಳಿಗೆ **ಏನೆನ್ನಲಿ?** ಮುನಿಗಳು ಪ್ರಾರಬ್ಧದಿಂದ ಅಧರ್ಮ ಆಚರಿಸಿದರೆ ಅದು ಅವರಿಗೆ **ಹರಿಪ್ರೀತಿಕರ** ವಾದ್ದರಿಂದ ಧರ್ಮವೆ, ಪ್ರಾರಬ್ಧಪಾಪ ಪರಿಹಾರಕವೆ, ನಿನ್ನ **ಲೀಲೆಯೂ** ಲೋಕವಿಲಕ್ಷಣವಾದ್ದರಿಂದ ಅಸ್ಪಷ್ಟವೆ. ನಿನ್ನ ಲೀಲೆಗೆ **ಅನುಗುಣವಾಗಿಯೇ** ನಡೆಯುವ ನನ್ನ ನಡತೆಗಳೂ ಹಾಗೇ ಇರುತ್ತವೆ. ಪೂರ್ಣಾನಂದ, **ಆಪ್ತಕಾಮನಾದ** ನೀನು ಸ್ವಪ್ರಯೋಜನದ ಉದ್ದೇಶವಿಲ್ಲದೆ ಸುಖೋದ್ರೇಕದಿಂದ ಕಾರ್ಯ **ಮಾಡುವೆ.** ಅದರಿಂದ ಲೋಕವಿಲಕ್ಷಣವಾಗಿದೆ ನಿನ್ನ ನಡತೆ. ಅದಕ್ಕೆ **ಅನುಗುಣವಾಗಿ ನಾನೂ** ಫಲಾಪೇಕ್ಷೆಯಿಲ್ಲದೆ ಸುಖೋದ್ರೇಕದಿಂದಲೆ ನಿನ್ನ **ಸಂತೋಷಕ್ಕಾಗಿ ಕಾರ್ಯ** ಮಾಡುತ್ತೇನೆ, ನಿನ್ನ ಮಾರ್ಗ ಹಿಡಿದು ನಡೆಯುವ ಸ್ತ್ರೀಯಾದರೂ **ನಾನು ಕಷ್ಟದಲ್ಲಿ** ಸಿಲುಕುವುದಿಲ್ಲ, ಲೋಕದಲ್ಲಿ, ಧರ್ಮದಂತೆ ಕಾಣುವ, ವಾಸ್ತವದಲ್ಲಿ **ಅಧರ್ಮವೇ** ಆಗಿದ್ದು ಅಸ್ಪಷ್ಟವಾದ ನಡತೆಯುಳ್ಳ ಪುರುಷರನ್ನು ಸ್ತ್ರೀಯರು **ಅನುಸರಿಸಿ ನಡೆದರೆ** ಅವರಿಗೆ ಸುಖವಾಗದು, ಕಷ್ಟವಾಗುವುದು ಸಹಜ.

ಇಲ್ಲಿ 'ಅನು ಮೇ ಭವಂತಿ' ಎಂಬುದನ್ನು 'ಅನು ಯೇ ಭವಂತಂ' ಎಂದು ಬೇರೆ ವ್ಯಾಖ್ಯಾನಕಾರರು ಪರಿವರ್ತನ ಮಾಡಿಕೊಂಡಿದ್ದಾರೆ. 'ನಿನ್ನ ಪಾದಕಮಲ ಮಕರಂದವನ್ನು ಸೇವಿಸುವವರ ಮಾರ್ಗ ಅಸ್ಪಷ್ಟ' ಎಂದು ಮೊದಲನೆ ಸಾಲಿನಲ್ಲಿ ಹೇಳಿ ಕೊನೆಯ ಸಾಲಿನಲ್ಲಿ 'ನಿಮ್ಮ ಮಾರ್ಗದಲ್ಲಿ ನಡೆಯುವವರ ಚೇಷ್ಟೆ ಅಲೌಕಿಕ' ಎಂದು ಈ ಪಾಠದಲ್ಲಿ ವ್ಯರ್ಥ ಪುನರುಕ್ತಿ ಉಂಟಾಗಿದೆ. ಮಾರ್ಗ ಅಸ್ಪಷ್ಟ ಎಂದರೆ ಚೇಷ್ಟೆ ಅಲೌಕಿಕ ಎಂದರೆ ಅರ್ಥವೈಲಕ್ಷಣ್ಯವೇನೂ ಕಾಣುವುದಿಲ್ಲ. 'ಪ್ರಾಯಃ ಸೀದಂತಿ ಯೋಷಿತಃ' 'ಲೋಕವಿಲಕ್ಷಣವಾಗಿ ನಡೆಯುವವರ ಮಾರ್ಗವನ್ನು ಅನುಸರಿಸಿದರೆ ಸ್ತ್ರೀಯರಿಗೆ ಸುಖವಿಲ್ಲ' ಎಂದು ಶ್ರೀಕೃಷ್ಣ ಹೇಳಿದ್ದಾನೆ, ಅದಕ್ಕೆ ಉತ್ತ ಶ್ಲೋಕದಲ್ಲಿ ಕಾಣುವುದಿಲ್ಲ ಎಂದು ನ್ಯೂನತೆಯೂ ಉಂಟಾಗಿದೆ.

'ಅನು ಮೇ ಭವಂತಿ' ಎಂಬ ಪಾಠವಿಟ್ಟುಕೊಂಡರೆ, 'ನಿನ್ನ ಚೇಷ್ಟೆ ಅಲೌಕಿಕ ಅದನ್ನು ಅನುಸರಿಸಿ ನನ್ನ ಚೇಷ್ಟೆಗಳೂ ಅಲೌಕಿಕವೇ ಆಗಿರುತ್ತವೆ.' ಅಂದರೆ ಭಗವಂತನ ಚೇಷ್ಟೆ ತನ್ನ ಸುಖಕ್ಕಾಗಿ ಅಲ್ಲ, ಅವನು ಸುಖಪೂರ್ಣ. ಹಾಗೇ ದೇವಿಯ ಚೇಷ್ಟೆಯೂ ತನ್ನ ಸುಖಕ್ಕಾಗಿ ಅಲ್ಲ, ಅವಳೂ ಪೂರ್ಣಸುಖಿಉಳ್ಳವಳು ನಿತ್ಯಮುಕ್ತಳು. ಹೀಗಾಗಿ ಇಬ್ಬರ ಚೇಷ್ಟೆಯೂ ಸುಖಕ್ಕಾಗಿ ಉಂಟಾಗುತ್ತಿಲ್ಲ. ಸುಖದಿಂದ, ಸುಖೋದ್ರೇಕದಿಂದ ಉಂಟಾಗುತ್ತಿದೆ. ಅದರಿಂದ ಸುಖಕ್ಕಾಗಿ ಚೇಷ್ಟೆ ಮಾಡುವ ಬೇರೆ ಸ್ತ್ರೀಯರು ಅಲೌಕಿಕ ಚೇಷ್ಟೆಯವರನ್ನು ಅನುಸರಿಸಿದರೆ ಸುಖವಿಲ್ಲ. ಅವರಿಗೆ ಇದು ಆತಂಕಕ್ಕೆ ಕಾರಣವಾಗಬಹುದು. ದೇವಿಗೆ ಅಂಥ ಆತಂಕ ಉಂಟಾಗದು ಎಂದು ದೇವಿ ಶ್ರೀಕೃಷ್ಣನಿಗೆ ಉತ್ತರ ನೀಡಿದಂತಾಗುವುದು.

ತವೇಹಿತಮನು ಮೇ ಈಹಿತಾನಿ ಭವಂತಿ ।

ನಿನ್ನ ಅಲೌಕಿಕ ಚೇಷ್ಟೆಗೆ ಅನುಗುಣವಾಗಿಯೇ ನನ್ನ ಚೇಷ್ಟೆಗಳೂ ಅಲೌಕಿಕವಾಗಿರುತ್ತವೆ.

❖❖❖

ಪ್ರಣಯಕಲಹ ಪ್ರಸಂಗದಲ್ಲಿ

ನಿಷ್ಕಿಂಚನಾ ವಯಂ ಶಶ್ವನ್ನಿಷ್ಕಿಂಚನಜನಪ್ರಿಯಾಃ ।
ತಸ್ಮಾತ್ ಪ್ರಾಯೇಣ ನೋ ಹ್ಯಾಢ್ಯಾ ನ ಭಜಂತಿ ಸುಮಧ್ಯಮೇ ॥

ಎಂದು ಶ್ರೀಕೃಷ್ಣ ಹೇಳಿದ್ದಕ್ಕೆ ದೇವಿ ವ್ಯಾಖ್ಯಾನ ಮಾಡುತ್ತಾಳೆ.

ನಿಷ್ಕಿಂಚನೋ ನನು ಭವಾನ್ನ ಯತೋಽಸ್ತಿ ಕಿಂಚಿ-
ದ್ಯಸ್ಮೈ ಬಲಿಂ ಬಲಿಭುಜೋಽಪಿ ಹರಂತ್ಯಜಾದ್ಯಾಃ ।
ನ ತ್ವಾ ವಿದಂತ್ಯಸುತೃಪೋಽಂತಿಕಮಾಢ್ಯತಾಂಧಾಃ
ಪ್ರೇಷ್ಠಃ ಸತಾಂ ಬಲಿಭುಜಾಮಪಿ ಯೋಽಂತರಾಸ್ತೇ ॥ ೪೧ ॥

ನೀನು 'ನಿಷ್ಕಿಂಚನ' ಹೌದು, ದರಿದ್ರ ಎಂಬ ಅರ್ಥದಲ್ಲಿ ಅಲ್ಲ. 'ಕಿಂಚನ' ಅಲ್ಪವಾದ ನಶ್ವರವಾದ ಸಂಪತ್ತು ನಿನ್ನಲ್ಲಿ ಇರುವುದಿಲ್ಲ. ಲಕ್ಷ್ಮೀಪತಿಯಾದ ನಿನ್ನ ಸಂಪತ್ತು ಬಲು ಮಹತ್ತಾದುದು. ನೀನು ನಿನ್ನ ಭಕ್ತರಿಗೆ ನೀಡುವ ಸಂಪತ್ತೂ ಅಲ್ಪವೇ. ಸತ್ಯಲೋಕಾದಿ ಪದವಿಯನ್ನೂ ಮಹಾಯಜ್ಞಗಳಲ್ಲಿ ಹವಿರ್ಭಾಗಗಳನ್ನೂ ಮಹಾನಂದಮಯವಾದ ಮೋಕ್ಷಪದವಿಯನ್ನೂ ಅವರಿಗೆ ನೀನು ನೀಡುವೆ. ಅದರಿಂದ ಬ್ರಹ್ಮಾದಿ ದೇವತೆಗಳು ಎಲ್ಲ ಜನರಿಂದ ಯಜ್ಞಗಳಲ್ಲಿ ಆಹುತಿಗಳನ್ನೂ ಹರಕೆ ಕಾಣಿಕೆಗಳನ್ನೂ ಸ್ವೀಕರಿಸುವರು. ಅಂಥ ಆಢ್ಯರು ನಿಷ್ಕಿಂಚನರು ಧನಿಕರೂ ಕೂಡ ಪ್ರಿಯನಾದ ನಿನಗೆ ಕಾಣಿಕೆ ನೀಡಿ ಆರಾಧಿಸುತ್ತಾರೆ. 'ಧನಾಢ್ಯರು ನಿನ್ನನ್ನು ~~ಆರಾಧಿಸುವುದಿಲ್ಲ' ಎಂದರೆ ಧನಮದದಿಂದ ಅಂಧರಾದ ಧನಾಢ್ಯರು~~ ತಮ್ಮ ಇಂದ್ರಿಯಗಳನ್ನು ತೃಪ್ತಿಪಡಿಸುವುದರಲ್ಲಿಯೇ ನಿರತರಾದವರು ನಿನ್ನನ್ನು ಮನ್ನಿಸುವುದಿಲ್ಲ. ಬಲಿಯನ್ನು ಉಣ್ಣುವ ಬ್ರಹ್ಮಾದಿ ದೇವತೆಗಳಲ್ಲಿಯೂ ನಾಯಿ ಕಾಗೆ ಮುಂತಾದ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾಗಿ ಇರುವ ನೀನು ಈ ದುರ್ಜನರೊಳಗೂ ಇರುವಿ ಎಂದು ಬೇರೇನು ಹೇಳಬೇಕು? ಬಳಿಯಲ್ಲಿಯೇ, ತಮ್ಮೊಳಗೇ ಇರುವ ನಿನ್ನನ್ನು ಈ ಅಂಧರು ಕಾಣರು, ಇನ್ನು ಮನ್ನಿಸುವುದಿಲ್ಲ ಎಂದು ಬೇರೇನು ಹೇಳಬೇಕು? ಅವರು ನಿನ್ನನ್ನು ಮನ್ನಿಸದಿದ್ದರೆ ಅದು ನಿನ್ನ ದೋಷವೇ.

ಇಲ್ಲಿ 'ನಿಷ್ಕಿಂಚನ' ಶಬ್ದಕ್ಕೆ ದರಿದ್ರ ಎಂಬ ರೂಢಿಯ ಅರ್ಥ ಕೂಡುವುದಿಲ್ಲ. ಬ್ರಹ್ಮಾದಿಗಳು ಲೋಕಪಾಲಕರು ಕೃಷ್ಣನನ್ನು ಆರಾಧಿಸುವರೆಂದಮೇಲೆ ಕೃಷ್ಣ ಹೇಗೆ ದರಿದ್ರನೆನಿಸುವನು? ಅದರಿಂದ 'ನಾಸ್ತಿ ಕಿಂಚಿದ್‌ಯಸ್ಯ' ಎಂದು ಯೋಗಾರ್ಥವನ್ನು ಗ್ರಹಿಸಬೇಕೆಂದು ದೇವಿ ಹೇಳುತ್ತಿದ್ದಾಳೆ. ಆದರೆ ಯೋಗಾರ್ಥ ಏನೆಂದು ತಿಳಿಯುವುದಿಲ್ಲ.

ಜೀವಗೋಸ್ವಾಮಿಯ ವೈಷ್ಣವತೋಷಿಣಿವ್ಯಾಖ್ಯಾನದಲ್ಲಿ 'ಯತೋ ಯಸ್ಮಾದ್ವ್ಯತಿರಿಕ್ತಂ ಅನ್ಯತ್ ಕಿಂಚಿನ್ನಾಸ್ತಿ' ಭಗವಂತನಿಗಿಂತ ಬೇರೆಯಾದ ಯಾವ ವಸ್ತುವೂ ಇಲ್ಲ. ಅದರಿಂದ ಭಗವಂತ 'ನಿಷ್ಕಿಂಚನ' ಎಂದಿದೆ. ಈ ಅದ್ವೈತದಲ್ಲಿ ದೇವಿ ಶಿಶುಪಾಲಾದಿ ರಾಜರನ್ನು ಕಡೆಗಣಿಸಿ ಕೃಷ್ಣನನ್ನು ಸೇರಬೇಕಾದ ಪ್ರಮೇಯವೇ ಇರುವುದಿಲ್ಲ.

ವಿಶ್ವನಾಥ ವ್ಯಾಖ್ಯಾನದಲ್ಲಿ 'ನಾಸ್ತ್ಯಧಿಕಂ ಕಿಮಪಿ ವಸ್ತು ಯಸ್ಮಾತ್' 'ಅವನಿಗಿಂತ ಉತ್ತಮನು ಯಾರೂ ಇಲ್ಲ' ಎಂದಿದೆ. ಇದು ಅದ್ವೈತದಲ್ಲಿಯೂ ಕೂಡುವುದರಿಂದ ಹಿಂದೆ ಹೇಳಿದ ದೋಷವಿದ್ದೇ ಇದೆ.

'ನಾಸ್ತಿ ಕಿಂಚನ ದುರ್ಲಭಂ ವಸ್ತು ಯಸ್ಯ ಯಸ್ಮಾದ್ವಾ' ಯಾರಿಗೆ ದುರ್ಲಭವಾದ ವಸ್ತು ಒಂದು ಇಲ್ಲವೋ, ಯಾರಲ್ಲಿ ಬೇಡಿದರೆ ದುರ್ಲಭವಾದ ವಸ್ತು ಇಲ್ಲವೋ ಅವನು ಎಂದು ವೀರರಾಘವ ವ್ಯಾಖ್ಯಾನ ಮತ್ತು ಗೂಢಾರ್ಥದೀಪಿನಿ ವ್ಯಾಖ್ಯಾನಗಳಲ್ಲಿ ಹೇಳಿದೆ. ಆದರೆ 'ದುರ್ಲಭ' ಶಬ್ದವನ್ನು ಅಧ್ಯಾಹಾರ ಮಾಡುವುದು ಉಚಿತ ವಾಗುವುದಿಲ್ಲ. ರೂಢಿಯಲ್ಲಿ, ಸುಲಭವಾದ, ಸುಖವಾಗಿ ಲಭ್ಯವಾಗು ವಸ್ತು ಯಾವುದೂ ಇಲ್ಲದವನು, ದರಿದ್ರ ಎಂದು ನಿಷ್ಕಿಂಚನ ಶಬ್ದ ಹೇಳುತ್ತಿ ಅದಕ್ಕೆ ವಿರುದ್ಧವಾಗಿ ಬಲಾತ್ಕಾರವಾಗಿ ದುರ್ಲಭವಾದ ವಸ್ತು ಇಲ್ಲದವನು ಎಂ ಅಧ್ಯಾಹಾರ ಮಾಡುವುದೆ? ಬೇರೆ ಉಪಾಯವಿಲ್ಲದಿದ್ದರೆ ಸರಿಯೆ ಆದರೆ 'ಕಿಂಚ ಶಬ್ದಕ್ಕೇನೇ ಲೋಕದಲ್ಲಿ 'ಅಲ್ಪ' ಎಂಬ ಅರ್ಥವಿರುವುದರಿಂದ ಅಲ್ಪವಸ್ತುವಿಲ್ಲದವ ದೊಡ್ಡ ಬೆಲೆಬಾಳುವ ವಸ್ತುವೇ ಉಳ್ಳವನು ಮಹಾಶ್ರೀಮಂತ ಎಂದು ಏ ಅಧ್ಯಾಹಾರವಿಲ್ಲದೆಯೇ ಯೋಗಾರ್ಥ ಲಭ್ಯವಾಗುತ್ತದೆ.

ಯತಃ ಕಿಂಚಿನ್ಮಾತ್ರಂ ನಾಸ್ತಿ ಕಿಂತು ಸರ್ವಮೇವಾಸ್ತಿ।

> **'ನಿಷ್ಕಿಂಚನ' ಎಂದರೆ, ಸ್ವಲ್ಪವೇ ಧನ ಸಂಪತ್ತು ಉಳ್ಳವನಲ್ಲ. ಪೂರ್ಣ ಧನಸಂಪತ್ತು ಉಳ್ಳವನು.**

ಕಿಂಚನ ಕಿಂಚಿತ್ ಎಂದರೆ ಸ್ವಲ್ಪ ಎಂದು ಅರ್ಥಪ್ರಸಿದ್ಧವೇ ಇದೆ. '**ಸರ್ವಂ ವಾಕ್ಯಂ ಸಾವಧಾರಣಂ**' ಎಂಬಂತೆ ಏವಕಾರವಿಟ್ಟುಕೊಂಡರೆ 'ಸ್ವಲ್ಪವೇ ಧನಸಂಪತ್ತು **ಉಳ್ಳವನಲ್ಲ' ಎಂಬ ಅರ್ಥಸುಲಭವಾಗಿ ಸಿಗುತ್ತದೆ.** ನಿನ್ನಲ್ಲಿರುವ ಧನಸಂಪತ್ತು ಸ್ವಲ್ಪ **ಮಾತ್ರವಲ್ಲ. ನಿನ್ನಿಂದ ಭಕ್ತರಿಗೆ ಸಿಗುವ ಧನಸಂಪತ್ತೂ** ಸ್ವಲ್ಪ ಮಾತ್ರವಲ್ಲ. ಏಕೆಂದರೆ ಬ್ರಹ್ಮಾದಿಗಳು **ನಿನ್ನಿಂದಲೇ ಮಹತ್ತಾದ ಸಂಪತ್ತುಗಳನ್ನು** ಪಡೆದು, ಅವುಗಳನ್ನು ನಿನಗೇ ಅರ್ಪಿಸುತ್ತಾರೆ ಎಂದು **ದೇವಿ ಹೇಳುತ್ತಿದ್ದಾಳೆ.**

❖ ❖ ❖

ಪ್ರಣಯ ಕಲಹ ಪ್ರಸಂಗದಲ್ಲಿ,

> ಯಯೋರಾತ್ಮಸಮಂ ವಿತ್ತಂ **ಜನ್ಮೈಶ್ವರ್ಯಾಕೃತಿರ್ಭವಃ ।**
> ತಯೋರ್ವಿವಾಹೋ **ಮೈತ್ರೀ ಚ ನೋತ್ತಮಾಧಮಯೋಃ** ಕ್ವಚಿತ್ ॥

ಎಂದು ಶ್ರೀಕೃಷ್ಣ ಹೇಳಿದ್ದು ಸರಿಯೇ ಆಗಿದೆ ಎಂದು ಸಮರ್ಥಿಸುತ್ತಾಳೆ, ದೇವಿ.

ತ್ವಂ ವೈ ಸಮಸ್ತಪುರುಷಾರ್ಥಮಯಃ ಫಲಾತ್ಮಾ
ಯದ್ವಾಂಛಯಾ ಸುಮತಯೋ ವಿಸೃಜಂತಿ ಕೃತ್ಸ್ನಮ್ ।
ತೇಷಾಂ ವಿಭೋ ಸಮುದಿತೋ ಭವತಃ ಪ್ರಸಾದ-
ಸ್ತ್ವಯ್ಯಾಂ ಚ ಯಶ್ಚ ರತಯೋಃ ಸುಖದುಃಖಿನೋರ್ನ ॥ ೪೨ ॥

ನೀನು ಪರಮಾನಂದ ಸ್ವರೂಪನಾದ್ದರಿಂದ ಎಲ್ಲರಿಗೂ ಸಮಸ್ತ ಪುರುಷಾರ್ಥ ಸ್ವರೂಪನಾಗಿರುವೆ. ನಿನ್ನನ್ನು ಪಡೆಯುವ ಬಯಕೆಯಿಂದಲೆ ಜ್ಞಾನಿಗಳು ಬೇರೆ ಎಲ್ಲ ಕಾಮನೆಗಳನ್ನೂ ತ್ಯಾಗ ಮಾಡುವರು. ಪ್ರಭು, ನಿನಗೂ ಅವರಿಗೂ ಪ್ರಶಸ್ತವಾದ ಯಾವ ಗುಣವೂ ಸಮಾನವಿಲ್ಲ. ನಿನ್ನ ಗುಣಗಳು ಪ್ರಶಸ್ತ, ಅವರ ಗುಣಗಳು ನಿನ್ನ ಗುಣಗಳಷ್ಟು ಪ್ರಶಸ್ತವಲ್ಲ. 'ಮನಃ ಪ್ರಸಾದ ಮಾಪ್ನೋತಿ' ಎನ್ನುವಂತೆ ಪ್ರಸಾದ ಎಂದರೆ ಪ್ರಶಸ್ತತೆ. ಅದು ಇಬ್ಬರಲ್ಲಿ ಸಮುದಿತವಾಗಿಲ್ಲ, ಸಮಾನವಾಗಿಲ್ಲ. ವೇದಗಳು ಇಬ್ಬರಿಗೂ ಅಪೇಕ್ಷಿತವಾಗಿವೆ ಎಂಬುದು ಸಾಮ್ಯ. ಆದರೆ ಅವರಿಗೆ ವೇದಗಳು ನಿನ್ನನ್ನು ಸ್ತೋತ್ರ ಮಾಡಲು, ಕರ್ಮಾದಿಗಳನ್ನು ತಿಳಿಯಲು ಬೇಕು. ನಿನಗೆ ಸ್ತೋತ್ರ ಮಾಡಿಸಿಕೊಳ್ಳಲು, ಕರ್ಮಮಾಡಿಸಿಕೊಳ್ಳಲು ಬೇಕು ಎಂದು ಅಸಮಾನತೆಯೇ ಕಂಡು ಬರುತ್ತದೆ. ಸ್ವರೂಪ ಸುಖ ಅಭಿವ್ಯಕ್ತಿ ಮುಕ್ತರಿಗೂ ನಿನಗೂ ಸಮಾನ ಸಿಜ. ಆದರೂ ಮುಕ್ತರಿಗೆ ಹಿಂದೆ ಸಂಸಾರದಲ್ಲಿ ತತ್ವಜ್ಞಾನ ಲಭಿಸುವ ಪರ್ಯಂತ ದುಃಖ ಇತ್ತು. ನೀನು ನಿತ್ಯ ಮುಕ್ತ, ಸಂಸಾರವೇ ಇರಲಿಲ್ಲ. ಸದಾ ಕೇವಲ ಪರಿಪೂರ್ಣ ಸುಖವೇ ಇರುತ್ತದೆ ಎಂದು ವೈಲಕ್ಷಣ್ಯವೇ ಇದೆ. ಅದರಿಂದ ನಿನಗೆ ಸಮಾನರು ಯಾರೂ ಇಲ್ಲ, ಸಮಾನರೊಳಗೇ ವಿವಾಹ ಸಂಬಂಧ ಕೂಡುತ್ತದೆ ಎಂದು ನೀನು ಹೇಳಿದ್ದು ನಿಜವೆ.

ಇಲ್ಲಿ 'ಸಮಸ್ತಪುರುಷಾರ್ಥಮಯಃ ಫಲಾತ್ಮಾ' ಎಂಬುದನ್ನು ವೀರರಾಘವ ವ್ಯಾಖ್ಯಾನದಲ್ಲಿ 'ಸಮಸ್ತಪುರುಷಾರ್ಥಸ್ವರೂಪಃ, ಫಲಾತ್ಮಾ ಅಭೀಪ್ಸಿತಫಲರೂಪಃ' ಭಗವಂತ ಸಮಸ್ತಪುರುಷಾರ್ಥರೂಪನಾಗಿದ್ದಾನೆ ಅಭೀಷ್ಟಫಲರೂಪನಾಗಿದ್ದಾನೆ ಎಂದು ವ್ಯಾಖ್ಯಾನಿಸಿದ್ದಾರೆ. ಪುರುಷಾರ್ಥವೆಂದರೂ ಅಭೀಷ್ಟವೆಂದರೂ ಒಂದೇ. ಹೀಗಾಗಿ ಪುನರುಕ್ತಿಯಾಯಿತು. ಮತ್ತು ಜಡಪದಾರ್ಥಗಳು ಜನರಿಗೆ ಅಭೀಷ್ಟ ವಾಗಿವೆ. ಹಾಗೇ ಭಗವಂತನೆಂದು ಹೇಳಿದಂತಾಯಿತು. ಇದೂ ಅಸಂಗತ. ಅದರಿಂದ ಧರ್ಮಅರ್ಥಕಾಮಮೋಕ್ಷಗಳೆಂಬ ಪುರುಷಾರ್ಥ ಪುರುಷಾರ್ಥಶಬ್ದ ದಿಂದ ವಿವಕ್ಷಿತವಾಗಿಲ್ಲ, ಸಮಸ್ತಪುರುಷಾರ್ಥ ಎಂದಿರುವುದರಿಂದ ಸಮಸ್ತಚೇತನ ರಿಗೆ ಅರ್ಥ್ಯ, ಅಭೀಷ್ಟವಾದ ಒಂದು ಪರಮಾತ್ಮ ಎಂಬ ವಸ್ತು ವಿವಕ್ಷಿತವಾಗಿದೆ.

ಸ್ರಕ್‌ಚಂದನ ವನಿತಾದಿಗಳು ಸಮಸ್ತಪುರುಷರಿಗೆ ಅಭೀಷ್ಟವಾಗಿರುವುದಿಲ್ಲ. ಪರಮಾತ್ಮನೊಬ್ಬನೇ ಸಮಸ್ತ ಚೇತನರಿಗೂ ಬೇಕಾದವನು. ಯದ್ಯಪಿ ಪರಮಾತ್ಮನ ದ್ವೇಷಿಗಳಿಗೆ ಪರಮಾತ್ಮ ಬೇಕೆನಿಸುವುದಿಲ್ಲ, ಆದರೆ ಅವರಿಗೂ ಸುಖ ಬೇಕೆನಿಸುತ್ತದೆ. ಸುಖ ಯಾರಿಗೆ ಬೇಡ? ಆದರೆ ಆ ಸುಖದಲ್ಲಿ ಸುಖರೂಪನಾಗಿ ಪರಮಾತ್ಮ ನಿರುವುದರಿಂದಲೇ, ಅವನು ಬೇಕೆನಿಸುವುದರಿಂದಲೇ ಆ ಸುಖ ಬೇಕೆನಿಸಿದೆ. ಇದು ದ್ವೇಷಿಗಳಿಗೆ ತಿಳಿದಿರುವುದಿಲ್ಲ. ಕಾದ ಕಬ್ಬಿಣ ಸುಡುವುದು ಒಳಗೆ ಬೆಂಕಿ ಇರುವುದರಿಂದ. ತಿಳಿಯದೆ ಮುಟ್ಟಿದರೂ ಅದು ಸುಡುತ್ತದೆ. ಹೀಗೆ ಭಗವಂತ ಎಲ್ಲ ಸುಖಗಳಲ್ಲಿ ಪರಮಸುಖರೂಪದಿಂದ ಇದ್ದು ಸಮಸ್ತಚೇತನರಿಗೆ ಆಕರ್ಷಕನಾ ಅಭೀಷ್ಟನಾಗುವುದರಿಂದ ಸಮಸ್ತಪುರುಷಾರ್ಥರೂಪನಾಗಿದ್ದಾನೆ. 'ಫಲಾತ್ಮಾ ಎಂಬಲ್ಲಿ ಫಲ ಎಂದರೆ ಎಲ್ಲ ಸಾಧನಗಳ ಅಂತಿಮ ಫಲರೂಪವಾದ ಸುಖ. ಹೀಗಾ 'ಫಲಾತ್ಮಾ' ಸುಖರೂಪನಾದ್ದರಿಂದ 'ಸಮಸ್ತಪುರುಷಾರ್ಥರೂಪ' ಎಂದು ಒಂದ ಇನ್ನೊಂದಕ್ಕೆ ಸಮರ್ಥನೆ ನೀಡುವುದರಿಂದ ಪುನರುಕ್ತಿ ಇಲ್ಲ.

ಶ್ಲೋಕದ ಉತ್ತರಾರ್ಧ ಬೇರೆ ವ್ಯಾಖ್ಯಾನಕಾರರಲ್ಲಿ ಬೇರೆಯಾಗಿದೆ—

ತೇಷಾಂ ವಿಭೋ ಸಮುಚಿತೋ ಭವತಃ ಸಮಾಜಃ ।
ಪುಂಸಃ ಸ್ತ್ರಿಯಾಶ್ಚ ರತಯೋಃ ಸುಖದುಃಖಿನೋರ್ನ ॥

[೧]'ನಿನ್ನನ್ನು ಹೊಂದುವ ಸಲುವಾಗಿ ಬೇರೆಲ್ಲವನ್ನೂ ಬಿಟ್ಟಿರುವವರಿಗೆ ನಿನ್ನ ದಾಸ್ಯ **ಸಂಬಂಧ** ಉಚಿತವೆನಿಸುತ್ತದೆ ಹೊರತು ತಾವು ತಾವೇ ಪರಸ್ಪರ ಸೇರಿ **ಸುಖದುಃಖ**ಗಳನ್ನು ಹೊಂದುತ್ತಿರುವ ಸ್ತ್ರೀಪುರುಷರಿಗೆ ನಿನ್ನ ದಾಸ್ಯ ಸಂಬಂಧ **ಉಚಿತವೆನಿಸುವುದಿಲ್ಲ**, ಅದರಿಂದ ನಿನ್ನನ್ನು ಹೊಂದುವ ಸಲುವಾಗಿ ಬೇರೆಲ್ಲವನ್ನು

---

೧. **ತರ್ಹಿ ನಿಃಸಮತ್ವಾದೇವ ಮಮ ತ್ವಯಾಽಸಮಯಾ** ಸಹ ವಿವಾಹೋಽನುಚಿತ ಏವಜಾತಃ **ಇತ್ಯತ ಆಹ ಯದ್ವಾಂಛಯೇತಿ। ಯಸ್ಮಿನ್ ತ್ವದ್ದಾಸ್ಯೇ ವಾಂಛಯಾ ಕೃತ್ಸ್ನಂ** ತ್ವದ್ದಾಸ್ಯವ್ಯತಿರಿಕ್ತಂ ಸರ್ವಂ ವಿಸೃಜಂತಿ, **ನೇಚ್ಛಂತೀತಿ ಯಾವತ್ ಅತಏವ ತೇ ಜನಾಃ** ಸುಮತಯಃ ತೇಷಾಂ ತವ ಚ **ಸಮಾಜಃ ಸಂಗತಿರುಚಿತ ಏವ। ನಹಿ ತಾರತಮ್ಯೇಽಪಿ** ಸ್ವಭಾವತಃ ಶೇಷಶೇಷಿಣೋಃ ಸಂಬಂಧೋ **ನೋಚಿತಃ। ಅತಸ್ತ್ವದ್ದಾಸ್ಯಮಾತ್ರಾಕಾಂಕ್ಷಿಣ್ಯಾಃ** ಮಮ ತವ ಚ ಸಂಬಂಧಃ ಸೂಚಿತ ಏವೇತಿ **ಭಾವಃ। ಸಾಮಾನ್ಯೇನ ತು ಸಂಬಂಧೋಽ**ನುಚಿತ ಇತ್ಯಭಿಪ್ರೇತ್ಯಾಹ ಪುಂಸ ಇತಿ। ರತಯೋರ್ಮಿ**ಥೋರತಯೋರತ ಏವ ತತ್**ಕೃತ ಸುಖದುಃಖಿನೋಃ ಪುಂಸಃಸ್ತ್ರಿಯಾಶ್ಚ ಸಮಾಜೋ ನೋಚಿತ **ಇತ್ಯರ್ಥಃ। ಯಃ** ಕೇವಲ ಮೈಥುನ್ಯ ತತ್ಪ್ರಯುಕ್ತ ಸುಖದುಃಖಾನುಭವಾ**ರ್ಥಃ ಸಮಾಜಃ ಸ ತು ನೋಚಿತಃ** । ಯಸ್ತ್ವಾವಯೋಃ ಶೇಷ ಶೇಷಿಲಕ್ಷಣಃ ಸಮಾಜಃ ಸ ಉಚಿತ **ಏವೇತಿ ಭಾವಃ।** -ವೀರರಾಘವಃ

ತೊರೆದಿರುವವರಲ್ಲಿ ನಾನೂ ಒಬ್ಬಳು. ನನಗೂ ನಿನ್ನ ದಾಸ್ಯಸಂಬಂಧ **ಉಚಿತವೇ** ಆಗಿದೆ' ಎಂದು ವಿವರಣೆ ವೀರರಾಘವವ್ಯಾಖ್ಯಾನದಲ್ಲಿದೆ—

'ನಿನ್ನನ್ನು ಹೊಂದುವುದಕ್ಕಾಗಿ ಬೇರೆಲ್ಲವನ್ನೂ ಬಿಟ್ಟವರಿಗೆ ನಿನ್ನ **ಸಾಮ್ಯ ಸರ್ವಥಾ** ಇಲ್ಲವೆಂದರೆ, 'ಯಯೋರಾತ್ಮಸಮಂ ವಿತ್ತಂ' ಎಂಬಂತೆ ನನಗೂ **ನಿನಗೂ ವಿವಾಹ** ಸಂಬಂಧ ಅನುಚಿತವೇ ಆಯಿತು ಎಂಬ ಪ್ರಶ್ನೆ ಬಂದರೆ ರುಕ್ಮಿಣಿ ಹೇಳು**ತ್ತಾಳೆ, 'ನನಗೆ** ನಿನ್ನ ಸಾಮ್ಯ ಏನಿಲ್ಲದಿದ್ದರೂ ಸ್ವಭಾವತಃ ನಾನು ನಿನ್ನ ದಾಸಿ. ನನಗೆ **ದಾಸ್ಯವನ್ನು ಮಾತ್ರ** ಕೊಡು, ಸಾಕು.' ಎಂದು. ವಿವಾಹಪೂರ್ವಕವಾದ ಪತಿಪತ್ನೀಭಾವ **ಸಂಬಂಧ** ಕೊಡುವುದಿಲ್ಲ ಎಂದು ಶ್ರೀಕೃಷ್ಣ ಹೇಳಿದರೆ ಅದು ಬೇಡ, ದಾಸ್ಯವೆ ಸಾ**ಕೆಂದು ರುಕ್ಮಿಣಿ** ಹೇಳುವುದು, ಶ್ರೀವೈಷ್ಣವ ಸಂಪ್ರದಾಯಕ್ಕೇ ಕೂಡುವುದಿಲ್ಲ. ಶ್ರೀಧರ**ವ್ಯಾಖ್ಯಾನದಲ್ಲಿ** ಹಾಗೆ ಹೇಳಿದ್ದನ್ನು ವೀರರಾಘವವ್ಯಾಖ್ಯಾನವೂ ಅನುಸರಿಸುವುದು **ಅನುಚಿತ**. ಜೀವಬ್ರಹ್ಮರಿಗೆ ಮುಕ್ತಿಯಲ್ಲಿ ಪರಮಸಾಮ್ಯ ಅವರ ಸಿದ್ಧಾಂತ. **ಮತ್ತು ಅವರ** ಔತ್ತರೇಯ ಸಂಪ್ರದಾಯದಲ್ಲಿ ಲಕ್ಷ್ಮೀನಾರಾಯಣರಿಬ್ಬರೂ ಸ**ರ್ವೋತ್ತಮರು**, ಸರ್ವೇಶ್ವರರು ಸ್ವೇಚ್ಛೆಯಿಂದಲೇ ಸತಿಪತಿಗಳಾದವರು. ಅವರ **ಅವತಾರಭೂತ**ರಾದ ರುಕ್ಮಿಣೀಕೃಷ್ಣರಲ್ಲಿ ಪರಸ್ಪರ ಸಾಮ್ಯವಿಲ್ಲವೆಂದು ಸತಿಪತಿಭಾವವಿ**ಲ್ಲವೆಂದು** ಹೇಳುವುದು ಅಸಂಗತ. ರುಕ್ಮಿಣಿ ಕೃಷ್ಣನಿಗೆ ಮಾತ್ರ ಪತ್ನಿಯಾಗಲು **ಯೋಗ್ಯಳೆಂದು** ಪತ್ರವನ್ನು ಬರೆದು ಕೃಷ್ಣನಿಗೆ ಕಳಿಸಿದ್ದಾಳೆ. ನಿತ್ಯಾವಿಯೋಗಿ ದಂ**ಪತಿಗಳಾದ** ಅವರಿಬ್ಬರಲ್ಲಿ ಸತಿಪತಿಭಾವ ಆವಶ್ಯಕವಲ್ಲ ಎಂದು ತಿಳಿಯುವುದು **ಮಹಾ** ಅನರ್ಥಕರ.

ತೇಷಾಂ ವಿಭೋ ಸಮುದಿತೋ ಭವತಃ ಪ್ರಸಾದ-
ಸ್ತ್ರಯ್ಯಾಂ ಚ ಯಶ್ಚ ರತಯೋಃ ಸುಖದುಃಖಿನೋರ್ನ ॥

ಎಂಬ ನಮ್ಮ ಪಾಠದಲ್ಲಿ ಶ್ರೀಕೃಷ್ಣ 'ನೀನು ಬೇರೆ ಯಾರನ್ನಾದರೂ **ವರಿಸು'** ಎಂದು ಹೇಳಿದ್ದಕ್ಕೆ, ಬೇರೆ ಯಾರೂ ನಿನಗೆ ಸಮಾನರಾದವರಿಲ್ಲ ನಿನ್ನನ್ನೇ **ವರಿಸುತ್ತೇನೆ** ಎನ್ನುತ್ತಾಳೆ ರುಕ್ಮಿಣಿ. 'ಭೂಮಂಸ್ತವೇಹಿತಮಥೋ ಅನು ಮೇ **ಭವಂತಿ' ನನ್ನ** ಪ್ರವೃತ್ತಿಗಳು ನಿನ್ನಂತೇ ಅಲೌಕಿಕವಾಗಿವೆ, ಫಲಾಪೇಕ್ಷಾರಹಿತವಾಗಿವೆ. **ಅದರಿಂದ** ನಾನು ಹೊರತು ಬೇರೆ ಯಾರೂ ನಿನಗೆ ಪತ್ನಿಯಾಗಲು ಯೋಗ್ಯಳಿಲ್ಲ **ಎನ್ನುತ್ತಾಳೆ**.

ಫಲಾತ್ಮಾ ಸುಖಾತ್ಮಾ । ಅತ ಏವ ಪುರುಷೈರರ್ಥ್ಯರೂಪಃ । ತೇಷಾಂ ಭವತಶ್ಚ ಸಮುದಿತಃ ಸಮೋ ಗುಣೋ ನಾಸ್ತಿ ಯಶ್ಚ ಕೋಽಪಿ । ತ್ರಯ್ಯಾಂ ರತಯೋಃ । ವೇದೋಕ್ತಕರ್ತೃತ್ವೇನ ಸುಮತೀನಾಂ ತ್ರಯೀರತತ್ವಂ । ಪ್ರತಿಪಾದ್ಯತ್ವೇನ ಭವತಃ । ಸುಖದುಃಖಿನೋಃ ।

ಕೇವಲಂ ಪರಿಪೂರ್ಣಸುಖೋ ಭವಾನ್ । ಭವಜ್ಞಾನಪರ್ಯಂತಂ ದುಃಖಿನಸ್ತೇ ।

ಅಲ್ಪಸಂಪೂರ್ಣಶಕ್ತಿತ್ವಾದಲ್ಪಪೂರ್ಣಸುಖತ್ವತಃ ।
ಅಲ್ಪಸಂಪೂರ್ಣದರ್ಶಿತ್ವಾನ್ನ ಸಾಮ್ಯಂ ಜೀವಕೃಷ್ಣಯೋಃ ॥
ಇತಿ ಬ್ರಹ್ಮಾಂಡೇ ॥

ತ್ರಯ್ಯಾಂ ಚೇತಿ ಚಶಬ್ದಃ ಸ್ಮೃತಿಷ್ವಪೀತಿ ॥

ಫಲಾತ್ಮನೆಂದರೆ ಪರಮಾನಂದ ಸ್ವರೂಪ. ಪರಮಾನಂದ ಸ್ವರೂಪನಾದ್ದರಿಂದ ಎಲ್ಲ ಚೇತನರಿಗೂ ಬೇಕಾದವನು ಭಗವಂತ. ಆ ಜ್ಞಾನಿಗಳಿಗೂ ನಿನಗೂ 'ಸಮುದಿತಃ' ಅಂದರೆ ಸಮಾನವಾಗಿ 'ಯಶ್ಚ' ಎಂದರೆ 'ಕೋಽಪಿ' ಯಾವ ಗುಣವೂ ಇಲ್ಲ. ಶ್ರುತಿ ಸ್ಮೃತಿಗಳಲ್ಲಿ ನೀವಿಬ್ಬರೂ ಆಸಕ್ತರೇ ಆದರೂ ವೇದೋಕ್ತಕರ್ಮ ಮಾಡುವುದಕ್ಕಾಗಿ ಜ್ಞಾನಿಗಳು ಆಸಕ್ತರಾಗಿರುತ್ತಾರೆ. ಪ್ರತಿಪಾದ್ಯನಾಗಿ ಭಗವಂತ ನೀನು ಆಸಕ್ತ. ಅದರಿಂದ ~~ಇಬ್ಬರಲ್ಲಿ ಶ್ರುತಿಸ್ಮೃತಿಗಳ ಬಗ್ಗೆ ಆಸಕ್ತಿ ಎಂಬುದು ಸಮಾನ ಗುಣವಲ್ಲ.~~ ಇಬ್ಬರಲ್ಲಿಯೂ ಸುಖವಿದೆ. ಆದರೂ ಕೇವಲ ಪರಿಪೂರ್ಣ ಸುಖವಿರುವವನು ನೀನು. ಜ್ಞಾನಿಗಳು ನಿನ್ನ ಜ್ಞಾನ ಉದಿಸುವ ಪರ್ಯಂತ ದುಃಖ ಉಳ್ಳವರು.

ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ, 'ಜೀವರು ಮತ್ತು ಶ್ರೀಕೃಷ್ಣ ಇವರಿಬ್ಬರು ಅಲ್ಪ-ಪೂರ್ಣ ಶಕ್ತಿ ಉಳ್ಳವರಾದ್ದರಿಂದ, ಅಲ್ಪ-ಪೂರ್ಣ ಸುಖಉಳ್ಳವರಾದ್ದರಿಂದ ಮತ್ತು ಅಲ್ಪ-ಪೂರ್ಣ ಜ್ಞಾನಉಳ್ಳವರಾದ್ದರಿಂದ ಅವರಿಗೆ ಸಾಮ್ಯವಿಲ್ಲ' ಎಂದು.

'ತ್ರಯ್ಯಾಂ ಚ' ಎಂಬಲ್ಲಿ ಚ ಶಬ್ದದಿಂದ 'ಸ್ಮೃತಿಗಳಲ್ಲಿಯೂ' ಎಂದು ಗ್ರಹಿಸಬೇಕು.

❖❖❖

ಪ್ರಣಯಕಲಹ ಪ್ರಸಂಗದಲ್ಲಿ,

ವೈದರ್ಭ್ಯೇತದವಿಜ್ಞಾಯ ತ್ವಯಾಽದೀರ್ಘಸಮೀಕ್ಷಯಾ ।
ವೃತಾ ವಯಂ ಗುಣೈರ್ಹೀನಾ ಭಿಕ್ಷುಭಿಃ ಶ್ಲಾಘಿತಾ ಮುಧಾ ॥

ಎಂದು ಶ್ರೀಕೃಷ್ಣ ಹೇಳಿದ್ದಕ್ಕೆ ರುಕ್ಮಿಣಿ ವ್ಯಾಖ್ಯಾನ ಮಾಡುತ್ತಾಳೆ.

ತ್ವಂ ನ್ಯಸ್ತದಂಡಮುನಿಭಿರ್ಗದಿತಾನುಭಾವ
ಆತ್ಮಾಽಽತ್ಮದಶ್ಚ ಜಗತಾಮಿತಿ ಮೇ ವೃತೋಽಸಿ ।
ಮುಕ್ತ್ವಾಭವದ್ಭವದುದೀರಿತಕಾಲಗಂಧ-
ಧ್ವಸ್ತಾಶಿಷೋಽಬ್ಜಭವನಾಕಪತೀನ್ ಕುತೋಽನ್ಯಾನ್ ॥ ೪೩ ॥

'ಭಿಕ್ಷುಗಳು ನನ್ನನ್ನು ಸುಮ್ಮನೆ ಹೊಗಳುತ್ತಾರೆ' ಎಂದು ನೀನು **ಹೇಳುವು**ದು ನಿಜವೆ. 'ಸುಮ್ಮನೆ' ಎಂದರೆ ಸುಳ್ಳೆಂದು ಅರ್ಥವಲ್ಲ. **ಫಲಾಪೇಕ್ಷೆಯಿಲ್ಲದೆ** ಹೊಗಳುತ್ತಾರೆ. ಅದರಿಂದ ಅವರು ಮಾಡುವ ಹೊಗಳಿಕೆ ಸುಳ್ಳಲ್ಲ. **ಸ್ವಾರ್ಥಕ್ಕಾಗಿ** ತ್ರಿಕರಣಗಳಿಂದ ಪ್ರಾಣಿಗಳಿಗೆ ದಂಡನೆಯನ್ನು ಮಾಡದವರಾದ್ದ**ರಿಂದ ಅವರಿಗೆ** ಸ್ವಾರ್ಥವಿಲ್ಲ. ನಿಷ್ಕಾಮನೆಯಿಂದಲೇ ಹೊಗಳುತ್ತಾರೆ. ನೀನು ಜಗ**ತ್ತಿಗೆ ಸ್ವಾ**... ಸಾಯುಜ್ಯ ನೀಡುವವನು ಎನ್ನುತ್ತಾರೆ. ಅದರಿಂದ ನೀನು ಹೇಳಿದಂ**ತೆ 'ಗುಣ**... ಹೀನಾಃ' ಸದ್ಗುಣರಹಿತನಲ್ಲ, ತ್ರಿಗುಣರಹಿತ, ಸದ್ಗುಣಗಳಿಂದ 'ಹಿ **ಇನಾಃ'** ... ಎಂದು ಪ್ರಸಿದ್ಧನಾಗಿರುವೆ. ಅದರಿಂದ ನಾನು ನಿನ್ನನ್ನು ಸ್ವಾಮಿ ಎಂದೇ **ವರಿಸಿದ್ದೇ**ನೆ. ~~'ಏತದ್ ಅವಿಜ್ಞಾಯ' 'ಮೇಲುನೋಟಕ್ಕೆ ನನ್ನ ಮಾತಿನಲ್ಲಿ ಕಾಣುವ **ಅರ್ಥವನ್ನು**~~ ಗ್ರಹಿಸದೆ ನೀನು ನನ್ನನ್ನು ವರಿಸಿರುವೆ' ಎಂದು ನೀನು ಹೇಳಿ**ದ್ದು** ಸರಿ... ದೋಷವನ್ನು ಮೇಲುನೋಟಕ್ಕೆ ಹೇಳುವಂತಿರುವ ಶಬ್ದವೆಲ್ಲವೂ **ದೋಷರಹಿತ**... ನಿನ್ನಲ್ಲಿ ಗುಣವನ್ನೇ ವಸ್ತುತಃ ಹೇಳುತ್ತವೆ. ಜ್ಞಾನಿಗಳು ಹೀಗೇ **ತಿಳಿಯುತ್ತಾರೆ.** 'ವೈದರ್ಭಿ' ಎಂದು ನೀನು ನನ್ನನ್ನು ಕರೆದೆ. 'ವಿದ್ ಅರ್ಭ' ನ**ಮ್ಮ ಕುಲದಲ್ಲಿ** ಬಾಲಕರು ಕೂಡ ಜ್ಞಾನಿಗಳು, ಅದರಿಂದ 'ವಿದರ್ಭ' ಎನಿ**ಸಿದೆ. ಅಂ**... ವಿದರ್ಭಕುಲದಲ್ಲಿ ಬಂದವಳು ನಾನು ತಿಳಿವಳಿಕೆ ಇಲ್ಲದವಳಲ್ಲ **ಎಂದು ನಿನ್ನ** ಅಭಿಪ್ರಾಯ. 'ತ್ವಯಾದೀರ್ಘಸಮೀಕ್ಷಯಾ' ಎಂಬ ಮಾತಿನಲ್ಲಿ ಅದೀ**ರ್ಘ ಎಂದೂ** ದೀರ್ಘ ಎಂದೂ ಪದವಿಭಾಗ ಶಕ್ಯವಿದೆ. ಎರಡೂ ಸರಿಯೆ. **ಬ್ರಹ್ಮರುದ್ರಾದಿ** ದೇವತೆಗಳು ಕೂಡ ನಿನಗೆ ಹೋಲಿಸಿದರೆ ದೀರ್ಘಾಯುಷಿಗಳೆನ್ನ**ಲಾಗದು. ಅವರ** ಆಯುಷ್ಯ ಅದೀರ್ಘ ಅಲ್ಪಕಾಲದ್ದು ಎಂದು ಸರಿಯಾಗಿ ಆಲೋಚ**ನೆ ಮಾಡಿ**... ನಾನು ನಿನ್ನನ್ನು ವರಿಸಿದ್ದೇನೆ. ಹೊರತು ದೀರ್ಘಸಮೀಕ್ಷೆ **ದೂರಾಲೋಚನೆ** ಇಲ್ಲದವಳು ನಾನಲ್ಲ. 'ದೀರ್ಘಸಮೀಕ್ಷೆ ಉಳ್ಳವಳೇ ನಾನು' **ಎಂದು** ನೀನು ಹೇಳಿರುವಿ. ಅಮೃತ ಮಥನ ಕಾಲದಲ್ಲಿ ಉದ್ಭವಿಸಿದಾಗ ನಾನು **ಮಂಗಳದೇವತೆ** ಶಾಶ್ವತ ಮಾಂಗಲ್ಯಕ್ಕಾಗಿ ದೀರ್ಘಾಯುಷಿಯಾದ ನಿನ್ನನ್ನೇ **ವರಿಸಿದ್ದೆ, ಆಗ** ದೀರ್ಘಾಯುಷ್ಯವಿಲ್ಲದವರೆಂದು ಬ್ರಹ್ಮಾದಿಗಳನ್ನೇ ನಿರಾಕರಿಸಿ**ದ್ದೆನೆಂದ ಮೇಲೆ ಈಗ** ದೀರ್ಘಾಲೋಚನೆಯಿಂದಲೆ ಬೇರೆ ಶಿಶುಪಾಲಾದಿಗಳ**ನ್ನು ಬಿಟ್ಟು ನಿನ್ನನ್ನು**

ವರಿಸಿದೆನೆಂದು ಬೇರೇನು ಹೇಳಬೇಕು? ಏಕೆಂದರೆ ಅಂದು ಬ್ರಹ್ಮಾದಿಗಳು 'ಪ್ರಾಪ್ತಾನರ್ಥಿನಃ' ಪ್ರಾಪ್ತರಾಗಿದ್ದರೂ ಸ್ವಯಂವರ ಕಾಣಲು ಬಂದಿದ್ದರೂ ಅನರ್ಥಿಗಳು ನನ್ನನ್ನು ಬಯಸಿರಲಿಲ್ಲ. ಆದರಿಂದ ಅನರ್ಥ ಭಾಗಿಗಳಾಗಿರಲಿಲ್ಲ. ಇಂದು ಪ್ರಾಪ್ತರಾಗಿದ್ದ ಶಿಶುಪಾಲಾದಿಗಳು ನನ್ನನ್ನು ಬಯಸಿದ್ದರಿಂದ ಅನರ್ಥಿಗಳು ಅನರ್ಥಭಾಗಿಗಳಾಗಿದ್ದರು. ಅವರನ್ನು ನಾನು ವರಿಸಲಿಲ್ಲ.

ಇಲ್ಲಿ 'ಅಬ್ಜಭವನಾಕಪತೀನ್' ಎಂದರೆ ಬ್ರಹ್ಮಇಂದ್ರ ಮುಂತಾದವರು ಎಂದು ವೀರರಾಘವ ಮುಂತಾದ ವ್ಯಾಖ್ಯಾನಗಳಲ್ಲಿ ಹೇಳಿದೆ. 'ಅಬ್ಜಭವ' ಎಂದರೆ ನಾಭಿಕಮಲದಲ್ಲಿ ಉದ್ಭವಿಸಿದ ಬ್ರಹ್ಮ. 'ನಾಕಪತಿ' ಸ್ವರ್ಗದೊಡೆಯ ಇಂದ್ರ ಇವರಿಬ್ಬರನ್ನೇ ಇಟ್ಟುಕೊಂಡರೆ 'ನಾಕಪತೀನ್' ಎಂಬ ಬಹುವಚನ ಕೂಡಲಾರದು. ಮತ್ತು ಅಗ್ನಿ ವಾಯು ವರುಣ ಮುಂತಾದ ದೇವತೆಗಳನ್ನೂ ಬಿಟ್ಟಂತಾಗುವುದು. ಅದಕ್ಕೆ 'ನಾಕಪತಿ' ಶಬ್ದಕ್ಕೆ ಸ್ವರ್ಗದ ಒಡೆಯರು ಇಂದ್ರ ಮುಂತಾದ ಎ॰ ದೇವತೆಗಳೂ ವಿವಕ್ಷಿತರೆಂದು ಗಿರಿಧರ ವ್ಯಾಖ್ಯಾನದಲ್ಲಿ ಹೇಳಿದೆ.

ಹೀಗೆ ಹೇಳಿದರೂ ಶಿವನನ್ನು ಬಿಟ್ಟಂತಾಗುವುದು ಎಂಬ ಶಂಕೆ ಬಂದರೆ [೧]**ಸನಾತನ ಗೋಸ್ವಾಮಿಕೃತ ಬೃಹದ್ ವೈಷ್ಣವ ತೋಷಿಣೀ** ವ್ಯಾಖ್ಯೆಯಲ್ಲಿ ಹೀಗ **ಸಮಾಧಾನ ಹೇಳಿದೆ—**

'ಶ್ರೀ ಶಿವನನ್ನು ಹೇಳದೆ ಬಿಡಲು ಕಾರಣ ಅವನೂ ಕೂಡ ಸ್ವರ್ಗದೊಡೆಯ **ರಲ್ಲಿಯೇ** ಸೇರುತ್ತಾನೆ' ಎಂದು.

ಆದರೆ ಕೈಲಾಸಾಧಿಪತಿಯೆಂದೇ ಪ್ರಸಿದ್ಧನಾದ ಶಿವನನ್ನು ಸ್ವರ್ಗಾಧಿಪತಿ ಎಂದು ಹೇಳುವುದು ಕಂಡಿಲ್ಲ. ಪ್ರಾಯಃ ಇದನ್ನೇ ಆಲೋಚಿಸಿ, [೨]ಜೀವಗೋಸ್ವಾಮಿಕೃತ ವೈಷ್ಣವ ತೋಷಿಣೀ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ—

'ಲಕ್ಷ್ಮಿ ತಾನು ಬ್ರಹ್ಮಾದಿಗಳನ್ನು ತಿರಸ್ಕರಿಸಿ ಹರಿಯನ್ನು ವರಿಸಿದೆನೆಂದು ಹೇಳುತ್ತ ಬ್ರಹ್ಮಾದಿಗಳು ತನಗೆ ತಿರಸ್ಕಾರಾರ್ಹರೆಂದು ತೋರಿಸಿದ್ದಾಳೆ. ಬ್ರಹ್ಮಾದಿಗಳ ಮಧ್ಯದಲ್ಲಿ ಶಿವನನ್ನು ಸ್ಪಷ್ಟ ಹೇಳದಿರುವುದು ಶಿವ ತಿರಸ್ಕಾರಾರ್ಹನಲ್ಲವೆಂದು ತೋರಿಸುತ್ತದೆ. ಹೇಳದಿರುವುದಕ್ಕೆ ಅದೇ ಕಾರಣವೆಂದು ತಿಳಿಸುತ್ತದೆ.'

---

೧ ಶ್ರೀಶಿವಸ್ಯಾನುಕ್ತಿಸ್ತಸ್ಯ ನಾಕಪತ್ಯಂತರ್ಗತತ್ವಾದೇವೇತಿ ಜ್ಞೇಯಂ ॥ -ಸನಾತನಃ

೨. ಬ್ರಹ್ಮಾದೀನಾಮವಜ್ಞಾಸ್ಪದತ್ವಂ ದರ್ಶಿತವತೀ। ಅತ್ರ ಶಿವಸ್ಯಾನುಕ್ತಿಸ್ತು ತತ್ರಾವಧಾನಾ-ವಿಷಯತ್ವಂ ದರ್ಶಯಿತ್ವಾ ತಾದೃಶತ್ವಭಾವ ಏವ ತದಕರಣೇ ಹೇತುಂ ವ್ಯನಕ್ತಿ। -ಜೀವಗೋಸ್ವಾಮೀ

ಇಲ್ಲಿ ಲಕ್ಷ್ಮಿಗೆ ಬ್ರಹ್ಮನೇ ತಿರಸ್ಕಾರಾರ್ಹನಾಗಿರುವಾಗ ಶಿವ ಏಕೆ **ತಿರಸ್ಕಾರಾರ್ಹ** ನಲ್ಲ ಎಂಬ ಪ್ರಶ್ನೆ ಬರುವುದು. ಪ್ರಾಯಃ ಶಿವ ಲಕ್ಷ್ಮಿಗಿಂತ **ಶ್ರೇಷ್ಠ ಎಂದು** [೩]ಜೀವಗೋಸ್ವಾಮಿಯ ಅಭಿಪ್ರಾಯ. ಏಕೆಂದರೆ ಜೀವ**ಗೋಸ್ವಾಮಿಯ** ವೈಷ್ಣವತೋಷಿಣಿಯಲ್ಲಿಯೇ ಇನ್ನೊಂದು ಕಡೆ (ಭಾಗ.೧೦.೮೮.೨ **ಶ್ರೀಧರೀಪಾಠ**) ಹೀಗೆ ಹೇಳಿದೆ—

'ಹರಿಭಕ್ತರಿಗೆ ಸಂಪತ್ತು ನಾಶವಾಗುತ್ತದೆ, ಶಿವಭಕ್ತರಿಗೆ ಸಂಪ**ತ್ತು ಲಭಿಸುತ್ತದೆ**. ಅದರಿಂದ ಲಕ್ಷ್ಮಿ ಹರಿಯ ಪತ್ನಿಯಾದರೂ ಶಿವನ ಅಧೀನಳು! **ಅದರಿಂದ ಶಿವ** ದೊಡ್ಡವನೆನ್ನುವುದು ಕೂಡುತ್ತದೆ. ಇದನ್ನು ನೇರವಾಗಿ ಹೇಳ**ದೆ ಹೀಗೆ** ಪರ್ಯಾಯವಾಗಿ ಹೇಳಿದ್ದು ನೇರವಾಗಿ ಹೇಳಲು ಸಂಕೋಚ**ದಿಂದ ಎಂದು** ತಿಳಿಯಬೇಕು.'

ಹೀಗೆ ರುಕ್ಮಿಣಿ 'ಅಬ್ಜಭವನಾಕಪತೀನ್' ಎಂಬಲ್ಲಿ ಬ್ರಹ್ಮಇಂದ್ರಾದಿಗ**ಳನ್ನು ಹೇಳಿ**, ಶಿವನನ್ನು ಹೇಳದೆ ಬಿಟ್ಟಿದ್ದಾಳೆ ಎಂದು ಗ್ರಹಿಸಿದರೆ ಪ್ರಮಾದ**ವಾದೀತೆಂದು** ಶ್ರೀಮದಾಚಾರ್ಯರು ವ್ಯಾಖ್ಯಾನ ಮಾಡುತ್ತಾರೆ—

ಅಬ್ಜೋ ಬ್ರಹ್ಮಾ ।
ಸೋಽದ್ಭ್ಯ ಏವ ಪುರುಷಂ ಸಮುದ್ಧೃತ್ಯಾಮೂರ್ಛಯದಿತಿ ಶ್ರುತಿಃ ।
ಅದ್ಭ್ಯಃ ಸಂಭೂತೋ ಹಿರಣ್ಯಗರ್ಭ ಇತ್ಯಷ್ಟೌ ಇತಿ ಚ ॥

'ಅಬ್ಜಭವ ನಾಕಪತೀನ್' ಎಂಬಲ್ಲಿ ಅಬ್ಜಶಬ್ದದಿಂದ ಬ್ರಹ್ಮನನ್ನು ಗ್ರಹಿಸಬೇಕು, ಭವ ಶಬ್ದದಿಂದ ಶಿವನನ್ನು ಗ್ರಹಿಸಬೇಕು. 'ಅಪ್' ಅಂದರೆ ನೀರಿನಿಂದ ಹುಟ್ಟಿದ್ದರಿಂದ 'ಅಬ್‌ಜ' ಅಬ್ಜ ಎಂದು ಬ್ರಹ್ಮನಿಗೆ ಹೆಸರು. 'ಅಪ್' ಉಪಲಕ್ಷಣ. ಜಲಾದಿಪಂಚಭೂತಗಳಿಂದ ಬ್ರಹ್ಮನ ಶರೀರ ಹುಟ್ಟಿದೆ.

'ಶ್ರೀಹರಿ ಜಲಾದಿ ಪಂಚಭೂತಗಳ ಅಂಶಗಳನ್ನು ತೆಗೆದು ಅವುಗಳಿಂದ ಚತುರ್ಮುಖ ಬ್ರಹ್ಮನನ್ನು ಸಶರೀರನ್ನಾಗಿ ಮಾಡಿದನೆಂ'ದು ಶ್ರುತಿ ಇದೆ.

---

೩. ವಿರುದ್ಧಂ ಶೀಲಂ ಕ್ರಮಾದ್ ಭೋಗತ್ಯಾಗ-ಸ್ವೀಕಾರಲಕ್ಷಣಃ ಸ್ವಭಾವೋ ಯ**ಯೋಸ್ತಯೋಃ।** ಪ್ರಭ್ವೋರಿತಿ ಕರ್ಮಣಿ ಷಷ್ಠೀ, ತೌ ಭಜತಾಂ ವಿರುದ್ಧಾ ತತ್ತತ್‌ಸ್ವಭಾವವಿಪ**ರೀತಾ ಕ್ರಮಾದ್** ಧನಭೋಗಪ್ರಾಪ್ತಿ-ತನ್ನಾಶಲಕ್ಷಣಾ ಗತಿಃ ಫಲಂ। ಅತಃ ಶ್ರೀಶಿವಭಕ್ತಾನಾಂ **ಸಾಕ್ಷಾದ್ವನಾದಿ** ವಿಭೂತಿದರ್ಶನಾತ್ ಹರೇಃ ಪತ್ನ್ಯಪಿ ಲಕ್ಷ್ಮೀಃ ಶ್ರೀಶಿವಸ್ಯಾಧೀನೇತಿ ತಸ್ಯೈ**ವೋತ್ಕರ್ಷೋ** ಘಟೇತೇತಿ ಭಾವಃ। ಸಾಕ್ಷಾತ್ತಥಾನುಕ್ತಿಸ್ತು ಸಂಕೋಚಾದೇವೇತಿ ಜ್ಞೇಯಂ॥

-ಜೀವಗೋಸ್ವಾಮೀ

ಇಲ್ಲಿ 'ಪುರುಷ' ಎಂದು ಬ್ರಹ್ಮನನ್ನು ಗ್ರಹಿಸಬೇಕು. ಏಕೆಂದರೆ ನೀರಿನಿಂದ ಹುಟ್ಟಿದವನು ಹಿರಣ್ಯಗರ್ಭ ಎಂದು ಸ್ಪಷ್ಟವಾಗಿ ಇನ್ನೊಂದು ಶ್ರುತಿ ಹೇಳಿದೆ—'ಜಲಾದಿಗಳಿಂದ ಹುಟ್ಟಿದ ಹಿರಣ್ಯಗರ್ಭನು ಹರಿಯನ್ನು 'ಅಂಭಸ್ಯಪಾರೇ' 'ಜಲಾಶಾಯಿಯಾದ ಶ್ರೀಹರಿ ಸರ್ವಾಧಾರನೆಂ'ದು ಮುಂತಾಗಿ ಸ್ತುತಿಸಿದನೆಂ'ದಿದೆ.

❖❖❖

ಪ್ರಣಯಕಲಹ ಪ್ರಸಂಗದಲ್ಲಿ ಶ್ರೀಕೃಷ್ಣ ರುಕ್ಮಿಣಿಗೆ ಹೀಗೆ ಹೇಳಿದ್ದಾನೆ—

ಅಥಾತ್ಮನೋಽನುರೂಪಂ ವೈ ಭಜಸ್ವ ಕ್ಷತ್ರಿಯರ್ಷಭಂ ।
ಯೇನ ತ್ವಮಾಶಿಷಃ ಸತ್ಯಾ ಇಹಾಮುತ್ರ ಚ ಲಪ್ಸ್ಯಸೇ ॥

ಇದಕ್ಕೆ ಉತ್ತರವನ್ನು ದೇವಿ ಹೇಳುತ್ತಾಳೆ.

ಕಾ ಸ್ತ್ರೀ ವೃಣೀತ ತವ ಪಾದಸರೋಜಗಂಧ-
ಮಾಘ್ರಾಯ ಸನ್ಮುಖರಿತಂ ಜನತಾಪವರ್ಗಮ್ ।
ಲಕ್ಷ್ಮ್ಯಾಲಯಂ ತ್ವವಿಗಣಯ್ಯ ಗುಣಾಲಯಾಢ್ಯಂ
ಮರ್ತ್ಯಾಶಿಷೋರುಭಯಮರ್ಥವಿವಿಕ್ತದೃಷ್ಟಿಃ ॥ ೪೬ ॥

'**ಅರ್ಥವಿವಿಕ್ತದೃಷ್ಟಿ**' ನೀನು 'ಅರ್ಥ' ಶಾಶ್ವತ ಬಿಂಬ ಮೂರ್ತಿ. ಬೇರೆ ಎಲ್ಲರೂ '**ಪ್ರತ್ಯರ್ಥ**'ರು ಕೇವಲ ನಿನ್ನ ಪ್ರತಿಬಿಂಬ ಮಾತ್ರರು ಎಂದು ಸ್ಪಷ್ಟ ತಿಳಿದಿರುವ ಯಾವ ಹೆಣ್ಣು ತಾನೆ ಸಜ್ಜನರಿಂದ ಸರ್ವೋತ್ತಮ ಅರ್ಥ, ಪುರುಷಾರ್ಥವೆಂದು **ಹೊಗಳಲ್ಪಡುವ**, ಸಜ್ಜನ ಸಮೂಹಕ್ಕೆ ಮೋಕ್ಷಪ್ರದವಾದ ನಿನ್ನ ಪಾದಕಮಲ ಗಂಧವನ್ನು **ಆಘ್ರಾಣಿಸಿದ** ಬಳಿಕ, ಸಕಲ ಸಂಪತ್ತಿಗೆ ಶೌರ್ಯಾದಿ ಸತ್ಯಗುಣಗಳಿಗೆ ಆಶ್ರಯನಾಗಿದ್ದು **ಶ್ರೀಮಂತನೆನಿಸಿದ**, 'ಅತ್ರ ಚ ಪರತ್ರ ಚ ಕಾಮರೂಪಂ' ಇಹ ಪರಗಳೆರಡಲ್ಲಿಯೂ **ಕಾಮಿತಾರ್ಥ** ಪ್ರದನಾದ ನಿನ್ನನ್ನು ತಿರಸ್ಕರಿಸಿ ನಶ್ವರಲೌಕಿಕ ಸಂಪತ್ತಿನಿಂದ ಮಹಾ**ಭಯವುಳ್ಳ** ಜನರನ್ನು ವರಿಸುವಳು?

ತಂ ತ್ವಾನುರೂಪಮಭಜಂ ಜಗತಾಮಧೀಶ
ಮಾತ್ಮಾನಮತ್ರ ಚ ಪರತ್ರ ಚ ಕಾಮರೂಪಮ್ ।
ಸ್ಯಾನ್ಮೇ ತವಾಂಘ್ರಿಶರಣಂ ಶ್ರುತಿಭಿರ್ಭ್ರಮತ್ಯಾ
ಯೇ ವೈ ಭಜಂತಿ ಉತ ಯಾಂತ್ಯನೃತಾಪವರ್ಗಮ್ ॥ ೪೭ ॥

ಜಗದೀಶನಾದ ಸ್ವಾಮಿಯಾದ ನಿನ್ನನ್ನೇ ಅನುರೂಪನಾದ ವರನೆಂದು ನಾನು ವರಿಸಿದ್ದೇನೆ. ನಿನ್ನನ್ನು ಭಜಿಸುವವರು ಅಸ್ಥಿರವಾದ ಸಂಸಾರದಿಂದ ಮುಕ್ತಿಹೊಂದುವರು. ನಿನ್ನ ನನ್ನ ವಿಷಯದಲ್ಲಿ ಅನ್ಯಥಾ ತಿಳಿಯುವ ಸ್ವಭಾವದ ಶಿಶುಪಾಲಾದಿ ಅಸುರರನ್ನು ನಾನು ಸಂಹರಿಸುವೆನು ತಮಸ್ಸಿನಲ್ಲಿ ಹಾಕುವೆನೆಂದು ಶ್ರುತಿಸ್ಮೃತಿಗಳಲ್ಲಿ ಹೇಳಿದೆ. ಅಂಥ ಸಾಮರ್ಥ್ಯ ನನ್ನಲ್ಲಿ ನಿನ್ನ ಅಧೀನವಾದ್ದರಿಂದ ನಾನು ನಿನ್ನ ಪಾದವನ್ನೇ ಶರಣು ಹೋಗುವೆನು.

ಇಲ್ಲಿ 'ಸನ್ಮುಖರಿತಂ' ಎಂದರೆ 'ಭಗವಂತನ ಪಾದಕಮಲ ಸುಗಂಧವನ್ನು ಸಜ್ಜನರು ವರ್ಣಿಸುತ್ತಾರೆ' ಎಂದು ಶ್ರೀಧರವ್ಯಾಖ್ಯಾನ ಹೇಳಿದೆ. 'ಆಘ್ರಾಣಿಸುತ್ತಾರೆ' ಎಂದು ವೀರರಾಘವವ್ಯಾಖ್ಯಾನ ಹೇಳಿದೆ. ಆದರೆ 'ಮುಖರಿತ' ಶಬ್ದಕ್ಕೆ ಇದು ಗೌಣಾರ್ಥ. 'ಮುಖರಾಣಿ ನೂಪುರಾಣಿ' 'ಗೆಜ್ಜೆಗಳು ಧ್ವನಿಗೈಯುತ್ತವೆ.'

ಕಲ್ಯಾಣಂ ವೋ ವಿಧತ್ತಾಂ ಕರಟಮದಧುನೀಲೋಲ ಕಲ್ಲೋಲಮಾಲಾ
ಖೇಲಲ್ಲೋಲಂಬಕೋಲಾಹಲ ಮುಖರಿತ ದಿಕ್‌ಚಕ್ರವಾಲಾಂತರಾಲಂ ।

'ಗಣೇಶನ ಕುಂಭಸ್ಥಲದಲ್ಲಿ ಸುರಿವ ಮದಜಲದ ಗಂಧಕ್ಕೆ ದುಂಬಿಗಳು ಮುತ್ತಿ ಕೋಲಾಹಲ ಮಾಡಿದಾಗ ದಿಕ್ಕುಗಳಲ್ಲಿ ಪ್ರತಿಧ್ವನಿಯಾಗುವುದು' ಎಂದು ಚಂಪು ಭಾರತದ ಮಂಗಳಾಚರಣೆ ಇದೆ. ಹೀಗೆ ಅಚೇತನವಾದ ನೂಪುರಗಳಾಗಲಿ ಭ್ರಮರ ಮುಂತಾದ ಮಾತನಾಡದ ಪ್ರಾಣಿಕೀಟಗಳಾಗಲಿ 'ಮುಖರ'ವೆನಿಸುವುದು 'ಧ್ವನಿ' ಎಂಬ ಗೌಣಾರ್ಥದಲ್ಲಿ, ಆದರೆ ಮಾತನಾಡುವ ಜನರು ಮುಖರರೆನಿಸುವುದು 'ಕೆಟ್ಟ ಮಾತನಾಡುವುದೆಂ'ಬ ಮುಖ್ಯಾರ್ಥದಲ್ಲಿಯೇ. ಅದರಿಂದ ವಿಶ್ವನಾಥ ವ್ಯಾಖ್ಯಾನದಲ್ಲಿ ಸಜ್ಜನರನ್ನು ಭಗವಂತನ ಪಾದಕಮಲಗಳಲ್ಲಿ ದುಂಬಿಗಳೆಂದು ರೂಪಕ ಮಾಡಿಕೊಂಡು 'ಶಬ್ದ ಮಾಡುವರೆಂ'ದು 'ಸದ್ಭಿರ್ಭ್ರಮರೈರಿವ ಮುಖರಿತಂ' ಎಂದಿದ್ದಾರೆ. ಇದು ವಿಶ್ವನಾಥ ಮಾಡಿಕೊಂಡ ರೂಪಕ. ಭಾಗವತದಲ್ಲಿ ಇಲ್ಲ.

'ಮುಖರ' ಶಬ್ದಕ್ಕೆ ಮುಖ್ಯಾರ್ಥದಲ್ಲಿ ಪ್ರಯೋಗ—

'ಏಕಾ ಭಾರ್ಯಾ ಪ್ರಕೃತಿ ಮುಖರಾ ಚಂಚಲಾಽಥ ದ್ವಿತೀಯಾ'

'ಒಬ್ಬಳು ಹೆಂಡತಿ ಬಿರುನುಡಿ ಸ್ವಭಾವದವಳು, ಇನ್ನೊಬ್ಬಳು ಚಂಚಲೆ'

'ಮುಖರ' ಶಬ್ದ ಮುಖ್ಯಾರ್ಥವೇನು ಎಂಬಲ್ಲಿ ಕೋಶ, ಅಮರಕೋಶ—

'ದುರ್ಮುಖೇ ಮುಖರಾಬದ್ಧಮುಖೌ'

'ಮುಖರ' ಎಂದರೂ 'ಅಬದ್ಧಮುಖ' ಎಂದರೂ ಕೆಟ್ಟ ಮಾತಾಡುವವನೆಂದ'ರ್ಥ.

ವ್ಯಾಕರಣವೂ ಇದನ್ನೇ ಹೇಳುತ್ತದೆ–

'ಊಷ ಸುಷಿ ಮುಷ್ಕ ಮಧೋ ರಃ' ಎಂದು ರಪ್ರತ್ಯಯವನ್ನು ವಿಧಿಸುವ ಸೂತ್ರದಲ್ಲಿ ವಾರ್ತಿಕ ಹೀಗೆ ಹೇಳುತ್ತದೆ–

'ರ ಪ್ರಕರಣೇ ಖ ಮುಖ ಕುಂಜೇಭ್ಯ ಉಪಸಂಖ್ಯಾನಂ'

'ಖ ಮುಖ ಕುಂಜ ಶಬ್ದಗಳಿಗೂ ರ ಪ್ರತ್ಯಯ ಬರುತ್ತದೆ' ಎಂದು. ಅದರಿಂದ ಖರ ಮುಖರ ಕುಂಜರ ಶಬ್ದಗಳಾಗುತ್ತವೆ. 'ಸರ್ವಸ್ಮಿನ್ ವಕ್ತವ್ಯೇ ಮುಖಮಸ್ತಿ' 'ಇದನ್ನು ಹೇಳಬಾರದು, ಇದನ್ನು ಹೇಳಬಹುದೆಂಬ ವಿವೇಕವಿಲ್ಲದೆ ಎಲ್ಲವನ್ನೂ ಹೇಳುವುದಕ್ಕೆ ಅಂದರೆ ಕೆಟ್ಟ ಮಾತನ್ನಾಡುವುದಕ್ಕೆ ಮುಖ ಉಳ್ಳವನು' ಎಂ ಅರ್ಥದಲ್ಲಿ ಮುಖ ಶಬ್ದಕ್ಕೆ ರ ಪ್ರತ್ಯಯ.

ಹೀಗೆ ಪ್ರಯೋಗ ಕೋಶ ವ್ಯಾಕರಣಗಳಿಂದ ಮುಖರ ಶಬ್ದದ ಮುಖ್ಯಾರ್ಥ 'ಕೆಟ್ಟ ಮಾತನ್ನಾಡುವವನು' ಎಂದಾಗುತ್ತದೆ ಹೊರತು ಶ್ರೀಧರ ಮುಂತಾ ವ್ಯಾಖ್ಯಾನಗಳು ಹೇಳುವಂತೆ ವರ್ಣಿಸುವವನು, ಸ್ತುತಿಸುವವನು ಎಂದಲ್ಲ. ಹೀಗಾ 'ಸನ್ಮುಖರಿತ' ಎಂದರೆ 'ಸಜ್ಜನರಿಂದ ನಿಂದಿಸಲ್ಪಡುವುದು ಭಗವಂತನ ಪಾದಕಮ ಎಂದು ವಿಪರೀತಾರ್ಥ ಬರುವುದರಿಂದ ಗೌಣಾರ್ಥ ಮಾಡಬೇಕಾಗುತ್ತದೆ. 'ಸ್ವಾಯತ್ತೇ ಶಬ್ದಪ್ರಯೋಗೇ' ಎಂಬಂತೆ ಏನೂ ಪ್ರಯೋಜನವಿಲ್ಲದೆ, ವಿಪರೀತಾರ್ಥವೂ ಹೊರಡುವಂತೆ, ಗೌಣ ಪ್ರಯೋಗವನ್ನೇಕೆ ಮಾಡಬೇಕು?

ಅದಕ್ಕೆ ಶ್ರೀಮದಾಚಾರ್ಯರು ಮುಖ್ಯಾರ್ಥದಲ್ಲಿಯೇ 'ಮುಖರಿತ' ಶಬ್ದವಿದೆ **ಎನ್ನುತ್ತಾರೆ.** ಮುಖರ ಶಬ್ದಕ್ಕೆ 'ಮುಖ್ಯ' ಎನ್ನುವುದೇ ಮುಖ್ಯಾರ್ಥ ಎನ್ನುತ್ತಾರೆ. ಮುಖ್ಯ **ಎಂಬ ಅರ್ಥದ 'ಮುಖ'** ಶಬ್ದಕ್ಕೆ 'ಮುಖರ' ಶಬ್ದ ಪರ್ಯಾಯವಾಗಿದೆ.

ಮುಖ ಶಬ್ದಕ್ಕೆ ಮುಖ್ಯ ಎಂಬ ಅರ್ಥವಿದೆ ಎನ್ನುವುದಕ್ಕೆ ಶ್ರೀಮದಾಚಾರ್ಯರೇ ಉದಾಹರಿಸಿರುವ **ಅಭಿಧಾನ**–

ಮಣಿ ರ್ಮುಖಂ ಪ್ರಧಾನಂ ಚೇತ್ಯುತ್ತಮಸ್ಯ ವಚೋ ಭವೇತ್ ।

ವೈಜಯಂತೀಕೋಶ- ಮುಖಂ ತು ವದನೇ ಮುಖ್ಯಾರಂಭೇ ದ್ವಾರಾಭ್ಯು-ಪಾಯಯೋಃ॥

ಯಾದವಕೋಶ– **ಮುಖಂ ತು ವದನೇ ಮುಖ್ಯೇ ।**

ನಾನಾರ್ಥರತ್ನಮಾಲಾ– **ಮುಖಂ ಪ್ರಧಾನೇ ಪ್ರಾರಂಭೇ ।**

ಮುಖ್ಯ ಎಂಬ **ಅರ್ಥದಲ್ಲಿ ಮುಖ ಶಬ್ದಪ್ರಯೋಗ** ಮಹಾಭಾರತದಲ್ಲಿ (೨.೩೮.೨೯)

ಪರ್ವತಾನಾಂ ಮುಖಂ ಮೇರುರ್ಗರುಡಃ ಪತತಾಂ ಮುಖಂ ।
ಸದೇವಕೇಷು ಲೋಕೇಷು ಭಗವಾನ್ ಕೇಶವೋ ಮುಖಂ ॥

ಹೀಗೆ ಪ್ರಧಾನ ಎಂಬ ಅರ್ಥದ ಮುಖಶಬ್ದಕ್ಕೆ ಸ್ವಾರ್ಥದಲ್ಲಿ ರ **ಪ್ರತ್ಯಯ** ಬಂದಾಗ ಸಿಗುವ ಮುಖರ ಶಬ್ದಕ್ಕೂ ಪ್ರಧಾನ ಎಂಬ ಅರ್ಥ **ಕೂಡುತ್ತದೆ.** 'ಗತೇರರ್ಥವತ್ತ್ವಂ' ಎಂಬಂತೆ ಸ್ವಾರ್ಥದಲ್ಲಿ ಪ್ರತ್ಯಯ ಎಂದು **ಸತ್ಯಧರ್ಮ** ತೀರ್ಥರು ಹೇಳುತ್ತಾರೆ. 'ಮುಖರ' ಶಬ್ದವನ್ನು ಭಾವಪ್ರಧಾನವಾಗಿ **ಇಟ್ಟುಕೊಂಡು** 'ಮುಖರಂ ಮುಖರತ್ವಂ ಸಂಜಾತಂ ಯಸ್ಯ ತತ್ ಮುಖರಿತಂ' ಎಂದು **ತಾರಕಿತಾದಿ** ಶಬ್ದಗಳಂತೆ ಇತಚ್ ಪ್ರತ್ಯಯಾಂತ ಮುಖರಿತ ಶಬ್ದವನ್ನು ಕೂಡಿಸಬೇಕು. **ಇದನ್ನೇ** 'ಪ್ರಧಾನೀಕೃತಂ' ಎಂದು ಶ್ರೀಮದಾಚಾರ್ಯರು ಹೇಳಿದ್ದಾರೆ. **ಅನಾದಿಕಾಲ** ದಿಂದಲೂ ಭಗವಂತನ ಪಾದಕಮಲಗಂಧ ಮುಖರವೆ, ಪ್ರಧಾನವೆ. **ಮುಖರತ್ವ** ಅದಕ್ಕೆ ಸಂಜಾತ ಹೇಗೆ? ಅದು ಪ್ರಧಾನವಾಗಿ ಕೃತ ಹೇಗೆ? **ಎಂದರೆ,** ಮುಖರವೆಂದು ಪ್ರಧಾನವೆಂದು ತಿಳಿಸುತ್ತಾರೆ ಸಜ್ಜನರು. ಅದರಿಂದ **'ಸದ್ಭಿಃ** ಮುಖರಿತಂ, ಪ್ರಧಾನೀಕೃತಂ।' ಎನ್ನಬಹುದು.

ಶ್ರೀವೇಂಕಟಲಸಚ್ಛೈಲವಾಸೀ ದಾಸೀಕೃತಾಮರಃ ।
ಛಾಯಯಾ ಪಾತು ಮಾಂ ನಿತ್ಯಂ ಶ್ರೀನಿವಾಸಸುರದ್ರುಮಃ ।

ಶ್ರೀನಿವಾಸ 'ದಾಸೀಕೃತಾಮರ' ದೇವತೆಗಳನ್ನು ದಾಸರನ್ನಾಗಿ ಮಾ**ಡಿಕೊಂಡ** ನೆಂದರೆ ಹೇಗೆ? ಅನಾದಿಕಾಲದಿಂದಲೂ ಅವರು ದಾಸರೆ ತಾನೆ? **ಅದರಿಂದ** ದಾಸರೇ ಆಗಿದ್ದ ಅವರನ್ನು ದಾಸರೆಂದು ತನ್ನ ಲೀಲೆಗಳಿಂದ ತಿಳಿಸಿದ**ನೆಂದರ್ಥ.** ಹಾಗೇ ಸಜ್ಜನರು ತಮ್ಮ ಚರಿತ್ರೆಗಳಿಂದ ಹರಿಯ ಪಾದಕಮಲಗಂಧ ಸ**ರ್ವೋತ್ತಮ** ವೆಂದು ತೋರಿಸಿಕೊಟ್ಟರೆಂದರ್ಥ.

ಹೀಗೆ 'ಮುಖರಿತ' ಶಬ್ದದ ಮುಖ್ಯಾರ್ಥವೆ ಹರಿಸರ್ವೋತ್ತ**ಮತ್ವವನ್ನು** ಹೇಳುತ್ತಿದೆ. ಬೇರೆ ವ್ಯಾಖ್ಯಾನಕಾರರು ಹೇಳುವ ಗೌಣಾರ್ಥವಿಟ್ಟು**ಕೊಂಡರೂ** 'ಸಜ್ಜನರು ವರ್ಣಿಸುತ್ತಾರೆ, ಸ್ತುತಿಸುತ್ತಾರೆ' ಎಂದಿಷ್ಟೇ ಹೇಳಿದಂ**ತಾಗುವುದು.** ಸರ್ವೋತ್ತಮನೆಂದು ಸ್ತುತಿಯನ್ನು ಹೇಳಿದಂತಾಗುವುದಿಲ್ಲ.

'ಮರ್ತ್ಯಾಶಿಷೋರುಭಯಂ' ಎಂಬಲ್ಲಿ 'ಮರ್ತ್ಯಂ ಸದೋರುಭ**ಯಂ' ಎಂದು** ವೀರರಾಘವಪಾಠ. 'ಮರ್ತ್ಯಾ ಸದೋರುಭಯಂ' ಎಂದು ಶ್ರೀಧ**ರಾದಿಗಳ ಪಾಠ.** 'ಕಾ ಸ್ತ್ರೀ ವೃಣೀತ' ಎಂಬಲ್ಲಿ 'ಕಾನ್ಯಂ ಶ್ರಯೀತ' ಎಂದು ಶ್ರೀಧರ **ಮುಂತಾದವರೆಲ್ಲರ** ಪಾಠವಿದೆ. 'ಮರ್ತ್ಯಂ ಸದೋರುಭಯಮನ್ಯಂ ಕಾ ಶ್ರಯೀತ?' **ಎಂದು, ಅಥವಾ**

'ಮರ್ತ್ಯಾ ಕಾ ಸದೋರುಭಯಮನ್ಯಂ ಶ್ರಯೀತ?' ಎಂದು ಅನ್ವಯ ಮಾಡುತ್ತಾರೆ. ನಮ್ಮ 'ಕಾ ಸ್ತ್ರೀ ವೃಣೀತ' ಎಂಬ ಪಾಠದಲ್ಲಿ 'ಅನ್ಯಂ' ಎಂದು ವಿಶೇಷ್ಯ ಸಿಗುವುದಿಲ್ಲ. ಅದಕ್ಕೆ 'ಜನಂ' ಎಂದು ಅಧ್ಯಾಹಾರ ಮಾಡಬೇಕೆಂದು 'ಮರ್ತ್ಯಾಶಿಷೋರುಭಯಂ ಜನಂ' ಎಂದು ಶ್ರೀಮದಾಚಾರ್ಯರು ಹೇಳುತ್ತಾರೆ. ಇದರಿಂದ ಪಾಠಶುದ್ಧಿಯನ್ನು ಮಾಡಿದಂತಾಗುವುದು.

'ಅರ್ಥವಿವಿಕ್ತದೃಷ್ಟಿಃ' ಎಂಬಲ್ಲಿ ಅರ್ಥ ಎಂದರೆ ಪದಾರ್ಥ. ಪದಾರ್ಥ ವಿವೇಚನೆಯ ದೃಷ್ಟಿ ಎಂದು ಬೇರೆ ವ್ಯಾಖ್ಯಾನಕಾರರು ಹೇಳುತ್ತಾರೆ. ಪದಾರ್ಥ ವಿವೇಚನೆ ಎಂದರೆ ನಿತ್ಯಾನಿತ್ಯವಸ್ತು ವಿವೇಕವಿರಬಹುದು, ಭಾವಾಭಾವಾ ವಿವೇಕವಿರಬಹುದು. ವೀರರಾಘವವ್ಯಾಖ್ಯಾನ ಹೇಳುವಂತೆ ಹಿತಾಹಿತ ವಿವೇಕವಿ ಬಹುದು. ಪ್ರಕೃತದಲ್ಲಿ ಸ್ವಯಂವರ ಕನ್ಯೆ ಇಂಥ ಪದಾರ್ಥವಿವೇಚನೆಗಳನ ಮಾಡುವುದು ವ್ಯರ್ಥಕಾಲಹರಣ. ತನಗೆ ಪತಿ ಯಾರಾಗಬೇಕೆಂದು ವಿಚಾ ಮಾಡಬೇಕು. ಅದಕ್ಕೆ ಪ್ರತಿ ಎಂದು ಅಧ್ಯಾಹಾರ ಮಾಡಿದರೆ 'ಅರ್ಥ ಪ್ರತ್ಯರ್ಥವಿವೇಕ' ಅಂದರೆ, ಯಾರು ಅರ್ಥ ಪರಮಪುರುಷಾರ್ಥ, ಬಿಂಬ, ಯಾರ ಪ್ರತ್ಯರ್ಥ ಅವನಿಗೆ ಪ್ರತಿಬಿಂಬ? ಹರಿಯೇ ಪರಮಪುರುಷಾರ್ಥ ಬಿಂಬ, ಬೇರ ಎಲ್ಲರೂ ಪ್ರತಿಬಿಂಬರು ಎಂದು ವಿಚಾರ ಮಾಡಿ, ಸಾಕ್ಷಾತ್ ಹರಿಯನ್ನೋ, ಅಥವಾ ಅವನ ವಿಶೇಷ ಸನ್ನಿಧಾನಪಾತ್ರನಾದ ಯೋಗ್ಯವರನನ್ನೋ ಕನ್ಯೆ ವರಿಸಬೇಕು ಎಂದು ಹೇಳಿದಂತಾಗುತ್ತದೆ. ಹರಿಗಿಂತ ಬೇರೆ ಎಲ್ಲರೂ ಅವನಿಗೆ ಪ್ರತಿಬಿಂಬರು ಏಕೆಂದರೆ 'ಮರ್ತ್ಯಾಶಿಷೋರುಭಯ'ರು ನಶ್ವರ ಸಂಪತ್ತನ್ನು ಗಳಿಸಿ ದುಃಖಭಾಗಿಗಳಾಗುವವರು ಎಂದು ಉಪಪಾದನೆ ಮಾಡಿದಂತಾಗುವುದು. ಅದರಿಂದ ಶ್ರೀಮದಾಚಾರ್ಯರು–

'ಪ್ರತಿ ಅರ್ಥೋಯಮಿತಿ ವಿವಿಕ್ತ ದೃಷ್ಟಿಃ'

ಎಂದಿದ್ದಾರೆ. 'ಮರ್ತ್ಯಾಶಿಷೋರುಭಯಂ ಜನಂ ಪ್ರತಿ ಅರ್ಥೋಯಮಿತಿ ವಿವಿಕ್ತ ದೃಷ್ಟಿಃ' 'ನಶ್ವರ ಸಂಪತ್ತಿನಿಂದ ದುಃಖಪಡುವ ಜನರಿಗೆ ಬಿಂಬನು ಈ ಹರಿ ಎಂದು ವಿವೇಚನ ಉಳ್ಳವಳು' ಎಂಬ ಅರ್ಥವೂ ವಿವಕ್ಷಿತವಾಗಿದೆ. ಅದರಿಂದ 'ಜನಂ ಪ್ರತಿ' 'ಜನರಿಗೆ' ಎಂದು ಅಧ್ಯಾಹಾರ ಬೇಕಾಗುತ್ತದೆ.

ಎರಡನೇ ಶ್ಲೋಕದಲ್ಲಿ 'ಅತ್ರ ಚ ಪರತ್ರ ಚ ಕಾಮರೂಪಂ ತಂ ತ್ವಾನುರೂಪಮಭಜಂ' 'ಇಹ ಪರಗಳಲ್ಲಿ ಅಭೀಷ್ಟವನ್ನು ನೀಡುವ ನಿನ್ನನ್ನೇ ವರಿಸಿದ್ದೇನೆ' ಎಂದು ದೇವಿ ಹೇಳುವುದು ಕೂಡಲಾರದು. ದೇವಿ ನಿತ್ಯಮುಕ್ತಳು. ಅವಳಿಗೆ ಇಹಪರವೆಂದು ಭೇದವಿಲ್ಲ, ಸಂಸಾರಿ ಜೀವರಿಗೆ ಮಾತ್ರ ಅಂಥ ಭೇದವಿದೆ. ಅದರಿಂದ 'ಅತ್ರಚ ಪರತ್ರಚ ಕಾಮರೂಪಂ' ಎಂಬ ಅಂಶವನ್ನು ಈ ಶ್ಲೋಕದಿಂದ

ಬೇರ್ಪಡಿಸಿ ಹಿಂದಿನ ಶ್ಲೋಕದಲ್ಲಿ 'ಅವಿಗಣಯ್ಯ' ಎಂಬಲ್ಲಿಗೆ **ಅನ್ವಯಿಸಿ** 'ಇಹಪರಗಳಲ್ಲಿ ಅಭೀಷ್ಟದಾಯಕನಾದ ನಿನ್ನನ್ನು ಬಿಟ್ಟು **ನಶ್ವರಸಂಪತ್ತಿನಿಂದ** ದುಃಖಭಾಗಿಯಾದ ಇನ್ನೊಬ್ಬನನ್ನು ಯಾವ ಸ್ತ್ರೀ ವರಿಸುವಳು?' ಎಂದು **ದೇವಿ ಎಲ್ಲ** ಸ್ತ್ರೀಯರ ಬಗ್ಗೆ ಹೇಳುತ್ತಿದ್ದಾಳೆ ಎನ್ನಬೇಕು. ಅದಕ್ಕೆ ಶ್ರೀಮ**ದಾಚಾರ್ಯ**ರು 'ಕಾಮರೂಪಂ ತ್ವಾಮವಿಗಣಯ್ಯ' ಎಂದು ಅನ್ವಯವನ್ನು ತೋರಿಸಿದ್ದಾರೆ.

'ಶ್ರುತಿಭಿರ್ಭ್ರಮತ್ಯಾಃ' ಎಂಬಲ್ಲಿ 'ಸೃತಿಭಿರ್ಭ್ರಮಂತ್ಯಾಃ' ಎಂದು **ಬೇರೆಯವರ** ಪಾಠ. 'ಸೃತಿಭಿಃ ದೇವತಿರ್ಯಗಾದಿ ಜನ್ಮಭಿಃ' 'ದೇವಜನ್ಮ **ಪ್ರಾಣಿಜನ್ಮಗಳಲ್ಲಿ** ಅಲೆಯುವವಳು ದೇವಿ' ಎಂದು ವಿವರಣೆ. 'ಶ್ರುತಿಭಿರ್ಭ್ರಮಂ**ತ್ಯಾಃ' ಎಂದು** ಇನ್ನೊಂದು ಪಾಠವನ್ನೂ ಒಪ್ಪಿದ್ದಾರೆ. 'ಶ್ರುತಿಭಿಃ' ಎಂದರೆ ಕೇಳಿ **ಕೇಳಿ, ಶ್ರೀಹರಿ** ರಾಮಾವತಾರದಲ್ಲಿ ಸೀತೆಯನ್ನು ಪರಿತ್ಯಾಗಮಾಡಿದನೆಂದು 'ಕೇಳಿ', **ಕೃಷ್ಣಾವತಾರ** ದಲ್ಲಿಯೂ ಗೋಪಿಯರನ್ನು ತೊರೆದನೆಂದೂ 'ಕೇಳಿ', ನನಗೆ ಮತಿಭ್ರಮ**ಣೆಯಾಗಿದೆ** ಎನ್ನುತ್ತಾಳೆ ದೇವಿ. ಈ ಎರಡೂ ವಿವರಣೆಗಳು ಸರಿಯಲ್ಲ. ದೇವಿಗೆ ದೇವ**ಜನ್ಮವಿರಲಿ** ಪ್ರಾಣಿಜನ್ಮವಿರಲಿ ಅದು ಕೇವಲ ಸ್ವೇಚ್ಛೆಯಿಂದ ಆಯಾ ರೂಪಗಳನ್ನು ತೋರು**ವುದೇ** ಹೊರತು ಸಂಸಾರಿಜೀವರಂತೆ ಅವಳು ಹುಟ್ಟುವುದಿಲ್ಲ. ಅವತಾರಗಳಿಂದ **ದೇವಿ** ಸಂಸಾರದಲ್ಲಿ ಭ್ರಮಣ ಮಾಡುವುದಿಲ್ಲ. ಸೀತಾಪರಿತ್ಯಾಗ ಸೀತೆಗೆ ಇಷ್ಟ**ವೇ ಆಗಿತ್ತು**, 'ಜನಾಪವಾದದಿಂದ ನಾವಿಬ್ಬರೂ ಬೇರೆ ಆಗಲೇಬೇಕಿತ್ತು, ನೀನು **ಒಂದುವೇಳೆ** ನನ್ನನ್ನು ಬಿಡಲು ಒಪ್ಪದಿದ್ದರೂ ನಾನಾಗಿ ನಿನ್ನನ್ನು ಬಿಡುತ್ತಿದ್ದೆ' ಎಂದು **ವಾಲ್ಮೀಕಿ** ರಾಮಾಯಣದಲ್ಲಿ ಹೇಳುತ್ತಾಳೆ. (ಉತ್ತರ. ೪೮.೧೪) ವಸ್ತುತಃ ಸೀತಾಪರಿ**ತ್ಯಾಗ ಬರಿ** ತೋರಿಕೆಯದು. ಶ್ರೀರಾಮ ಪರಂಧಾಮಕ್ಕೆ ಹೋಗುವಾಗ ದೇವಿ ಶ್ರೀ **ಭೂ ಎಂಬ** ಎರಡು ರೂಪಗಳಿಂದ ಅವನ ಎಡಬಲಗಳಲ್ಲಿ ಕಾಣಿಸಿಕೊಂಡಳು **(ಉತ್ತರ** ೧೧೯.೬) ಅದರಿಂದ ಈ ವಿಯೋಗದಿಂದ ದೇವಿಗೆ ಮತಿಭ್ರಮ**ಣೆಯಾಗಲು** ಅವಕಾಶವಿಲ್ಲ. ಗೋಪಿಯರಿಗೂ ಶ್ರೀಕೃಷ್ಣ ಹೃದಯದಲ್ಲಿ ಸದಾ **ವ್ಯಕ್ತನಾಗಿ** ಆಲಿಂಗನಸುಖ ನೀಡಿದನೆಂದು ಭಾಗವತವೇ ಹೇಳುತ್ತದೆ. ಅದರಿಂದ **ದೇವಿಗೆ** ಭಯವಿಲ್ಲ. ಹೀಗಾಗಿ 'ಭ್ರಮಂತ್ಯಾಃ' ಎಂಬ ಶಬ್ದ ದೇವಿಗೆ **ಸಂಸಾರ** ಭ್ರಮಣವನ್ನಾಗಲೀ ಮತಿಭ್ರಮಣವನ್ನಾಗಲೀ ಹೇಳಿದರೆ ತಪ್ಪಾಗುತ್ತ**ದೆ. ಅವಳಿಗೆ** ಭ್ರಮೆ ಎಂಬುದಿಲ್ಲ. ಭ್ರಮಿಸುವವರನ್ನು ಅನ್ಯಥಾಜ್ಞಾನಿಗಳನ್ನು **ನಾಶಪಡಿಸುತ್ತಾಳೆ** 'ಅಭ್ರಮಾ ಭ್ರಮತಾಮತ್ತ್ರೀ' ಎಂದು ನಾರದಪುರಾಣದಲ್ಲಿ **ಇದು ಸ್ಪಷ್ಟವಿದೆ.** ಅದರಿಂದ 'ಭ್ರಮಂತ್ಯಾಃ' ಎಂಬ ಪಾಠ ತಪ್ಪು. 'ಭ್ರಮತ್ಯಾಃ' **ಅಥವಾ 'ಭ್ರಮತ್ಯಾ'** ಎಂದೇ ಸರಿಯಾದ ಪಾಠ.

'ಭ್ರಮಾಃ ತಿಃ ಅನ್ನಂ ಯಸ್ಯಾಃಸಾಃ' ಎಂಬ ಅರ್ಥದಲ್ಲಿ 'ಭ್ರಮತಿಃ' ಅಥವಾ 'ಭ್ರಮತೀ' ಎರಡು ರೂಪಗಳು. ಭ್ರಮಂತಃ ತಿಃ ಅನ್ನಂ ಯಸ್ಯಾಃ ಸಾ ಎಂಬ ಅರ್ಥದಲ್ಲಿ 'ಭ್ರಮತ್ತಿಃ' ಅಥವಾ 'ಭ್ರಮತ್ತೀ' ಎಂದು ಎರಡು ರೂಪಗಳಾಗುತ್ತವೆ. ವಿಜಯಧ್ವಜೀಯಾನುಸಾರಿ ಮೊದಲ ಎರಡು ರೂಪಗಳು. ಸತ್ಯಧರ್ಮೀಯ ನಾಲ್ಕು ರೂಪಗಳನ್ನೂ ಒಪ್ಪಿದೆ. ಭ್ರಮ ಉಳ್ಳವರೆಂಬ ಅರ್ಥದಲ್ಲಿ ಭ್ರಮಶಬ್ದಕ್ಕೆ ಅರ್ಶಆದ್ಯಚ್ ಅಥವಾ ಭ್ರಮಧಾತುವಿಗೆ ಪಚಾದ್ಯಚ್ ಬಂದರೆ 'ಭ್ರಮಂತಃ' ಭ್ರಮಿಸುವವರು ಎಂಬುದಕ್ಕೆ ಸಮಾನಾರ್ಥಕವಾಗುವುದು. 'ತಿ' ಎಂಬಲ್ಲಿ ಇಕಾರ ಉಚ್ಚಾರಣಾರ್ಥ. ಕೇವಲ 'ತ್' ಎಂದರೆ ಅನ್ನ.

'ಸದಿತಿ ಪ್ರಾಣಸ್ತೀತ್ಯನ್ನಂ ಯಮಿತ್ಯಸಾವಾದಿತ್ಯಃ'

ಎಂಬ ಛಾಂದೋಗ್ಯ ವಾಕ್ಯದಲ್ಲಿ ತಕಾರ ಅನ್ನವಾಚಕ ಎಂದಿದೆ. ಶಾಂಕರಭಾಷ ದಲ್ಲಿಯೂ 'ಯತ್ತಿ ತಕಾರಃ' ಎಂದಿದೆ. 'ಸತ್-ತ್-ಯ' ಇವು ಸೇರಿದಾಗ 'ಸತ್ಯ' ಎಂದಾಗುತ್ತದೆ. ಅದರಿಂದ 'ಭ್ರಮತಿ' ಅಥವಾ 'ಭ್ರಮತ್ತಿ' ಎಂಬಲ್ಲಿ ಕೊನೆಯ ಇಕಾ ಇಚ್ಛಾರ್ಥಕ. ಭ್ರಮಿಸುವವರನ್ನು ಅನ್ನವಾಗಿ ಮಾಡಿಕೊಳ್ಳಲು ಇಚ್ಛಿಸುವವಳ ಎಂದರ್ಥ. 'ಭ್ರಮತೀ' ಅಥವಾ 'ಭ್ರಮತ್ತೀ' ಎಂಬಲ್ಲಿ ಕೊನೆಯ ಈಕಾರ ಕೋಪವಾಚಕ. ಭ್ರಮಿಸುವವರನ್ನು ಅನ್ನವಾಗಿ ಮಾಡಿಕೊಳ್ಳುವ ಉದ್ದೇಶದಿಂದ ಅವರಲ್ಲಿ ಕೋಪಮಾಡುವವಳು ಎಂದರ್ಥ. ಅನ್ನವಾಗಿ ಮಾಡಿಕೊಳ್ಳುವುದೆಂದರೆ ನಾಶ ಮಾಡುವುದು. ನಾಶ ಮಾಡುವುದೆಂದರೆ ತಮಸಿನಲ್ಲಿ ಹಾಕುವುದು. ಮ.ಭಾ.ತಾ.ನಿರ್ಣಯ (೨.೬೪)ದಲ್ಲಿ ಇದು ಸ್ಪಷ್ಟವಿದೆ–

ಅಥಚ ದೈತ್ಯಹತಿಸ್ತಮಸಿ ಸ್ಥಿರಾ ನಿಯತ ಸಂಸ್ಥಿತಿರೇವ ನ ಚಾನ್ಯಥಾ ।
ತನುವಿಭಾಗಕೃತಿಃ ಸಕಲೇಷ್ವಿಯಂ ನಹಿ ವಿಶೇಷಕೃತಾ ಸುರದೈತ್ಯಗಾ ॥

'ಬ್ರಹ್ಮಾದಿಗಳನ್ನು ಸೃಜಿಸುವ ಮತ್ತು ದಾನವರನ್ನು ನಾಶಮಾಡುವ ದೇವಾಧಿ ದೇವನಾದ ಶ್ರೀಹರಿಗೆ ನಮಸ್ಕಾರ' ಎಂದು ಮಹಾಭಾರತದಲ್ಲಿ ಹೇಳಿದೆ. ದಾನವರನ್ನು ಕೂಡ ಸೃಜಿಸುವವನು ಹರಿಯೇ, ಬ್ರಹ್ಮಾದಿಗಳನ್ನು ಸೃಜಿಸುವವನೆಂದು ಏನು ವಿಶೇಷವಾಗಿ ಹೇಳಬೇಕು? ಹಾಗೇ, ದೇವತೆಗಳನ್ನು ಕೂಡ ಲಯಕಾಲದಲ್ಲಿ ನಾಶ ಮಾಡುವವನು ಹರಿಯೇ. ದಾನವರನ್ನು ನಾಶಮಾಡುವವನೆಂದು ವಿಶೇಷವಾಗಿ ಏಕೆ ಹೇಳಬೇಕು? ಎಂದರೆ ಹೀಗೆ ಅಭಿಪ್ರಾಯ– ದೇವತೆಗಳ ಸೃಷ್ಟಿ ಎಂದರೆ ಅವರಿಗೆ ಮುಕ್ತಿ ನೀಡುವುದು ಇದು ದಾನವರಿಗಿಲ್ಲ, ದಾನವರ ನಾಶ ಎಂದರೆ ತಮಸ್ಸಿನಲ್ಲಿ ಹಾಕುವುದು ಇದು ದೇವತೆಗಳಿಗಿಲ್ಲ' ಎಂದು.

ಲಕ್ಷ್ಮೀನಾರಾಯಣರಿಗೆ ವಿಯೋಗ ಉಂಟೆಂದು ಮುಂತಾಗಿ **ಭ್ರಮ**, ವಿಪರೀತಜ್ಞಾನ ಉಳ್ಳವರು ದಾನವರು. ಅವರನ್ನು ದೇವಿ ಅನ್ನವಾಗಿ **ಮಾಡಿ** ಭಕ್ಷಿಸುತ್ತಾಳೆ, ಅಂದರೆ ತಮಸ್ಸಿನಲ್ಲಿ ಹಾಕುತ್ತಾಳೆ ಎಂದು ದೇವಿಯೇ **ಹೇಳುತ್ತಾಳೆ**.

ಸನ್ಮುಖರಿತಂ ಸದ್ಭಿಃ ಪ್ರಧಾನೀಕೃತಂ ।

ಮರ್ತ್ಯಾಶಿಷೋರುಭಯಂ ಜನಂ ಪ್ರತಿ ಅರ್ಥೋಽಯಮಿತಿ

ವಿವಿಕ್ತದೃಷ್ಟಿಃ ।

ಕಾಮರೂಪಂ ತ್ವಾಮವಿಗಣಯ್ಯ ।

ಭ್ರಮಃ ತಿರನ್ನಂ ಯಸ್ಯಾಃ ಸಾ ಭ್ರಮತೀ । ತಸ್ಯಾ ಭ್ರಮತ್ಯಾಃ ।

ವಿಪರೀತಜ್ಞಾನಿನಾಂ ಭಕ್ಷಕಾಯಾ ಇತ್ಯರ್ಥಃ ।

ಶ್ರುತಿಭಿಃ ಪ್ರಮಾಣೇನ ।

ಅಭ್ರಮಾ ಭ್ರಮತಾಮತ್ತ್ರೀ ಯಾ ವೇದೈರಧಿಗಮ್ಯತೇ ।

ತಸ್ಯೈ ನಮೋಽಸ್ತು ತೇ ದೇವ್ಯೈ ವಿಷ್ಣುವಕ್ಷಃಸ್ಥಲಾಶ್ರಯೇ ॥

ಇತಿ ನಾರದೀಯೇ ।

'ಸನ್ಮುಖರಿತಂ' ಎಂದರೆ ಸಜ್ಜನರಿಂದ ಸರ್ವೋತ್ತಮವೆಂದು ಕೊಂಡಾಡಲ್ಪಟ್ಟ ಎಂದರ್ಥ. 'ಮರ್ತ್ಯಾಶಿಷೋರುಭಯಂ' ಎಂಬ ವಿಶೇಷಣಕ್ಕೆ 'ಜನಂ' ಎಂದು ವಿಶೇಷ್ಯವನ್ನು ಅಧ್ಯಾಹಾರ ಮಾಡಬೇಕು. ಮತ್ತು 'ಪ್ರತಿ' ಎಂಬ ಶಬ್ದವನ್ನೂ ಅಧ್ಯಾಹಾರ ಮಾಡಿ 'ಜನರಿಗೆ' ಎಂದು ಅನ್ವಯಿಸಬೇಕು. ಅರ್ಥ ಶಬ್ದಕ್ಕೂ 'ಪ್ರತಿ' ಎಂದು ಸೇರಿಸಿ '**ಪ್ರತ್ಯರ್ಥ**' ಪ್ರತಿಬಿಂಬ ಎಂದು ಅನ್ವಯಿಸಿ 'ಹರಿಯೆ ಬಿಂಬ, ಬೇರೆ **ಎಲ್ಲರೂ** ಪ್ರತಿಬಿಂಬರೆಂ'ದು ವಿವೇಕದೃಷ್ಟಿ ಉಳ್ಳವಳು ಎಂಬ **ಅರ್ಥವನ್ನು** ಗ್ರಹಿಸಬೇಕು. 'ಅತ್ರ ಚ ಪರತ್ರ ಚ ಕಾಮರೂಪಂ' ಎಂಬುದನ್ನು '**ತ್ವಾಂ** ಅವಿಗಣಯ್ಯ' ಎಂಬಲ್ಲಿ ಅನ್ವಯಿಸಿಕೊಳ್ಳಬೇಕು. 'ಭ್ರಮತ್ಯಾಃ' **ಎಂದರೆ** 'ಭ್ರಮ'ನನ್ನು ವಿಪರೀತಜ್ಞಾನಿಯನ್ನು 'ತಿ' ಅನ್ನವಾಗಿ ಮಾಡಿ**ಕೊಂಡವಳು**. ವಿಪರೀತಜ್ಞಾನಿಗಳಾದ ದಾನವರನ್ನು ತಮಸ್ಸಿನಲ್ಲಿ ಹಾಕುವವಳು **ದುರ್ಗೆ** ಎಂದರ್ಥ.

'ಶ್ರುತಿಭಿಃ' ಎಂದರೆ ಶ್ರುತಿ ಮುಂತಾದ ಪ್ರಮಾಣದಿಂದ ಇದು **ಸಿದ್ಧವಾಗಿದೆ** ಎಂದರ್ಥ.

'ತಾನು ವಿಪರೀತಜ್ಞಾನವಿಲ್ಲದವಳು. ವಿಪರೀತ ಜ್ಞಾನಿಗಳಾದ ಅಸುರರನ್ನು ತಮಸ್ಸಿನಲ್ಲಿ ಹಾಕುವವಳು, ದುರ್ಗೆ ಎಂದು ವೇದಗಳಿಂದ ಕೊಂಡಾಡಲ್ಪಡುತ್ತಾಳೆ. ವಿಷ್ಣುವಿನ ವಕ್ಷಃಸ್ಥಳವನ್ನು ಆಶ್ರಯಿಸಿರುವ ಆ ದೇವಿಗೆ ನಮಸ್ಕಾರ' ಎಂದು ನಾರದಪುರಾಣದಲ್ಲಿ ಉಕ್ತವಾಗಿದೆ.

❖❖❖

ಪ್ರಣಯಕಲಹ ಪ್ರಸಂಗದಲ್ಲಿ ಶ್ರೀಕೃಷ್ಣ 'ಅಥಾತ್ಮನೋಽನುರೂಪಂ ವೈ ಭಜಸ್ವ ಕ್ಷತ್ರಿಯರ್ಷಭಂ' ಎಂದು ಹೇಳಿದ್ದಕ್ಕೆ ರುಕ್ಮಿಣಿ ಪುನಃ ಉತ್ತರವನ್ನು ಹೇಳುತ್ತಿದ್ದಾಳೆ.

ಕಸ್ಯಾಃ ಸ್ಯುರಚ್ಯುತ ನೃಪಾ ಭವತೋಪದಿಷ್ಟಾಃ
ಸ್ತ್ರೀಣಾಂ ಗೃಹೇಷು ಖರಗೋಶ್ವಬಿಡಾಲಭೃತ್ಯಾಃ ।
ಯತ್ಕರ್ಣಮೂಲಮರಿಕರ್ಶನ ನೋಪಯಾಯಾ-
ದ್ಯುಷ್ಮತ್ಕಥಾ ಮೃಡವಿರಿಂಚಸಭಾಸು ಗೀತಾ ॥ ೪೮ ॥

ಅಚ್ಯುತ, ನೀನು ವರಗಳೆಂದು ಹೇಳಿದ ಶಿಶುಪಾಲ ಮುಂತಾದ ರಾಜರು ಊರಿಗೆ ಅರಸರಾದರೂ ತಮ್ಮ ಮನೆಗಳಲ್ಲಿ ಸ್ತ್ರೀಯರಿಗೆ ಕತ್ತೆ ಎತ್ತು ನಾಯಿ ಬೆಕ್ಕುಗಳಂತೆ ಗುಲಾಮರಾಗಿರುವರು. ಹೇ ಶತ್ರುನಾಶಕನೆ, ರುದ್ರಬ್ರಹ್ಮರ ಸಭೆಗಳಲ್ಲಿ ಗಾನ ಮಾಡಲ್ಪಡುವ ನಿನ್ನ ಕಥೆ ಯಾರ ಕಿವಿಯ ಬಳಿಗೆ ಹೋಗಲಾರದೋ ಅಂಥವರು ಯಾವ ಹೆಣ್ಣಿಗೆ ಪತಿಯಾಗಲು ಯೋಗ್ಯರಾದಾರು?

[೧]ಇಲ್ಲಿ 'ಖರಗೋಶ್ವಬಿಡಾಲಭೃತ್ಯಾಃ' ಎಂದರೆ, ಕತ್ತೆ ಎತ್ತು ನಾಯಿ ಬೆಕ್ಕುಗಳಂತೆ ಮತ್ತು ಮನೆಯಾಳುಗಳಂತೆ ಸ್ತ್ರೀಯರಿಗೆ ಸೇವೆ ಮಾಡುವವರು ಬೇರೆ ರಾಜರುಗಳು. ಅಂಥವರನ್ನು ನಾನು ವರಿಸಲಾರೆ ಎನ್ನುತ್ತಾಳೆ ರುಕ್ಮಿಣಿ ಎಂದು ಬೇರೆ ವ್ಯಾಖ್ಯಾನಕಾರರ ವಿವರಣೆ.

ಆದರೆ ಶ್ರೀಮದಾಚಾರ್ಯರು ಕತ್ತೆ ಎತ್ತು ನಾಯಿ ಬೆಕ್ಕುಗಳಂತೆ ಸ್ತ್ರೀಯರಿಗೆ ಸೇವ ಮಾಡುವವರು ರಾಜರುಗಳು ಎಂದಿದ್ದಾರೆ. ಅಭಿಪ್ರಾಯದಲ್ಲಿ ಹೆಚ್ಚು ವ್ಯತ್ಯಾಸ ಕಾಣದಿರಬಹುದು. ಆದರೆ ಬೇರೆ ವ್ಯಾಖ್ಯಾನಕಾರರ ಪ್ರಕಾರ 'ಖರ ಗೋ ಶ್ವ ಬಿಡಾಲ ಭೃತ್ಯ' ಈ ಐದು ಶಬ್ದಗಳೂ ಸದೃಶದಲ್ಲಿ ಲಾಕ್ಷಣಿಕ. ಶ್ರೀಮದಾಚಾರ್ಯರ

---

೧. ಖರಾ ಇವ ಕೇವಲಂ ಭಾರವಾಹಾ ಗಾವೋ ಬಲೀವರ್ದಾ ಇವ ನಿತ್ಯಂ ವ್ಯಾಪಾರಕ್ಲಿಷ್ಟಾಃ ಶ್ವಾನ ಇವಾವಮತಾ ಬಿಡಾಲಾ ಇವ ಕೃಪಣಾ ಹಿಂಸ್ರಾಶ್ಚ ಭೃತ್ಯಾ ಇವ ಕಿಂಕರಾ ನೃಪಾಃ । -ಶ್ರೀಧರಃ

ವ್ಯಾಖ್ಯಾನದಲ್ಲಿ 'ಖರ ಗೋ ಶ್ವ ಬಿಡಾಲ' ಈ ನಾಲ್ಕು ಮಾತ್ರ ಸದೃಶದಲ್ಲಿ ಲಾಕ್ಷಣಿಕ. ಭೃತ್ಯಶಬ್ದ ಮುಖ್ಯಾರ್ಥದಲ್ಲಿಯೇ ಇದೆ.

ಬೇರೆ ವ್ಯಾಖ್ಯಾನಕಾರರು ಹೇಳುವಂತೆ ಭೃತ್ಯ ಶಬ್ದವನ್ನು ಲಾಕ್ಷಣಿಕ ಎಂದು ಸ್ವೀಕರಿಸಿದರೆ ರಾಜರು ಭೃತ್ಯರಾಗಿರುವುದಿಲ್ಲ. ಭೃತ್ಯರಂತೆ ಎಂದು ಸ್ವಲ್ಪವಾದರೂ ಬಹುಮಾನ ಮಾಡಿದಂತಾಗುತ್ತದೆ. ಭೃತ್ಯರೇ ಆಗಿದ್ದಾರೆ ಎಂದರೆ ಪೂರ್ತಿ ಅಪಮಾನ. ಮತ್ತು ಭೃತ್ಯರು ಸಂಭಾವನೆ ಪಡೆಯುವುದಕ್ಕಾಗಿ ಸೇವೆ ಮಾಡುತ್ತಾರೆ, ಸಂಭಾವನೆ ನೀಡದಿದ್ದರೆ ಬಿಟ್ಟುಹೋಗುತ್ತಾರೆ. ಅಂಥವರ ಸಾಮ್ಯವನ್ನು ಏಕೆ ಹೇಳ ಬೇಕು? ಕತ್ತೆ ನಾಯಿಗಳಂತೆ ಎಂದು ಹೇಳಿದಮೇಲೆ ಅವುಗಳಿಗಿಂತಲೂ ನಿಕೃಷ್ಟವಾದ ಸೇವೆಯನ್ನೇ ಕೊನೆಯಲ್ಲಿ ಹೇಳಬೇಕು ತಾನೆ? ಅದರಿಂದ ಶ್ರೀಮದಾಚಾರ್ಯರು ಹೇಳುತ್ತಾರೆ, 'ಈ ರಾಜರು ಮನೆಯಾಳುಗಳಂತೆ ಸಂಭಾವನೆಯನ್ನು ಕೇಳುವ ಅಲ್ಪ ಸ್ವಾತಂತ್ರ್ಯ ಉಳ್ಳವರೂ ಅಲ್ಲ, ಕತ್ತೆನಾಯಿಗಳಂತೆ, ಏನೂ ಸ್ವಾತಂತ್ರ್ಯವಿಲ್ಲದೆ, ಹೊಟ್ಟೆಗೆ ಅನ್ನವನ್ನು ಕೂಡ ಬೇಡುವ ಜೀತದಾಳುಗಳು ಎಂದು. ಅದರಿಂದ 'ಕತ್ತೆ ಎತ್ತು ನಾಯಿ ಬೆಕ್ಕುಗಳಂತೆ ಸ್ತ್ರೀಯರಿಗೆ ಭೃತ್ಯರು' ಎಂದು ಸಮಾಸಕ್ಕೆ ವಿಗ್ರಹವನ್ನು ತೋರಿಸಿದ್ದಾರೆ.

ಖರಗೋಶ್ವಬಿಡಾಲವತ್ ಸ್ತ್ರೀಣಾಂ ಭೃತ್ಯಾಃ ।

ಕತ್ತೆ ಎತ್ತು ನಾಯಿ ಬೆಕ್ಕುಗಳಂತೆ ಸ್ತ್ರೀಯರಿಗೆ ಸೇವೆ ಮಾಡುವವರು.

❖❖❖

ಪ್ರಣಯಕಲಹ ಪ್ರಸಂಗದಲ್ಲಿ ಶ್ರೀಕೃಷ್ಣ 'ಅಥಾತ್ಮನೋಽನುರೂಪಂ ವೈ ಭಜಸ್ವ' ಎಂದು ಹೇಳಿದ್ದಕ್ಕೆ ಪುನಃ ದೇವಿ ಉತ್ತರವನ್ನು ಹೇಳುತ್ತಿದ್ದಾಳೆ.

ತ್ವಕ್ಶ್ಮಶ್ರುರೋಮನಖಕೇಶಪಿನದ್ಧಮಂತ-
ರ್ಮಾಂಸಾಸ್ಥಿರಕ್ತಕೃಮಿವಿಟ್ಕಫಪಿತ್ತವಾತಮ್ ।
ಜೀವಚ್ಛವಂ ಭಜತಿ ಕಾಂತಮತಿರ್ವಿಮೂಢಾ
ಯಾ ತೇ ಪದಾಬ್ಜಮಕರಂದಮಜಿಘ್ರತೀ ಸ್ತ್ರೀ ॥ ೪೯ ॥

ಯಾವ ಹೆಣ್ಣು ನಿನ್ನ ಪಾದಕಮಲಮಕರಂದವನ್ನು ಸೇವಿಸುವುದಿಲ್ಲವೋ ಅವಳು ಮೂರ್ಖಳು. ಕಾಮಕಲುಷಿತ ಬುದ್ಧಿಯವಳು. ಹೊರಗೆ ಚರ್ಮ ಮೀಸೆರೋಮ ಉಗುರು ತಲೆಗೂದಲುಗಳಿಂದ ಮುಚ್ಚಿದ, ಒಳಗೆ ಮಾಂಸ ಎಲುಬು ರಕ್ತ ಕ್ರಿಮಿ ಮಲಗಳಿಂದ ತುಂಬಿದ ನರಗಳಿಂದ ಸುತ್ತು ಬಿಗಿದ, ಬದುಕಿದ್ದರೂ ಸತ್ತಂತಿರುವ, ಕೇವಲ ಉಸಿರಾಡುವ ಶರೀರವನ್ನು ಪ್ರಿಯಕರನೆಂದು ಭ್ರಮಿಸಿ ಸೇವಿಸುತ್ತಾಳೆ. ನಾನು

ಹಾಗೆ ಮಾಡಲಾರೆ. ಏಕೆಂದರೆ ನಿನ್ನ ಚರ್ಮ ಮೀಸೆ ರೋಮ ಮುಂತಾದವು ಅಪ್ರಾಕೃತ ಜ್ಞಾನಾನಂದಮಯ. ಜರಾಮರಣ ವರ್ಜಿತ.

ಶ್ರೀಕೃಷ್ಣನ ಶರೀರದಲ್ಲಿ ಇರುವ ಚರ್ಮಮೀಸೆರೋಮ ಮುಂತಾದವು ಪ್ರಾಕೃತವಲ್ಲ. ಕೇವಲ ಜ್ಞಾನಾನಂದಮಯ ಎನ್ನುವಲ್ಲಿ ಏನು ಪ್ರಮಾಣವಿದೆ? ಅದ್ವೈತದಲ್ಲಿ ಭಗವಂತನ ಶರೀರ ಮಾಯಾಮಯ. ವಿಶಿಷ್ಟಾದ್ವೈತದಲ್ಲಿಯೂ ಶುದ್ಧಸತ್ವಮಯ ಎಂದು ಒಪ್ಪಿದ್ದಾರೆ ಎಂಬ ಪ್ರಶ್ನೆ ಬಂದರೆ ಪ್ರಮಾಣವನ್ನು ಶ್ರೀಮದಾಚಾರ್ಯರು ತೋರಿಸುತ್ತಾರೆ—

ಆನಂದಶ್ಮಶ್ರುರಾನಂದಕೇಶ ಆಪಾದನಖಾತ್ ಸರ್ವ ಏವಾನಂದಃ । ಸ ಏಷ ವಿಷ್ಣುರಜೋಽಮೃತೋಽಚಲೋ ಬ್ರಹ್ಮ। ಯ ಏನಮೇವಂ ವೇದ ಆನಂದ ಏವ ಸ ಭವತಿ। ಆನಂದಸ್ಯ ಸಾರ್ಷ್ಟಿತಾಂ ಸಲೋಕತಾಂ ಸಾಯುಜ್ಯಮಾಪ್ನೋತೀತಿ ಮಾಧ್ಯಂದಿನಾಯನ ಶ್ರುತಿಃ ।

~~'ಶ್ರೀಹರಿಯ ಗಡ್ಡ ಮೀಸೆ ಆನಂದಸ್ವರೂಪ. ತಲೆಗೂದಲು~~ ಆನಂದಸ್ವರೂಪ. ಕಾಲಿನ ಉಗುರಿಂದಾರಂಭಿಸಿ ಶರೀರವಿಡೀ ಆನಂದಸ್ವರೂಪವೆ. ಅವನು ಜನನ ಮರಣರಹಿತ. ಸ್ಥಿರ, ಗುಣಪೂರ್ಣ. ಹೀಗೆ ಈತನನ್ನು ತಿಳಿಯುವವನು ಆನಂದಸ್ವರೂಪನೇ ಆಗುತ್ತಾನೆ. ಆನಂದಸ್ವರೂಪನಾದ ಆತನ ಸಾಮೀಪ್ಯವನ್ನು ಸಾಲೋಕ್ಯವನ್ನು ಅಥವಾ ಸಾಯುಜ್ಯವನ್ನು ಪಡೆಯುತ್ತಾನೆ' ಎಂದು ಮಾಧ್ಯಂದಿನಾಯನ ಶ್ರುತಿಯು ಹೇಳುತ್ತಿದೆ.

❖❖❖

ಪ್ರಣಯಕಲಹ ಪ್ರಸಂಗದಲ್ಲಿ ಶ್ರೀಕೃಷ್ಣ ಹೇಳಿದ್ದಾನೆ—

ಉದಾಸೀನಾ ವಯಂ ನೂನಂ ನ ಸ್ತ್ರ್ಯಪತ್ಯಾರ್ಥಕಾಮುಕಾಃ ।
ಆತ್ಮಲಬ್ಧ್ಯಾಽಽಸ್ಮಹೇ ಪೂರ್ಣಾ ನೇಹಾತ್ಮಸದೃಶಾಃ ಕ್ರಿಯಾಃ ॥

ಅದಕ್ಕೆ ದೇವಿ ಉತ್ತರ ಕೊಡುತ್ತಿದ್ದಾಳೆ.

ಅಸ್ತ್ಯಂಬುಜಾಕ್ಷ ಮಮ ತೇ ಚರಣಾನುರಾಗ
ಆತ್ಮನ್ ರತಸ್ಯ ಮಯಿ ಚಾನತಿರಿಕ್ತದೃಷ್ಟೇಃ ।
ಯರ್ಹ್ಯಸ್ಯ ವೃದ್ಧಯ ಉಪಾತ್ತರಜೋಽತಿಮಾತ್ರೋ
ಮಾಮೀಕ್ಷಸೇ ತದುಹ ನಃ ಪರಮಾನುಕಂಪಾ ॥ ೫೦ ॥

ಹೇ ಕಮಲಾಕ್ಷ, ನೀನು ಸ್ವರಮಣನಾದರೂ ಉದಾಸೀನನಲ್ಲ. ನಮ್ಮ ಭಕ್ತಿಗೆ ಒಂದಿಷ್ಟು ಹೆಚ್ಚು ಕಡಿಮೆಯಿಲ್ಲದೆ ಅನುಗ್ರಹ ದೃಷ್ಟಿ ಬೀರುವವನು ನೀನು. ನನಗೆ ನಿನ್ನ ಪಾದಗಳಲ್ಲಿ ಬಹಳ ಅನುರಾಗವಿದೆ. ಅದರಿಂದ ನೀನು ಜಗತ್ತಿನ ಸೃಷ್ಟಿಗೆ ನನ್ನ ರಜೋಗುಣವನ್ನೂ ಸ್ಥಿತಿಗೆ ಸತ್ವಗುಣವನ್ನೂ ಲಯಕ್ಕೆ ತಮೋಗುಣವನ್ನೂ ಹೆಚ್ಚು ಉದ್ರೇಕಗೊಳಿಸುವ ಕಾಲದಲ್ಲಿ ನನ್ನ ಮೇಲೆ ಅಮೋಘ ದೃಷ್ಟಿ ಹಾಯಿಸುವಿ. ಅಂದರೆ, ಸೃಷ್ಟ್ಯಾದಿ ಕಾರ್ಯದಲ್ಲಿ ಪ್ರೀತಿಯಿಂದ ಆಜ್ಞೆ ನೀಡುವಿ' ಮತ್ತೆ ಆ ಕಾರ್ಯವನ್ನು ನೀನೇ ಮಾಡಿ ಅದರ ಕೀರ್ತಿಯನ್ನು ನನಗೇ ನೀಡುವಿ ಅದೇ ನನಗೆ ನೀನು ಮಾಡುವ ಪರಮಾನುಗ್ರಹ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ 'ಶ್ರೀಕೃಷ್ಣ ತನ್ನ ಆನಂದದಲ್ಲಿಯೇ ಮಗ್ನನಾಗಿರುವುದರಿಂದ ಮತ್ತು ಇಡೀ ಜಗತ್ತು ತಾನೇ ಆಗಿರುವುದರಿಂದ, ನಾನು ಆತನ ಪತ್ನಿಯಾಗಿದ್ದರೂ ನನ್ನಲ್ಲಿ ಪತ್ನಿ ಎಂದು ಹೆಚ್ಚೇನೂ ಪ್ರೀತಿ ಮಾಡುವುದಿಲ್ಲ ಹಾಗಿದ್ದರೂ ನನಗೆ ಅವನಲ್ಲಿ ಅನುರಾಗವಿದೆ. ಅದರಲ್ಲಿಯೇ ನನಗೆ ಸಂತೋಷ' ಎನ್ನುತ್ತಿದ್ದಾಳೆ ರುಕ್ಮಿಣಿ. ಇದು ಪೂರ್ವೋತ್ತರ ವಿರುದ್ಧ. ಹಿಂದೆ ಪ್ರಣಯ ಪತ್ರವನ್ನು ತಂದ ಬ್ರಾಹ್ಮಣನ ಮುಂದೆ

'ರುಕ್ಮಿಣಿಯನ್ನೇ ನೆನೆಯುತ್ತಿದ್ದ ನನಗೆ ರಾತ್ರಿ ನಿದ್ರೆ ಬರಲಿಲ್ಲ'

'ತಥಾಹಮಪಿ ತಚ್ಚಿತ್ತೋ ನಿದ್ರಾಂ ನಾಧ್ಯಗಮಂ ನಿಶಿ'

ಎಂದು ಶ್ರೀಕೃಷ್ಣ ಹೇಳಿದ್ದ. ಈಗಲೂ ಕೂಡ 'ನನಗೆ ನೀನು ಬೇಕಾಗಿಲ್ಲ' ಎಂದುದು ಕೇವಲ ವಿನೋದಕ್ಕಾಗಿ.

ತ್ವದ್ವಚಃ ಶ್ರೋತುಕಾಮೇನ ಕ್ಷ್ವೇಲಾಚರಿತಮಂಗನೇ'

ಎಂದಿದ್ದಾನೆ. ಮುಂದೆಯೂ,

ಯಂ ಯಂ ಕಾಮಯಸೇ ಕಾಮಂ ಮಯಿ ಕಾಮಯ ಕಾಮಿನಿ ।
ಸಂತಿ ಹ್ಯೇಕಾಂತಭಕ್ತಾಯಾಸ್ತವ ಕಲ್ಯಾಣಿ ನಿತ್ಯದಾ ॥

ಏಕಾಂತಭಕ್ತಳಾದ ನಿನಗೆ ನೀನು ಬಯಸಿದ್ದೆಲ್ಲವನ್ನೂ ಅಂದರೆ ನೀನು ಬಯಸುವ ನನ್ನನ್ನೂ ನಿನಗೆ ಕೊಟ್ಟಿದ್ದೇನೆ ಎನ್ನುತ್ತಾನೆ. ಏಕಾಂತಭಕ್ತರು ಬಯಸುವುದು ಭಗವಂತನನ್ನೇ.

'ತ್ವಯಿ ವಯಂ ಪ್ರತಿನಂದಯಾಮಃ' 'ಕೇವಲಂ ತುಷ್ಯಾಮಃ' 'ನಿನಗೆ ಕೊಡಲು ನನ್ನಲ್ಲಿ ಏನೂ ಉಳಿದಿಲ್ಲ, ಕೇವಲ ಸಂತುಷ್ಟನಾಗುತ್ತೇನೆ' ಎನ್ನುತ್ತಾನೆ.

ಅದರಿಂದ 'ಬೇರೆ ವ್ಯಕ್ತಿಗಳಿಗಿಂತ ಬೇರೆ ವಸ್ತುಗಳಿಗಿಂತ ಹೆಚ್ಚಿನ ದೃಷ್ಟಿ ಅಂದರೆ

ಪ್ರೀತಿ ಶ್ರೀಕೃಷ್ಣನಿಗೆ ದೇವಿಯಲ್ಲಿ ಇಲ್ಲ' ಎಂಬುದು 'ಅನತಿರಿಕ್ತದೃಷ್ಟಿ' ಶಬ್ದಾರ್ಥವಲ್ಲ. 'ಅವನಿಗೆ 'ಅದ್ವೈತಭಾವನೆಯಿಂದಾಗಿ' ತನ್ನಿಂದ ಬೇರೆಯಾಗಿ ಜಗತ್ತನ್ನು ಕಾಣುವ ದೃಷ್ಟಿ ಇಲ್ಲ' ಎಂದೂ ಅರ್ಥವಲ್ಲ. ಅವರವರ ಭಕ್ತಿದಾರ್ಢ್ಯಕ್ಕೆ ಒಂದಿಷ್ಟೂ ಹೆಚ್ಚಾಗದ ಕಡಿಮೆಯೂ ಆಗದ ಪ್ರೀತಿಯ ಅನುಗ್ರಹದೃಷ್ಟಿ ಉಳ್ಳವನು ಭಗವಂತ ಎಂದರ್ಥ.

'ಉಪಾತ್ತರಜೋಽತಿಮಾತ್ರಃ' ಎಂದರೆ 'ರಜೋಗುಣದ ಔತ್ಕಟ್ಯವನ್ನು ಅಂದರೆ, ಉತ್ಕಟರಜೋಗುಣವನ್ನು ಸೃಷ್ಟಿಗಾಗಿ ಭಗವಂತ ಸ್ವೀಕರಿಸುತ್ತಾನೆ' ಎಂದು ಬೇರೆ ವ್ಯಾಖ್ಯಾನಕಾರರೆಲ್ಲರೂ ಹೇಳುತ್ತಾರೆ. ಆದರೆ ನಿರ್ಗುಣನಾದ ಭಗವಂತ ಗುಣವನ್ನು ಸ್ವೀಕರಿಸುವನೆ? ರಜೋಗುಣದ ಅತಿಮಾತ್ರೆಯನ್ನು ಅಂದರೆ ಉದ್ರೇಕ ವನ್ನು ಸ್ವೀಕರಿಸುತ್ತಾನೆ ಹೊರತು ಉದ್ರಿಕ್ತವಾದ ರಜೋಗುಣವನ್ನು ಸ್ವೀಕರಿಸುವುದಿಲ್ಲ ಎಂಬುದು 'ಉಪಾತ್ತರಜೋತಿಮಾತ್ರ' ಎಂಬ ಶಬ್ದದಿಂದಲೇ ಸೂಚಿತವಾಗುತ್ತದೆ. ಉದ್ರಿಕ್ತ ಗುಣಸ್ವೀಕಾರದ ವಿವಕ್ಷೆ ಇರುತ್ತಿದ್ದರೆ 'ಉಪಾತ್ತಾತಿಮಾತ್ರರಜ'ನೆನ್ನಬಹುದಿತ್ತು. ಮತ್ತು 'ಮಯಿ ಚಾನತಿರಿಕ್ತದೃಷ್ಟೇಃ' ಎಂಬಲ್ಲಿ 'ದೇವಿಯಲ್ಲಿಯೂ ಭಕ್ತ್ಯನುಸಾರ್ಯನುಗ್ರಹ ಮಾಡುವವನು' ಎಂದು ಹೇಳಿದೆ. 'ಮಯಿ ಚ' ಎಂಬುದನ್ನು 'ಉಪಾತ್ತರಜೋಽತಿಮಾತ್ರಃ' ಎಂಬಲ್ಲಿಯೂ ಆವೃತ್ತಿಯಿಂದ ಅನ್ವಯಿಸಿದಾಗ 'ನನ್ನಲ್ಲಿ ಅಂದರೆ, ನನ್ನಿಂದ ಅಭಿಮನ್ಯಮಾನವಾದ ಪ್ರಕೃತಿಯಲ್ಲಿ ರಜೋಗುಣದ ಉದ್ರೇಕವನ್ನು ಭಗವಂತ ಉಪಾದಾನ ಮಾಡುತ್ತಾನೆ. ಸೃಷ್ಟಿಯಲ್ಲಿ ಅದನ್ನು ಬಳಸಿಕೊಳ್ಳುತ್ತಾನೆ.' ಎಂದು ಹೇಳುವುದರಿಂದ ಭಗವಂತನಿಗೆ ತ್ರಿಗುಣಸಂಬಂಧವಿದೆ ಎಂದು ಭ್ರಮೆಗೆ ಅವಕಾಶವಿಲ್ಲ. ಅದರಿಂದ ಶ್ರೀಮದಾಚಾರ್ಯರು 'ಮಯಿ ಚ' ಎಂಬುದನ್ನು ಆವೃತ್ತಿ ಮಾಡಿ ತಂದು, 'ತಸ್ಯಾಮೇವ' ಆ ಪ್ರಕೃತಿಯಲ್ಲಿಯೇ 'ರಜಸ ಉದ್ರೇಚನಾತ್' ರಜೋಗುಣಕ್ಕೆ ಉದ್ರೇಕ ಉಂಟುಮಾಡುವುದರಿಂದ ಭಗವಂತ 'ಉಪಾತ್ತರಜೋಽತಿಮಾತ್ರ'ನೆನಿಸುತ್ತಾನೆ' ಎನ್ನುತ್ತಾರೆ.

ಅನತಿರಿಕ್ತದೃಷ್ಟೇಃ ಭಕ್ತ್ಯನುಸಾರ್ಯನುಗ್ರಹಸ್ಯ ।

'ಅನತಿರಿಕ್ತದೃಷ್ಟಿ' ಎಂದರೆ ಭಕ್ತಿಗೆ ಅನುಸಾರವಾಗಿಯೇ ಅನುಗ್ರಹ ಮಾಡುವವನು ಎಂದರ್ಥ. ಏಕೆಂದರೆ ಶ್ರುತಿಯು ಹೀಗೆ ಹೇಳಿದೆ–

ಯ ಏಷ ದೇವಃ ಪರೋಽಜರೋಽಮರಸ್ತಂ ವಾ ಏನಮಾಹುರ್ಭಾಕ್ತ ಇತಿ ।

'ಸರ್ವೋತ್ತಮ ಅಜರ ಅಮರನಾದ ಶ್ರೀಹರಿ ಭಕ್ತ್ಯನುಸಾರವಾಗಿಯೇ ಅನುಗ್ರಹ ಮಾಡುವವನು' ಎಂದು ಜ್ಞಾನಿಗಳು ಹೇಳುತ್ತಾರೆ.'

ಭಕ್ತ್ಯಾಹಿ ಸೋಽನುಗೃಹ್ಣಾತಿ। ಭಕ್ತ್ಯೈವೇದಂ ವೃಣುತೇ ಶ್ರಿಯಂ ವಿರಿಂಚಂ ರುದ್ರಮಿಂದ್ರಮಾಪಿಪೀಲಿಕಂ। ನಾಭಕ್ತಂ ವೃಣುತೇ। ನಾಭಕ್ತಮನುಗೃಹ್ಣಾತಿ। ಯಾವದ್ ವಾವ ಸ ಭಕ್ತಸ್ತಾವದ್ಧ್ಯೇಷ ವೃಣುತೇ। ತಾವದ್ಧ್ಯೇಷೋಽನುಗೃಹ್ಣಾತಿ। ನಾಧಿಕಂ ವೃಣುತೇ। ನಾಧಿಕಮನುಗೃಹ್ಣಾತಿ। ನಾವರಂ ವೃಣುತೇ ನಾವರಮನುಗೃಹ್ಣಾತಿ।

ಅಥಾತೋ ಭಕ್ತಿಮೀಮಾಂಸಾ ಭವತಿ। ಯುವಾ ಸ್ಯಾತ್ ಸಾಧುಯುವಾಽಽಧ್ಯಾಯಕಃ। ಆಶಿಷ್ಠೋ ದ್ರಢಿಷ್ಠೋ ಬಲಿಷ್ಠಃ। ಯಸ್ಯೇಯಂ ಪೃಥಿವೀ ವಿತ್ತೇನ ಪೂರ್ಣಾ ಸ್ಯಾತ್। ಸ ಏಕೋ ಮಾನುಷಭಕ್ತೋ ಭವತಿ। ತೇ ಯೇ ಶತಂ ಮಾನುಷಭಕ್ತಾ ಏತಾವಾನ್ ಮಾನುಷೋ ಗಂಧರ್ವಃ। ತೇ ಯೇ ಶತಂ ಮಾನುಷಾ ಗಂಧರ್ವಾ ಏತಾವಾನ್ ದೇವಗಂಧರ್ವಃ। ತೇ ಯೇ ಶತಂ ದೇವಗಂಧರ್ವಾ ಏತಾವಾಂಶ್ಚಿರಲೋಕಃ ಪೈತೃಕಃ। ತೇ ಯೇ ಶತಂ ಚಿರಲೋಕಾಃ ಪೈತೃಕಾ ಏತಾವಾಂಶ್ಚಿರಲೋಕೋ ದೈವಿಕಃ। ತೇ ಯೇ ಶತಂ ಚಿರಲೋಕಾ ದೈವಿಕಾ ಏತಾವತ್ಯತಾತ್ವಿಕೀ ದೇವತಾ। ತಾ ಯಾಃ ಶತಮತಾತ್ವಿಕ್ಯೋ ದೇವತಾ ಏತಾವತೀ ತಾತ್ವಿಕೀ ದೇವತಾ। ತಾ ಯಾಃ ಶತಂ ತಾತ್ವಿಕ್ಯೋ ದೇವತಾ ಏತಾವಾನ್ ವಾವ ಪುರುಹೂತಃ। ತೇ ಯೇ ಶತಂ ಪುರುಹೂತಾ ಏತಾವಾನ್ ವಾವ ರುದ್ರಃ। ತೇ ಯೇ ಶತಂ ರುದ್ರಾ ಏತಾವಾನ್ ವಾವ ವಿರಿಂಚಃ। ತೇ ಯೇ ಶತಂ ವಿರಿಂಚಾ ಏತಾವತೀ ಶ್ರೀರ್ಭಕ್ತ್ಯಾಭವತಿ। ತದ್ ಯಾವತೀ ವಾವ ಭಕ್ತಿಸ್ತಾವದೇವ ಜ್ಞಾನಂ ಭವತಿ। ಯಾವದ್ ವಾವ ತಜ್ಜ್ಞಾನಂ ತಾವದಾನಂದೋ ಮೌಕ್ತಿಕೋಽಥೈಷ ಏವ ಪರಮ ಆನಂದೋ ಯೋಽಸೌ ಹರಿರ್ವಿಶ್ವೋ ವಿನೋದೋಽಪನೋದಃ ಸಂಕಾರಕೋ ವಿಕಾರಕೋಽಧಿಕಾರಕಃ। ಏತಸ್ಯೈವಾನಂದಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ' ಇತಿ ಪೌತ್ರಾಯಣಶ್ರುತಿಃ।

ಮಿಲಿತೌ ವಾ ಏತೌ ಭವತೋ ಯದನುಗ್ರಹಶ್ಚ ಭಕ್ತಿಶ್ಚ। ಯೋ ವಾವಾನುಗ್ರಹೀ ಸ ಭಕ್ತೋ ಯೋ ಭಕ್ತಃ ಸೋಽನುಗ್ರಹೀ।

ಯೋವಾವಾನುಗೃಹೀತೋ ಬ್ರಹ್ಮಣಾ ಸ ಭಕ್ತೋ ಯೋ ಭಕ್ತಸ್ತಂ ವೈ ಬ್ರಹ್ಮಾನುಗೃಹ್ಣಾತಿ। ಯಾವಾನ್ ವೈ ಬ್ರಹ್ಮಣೋಽನುಗ್ರಹಸ್ತಾವತೀ ಭಕ್ತಿರ್ಯಾವತೀ ಭಕ್ತಿಸ್ತಾವಾನ್ ವೈ ಬ್ರಹ್ಮಣೋಽನುಗ್ರಹಃ। ಪ್ರಕೃತೌ ವೈ ಬ್ರಹ್ಮಣೋಽನುಗ್ರಹಃ ಪರಮಃ। ತದವರೋ ವಾವ ಮಹತಿ। ತದವರೋಽಥ ರುದ್ರೇ। ತದವರಃ ಪುರುಹೂತೇಽಥ ದೇವೇಷ್ವೃಷಿಷು ಪಿತೃಷು ಮನುಷ್ಯೇಷು ಇತಿ ಧರ್ಮಶ್ರುತಿಃ ॥

ಭಕ್ತಿಯಿಂದಲೇ ಶ್ರೀಹರಿ ಅನುಗ್ರಹ ಮಾಡುತ್ತಾನೆ. ಭಕ್ತಿಯಿಂದಲೇ ಲಕ್ಷ್ಮೀದೇವಿ, ಚತುರ್ಮುಖಬ್ರಹ್ಮ ರುದ್ರ ಇಂದ್ರ ಮುಂತಾಗಿ ಇರುವೆ ಪರ್ಯಂತ ಈ ಜಗತ್ತನ್ನು ತನ್ನದೆಂದು ಪ್ರೀತಿಯಿಂದ ಸ್ವೀಕರಿಸುತ್ತಾನೆ. ಅಭಕ್ತನನ್ನು ಪ್ರೀತಿಯಿಂದ ಸ್ವೀಕರಿಸುವುದಿಲ್ಲ. ಅನುಗ್ರಹಿಸುವುದಿಲ್ಲ. ಭಕ್ತನಲ್ಲಿ ಎಷ್ಟು ಭಕ್ತಿ ಇರುವುದೋ ಅಷ್ಟೇ ಪ್ರೀತಿಯಿಂದ ಅವನನ್ನು ಸ್ವೀಕರಿಸುತ್ತಾನೆ, ಅಷ್ಟೇ ಅನುಗ್ರಹ ಮಾಡುತ್ತಾನೆ. ಹೆಚ್ಚು ಪ್ರೀತಿಯಿಂದ ಸ್ವೀಕರಿಸುವುದಿಲ್ಲ. ಹೆಚ್ಚು ಪ್ರೀತಿಯಿಂದ ಅನುಗ್ರಹಿಸುವುದಿಲ್ಲ. ಕಡಿಮೆ ಪ್ರೀತಿಯಿಂದ ಸ್ವೀಕರಿಸುವುದಿಲ್ಲ. ಕಡಿಮೆ ಪ್ರೀತಿಯಿಂದ ಅನುಗ್ರಹಿಸುವುದಿಲ್ಲ.

ಇನ್ನು ಭಕ್ತಿತಾರತಮ್ಯ ವಿಚಾರ. ನಿತ್ಯತರುಣನು ಭಗವಂತನೊಂದಿಗೆ ಇರುವವನು ಅಧ್ಯಯನದ ಪೂರ್ಣಫಲವನ್ನು ಪಡೆದಿರುವವನು ಪೂರ್ಣಾನಂದ ಉಳ್ಳವನು ಸದಾ ಹರಿಭಕ್ತ್ಯಾದಿ ಬಲಉಳ್ಳವನು ಸಂಪತ್‌ಸಮೃದ್ಧವಾದ ಇಡೀ ಭೂಮಿಯನ್ನು ಸಂಸಾರವಸ್ಥೆಯಲ್ಲಿ ಆಳುವವನು ಇಂಥ ಮುಕ್ತ ಮಾನವನ ಸ್ವರೂಪಭೂತವಾದ ಭಕ್ತಿ ಒಂದು ಎಂದಿಟ್ಟುಕೊಂಡರೆ ಇಂಥ ನೂರು ಭಕ್ತಿ ಮನುಷ್ಯಗಂಧರ್ವರ ಸ್ವರೂಪಭೂತವಾಗಿದೆ. ಮನುಷ್ಯಗಂಧರ್ವನ ಸ್ವರೂಪಭಕ್ತಿ ಒಂದು ಎಂದಿಟ್ಟುಕೊಂಡರೆ ಅಂಥ ನೂರು ಭಕ್ತಿ ದೇವಗಂಧರ್ವರದು. ಅದನ್ನು ಒಂದೆಂದಿಟ್ಟುಕೊಂಡರೆ ಅಂಥ ನೂರು ಭಕ್ತಿ ಚಿರಲೋಕವಾಸಿಗಳಾದ ಪಿತೃಗಳ ಭಕ್ತಿ. ಅದಕ್ಕಿಂತ ನೂರುಪಟ್ಟು ಅತಾತ್ವಿಕಕರ್ಮದೇವತೆಗಳದು. ಅದಕ್ಕಿಂತ ನೂರುಪಟ್ಟು ತಾತ್ತ್ವಿಕದೇವತೆಗಳದು. ಅದಕ್ಕಿಂತ ನೂರುಪಟ್ಟು ಇಂದ್ರನದು. ಅದಕ್ಕಿಂತ ನೂರುಪಟ್ಟು ರುದ್ರನದು. ಅದಕ್ಕಿಂತ ನೂರುಪಟ್ಟು ಚತುರ್ಮುಖನದು. ಅದಕ್ಕಿಂತ ಕೋಟಿಪಟ್ಟು ಭಕ್ತಿ ಲಕ್ಷ್ಮೀದೇವಿಯ ಸ್ವರೂಪಭೂತವಾದುದು. ಭಕ್ತರಲ್ಲಿ ಎಷ್ಟು ಭಕ್ತಿಯೋ ಅಷ್ಟು ಜ್ಞಾನ ಅಷ್ಟು

ಆನಂದ ಮುಕ್ತಿಯಲ್ಲಿ ಇರುವುದು. ಪರಮಾನಂದಉಳ್ಳವನು ಶ್ರೀಹರಿ. ಅವನೇ ಪೂರ್ಣ. ಸರ್ವಪ್ರೇರಕ. ಅವನಿಗೆ ಪ್ರೇರಕನಿಲ್ಲ. ಸರ್ವಕಾರಕ ವಿವಿಧಕಾರಕ ಅಧಿಕಕಾರಕ. ಇವನ ಆನಂದದ ಒಂದು ಬಿಂದುವನ್ನು ರಮಾಬ್ರಹ್ಮಾದಿ ತೃಣಪರ್ಯಂತ ಚೇತನರು ಆಶ್ರಯಿಸಿರುತ್ತಾರೆ' ಎಂದು ಪೌತ್ರಾಯಣಶ್ರುತಿ ಹೇಳುತ್ತಿದೆ.

ಅನುಗ್ರಹ–ಭಕ್ತಿಗಳು ಕಾರ್ಯಕಾರಣಭಾವದಿಂದ ಜೊತೆಗೇ ಇರುತ್ತದೆ. ಅನುಗ್ರಹಉಳ್ಳವನು ಭಕ್ತನೇ ಆಗಿರುತ್ತಾನೆ. ಭಕ್ತನು ಅನುಗ್ರಹ ಉಳ್ಳವನೇ ಆಗುತ್ತಾನೆ. ಹರಿಯಿಂದ ಅನುಗೃಹೀತನು ಭಕ್ತನೇ ಆಗಿರುತ್ತಾನೆ. ಭಕ್ತನನ್ನು ಹರಿ ಅನುಗ್ರಹಿಸುತ್ತಾನೆ. ಹರಿಯ ಅನುಗ್ರಹವೆಷ್ಟೋ ಅಷ್ಟೇ ಭಕ್ತಿ ಭಕ್ತನಲ್ಲಿರುತ್ತದೆ. ಎಷ್ಟು ಭಕ್ತಿಯೋ ಅಷ್ಟು ಹರಿಯ ಅನುಗ್ರಹ. ಪ್ರಕೃತ್ಯಭಿಮಾನಿನಿಯಾದ ಲಕ್ಷ್ಮಿಯಲ್ಲಿ ಹರಿಯ ಪರಮಾನುಗ್ರಹವಿರುತ್ತದೆ. ಅವಳಿಗಿಂತ ಕಡಿಮೆ ಮಹತ್ತತ್ತ್ವಾಭಿಮಾನಿ ಚತುರ್ಮುಖನಲ್ಲಿ, ಅವನಿಗಿಂತ ಕಡಿಮೆ ರುದ್ರನಲ್ಲಿ, ರುದ್ರನಿಗಿಂತ ಇಂದ್ರನಲ್ಲಿ, ಇಂದ್ರನಿಗಿಂತ ಬೇರೆ ದೇವತೆಗಳಲ್ಲಿ, ದೇವತೆಗಳಿಗಿಂತ ಪಿತೃಗಳಲ್ಲಿ ಅವರಿಗಿಂತ ಮನುಷ್ಯರಲ್ಲಿ ಹೀಗೆ ಕಡಿಮೆ ಕಡಿಮೆಯಾಗಿ ಹರಿಯ ಅನುಗ್ರಹವಿರುತ್ತದೆ.' ಎಂದು ಧರ್ಮಶ್ರುತಿ ಹೇಳುತ್ತಿದೆ.

ತಸ್ಯಾಮೇವ ರಜಸ ಉದ್ರೇಚನಂ ಉಪಾತ್ತರಜೋಽತಿಮಾತ್ರತ್ವಂ ।

ಲಕ್ಷ್ಮೀದೇವಿಯಿಂದ ಅಭಿಮನ್ಯಮಾನವಾದ ಪ್ರಕೃತಿಯಲ್ಲಿಯೇ ರಜೋಗುಣವನ್ನು ಸೃಷ್ಟಿಗಾಗಿ ಶ್ರೀಹರಿ ಉದ್ರೇಕಗೊಳಿಸುವುದರಿಂದ ಅವನು 'ಉಪಾತ್ತ ರಜೋಽತಿಮಾತ್ರ'ನೆನಿಸುತ್ತಾನೆ ಹೊರತು ಅವನಿಗೆ ತ್ರಿಗುಣ ಸಂಬಂಧವಿಲ್ಲ.

ಅಥ ತ್ರಿಗುಣಾ ಹ್ಯೇವ ಪ್ರಕೃತಿರಗುಣೋ ವಾವ ವಿಷ್ಣುಃ। ಸ ಯದಾ ಹ್ಯರಜಾ ರಜೋಽಸ್ಯಾ ಉದ್ವರ್ಧಯತ್ಯೇಷಾ ವಾವ ಸೃಷ್ಟಿಃ । ಸ ಯದಾ ಹ್ಯಸತ್ವಃ ಸತ್ವಮಸ್ಯಾ ಉದ್‌ವರ್ಧಯತ್ಯೇಷಾ ವಾವ ಸ್ಥಿತಿಃ। ಸ ಯದಾ ಹ್ಯತಮಾಸ್ತಮೋಽಸ್ಯಾ ಉದ್ವರ್ಧಯತ್ಯೇಷ ವಾವ ಲಯಃ। ನೈನಮೇತೇ ಗುಣಾ ಅಭ್ಯುಪಸ್ಪೃಶಂತಿ। ನೈಷ ಏತಾನ್ ಗುಣಾನಭ್ಯುಪಸ್ಪೃಶತ್ಯಗುಣೋ ಹ್ಯೇಷ ಭವತಿ। ಅತ್ರೈಷ ಶ್ಲೋಕೋ ಭವತಿ ।

ನಿರ್ಗುಣಸ್ಯಗುಣಾದಾನಂ ಪ್ರಕೃತೇರ್ಗುಣವರ್ಧನಂ ।
ನ ಕದಾಚಿದ್ ಗುಣೈರೇಷ ಸ್ಪೃಶ್ಯತೇ ಪರಮೋ ಹಿ ಸಃ ॥

–ಇತಿ ಚಾಕ್ರಾಯಣ ಶ್ರುತಿಃ

ಲಕ್ಷ್ಮೀದೇವಿಯೇ ಪ್ರಕೃತಿಯ ಮೂರು ಗುಣಗಳಿಗೆ ಅಭಿಮಾನಿನಿ. ವಿಷ್ಣು ತ್ರಿಗುಣಾಭಿಮಾನಿಯಲ್ಲ. ರಜೋಗುಣಾಭಿಮಾನರಹಿತನಾದ ವಿಷ್ಣು ಲಕ್ಷ್ಮಿಯ ರಜೋಗುಣವನ್ನು ಉದ್ರೇಕಗೊಳಿಸುವಾಗಲೇ ಅದು ಸೃಷ್ಟಿ ಎನಿಸುತ್ತದೆ. ಸತ್ವಗುಣರಹಿತನಾದ ವಿಷ್ಣು ಸತ್ವವನ್ನು ಉದ್ರೇಕಗೊಳಿಸುವಾಗ ಅದು ಸ್ಥಿತಿ ಎನಿಸುವುದು. ತಮೋಗುಣ ರಹಿತನಾದ ವಿಷ್ಣು ತಮೋಗುಣವನ್ನು ಉದ್ರೇಕಗೊಳಿಸುವಾಗ ಅದು ಲಯವೆನಿಸುವುದು. ಈ ಗುಣಗಳು ವಿಷ್ಣುವನ್ನು, ವಿಷ್ಣು ಈ ಗುಣಗಳನ್ನು ಸ್ಪರ್ಶಿಸುವುದಿಲ್ಲ. ವಿಷ್ಣು ನಿರ್ಗುಣನಾಗಿರುತ್ತಾನೆ. ಈ ವಿಷಯದಲ್ಲಿ ಹೀಗೆ ಶ್ಲೋಕವಿದೆ, 'ನಿರ್ಗುಣನಾದ ವಿಷ್ಣು ಗುಣವನ್ನು ಸ್ವೀಕರಿಸುವುದೆಂದರೆ ಅದನ್ನು ಉದ್ರೇಕಗೊಳಿಸುವುದೇ ಹೊರತು ಎಂದೂ ಅವನು ಗುಣಗಳಿಂದ ಬದ್ಧನಾಗುವುದಿಲ್ಲ. ಏಕೆಂದರೆ ಅವನು ಸರ್ವೋತ್ತಮ' ಎಂದು. ಹೀಗೆ **ಚಾಕ್ರಾಯಣಶ್ರುತಿ ಹೇಳುತ್ತಿದೆ.**

❖❖❖

ಪ್ರಣಯಕಲಹ ಪ್ರಸಂಗದಲ್ಲಿ ಶ್ರೀಕೃಷ್ಣನಾಡಿದ ಮಾತು ಯಾವುದೂ ಸುಳ್ಳಲ್ಲ **ಎನ್ನುತ್ತಿದ್ದಾಳೆ, ರುಕ್ಮಿಣಿ.**

ನೈವಾಲೀಕಂ ಭರತ್ಯೇವ ವಚಸ್ತೇ ಮಧುಸೂದನ ।
ಅಂಬಾಯಾ ಇವ ಹಿ ಪ್ರಾಯಃ ಕನ್ಯಾವಾದರತಿಃ ಕ್ವಚಿತ್ ॥ ೫೧ ॥

ಹೇ ಮಧುಸೂದನ, **ಕನ್ಯಾ**ದಾನದ ಮಾತುಕತೆಗಳಲ್ಲಿ ತಾಯಿಯ ಆಸಕ್ತಿ ತೋರಿಕೆಯದಲ್ಲ. **ಅವಳು ಪ್ರೀತಿಪೂರ್ವ**ಕವಾಗಿ ಆಡುವ ಮಾತು ಪ್ರಾಯಃ ಸುಳ್ಳಾಗುವುದಿಲ್ಲ. ನಿನ್ನ ಮಾತೂ **ಹಾಗೇ, ಎಂದೂ ಸುಳ್ಳಿನ** ಕಂತೆಗಳನ್ನು ಹೊರುವುದಿಲ್ಲ.

ಬೇರೆ ವ್ಯಾಖ್ಯಾನ**ಕಾರರು 'ಅಂಬಾ'** ಶಬ್ದದಿಂದ ಕಾಶಿರಾಜಪುತ್ರಿಯಾದ ಅಂಬೆಯನ್ನು ದೃಷ್ಟಾಂತವಾಗಿ **ಕೊಡುತ್ತಾರೆ.** [೧]ಕನ್ಯೆಯಾದ ಅಂಬೆ ಸಾಲ್ವನಲ್ಲಿ

೧ ಅಥಾತ್ಮನೋಽನುರೂಪಂ ವಾ ಇತ್ಯಾದಿ ತೇ ವಚೋಽಲೀಕಂ ಮಿಥ್ಯಾ ನಾಹಂ ಮನ್ಯೇ

ಮನಸ್ಸಿಟ್ಟಂತೆ ನಾನು ಶಿಶುಪಾಲಾದಿ ರಾಜರಲ್ಲಿ ಮನಸ್ಸಿಟ್ಟವಳಲ್ಲ ಎಂದು ವ್ಯತಿರೇಕದೃಷ್ಟಾಂತ ಎಂದಿದ್ದಾರೆ. [೨]ಗೋಪಾಲಾನಂದ ವ್ಯಾಖ್ಯಾನದಲ್ಲಿ ಅಂಬೆ ಪಾರ್ವತಿ ಶಂಕರನಲ್ಲಿಯೇ ಮನಸ್ಸಿಟ್ಟಂತೆ ನಾನೂ ನಿನ್ನಲ್ಲಿ ಮನಸ್ಸಿಟ್ಟವಳು ಎಂದು ಅನ್ವಯ ದೃಷ್ಟಾಂತವಾಗಿ ಸ್ವೀಕರಿಸಿದ್ದೂ ಇದೆ. [೩]ಲೋಕದಲ್ಲಿ ಕನ್ಯೆ ಒಬ್ಬನಲ್ಲೇ ಮನಸ್ಸಿಡುತ್ತಾಳೆ. ಇದಕ್ಕೆ ಅಂಬೆಯೇ ನಿದರ್ಶನ. ನಿನಗಿದು ಗೊತ್ತಿಲ್ಲವೆ? ಎಂದು ರುಕ್ಮಿಣಿ ಕೃಷ್ಣನನ್ನು ಆಕ್ಷೇಪಿಸುತ್ತಾಳೆ, ಜೀವಗೋಸ್ವಾಮಿಯ ಬೃಹತ್ಕ್ರಮಸಂದರ್ಭದಲ್ಲಿ. ಎಲ್ಲ ವ್ಯಾಖ್ಯಾನಕಾರರಲ್ಲಿಯೂ [೪]ನೀನು ಹೇಳುವುದು ಬೇರೆ ಸ್ತ್ರೀಯರ ಸ್ವಭಾವ ವಿಷಯದಲ್ಲಿ ನಿಜವಾದರೂ ನನ್ನ ವಿಷಯದಲ್ಲಿ ಸುಳ್ಳೇ' ಎಂದು ರುಕ್ಮಿಣಿ ಹೇಳುತ್ತಾಳೆ. ಆದರೆ ಇದು ಪ್ರಸಂಗಕ್ಕೆ ಅನುಗುಣವಾಗಿಲ್ಲ. 'ನನಗೆ ನಿನ್ನಲ್ಲಿ ಪ್ರೀತಿಯೆ ಇದೆ, ನಿನಗೂ ನನ್ನ ಮೇಲೆ ಪ್ರೀತಿಯೆ ಇದೆ, ವಿನೋದಕ್ಕಾಗಿ ನಾನು ವ್ಯತಿರಿಕ್ತವಾಗಿ ನುಡಿದೆನೆಂ'ದು—

ಮಾಮಾ ವೈದರ್ಭ್ಯಸೂಯೇಥಾ ಜಾನೇ ತ್ವಾಂ ಮತ್ಪರಾಯಣಾಂ
ತ್ವದ್ವಚಃ ಶ್ರೋತುಕಾಮೇನ ಕ್ಷ್ವೇಲಾಚರಿತಮಂಗನೇ ॥ ೩೨ ॥

ಎಂದು ಶ್ರೀಕೃಷ್ಣ ಹಿಂದೆ ಹೇಳಿದ್ದಾನೆ. ತಿರುಗಿ ರುಕ್ಮಿಣಿ ಅವನನ್ನು ಆಕ್ಷೇಪಿಸುವುದು ಯುಕ್ತವಲ್ಲ.

ವಸ್ತುತಃ ಬೇರೆ ವ್ಯಾಖ್ಯಾನಕಾರರು ಹಿಡಿದ ಪಾಠವೇ ತಪ್ಪು. ಅದನ್ನು

ಕನ್ಯಾಯಾ ಅಂಬಾಯಾಃ ಕಾಶಿರಾಜಸುತಾಯಾ ಇವ ಪ್ರಾಯಃ ಕ್ವಚಿದನ್ಯತ್ರ ರುಚಿಃ ಸ್ಯಾದಿತಿ ಭಾರತಾದಿಪರ್ವಣಿ ಕಥಾ। ಮಮ ತು ತ್ವಯ್ಯೇವ ತಿಷ್ಠತೀತಿ ಭಾವಃ। -ಸುಬೋಧಿನೀಕಾರಃ

೨. ಕನ್ಯಾಯಾ ಅಪಿ ಕ್ವಚಿದ್ ಏಕಸ್ಮಿನ್ನೇವ ಪುರುಷೇ ರತಿಃ ಸ್ಯಾತ್। ಯಥಾ ಅಂಬಾಯಾಃ। ಪಾರ್ವತ್ಯಾಃ ಕನ್ಯಾಯಾ ಅಪಿ ಶಂಕರೇ ರತಿಃ ತಥಾ ಮಮಾಪಿ ತ್ವಯ್ಯೇವ ರತಿಃ।
-ಗೋಪಾಲಾನಂದಃ

೩. ಲೌಕಿಕೇಽಪಿ ದೃಶ್ಯತೇ ಕನ್ಯಾಯಾಃ ಕ್ವಚಿದೇವ ರತಿಃ। ತತ್ರಾಂಬೈವ ಪ್ರಮಾಣಂ। ಇದಮಪಿ ತ್ವಯಾ ನ ಜ್ಞಾತಂ? ಇತ್ಯಾಕ್ಷೇಪಃ। -ಜೀವಗೋಸ್ವಾಮಿಕೃತ ಬೃಹತ್ಕ್ರಮಸಂದರ್ಭ।

೪. ಯಥಾತ್ಮನೋಽನುರೂಪಮಿತ್ಯಾದಿ ತೇ ವಚಃ ಅಲೀಕಂ ನ ಮನ್ಯೇ ಯತೋ ಲೋಕೇ ಕನ್ಯಾಯಾ ಅಪಿ ಕ್ವಚಿದ್ರತಿರ್ಭವತಿ ಯಥಾ ಕಾಶಿರಾಜಕನ್ಯಾನಾಂ ಅಂಬಾಂಬಾಲಿಕಾಂಬಿಕಾನಾಂ ತಿಸೃಣಾಂ ಮಧ್ಯೇ ಅಂಬಾಯಾಃ ಕನ್ಯಾಯಾ ಅಪಿ ಸಾಲ್ವೇ ರತಿರ್ಜಾತಾ। -ವಿಶ್ವನಾಥಃ

೫. ವಚಃ ಸ್ತ್ರೀಜಾತಿ ಸ್ವಭಾವ ಸೂಚಕಮೀದೃಶಂ ವಚನಂ ಅಲೀಕಮವಿಷಯಂ ನೈವ ಮನ್ಯೇ ಹಿ ಯಸ್ಮಾತ್ ಕನ್ಯಾಯಾ ಅಪಿ ಕ್ವಚಿದೇಕತ್ರೈವ ಪುರುಷೇ ರತಿಃ ಸ್ಯಾತ್। ತತ ದೃಷ್ಟಾಂತಃ ಅಂಬಾಯಾ ಇವೇತಿ। -ಜೀವಗೋಸ್ವಾಮಿಕೃತ ವೈಷ್ಣವತೋಷಿಣೀ

ಆದರಿಸಿದ್ದರಿಂದ ಪ್ರಸಂಗಾನನುಗುಣವಾಗಿ ಈ ಶ್ಲೋಕ ಬರುವಂತಾಗಿದೆ. ಅವರ ಪಾಠ ಹೀಗಿದೆ—

'ಕನ್ಯಾಯಾಃ ಸ್ಯಾದ್ ರತಿಃ ಕ್ವಚಿತ್।'

ಶ್ರೀಮದಾಚಾರ್ಯರು ಪಾಠಶುದ್ಧಿ ಮಾಡಿದ್ದಾರೆ. 'ಕನ್ಯಾವಾದರತಿಃ' ಎಂದು ಪಾಠವನ್ನು ಸೂಚಿಸಿದ್ದಾರೆ.

ಮಾತುಃ ಕನ್ಯಾಪ್ರದಾನವಾದೇ ರತಿರ್ಯಥಾ ನಾಲೀಕಂ ಭವತಿ ಪ್ರಾಯಸ್ತಥಾ ತೇ ವಚಃ ಕ್ವಚಿದಪಿ ನಾಲೀಕಂ ಭವತ್ಯೇವ ।

ಕನ್ಯಾದಾನದ ಮಾತುಕತೆಗಳಲ್ಲಿ ಮಾತೆಯ ಆಸಕ್ತಿ ತೋರಿಕೆಯದ್ದಾಗಿರುವುದಿಲ್ಲ. 'ಮಗಳನ್ನು ಕೊಡುವೆನೆಂ'ದು ಅವಳು ಪ್ರೀತಿಯಿಂದ ಹೇಳುವ ಮಾತು ಪ್ರಾಯಃ ಸುಳ್ಳಾಗುವುದಿಲ್ಲ. ಹಾಗೇ ನಿನ್ನ ಮಾತು ಮಾತೆಯ ಹೃದಯದಿಂದ ಬಂದಿರುತ್ತದೆ, ಎಂದೂ ಸುಳ್ಳಾಗುವುದಿಲ್ಲ ಎಂದು ಶ್ಲೋಕದ ಅರ್ಥ.

❖❖❖

ಪ್ರಣಯಕಲಹ ಪ್ರಸಂಗದಲ್ಲಿ ರುಕ್ಮಿಣಿ ತನಗೆ ಶ್ರೀಕೃಷ್ಣನಲ್ಲಿ ಅನುರಾಗ **ನಿಶ್ಚಲವೆಂದು ಉದಾಹರಣೆಯೊಂದಿಗೆ** ಸಮರ್ಥಿಸುತ್ತಾಳೆ.

ಮುಗ್ಧಾಯಾಶ್ಚಾಪಿ ಪುಂಶ್ಚಲ್ಯಾ ಮನೋಽಭ್ಯೇತಿ ನವಂನವಮ್ ।
ಬುಧೋಽ ಸತೀಂ ನ ಬಿಭೃಯಾತ್ತಾಂ ಬಿಭ್ರದುಭಯಚ್ಯುತಃ ॥ ೫೨ ॥

ಪರಪುರುಷರಲ್ಲಿ ಮೋಹಿತಳಾಗಿ ವ್ಯಭಿಚಾರ ಮಾಡುವ ಸ್ತ್ರೀಯನ್ನು ವಿವೇಕಿಯು **ಪೋಷಿಸುವುದಿಲ್ಲ. ಪೋಷಿಸುವವನು** ಇಹಪರಗಳೆರಡರಲ್ಲಿಯೂ ಸುಖದಿಂದ **ವಂಚಿತನಾಗುತ್ತಾನೆ. ಅಂಥ ಪಿಂಗಳೆಯಂಥ** ಸ್ತ್ರೀಗೂ ಕೂಡ ನಿನ್ನಲ್ಲಿ ಮನಸ್ಸು ನಿತ್ಯ ನೂತನವಾಗಿ **ಪ್ರವೇಶಿಸುವುದೆಂದ** ಮೇಲೆ ನಾನು ನಿನ್ನ ನಿತ್ಯಾವಿಯೋಗಿನಿ ಸತಿಯಾಗಿರುವುದರಲ್ಲಿ **ಏನಾಶ್ಚರ್ಯ?**

[೧]ಬೇರೆ ವ್ಯಾಖ್ಯಾನಗಳ **ಪ್ರಕಾರ** ಇಲ್ಲಿ **ರುಕ್ಮಿಣಿ** ಕೃಷ್ಣನಿಗೆ ಕಿವಿಮಾತನ್ನು ಹೇಳುತ್ತಿದ್ದಾಳೆ. '**ಲೋಕದಲ್ಲಿ ಬೇರೆ ವರನನ್ನು** ಬಯಸುವ ಕನ್ಯೆ ಅಂಬೆಯಂತೆ ಕೆಲವೆಡೆ ಇರುತ್ತಾರೆ. **ವಿವಾಹವಾಗಿಯೂ** ಪರಪುರುಷರನ್ನು ಬಯಸುವ

೧. ತದೇವಂ ಸರ್ವಂ **ತದುಕ್ತಂ ಪ್ರತಿವ್ಯಾಖ್ಯಾಯ ಪ್ರಸನ್ನಚಿತ್ತಾ** ಮಂತ್ರಮುಪದಿಶಂತ್ಯಾಹ ದ್ವಾಭ್ಯಾಂ ನೈವೇತಿ। -ಶ್ರೀಧರಃ

ಕುಲಟೆಯರೂ ಇರುತ್ತಾರೆ, ಅವರನ್ನು ಕಟ್ಟಿಕೊಳ್ಳಬೇಡ. ನಾನು **ಪತಿವ್ರತೆ. ನನ್ನನ್ನು** ಬಿಡಬೇಡ' ಎಂದು. 'ವ್ಯೂಢಾಯಾಶ್ಚಾಪಿ' ಎಂದು ಅವರ ಪಾಠ.

ಈ ಅಭಿಪ್ರಾಯವಿಟ್ಟುಕೊಂಡರೆ ಈ ಶ್ಲೋಕವೂ ಪ್ರಸಂಗಕ್ಕೆ **ಅನುಗುಣವಾಗಿಲ್ಲ**. ಕುಲಟೆಯನ್ನು ಕಟ್ಟಿಕೊಂಡರೆ ನೀನು ಇಹಪರಗಳೆರಡರಲ್ಲಿಯೂ **ಅನರ್ಥಭಾಗಿ**ಯಾಗುವಿ ಎಂದು ನಿತ್ಯಮುಕ್ತ ಸ್ವತಂತ್ರ ಸರ್ವೋತ್ತಮನಾದ ಪರಮಾತ್ಮ**ನಿಗೆ ದೇವಿ** ನರಕಾದಿ ಭಯದ ಬೆದರಿಕೆ ಹಾಕುತ್ತಿದ್ದಾಳೆ! ಒಂದು ವೇಳೆ ಹಾಗೆ ಬೆದರಿಕೆ **ಹಾಕಿದರೂ** ಕೃಷ್ಣ ಹೇಳಬಹುದು, 'ನಾನು ಕುಲಟೆಯ ಸಂಗ ಮಾಡಿದರೆ ಅವಳು **ಕುಲಟೆಯಾಗಿ** ಇರುವುದಿಲ್ಲ, ನನ್ನ ಏಕಾಂತಭಕ್ತಳೇ ಆಗುತ್ತಾಳೆ, ಪಿಂಗಳೆ ಎಂಬ **ವೇಶ್ಯೆಯಂತೆ!** ಎಂದು. ಆಗ ದೇವಿ ಏನು ಹೇಳಬಲ್ಲಳು? 'ಹೌದು, ನೀನು **ಕುಲಟೆಯ** ಸಂಗಮಾಡಿದರೂ ನರಕಕ್ಕೆ ಹೋಗುವವನಲ್ಲ, ನಿನ್ನ ಸಂಗದಿಂದ ಕುಲ**ಟೆಯೇ ನಿನಗೆ** ಏಕಾಂತಭಕ್ತಳಾಗುವಳು, ಪಿಂಗಳೆಯಂತೆ.' ಎನ್ನುವಳೇ? ಅವಳು ಹಾಗೆ **ಹೇಳಿದರೆ** ಅದು ಕೇವಲ ಪ್ರಲಾಪವಾದೀತು. ಆದರೂ ಶ್ರೀಕೃಷ್ಣ ಹೇಳಿದ್ದೇ **ಎಲ್ಲವೂ** ಪ್ರಲಾಪವೆಂದು ದೇವಿ ಹೇಳುತ್ತಾಳಂತೆ! [೨]ಶ್ರೀನಾಥಚಕ್ರವರ್ತಿ ವ್ಯಾಖ್ಯಾನದ**ಲ್ಲಿ**

ಶ್ಲೋಕದ ಅನ್ವಯಾರ್ಥವನ್ನು ತಿಳಿಯದೆ ಹೀಗೆ ಬೇರೆ ವ್ಯಾಖ್ಯಾನ**ಕಾರರು** ಶ್ಲೋಕವನ್ನು ಪ್ರಸಂಗಕ್ಕೆ ಅನನುಗುಣವಾಗುವಂತೆ ಅಸಂಗತ**ವಾಗುವಂತೆ** ಮಾಡಿದ್ದಾರೆ. 'ನವಂನವಂ' ಎಂದು, 'ಹೊಸಹೊಸ ಪುರುಷನನ್ನು **ಅರಸಿ** ಹೋಗುತ್ತಾಳೆ' ಎನ್ನಲು ಪುರುಷ ಶಬ್ದವಿಲ್ಲ, ಅಧ್ಯಾಹಾರ ಮಾಡಿ**ಕೊಳ್ಳಬೇಕು**. ಅದಕ್ಕಿಂತ 'ತ್ವಯಿ' 'ನಿನ್ನಲ್ಲಿ' ಎಂದೇ ಅಧ್ಯಾಹಾರ ಮಾಡಿ, 'ಕುಲಟೆಯ **ಮನಸ್ಸು** ಕೂಡ ನಿನ್ನಲ್ಲಿ ಸದಾ ನಿತ್ಯನೂತನವಾಗಿಯೇ ನೆಲೆಸುವುದೆಂ'ದು ಅನ್ವ**ಯಿಸಬೇಕು**. 'ಯಾವ ಕುಲಟೆಯನ್ನು ವಿವೇಕಿಯು ಕಟ್ಟಿಕೊಳ್ಳಬಾರದೋ ಯಾರನ್ನು **ಕಟ್ಟಿಕೊಂಡರೆ** ಇಹಪರಗಳಲ್ಲಿ ಸುಖವಿಲ್ಲವೋ, ಅಂಥ ಕುಲಟೆಯ ಮನಸ್ಸು ಕೂಡ' ಎಂದು **'ಅಪಿ'**

---

೧. ವ್ಯೂಢಾಯಾ ಅಪಿ ಪುಂಶ್ಚಲ್ಯಾಃ। ಜನ್ಮಸಂಸ್ಕಾರಾದ್ ಗ್ರಹೈರ್ವಾ ಬಹುಪುರುಷ **ಸಂಬಂಧಿನೀ** ಭವತಿ। ತತಸ್ತಸ್ಯಾ ಮನಃ ನವಂ ನವಂ ಪುರುಷಮಭ್ಯೇತಿ। ತದವಶ್ಯಂ **ಪರೀಕ್ಷಣೇನ** ಜ್ಞಾತವ್ಯಂ। ತತ್ರ ಪ್ರಯೋಜನಮಾಹ ಬುಧಃ ಅಸತೀಂ ನ **ಬಿಭೃಯಾದಿತಿ। ತಾಂ** ಬಿಭ್ರದುಭಯಚ್ಯುತ ಇತಿ ಬಾಧಕಂ। **- ವಲ್ಲಭ**

೨. ಪುಂಶ್ಚಲ್ಯಾಸ್ತು ವ್ಯೂಢಾಯಾ ಅಪಿ ಮನೋ ನರಂ ನವಮಭ್ಯೇತಿ। ತಾಂ **ಬಿಭ್ರದ್ ಬುಧೋಽಪಿ** ಉಭಯಚ್ಯುತೋ ಭವತಿ। ನ ತು ತ್ವಂ ಕದಾಚಿತ್ ತನ್ಮಧ್ಯೇ। **ತ್ವಾಂ ಚೇದಭ್ಯೇತಿ ತದಾ** ಸಾಪ್ಯೇಕಾಂತ ಭಕ್ತಾ ಭವತಿ ಪಿಂಗಲಾವತ್। ತಸ್ಮಾತ್ ತ್ವಯಾ ಯದು**ಕ್ತಂ ತತ್ಸರ್ವಂ ಪ್ರಲಾಪ** ಏವಮಾಕ್ಷೇಪಃ। **- ಶ್ರೀನಾಥಃ**

ಶಬ್ದವೂ ಹೆಚ್ಚು ಅರ್ಥಪೂರ್ಣವಾಗುವುದು. 'ಕುಲಟೆಯ ಮನಸ್ಸು ಕೂಡ, ಪಿಂಗಳೆಯಂತೆ, ನಿನ್ನಲ್ಲಿ ಒಮ್ಮೆ ಭಕ್ತಿ ಇರಿಸಿದಳೆಂದರೆ ಮುಂದೆ ಅದು ಗಾಢವಾಗಿ ಬೆಳೆದು ನಿನ್ನಲ್ಲೇ ಆಸಕ್ತವಾಗುವುದು ನಿನ್ನ ಸಂಗ ಅವಳಿಗೆ ಪ್ರತಿಕ್ಷಣ ಹೊಸಹೊಸತೆನಿಸುವುದು ಎಂದಮೇಲೆ ನನ್ನಂಥವಳ ಮನಸ್ಸಿನ ಬಗ್ಗೆ ಏನು ಹೇಳಬೇಕು? ಅದರಿಂದ ನಾನು ನಿನ್ನನ್ನೇ ವರಿಸಿದ್ದೇನೆ. ಎಲ್ಲ ಕಾಲದಲ್ಲಿಯೂ ನಾನು ನಿನ್ನ ಸತಿ, ನೀನು ನನ್ನ ಪತಿ' ಎನ್ನುತ್ತಿದ್ದಾಳೆ ದೇವಿ.

ಯಾಮಸತೀಂ ಬುಧೋ ನ ಬಿಭೃಯಾತ್, ಯಾಂ ಚ ತಾಂ ಬಿಭ್ರದ್ ದೃಷ್ಟಾದೃಷ್ಟ ಚ್ಯುತೋ ಭವತಿ, ತಸ್ಯಾ ಅಪಿ ಪುಂಶ್ಚಲ್ಯಾಃ ತ್ವಯಿ ಮನೋ ನವಂನವಮಭ್ಯೇತಿ ॥

'ಯಾವ ಕೆಟ್ಟ ಹೆಂಗಸನ್ನು ವಿವೇಕಿಯು ಕಟ್ಟಿಕೊಳ್ಳಬಾರದೋ, ಕಟ್ಟಿಕೊಂಡರೆ ಇಹಪರಗಳಲ್ಲಿ ಸುಖಕ್ಕೆ ಎರವಾಗುವನೋ, ಅಂಥ ಕುಲಟೆಯ ಮನಸ್ಸು ಕೂಡ ಒಮ್ಮೆ ನಿನ್ನ ಬಳಿಗೆ ಬಂದಿತೆಂದರೆ ಸದಾ ನಿತ್ಯನೂತನವಾಗಿ ನಿನ್ನಲ್ಲಿಯೇ ನೆಲೆಸುತ್ತದೆ' ಎಂದು ಶ್ಲೋಕದ ಅರ್ಥ.

❖ ❖ ❖

'ಶ್ರೀಕೃಷ್ಣ ತನ್ನನ್ನೆಂದೂ ಬಿಟ್ಟಿರಲಾರ. ಅವನಿಗೆ ತಾನು ಪ್ರಾಣಪ್ರಿಯೆ' ಎಂದು ತಿಳಿದುಕೊಂಡಿದ್ದ ರುಕ್ಮಿಣಿಗೆ ಶ್ರೀಕೃಷ್ಣ 'ಶಿಶುಪಾಲಾದಿ ರಾಜರ ಮದ ಇಳಿಸಲೆಂದೇ ನಾನಿನ್ನನ್ನು ಅಪಹರಿಸಿದೆನಲ್ಲದೆ, ನನಗೆ ನಿನ್ನ ಅಪೇಕ್ಷೆಯಿಲ್ಲ. ಬೇರೆ ರಾಜರನ್ನು ಮದುವೆಯಾಗು, ಹೋಗು' ಎನ್ನುತ್ತ ಅವಳನ್ನು ತಿರಸ್ಕರಿಸಿದಾಗ ದೇವಿ ದುಃಖ ಭಯಶೋಕಗಳಿಂದ ವಿವಶಳಾಗಿ ಬಿದ್ದಳು—

ತಸ್ಯಾಃ ಸುದುಃಖಭಯಶೋಕವಿನಷ್ಟಬುದ್ಧೇ-
ರ್ಹಸ್ತಾಚ್ಛ್ಲಥದ್ವಲಯತೋ ವ್ಯಜನಂ ಪಪಾತ ।
ದೇಹಶ್ಚ ವಿಕ್ಲವಧಿಯಃ ಸಹಸೈವ ಬಿಭ್ಯ-
ದ್ರಂಭೇವ ವಾತವಿಹತಾ ಪ್ರವಿಕೀರ್ಯ ಕೇಶಾನ್ ॥ ೨೮ ॥

ಒಡನೆ ಅತಿಯಾದ ದುಃಖ ಭಯಶೋಕಗಳಿಂದ ಅವಳಿಗೆ ಪ್ರಜ್ಞೆ ತಪ್ಪಿತು. ಕೈಬಳೆ ಜಾರಿದುವು. ಕೈಯಲ್ಲಿ ಹಿಡಿದಿದ್ದ ಚಾಮರ ಕೆಳಗೆ ಬಿದ್ದಿತು. ಬುದ್ಧಿ ಮಂಕಾದ್ದರಿಂದ ಶರೀರ ನಡುಗಿತು. ಕೂದಲು ಹರವಿಕೊಂಡು ಬಿರುಗಾಳಿಯ ವೇಗಕ್ಕೆ ಸಿಲುಕಿದ ಬಾಳೆಗಿಡದಂತೆ ದೊಪ್ಪನೆ ಬಿದ್ದಿತು.

[೧]ವಲ್ಲಭವ್ಯಾಖ್ಯಾನ ಹೇಳುತ್ತದೆ—'ಬುದ್ಧಿ ಪ್ರಯತ್ನದ್ವಾರಾ ದೇಹಧಾರಕವಾಗಿದೆ. ಅಂಥ ಬುದ್ಧಿ ದುಃಖಭಯಶೋಕಗಳಿಂದ ನಾಶವಾಗಿದೆ. ಕೃಷ್ಣನ ವಿಯೋಗವಾಗುವುದೆಂದು ದುಃಖ. ತನ್ನನ್ನು ಅನ್ಯರಿಗೆ ನೀಡುವನೆಂದು ಭಯ. ತನಗೆ ಸರ್ವನಾಶವಾದೀತೆಂದು ಶೋಕ. ಹೀಗೆ ಬುದ್ಧಿ ದುಃಖಾದಿತ್ರಯದಿಂದ ನಾಶವಾದಾಗ ಬುದ್ಧಿಯಿಂದಾಗುವ ಧಾರಕ ಸ್ಥೂಲಪ್ರಯತ್ನ ಇಲ್ಲವಾಗುವುದರಿಂದ ಕೈಯಿಂದ ಬೀಸಣಿಗೆ ಬಿದ್ದಿತು. ಪ್ರಾಣಧಾರಕವಾದ ಸೂಕ್ಷ್ಮಪ್ರಯತ್ನವಿಲ್ಲದ್ದರಿಂದ ದೇಹವೂ ಬಿದ್ದಿತು. ಸೂಕ್ಷ್ಮಕಾರಣಪ್ರಾಣಧಾರಕ ಪ್ರಯತ್ನವೂ ಇಲ್ಲದಿದ್ದರೆ ಸರ್ವನಾಶವೇ ಮರಣವೇ. ಸೂಕ್ಷ್ಮವಾದ ಧಾರಕಬುದ್ಧಿ ಧಾರಕಶಕ್ತಿಯನ್ನು ಕಳೆದುಕೊಂಡಿದೆ. ಅದಕ್ಕೆ ಕಾರಣ ಮೂರ್ಛೆ. ಅರ್ಧಸಂಪತ್ತಿ ನ್ಯಾಯದಿಂದ ಅದು ಅರ್ಧ ಮರಣವೇ, ಕೇವಲ ಶ್ವಾಸವಿರುತ್ತದೆ. ಇಂಥ ಸ್ಥಿತಿಯಲ್ಲಿ ರುಕ್ಮಿಣೀದೇವಿ ಇದ್ದಾಳೆ' ಎಂದು.

[೨]ವಿಶ್ವನಾಥ ವ್ಯಾಖ್ಯಾನ ಹೇಳುತ್ತದೆ—'ದುಃಖ ಭಯ ಶೋಕಗಳಿಂದ ಬುದ್ಧಿ ನಾಶವಾಗಿದೆ. ಅದರಿಂದ ಶ್ರೀಕೃಷ್ಣ ಹಾಸ್ಯಕ್ಕಾಗಿ ಹೇಳಿದ್ದೆಂದು ವಿಚಾರ ಮಾಡದೆ ಹೋದಳು ರುಕ್ಮಿಣಿ. ಹೀಗಾಗಿ ವಿರಹಪೀಡೆಗಳೊಳಗಾಗಿ ಶರೀರಕಾರ್ಶ್ಯದಿಂದ ಕೈಬಳೆಗಳೂ ಜಾರಿದುವು. ದೇಹವೂ ಬಿದ್ದಿತು. ಅದಕ್ಕೆ ಕಾರಣ ಚೇತನಾನಾಶ. ಅದರಿಂದ ಮನ್ಮಥಾವಸ್ಥೆಗಳಲ್ಲಿ ಒಂಬತ್ತನೆಯದಾದ ಮೂರ್ಛೆ ಬಂದಿದೆ.

---

೧. ತಸ್ಯಾ ದೇಹಃ ಪಪಾತ। ದೇಹಧಾರಿಕಾ ಬುದ್ಧಿಃ ಪ್ರಯತ್ನದ್ವಾರಾ। ಸಾ ತು ತ್ರಿಭಿರ್ನಷ್ಟೇತಿ ಸುದುಃಖ ಭಯ ಶೋಕಾ ನಿರೂಪಿತಾಃ। ಸುದುಃಖಂ ಪುರುಷೋತ್ತಮಲಕ್ಷಣ ವಿಷಯಾಭಾವಾದಾನಂದರೂಪಸ್ಯ ಭಗವತಸ್ತಿರೋಭಾವಾದ್ವಾ। ಭಯಂ ಭಗವಾನನ್ಯೇಭ್ಯೋ ದಾಸ್ಯತೀತಿ। ಶೋಕಃ ಸ್ವಸ್ಯ ಸರ್ವನಾಶಾತ್। ತ್ರಿದೋಷೇಣ ಬುದ್ಧಿನಾಶಃ। ಸ ಸ್ವಕೀಯಂ ಪ್ರಯತ್ನಾಭಾವಮಪಿ ಕರೋತೀತ್ಯಾಹ ಹಸ್ತಾತ್‌ಶ್ಲಥದ್ವಲಯತೋ ವ್ಯಜನಂ ಪಪಾತೇತಿ। ಕೃಶತ್ವಾತ್ ಶ್ಲಥದ್ವಲಯತ್ವಂ। ವ್ಯಜನಂ ವೀಜ್ಯಮಾನಂ ಧಾರಕಪ್ರಯತ್ನನಾಶಾತ್ ಪಪಾತ। ಅನೇನ ಸ್ಥೂಲಃ ಪ್ರಯತ್ನೋ ನಷ್ಟ ಇತ್ಯುಕ್ತಂ। ಸೂಕ್ಷ್ಮೋಽಪಿ ನಷ್ಟಃ। ಯೇನ ಪ್ರಾಣೋ ಧಾರ್ಯತ ಇತ್ಯಾಹ ದೇಹಶ್ಚೇತಿ। ದೇಹಶ್ಚ ಪಪಾತ। ಚಕಾರಾತ್ ತತ್ಸಂಬಂಧೀನ್ಯಾಭರಣಾದೀನ್ಯಪಿ। ಇತೋಽಪಿ ಸೂಕ್ಷ್ಮಃ ಕಾರಣಪ್ರಾಣಧಾರಕೋಽವಶಿಷ್ಯತೇ। ತಸ್ಮಿನ್ನಷ್ಟೇ ಸರ್ವನಾಶೋ ಭವಿಷ್ಯತೀತಿ ಭಗವತ ಏತಾವದ್ದೂರಂ ಪರೀಕ್ಷಾ। ಸೂಕ್ಷ್ಮಧಾರಿಕಾ ಬುದ್ಧಿಃ ಸ್ವಪ್ನೇಽಪಿ ತಿಷ್ಠತೀತಿ ಕಥಂ ದೇಹಪಾತ ಇತಿ ಚೇತ್ ತತ್ರಾಹ ವಿಕ್ಲವಧಿಯ ಇತಿ। ಸೂಕ್ಷ್ಮಾಽಪಿ ಬುದ್ಧಿರ್ವಿಕ್ಲವಂ ಪ್ರಾಪ್ತವತೀ। ವಿಚಾರೇಣ ತದಪನೋದಾಭಾವಮಾಹ ಸಹಸೈವ ಮುಹ್ಯದಿತಿ। ಮುಗ್ಧೇಽರ್ಧಸಂಪತ್ತಿರಿತಿ ನ್ಯಾಯೇನ ಅರ್ಧಂ ಮೃತಾ। ಕೇವಲಮಾಸಸ್ವಸ್ತ್ಯೇತಿ। ಅತ ಏವ ಪತಿತಾ, ನ ಮೃತಾ। -ವಲ್ಲಭಃ

೨. ಸುದುಃಖಮಪ್ರಿಯ ಶ್ರವಣಾತ್। ಭಯಂ ತ್ಯಾಗ ಶಂಕಯಾ। ಶೋಕಸ್ತಾಭ್ಯಾಮನುತಾಪಃ। ತೈರ್ವಿನಷ್ಟಾ ಬುದ್ಧಿರ್ಯಸ್ಯಾಃ। ಅತಃ ಪರಿಹಾಸೋಽಯಮಿತಿ ವಿಚಾರೋ ನೋದಭೂದಿತಿ

ಅಂತಿಮಾವಸ್ಥೆಯಾದ ಪ್ರಲಯವೂ ಬಂದಿದೆ ಎಂದು ಸೂಚಿತವಾಗುತ್ತದೆ.'

ಇಲ್ಲಿ ವಲ್ಲಭವ್ಯಾಖ್ಯಾನದಂತೆ ರುಕ್ಮಿಣಿಗೆ ಅರ್ಧಮರಣರೂಪವಾದ ಮೂರ್ಛೆಯೇ ಬಂದಿದೆ ಎಂದು ತಿಳಿಯುವುದು ಪ್ರಣಯಕಲಹ ಪ್ರಸಂಗಕ್ಕೆ ಅನುಚಿತ. ಶೃಂಗಾರರಸಕ್ಕೆ ಭಂಗ ಬರುತ್ತದೆ. ವಿಶ್ವನಾಥವ್ಯಾಖ್ಯಾನದ ಪ್ರಕಾರ ಮೂರ್ಛೆ ಎಂಬುದು 'ಮುಗ್ಧೇऽರ್ಧಸಂಪತ್ತಿಃ' ಎಂದು ಹೇಳಿದ ಸಾಧಾರಣ ಮೂರ್ಛಾವಸ್ಥೆಯಲ್ಲ. ಅದೊಂದು ಮನ್ಮಥಾವಸ್ಥೆ. ಶೃಂಗಾರರಸಕ್ಕೆ ಪೋಷಕವಾಗಿದೆ.

ನಯನಪ್ರೀತಿಃ ಪ್ರಥಮಂ ಚಿತ್ತಾಸಂಗಸ್ತತೋऽರ್ಥಸಂಕಲ್ಪಃ ।
ನಿದ್ರಾಚ್ಛೇದಸ್ತನುತಾ ವಿಷಯನಿವೃತ್ತಿಸ್ತ್ರಪಾನಾಶಃ ।
ಉನ್ಮಾದೋ ಮೂರ್ಛಾ ಮೃತಿರಿತ್ಯೇತಾಃ ಸ್ಮರದಶಾ ದಶೈವ ಸ್ಯುಃ ॥

-ಇತಿ ಕದ್ವಯೆ

'ನಯನಪ್ರೀತಿ, ಚಿತ್ತಾಸಂಗ, ಅರ್ಥಸಂಕಲ್ಪ, ನಿದ್ರಾಚ್ಛೇದ, ತನುತಾ, ವಿಷಂ ನಿವೃತ್ತಿ ತ್ರಪಾನಾಶ, ಉನ್ಮಾದ, ಮೂರ್ಛಾ, ಮೃತಿ' ಎಂದು ಹತ್ತು ಮನ್ಮಥಾವಸ್ಥೆಗಳ ರುಕ್ಮಿಣಿಗೆ ಈ ಎರಡು ವ್ಯಾಖ್ಯಾನಗಳಲ್ಲಿ ಹೇಳಿದ ಮೂರ್ಛೆಗಳೂ ಇಲ್ಲ. ಅಪ್ರ ಪ್ರಾಕೃತಶರೀರಿಗಳಿಗೇ ಹೊರತು ಅಪ್ರಾಕೃತ ಚಿನ್ಮಯಶರೀರಿಗಳಾದ ರಮಾ ನಾರಾಯಣರಿಗೆ ಅಸಂಭಾವಿತ. ಸುಮಧ್ವವಿಜಯದಲ್ಲಿ—

ನ ರತಿಃ ಶ್ರಮಾದಿ ಖಚಿತಾ ನಿಯಮಾದ್
ವಿರಹ ವ್ಯಥಾಪಿ ನ ವಧೂವರಯೋಃ ॥

'ಮುಕ್ತಜೀವರಿಗೂ ಕೂಡ ವಿರಹವ್ಯಥೆಯಿಲ್ಲ' ಎಂದಿದ್ದಾರೆ. ಅದರಿಂದ ಇದು **ರುಕ್ಮಿಣೀಕೃಷ್ಣರೊಳಗೆ** ನಡೆದ ಪ್ರಣಯಕಲಹವಲ್ಲ, ಅವರು ಆಡಿ ತೋರಿದ ನಟನೆಯಷ್ಟೇ ಎಂದು ತಿಳಿಯಬೇಕು.

ಅಮುಗ್ಧೈವ ತು ಮುಗ್ಧೇವ ತ್ವದುಃಖಾ ದುಃಖಿತೇವ ಚ ।
ಶ್ರೀರ್ದರ್ಶಯೇದ್ಧರಿಶ್ಚೈವ ನೈವೈತೌ ಮೋಹದುಃಖಿತೌ ।
ಮಿಥೋऽಪಿ ತಾದೃಗ್ ವಚನಮಾಕಾರಂ ಚೈವ ಲೀಲಯಾ ।

ಭಾವಃ। ಶ್ಲಥಂತಿ ವಲಯಾನಿ ಯಸ್ಮಾದ್ಧಸ್ತಾದಿತಿ ಸಹಸೈವ ವಿರಹಪೀಡೋತ್ಥಾದತಿಕಾರ್ಶ್ಯಾದ್ ವಲಯಾನ್ಯಪಿ ಪೇತುರಿತಿ ಗಮ್ಯತೇ। ತದನಂತರಂ ದೇಹಶ್ಚ ಪಪಾತ। ತತ್ರ ಹೇತುಃ ವಿಕ್ಲವಧಿಯ ಇತಿ। ಬುದ್ಧೇರ್ನಾಶಸ್ಯಾಪಿ ಪ್ರಾಗುಕ್ತೇ ರ್ವಿನಷ್ಟ ಚೇತನಾಯಾ ಇತ್ಯರ್ಥಃ। ತತಶ್ಚ ಮುಹ್ಯನ್ತಿತಿ ಸಹಸೈವ ನವಮ್ಯಪಿ ದಶಾ। ಅತಃ ಪಪಾತೇತಿ ಸ್ತಂಭಾದ್ಯಂತಿಮಃ ಪ್ರಲಯಶ್ಚ ಸಾತ್ವಿಕೋऽಭೂದಿತಿ ಭಾವಃ।

-ವಿಶ್ವನಾಥಃ

ದರ್ಶಯಂತೌ ನೃಣಾಂ ಮೋಹಂ ಕುರ್ಯಾತಾಂ ಶಾಸ್ತ್ರದರ್ಶನಾತ್॥

ಇತಿ ಕಾಪಿಲೇಯೇ ॥

'ಲಕ್ಷ್ಮೀದೇವಿ ಸ್ವಯಂ ಮೋಹ ದುಃಖರಹಿತಳಾಗಿದ್ದರೂ ಮುಗ್ಧಳಂತೆ ದುಃಖಿತೆಯಂತೆ ತೋರಿಕೊಳ್ಳುತ್ತಾಳೆ. ಹಾಗೇ ಶ್ರೀಹರಿಯೂ ಕೂಡ ತೋರಿಕೊಳ್ಳುತ್ತಾನೆ. ಇವರಿಬ್ಬರೂ ಮೋಹದುಃಖ ಉಳ್ಳವರಲ್ಲ. ಪರಸ್ಪರವಾಗಿಯೂ ಕೂಡ ಅಂಥ ಮಾತನ್ನೂ ಆಕಾರವನ್ನೂ ಲೀಲೆಯಿಂದ ತೋರಿಸುತ್ತ ಅಜ್ಞರಿಗೆ ಮೋಹ ಉಂಟುಮಾಡುತ್ತಾರೆ. ಇದು ಶಾಸ್ತ್ರ ಸಿದ್ಧವಾಗಿದೆ' ಎಂದು ಕಾಪಿಲೇಯದಲ್ಲಿ ಉಕ್ತವಾಗಿದೆ.

❖❖❖

ಅಧ್ಯಾಯ - ೭೬

ಅಧ್ಯಾಯ ಸಾರಾಂಶ

ಹದಿನಾರು ಸಾವಿರದ ನೂರೆಂಟು ಮಂದಿ ಪತ್ನಿಯರು ಪ್ರತಿಯೊಬ್ಬರೂ ಕೃಷ್ಣ ತಮ್ಮ ಅಂತಃಪುರವನ್ನು ಬಿಟ್ಟು ಬೇರೆ ಕಡೆ ಹೋಗದಿದ್ದುದನ್ನು ಕಂಡು ತಾವೇ ಅವನಿಗೆ ಹೆಚ್ಚು ಪ್ರೀತಿಪಾತ್ರರೆಂದುಕೊಂಡರು. ಶರೀರ ಸೌಷ್ಠವದಲ್ಲಿ ತಂದೆಗೆ ಕಡಿಮೆಯರಲ್ಲದ ಹತ್ತು ಹತ್ತು ಮಂದಿ ಮಕ್ಕಳನ್ನು ಪಡೆದರು. ಕೃಷ್ಣನ ಶರೀರ ಸೌಂದರ್ಯಕ್ಕೆ ತಾವು ಮರುಳಾದರು ಹೊರತು ಅವನ ಮನಸ್ಸನ್ನು ತಮ್ಮ ಬೆಡಗು ಬಿನ್ನಾಣಗಳಿಂದ ಮರಳು ಮಾಡಲು ಶಕ್ತರಾಗಲಿಲ್ಲ.

ರುಕ್ಮಿಣಿಯಲ್ಲಿ ಪ್ರದ್ಯುಮ್ನ ಚಾರುದೇಷ್ಣ ಮುಂತಾದ ಹತ್ತುಮಂದಿ ಮಕ್ಕಳು ಜನಿಸಿದರು. ಸತ್ಯಭಾಮೆಯಲ್ಲಿ ಭಾನು ಸುಭಾನು ಮುಂತಾದವರು. ಜಾಂಬವತಿಯಲ್ಲಿ ಸಾಂಬ ಸುಮಿತ್ರ ಮುಂತಾದವರು. ನೀಲೆಯಲ್ಲಿ ಭಾನು ಚಂದ್ರ ಮುಂತಾದವರು. ಕಾಲಿಂದಿಯಲ್ಲಿ ಶ್ರುತ ಕವಿ ಮುಂತಾದವರು. ಲಕ್ಷಣೆಯಲ್ಲಿ ಪ್ರಘೋಷ ಗಾತ್ರವಾಸ ಮುಂತಾದವರು. ಮಿತ್ರವಿಂದೆಯಲ್ಲಿ ವೃಕ ಅರ್ಹಕ ಮುಂತಾದವರು. ಭದ್ರೆಯಲ್ಲಿ ಬೃಹತ್ಸೇನ ಪ್ರಹರಣ ಮುಂತಾದವರು ಜನಿಸಿದರು.

ರುಕ್ಮಿಣೀಸ್ವಯಂವರ ಸಮಯದಲ್ಲಿ ಶ್ರೀಕೃಷ್ಣನಿಂದ ಅವಮಾನಿತ ನಾದ ರುಕ್ಮಿ ಶ್ರೀಶೈಲದಲ್ಲಿ ಶಿವನನ್ನು ತಪಸ್ಸಿನಿಂದ ಒಲಿಸಿಕೊಂಡು ದೇವತೆಗಳಿಗೂ ಮುರಿಯಲಾಗದಂಥ ಬಿಲ್ಲನ್ನು ಬೇಡಿದ. 'ವಿಷ್ಣುವಿನಲ್ಲಿ ಮಾತ್ರ ವಿರೋಧ ಮಾಡಬೇಡ. ವಿರೋಧ ಮಾಡಿದರೆ ಈ ಬಿಲ್ಲು ನಿನ್ನನ್ನು ತೊರೆದು ತಿರುಗಿ ನನ್ನನ್ನೇ ಬಂದು ಸೇರುವುದು' ಎಂದು ಹೇಳಿ ಶಿವ ಒಂದು ಅಮೋಘವಾದ ಬಿಲ್ಲನ್ನು ನೀಡಿದ. ರುಕ್ಮಿ ಅದನ್ನು ಪಡೆದು ಭೋಜಕಟ ನಗರಕ್ಕೆ ಹಿಂತಿರುಗಿ ಬಂದ. ಬಿಲ್ಲಿನ ಮೇಲಿನ ಮೋಹದಿಂದ ರುಕ್ಮಿ ಕೃಷ್ಣನಲ್ಲಿ ವಿರೋಧ ಮಾಡಲಿಲ್ಲ. ನಿರ್ಮಲವಾದ ಪ್ರೀತಿಯನ್ನೂ ಮಾಡಲಿಲ್ಲ. ವೈರವನ್ನೇ ಚಿಂತಿಸುತ್ತಿದ್ದ.

ಮನ್ಮಥ ಪ್ರದ್ಯುಮ್ನನಾಗಿ ಕೃಷ್ಣನಿಂದ ರುಕ್ಮಿಣಿಯಲ್ಲಿ ಜನಿಸಿದಾಗ ರುಕ್ಮಿಯ ಮಗಳು ರುಕ್ಮವತಿ ಸ್ವಯಂವರದಲ್ಲಿ ಪ್ರದ್ಯುಮ್ನನನ್ನೇ ವರಿಸಿದಳು. ಪ್ರದ್ಯುಮ್ನ ಇದಿರಾದ ರಾಜರನ್ನೆಲ್ಲ ಪರಾಭವಗೊಳಿಸಿ ರುಕ್ಮವತಿಯನ್ನು ಅಪಹರಿಸಿ ತಂದ. ಅವಳಲ್ಲಿ ಅನಿರುದ್ಧ ಜನಿಸಿದ. ಮಗಳ ಮಗನಾದ ಅನಿರುದ್ಧನಿಗೆ ರುಕ್ಮಿ ಮಗನ ಮಗಳಾದ ರೋಚನೆಯನ್ನು ನೀಡಿದ. ಹೀಗೆ ಕೃಷ್ಣನಿಗೆ ತಾನು ಬದ್ಧಶತ್ರುವಾದರೂ ತಂಗಿ ರುಕ್ಮಿಣಿಯ ಮೇಲಿನ ಸ್ನೇಹಪಾಶಕ್ಕೊಳಗಾಗಿ ಮಗಳನ್ನೂ ಕೊಟ್ಟ, ಮೊಮ್ಮಗಳನ್ನೂ ಕೊಟ್ಟ. ಭೋಜಕಟದಲ್ಲಿ ಅನಿರುದ್ಧನಿಗೆ ರೋಚನೆಯೊಂದಿಗೆ ವಿವಾಹ ನಡೆಯುತ್ತಿದ್ದಾಗ ಕಲಿಂಗರಾಜ ಮುಂತಾದ ದುಷ್ಟರಾಜರು ರುಕ್ಮಿಗೆ ಹೇಳಿದರು, 'ನೀನು ಬಲರಾಮನನ್ನು ಗೆಲ್ಲು, ಬಲದಿಂದಲ್ಲದಿದ್ದರೂ ಜೂಜಿನಿಂದ ಅವನನ್ನು ಗೆಲ್ಲಬಹುದು. ಅವನಿಗೆ ಜೂಜಿನ ಚಟವಿದೆ, ಜೂಜಿನಲ್ಲಿ ನಿಪುಣತೆಯಿಲ್ಲ.'

ರುಕ್ಮಿ ಬಲರಾಮನನ್ನು ಕರೆದು ಅವನೊಂದಿಗೆ ಜೂಜಾಡಿದ. ಮೊದಲಿಗೆ ಬಲರಾಮ ಮೂರು ಆಟಗಳಲ್ಲಿ ನೂರು, ಸಾವಿರ, ಹತ್ತು ಸಾವಿರ ವರಹಗಳನ್ನಿಟ್ಟು ಆಡಿ ಸೋತ. ಕಲಿಂಗರಾಜ ಹಾಸ್ಯ ಮಾಡಿ ಹಲ್ಲು ತೋರಿಸಿ ನಕ್ಕ. ಬಲರಾಮ ಸಿಟ್ಟನ್ನು ನುಂಗಿಕೊಂಡ. ಬಳಿಕ ರುಕ್ಮಿಯ ಸರದಿ. ಲಕ್ಷ ವರಹಗಳನ್ನಿಟ್ಟ. ಅದನ್ನು ಬಲರಾಮ ಗೆದ್ದ ಆದರೆ ರುಕ್ಮಿ ವಂಚನೆ ಮಾಡಿ 'ನಾನೇ ಗೆದ್ದೆ'ನೆಂದ. ಬಲರಾಮ ಬಂದ ಕೋಪವನ್ನು ತಡೆದುಕೊಂಡ. ರುಕ್ಮಿ ನೂರು ಕೋಟಿ ವರಹಗಳನ್ನು ಪಣವಾಗಿಟ್ಟ. ಅದನ್ನೂ ಬಲರಾಮ ಸರಿಯಾಗಿ ದಾಳಹಾಕಿ ಗೆದ್ದುಕೊಂಡ. ಆದರೆ ರುಕ್ಮಿ ಹಿಂದಿನಂತೆಯೇ ವಂಚನೆ ಮಾಡುತ್ತ 'ಇದನ್ನೂ ನಾನೇ ಗೆದ್ದಿದ್ದೇನೆ. ಈ ವಿಷಯದಲ್ಲಿ ಸಾಕ್ಷಿಗಳು ತೀರ್ಮಾನ ಹೇಳಲಿ' ಎಂದ. ಸುಳ್ಳು ಸಾಕ್ಷಿಯಾದ ಕಲಿಂಗರಾಜ 'ರುಕ್ಮಿ ಹೇಳಿದ್ದೇ ಸರಿ' ಎಂದ. ಬಲರಾಮನಿಗೆ ಹಲ್ಲು ತೋರಿಸಿ ನಕ್ಕ. ಆಗಲೂ ಕೋಪದಿಂದ ಉರಿಯುತ್ತಲೇ ಇದ್ದ ಬಲರಾಮ ಸುಮ್ಮನಿದ್ದ ಅಶರೀರವಾಣಿ ನುಡಿಯಿತು. 'ನ್ಯಾಯವಾಗಿ ಬಲರಾಮ ಗೆದ್ದಿದ್ದಾನೆ. ರುಕ್ಮಿ ವಂಚನೆಯಿಂದ ಸುಳ್ಳು ಹೇಳುತ್ತಿದ್ದಾನೆ' ಎಂದು. ರುಕ್ಮಿ ಅಶರೀರವಾಣಿಯನ್ನೂ ತಿರಸ್ಕರಿಸಿದ. ಅವನಿಗೆ ಅಂತ್ಯಕಾಲ

ಸಮೀಪಿಸಿತ್ತು. ದುಷ್ಟರಾಜರೂ ಅವನನ್ನು ಹುರಿದುಂಬಿಸುತ್ತಿದ್ದರು. ಆತ ಬಲರಾಮನಿಗೆ ಹಾಸ್ಯ ಮಾಡಿ ನಕ್ಕ.

'ನೀವು ಗೊಲ್ಲರು, ಕಾಡಿನಲ್ಲಿ ಅಲೆಯುವವರು. ಪಗಡೆಯಾಟದ ನಿಯಮಾವಳಿ ನಿಮಗೆ ಗೊತ್ತಿರಲು ಶಕ್ಯವಿಲ್ಲ. ರಾಜರಿಗೇ ಪಗಡೆಯಾಟ, ರಾಜರಿಗೇ ಯುದ್ಧದಾಟ. ನಿಮ್ಮಂಥವರಿಗೆ ಅದೇನು ಆಟವಲ್ಲ!' ಎಂದ. ರುಕ್ಮಿ ಹೀಗೆ ಧಿಕ್ಕರಿಸಿ ನೋಡಿದಾಗ ರಾಜರೂ ಹಾಸ್ಯ ಮಾಡಿ ನಕ್ಕರು. ಬಲರಾಮ ಪಗಡೆ ಮಣೆಯನ್ನೇ ಎತ್ತಿ ಅದರಿಂದಲೇ ರುಕ್ಮಿಯನ್ನು ಹೊಡೆದು ಕೊಂದುಬಿಟ್ಟ.

ಕಳಿಂಗರಾಜ ಓಡಲು ತೊಡಗಿದಾಗ ಅವನನ್ನೂ ಹಿಡಿದು ಹಲ್ಲು ತೋರಿಸಿ ನಕ್ಕಿದ್ದಕ್ಕೆ ಅವನ ಹಲ್ಲುದುರಿಸಿದ. ಬೇರೆ ದುಷ್ಟ ರಾಜರನ್ನೂ ಪರಿಘಾಯುಧದಿಂದ ಹೊಡೆದು ಓಡಿಸಿದ.

ತನ್ನ ಭಾವಮೈದುನ ರುಕ್ಮಿ ಹೀಗೆ ಹತನಾದಾಗ ಶ್ರೀಕೃಷ್ಣ ಅದನ್ನು ~~ಸರಿಯೆಂದಾಗಲಿ ತಪ್ಪೆಂದಾಗಲಿ ಏನೂ ಹೇಳದೆ ಸುಮ್ಮನಿದ್ದ. ಸರಿ~~ ಎಂದರೆ ರುಕ್ಮಿಣಿಗೆ ಬೇಸರವಾದೀತು, ತಪ್ಪೆಂದರೆ ಬಲರಾಮನಿಗೆ ಕೋಪಬಂದೀತು ಎಂದು.

ಬಳಿಕ ಶ್ರೀಕೃಷ್ಣ ಬಲರಾಮ ಮುಂತಾದ ಯಾದವರು ನೂತನ ವಧುವಾದ ರೋಚನೆಯೊಂದಿಗೆ ಅನಿರುದ್ಧನನ್ನು ರಥದಲ್ಲಿ ಹತ್ತಿಸಿಕೊಂಡು ದ್ವಾರಕೆಗೆ ಮರಳಿದರು.

❖❖❖

ಶ್ರೀಕೃಷ್ಣನ ಹದಿನಾರುಸಾವಿರ ಸ್ತ್ರೀಯರೂ ಕೂಡ ಮುಗ್ಧೆಯರು, ಪ್ರಿಯತಮನ ನವಸಂಗಮದಲ್ಲಿ ನಾಚುವಂತೆ ನಾಚುತ್ತಿದ್ದರು. ಶ್ರೀಕೃಷ್ಣನ ಸನ್ನಿಧಿಯಲ್ಲಿ ಅವನ ಕುಡಿನೋಟದಿಂದ ತಾವು ಕಾಮಬಾಣಕ್ಕೆ ವಶರಾಗಿ ನಾನಾ ಬಗೆಯ ವಿಲಾಸ ತೋರುತ್ತಿದ್ದರು. ನಾಚಿಕೆಯಿಂದ ಸೆರಗಿಂದ ಮೈಮುಖ ಮುಚ್ಚಿಕೊಳ್ಳುತ್ತಿದ್ದರು.

ರಾಮಾ ಗೃಹೇ ವಿಹರತಃ ಪುರತಃ ಕರಾಭ್ಯಾಂ
ಬದ್ಧೇಕ್ಷಣಾಃ ಸ್ವದಯಿತಸ್ಯ ಮುದಾ ಹಸಂತ್ಯಃ ।
ಗಾತ್ರಾಂತರಾಣ್ಯಪಿದಧುರ್ನಿಜಪೂರುಷಸ್ಯ
ಕ್ಲೇಶಾವಹಾನ್ಯಪಿ ತದಂಗಜಭಂಗಭೀತಾಃ ॥ ೬ ॥

ಅರಮನೆಯಲ್ಲಿ ದಾಸದಾಸಿಯರ ಸಂಮುಖದಲ್ಲಿ ತಮ್ಮ **ಪ್ರಿಯ ಶ್ರೀಕೃಷ್ಣ** ವಿಹರಿಸುತ್ತ ತನ್ನ ಹಸ್ತಗಳಿಂದ ಪತ್ನಿಯರ ಕಣ್ಣು ಮುಚ್ಚಿದರೆ ಅವರು **ಆನಂದದಿಂದ** ನಗುತ್ತಾರೆ. ಆದರೆ ಸೆರಗಿಂದ ಮೈಮುಖ ಮುಚ್ಚಿಕೊಳ್ಳುತ್ತಾರೆ. ಅದರಿಂದ **ತಮಗೇ** ತೊಂದರೆ. ಆದರೂ ಮೈಯನ್ನು ಹೊರಗೆ ತೋರುತ್ತಿದ್ದರೆ ತಮ್ಮನ್ನು **ಲಜ್ಜೆ ಇಲ್ಲದವ**ರೆಂದು ಬಗೆದು ಕೃಷ್ಣ ತಮ್ಮ ಅಭಿಲಾಷೆಯನ್ನು ಪೂರೈಸದೆ ಹೋಗಬ**ಹುದೆಂದು** ಅವರಿಗೆ ಭಯ.

ಈ ಶ್ಲೋಕ ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ ಇಲ್ಲ. **ಇದರಲ್ಲಿ** 'ನಿಜಪೂರುಷಸ್ಯ ಕ್ಲೇಶಾವಹಾನಿ' 'ತನ್ನ ಪತಿಗೆ ಕ್ಲೇಶಕರವಾದ' ತಮ್ಮ ಅವಯವ**ಗಳನ್ನು** ಸ್ತ್ರೀಯರು ಬಟ್ಟೆಯಿಂದ ಮುಚ್ಚಿಕೊಂಡರು ಎಂದೋ, ತಮಗೆ ಕ್ಲೇಶಕರವಾದ **ಪತಿಯ** ಅವಯವಗಳನ್ನು ಬಟ್ಟೆಯಿಂದ ಮುಚ್ಚಿದರೆಂದೋ ಅನ್ವಯ ಮಾಡಿದರೆ **ಆಭಾಸ**, ರಸಭಂಗ, ಅನೌಚಿತ್ಯಗಳು ಉಂಟಾಗುತ್ತವೆ ಎಂದು ಶ್ರೀಮದಾ**ಚಾರ್ಯರು** ಸರಿಯಾದ ಅನ್ವಯವನ್ನೂ ಶ್ಲೋಕಾರ್ಥವನ್ನೂ ಸ್ಪಷ್ಟವಾಗಿ ತಿಳಿಸುತ್ತಾರೆ.

~~ಗಾತ್ರಾಂತರಾಣ್ಯಪಿದಧುಃ ಪಿಧಾತವ್ಯೇಭ್ಯೋಽನ್ಯಾನ್ಯಪಿ ।~~
ಯೇಷಾಂ ಪಿಧಾನೇನ ಕ್ಲೇಶೋ ಭವತ್ಯಾತ್ಮನಃ ।
ನಿಜಭರ್ತುರಪ್ಯಪಿದಧುಃ ನಿರ್ಲಜ್ಜಾ ಇತ್ಯಕಾಮೋ
ಭವತ್ಯಸಾವಿತಿ ಭಯಾತ್ ॥

'ಗಾತ್ರಾಂತರ'ವೆಂದರೆ ಗೋಪ್ಯವಲ್ಲದ ಅವಯವಗಳು ಮುಖ ಕೈಕಾಲುಗಳೆಂದರ್ಥ. ಅವುಗಳನ್ನೂ ಸ್ತ್ರೀಯರು ಬಟ್ಟೆಯಿಂದ ಮುಚ್ಚಿಕೊಂಡರು. ಹಾಗೆ ಮುಚ್ಚಿಕೊಳ್ಳುವುದರಿಂದ ತಮಗೇ ಕ್ಲೇಶ ಉಂಟಾಗುವುದು. ಮತ್ತು ತಮ್ಮ ಪತಿಯ ಮುಂದೆ ಮುಚ್ಚಿಕೊಳ್ಳಬೇಕಾದ ಪ್ರಮೇಯವೂ ಇಲ್ಲ. ಆದರೂ ನಾಚಿಕೆಯಿಂದ ಮುಚ್ಚಿಕೊಳ್ಳುತ್ತಾರೆ. ಮತ್ತು ಮುಚ್ಚಿಕೊಳ್ಳದಿದ್ದರೆ ನಾಚಿಕೆ ಇಲ್ಲದವರೆಂದುಕೊಂಡು ಪತಿ ತಮ್ಮನ್ನು ಬಯಸದಿರಬಹುದೆಂಬ ಭಯವೂ ಉಂಟು. ಅದರಿಂದ ಮುಚ್ಚಿಕೊಳ್ಳುತ್ತಾರೆ' ('ಲಜ್ಜಾವಿಜಿತ ಮನ್ಮಥಾ' ಲಜ್ಜೆಯಿಂದ ಬಯಕೆಯನ್ನು ತೋರಿಕೊಳ್ಳದಿರುತ್ತಾರೆ. ಇದು ಶೃಂಗಾರರಸದ ವಿಲಾಸ.) ಎಂದು ಶ್ಲೋಕಾರ್ಥ.

❖❖❖

ಪಗಡೆಯಾಟದಲ್ಲಿ ರುಕ್ಮಿ ಬಲರಾಮನಿಗೆ ಸೋತರೂ, ಗೆದ್ದೆನೆನ್ನುತ್ತ ಅವನಿಗೆ ಅಪಹಾಸ ಮಾಡಿ ಅವನಿಂದಲೆ ಹತನಾದ. ಭಾವನಾದ ರುಕ್ಮಿಯನ್ನು ಬಲರಾಮ ಕೊಂದಿದ್ದು ತಪ್ಪೆಂದರೆ ಬಲರಾಮನಿಗೂ, ಸರಿ ಎಂದರೆ ರುಕ್ಮಿಣಿಗೂ ತನ್ನಲ್ಲಿ ಪ್ರೀತಿ ಕಡಿಮೆಯಾದೀತೆಂದು ಭಯದಿಂದ ಶ್ರೀಕೃಷ್ಣ ತಪ್ಪೆಂದಾಗಲಿ ಸರಿಯೆಂದಾಗಲೀ ಏನೂ ಹೇಳದೆ ಇದ್ದ.

ನಿಹತೇ ರುಕ್ಮಿಣಿ ಶ್ಯಾಲೇ ನಾಬ್ರವೀತ್ಸಾಧ್ವಸಾಧು ವಾ ।
ರುಕ್ಮಿಣೀಬಲಯೋೋ ರಾಜನ್ ಸ್ನೇಹಭಂಗಭಯಾದ್ಧರಿಃ ॥ ೫೦ ॥

ಶ್ರೀಕೃಷ್ಣ ತನ್ನ ಭಾವಮೈದುನ ರುಕ್ಮಿ ಹೀಗೆ ಹತನಾದಾಗ ಅದನ್ನು ಸ ಎಂದಾಗಲಿ ತಪ್ಪೆಂದಾಗಲಿ ಹೇಳದೆ ಸುಮ್ಮನಿದ್ದ. ರುಕ್ಮಿಣಿಯ ಮತ್ತು ಬಲರಾಮ ಪ್ರೀತಿಗೆ ಭಂಗ ಬಂದೀತೆಂದು ಅವನಿಗೆ ಭಯ.

ಶ್ರೀಕೃಷ್ಣನಿಗೆ ಭಕ್ತರು ತನ್ನಲ್ಲಿ ಪ್ರೀತಿ ಮಾಡದಿರಬಹುದೆಂಬ ಭಯ ಎಂದು ಬರಲು ಕಾರಣವಿಲ್ಲ. ಪ್ರೀತಿ ಮಾಡಿಸುವವನೇ ಅವನು ಅಂತರ್ಯಾಮಿ ಪೂರ್ಣ ಕಾಮನಾಗಿದ್ದು ನಿರಪೇಕ್ಷನಾದ್ದರಿಂದ ತನ್ನಲ್ಲಿ ಇತರರು ಪ್ರೀತಿ ಮಾಡಬೇಕೆಂದ ತನಗಾಗಿ ಎಂದೂ ಅವನು ಬಯಸಲಾರ. ಆ ಪ್ರೀತಿಯಿಂದ ಅವನಿಗೆ ಆಗಬೇಕಾದು ದೇನಿಲ್ಲ. ಪ್ರೀತಿ ಮಾಡಿದರೆ ಇತರರಿಗೇ ಅದರಿಂದ ಸಕಲಪುರುಷಾರ್ಥ ಲಾಭ. ಅದಕ್ಕಾಗಿ ಪ್ರೀತಿ ಮಾಡಿಸುತ್ತಾನೆ. ಮತ್ತು ಬಲರಾಮನಿಗೆ ಒಂದುವೇಳೆ ಅಸುರಾವೇಶ ದಿಂದ ಪ್ರೀತಿ ಕಡಿಮೆಯಾದರೂ ರುಕ್ಮಿಣಿಗೆ ಅದರ ಪ್ರಸಕ್ತಿ ಇಲ್ಲ. ಹಾಗಿದ್ದರೂ ಪ್ರೀತಿ ಕಡಿಮೆಯಾದೀತೆಂದು ಭಯಪಟ್ಟಂತೆ ಉಭಯಸಂಕಟದಿಂದ ಪಾರಾಗಲು ಬಯಸಿ ಮೌನವಹಿಸಿದಂತೆ ಅಸುರಮೋಹನಕ್ಕಾಗಿ ತೋರಿಕೊಳ್ಳುತ್ತಾನೆ.

ನ ಸ್ನೇಹಭಂಗೋ ದೇವ್ಯಾಸ್ತು ನ ಭಯಂ ಕೇಶವಸ್ಯ ತು ।
ಸ್ನೇಹಭೀತ ಇವಾಥಾಪಿ ನೋಚೇ ರುಕ್ಮಿವಧೇ ಹರಿಃ ॥

ಇತಿ ಬ್ರಹ್ಮಾಂಡೇ ॥

ರುಕ್ಮಿಣಿಗೆ ಶ್ರೀಕೃಷ್ಣನಲ್ಲಿ ಪ್ರೀತಿ ಕಡಿಮೆಯಾಗುವ ಪ್ರಸಕ್ತಿ ಇಲ್ಲ. ಪ್ರಸಕ್ತಿ ಉಂಟೆಂದು ಶ್ರೀಕೃಷ್ಣನಿಗೆ ಭಯವೂ ಇಲ್ಲ. ಆದರೂ ಪ್ರೀತಿನಾಶ ಭಯದಿಂದಲೋ ಎಂಬಂತೆ ಶ್ರೀಕೃಷ್ಣ ರುಕ್ಮಿ ವಧದ ವಿಷಯದಲ್ಲಿ ಏನೂ ಹೇಳದೆ ಸುಮ್ಮನಿದ್ದನೆಂದು ಬ್ರಹ್ಮಾಂಡಪುರಾಣದಲ್ಲಿ ಇದೆ.

❖❖❖

ಅಧ್ಯಾಯ - ೭೭

ಅಧ್ಯಾಯ ಸಾರಾಂಶ

ಅನಿರುದ್ಧ ಬಾಣಾಸುರನ ಮಗಳಾದ ಉಷೆಯನ್ನು ಮದುವೆಯಾದ. ಆಗ ಹರಿ ಹರರೊಳಗೆ ಘೋರವಾದ ಮಹಾಯುದ್ಧ ನಡೆಯಿತು.

ಬಲಿಚಕ್ರವರ್ತಿಯ ಮಗನಾದ ಬಾಣ ಶಿವನ ಭಕ್ತ. ಶಿವ ತಾಂಡವವಾಡುವಾಗ ವಾದ್ಯಬಾರಿಸಿ ಅವನನ್ನು ಒಲಿಸಿಕೊಂಡಿದ್ದ. ಶಿವನ ಅನುಗ್ರಹ ಬಲದಿಂದ ಅವನಿಗೆ ಸಾವಿರ ತೋಳುಗಳು. ದೇವತೆಗಳು ಅವನಿಗೆ ಸೇವಕರಂತಿದ್ದರು. ಶಿವನನ್ನೂ ತನ್ನ ಪುರರಕ್ಷಕನಾಗಿರೆಂದು ಬೇಡಿ ವರವನ್ನು ಪಡೆದಿದ್ದ. ಶೋಣಿತ ಎಂಬ ಪುರದಲ್ಲಿ ಆಳುತ್ತಿದ್ದ. ಅವನ ಬಳಿಯಲ್ಲಿ ಶಿವಪಾರ್ವತಿಯರೂ ಸ್ಕಂದನೂ ಸದಾ ಇರುತ್ತಿದ್ದರು. ಒಂದು ದಿನ ಶಿವನ ಮುಂದೆ ಆತ ಬೇಡಿದ.

'ಮಹಾದೇವ, ನೀನು ನನಗೆ ಸಾವಿರ ತೋಳುಗಳನ್ನು ಅನುಗ್ರಹಿಸಿರುವೆ. ಆದರೆ ಅವು ನನಗೆ ಕೇವಲ ಭಾರವೆನಿಸಿವೆ. ಏಕೆಂದರೆ ನನಗೆ ಸಮನಾಗಿ ಯುದ್ಧ ಮಾಡಬಲ್ಲವನು ನೀನು ಹೊರತು ಇನ್ನಾರೂ ನನಗೆ ಸಿಗುತ್ತಿಲ್ಲ. ಯುದ್ಧದ ತೀಟೆಯಿಂದ ಬೆಟ್ಟಗಳನ್ನು ಗುದ್ದಿದೆ. ಅವೇ ಪುಡಿಯಾದವು. ದಿಗ್ಗಜಗಳ ಮುಂದೆ ನುಗ್ಗಿದೆ. ಅವು ಹೆದರಿ ಓಡಿಹೋದವು!'

ಶಿವ ಕುಪಿತನಾಗಿ ನುಡಿದ, 'ನಿನ್ನ ರಥದ ಧ್ವಜ ಮುರಿದುಬಿದ್ದಾಗ ನಿನ್ನ ದರ್ಪಕ್ಕೆ ಸರಿಯಾದ ಯುದ್ಧ ನಿನಗೆ ಲಭಿಸುತ್ತದೆ' ಶಿವ ನುಡಿದಂತೆಯೆ ಒಂದು ದಿನ ಅವನ ಮಯೂರಧ್ವಜ ವಜ್ರಾಯುಧ ದಿಂದ ಕಡಿದು ಉರುಳಿತು. ಬಾಣನಿಗೆ ಬಹಳ ಸಂತೋಷವಾಯಿತು.

ಬಾಣನ ಮಗಳು ಉಷೆ ಒಮ್ಮೆ ಸ್ವಪ್ನದಲ್ಲಿ ತನಗೆ ಅಪರಿಚಿತನಾದ ಸುಂದರಾಂಗನಾದ ಅನಿರುದ್ಧನನ್ನು ಸೇರಿ ರಮಿಸಿದಳು. ನಿದ್ದೆಯಿಂದ ಎಚ್ಚೆತ್ತಾಗ ಅವನಿಗಾಗಿ ಪರಿತಪಿಸಿದಳು. ಅವಳ ಗೆಳತಿ, ಮಂತ್ರಿಯಾದ ಕುಂಭಾಂಡನ ಮಗಳು ಚಿತ್ರಲೇಖೆ, ಪ್ರಪಂಚದ ದೇವ ಗಂಧರ್ವ

ಮಾನವ ಮುಂತಾದವರಲ್ಲಿ ಸುಂದರಾಂಗರಾದ ಎಲ್ಲ ಯುವಕರ ಚಿತ್ರ ಬರೆದು ತೋರಿಸಿದಳು. ಅನಿರುದ್ಧನ ಚಿತ್ರವನ್ನು ಕಂಡಾಗ ಉಷೆ 'ಇವನೇ ಅವನು' ಎಂದಳು. ಯೋಗಿನಿಯಾದ ಚಿತ್ರಲೇಖೆ ನಾರದರಿಂದ ಸಂಮೋಹಿನೀ ವಿದ್ಯೆಯನ್ನು ಕಲಿತವಳು. ನಾರದರ ಅನುಮತಿಯಿಂದ ಹೋಗಿ ದ್ವಾರಕೆಯಿಂದ ಅನಿರುದ್ಧನನ್ನು ಮಾಯೆಯಿಂದಲೇ ಎತ್ತಿ ತಂದು ಉಷೆಯ ಅಂತಃಪುರದಲ್ಲಿ ಸೇರಿಸಿದಳು.

ರಹಸ್ಯದಲ್ಲಿ ವಧೂವರರು ಗಾಂಧರ್ವವಿವಾಹ ಮಾಡಿಕೊಂಡು ಸುಖಿಸಿದರು. ಕಾವಲುಗಾರರಿಗೆ ಅನುಮಾನ ಬಂದು ಬಾಣನಿಗೆ ಹೇಳಿದರು. ಆತ ಕನ್ಯಾಂತಃಪುರದೊಳಗೆ ಧಾವಿಸಿ ಬಂದು ಮಗಳೊಂದಿಗೆ ಪಗಡೆಯಾಡುತ್ತಿದ್ದ ಅನಿರುದ್ಧನನ್ನು ಕಂಡ. ಅನಿರುದ್ಧ ಪರಿಘಾಯುಧವನ್ನು ಹಿಡಿದು ದಂಡಪಾಣಿಯಾದ ಯಮನಂತೆ ನಿಂತ. ಕಾಡು ಹಂದಿ ನಾಯಿಗಳನ್ನು ಓಡಿಸುವಂತೆ ಸೈನಿಕರನ್ನು ಹೊಡೆದೋಡಿಸಿದ. ಆದರೆ ಬಾಣಾಸುರ ನಾಗಪಾಶಗಳಿಂದ ಅನಿರುದ್ಧನನ್ನು ಬಂಧಿಸಿದ.

❖❖❖

ಅಧ್ಯಾಯ - ೭೮

ಅಧ್ಯಾಯ ಸಾರಾಂಶ

ಅನಿರುದ್ಧನನ್ನು ಕಾಣದೆ ಅವನ ಬಂಧುಗಳು ಶೋಕಿಸುತ್ತಿದ್ದಂತೆ ಮಳೆಗಾಲದ ನಾಲ್ಕು ತಿಂಗಳುಗಳು ಕಳೆದುವು. ಬಳಿಕ ನಾರದರಿಂದ ಅನಿರುದ್ಧ ಬಾಣನ ಕೈಸೆರೆಯಾಗಿದ್ದುದನ್ನು ತಿಳಿದು ರಾಮಕೃಷ್ಣರು ಹನ್ನೆರಡು ಅಕ್ಷೋಹಿಣಿ ಸೈನ್ಯ ಸಮೇತರಾಗಿ ಶೋಣಿತಪುರಕ್ಕೆ ಎಲ್ಲ ದಿಕ್ಕುಗಳಲ್ಲಿ ಮುತ್ತಿಗೆ ಹಾಕಿದರು. ಬಾಣಾಸುರ ತಾನೂ ಹನ್ನೆರಡು ಅಕ್ಷೋಹಿಣಿ ಸೈನ್ಯ ಸಮೇತನಾಗಿ ಯುದ್ಧಕ್ಕೆ ಹೊರಟು ಬಂದ. ಬಾಣನಿಗಾಗಿ ಸಾಕ್ಷಾತ್ ಶಿವ ನಂದಿವಾಹನನಾಗಿ ಪ್ರಮಥ ಗಣಗಳೊಂದಿಗೆ ಬಂದು ಯುದ್ಧ ಮಾಡಿದ. ಶಿವ ಕೃಷ್ಣರಿಗೂ ಸ್ಕಂದ ಪ್ರದ್ಯುಮ್ನರಿಗೂ ರೋಮಾಂಚಕರವಾದ ಯುದ್ಧ ನಡೆಯಿತು. ಕುಂಭಾಂಡ ಕೂಪಕರ್ಣರು ಬಲರಾಮನೊಂದಿಗೆ, ಬಾಣ ಸಾತ್ಯಕಿಯೊಂದಿಗೆ ಮತ್ತು ಬಾಣಪುತ್ರ ಸಾಂಬನೊಂದಿಗೆ ಹೋರಾಡಿದರು. ಮೇಲೆ ಆಕಾಶದಲ್ಲಿ ದೇವಋಷಿ ಗಂಧರ್ವಾದಿಗಳು ಯುದ್ಧವನ್ನು ನೋಡಲು ವಿಮಾನಗಳಿಂದ ಬಂದು ನೆರೆದರು.

ಶ್ರೀಕೃಷ್ಣ ಶಿವನ ಪ್ರಮಥಗಣಗಳನ್ನು ಬಾಣಗಳಿಂದ ಓಡಿಸಿ ಶಿವನ ಅಸ್ತ್ರಗಳನ್ನು ಪ್ರತ್ಯಸ್ತ್ರಗಳಿಂದ ಶಮನಗೊಳಿಸಿದ. ಬ್ರಹ್ಮಾಸ್ತ್ರಕ್ಕೆ ಬ್ರಹ್ಮಾಸ್ತ್ರವನ್ನೂ ವಾಯವ್ಯಾಸ್ತ್ರಕ್ಕೆ ಪರ್ವತಾಸ್ತ್ರವನ್ನೂ ಆಗ್ನೇಯಾಸ್ತ್ರಕ್ಕೆ ಪರ್ಜನ್ಯಾಸ್ತ್ರವನ್ನೂ ಪಾಶುಪತಾಸ್ತ್ರಕ್ಕೆ ನಾರಾಯಣಾಸ್ತ್ರವನ್ನೂ ಪ್ರತಿಯಾಗಿ ಶ್ರೀಕೃಷ್ಣ ಪ್ರಯೋಗಿಸಿದ. ಜೃಂಭಣಾಸ್ತ್ರದಿಂದ ಶಿವನನ್ನು ಸ್ತಂಭಿಸಿದ. ಪ್ರದ್ಯುಮ್ನನ ಬಾಣಗಳನ್ನು ಇದಿರಿಸಲಾರದೆ ಸ್ಕಂದ ಪಲಾಯನಗೈದ. ಕುಂಭಾಂಡ ಕೂಪಕರ್ಣರೂ ಬಲರಾಮನ ಒನಕೆ ಏಟಿಗೆ ತತ್ತರಿಸಿ ಓಡಿದರು. ನಾಯಕರನ್ನು ಕಳೆದುಕೊಂಡ ಬಾಣನ ಸೇನೆ ದಿಕ್ಕುದಿಕ್ಕುಗಳಿಗೆ ಪಲಾಯನ ಮಾಡಿತು. ಬಾಣ ತನ್ನ ಸೈನ್ಯ ನಾಶವಾಗುವುದನ್ನು ಕಂಡು, ಸಾತ್ಯಕಿಯನ್ನು ಬಿಟ್ಟು ಕೃಷ್ಣನ ಕಡೆಗೆ ನುಗ್ಗಿ ಬಂದ. ಸಾವಿರ ಕೈಗಳಲ್ಲಿ ಬಿಲ್ಲುಬಾಣಗಳನ್ನು ಎತ್ತಿಕೊಂಡ. ಐನೂರು

ಬಿಲ್ಲುಗಳಿಗೆ ಒಂದೊಂದಕ್ಕೆ ಎರಡೆರಡರಂತೆ ಬಾಣಗಳನ್ನು ಹೂಡಿದ. ಶ್ರೀಕೃಷ್ಣ ಆ ಎಲ್ಲ ಬಾಣಗಳನ್ನು ಒಮ್ಮೆಲೆ ಕತ್ತರಿಸಿ ಸಾರಥಿ ರಥ ಕುದುರೆಗಳನ್ನೂ ನಾಶ ಮಾಡಿ ಶಂಖನಾದಗೈದ.

ಬಾಣನ ತಾಯಿ ಕೋಟರೆ ರಣರಂಗಕ್ಕೆ ಬಂದು ಪುತ್ರರಕ್ಷಣೆಗಾಗಿ ಕೃಷ್ಣನ ಮುಂದೆ ನಗ್ನಳಾಗಿ ತಲೆಗೂದಲು ಹರವಿಕೊಂಡು ನಿಂತಳು. ಶ್ರೀಕೃಷ್ಣ ನಗ್ನ ಸ್ತ್ರೀಯನ್ನು ನೋಡದೆ ಮುಖ ತಗ್ಗಿಸಿ ನಿಂತಾಗ ಬಾಣ ಪಟ್ಟಣದೊಳಗೆ ಓಡಿಹೋದ. ಪ್ರಮಥಗಣಗಳು ಕೃಷ್ಣನನ್ನು ಇದಿರಿಸಲಾಗದೆ ಓಡಿ ಹೋದಾಗ ಮೂರು ತಲೆ ಮೂರು ಕಾಲುಗಳ ಜ್ವರಪುರುಷ ಹತ್ತು ದಿಕ್ಕುಗಳನ್ನು ಸುಡುವಂತೆ ಜ್ವಲಿಸುತ್ತ ಕೃಷ್ಣನ ಮುಂದೆ ಬಂದ. ಕೃಷ್ಣ ಶೈವಜ್ವರನನ್ನು ಇದಿರಿಸಲು. ವೈಷ್ಣವ ಜ್ವರನನ್ನು ಸೃಜಿಸಿದ. ವೈಷ್ಣವಜ್ವರನಿಗೆ ಶೈವಜ್ವರ ಸೋತು ಕೃಷ್ಣನಿಗೆ ಶರಣಾಗಿ ಕೈಜೋಡಿಸಿ ಸ್ತುತಿಸಿದ.

'ಶ್ರೀಹರಿ, ನೀನು ಸರ್ವೇಶ್ವರ ವೇದೈಕವೇದ್ಯನಾದ ಪರಬ್ರಹ್ಮ. ನಮ್ಮ ಶರೀರ ಒಂದು ಶರೀರದಿಂದ ಹುಟ್ಟಿ ಇನ್ನೊಂದು ಶರೀರಕ್ಕೆ ಕಾರಣವಾಗುತ್ತದೆ. ಈ ಶರೀರ ಪ್ರವಾಹ ನಿನ್ನ ಇಚ್ಛಾಧೀನವಾಗಿದೆ. ಲೀಲೆಯಿಂದ ನಾನಾ ಅವತಾರ ತಾಳಿ ಸಜ್ಜನರನ್ನು ಕಾಪಾಡುವಿ. ದುಷ್ಟರನ್ನು ಸಂಹರಿಸುವಿ, ಭೂಭಾರಹರಣ ಮಾಡುವಿ. ನೀನು ಸೃಜಿಸಿದ ಈ ಶೀತಜ್ವರ ಮೊದಲಿಗೆ ಶಾಂತವಾಗಿದ್ದು ಕ್ರಮೇಣ ಉಗ್ರನಾಗುತ್ತಾನೆ. ಈತನಿಂದ ನಾನು ಪೀಡಿತನಾಗಿದ್ದೇನೆ. ಲೋಕದಲ್ಲಿ ಎಲ್ಲ ಪೀಡೆಯೂ ನಿನ್ನ ಪಾದಸೇವೆ ಮಾಡದ ತನಕವೆ ಇರುತ್ತದೆ' ಎಂದು.

ಶ್ರೀಕೃಷ್ಣನಿಂದ ಅಭಯವನ್ನು ಪಡೆದು ಶೈವಜ್ವರ ಹೊರಟುಹೋದ. ಬಾಣಾಸುರ ಇನ್ನೊಂದು ರಥವನ್ನೇರಿ ಬಂದು ಸಾವಿರ ತೋಳು ಗಳಿಂದ ನಾನಾ ಆಯುಧಗಳನ್ನು ಧರಿಸಿ ಯುದ್ಧ ಮಾಡಿದ. ಶ್ರೀಕೃಷ್ಣ ಅವನ ತೋಳುಗಳನ್ನು ಮರದ ಟೊಂಗೆಗಳಂತೆ ಚಕ್ರದಿಂದ ಸವರಿದ. ಆಗ ಶಿವ ಬಂದು ಕೃಷ್ಣನನ್ನು ಸ್ತುತಿಸಿದ.

'ಶ್ರೀಹರಿ, ನೀನು ಪರಬ್ರಹ್ಮ ಪರಂಜ್ಯೋತಿ ವೇದವೇದ್ಯ ಅದ್ವಿತೀಯ.

ವಿರಾಡ್ರೂಪದಿಂದ ಸಮಸ್ತಲೋಕಗಳನ್ನು ಸೃಜಿಸಿದವ. ನಿನ್ನ ಈ ಅವತಾರ ಧರ್ಮರಕ್ಷಣ ಮಾಡಿ ಲೋಕಕಲ್ಯಾಣ ಉಂಟುಮಾಡುವುದು. ನೀನು ಸರ್ವಕಾರಣ. ನಿನಗೆ ಕಾರಣರಿಲ್ಲ, ವಿವಿಧ ಆಕಾರದ ಪದಾರ್ಥಗಳೊಳಗೆ ಅವುಗಳಿಗೆ ಅನುಗುಣವಾಗಿ ವಿವಿಧ ಆಕಾರಗಳಿಂದ ಇರುತ್ತಿ. ಅದು ನಿನ್ನ ಸ್ವೇಚ್ಛೆಯಿಂದಲೆ. ತಾನೇ ನಿರ್ಮಿಸುವ ಮೋಡಗಳಿಂದ ಸ್ವಪ್ರಕಾಶನಾದ ಸೂರ್ಯ ತಾನೇ ಮುಚ್ಚಿಹೋಗುತ್ತಾನೆ, ಆದರೆ ಆ ಮೋಡಗಳನ್ನೂ ಅವು ಮುಚ್ಚುವ ಪದಾರ್ಥಗಳನ್ನೂ ತೋರಿಸುತ್ತಾನೆ. ಆದರೆ ತನಗೆ ಆ ಮೋಡಗಳ ಸಂಬಂಧವಿರುವುದಿಲ್ಲ. ಹಾಗೇ ತ್ರಿಗುಣಗಳ ಸಂಬಂಧವಿಲ್ಲದವನು ಸ್ವಪ್ರಕಾಶನು ನೀನು ತ್ರಿಗುಣಗಳಿಂದ ಲೋಕದ ಕಣ್ಣಿಗೆ ಮುಚ್ಚಿಹೋಗುವೆ. ತ್ರಿಗುಣಗಳನ್ನೂ ತ್ರಿಗುಣಬದ್ಧರಾದ ಜೀವರನ್ನು ತೋರಿಸುವೆ. ನಿನ್ನಿಚ್ಛೆಯಿಂದ ಬುದ್ಧಿಮೋಹವನ್ನು ಹೊಂದಿದವರು ವಿಷಯಾಸಕ್ತರಾಗಿ ಪಾಪ ಮಾಡುತ್ತಾರೆ. ಅಂಥವರೂ ದೈವವಶದಿಂದ ಮಾನವ ಶರೀರವನ್ನು ಹೊಂದಿಯೂ ಕೂಡ ನಿನ್ನ ಪಾದಗಳನ್ನು ಹೊಂದದಿದ್ದರೆ ಅವರು ಆತ್ಮವಂಚಕರು. ಅವರ ಸ್ಥಿತಿ ಶೋಚನೀಯ. ಬಾಯಾರಿದವನು ಅಮೃತವನ್ನು ಬಿಟ್ಟು ವಿಷವನ್ನು ಕುಡಿಯುವಂತೆ ಅವರು ನಿನ್ನ ಪಾದಗಳನ್ನು ತೊರೆದು ವಿಷಯಗಳನ್ನು ಸೇವಿಸುತ್ತಾರೆ. ನಾನಾಗಲಿ ಬ್ರಹ್ಮನಾಗಲಿ ಬೇರೆ ದೇವ ಋಷಿಗಳಾಗಲಿ ಎಲ್ಲರೂ ನಿನ್ನನ್ನೇ ಶರಣುಹೊಂದಿದ್ದೇವೆ. ಸಂಸಾರ ನಿವೃತ್ತಿಗಾಗಿ ನಿನ್ನನ್ನೇ ಭಜಿಸುತ್ತಿದ್ದೇವೆ. ದೇವ, ಈ ಬಾಣಾಸುರ ನನಗೆ ಪ್ರಿಯನಾದ ಭಕ್ತ, ದೈತ್ಯಚಕ್ರವರ್ತಿಯಾದ ಬಲಿಯನ್ನು ಹೇಗೋ ಹಾಗೆ ಈತನನ್ನೂ ನೀನು ಅನುಗ್ರಹಿಸಬೇಕು.'

ಶ್ರೀಕೃಷ್ಣ ನುಡಿದ, 'ಶಿವನೆ, ನಾನು ನೀನು ಹೇಳಿದಂತೇ ಮಾಡುತ್ತೇನೆ. ನೀನು ಏನೇನು ಮಾಡಲು ಬಯಸುವೆಯೋ ಅದೆಲ್ಲ ನನಗೆ ಒಪ್ಪಿಗೆಯೆ. ಸಜ್ಜನಸಮ್ಮತವಾದ ಕಾರ್ಯವನ್ನೇ ನೀನು ಮಾಡುವೆ ತಾನೆ? ಬಾಣಾಸುರ ಬಲಿಯ ಪುತ್ರನಾದ್ದರಿಂದ ನಾನು ಈತನನ್ನು ಕೊಲ್ಲಲಾರೆ. ಪ್ರಹ್ಲಾದನಿಗೆ ನಾನು ವರನೀಡಿದ್ದೆ, ನಿನ್ನ ವಂಶವನ್ನು ಕಾಪಾಡುವೆನೆಂದು. ಇವನ ಅಹಂಕಾರ ಕಳೆಯುವುದಕ್ಕಾಗಿ

ಬಾಹುಗಳನ್ನು ಮಾತ್ರ ತರಿದೆ. ಭೂಮಿಗೆ ಭಾರವೆಂದು ಅವನ ದೊಡ್ಡ ಸೈನ್ಯವನ್ನೂ ನಾಶಪಡಿಸಿದ್ದೇನೆ.'

ಹೀಗೆ ಅಭಯವನ್ನು ಪಡೆದ ಬಾಣಾಸುರ ಕೃಷ್ಣನಿಗೆ ತಲೆಬಾಗಿ ನಮಿಸಿ ಅನಿರುದ್ಧನನ್ನು ಉಷೆಯೊಂದಿಗೆ ರಥದಲ್ಲಿ ಏರಿಸಿ ಕೃಷ್ಣನ ಬಳಿಗೆ ತಂದೊಪ್ಪಿಸಿದ.

ಹೀಗೆ ಶಿವಕೇಶವರ ಯುದ್ಧವನ್ನು ಕೇಶವನ ವಿಜಯವನ್ನು ಬೆಳಿಗ್ಗೆ ಎದ್ದು ನೆನೆಯುವವನಿಗೆ ಶತ್ರುವಿರೋಧ ಉಂಟಾಗದು ಪರಾಜಯ ಉಂಟಾಗದು.

❖❖❖

ಅಧ್ಯಾಯ - ೭೯

ಅಧ್ಯಾಯ ಸಾರಾಂಶ

ನರಕಾಸುರನನ್ನು ಕೊಂದ ಬಳಿಕ ಅವನ ಬಂಧನದಲ್ಲಿದ್ದ ಹದಿನಾರುಸಾವಿರ ಕನ್ಯೆಯರನ್ನು ಶ್ರೀಕೃಷ್ಣ ಒಮ್ಮೆಲೆ ಬೇರೆಬೇರೆ ಮನೆಗಳಲ್ಲಿ ಬೇರೆಬೇರೆ ರೂಪಗಳಿಂದ ವಿವಾಹವಾದನೆಂದು ಕೇಳಿದ ನಾರದರು ಉತ್ಸುಕತೆಯಿಂದ ದ್ವಾರಕೆಗೆ ಬಂದರು. ಅಲ್ಲಿ ಹದಿನಾರು ಸಾವಿರ ಅರಮನೆಗಳಿದ್ದುವು. ಮೊದಲಿಗೆ ಒಂದು ಅರಮನೆಯನ್ನು ಪ್ರವೇಶಿಸಿದರು. ಅಲ್ಲಿ ಕೃಷ್ಣಪತ್ನಿಯೊಬ್ಬಳು ಕೃಷ್ಣನಿಗೆ ಚಾಮರ ಬೀಸುತ್ತಿದ್ದಳು. ಕೃಷ್ಣ ಮಂಚದಿಂದಿಳಿದು ಬಂದು ಮುನಿಗೆ ಆದರದಿಂದ ಉಪಚಾರ ಮಾಡಿದ. ಅವನ ಕಾಲು ತೊಳೆದು ನೀರನ್ನು ಶಿರದಲ್ಲಿ ಧರಿಸಿದ. 'ಪೂಜ್ಯನೆ ನಿನಗೆ ನಾನೇನು ಸೇವೆ ಮಾಡಲಿ?' ಎಂದು ಕೇಳಿದ.

'ಸರ್ವೇಶ್ವರನಾದ ನೀನು ಬ್ರಾಹ್ಮಣರನ್ನು ಆದರಿಸುವುದು ಆಶ್ಚರ್ಯವಲ್ಲ. ಏಕೆಂದರೆ ನಿನ್ನ ಅವತಾರವನ್ನು ನೀನು ಸಜ್ಜನರ ಒಳಿತಿಗಾಗಿ ದುರ್ಜನ ವಿನಾಶಕ್ಕಾಗಿ ಸ್ವೇಚ್ಛೆಯಿಂದ ಮಾಡಿರುವೆ. ಹೀಗೆ ನೀನು ಲೋಕಗಳನ್ನು ಧರಿಸಿ ಕಾಪಾಡುವಿ ಮೋಕ್ಷ ನೀಡುವಿ ಎಂದು ನನಗೆ ಗೊತ್ತು. ಅದರಿಂದ ಮೋಕ್ಷದಾಯಕನಾದ ನಿನ್ನ ಪಾದಗಳನ್ನು ಧ್ಯಾನಿಸುತ್ತ ನಾನು ಲೋಕಸಂಚಾರ ಮಾಡುವಂತೆ ಅನುಗ್ರಹಿಸು' ಎಂದು ಬೇಡಿ ನಾರದರು ಇನ್ನೊಬ್ಬ ಕೃಷ್ಣಪತ್ನಿಯ ಅರಮನೆಗೆ ನಡೆದರು.

ಅಲ್ಲಿ ಕೃಷ್ಣ ಪತ್ನಿಯೊಡನೆ ಮತ್ತು ಉದ್ಧವನೊಡನೆ ಪಗಡೆಯಾಡುತ್ತಿದ್ದುದನ್ನು ಕಂಡರು. ಇದು ನಾರದರು ಕಂಡ ಎರಡನೆ ಅರಮನೆಯೆಂಬುದನ್ನು ಅರಿತೂ ಅರಿಯದವನಂತೆ ಶ್ರೀಕೃಷ್ಣ 'ಮುನಿಯೆ, ಯಾವಾಗ ಬಂದಿರಿ? ನಾನು ನಿಮಗೆ ಏನು ಸೇವೆ ಮಾಡಲಿ?' ಎಂದು ಕೇಳಿದ. ಮುನಿ ಅಚ್ಚರಿಗೊಂಡು, ಕೃಷ್ಣ ಕೇಳುತ್ತಿದ್ದಂತೆಯೆ, ಬೇಗನೆ ಇನ್ನೊಂದು ಮನೆಗೆ ಧಾವಿಸಿದರು' ಅಲ್ಲಿ

ಕೃಷ್ಣ ಹೋಮ ನಡೆಸುತ್ತಿದ್ದ. ಹಾಗೇ ಇನ್ನೊಂದು ಮನೆಯಲ್ಲಿ ಪಂಚಯಜ್ಞಗಳನ್ನು ನಡೆಸುತ್ತಿದ್ದ. ಇನ್ನೊಂದೆಡೆ ಬ್ರಾಹ್ಮಣರಿಗೆ ಊಟ ಬಡಿಸುತ್ತಿದ್ದ. ಹೀಗೆ ಸಂಧ್ಯಾವಂದನ ಮಾಡುವುದು ಶಿಷ್ಯರಿಗೆ ಶಸ್ತ್ರವಿದ್ಯಾಭ್ಯಾಸ ಮಾಡಿಸುವುದು ಮಂಚದಲ್ಲಿ ಮಲಗಿ ವಂದಿ ಮಾಗಧರಿಂದ ಸ್ತುತಿಸಿಕೊಳ್ಳುವುದು ರಾಜಕೀಯ ಮಂತ್ರಾಲೋಚನ ಮಾಡುವುದು ವೇಶ್ಯಾಸ್ತ್ರೀಯರೊಂದಿಗೆ ಜಲಕ್ರೀಡೆಯಾಡುವುದು ಸರಸ ಸಲ್ಲಾಪಮಾಡುವುದು, ಧರ್ಮಾಚರಣೆ ಅರ್ಥಕಾಮ ಸಂಪಾದನೆ, ಪರಮಾತ್ಮಧ್ಯಾನ ಗುರುಹಿರಿಯರ ಸೇವೆ ಯುದ್ಧನೀತಿ ಲೋಕಕಲ್ಯಾಣಚಿಂತನೆ ಗಂಡುಮಕ್ಕಳಿಗೆ ಉಪನಯನ ಹೆಣ್ಣು ಮಕ್ಕಳಿಗೆ ವಿವಾಹ ಹೆಣ್ಣುಮಕ್ಕಳನ್ನು ಅತ್ತೆಮನೆಗೆ ಕಳಿಸುವುದು. ತವರಿಗೆ ಕರೆಸಿಕೊಳ್ಳುವುದು ಯಜ್ಞ ಲೋಕಸೇವೆ ಕಾರ್ಯಗಳು ಹೀಗೆ ಗೃಹಸ್ಥನು ಮಾಡಬೇಕಾಗಿರುವ ಧರ್ಮ ಅರ್ಥ ಕಾಮಗಳೆಂಬ ತ್ರಿವರ್ಗ ಸಾಧನೆಗಳೊಂದನ್ನೂ ಬಿಡದೆ ಏಕಕಾಲದಲ್ಲಿ ಬೇರೆಬೇರೆ ಮನೆಗಳಲ್ಲಿ ಬೇರೆಬೇರೆ ರೂಪಗಳಿಂದ ಶ್ರೀಕೃಷ್ಣ ನಡೆಸುತ್ತಿದ್ದುದನ್ನು ಕಂಡು ನಾರದರು ನಗುತ್ತ 'ಹೇ ಯೋಗೇಶ್ವರ, ನಾನು ನಿನ್ನ ಯೋಗ ಮಾಯಾವೈಭವವನ್ನು ಕಣ್ಣಾರೆ ಕಂಡೆ. ನಿನ್ನ ಲೋಕಪಾವನವಾದ ಚರಿತ್ರೆಗಳನ್ನು ಹಾಡುತ್ತ ಸಂಚರಿಸುತ್ತೇನೆ ಅನುಜ್ಞೆ ನೀಡು' ಎಂದರು.

ಶ್ರೀಕೃಷ್ಣನೆಂದ, 'ಮಗು, ಚಿಂತಿಸಬೇಡ. ನಾನು ವಿಷಯಾಸಕ್ತಿಯಿಂದ ಯೋಗಮಾಯಾಬಲವನ್ನು ಯೋಗಿಗಳಂತೆ ತೋರುತ್ತಿಲ್ಲ. ಕೇವಲ ಲೋಕಕ್ಕೆ ಗೃಹಸ್ಥಧರ್ಮ ಶಿಕ್ಷಣ ನೀಡುವುದಕ್ಕಾಗಿ ಹೀಗೆ ಮಾಡುತ್ತಿದ್ದೇನೆ.' ನಾರದರು ಭಗವಂತನನ್ನೇ ಸ್ಮರಿಸುತ್ತ ನಡೆದರು.

ಭಗವಂತ ಮಾಡುವ ಕಾರ್ಯಗಳು ಹೀಗೆ ಇನ್ನೊಬ್ಬರಿಂದ ಮಾಡ ಲಾಗದವುಗಳು. ಅವುಗಳನ್ನು ಹೇಳುವ ಕೇಳುವ ಅನುಮೋದಿಸು ವವರೆಲ್ಲರಿಗೂ ಮೋಕ್ಷದಾಯಕನಾದ ಭಗವಂತನಲ್ಲಿ ಭಕ್ತಿ ಉಂಟಾಗುವುದು.

❖ ❖ ❖

ಅಧ್ಯಾಯ - ೮೦

ಅಧ್ಯಾಯ ಸಾರಾಂಶ

ಶ್ರೀಕೃಷ್ಣನ ದಿನಚರಿ ಹೀಗಿತ್ತು. ಬೆಳಿಗ್ಗೆ ಉಷಃಕಾಲದಲ್ಲಿಯೆ ನಿದ್ದೆಯಿಂದ ಏಳುತ್ತಿದ್ದ. ಕೋಳಿ ಕೂಗಿತೆಂದರೆ ಕೃಷ್ಣನನ್ನು ಆಲಿಂಗಿಸಿ ಮಲಗಿದ್ದ ಪತ್ನಿಯರು ಕೋಳಿಗಳನ್ನು ಶಪಿಸುತ್ತಿದ್ದರು. ಹಕ್ಕಿಗಳೂ ವಂದಿಮಾಗಧರಂತೆ ಕೃಷ್ಣನನ್ನು ಎಚ್ಚರಿಸುತ್ತ ಕೂಗು ತ್ತಿದ್ದವು. ಅಂಥ ಬ್ರಾಹ್ಮಮುಹೂರ್ತದಲ್ಲಿ ಎದ್ದು ಕೃಷ್ಣ ಮುಖ ತೊಳೆದು ನಿರ್ಮಲ ಮನಸ್ಸಿನಿಂದ ಪ್ರಕೃತಿ ವಿಲಕ್ಷಣನಾದ ತನ್ನನ್ನೇ ತಾನು ಧ್ಯಾನಿಸಿದ. 'ತಾನು ಸರ್ವೋತ್ತಮ, ಸೂರ್ಯಚಂದ್ರಾದಿ ವಿಲಕ್ಷಣ ಜ್ಯೋತಿಃಸ್ವರೂಪ, ಸ್ವತಂತ್ರ ಅದ್ವಿತೀಯ. ಸ್ವಸಾಮರ್ಥ್ಯ ದಿಂದ ಎಲ್ಲ ದೋಷಗಳನ್ನು ಸದಾ ದೂರ ಮಾಡಿಕೊಂಡವನು. ಜಗತ್ಸೃಷ್ಟ್ಯಾದಿ ಕರ್ತೃತ್ವಗಳೆಂಬ ಸ್ವರೂಪಭೂತ ಲಕ್ಷಣಗಳಿಂದ ಜ್ಞಾನಾನಂದ ಸ್ವರೂಪನೆಂದು ತಿಳಿದು ಬರುವವನು ಎಂದು ಧ್ಯಾನಿಸಿದ.

ಬಳಿಕ ಸ್ನಾನ ಸಂಧ್ಯಾವಂದನೆ ಹೋಮ ಗಾಯತ್ರೀಜಪ ಸೂರ್ಯೋಪಸ್ಥಾನ ದೇವ ಋಷಿ ಪಿತೃತರ್ಪಣಗಳನ್ನು ಮಾಡಿ ಮುಗಿಸಿ ಬ್ರಾಹ್ಮಣರಿಗೆ ಗೋದಾನ ಮಾಡಿದ. ಒಮ್ಮೆ ಕರು ಹಾಕಿದ ಒಳ್ಳೆಯ ಹಾಲು ಕೊಡುವ ಹಸುಗಳಿಗೆ ಚಿನ್ನದಿಂದ ಕೊಂಬುಗಳನ್ನೂ, ಬೆಳ್ಳಿಯಿಂದ ಗೊರಸುಗಳನ್ನೂ ಅಲಂಕರಿಸಿ ಒಳ್ಳೆಯ ವಸ್ತ್ರ ಹೊದಿಸಿ ಇಂಥ ಹದಿಮೂರು ಸಾವಿರದ ಎಂಬತ್ತನಾಲ್ಕು ಹಸುಗಳನ್ನು ಕರುಗಳೊಂದಿಗೆ ವಿಪ್ರರಿಗೆ ಪ್ರತಿದಿನ ದಾನಮಾಡುತ್ತಾನೆ. ಜೊತೆಗೆ ರೇಶಿಮೆ ಬಟ್ಟೆ ಕೃಷ್ಣಾಜಿನ ತಿಲದಾನಗಳನ್ನೂ ನೀಡುತ್ತಾನೆ ಬಳಿಕ ಗೋಬ್ರಾಹ್ಮಣರಿಗೆ ನಮಸ್ಕಾರ ದೇವಾಲಯಗಳಲ್ಲಿ ಪ್ರತಿಷ್ಠಾಪಿತವಾದ ವಿಗ್ರಹಗಳಿಗೆ ನಮಸ್ಕಾರ. ವಯೋಜ್ಯೇಷ್ಠರಿಗೆ ಅಶ್ವತ್ಥಾದಿ ವೃಕ್ಷಗಳಿಗೆ ನಮಸ್ಕಾರಗಳನ್ನು ಮಾಡಿ ಕಪಿಲಾದಿ ಮಂಗಳ ಸ್ಪರ್ಶಮಾಡಿ ತನ್ನನ್ನು ವಸ್ತ್ರಾಭರಣ ಗಂಧ ಮಾಲ್ಯಾದಿಗಳಿಂದ ಅಲಂಕರಿಸಿಕೊಂಡು ತುಪ್ಪ ಹಸು ಎತ್ತು ಬ್ರಾಹ್ಮಣ ದೇವತಾ ವಿಗ್ರಹಗಳ ದರ್ಶನ ಮಾಡಿ ಪೌರರಿಗೂ ಅಂತಃಪುರ ಜನರಿಗೂ ಅವರವರ ಅಭೀಷ್ಟಗಳನ್ನು ನೀಡಿ

ಹೂಮಾಲೆ ತಾಂಬೂಲ ಸುಗಂಧದ್ರವ್ಯಗಳನ್ನು ಬ್ರಾಹ್ಮಣರಿಗೆ ಬಂಧುಗಳಿಗೆ ರಾಣಿಯರಿಗೆ ಕೊಟ್ಟು ತಾನೂ ಸ್ವೀಕರಿಸುತ್ತಾನೆ.

ಬಳಿಕ ಸಾತ್ಯಕಿ ಉದ್ಧವರೊಂದಿಗೆ ರಥವನ್ನೇರಿ, ಅಂತಃಪುರಸ್ತ್ರೀಯರು ಲಜ್ಜಾಪ್ರಣಯಪೂರ್ವಕ ನೋಟದಿಂದ ನೋಡುತ್ತ ಕಷ್ಟದಿಂದ ಬೀಳ್ಕೊಟ್ಟಾಗ ಅವರ ಮನವನ್ನು ಸೆಳೆದುಕೊಂಡೇ ಅರಮನೆ ಯಿಂದ ಹೊರಗೆ ಹೊರಡುತ್ತಾನೆ ಎಲ್ಲ ಯಾವದವರೊಂದಿಗೆ ಸುಧರ್ಮಸಭೆಯನ್ನು ಪ್ರವೇಶಿಸುತ್ತಾನೆ. ನಕ್ಷತ್ರಗಳ ನಡುವೆ ಚಂದ್ರನಂತೆ ಎಲ್ಲ ಯಾದವರ ನಡುವೆ ಕೃಷ್ಣಚಂದ್ರ ಹೊಳೆಯುತ್ತಾನೆ. ಅಲ್ಲಿ ನಟರು ಗಾಯಕರು ನರ್ತಕರು, ಸೂತಮಾಗಧರು ನೃತ್ಯಗೀತವಾದ್ಯ ಸ್ತೋತ್ರಗಳಿಂದ ಸೇವೆ ಮಾಡುತ್ತಾರೆ. ಮುನಿಗಳು ವೇದ ಪುರಾಣ ಪ್ರವಚನಗಳನ್ನು ನಡೆಸುತ್ತಾರೆ.

ಹೀಗೆ ಒಮ್ಮೆ ಸುಧರ್ಮಸಭೆಯಲ್ಲಿ ಶ್ರೀಕೃಷ್ಣ ಕುಳಿತಿದ್ದಾಗ ಜರಾಸಂಧನ ಬಂಧನದಲ್ಲಿದ್ದ ರಾಜರುಗಳ ಕಡೆಯಿಂದ ಒಬ್ಬ ದೂತ ಬಂದು ಅವರು ಮಾಡಿದ ಪ್ರಾರ್ಥನೆಯನ್ನು ಶ್ರೀಕೃಷ್ಣನ ಮುಂದೆ ಹೇಳಿಕೊಂಡ. 'ಹದಿನೆಂಟು ಬಾರಿ ಸೈನ್ಯ ಸಮೇತನಾಗಿ ಬಂದು ಜರಾಸಂಧ ಪ್ರತಿಬಾರಿಯೂ ನಿನ್ನಿಂದ ಪರಾಭವಗೊಂಡಿದ್ದರೂ ನೀನು ನರಲೋಕ ವಿಡಂಬನ ಮಾಡುತ್ತ ಓಡಿ ಹೋದಂತೆ ತೋರಿಕೊಂಡೆ. ಅದರ ಫಲವಾಗಿ ಜರಾಸಂಧ ತಾನು ಗೆದ್ದಿರುವೆ ನೆಂದು ಅಹಂಕಾರದಿಂದ ಬೀಗಿ ನಿನ್ನವರನ್ನು ಪೀಡಿಸುತ್ತಿದ್ದಾನೆ. ನಮ್ಮನ್ನು ಬಂಧನದಲ್ಲಿರಿಸಿದ್ದಾನೆ. ನಾವು ನಿನ್ನನ್ನೇ ಮೊರೆಹೊಕ್ಕಿರು ವೆವು. ಬಂಧನದಿಂದ ಬಿಡಿಸು' ಎಂದು.

ರಾಜದೂತ ಹೀಗೆ ಹೇಳುತ್ತಿರುವಾಗಲೆ ನಾರದರೂ ಬಂದು ಹೇಳಿದರು. 'ಧರ್ಮರಾಜ ರಾಜಸೂಯ ಯಾಗವನ್ನು ಮಾಡಲು ಸಂಕಲ್ಪಿಸಿದ್ದಾನೆ. ಅದಕ್ಕೆ ನೀನು ಅನುಜ್ಞೆ ನೀಡಬೇಕು. ಯಾಗದಲ್ಲಿ ಭಾಗವಹಿಸುವ ದೇವತೆಗಳಿಗೂ ರಾಜರಿಗೂ ದರ್ಶನ ಪಾದಸ್ಪರ್ಶಗಳನ್ನು ನೀಡಬೇಕು ಎಂದು ಪ್ರಾರ್ಥಿಸುತ್ತಿದ್ದಾನೆ.'

❖❖❖

ಅಧ್ಯಾಯ - ೮೧

ಅಧ್ಯಾಯ ಸಾರಾಂಶ

ರಾಜದೂತ ಹೇಳಿದ ಮಾತನ್ನೂ ನಾರದರು ಆಡಿದ **ಮಾತನ್ನೂ** ಕೇಳಿದ ಬಳಿಕ ಉದ್ಧವ ಎದ್ದುನಿಂತು, ಶ್ರೀಕೃಷ್ಣನಿಗೂ **ಸಭ್ಯರಿಗೂ** ಹೀಗೇ ಅಭಿಪ್ರಾಯವಿರುತ್ತದೆ ಎಂದುಕೊಂಡು ನುಡಿದ. '**ನಾರದರು** ಹೇಳಿದಂತೆ ಧರ್ಮರಾಜನ ರಾಜಸೂಯಯಾಗಕ್ಕೆ ನಾವು **ಸಹಾಯ** ಮಾಡಬೇಕು. ಮತ್ತು ರಾಜರನ್ನು ಜರಾಸಂಧನ **ಬಂಧನದಿಂದ** ಬಿಡಿಸಲೂಬೇಕು. ಎಲ್ಲೆಡೆ ದಿಗ್ವಿಜಯ ಮಾಡಿಯೇ **ರಾಜಸೂಯ** ಯಾಗ ಮಾಡಬೇಕಾಗಿರುವುದರಿಂದ ಜರಾಸಂಧನ **ವಧೆ** ಮಾಡಿಸಿದರೆ ಎರಡೂ ಕಾರ್ಯ ನೆರವೇರುತ್ತದೆ. **ಜರಾಸಂಧನನ್ನು** ಇದಿರಿಸಬಲ್ಲ ಬಲಿಷ್ಠ ಭೀಮಸೇನ ಹೊರತು ಬೇರೆ ಇಲ್ಲ. **ಅವನು** ಜರಾಸಂಧನನ್ನು ದ್ವಂದ್ವ ಯುದ್ಧದಲ್ಲಿಯೇ ವಧಿಸಬೇಕು. **ನೂರು** ಅಕ್ಷೋಹಿಣೀ ಸೈನ್ಯ ಸಮೇತನಾಗಿ ಜರಾಸಂಧ **ಬಂದನೆಂದರೆ** ಅವನನ್ನು ಕೊಲ್ಲಲಾಗದು. ಅದರಿಂದ ಭೀಮಸೇನ **ಬ್ರಾಹ್ಮಣ** ವೇಷಧಾರಿಯಾಗಿ ಮಗಧ ದೇಶಕ್ಕೆ ಹೋಗಿ **ಜರಾಸಂಧನಲ್ಲಿ** ದ್ವಂದ್ವಯುದ್ಧವನ್ನು ಕೇಳಬೇಕು. ನಿನ್ನ ಸನ್ನಿಧಿಯಲ್ಲಿ **ಅವನು** ಜರಾಸಂಧನನ್ನು ಕೊಲ್ಲಬಲ್ಲ. ಸರ್ವೇಶ್ವರನಾದ ನಿನಗೆ ಪ್ರಪಂಚ **ಸೃಷ್ಟಿ** ಲಯಗಳಲ್ಲಿ ಬ್ರಹ್ಮರುದ್ರರು ನಿಮಿತ್ತ ಮಾತ್ರ. ಅದರಿಂದ ನಿನ್ನ **ಸನ್ನಿಧಿ** ಭೀಮಸೇನನಿಗೆ ಅವಶ್ಯಬೇಕು. ಶಿಶುಪಾಲಾದಿ ರಾಜರ **ಮರಣ** ಕಾಲವೂ ಈಗ ಪಕ್ವವಾಗಿರುವುದರಿಂದ ಧರ್ಮ**ರಾಜನ** ರಾಜಸೂಯಯಾಗ ಅದಕ್ಕೆ ಅನುಕೂಲವಾಗಿದೆ. ಅದರಿಂದ **ನಿನಗೆ** ಅದು ಇಷ್ಟವಾಗಬಹುದು. ಜರಾಸಂಧವಧೆ ಮಾಡಿಸುವ **ಮೂಲಕ** ಯಾಗ ನೆರವೇರುವಂತೆ **ಮಾಡು**' ಎಂದು.

ಎಲ್ಲ ದೃಷ್ಟಿಯಿಂದಲೂ ಅಂಗೀಕಾರಾರ್ಹವಾದುದು **ಉದ್ಧವನ ಈ** ಮಾತು, ಅದನ್ನು ಕೇಳಿದಾಗ ಶ್ರೀಕೃಷ್ಣ ನಾರದ ಹಿರಿಯ **ಯಾದವರು** ಮತ್ತು ಬಲರಾಮ ಇವರೆಲ್ಲರೂ ಸರಿ ಎಂದೊಪ್ಪಿಕೊಂ**ಡರು. ಬಳಿಕ** ಶ್ರೀಕೃಷ್ಣ ವಸುದೇವ ಮುಂತಾದ ಹಿರಿಯರ **ಅನುಜ್ಞೆ ಪಡೆದು**

ಉಗ್ರಸೇನನಿಂದಲೂ ಬಲರಾಮನಿಂದಲೂ ಬೀಳ್ಕೊಂಡು ಇಂದ್ರ ಪ್ರಸ್ಥಕ್ಕೆ ಹೊರಟ. ರಾಣಿಯರನ್ನು ಮಕ್ಕಳೊಂದಿಗೆ ಹೊರಡಿಸಿದ.

ಮೃದಂಗ ಭೇರಿ ಮುಂತಾದ ರಣವಾದ್ಯ ಘೋಷದೊಂದಿಗೆ ಚತುರಂಗ ಸೈನ್ಯವನ್ನು ಜೊತೆಗೆ ಹೊರಡಿಸಿದ. ಸೇವಕಜನರು ವೇಶ್ಯಾಸ್ತ್ರೀಯರು ವಸ್ತ್ರ ಗೂಡಾರ ಕಂಬಳಿ ಮುಂತಾದ ಸಲಕರಣೆಗಳನ್ನು ಮನುಷ್ಯ ಒಂಟೆ ಎತ್ತು ಕೋಣ ಕತ್ತೆ ಹೇಸರಗತ್ತೆ ಆನೆಗಳ ಮೇಲೆ ಹೊರಿಸಿ ತಾವೂ ಏರಿ ಹೊರಟರು. ಇದನ್ನು ಕಂಡು ಬಲು ಸಂತುಷ್ಟರಾದ ನಾರದರು ಮನಸಿನಿಂದಲೆ ಶ್ರೀಕೃಷ್ಣನಿಗೆ ಪೂಜೆ ಸಲ್ಲಿಸಿ ನಮಿಸಿ ಅವನನ್ನು ಹೃದಯದಲ್ಲಿ ಹೊತ್ತು ಆಕಾಶಮಾರ್ಗವಾಗಿ ನಡೆದರು. ದೂತನಿಗೆ ಶ್ರೀಕೃಷ್ಣ 'ರಾಜರು ಯಾರೂ ಭಯಪಡಬೇಕಾಗಿಲ್ಲ, ಜರಾಸಂಧನನ್ನು ನಾನು ಕೊಲ್ಲಿಸುವೆನು' ಎಂದು ಸಂದೇಶವನ್ನು ಹೇಳಿಕಳಿಸಿದ. ರಾಜರು ಇದನ್ನು ಕೇಳಿ ಶ್ರೀಕೃಷ್ಣನ ಬರುವನ್ನು ಇದಿರುನೋಡಲು ತೊಡಗಿದರು.

ಶ್ರೀಕೃಷ್ಣ ನದಿ ಪರ್ವತ ಪುರ ಗ್ರಾಮ ಮುಂತಾದುವನ್ನು ದಾಟಿ ಇಂದ್ರಪ್ರಸ್ಥವನ್ನು ತಲುಪಿದಾಗ ಧರ್ಮರಾಜ ಪುರೋಹಿತನೊಂದಿಗೆ ಮತ್ತು ಬಂಧುಗಳೊಂದಿಗೆ ಅವನನ್ನು ಇದಿರುಗೊಳ್ಳಲು ನಗರದಿಂದ ಹೊರಗೆ ಬಂದ. ಇಂದ್ರಿಯದೇವತೆಗಳು ಮುಖ್ಯಪ್ರಾಣನನ್ನು ಇದಿರುಗೊಳ್ಳುವಂತೆ ಸಂಭ್ರಮದಿಂದ ಮಂಗಳಗೀತವಾದ್ಯ ವೇದ ಘೋಷಗಳೊಂದಿಗೆ ಶ್ರೀಕೃಷ್ಣನನ್ನು ಇದಿರುಗೊಂಡ. ಪ್ರೀತಿಯಿಂದ ಆಲಿಂಗಿಸಿಕೊಂಡು ಪಾಪ ಪರಿಹರಿಸಿಕೊಂಡ. ಭೀಮಸೇನನೂ ನಸುನಗುತ್ತ ಕಣ್ಣುಗಳಲ್ಲಿ ಆನಂದಬಾಷ್ಪ ತುಂಬಿಕೊಂಡು ಆಲಿಂಗಿಸಿದ. ಅರ್ಜುನನೂ ಆಲಿಂಗಿಸಿ ನಮಿಸಿದ. ನಕುಲ ಸಹದೇವರೂ ಆಲಿಂಗಿಸಿ ಅಭಿವಾದನ ಮಾಡಿದರು. ಶ್ರೀಕೃಷ್ಣ ಬ್ರಾಹ್ಮಣರಿಗೂ ಕುರುವಂಶದ ಹಿರಿಯರಿಗೂ ಯಥಾಯೋಗ್ಯವಾಗಿ ನಮಸ್ಕಾರ ಮಾಡಿದ. ವಾದ್ಯ ನೃತ್ಯ ಗೀತಗಳೊಂದಿಗೆ ನಗರಪ್ರವೇಶ ಮಾಡಿದ

ನಗರವನ್ನು ಎಲ್ಲೆಡೆ ಸಿಂಗರಿಸಿದ್ದರು. ನರನಾರಿಯರಿಗೆ ಕಣ್ಣಿಂದ ಕುಡಿದುಬಿಡುವಂತೆ ನೋಡಲು ಯೋಗ್ಯನಾದ ಶ್ರೀಕೃಷ್ಣ ಬಂದನೆಂದು ಕೇಳಿದೊಡನೆ ನಗರದ ನಾರಿಯರು ಮನೆಗೆಲಸವನ್ನು ಬಿಟ್ಟು ಆತುರದಿಂದ ಓಡೋಡಿ ಬಂದರು. ಹೂಮಳೆಗರೆದು

ಮನಸಿನಿಂದಲೇ ಆಲಿಂಗಿಸಿದರು. ನಸುನಗೆಯ **ನೋಟಗಳಿಂದಲೆ** ಸ್ವಾಗತಿಸಿದರು. ಕೃಷ್ಣಪತ್ನಿಯರನ್ನು ಕಂಡು, 'ಕೃಷ್ಣ **ಸುಂದರ** ಹಾಸಯುಕ್ತವಾದ ಕಡೆಗಣ್ಣ ನೋಟದಿಂದ ಇವರ ಕಣ್ಣುಗಳಿಗೆ **ಸದಾ** ಹಬ್ಬ ಉಂಟುಮಾಡುತ್ತಾನೆ ಎಂದರೆ ಇವರೇನು ಪುಣ್ಯಮಾಡಿದರೊ!' ಎಂದುಕೊಂಡರು.

ಮಾರ್ಗದಲ್ಲಿ ನಗರದ ಗಣ್ಯವ್ಯಕ್ತಿಗಳು ಶ್ರೀಕೃಷ್ಣನ ಬಳಿಗೆ ಬಂದು ಸತ್ಕಾರ ಮಾಡಿದರು. ಕೃಷ್ಣ ಅರಮನೆಯನ್ನು ಪ್ರವೇಶಿಸಿದಾಗ ಅಂತಃಪುರಸ್ತ್ರೀಯರು ಸಂಭ್ರಮದಿಂದ ಇದಿರುಗೊಂಡರು. ಕುಂತಿ ಸೊಸೆಯರೊಂದಿಗೆ ಬಂದು ಆಲಿಂಗಿಸಿದಳು. ಧರ್ಮರಾಜ ಕೈಹಿಡಿದು ತನ್ನ ಅರಮನೆಯೊಳಗೆ ಕರೆತಂದ. ಆದರೆ ಸಂತೋಷದ ಭರದಲ್ಲಿ ಅವನನ್ನು ವಿಧ್ಯುಕ್ತವಾಗಿ ಸತ್ಕರಿಸುವುದನ್ನೇ ಮರೆತ ಕುಂತಿಯ ಆದೇಶದಂತೆ ದ್ರೌಪದಿ ಕೃಷ್ಣಪತ್ನಿಯರನ್ನು ಸತ್ಕರಿಸಿದಳು.

~~ಶ್ರೀಕೃಷ್ಣ ಇಂದ್ರಪ್ರಸ್ಥದಲ್ಲಿ ಧರ್ಮರಾಜನ ಆತಿಥ್ಯವನ್ನು ಸ್ವೀಕರಿಸಿ~~ ಸುಖವಾಗಿ ವಾಸಮಾಡುತ್ತಿದ್ದಾಗ ಒಮ್ಮೆ ಅರ್ಜುನನೊಂದಿಗೆ ಖಾಂಡವವನಕ್ಕೆ ಹೋಗಿ ಆ ವನವನ್ನು ಅಗ್ನಿಗೆ ಆಹುತಿಯಾಗಿ ಕೊಟ್ಟು ತೃಪ್ತಿಪಡಿಸಿದ. ಆಗ ಮಯಾಸುರನನ್ನು ಅಗ್ನಿಯಿಂದ ಪಾರುಮಾಡಿ ಅವನಿಂದ ಧರ್ಮರಾಜನಿಗೆ ದಿವ್ಯವಾದ ಸಭಾಭವನವನ್ನು ಮಾಡಿಸಿ ಕೊಟ್ಟ. ಕೆಲವು ತಿಂಗಳ ಕಾಲ ಇಂದ್ರಪ್ರಸ್ಥದಲ್ಲಿಯೇ ವಾಸಮಾಡಿದ.

❖❖❖

ಅಧ್ಯಾಯ - ೮೨

ಅಧ್ಯಾಯ ಸಾರಾಂಶ

ಧರ್ಮರಾಜ ರಾಜಸಭೆಯಲ್ಲಿ ಕುಳಿತು ಎಲ್ಲರೂ ಕೇಳುವಂತೆ ಶ್ರೀಕೃಷ್ಣನಿಗೆ ಹೇಳಿದ. 'ಗೋವಿಂದ, ನಾನು ರಾಜಸೂಯ ಮಹಾಯಾಗದಿಂದ ನಿನ್ನ ವಿಭೂತಿಗಳಾದ ಇಂದ್ರಾದಿ ದೇವತೆಗಳನ್ನು ಆರಾಧಿಸುವೆನು. ಅದನ್ನು ನೀನೇ ನನ್ನಿಂದ ಮಾಡಿಸಬೇಕು. ನಿನ್ನ ಪಾದುಕೆಗಳನ್ನು ಸಕಲ ಅಮಂಗಲ ಪರಿಹಾರಕಗಳೆಂದು ಸೇವಿಸುವವರಿಗೆ ಸಂಸಾರಭಯದಿಂದ ಮುಕ್ತಿ ಸಿಗುವುದು. ಐಹಿಕ ಸಂಪತ್ತನ್ನು ಮಾತ್ರ ಬಯಸಿ ಸೇವಿಸಿದರೆ ಅದು ಮಾತ್ರ ಸಿಕ್ಕೀತು. ಸೇವೆಯನ್ನೇ ಮಾಡದವರಿಗೆ ಐಹಿಕ ಪಾರತ್ರಿಕ ಸುಖವೇನೂ ದೊರಕದು. ಅದರಿಂದ ಈ ಯಾಗದಲ್ಲಿ ನಿನ್ನ ಪಾದಕಮಲಸೇವೆಯ ಪ್ರಭಾವವೇನೆಂಬುದು ಲೋಕಕ್ಕೆ ತಿಳಿಯಲಿ. ಸೇವೆ ಮಾಡುವ ಕುರು ಸೃಂಜಯ ವಂಶದವರಿಗೆ ಎಲ್ಲ ಪುರುಷಾರ್ಥಗಳೂ ಲಭಿಸುವುದು, ಸೇವೆ ಮಾಡದ ಶಿಶುಪಾಲ ಮುಂತಾದವರಿಗೆ ಅನರ್ಥವಾಗುವುದು. ಇವೆರಡೂ ಲೋಕಕ್ಕೆ ಸ್ಪಷ್ಟವಾಗಿ ಕಾಣಲಿ. ನಿನಗೆ ತನ್ನವರು ಪರರೆಂಬ ಭೇದವಿಲ್ಲ. ಸೇವೆಗೆ ಅನುಗುಣವಾಗಿ ಫಲ ನೀಡುವವನು ನೀನು' ಎಂದು. ಶ್ರೀಕೃಷ್ಣ ನುಡಿದ, 'ರಾಜನೆ, ನೀನು ಒಳ್ಳೆಯ ಸಂಕಲ್ಪವನ್ನೇ ಮಾಡಿರುವೆ. ನಿನ್ನ ತಮ್ಮಂದಿರು ಲೋಕಪಾಲರ ಅಂಶಸಂಭೂತರು. ಮತ್ತು ನಾನೂ ನಿನ್ನ ವಶದಲ್ಲಿದ್ದೇನೆ. ಅದರಿಂದ ಯಾವ ದೇವನೂ ನಿನ್ನನ್ನು ಪರಾಭವಗೊಳಿಸಲಾರ. ಇನ್ನು ರಾಜರ ಪಾಡೇನು?'

ಬಳಿಕ ದಕ್ಷಿಣ ಪಶ್ಚಿಮ ಉತ್ತರ ಪೂರ್ವದಿಕ್ಕುಗಳಿಗೆ ಕ್ರಮವಾಗಿ ಸಹದೇವ ನಕುಲ ಅರ್ಜುನ ಭೀಮಸೇನರನ್ನು ದಿಗ್ವಿಜಯಕ್ಕೆ ಕಳಿಸಿದ ಧರ್ಮರಾಜ. ಅವರೆಲ್ಲರೂ ಎಲ್ಲ ರಾಜರನ್ನು ಗೆದ್ದು ಅಪಾರ ಸಂಪತ್ತನ್ನು ಅವನಿಗೆ ತಂದಿತ್ತರು.

ಜರಾಸಂಧವಧೆ ಹೇಗೆ ಎಂದು ಚಿಂತಾಕ್ರಾಂತನಾಗಿದ್ದ ಧರ್ಮರಾಜನಿಗೆ ಶ್ರೀಕೃಷ್ಣ ಉದ್ಧವನಾಡಿದ್ದ ಸಲಹೆಯನ್ನು ತಿಳಿಸಿದ. ಅದರಂತೆ ಭೀಮ

ಅರ್ಜುನ ಕೃಷ್ಣರು ಬ್ರಾಹ್ಮಣವೇಷ ಧರಿಸಿ ಜರಾಸಂಧನಿರುವ ಗಿರಿವ್ರಜಕ್ಕೆ ಪ್ರಯಾಣ ಮಾಡಿದರು. 'ನಾವು ಬಯಸುವುದನ್ನು ನೀಡು' ಎಂದು ಅವನಲ್ಲಿ ಬೇಡಿದರು. ಜರಾಸಂಧ 'ಇವರು ಬ್ರಾಹ್ಮಣರಲ್ಲ, ಬ್ರಾಹ್ಮಣ ವೇಷದಿಂದ ಬಂದ ಕ್ಷತ್ರಿಯರು. ಹಿಂದೆ ಬ್ರಾಹ್ಮಣವೇಷದಿಂದ ಬಂದ ವಟುವನ್ನು ವಿಷ್ಣುವೆಂದು ತಿಳಿದೂ ಕೂಡ, ಶುಕ್ರಾಚಾರ್ಯರು ಬೇಡವೆಂದು ತಡೆದರೂ ಕೂಡ, ಬಲಿಚಕ್ರವರ್ತಿ ಭೂದಾನ ಮಾಡಿದ. ಅದರಿಂದ ಐಶ್ವರ್ಯ ಹೋದರೂ ಒಳ್ಳೆಯ ಕೀರ್ತಿ ಬಂದಿತು. ಹಾಗೇ ನಾನು ಇವರಿಗೆ ಬೇಡಿದ್ದನ್ನು, ಅದು ನನ್ನ ಶರೀರವೇ ಆದರೂ ಸರಿಯೆ, ಕೊಟ್ಟು ಬಿಡುವೆನು' ಎಂದು ಆಲೋಚಿಸಿ 'ಬ್ರಾಹ್ಮಣರೆ, ನಿಮಗೆ ಬೇಕಾದುದನ್ನು ಕೇಳಿರಿ ಕೊಡುತ್ತೇನೆ' ಎಂದ.

ಶ್ರೀಕೃಷ್ಣನೆಂದ, 'ನಾವು ಕ್ಷತ್ರಿಯರು. ಯುದ್ಧಾರ್ಥಿಗಳಾಗಿ ಬಂದಿ ದ್ದೇವೆ. ಅನ್ನಾರ್ಥಿಗಳಾಗಿ ಅಲ್ಲ. ನೀನು ಯುದ್ಧ ನೀಡುವುದಾದರೆ ದ್ವಂದ್ವಯುದ್ಧ ನೀಡು. ಈತ ಭೀಮಸೇನ. ಈತ ಅರ್ಜುನ, ನಾನು ಕೃಷ್ಣ.' ಜರಾಸಂಧ ಗಹಗಹಿಸಿ ನಕ್ಕು ನುಡಿದ, 'ಹಾಗಾದರೆ ದ್ವಂದ್ವ ಯುದ್ಧವನ್ನೇ ನೀಡುವೆನು. ಕೃಷ್ಣ, ನಾನು ನಿನ್ನೊಡನೆ ಯುದ್ಧ ಮಾಡಲಾರೆ, ಹೇಡಿ ನೀನು. ಜನ್ಮಭೂಮಿಯಾದ ಮಥುರೆಯನ್ನು ಬಿಟ್ಟು ಸಮುದ್ರಮಧ್ಯದಲ್ಲಿ ಮನೆ ಮಾಡಿಕೊಂಡಿರುವೆ. ಅರ್ಜುನ ಸಣ್ಣವನು, ಬಲಶಾಲಿಯೂ ಅಲ್ಲ. ಭೀಮನೊಡನೆಯೇ ಹೋರಾಡು ವೆನು' ಹೀಗೆ ಹೇಳಿ ಭೀಮನಿಗೆ ಒಂದು ಗದೆಯನ್ನು ಕೊಟ್ಟು ತಾನು ಇನ್ನೊಂದನ್ನು ಹಿಡಿದು ನಗರದಿಂದ ಹೊರಗೆ ಬಯಲಿಗೆ ಹೊರಟ. ಇಬ್ಬರೂ ಅಲ್ಲಿ ನಿಂತು ಆಕರ್ಷಕವಾಗಿ ಯುದ್ಧದ ವರಸೆಗಳನ್ನು ತೋರಿದರು. ಎರಡು ಗದೆಗಳ ಹೊಡೆತದಿಂದ ಸಿಡಿಲಿನ ಅಬ್ಬರ ಕೇಳಿಸಿತು. ಗದೆಗಳೇ ಪುಡಿಯಾದುವು ಹೊರತು ಅವರ ಮೈಯಲ್ಲಿ ಗಾಯವಾಗಲಿಲ್ಲ. ಗದೆಗಳು ಪುಡಿಯಾದಾಗ ಮುಷ್ಟಿಯುದ್ಧ ಪ್ರಾರಂಭವಾಯಿತು. ಅಂಗೈಗಳ ಹೊಡೆತದ ಶಬ್ದವೂ ಸಿಡಿಲಿನ ಅಬ್ಬರದಂತೆಯೇ ಕಠೋರವಾಗಿತ್ತು.

ಜರಾಸಂಧನ ಜನನ ಮರಣರಹಸ್ಯ ಕೃಷ್ಣನಿಗೆ ತಿಳಿದಿತ್ತು. ಜರಾರಾಕ್ಷಸಿ ಅವನಿಗೆ ಜೀವದಾನ ಮಾಡಿದ ಬಗೆ ತಿಳಿದಿತ್ತು. ಒಂದು ಮರದ ರೆಂಬೆಯನ್ನು ಉದ್ದವಾಗಿ ಸೀಳಿ ಹೀಗೆ ಶತ್ರುವಿನ ಶರೀರವನ್ನು ಸೀಳು

ಎಂದು ಸಂಜ್ಞೆಯ ಮೂಲಕ ಭೀಮನಿಗೆ ತಿಳಿಸಿದ. ಒಡನೆ ಭೀಮ ಜರಾಸಂಧನನ್ನು ಕಾಲುಗಳಲ್ಲಿ ಹಿಡಿದು ನೆಲದ ಮೇಲೆ ಕೆಡವಿ ಒಂದು ಕಾಲನ್ನು ಮೆಟ್ಟಿ ಹಿಡಿದು ಇನ್ನೊಂದನ್ನು ಕೈಗಳಿಂದ ಹಿಡಿದೆತ್ತಿ ಪೃಷ್ಠದಿಂದಾರಂಭಿಸಿ ತಲೆಯ ವರೆಗೂ, ಆನೆ ಗಿಡದ ರೆಂಬೆಯನ್ನು ಸೀಳುವಂತೆ ಸೀಳಿದ. ಎರಡು ಸೀಳುಗಳಲ್ಲಿಯೂ ಒಂದೊಂದು ಕಾಲು ತೊಡೆ ಪೃಷ್ಠ ಸ್ತನ ಹೆಗಲು ಕಣ್ಣು ಕಿವಿಗಳಿರುವುದನ್ನು ಜನರು ಕಂಡರು. ಬಳಿಕ ಶ್ರೀಕೃಷ್ಣ ಜರಾಸಂಧನ ಮಗನಾದ ಸಹದೇವನನ್ನು ಮಗಧರಾಜ್ಯದಲ್ಲಿ ಅಭಿಷೇಕ ಮಾಡಿದ. ಬಂಧನದಲ್ಲಿದ್ದ ಎಲ್ಲ ರಾಜರನ್ನು ಬಿಡುಗಡೆ ಮಾಡಿದ.

❖❖❖

ರಾಜಸೂಯಯಾಗಕ್ಕಾಗಿ ಭೀಮಾರ್ಜುನ ಮುಂತಾದವರು ದಿಗ್ವಿಜಯಮಾಡಿ ಅಪಾರ ಧನಸಂಪತ್ತನ್ನು ತಂದು ಧರ್ಮರಾಜನಿಗೆ ಒಪ್ಪಿಸಿದರು. ಆದರೂ ಜರಾಸಂಧ ಯಾರಿಂದಲೂ ಪರಾಜಿತನಾಗಲಿಲ್ಲ ಎಂದು ಕೇಳಿದಾಗ ಧರ್ಮರಾಜನಿಗೆ ಚಿಂತೆಯಾಯಿತು.

ಶ್ರುತ್ವಾಽಜಿತಂ ಜರಾಸಂಧಂ ನೃಪತೇರ್ಧ್ಯಾಯತೋ ಹರಿಃ ।
ಆಹೋಪಾಯಂ ತಮೇವಾದ್ಯ ಉದ್ಧವೋ ಯಮುವಾಚ ಹ ॥ ೧೫ ॥

ಧರ್ಮರಾಜ ಶ್ರೀಕೃಷ್ಣನ ಮುಖದಿಂದ 'ಜರಾಸಂಧ ಯಾರಿಂದಲೂ ಇದುವರೆಗೆ ಪರಾಭವಗೊಂಡವನಲ್ಲ' ಎಂದು ಕೇಳಿ ಚಿಂತಾಕ್ರಾಂತನಾದ. ಆಗ ಶ್ರೀಕೃಷ್ಣನೇ ಇದಕ್ಕೆ ಉಪಾಯವನ್ನು ಹೇಳಿದ. ಅದು ದ್ವಾರಕೆಯಲ್ಲಿ ಶ್ರೀಕೃಷ್ಣನ ಮುಂದೆ ಉದ್ಧವ ಹೇಳಿದ ಉಪಾಯವೇ ಆಗಿತ್ತು.

ಇಲ್ಲಿ ಕಾಲ ವ್ಯತ್ಯಾಸವಾಗಿದೆ. ಜರಾಸಂಧ ಯಾರಿಂದಲೂ ಪರಾಜಿತನಾಗಲಿಲ್ಲ ಎಂದು ಧರ್ಮರಾಜ ಕೇಳಿ ಚಿಂತೆ ಮಾಡಿದುದು ಭೀಮಾದಿಗಳ ದಿಗ್ವಿಜಯಾನಂತರವಲ್ಲ. ಜರಾಸಂಧ ವಧೆಯಾದ ಬಳಿಕವೇ ದಿಗ್ವಿಜಯ ನಡೆದಿದೆ. ಇದು ಮಹಾಭಾರತದಲ್ಲಿ ಸ್ಪಷ್ಟವಿದೆ.

ಜರಾಸಂಧ ಹದಿನೆಂಟು ಬಾರಿ ಶ್ರೀಕೃಷ್ಣನೊಡನೆ ಯುದ್ಧಕ್ಕೆ ಬಂದು ಪರಾಜಿತನಾಗಿ ಹೋಗಿದ್ದಾನೆ. ಕಂಸನೂ ಬಲಾತ್ಕಾರವಾಗಿಯೆ ಅವನ ಇಬ್ಬರು ಕನ್ಯೆಯರನ್ನು ಅಪಹರಿಸಿ ಒಯ್ದು ಮದುವೆಯಾದ. ಕರ್ಣನೂ ಜರಾಸಂಧನನ್ನು ಪರಾಭವಗೊಳಿಸಿ ಅವನಿಂದ ಅಂಗರಾಜ್ಯವನ್ನು ಪಡೆದು ರಾಜನಾದ.

ಶ್ರೀಕೃಷ್ಣರಾಮರಿಗೆ ಸೋತ ಜರಾಸಂಧ ಹತಾಶತೆಯಿಂದ ಕಾಡಿಗೆ ತಪಸ್ಸಿಗೆಂದು ಹೊರಟಾಗ ಅವನ ಕಡೆ ರಾಜರೆಲ್ಲರೂ ಬಹುವಾಗಿ ಬೇಡಿ ಸಮಾಧಾನ ಮಾಡಿ ಹಿಂದಿರುಗಿಸಿದುದೂ ಉಂಟು.

ಅದರಿಂದ 'ಜರಾಸಂಧ ಯಾರಿಂದಲೂ ಪರಾಜಿತನಾಗಲಿಲ್ಲ' ಎಂದು ಭಾಗವತದಲ್ಲಿ ಹೇಳಿದ್ದು 'ಯಾರಿಂದಲೂ ಸಾಯಲಿಲ್ಲ' ಎನ್ನುವ ಅಭಿಪ್ರಾಯದಿಂದ ಎನ್ನಬೇಕು. ಮತ್ತು 'ಜರಾಸಂಧ ಯಾರಿಂದಲೂ ಸಾಯಲಿಲ್ಲ' ಎಂದು ಧರ್ಮರಾಜ ಕೇಳಿದ್ದೂ ಶ್ರೀಕೃಷ್ಣನ ಮುಖದಿಂದಲೆ. ತಾನು ರಾಜಸೂಯಯಾಗ ಮಾಡಲು ಶ್ರೀಕೃಷ್ಣನ ಅನುಜ್ಞೆಯನ್ನು ಕೇಳಿದಾಗಲೆ. ಶ್ರೀಕೃಷ್ಣ 'ಆಗಲಿ' ಎಂದು ಹೇಳಿ 'ಜರಾಸಂಧನನ್ನು ವಧಿಸದೆ ಯಾಗ ನಡೆಯಲಾರದು. ಅವನು ಯಾರಿಂದಲೂ ಸಾಯಲಿಲ್ಲ. ಅದಕ್ಕೆ ಭೀಮಾರ್ಜುನರನ್ನು ನನ್ನೊಂದಿಗೆ ಕಳಿಸು. ಭೀಮನಿಂದ ಆತನನ್ನು ನಾನು ಕೊಲ್ಲಿಸುವೆನೆಂ'ದು ಧರ್ಮರಾಜನ ಚಿಂತೆಯನ್ನು ಪರಿಹರಿಸಿದ್ದ.

ಬೇರೆ ವ್ಯಾಖ್ಯಾನಕಾರರು ಈ ಎಲ್ಲ ಅಂಶಗಳನ್ನು ಗಮನಿಸದೆ, ಮಹಾಭಾರತದ ವಿರೋಧವನ್ನೂ ಆಲೋಚಿಸದೆ, ಭಾಗವತದಲ್ಲಿಯೇ ಪೂರ್ವಾಪರ ವಿರೋಧ ಬಂದಿತೆಂದು ಅದನ್ನು ಪರಿಹರಿಸಲು ಯತ್ನಿಸಿದ್ದಾರೆ—'ಭಾಗವತದಲ್ಲಿ ಧರ್ಮರಾಜ ತನ್ನ ಯಾಗಸಂಕಲ್ಪವನ್ನು ಶ್ರೀಕೃಷ್ಣನಲ್ಲಿ ಹೇಳಿಕೊಂಡಾಗಲೇ ಶ್ರೀಕೃಷ್ಣ ಹೇಳಿದ್ದ, 'ನಿನ್ನ ತಮ್ಮಂದಿರು ಲೋಕಪಾಲರ ಅಂಶದಿಂದ ಜನಿಸಿದವರು. ನನ್ನ ಭಕ್ತರು. ಪ್ರಪಂಚದಲ್ಲಿ ಯಾರೂ ಅವರನ್ನು ಪರಾಭವಗೊಳಿಸಲಾರರು.' ಹೀಗೆ ಹೇಳಿ ಶ್ರೀಕೃಷ್ಣ ಆಗಲೆ ಪಾಂಡವರಲ್ಲಿ ತನ್ನ ಶಕ್ತಿಯನ್ನು ತುಂಬಿದ್ದ. ಬಳಿಕ ಪಾಂಡವರು ದಿಗ್ವಿಜಯ ಮಾಡಿ ಅಪಾರ ಸಂಪತ್ತನ್ನು ತಂದರು. 'ಇನ್ನೂ ಜರಾಸಂಧನನ್ನು ಗೆದ್ದುಕೊಂಡಿಲ್ಲ' ಎಂಬುದನ್ನು ಕೇಳಿ ಧರ್ಮರಾಜ ಚಿಂತಾತುರನಾಗುತ್ತಾನೆ!' ಇದು ಭಾಗವತದಲ್ಲಿ ಮೇಲುನೋಟಕ್ಕೆ ಕಾಣುವ ಕಥಾಕ್ರಮವಿರೋಧ.

[೧]ಜೀವಗೋಸ್ವಾಮಿಯ ವೈಷ್ಣವತೋಷಿಣಿಯಲ್ಲಿ ಈ ವಿರೋಧಕ್ಕೆ ಪರಿಹಾರವನ್ನು ಹೀಗೆ ಮಾಡಿದ್ದಾರೆ. 'ಸ್ವತಃ ಸ್ವಾಭಾವಿಕವಾಗಿ ಭೀಮ ಮಹಾವೀರನೆ, ಮತ್ತು ವಿಷ್ಣುಶಕ್ತಿಯಿಂದಲೂ ತುಂಬಿಕೊಂಡವನೆ. ಆದರೂ ದಿಗ್ವಿಜಯಕಾಲದಲ್ಲಿ ಜರಾಸಂಧನನ್ನು ಗೆಲ್ಲದೇ ಬಂದುದು ಏಕೆಂದರೆ, ಇದರಿಂದಲೇ ಊಹಿಸಬಹುದು, ಶ್ರೀಕೃಷ್ಣನೇ ಭೀಮನಿಗೆ ರಹಸ್ಯದಲ್ಲಿ ಸೂಚನೆ ಕೊಟ್ಟಿರುತ್ತಾನೆ, ಜರಾಸಂಧನನ್ನು ಪರಾಭವಗೊಳಿಸಬೇಡ' ಎಂದು.

೧. ಸ್ವತೋ ಮಹಾವೀರಸ್ವಭಾವತ್ವೇऽಪಿ ವಿಷ್ಣುತೇಜಸೋಪಬೃಂಹಿತತ್ವೇऽಪಿ ದಿಗ್ವಿಜಯೇ ಪ್ರವೃತ್ತಸ್ಯ ಭೀಮಸ್ಯ ತು ತಮಜಿತ್ವೈವಾಗಮನಂ ಶ್ರೀ ಭಗವತ ಏವ ರಹ ಉಪದೇಶಾದಿತಿ ಗಮ್ಯಂ। -ಜೀವಗೋಸ್ವಾಮಿಕೃತ [illegible] ತೋಷಿಣಿ

ಆದರೆ ಶ್ರೀಕೃಷ್ಣ ಹಾಗೆ ಏಕೆ ಸೂಚನೆ ಕೊಟ್ಟನೆಂಬುದನ್ನು ಊಹಿಸಲು ಏನೂ ಆಧಾರ ಸಿಗುವುದಿಲ್ಲ. ಭಾಗವತದಲ್ಲಿ ಪರಸ್ಪರ ವಿರೋಧವನ್ನು ಪರಿಹಾರ ಮಾಡಿದರೂ ಮಹಾಭಾರತದ ವಿರೋಧ ಪರಿಹಾರವಾಗುವುದಿಲ್ಲ. ಅಲ್ಲಿ ಜರಾಸಂಧನ ವಧೆಯಾದ ಮೇಲೇ ಪಾಂಡವರು ದಿಗ್ವಿಜಯಕ್ಕೆ ಹೊರಟಂತೆ ವರ್ಣನೆ ಇದೆ—

ಘಾತಯಿತ್ವಾ ಜರಾಸಂಧಂ ಬುದ್ಧಿಪೂರ್ವಮರಿಂದಮಃ।
ಧರ್ಮರಾಜಮನುಜ್ಞಾಪ್ಯ ಪೃಥಾಂ ಕೃಷ್ಣಾಂ ಚ ಭಾರತ ।
ಸುಭದ್ರಾಂ ಭೀಮಸೇನಂ ಚ ಫಾಲ್ಗುನಂ ಯಮಜೌ ತಥಾ ।
ಧೌಮ್ಯಮಾಮಂತ್ರಯಿತ್ವಾ ಚ ಪ್ರಯಯೌ ಸ್ವಾಂ ಪುರೀಂ ಪ್ರತಿ ।

(ಸಭಾ ೨೪.೫೪,೫೫)

ವಿಜಯಸ್ತೇ ಧ್ರುವಂ ಪಾರ್ಥ ಪ್ರಿಯಂ ಕಾಮಮವಾಪ್ಸ್ಯಸಿ ।
ಇತ್ಯುಕ್ತಃ ಪ್ರಯಯೌ ಪಾರ್ಥಃ ಸೈನ್ಯೇನ ಮಹತಾऽऽವೃತಃ ॥

(ಸಭಾ ೨೫.೭)

ಏವಂ ಸ ಪುರುಷ ವ್ಯಾಘ್ರೋ ವಿಜಿತ್ಯ ದಿಶಮುತ್ತರಾಂ ।
ಆಜಗಾಮ ಪುನರ್ವೀರಃ ಶಕ್ರಪ್ರಸ್ಥಂ ಪುರೋತ್ತಮಂ ॥

(ಸಭಾ ೨೮.೨೦)

ಜರಾಸಂಧ ವಧೆಯಾದ ಬಳಿಕವೇ ಪಾಂಡವರ ದಿಗ್ವಿಜಯ ಮತ್ತು ರಾಜಸೂಯಯಾಗಗಳು ನಡೆದುವೆಂದು ಮತ್ಸ್ಯಪುರಾಣವೂ ಹೇಳುತ್ತಿದೆ.

ಅದರಿಂದ ಶ್ರೀಮದಾಚಾರ್ಯರು ಹೇಳುತ್ತಾರೆ–

ಅಜಿತಂ ಜರಾಸಂಧಂ ಭಗವತ ಏವ ಶ್ರುತ್ವಾ। ತಥಾಹಿ ಸಭಾಪರ್ವಣಿ। ಪಶ್ಚಾದ್ ದಿಗ್ವಿಜಯೋಕ್ತೇಃ।

ಪೂರ್ವಾಃ ಕಥಾಃ ಪರಂ ಬ್ರೂಯುಃ ಪರಾಃ ಪೂರ್ವಂ ತಥೈವ ಚ।
ಮೋಹನಾರ್ಥಾಯ ದುಷ್ಟಾನಾಂ ಸರ್ವವ್ಯತ್ಯಾಸ ಇಷ್ಯತೇ।
ವಿಸ್ತಾರೇ ತು ಯದುಕ್ತಂ ಸ್ಯಾತ್ ತದ್‌ಗ್ರಾಹ್ಯಮವಿರೋಧತಃ।
ಸಂಕ್ಷೇಪೋಕ್ತ ವಿರೋಧೇ ತು ಗುಣೋಕ್ತಿಶ್ಚ ಸತಾಂ ಯಥಾ ॥

ಇತಿ ಶಬ್ದನಿರ್ಣಯೇ ॥

ಜರಾಸಂಧಂ ನಿಹತ್ಯೈವ ಪಾಂಡವೈಸ್ತು ದಿಶೋ ಜಿತಾಃ।

ಪ್ರಸಾದಾದ್ ವಾಸುದೇವಸ್ಯ ರಾಜಸೂಯಃ ಕ್ರತುಃ ಕೃತಃ ॥
ಇತಿ ಮಾತ್ಸ್ಯೇ ॥

ಧರ್ಮರಾಜ ರಾಜಸೂಯ ಯಜ್ಞ ಮಾಡಲು ಅನುಮತಿ ಕೇಳಿದಾಗ ಶ್ರೀಕೃಷ್ಣನೇ 'ಜರಾಸಂಧ ಯಾರಿಂದಲೂ ಸಾಯಲಿಲ್ಲ. ಅವನನ್ನು ಕೊಲ್ಲದೆ ಯಾಗವನ್ನು ಮಾಡುವಂತಿಲ್ಲ' ಎಂದು ಧರ್ಮರಾಜನಿಗೆ ಹೇಳಿದ್ದ. ಬಳಿಕ ಜರಾಸಂಧ ವಧೆ. ಬಳಿಕ ದಿಗ್ವಿಜಯ ನಡೆಯಿತು. ಹೀಗೆ ಕ್ರಮವನ್ನು ಒಪ್ಪದಿದ್ದರೆ ಸಭಾಪರ್ವದ ವಿರೋಧ ಬರುತ್ತದೆ. ಅಲ್ಲಿ ಜರಾಸಂಧ ವಧೆಯಾದ ಅನಂತರವೇ ದಿಗ್ವಿಜಯವನ್ನು ಹೇಳಲಾಗಿದೆ.

'ಪುರಾಣಗಳಲ್ಲಿ ಹಿಂದಿನ ಕಥೆಗಳನ್ನು ಮುಂದೆ ಹೇಳಬಹುದು, ಮುಂದಿನ ಕಥೆಗಳನ್ನು ಮೊದಲಿಗೆ ಹೇಳಬಹುದು. ಎಲ್ಲ ವ್ಯತ್ಯಾಸವೂ ದುರ್ಜನರ ಮೋಹನಕ್ಕಾಗಿ. ಮತ್ತು ಭಾರತದಲ್ಲಿ ಈ ಕಥೆ ವಿಸ್ತಾರವಾಗಿ ಬಂದಿದೆ. ಭಾಗವತದಲ್ಲಿ ಸಂಕ್ಷೇಪವಾಗಿ ಹೇಳಿದೆ. ಸಂಕ್ಷೇಪೋಕ್ತವಾದುದಕ್ಕೆ ವಿಸ್ತಾರದ ವಿರೋಧ ಬಂದಾಗ, ವಿರೋಧ ಬಾರದಂತೆ, ಸಂಕ್ಷೇಪಕ್ಕೇ ಬೇರೆ ಅರ್ಥ ಮಾಡಿ ವಿಸ್ತಾರದಲ್ಲಿ ಹೇಳಿದ್ದನ್ನೇ ಗ್ರಹಿಸಬೇಕು. ಮತ್ತು ಅರ್ಜುನಾದಿಗಳಿಂದ ಆಗದಿದ್ದ ಕೆಲಸ ಭೀಮನಿಂದಾಯಿತೆಂದು ತಿಳಿಸಲು ಜರಾಸಂಧ ವಧೆಯನ್ನು ಮೊದಲಿಗೆ ಹೇಳಬೇಕು. ಇದರಿಂದ ಭೀಮನಂಥ ಸಜ್ಜನರ ಗುಣಗಾನ ಲಭ್ಯವಾಗುವುದು' ಎಂದು ಶಬ್ದನಿರ್ಣಯದಲ್ಲಿ ಹೇಳಿದೆ.

ಜರಾಸಂಧನನ್ನು ಸಂಹರಿಸಿಯಾದ ಬಳಿಕವೇ ಪಾಂಡವರು ದಿಗ್ವಿಜಯ ಮಾಡಿದರೆಂದೂ ಹೀಗೆ ಶ್ರೀಕೃಷ್ಣನ ಅನುಗ್ರಹದಿಂದಲೇ ರಾಜಸೂಯಯಾಗ ನಡೆಯಿತೆಂದೂ ಮತ್ಸ್ಯಪುರಾಣದಲ್ಲಿ ಉಕ್ತವಾಗಿದೆ.

❖❖❖

ಅಧ್ಯಾಯ - ೮೩

ಅಧ್ಯಾಯ ಸಾರಾಂಶ

ಇಪ್ಪತ್ತೆರಡು ಸಾವಿರದ ಎಂಟುನೂರು ರಾಜರು ಬೆಟ್ಟಗಳ ಸಂದಿನಲ್ಲಿ ಬಂಧಿತರಾಗಿದ್ದರು. ಹಸಿವಿನಿಂದ ಬಳಲಿದ್ದರು ಬಾಯಾರಿದ್ದರು. ಸೊರಗಿದ್ದರು. ಶ್ರೀಕೃಷ್ಣನ ದಿವ್ಯರೂಪವನ್ನು ಕಂಡಾಗ ಅವರು ಆತನನ್ನು ಕಣ್ಣುಗಳಿಂದ ಕುಡಿಯುವಂತೆ ಬಾಯಿಂದ ಚಪ್ಪರಿಸುವಂತೆ ಮೂಗಿನಿಂದ ಆಘ್ರಾಣಿಸುವಂತೆ ತೋಳುಗಳಿಂದ ಬಳಸುವಂತೆ ಕಂಡರು. ಸಾಷ್ಟಾಂಗ ನಮಸ್ಕಾರ ಮಾಡಿದರು. ಕೃಷ್ಣದರ್ಶನದಿಂದ ಅವರ ಬಂಧನದ ಆಯಾಸ ಮರೆಯಾಯಿತು. ಕೈಮುಗಿದು ಸ್ತುತಿಸಿದರು. 'ನಾಥ, ರಾಜರಿಗೆ ರಾಜ್ಯ ಕೈತಪ್ಪಿ ಹೋದರೆ ಅದು ನಿನ್ನ ಅನುಗ್ರಹ ಸಂಪಾದನೆಗೆ ದಾರಿಯಾಗುವುದರಿಂದ ರಾಜ್ಯವನ್ನು ಅಪಹರಿಸಿದ ಜರಾಸಂಧನಲ್ಲಿ ನಮಗೆ ಕೋಪವಿಲ್ಲ. ಮರು ಮರೀಚಿಕೆಯನ್ನು ನೀರೆಂದು ಭ್ರಮಿಸುವಂತೆ ಅನಿತ್ಯವಾದ ಲೌಕಿಕ ಸಂಪತ್ತನ್ನು ಅಜ್ಞರು ನಿತ್ಯವೆಂದು ತಿಳಿಯುತ್ತಾರೆ. ಮದೋನ್ಮತ್ತರಾಗು ತ್ತಾರೆ. ನಾವೂ ಹಾಗೇ ಮಾಡಿದ್ದೆವು. ಬಳಿಕ ನಿನ್ನ ಸಂಕಲ್ಪದಿಂದಲೆ ರಾಜ್ಯಭ್ರಷ್ಟರಾಗಿ ನಿನ್ನ ಪಾದಗಳನ್ನು ನೆನೆಯುತ್ತಿದ್ದೇವೆ. ನಮಗಿನ್ನು ರಾಜ್ಯಸುಖವೂ ಬೇಡ ಸ್ವರ್ಗಸುಖವೂ ಬೇಡ. ನಿನ್ನ ಚರಣಾರವಿಂದಗಳ ಸ್ಮರಣೆ ಒಂದಿರಲಿ. ಗೋವಿಂದ, ನಿನಗೆ ನಮೋ ನಮಃ'

ಶ್ರೀಕೃಷ್ಣನೆಂದ 'ಇಂದಿನಿಂದ ನಿಮಗೆ ನನ್ನಲ್ಲಿ ನಿಶ್ಚಲ ಭಕ್ತಿ ಉಂಟಾಗುವುದು ಮುಕ್ತಿ ಲಭಿಸುವುದು. ಸಂಪತ್ತಿನ ಮದದ ಬಗ್ಗೆ ನೀವು ಹೇಳಿದುದು ನಿಜವೆ. ಸಂಪತ್ತಿನ ಮದದಿಂದ ಕಾರ್ತವೀರ್ಯಾರ್ಜುನ ಪರಶುರಾಮನಿಂದಲೂ ನಹುಷ ಅಗಸ್ತ್ಯರ ಜಟೆಯಲ್ಲಿದ್ದ ಭೃಗುಮುನಿಯಿಂದಲೂ, ವೇನ ಬ್ರಾಹ್ಮಣರಿಂದಲೂ, ರಾವಣ ರಾಮನಿಂದಲೂ, ನರಕಾಸುರ ನನ್ನಿಂದಲೂ ಹೀಗೇ ಬೇರೆ ರಾಜರುಗಳು ಬೇರೆಯವರಿಂದ ಸ್ಥಾನಭ್ರಷ್ಟರಾಗಿ ಮಡಿದರು. ಸಂಪತ್ತನ್ನು ನಶ್ವರವೆಂದು ತಿಳಿದು ನನ್ನನ್ನೇ ಧ್ಯಾನ ಮಾಡಿರಿ.

ಯಜ್ಞಗಳಿಂದ ನನ್ನನ್ನು ಆರಾಧಿಸುತ್ತ ಧರ್ಮದಿಂದ ರಾಜ್ಯವಾಳಿರಿ. ನನ್ನಲ್ಲಿ ಮನಸ್ಸಿಟ್ಟು ಕೊನೆಗೆ ನನ್ನನ್ನೇ ಹೊಂದಿರಿ.'

ಹೀಗೆ ರಾಜರಿಗೆ ಆದೇಶ ನೀಡಿ ಶ್ರೀಕೃಷ್ಣ ಸಹದೇವನ ಮೂಲಕ ಅವರಿಗೆ ಸ್ನಾನ ಭೋಜನ ವಸ್ತ್ರಾಭರಣಗಂಧಮಾಲ್ಯಾದಿ ಉಪಚಾರ ಗಳನ್ನು ಕೊಡಿಸಿ ರತ್ನ ಬಂಗಾರಗಳಿಂದ ಅಲಂಕೃತವಾದ ರಥಗಳಲ್ಲಿ ತಮ್ಮ ದೇಶಗಳಿಗೆ ಕಳಿಸಿಕೊಟ್ಟ. ಬಳಿಕ ಭೀಮಾರ್ಜುನರೊಂದಿಗೆ ಇಂದ್ರಪ್ರಸ್ಥಕ್ಕೆ ಹೋಗಿ ಶಂಖನಾದ ಗೈದ. ಅದನ್ನು ಕೇಳಿದ ಪ್ರಜೆಗಳು ಜರಾಸಂಧ ಹತನಾದನೆಂದು ತಿಳಿದು ಹರ್ಷಪಟ್ಟರು. ಧರ್ಮರಾಜ ನಿಗೆ ಭೀಮಾರ್ಜುನಕೃಷ್ಣರು ತಾವು ಮಾಡಿದ ಕಾರ್ಯವೆಲ್ಲವನ್ನೂ ವರ್ಣಿಸಿದರು. ಧರ್ಮರಾಜ ಕೇಳಿ ಆನಂದಬಾಷ್ಪಗಳನ್ನು ಸುರಿಸಿದ.

❖❖❖

ಅಧ್ಯಾಯ - ೭೪

ಅಧ್ಯಾಯ ಸಾರಾಂಶ

ಧರ್ಮರಾಜ ಜರಾಸಂಧವಧೆಯನ್ನೂ ಶ್ರೀಕೃಷ್ಣನ ಸಾಮರ್ಥ್ಯವನ್ನೂ ಕೇಳಿ ಸಂತುಷ್ಟನಾಗಿ ನುಡಿದ. 'ಹೇ ಕಮಲನಯನ, ಬ್ರಹ್ಮಾದಿ ದೇವತೆಗಳೂ ನಿನ್ನಾಜ್ಞೆಯನ್ನು ಶಿರಸಾವಹಿಸುತ್ತಿರುವಾಗ ನಮ್ಮಂಥ ಅಲ್ಪರ ಆಜ್ಞೆಯನ್ನು ನೀನು ಪಾಲಿಸುವುದು ಕೇವಲ ನಟನೆ. ಹಿರಿಯರಾಜ್ಞೆಯಂತೆ ಕರ್ಮಮಾಡಿದರೆ ನಿನ್ನ ಸಾಮರ್ಥ್ಯ ಹಿಗ್ಗುವುದಿಲ್ಲ, ಮಾಡದಿದ್ದರೆ ಕುಗ್ಗುವುದೂ ಇಲ್ಲ. ದೇಹಾದ್ಯಭಿಮಾನವಿಲ್ಲದಿರುವುದರಿಂದ ಕರ್ಮಜನ್ಯವಾದ ಸುಖದಿಂದ ನೀನು ಹಿಗ್ಗುವುದಿಲ್ಲ. ದುಃಖದಿಂದ ಕುಗ್ಗುವುದೂ ಇಲ್ಲ. ಅದರಿಂದ ನೀನು ಕರ್ಮ ಮಾಡುವುದು ಕೇವಲ ನಟನೆ. ನಾವು ಕರ್ಮಾಧೀನರು. ರಾಜಸೂಯಯಾಗವನ್ನು ಮಾಡುತ್ತೇವೆ. ನೀನು ಮಾಡಿಸಬೇಕು' ಹೀಗೆ ಕೃಷ್ಣನಿಂದ ಅನುಮತಿ ಪಡೆದು ವೇದವೇತ್ತರಾದ ಶ್ರೀವೇದವ್ಯಾಸರು ಭರದ್ವಾಜ ಸುಮಂತು ಗೌತಮ ಪರಶುರಾಮ ಮುಂತಾದ ಮುನಿಗಳನ್ನು ಪುರೋಹಿತರನ್ನಾಗಿ ವರಣ ಮಾಡಿದ. ದ್ರೋಣ ಭೀಷ್ಮ ಕೃಪ ಧೃತರಾಷ್ಟ್ರ ಅವನ ಮಕ್ಕಳು ವಿದುರ ಮುಂತಾದವರನ್ನು ಯಾಗಕ್ಕೆ ಆಹ್ವಾನಿಸಿದ.

ಎಲ್ಲ ರಾಜರೂ ನಾಲ್ಕು ವರ್ಣದ ಜನರೂ ಯಾಗವನ್ನು ನೋಡಲು ಬಯಸಿ ಬಂದರು. ಋತ್ವಿಜರು ಬಂಗಾರದ ನೇಗಿಲಿನಿಂದ ಭೂಶೋಧನ ಮಾಡಿ ಧರ್ಮರಾಜನನ್ನು ಯಜ್ಞದಲ್ಲಿ ದೀಕ್ಷಿತನನ್ನಾಗಿ ಮಾಡಿದರು. ಹಿಂದೆ ವರುಣ ಯಾಗ ಮಾಡಿದಾಗ ಹೇಗೋ ಹಾಗೇ ಈಗಲೂ ಯಜ್ಞಕ್ಕೆ ಬಂಗಾರದ ಸಲಕರಣೆಗಳೇ ಇದ್ದುವು. ಬ್ರಹ್ಮಾದಿ ದೇವತೆಗಳೂ ಸಿದ್ಧ ಗಂಧರ್ವ ವಿದ್ಯಾಧರಾದಿಗಳೂ ಆಹ್ವಾನಿತರಾದ ರಾಜರೂ ರಾಜಪತ್ನಿಯರೂ ಬಂದು ಧರ್ಮರಾಜನ ವೈಭವವನ್ನು ಕಂಡರು. ಕೃಷ್ಣಭಕ್ತನಾದ ಧರ್ಮರಾಜನಿಗೆ ಈ ರೀತಿಯ ವೈಭವ ಉಚಿತ ಎಂದು ತಿಳಿದರು. ಆಶ್ಚರ್ಯ ಪಡಲಿಲ್ಲ. ದೇವತೆಗಳು ವರುಣನಿಂದ ಯಾಗ ಮಾಡಿಸಿದಂತೆ ದೇವವರ್ಚಸ್ವಿಗಳಾದ

ಋತ್ವಿಜರು ಧರ್ಮರಾಜನಿಂದ ಯಾಗ ಮಾಡಿಸಿದರು.

ಸೋಮರಸ ಹಿಂಡುವ ದಿನದಲ್ಲಿ ಮಹಾತ್ಮರಾದ ರಾಜರನ್ನೂ ಮುನಿಗಳನ್ನೂ ಸನ್ಮಾನಿಸುವ ಕಾರ್ಯಕ್ರಮವಿದೆ. ಅವರೆಲ್ಲರಲ್ಲಿ ಅಗ್ರಗಣ್ಯನಾದ ಒಬ್ಬ ವ್ಯಕ್ತಿಗೆ ಅಗ್ರಪೂಜೆ ಇದೆ. ಅದಕ್ಕೆ ಯೋಗ್ಯನಾದ ವ್ಯಕ್ತಿ ಯಾರೆಂದು ವಿಚಾರ ಮಾಡಿದಾಗ ಸಭಾಪತಿಗಳಲ್ಲಿ ಒಬ್ಬೊಬ್ಬರ ಅಭಿಪ್ರಾಯ ಒಂದೊಂದು ತೆರನಾಗಿತ್ತು. ನಿರ್ಣಯಕ್ಕೆ ಬರಲಾಗಲಿಲ್ಲ.

ಸಹದೇವ 'ಯಾದವರ ಅರಸನಾದ ಶ್ರೀಕೃಷ್ಣನೆ ಅಗ್ರಪೂಜೆಗೆ ಅರ್ಹ' ಎಂದ. ಶ್ರೀಕೃಷ್ಣನೆ ಸಕಲದೇವತಾನಾಮಗಳಿಂದ ಮುಖ್ಯವಾಗಿ ಕರೆಸಿಕೊಳ್ಳುವವನು, ಇಡಿ ಪ್ರಪಂಚವೆ ಅವನ ಅಧೀನವಾಗಿದೆ. ಅಗ್ನಿ ಆಹುತಿ ಮಂತ್ರ ಜ್ಞಾನ ಯೋಗ ಸಮಾಧಿ ಮುಂತಾದುವೆಲ್ಲವೂ ಅವನನ್ನು ಒಲಿಸಿಕೊಳ್ಳುವುದಕ್ಕಾಗಿ ಇವೆ. ಅವನೇ ಸರ್ವೋತ್ತಮ. ಉತ್ಪತ್ತಿ ರಹಿತನಾಗಿದ್ದು ಎಲ್ಲವನ್ನು ಸೃಜಿಸಿ ಪಾಲಿಸಿ ಲಯಗೈಯುತ್ತಾನೆ. ~~ನಿಷ್ಕಾಮಕರ್ಮವನ್ನು ಮುಮುಕ್ಷುಗಳಿಂದ ಮಾಡಿಸುತ್ತಾನೆ. ಸಕಲ~~ ಪುರುಷಾರ್ಥಗಳನ್ನು ನೀಡುತ್ತಾನೆ. ಸರ್ವಾಂತರ್ಯಾಮಿ ಅವನೆ ಆದ್ದರಿಂದ ಅವನಿಗೆ ಸನ್ಮಾನ ಮಾಡಿದರೆ ಎಲ್ಲರಿಗೂ ತನಗೂ ಸನ್ಮಾನ ಮಾಡಿದಂತಾಗುತ್ತದೆ. ದಾನ ಪೂರ್ಣಫಲ ನೀಡಬೇಕಾದರೆ ಪೂರ್ಣನಾದ ಅವನಿಗೇ ದಾನ ನೀಡಬೇಕು' ಎಂದ. ತಮ್ಮನಾದ ಸಹದೇವ ಹೇಳಿದ್ದನ್ನು ಕೇಳಿ ಸಭಾಸದರ ಅಭಿಪ್ರಾಯವೂ ಅದೇ ಆಗಿದೆ ಎಂದು ತಿಳಿದು ಧರ್ಮರಾಜ ಸಂತೋಷದಿಂದ ಭಕ್ತಿಯಿಂದ ಶ್ರೀಕೃಷ್ಣನಿಗೆ ಅಗ್ರಪೂಜೆ ನೀಡಿದ. ಅವನ ಪಾದ ತೊಳೆದು ಆ ಜಲವನ್ನು ಎಲ್ಲ ಬಂಧುಮಿತ್ರರೊಂದಿಗೆ ತಲೆಯಲ್ಲಿ ಧರಿಸಿದ. ಬಹಳ ಬೆಲೆಬಾಳುವ ವಸ್ತ್ರಾಭರಣಗಳಿಂದ ಸನ್ಮಾನಿಸಿದ. ಆನಂದಬಾಷ್ಪಸುರಿವ ಕಣ್ಣುಗಳಿಂದ ಅವನನ್ನು ನೋಡಲು ಅಶಕ್ತನಾದ. ಎಲ್ಲ ಜನರೂ ನಮಸ್ಕಾರ ಜಯಕಾರ ಮಾಡಿದರು. ಆಗಸದಿಂದ ಹೂಮಳೆ ಸುರಿಯಿತು.

ಆದರೆ ಶಿಶುಪಾಲ ಅಸಹನೆಯಿಂದ ಎದ್ದು ನಿಂತು ಕೈ ಮೇಲೆತ್ತಿ ಭಗವಂತನ ಬಗ್ಗೆ ನಿಷ್ಠುರವಾಗಿ ನುಡಿದ, 'ಎಳೆಯರ ಮಾತಿಗೆ ಹಿರಿಯರ ಬುದ್ಧಿ ಪಲ್ಲಟವಾಗುತ್ತಿದೆ. ತಪಸ್ಸು ವಿದ್ಯೆ ಮುಂತಾದ ಗುಣಗಳುಳ್ಳ ಪೂಜ್ಯರು ಮುನಿಗಳು ಇರುವಾಗ ಕುಲಕ್ಕೆ ಕಳಂಕ

ತರುವ ಈ ಗೊಲ್ಲನಿಗೆ ಹೇಗೆ ಸನ್ಮಾನ ಮಾಡಿದಿರಿ? ಅದಕ್ಕೆ ಅವನು ಹೇಗೆ ಅರ್ಹನಾಗಿದ್ದಾನೆ? ಈತನಿಗೆ ವರ್ಣ ಆಶ್ರಮ ಕುಲಗಳಿಲ್ಲ. ಧರ್ಮ ಬಹಿಷ್ಕೃತ ಗುಣಹೀನ ದುರಾಚಾರಿ ಈತ. ಇವನ ಕುಲ ಯಯಾತಿಯಿಂದ ಶಾಪಗ್ರಸ್ತವಾದ ಯದುಕುಲ. ಮದ್ಯಪಾನ ಮಾಡಿ ಮತ್ತರಾಗುವವರ ಕುಲ. ಬ್ರಹ್ಮರ್ಷಿಗಳ ವಾಸಸ್ಥಾನವನ್ನು ಬಿಟ್ಟು ಸಮುದ್ರಮಧ್ಯದಲ್ಲಿ ಅಡಗಿದ್ದು ಕಳ್ಳ ದರೋಡೆಕೋರರಂತೆ ಜನರಿಗೆ ಪೀಡೆ ಕೊಡುತ್ತಾರೆ. ಇಂಥ ಯಾದವಕುಲದವನು ಕೃಷ್ಣ ಸನ್ಮಾನಕ್ಕೆ ಅರ್ಹನೆ? ಕಾಗೆ ಹವಿಸ್ಸನ್ನು ಉಣಲು ಯೋಗ್ಯವೆ?'

ಹೀಗೆ ಶಿಶುಪಾಲ ಹೇಳುತ್ತಿದ್ದರೂ ಸಿಂಹ ನರಿಯ ಕೂಗನ್ನು ಲೆಕ್ಕಿಸದಿರುವಂತೆ ಶ್ರೀಕೃಷ್ಣ ಏನೂ ಹೇಳದೆ ಸುಮ್ಮನಿದ್ದ. ಸಭಾಸದರು ಕಿವಿ ಮುಚ್ಚಿಕೊಂಡು ಶಿಶುಪಾಲನನ್ನು ಬೈದು ಸಭಾತ್ಯಾಗ ಮಾಡಿದರು. ಭಗವಂತನ ಭಗವದ್ಭಕ್ತರ ನಿಂದೆ ಕೇಳಿ ಬರುತ್ತಿದ್ದರೆ ಆಚೆ ತೊಲಗಬೇಕು. ಇಲ್ಲದಿದ್ದರೆ ಅವನು ಪುಣ್ಯವನ್ನು ಕಳೆದುಕೊಂಡು ನರಕ ಭಾಗಿಯಾಗುತ್ತಾನೆ. ಪಾಂಡವರೂ ಮತ್ಸ್ಯ ಕೇಕಯ ಸೃಂಜಯರೂ ಆಯುಧ ಹಿಡಿದು ಶಿಶುಪಾಲನನ್ನು ಕೊಲ್ಲಲು ಹೊರಟರು. ಶಿಶುಪಾಲನೂ ಕತ್ತಿ ಗುರಾಣಿಗಳನ್ನು ಎತ್ತಿದ. ಶ್ರೀಕೃಷ್ಣ ತನ್ನವರನ್ನು ತಡೆದು ನಿಲ್ಲಿಸಿ, ತನ್ನ ಕಡೆಗೆ ನುಗ್ಗಿ ಬಂದ ಶಿಶುಪಾಲನ ಶಿರವನ್ನು ಚಕ್ರದಿಂದ ಕತ್ತರಿಸಿದ. ಶಿಶುಪಾಲನ ಕಡೆಯ ರಾಜರು ಭಯದಿಂದ ಓಡಿಹೋದರು. ಶಿಶುಪಾಲನ ಮೈಯಿಂದ ಜಯನೆಂಬ ವೈಕುಂಠದ್ವಾರಪಾಲಕನ ತೇಜಸ್ಸು ಎಲ್ಲ ಜನರು ನೋಡುತ್ತಿದ್ದಂತೆ ಶ್ರೀಕೃಷ್ಣನನ್ನು ಪ್ರವೇಶಿಸಿತು. ಅದೇ ಶರೀರದಲ್ಲಿ ಇದ್ದ ಹಿರಣ್ಯಕಶಿಪು ದೈತ್ಯ ನರಕದಲ್ಲಿ ಬಿದ್ದ.

ಧರ್ಮರಾಜ ಋತ್ವಿಜರಿಗೂ ಸದಸ್ಯರಿಗೂ ಯಥೇಚ್ಛ ದಕ್ಷಿಣೆ ನೀಡಿ ಅವಭೃಥೇಷ್ಟಿಯನ್ನು ನಡೆಸಿದ. ಅವಭೃಥ ಸ್ನಾನಮಾಡಿ ಬ್ರಾಹ್ಮಣ ಕ್ಷತ್ರಿಯರಿಂದ ತುಂಬಿದ ಸಭೆಯಲ್ಲಿ ದೇವೇಂದ್ರನಂತೆ ಶೋಭಿಸಿದ. ದೇವ ಮನುಷ್ಯ ಗಂಧರ್ವಾದಿಗಳು ಧರ್ಮರಾಜನಿಂದ ಸತ್ಕಾರ ಪಡೆದು ಶ್ರೀಕೃಷ್ಣನನ್ನೂ ಯಾಗವನ್ನೂ ಹೊಗಳುತ್ತ ತಮ್ಮ ಸ್ಥಳಗಳಿಗೆ ಹಿಂತಿರುಗಿದರು.

❖❖❖

ಅಧ್ಯಾಯ - ೮೫

ಅಧ್ಯಾಯ ಸಾರಾಂಶ

ಧರ್ಮರಾಜನ ರಾಜಸೂಯಯಾಗದಲ್ಲಿ ಅವನ ಬಂಧುಗಳು ಒಬ್ಬೊಬ್ಬರೂ ಪ್ರೀತಿಯಿಂದ ತಮಗೆ ಇಷ್ಟವಾದ ಒಂದೊಂದು ಸೇವಾಕಾರ್ಯ ವಹಿಸಿಕೊಂಡು ನಿರ್ವಹಿಸಿದರು. ಭೀಮಸೇನ ಅಡಿಗೆಮನೆ ಮೇಲ್ವಿಚಾರಣೆ ನೋಡಿಕೊಂಡ. ದುರ್ಯೋಧನ ಧನಾಧ್ಯಕ್ಷನಾದ. ಸಹದೇವ ಅತಿಥಿಸತ್ಕಾರ ಕಾರ್ಯವನ್ನು ನಕುಲ ಹಣ ಕೂಡಿಸುವುದನ್ನು ಅರ್ಜುನ ಸಜ್ಜನರ ಸೇವೆಯನ್ನು ಶ್ರೀಕೃಷ್ಣ ವಿಪ್ರರ ಪಾದಪ್ರಕ್ಷಾಳನೆಯನ್ನು ದ್ರೌಪದಿ ಅನ್ನ ಉಣಬಡಿಸುವುದನ್ನು ಕರ್ಣ ದಾನಕೊಡುವುದನ್ನು ಹೀಗೇ ಯುಯುಧಾನ ವಿಕರ್ಣ ಸಾತ್ಯಕಿ ವಿದುರ ಮುಂತಾದವರು ಮತ್ತು ಬಾಹ್ಲೀಕನ ಪುತ್ರರು ಎಲ್ಲರೂ ನಾನಾ ಕಾರ್ಯಗಳನ್ನು ನಿರ್ವಹಿಸುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಋತ್ವಿಜರು ಸದಸ್ಯರು ಹತ್ತಿರದ ಬಂಧು ಗಳೆಲ್ಲರೂ ಉಡುಗೊರೆ ದಕ್ಷಿಣೆಗಳನ್ನು ಪಡೆದರು. ಶಿಶುಪಾಲ ಸತ್ತು ಶ್ರೀಕೃಷ್ಣನ ಪಾದಗಳಲ್ಲಿ ಸೇರಿ ಹೋದ ಬಳಿಕ ಅವಭೃಥ ಸ್ನಾನ ನಡೆಯಿತು.

ಅವಭೃಥ ಮಹೋತ್ಸವದ ಮಂಗಳವಾದ್ಯಗಳು ನೆಲದಲ್ಲಿ ಮಾತ್ರವಲ್ಲದೆ ದೂರದ ಬಾನಂಗಳದಲ್ಲೂ ಕೂಡ ಮೊಳಗಿದುವು. ನರ್ತಕರು ಗಾಯಕರು ಗುಂಪುಗುಂಪಾಗಿ ಸೇರಿ ಎಲ್ಲೆಡೆ ನೃತ್ಯಗಾನ ಗಳನ್ನು ನಡೆಸಿದರು. ಎಲ್ಲ ರಾಜರೂ ಸೈನ್ಯಗಳೊಂದಿಗೆ ಹೊರಟರು. ಸದಸ್ಯರು ಋತ್ವಿಜರು ಬ್ರಾಹ್ಮಣೋತ್ತಮರು ವೇದಘೋಷ ಮಾಡುತ್ತ, ನರನಾರಿಯರು ಓಕುಳಿಯಾಡುತ್ತ ನಡೆದರು. ಪುರುಷರು ವಾರಾಂಗನೆಯರಿಗೂ ವಾರಾಂಗನೆಯರು ಪುರುಷ ರಿಗೂ ಎಣ್ಣೆ ಹಾಲು ಪನ್ನೀರು ಕುಂಕುಮ ಕೇಸರಿ ಬೆರೆಸಿದ ನೀರನ್ನು ಎರಚುತ್ತ ನಡೆದರು.

ಮೇಲೆ ಆಕಾಶದಲ್ಲಿ ವಿಮಾನಗಳಲ್ಲಿ ಕುಳಿತು ದೇವತಾಸ್ತ್ರೀಯರು ಅವಭೃಥೋತ್ಸವವನ್ನು ನೋಡುತ್ತಿದ್ದಂತೆ ರಾಜಪತ್ನಿಯರ ಮೇಲೆ ಅವರ ಸಖಿಯರು ಸೋದರಮಾವನ ಮಕ್ಕಳು ಮೈದುನರು ಓಕುಳಿ ಎರಚಿದರು. ಒದ್ದೆ ಬಟ್ಟೆಯಲ್ಲಿ ಅವರ ಅಂಗಾಂಗಗಳು

ಕಾಣುವಂತಾದುವು. ಅದರಿಂದ ಕಾಮಿಗಳಿಗೆ ಚಿತ್ತ ಚಾಂಚಲ್ಯವೂ ಉಂಟಾಯಿತು. ಗಂಗಾನದಿಯಲ್ಲಿ ಅವಭೃಥೇಷ್ಟಿ ಮಾಡಿ ಧರ್ಮರಾಜ ದ್ರೌಪದಿಯೊಂದಿಗೆ ಅವಭೃಥಸ್ನಾನ ಮಾಡಿದ. ದೇವ ಋಷಿ ಪಿತೃ ಮುಂತಾದವರು ದುಂದುಭಿಘೋಷದೊಂದಿಗೆ ಹೂಮಳೆಗರೆದರು. ಧರ್ಮರಾಜ ನೂತನ ವಸ್ತ್ರಾಭರಣಗಳನ್ನು ಧರಿಸಿ ಋತ್ವಿಜರು ಬ್ರಾಹ್ಮಣರು ಬಂಧುಮಿತ್ರರೆಲ್ಲರಿಗೂ ವಸ್ತ್ರಾಭರಣ ಗಳನ್ನು ನೀಡಿದ. ಎಲ್ಲರೂ ಅವನಿಂದ ಸತ್ಕಾರ ಪಡೆದು ಹೋಗಿ ಬರುವೆವೆಂದು ಹೇಳಿ ತಮ್ಮ ಮನೆಗಳಿಗೆ ತೆರಳಿದರು. ಅಮೃತವನ್ನು ಎಷ್ಟು ಕುಡಿದರೂ ತೃಪ್ತಿಯಾಗುವುದಿಲ್ಲ. ಹಾಗೇ ಎಲ್ಲರಿಗೂ ಈ ರಾಜಸೂಯಯಾಗವನ್ನು ಎಷ್ಟು ಹೊಗಳಿದರೂ ಸಾಕೆನಿಸಲಿಲ್ಲ. ಧರ್ಮರಾಜನ ಸಂತೋಷಕ್ಕಾಗಿ ಶ್ರೀಕೃಷ್ಣ ಇಂದ್ರಪ್ರಸ್ಥದಲ್ಲಿಯೇ ಉಳಿದು ಸಾಂಬ ಮೊದಲಾದ ಯದುವೀರರನ್ನು ದ್ವಾರಕೆಗೆ ಕಳಿಸಿದ.

ಸೃಷ್ಟಿಕರ್ತನಾದ ಶ್ರೀಕೃಷ್ಣನ ಅನುಗ್ರಹದಿಂದ ಇಂದ್ರಪ್ರಸ್ಥ ಒಂದರಲ್ಲಿಯೇ ಕುಬೇರ ಬಲಿಚಕ್ರವರ್ತಿ ದೇವೇಂದ್ರರ ಎಲ್ಲ ಐಶ್ವರ್ಯಗಳೂ ಮನೆ ಮಾಡಿದ್ದುವು. ಆ ಐಶ್ವರ್ಯದಲ್ಲಿ ಓಲಾಡುತ್ತ ದ್ರೌಪದಿ ಪತಿಗಳನ್ನು ಓಲೈಸುವುದು, ಕೃಷ್ಣನ ಸಾವಿರಾರು ಪತ್ನಿಯರು ಅಮೂಲ್ಯ ವಸ್ತ್ರಾಭರಣ ಭೂಷಿತರಾಗಿ ಇಂದ್ರಪ್ರಸ್ಥದ ನೆಲದ ಮೇಲೆ ಕಾಲ್ಗೆಜ್ಜೆ ಧ್ವನಿ ಮಾಡುತ್ತ ಓಡಾಡುತ್ತಿರುವುದು, ಜಗತ್ತೇ ಹೊಗಳಿಕೊಂಡಾಡುವಂತೆ ನಡೆದ ರಾಜಸೂಯದ ವೈಭವ– ಇವೆಲ್ಲವನ್ನೂ ನೋಡಿನೋಡಿ ದುರ್ಯೋಧನನ ಹೊಟ್ಟೆಯಲ್ಲಿ ಕಿಚ್ಚು ಉರಿಯಿತು.

ಒಮ್ಮೆ ಧರ್ಮರಾಜ ತಮ್ಮಂದಿರೊಡನೆ ಬಂಧುಗಳೊಡನೆ ಮತ್ತು ತನ್ನ ಕಣ್ಮಣಿಯಾದ ಶ್ರೀಕೃಷ್ಣನೊಡನೆ ಮಯನಿರ್ಮಿತ ಸಭಾಭವನ ದಲ್ಲಿ ದೇವೇಂದ್ರನಂತೆ ಬಂಗಾರದ ಸಿಂಹಾಸನದಲ್ಲಿ ಕುಳಿತಿದ್ದ. ಹೊಗಳುಭಟರಿಂದ ಹೊಗಳಿಸಿಕೊಂಡು ಚಾಮರಗಳಿಂದ ಬೀಸಿ ಕೊಂಡು ಬ್ರಾಹ್ಮಣರಿಂದ ಸೇವಿಸಲ್ಪಡುತ್ತಿದ್ದ. ದುರ್ಯೋಧನ ಆ ಸಭಾಭವನಕ್ಕೆ ಬಂದ.

❖❖❖

ಅಧ್ಯಾಯ - ೮೬

ಅಧ್ಯಾಯ ಸಾರಾಂಶ

ಮಯಾಸುರ ನಿರ್ಮಿಸಿದ್ದ ಆ ಸಭಾಭವನದಲ್ಲಿ ಅವನ ಮಾಯೆ ಯನ್ನು ಅರಿಯದೆ ಇಂದ್ರನೀಲಮಣಿಯ ನೆಲವನ್ನು ನೀರೆಂದು ಬಗೆದು ಉಟ್ಟಬಟ್ಟೆಯನ್ನು ಮೇಲೆತ್ತಿ ನಿದಾನವಾಗಿ ಹೆಜ್ಜೆ ಹಾಕಿದ. ಎಲ್ಲರೂ ನೋಡಿ ನಕ್ಕರು. ಮುಂದೆ ಒಂದು ಕೊಳವಿತ್ತು. ಅದನ್ನು ಸ್ಫಟಿಕದ ನೆಲವೆಂದು ಬಗೆದು ನೀರಿನಲ್ಲಿ ಬಿದ್ದ. ಭೀಮ ನೋಡಿ ಜೋರಾಗಿ ನಕ್ಕ. ಸ್ತ್ರೀಯರೂ ನಕ್ಕರು. ರಾಜರೂ ನಕ್ಕರು. 'ನಗಬೇಡಿರಿ' ಎಂದು ಧರ್ಮರಾಜ ಹೇಳುತ್ತಿದ್ದರೂ ಶ್ರೀಕೃಷ್ಣನ ನಸುನಗೆಯಿಂದ ಅವರಿಗೆ ಅವನ ಅನುಮತಿ ದೊರೆತಂತಾಗಿತ್ತು. ಧರ್ಮರಾಜ ಸಮಾಧಾನದ ಮಾತನ್ನು ಹೇಳಿ ವಸ್ತ್ರಾಭರಣಗಳನ್ನು ಕಳಿಸಿ ಬಳಿಗೆ ಬರಲು ಹೇಳಿಕಳಿಸಿದರೂ ದುರ್ಯೋಧನ ಬರಲಿಲ್ಲ. ನಾಚಿಕೆಯಿಂದ ತಲೆ ತಗ್ಗಿಸಿಕೊಂಡು ಕೋಪದಿಂದ ಉರಿಯುತ್ತ ಹಸ್ತಿನಾವತಿಗೆ ಹೊರಟುಹೋದ. ಭೂಭಾರ ಕಳೆಯಲು ಸಂಕಲ್ಪಿಸಿದ್ದ ಶ್ರೀಕೃಷ್ಣ ತಾನು ಮನಸ್ಸಿನಲ್ಲಿ ಅಂದುಕೊಂಡಿದ್ದೇ ಆಯಿತೆಂದು ಸುಮ್ಮನಿದ್ದ. ಆಗ ಸಭೆಗೆ ನಾರದರು ಬಂದು ಧರ್ಮರಾಜನ ಬಳಿಯಲ್ಲಿ ಕುಳಿತರು. ಧರ್ಮರಾಜ ನಮಿಸಿ 'ಪೂಜ್ಯರೆ, ತಾವು ಎಲ್ಲೆಡೆ ಸದಾ ಸಂಚಾರ ಮಾಡುವವರು. ಎಲ್ಲವನ್ನೂ ಪ್ರತ್ಯಕ್ಷ ಕಾಣುವವರು. ಈಗ ಭೂಮಿಯಲ್ಲಿರುವ ರಾಜರುಗಳ ಪೈಕಿ ಯಾರು ಪರ ರಾಜ್ಯದ ಮೇಲೆ ಆಕ್ರಮಣಕ್ಕೆ ಹೊರಟಿರುತ್ತಾನೆ?' ಎಂದ.

ನಾರದರು ನುಡಿದರು, 'ರಾಜ, ಶ್ರೀಕೃಷ್ಣನ ಪ್ರಭಾವದಿಂದ ಎಲ್ಲ ರಾಜರೂ ದರ್ಪವನ್ನು ಕಳೆದುಕೊಂಡು ಸುಮ್ಮನಿದ್ದಾರೆ. ಆದರೆ ಕ್ಷತ್ರಿಯರಲ್ಲೆಲ್ಲ ದುರಾಗ್ರಹಿಯಾದ ಸಾಲ್ವರಾಜನೊಬ್ಬ ದ್ವಾರಕೆಯ ಮೇಲೆ ಆಕ್ರಮಣಕ್ಕೆ ಹೊರಟಿದ್ದಾನೆ. ಹಂಸಡಿಭಿಕರು ಶ್ರೀಕೃಷ್ಣನಿಂದ ಹತರಾದ ಬಳಿಕ ಈತ ಕೃಷ್ಣನ ಮೇಲಿನ ದ್ವೇಷದಿಂದ ರುಕ್ಮಿ ಮುಂತಾದ ರಾಜರನ್ನು ಒಟ್ಟುಗೂಡಿಸಿದ್ದಾನೆ. ಭೂಮಿಯಲ್ಲಿ ಯಾದವರಿಲ್ಲದಂತೆ ಮಾಡುವೆನೆಂದು ಪ್ರತಿಜ್ಞೆ ಮಾಡಿದ್ದಾನೆ. ಬಹುವರ್ಷಕಾಲ

ದಿನಕ್ಕೊಂದು ಮುಷ್ಟಿ ಉಸುಕನ್ನು ತಿಂದು ತಪಗೈದು ಶಿವನನ್ನು ಆರಾಧಿಸಿ ಮಯನಿರ್ಮಿತವಾದ ಸೌಭವೆಂಬ ಸಂಚಾರಿ ನಗರವನ್ನು ಪಡೆದಿದ್ದಾನೆ. ಅದು ಶತ್ರುಗಳಿಗೆ ವಶವಾಗದೆ ತನ್ನ ಮನಬಂದಂತೆ ಸಂಚರಿಸುವ ವಿಮಾನ.' ಎಂದು ನಾರದರು ಹೇಳಿದಾಗ ಧರ್ಮರಾಜ ಶ್ರೀಕೃಷ್ಣನ ಮುಖವನ್ನು ನೋಡಿದ. ಶ್ರೀಕೃಷ್ಣ ನಿರಾಕುಲನಾಗಿ ನಸುನಕ್ಕು 'ಆಗಲಿ' ಎಂದ. ಇದು ಶ್ರೀಕೃಷ್ಣನ ಉನ್ನತ ವ್ಯಕ್ತಿತ್ವ. ಶ್ರೀಕೃಷ್ಣ ನಾರದರನ್ನು ಅಭಿನಂದಿಸಿ ಮನಸಿನಲ್ಲಿ 'ನನಗೆ ಬಹುದಿನಗಳಿಂದ ಬೇಕಾಗಿದ್ದ ಸಾಲ್ವ ತಾನೇ ಬಂದು ಬಿಟ್ಟ. ಒಳ್ಳೆಯದಾಯಿತು' ಎಂದುಕೊಂಡ. ಬಳಿಕ ದ್ವಾರಕೆಯ ರಕ್ಷಣೆಗೆ ಉಗ್ರಸೇನ ಯುಯುಧಾನ ಅಕ್ರೂರ ಕೃತವರ್ಮ ಮುಂತಾದವರನ್ನು ಕಳಿಸಿಕೊಟ್ಟ.

❖ ❖ ❖

ಅಧ್ಯಾಯ - ೮೭

ಅಧ್ಯಾಯ ಸಾರಾಂಶ

ತನ್ನ ಸ್ನೇಹಿತರಾದ ಜರಾಸಂಧ ಶಿಶುಪಾಲರು ಹತರಾದರೆಂದೂ ಧರ್ಮರಾಜ ರಾಜಸೂಯಯಾಗ ನಡೆಸಿದನೆಂದೂ ಕೇಳಿ ಕುಪಿತನಾದ ಸಾಲ್ವ, ತನ್ನ ತಮ್ಮಂದಿರಾದ ಹಂಸಡಿಭಿಕರನ್ನು ಯಾದವರು ಕೊಂದಿದ್ದನ್ನು ನೆನೆದು ದ್ವಾರಕೆಗೆ ದಂಡೆತ್ತಿ ಹೋದ. ಸೌಭ ವಿಮಾನವನ್ನೇರಿ ಅಂತರಿಕ್ಷದಲ್ಲಿ ನಿಂತು ಯುದ್ಧ ಮಾಡಿದ. ದ್ವಾರಕೆಯ ವನ ಉಪವನಗಳನ್ನು ಕೆಡಿಸಿದ. ಗೋಪುರ ಹೆಬ್ಬಾಗಿಲು ಕೋಟೆಗೋಡೆ ಉಪ್ಪರಿಗೆ ಮನೆಸಾಲುಗಳನ್ನು ಕೆಡವಿದ. ಅವನ ವಿಮಾನದಿಂದ ಆಯುಧಗಳು, ಬಂಡೆಗಲ್ಲು, ಮರ, ಸಿಡಿಲು, ಸರ್ಪ ಆಲಿಕಲ್ಲುಗಳ ಮಳೆ ಸುರಿಯಿತು. ಪ್ರಚಂಡವಾದ ಸುಂಟರಗಾಳಿ ಎದ್ದಿತು ಎಲ್ಲೆಡೆ ಧೂಳು ಕವಿಯಿತು. ತ್ರಿಪುರಾಸುರನ ಪೀಡೆಗೊಳಗಾದ ಭೂಮಿಯಂತೆ ದ್ವಾರಕೆಗೆ ನೆಮ್ಮದಿಯೆ ಇಲ್ಲದಂತಾಯಿತು. ಪ್ರದ್ಯುಮ್ನ ಹೆದರಬೇಡಿರೆಂದು ಎಲ್ಲರಿಗೂ ಅಭಯ ನೀಡಿದ. ಸಾತ್ಯಕಿ ಚಾರುದೇಷ್ಣ ಸಾಂಬ ಅಕ್ರೂರ ಮುಂತಾದ ವೀರರು ಸೈನ್ಯ ಸಮೇತರಾಗಿ ಹೊರಟರು.

ಸಾಲ್ವರಿಗೂ ಯಾದವರಿಗೂ ದೇವಾಸುರ ಸಂಗ್ರಾಮದಂಥ ರೋಮಾಂಚಕರ ಯುದ್ಧ ನಡೆಯಿತು. ರಾತ್ರಿಯ ಕತ್ತಲನ್ನು ಸೂರ್ಯ ನಾಶಮಾಡುವಂತೆ ಸಾಲ್ವನ ಮಾಯೆಯನ್ನು ಪ್ರದ್ಯುಮ್ನ ದಿವ್ಯಾಸ್ತ್ರಗಳಿಂದ ಕ್ಷಣದಲ್ಲಿ ನಾಶಮಾಡಿದ. ಇಪ್ಪತ್ತೈದು ಬಾಣಗಳಿಂದ ಸಾಲ್ವನ ಸೇನಾಧಿಪತಿಯನ್ನು ಹೊಡೆದ. ನೂರು ಬಾಣಗಳಿಂದ ಸಾಲ್ವನನ್ನು ಹೊಡೆದ. ಒಂದೊಂದು ಬಾಣದಿಂದ ಅವನ ಸೈನಿಕರನ್ನು, ಹತ್ತು ಹತ್ತು ಬಾಣಗಳಿಂದ ಸೇನಾಪತಿಗಳನ್ನು, ಮೂರು ಮೂರು ಬಾಣಗಳಿಂದ ಅವರ ವಾಹನಗಳನ್ನು ಹೊಡೆದ. ಮಯನ ಮಾಯೆಯಿಂದಾಗಿದ್ದ ಸೌಭ ವಿಮಾನ ಒಮ್ಮೆ ಬಹುರೂಪ ತಾಳುತ್ತಿತ್ತು. ಇನ್ನೊಮ್ಮೆ ಏಕರೂಪ, ಮತ್ತೊಮ್ಮೆ ಅದೃಶ್ಯವಾಗಿ, ಅದರ ಸ್ವರೂಪ ಏನೆಂದೆ ತಿಳಿಯದಂತಾಯಿತು. ಅದು ಒಮ್ಮೆ ನೆಲದಲ್ಲಿ ಕಾಣುತ್ತಿತ್ತು.

ಮತ್ತೊಮ್ಮೆ ಆಕಾಶದಲ್ಲಿ ಇನ್ನೊಮ್ಮೆ ಸಮುದ್ರದಲ್ಲಿಯೋ ಬೆಟ್ಟದ ಮೇಲೋ ಕಾಣಿಸಿಕೊಳ್ಳುತ್ತಿತ್ತು. ಉರಿವ ಬೆಂಕಿಯ ಕೊಳ್ಳಿಯಂತೆ ತಿರುಗುತ್ತ ಒಂದೆಡೆ ನಿಲ್ಲದಾಯಿತು. ಆದರೂ ಅದು ಎಲ್ಲೆಲ್ಲಿ ಕಂಡುಬರುವುದೋ ಅಲ್ಲಲ್ಲಿಗೇ ಯಾದವರು ಬಾಣಗಳನ್ನು ಎಸೆದರು. ಅದರಿಂದ ಸಾಲ್ವ ಆಗಾಗ ಮೂರ್ಛೆ ಹೊಂದಿದ. ಯಾದವರೂ ಬಹಳ ಪೀಡಿತರಾದರು. ಆದರೂ ಗೆದ್ದರೆ ಭೂಮಿ ಸತ್ತರೆ ಸ್ವರ್ಗ ಎಂದು ಬಗೆದು ಯುದ್ಧವನ್ನು ಮಾತ್ರ ಬಿಡಲಿಲ್ಲ.

ಬಲಿಷ್ಠನಾದ ದ್ಯುಮಾನ್ ಎಂಬ ಸಾಲ್ವನ ಮಂತ್ರಿ ಭಾರವಾದ ಗದೆಯಿಂದ ಪ್ರದ್ಯುಮ್ನನ ಎದೆಯನ್ನು ಹೊಡೆದು ಸಿಂಹನಾದ ಮಾಡಿದ. ಪ್ರದ್ಯುಮ್ನ ಮೂರ್ಛಿತನಾದ. ಅವನ ಸಾರಥಿ ದಾರುಕನ ಪುತ್ರ ಸಾರಥಿಯ ಕರ್ತವ್ಯವನ್ನು ಬಲ್ಲವನು. ಪ್ರದ್ಯುಮ್ನನನ್ನು ರಣರಂಗದಿಂದ ಬೇರೆಡೆಗೆ ಕೊಂಡೊಯ್ದ. ಎರಡು ಗಳಿಗೆಯಲ್ಲಿ ಎಚ್ಚರಗೊಂಡ ಪ್ರದ್ಯುಮ್ನ ಸಾರಥಿಯನ್ನು ಆಕ್ಷೇಪಿಸಿದ. 'ಸಾರಥಿ, ನೀನು ಮಾಡಿದ್ದು ಸರಿಯಲ್ಲ. ಸಾರಥಿಯ ಹೇಡಿತನದಿಂದ ಪಲಾಯನ ಮಾಡಿದವನು ಯಾದವರಲ್ಲಿ ನನ್ನಂತೆ ಬೇರೊಬ್ಬನಿಲ್ಲ. 'ರಣರಂಗದಿಂದ ನೀನೇಕೆ ಪಲಾಯನ ಮಾಡಿದೆ ಎಂದು ರಾಮಕೃಷ್ಣರು ಕೇಳಿದರೆ ನಾನೇನು ಉತ್ತರ ಹೇಳಲಿ? ಅತ್ತಿಗೆ ನಾದಿನಿಯರು ನಗುತ್ತ 'ನೀನು ಈ ಷಂಡತನವನ್ನು ಎಲ್ಲಿಂದ ಕಲಿತೆ' ಎಂದು ನನ್ನನ್ನು ಕೇಳುವುದು ನಿಶ್ಚಿತ.' ಸಾರಥಿ ನುಡಿದ, 'ಸಾರಥಿಯಾದವನ ಕರ್ತವ್ಯವನ್ನು ತಿಳಿದೇ ನಾನು ಹೀಗೆ ಮಾಡಿದ್ದೇನೆ. ರಥಿಕ ಪ್ರಾಣಾಪಾಯದಲ್ಲಿದ್ದರೆ ಸಾರಥಿ ಕಾಪಾಡಬೇಕು. ಸಾರಥಿ ಪ್ರಾಣಾಪಾಯದಲ್ಲಿದ್ದರೆ ರಥಿಕ ಕಾಪಾಡಬೇಕು. ಅದರಿಂದ ನೀನು ಶತ್ರುವಿನ ಗದೆ ಏಟಿನಿಂದ ಮೂರ್ಛಿತನಾದಾಗ ನಾನು ನಿನ್ನನ್ನು ಬೇರೆ ಕಡೆಗೆ ಒಯ್ಯಬೇಕಾಯಿತು.'

❖❖❖

ಅಧ್ಯಾಯ - ೮೮

ಅಧ್ಯಾಯ ಸಾರಾಂಶ

ಸಾರಥಿಯ ಮಾತನ್ನು ಕೇಳಿದ ಪ್ರದ್ಯುಮ್ನ ಆಯುಧವನ್ನೆತ್ತಿಕೊಂಡು ಹೇಳಿದ, 'ವೀರನಾದ ದ್ಯುಮಂತ ಧನುಸ್ಸನ್ನು ಹಿಡಿದು ನಿಂತಿದ್ದಾನೆ. ಅವನ ಬಳಿಗೆ ನನ್ನನ್ನು ಒಯ್ಯು' ಎಂದು. ಬಳಿಕ ನಾಲ್ಕು ಬಾಣಗಳಿಂದ ದ್ಯುಮಂತನ ನಾಲ್ಕು ಕುದುರೆಗಳನ್ನು ಕೊಂದ. ಒಂದು ಬಾಣದಿಂದ ಸಾರಥಿಯನ್ನು ಕೊಂದ. ಇನ್ನೆರಡು ಬಾಣಗಳಿಂದ ಅವನ ಬಿಲ್ಲನ್ನೂ ಧ್ವಜವನ್ನು ಕತ್ತರಿಸಿ ಮತ್ತೊಂದು ಬಾಣದಿಂದ ಅವನ ತಲೆಯನ್ನು ತರಿದ. ಗದ ಸಾತ್ಯಕಿ ಅಕ್ರೂರ ಮುಂತಾದವರು ಸಾಲ್ವನ ಸೈನ್ಯವನ್ನು ಸಂಹರಿಸಿದರು. ಸೈನಿಕರು ಶಿರಶ್ಛೇದ ಹೊಂದಿ ಸಮುದ್ರದಲ್ಲಿ ಬಿದ್ದರು. ಹೀಗೆ ಇಪ್ಪತ್ತೇಳು ದಿನಗಳ ಕಾಲ ಯುದ್ಧ ನಡೆಯಿತು.

ಬಳಿಕ ಶ್ರೀಕೃಷ್ಣ ಇಂದ್ರಪ್ರಸ್ಥದಿಂದ ದ್ವಾರಕೆಗೆ ಹೊರಟ. ಆಗಲೆ ಬಹಳ ಪೀಡಿತನಾದ ಸಾಲ್ವ ದ್ವಾರಕೆಯಿಂದ ತನ್ನ ರಾಜ್ಯಕ್ಕೆ ಹೊರಟ.

ಸಾಲ್ವ ಪಲಾಯನ ಮಾಡುವಾಗ ಸಾಂಬ ಬೆನ್ನಟ್ಟಿ ಬಂದು ಅವನ ಮಂತ್ರಿಯಾದ ಕ್ಷೇಮಧೂರ್ತಿಯನ್ನು ಬಾಣಗಳಿಂದ ಯಮಸದನಕ್ಕೆ ಅಟ್ಟಿದ. ಸಾಲ್ವನಿಗೆ ಎಲ್ಲರಿಗಿಂತ ಪ್ರಿಯನಾದ ವಿವಿಂದ ಎಂಬ ಸೇನಾಪತಿ ಪಲಾಯನ ಮಾಡುತ್ತಿದ್ದಾಗ ಪ್ರದ್ಯುಮ್ನ ತಡೆದು ಬಾಣಗಳಿಂದ ಹೊಡೆದ. ಆತ ಕತ್ತಿ ಗುರಾಣಿಗಳನ್ನು ಹಿಡಿದು ಇದಿರಿಸಿ ನಿಂತ. ಪ್ರದ್ಯುಮ್ನ ಕತ್ತಿಯಿಂದ ಅವನ ತಲೆಯನ್ನು ಸವರಿ ಹಾಕಿದ. ಹೀಗೆ ಮುಖ್ಯ ಸೇನಾಪತಿಗಳೆಲ್ಲರೂ ಹತರಾದಾಗ ಸಾಲ್ವನ ಸೈನ್ಯ ಪ್ರಾಣರಕ್ಷಣೆಗಾಗಿ ಮನಬಂದಲ್ಲಿಗೆ ಓಡಿತು.

ಶ್ರೀಕೃಷ್ಣ ಬಂದು ದ್ವಾರಕೆಯನ್ನು ನೋಡಿದಾಗ ಮನೆ ಗೋಪುರಗಳು ಕೋಟೆ ಗೋಡೆಗಳು ಮುರಿದಿದ್ದುವು. ರಾಜಬೀದಿ ಉಪವನ ಉದ್ಯಾನಗಳು ಹಾಳಾಗಿದ್ದವು. ಬಾವಿಗಳು ಕಲ್ಲುಗಳಿಂದ ತುಂಬಿದ್ದುವು. ವೇದಾಧ್ಯಯನ ನಿತ್ಯಾಗ್ನಿಹೋತ್ರಗಳೆಲ್ಲವೂ ನಿಂತುಹೋಗಿದ್ದುವು. 'ನಾನೀಗಲೆ ಸಾಲ್ವನನ್ನು ಬೆನ್ನಟ್ಟಿಹೋಗಿ ಕೊಂದ ನಂತರವೆ,

ಸೌಭ ವಿಮಾನವನ್ನು ಸಮುದ್ರದಲ್ಲಿ ಕೆಡವಿದ ನಂತರವೇ ದ್ವಾರಕೆಯನ್ನು ಪ್ರವೇಶಿಸುವೆನೆಂ'ದು ಶ್ರೀಕೃಷ್ಣ ಶಪಥಗೈದ.

ಶೈಬ್ಯ ಸುಗ್ರೀವ ಮೇಘಪುಷ್ಪ ಬಲಾಹಕ ಎಂಬ ಕುದುರೆಗಳನ್ನು ಕಟ್ಟಿದ, ಬಹಳ ಆಯುಧಗಳಿಂದ ತುಂಬಿದ ಸಾರಥಿದಾರುಕ ನಡೆಸುವ ಗರುಡಧ್ವಜಯುಕ್ತವಾದ ಉತ್ತಮ ರಥವನ್ನೇರಿ ಭಗವಾನ್ ಶ್ರೀಕೃಷ್ಣ ಮನೋವೇಗ ವಾಯುವೇಗಗಳಿಂದ ಸಾಲ್ವನನ್ನು ಬೆನ್ನಟ್ಟಿದ. ಸಮುದ್ರ ಮಧ್ಯದಲ್ಲಿದ್ದ ಸೌಭವಿಮಾನವನ್ನೂ ಅದರ ಮಧ್ಯದಲ್ಲಿದ್ದದ ಸಾಲ್ವನನ್ನೂ ಕಂಡ. ಸಾಲ್ವ ದಾರುಕನ ಮೇಲೆ ಶಕ್ತ್ಯಾಯುಧವನ್ನೆಸೆದ. ಧೂಮಕೇತುವಿನಂತೆ ದಿಕ್ಕುಗಳನ್ನು ಬೆಳಗಿಸುತ್ತ ವೇಗದಿಂದ ಬಂದು ಬೀಳುತ್ತಿದ್ದ ಆ ಶಕ್ತ್ಯಾಯುಧವನ್ನು ಶ್ರೀಕೃಷ್ಣ ಬಾಣಗಳಿಂದ ನೂರಾಗಿ ಕತ್ತರಿಸಿದ. ಸೂರ್ಯ ಕಿರಣಗಳಿಂದ ಆಕಾಶವನ್ನು ತುಂಬುವಂತೆ ಸಾಲ್ವನನ್ನೂ ಸೌಭವಿಮಾನವನ್ನೂ ಬಾಣಗಳಿಂದ ತುಂಬಿದ. ಶಾರ್ಙ್ಗವನ್ನು ಹಿಡಿದಿದ್ದ ಶ್ರೀಕೃಷ್ಣನ ಎಡಗೈಯನ್ನು ಸಾಲ್ವ ಬಾಣದಿಂದ ಹೊಡೆದ. ಆಗ ಶಾರ್ಙ್ಗ ಕೈಯಿಂದ ಜಾರಿ ಬಿದ್ದಿತು. ಯಾದವರು ಹಾಹಾಕಾರ ಮಾಡಿದರು.

ಸಾಲ್ವ ಗಟ್ಟಿಯಾಗಿ ಗರ್ಜಿಸಿ ನುಡಿದ. 'ದುರ್ಬುದ್ಧಿಯವನೆ, ಮೂರ್ಖನೆ, ದುರಾತ್ಮನಾದ ನೀನು ನನ್ನ ತಮ್ಮಂದಿರಾದ ಹಂಸಡಿಭಿಕರನ್ನು ಕೊಂದೆ. ನನ್ನ ಗೆಳೆಯನಾದ ಶಿಶುಪಾಲನಿಗೆ ಭಾರ್ಯೆಯಾಗಬೇಕಿದ್ದ ರುಕ್ಮಿಣಿಯನ್ನು ಅಪಹರಿಸಿದೆ. ಸಭಾ ಮಧ್ಯದಲ್ಲಿ ಕ್ಷತ್ರಿಯರು ವ್ಯಗ್ರಚಿತ್ತರಾಗಿ ನೋಡುತ್ತಿದ್ದಂತೆಯೆ ನನ್ನ ಗೆಳೆಯನಾದ ಶಿಶುಪಾಲನನ್ನು ಕೊಂದಿರುವೆ. ಯಾರಿಗೂ ಸೋಲದವನು ತಾನೆಂದು ತಿಳಿದಿರುವ ನಿನ್ನನ್ನು ಈಗಲೇ ಬಾಣ ಗಳಿಂದ ಯಮಲೋಕಕ್ಕೆ ಕಳಿಸುವೆನು.' ಶ್ರೀಕೃಷ್ಣ ನುಡಿದ, 'ವ್ಯರ್ಥವಾಗಿ ಜಂಬದ ಮಾತನ್ನಾಡುವೆ. ನಿನ್ನಲ್ಲಿ ಪೌರುಷವಿದ್ದರೆ ತೋರಿಸು. ಶೂರರಾದ ನಮಗೆ ಬರಿ ಬಾಯಿಮಾತು ಕೆಲಸಕ್ಕೆ ಬಾರದು. ಹೀಗೆ ಹೇಳಿ ಶ್ರೀಕೃಷ್ಣ ಗದೆಯಿಂದ ಸಾಲ್ವನ ಹೆಗಲ ಮೇಲೆ ಹೊಡೆದ. ಸಾಲ್ವ ರಕ್ತ ಕಾರುತ್ತ ನಡುಗಿದ. ಬಳಿಕ ಮಾಯೆಯಿಂದ ವಸುದೇವನ ತಲೆಗಡಿದು ತಂದು ವಿಮಾನವನ್ನು ಪ್ರವೇಶಿಸಿದಂತೆ ತೋರಿಕೊಂಡ. ಒಂದು ಮುಹೂರ್ತಕಾಲ ಶ್ರೀಕೃಷ್ಣ ಮೋಹ

ಗೊಂಡವನಂತೆ ನಟಿಸುತ್ತ ಸುಮ್ಮನೆ ನಿಂತಂತೆ, ಬಳಿಕ **ತನ್ನವರ** ಮಾತಿನಿಂದ ಅದನ್ನು ಮಾಯೆ ಎಂದು ತಿಳಿದುಕೊಂಡಂತೆ **ತೋರಿದ**.

'ಶ್ರೀಹರಿಗೆ ಶೋಕ ಮೋಹ ಉಂಟೆನ್ನುವುದನ್ನು ವೇದವಚನ ನಿರಾಕರಿಸುತ್ತದೆ. ಹಾಗಿರುವಾಗ ಸ್ಮೃತಿಕಾರರು ಶೋಕ ಮೋಹವನ್ನು ಒಪ್ಪಿ ಉಂಟೆನ್ನುವರೇನು? ಅಜ್ಞರಲ್ಲಿರಬಹುದಾದ ಶೋಕಮೋಹ ಮಮತೆ ಭಯಗಳು ಜ್ಞಾನವಿಜ್ಞಾನ ಮೂರ್ತಿಯಾದ ಲಕ್ಷ್ಮೀರಮಣ ರಲ್ಲಿ ಇರುವುದು ಶಕ್ಯವಿಲ್ಲ. ಶ್ರೀಹರಿಯ ಪಾದಸೇವೆಯಿಂದ ಭಕ್ತರು ಮುಕ್ತಿ ಪಡೆದು ಶೋಕಮೋಹ ದೂರರಾಗುತ್ತಾರೆ ಎಂದಮೇಲೆ ಶ್ರೀಹರಿಗೆ ಶೋಕಮೋಹಾದಿಗಳು ಇರಬಲ್ಲುವೆ?' ಹೀಗೆ ಭಕ್ತರು ಹೇಳಿದ ಮಾತನ್ನು ಕೇಳಿ ಶ್ರೀಕೃಷ್ಣ ಸೌಭ ಸಹಿತವಾಗಿ ಸಾಲ್ವನನ್ನು ನಾಶ ಮಾಡಲು ತೊಡಗಿದ.

ಚಕ್ರವನ್ನು ಆಗ್ನೇಯಾಸ್ತ್ರಮಂತ್ರದಿಂದ ಅಭಿಮಂತ್ರಿಸಿ ಸೌಭವಿಮಾನಕ್ಕೆ ಕಳಿಸಿದ. ಅದರ ಜ್ವಾಲೆಗೆ ಬೆಂದು ದೇವತೆಗಳು ಸ್ವರ್ಗವನ್ನು ಬಿಟ್ಟು ದಿಕ್ಕುದಿಕ್ಕುಗಳಿಗೆ ಓಡಿದರು. ಆ ಚಕ್ರ ಸೌಭವಿಮಾನವನ್ನು ಎರಡಾಗಿ ಸೀಳಿ ಶ್ರೀಕೃಷ್ಣನ ಕೈಗೆ ತಿರುಗಿ ಬಂದಿತು. ವಿಮಾನ ಸಮುದ್ರದಲ್ಲಿ ಮುರಿದು ಬಿದ್ದಿತು. ದೈತ್ಯಸೈನ್ಯ ತಂದುಕೊಟ್ಟ ಬೇರೆ ರಥವನ್ನೇರಿ ಸಾಲ್ವ ಶ್ರೀಕೃಷ್ಣನ ಮೇಲೆ ಗದೆಯನ್ನೆಸೆದ. ಶ್ರೀಕೃಷ್ಣ ಅದನ್ನು ಬಾಣಗಳಿಂದ ಮೂರಾಹಿ ಕತ್ತರಿಸಿ ಶಂಖನಾದಗೈದ. ಸಿಂಹನಾದ ಗೈದ. ಬಳಿಕ ಸಾಲ್ವನ ಕವಚ ಬಿಲ್ಲು ಕಿರೀಟಗಳನ್ನು ಬಾಣಗಳಿಂದ ಕತ್ತರಿಸಿ ಗದೆಯಿಂದ ರಥವನ್ನೂ ಪುಡಿಗೈದ. ರಥ ಸಾವಿರ ಚೂರಾಗಿ ನೀರಲ್ಲಿ ಬಿದ್ದಿತು. ಗದೆಯನ್ನು ಹಿಡಿದಿದ್ದ ಅವನ ತೋಳನ್ನು ಭಲ್ಲೆಯಿಂದ ಕತ್ತರಿಸಿ ಚಕ್ರದಿಂದ ಶಿರವನ್ನು ತರಿದ. ದೇವದುಂದುಬಿ ಮೊಳಗಿದುವು. ಹೂಮಳೆ ಸುರಿದುವು.

ಋಷಿಗಳು ಸೂತ ಮಾಗಧರು ಸ್ತುತಿಸುತ್ತಿದ್ದಂತೆ ಸೈನ್ಯಸಮೇತನಾಗಿ ಶ್ರೀಕೃಷ್ಣ ಸುಂದರವಾಗಿ ಅಲಂಕೃತವಾದ ದ್ವಾರಕೆಯನ್ನು ಪ್ರವೇಶಿಸಿದ. ಯಾದವರು ಗುರುಹಿರಿಯರು ಪೌರರು ದೇಶವಾಸಿಗಳೆಂದು ಎಲ್ಲ ಜನರಿಂದಲೂ ಪೂಜಿತನಾಗಿ ಪ್ರೇಮಪರವಶರಾದ ಹದಿನಾರು ಸಾವಿರ ಪತ್ನಿಯರನ್ನು ರಮಿಸುತ್ತ ಸಂತೋಷದಿಂದ ವಾಸಮಾಡಿದ.

❖❖❖

ಶ್ರೀಕೃಷ್ಣ ಗದೆಯಿಂದ ಸಾಲ್ವನ ಭುಜಕ್ಕೆ ಹೊಡೆದಾಗ ಸಾಲ್ವ ಮಾಯೆಯಿಂದ ವಸುದೇವನ ಶಿರಶ್ಛೇದ ಮಾಡಿದಂತೆ ತೋರಿಸಿ ತನ್ನ ಸೌಭವಿಮಾನವನ್ನು ಹತ್ತಿದ. ಆಗ ಒಂದು ಮುಹೂರ್ತ ಕಾಲ ಶ್ರೀಕೃಷ್ಣ ಮಾಯೆಯಿಂದ ವಂಚಿತನಾದಂತೆ ತೋರಿಕೊಂಡ.

ತತೋ ಮುಹೂರ್ತಾತ್‌ಪ್ರಕೃತಾವುಪಸ್ಥಿತ-
ಸ್ತತ್ರಾನುತಿಷ್ಠತ್ ಸ್ವಜನಾನುಸಂಗತಃ ।
ಮಹಾನುಭಾವಸ್ತದಬುಧ್ಯತಾಸುರೀಂ
ಮಾಯಾಂ ಸ ಸಾಲ್ವಪ್ರಕೃತಾಂ ಮಯೋದಿತಾಮ್ ॥ ೩೮ ॥

ಬಳಿಕ ಒಂದು ಮುಹೂರ್ತಕಾಲ ಪ್ರಕೃತಿಯಲ್ಲಿ ಬದ್ಧನಾಗಿ ಏನೂ ತಿಳಿಯದವನಂತೆ ರಣರಂಗದಲ್ಲಿ ಸುಮ್ಮನಿದ್ದ ಶ್ರೀಕೃಷ್ಣ, ಬಳಿಕ ಮಹಾನುಭಾವನಾದ ಆತ ತನ್ನವರ ಮಾತಿನಿಂದ (ಸ್ವಜನಾನುಸಂಗತಃ) ಅದನ್ನು ಮಯನ ಉಪದೇಶದಂತೆ ಸಾಲ್ವ ಪ್ರಯೋಗಿಸಿದ ಆಸುರೀಮಾಯೆ ಎಂದು ತಿಳಿದ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ ಸಾಲ್ವನ ಮಾಯೆ, ಅದರಿಂದ ಶ್ರೀಕೃಷ್ಣ ವಂಚಿತನಾಗಿ ಬಳಿಕ ಎಚ್ಚೆತ್ತುಕೊಳ್ಳುವುದು ಎಲ್ಲವೂ ಕೆಲವು ಋಷಿಗಳು ಹೇಳಿದ ಕಟ್ಟುಕಥೆ. ನಿಜವಾಗಿ ಸಾಲ್ವ ಮಾಯೆಯನ್ನು ತೋರಲೂ ಇಲ್ಲ, ಕೃಷ್ಣ ಮೋಸಹೋದುದೂ ಇಲ್ಲ ಎಂದು ಶುಕಮುನಿಯೇ ಅದನ್ನು ಹೇಳಿ ಕೊನೆಯಲ್ಲಿ ಸಕಾರಣವಾಗಿ ಸಮರ್ಥನೆ ಮಾಡುತ್ತಾರೆ. ಈ ಋಷಿಗಳ ಮಾತು ಪೂರ್ವೋತ್ತರ ವಿರುದ್ಧ, ಶ್ರೀಕೃಷ್ಣ ಸರ್ವಜ್ಞಸರ್ವಾಂತರ್ಯಾಮಿಯಾದ್ದರಿಂದ ಅವನಿಗೆ ಮಾಯೆಯಿಂದ ಯಾವುದೇ ಭ್ರಮೆ ಉಂಟಾಗುವುದೂ ಶಕ್ಯವಿಲ್ಲ, ಅವನ ಭಕ್ತರೇ ಮೋಹರಹಿತರಾಗುತ್ತಾರೆ ಎಂದಮೇಲೆ ಅವನಿಗೆ ಮೋಹ ಹೇಗೆ ಉಂಟಾದೀತು ಎಂದು ಭಾಗವತವೇ ಸಮರ್ಥನೆ ಮಾಡುತ್ತಿರುವಾಗ ಶ್ರೀಮದಾಚಾರ್ಯರು ಅನಾವಶ್ಯಕವಾಗಿ 'ಶ್ರೀಕೃಷ್ಣ ಸಾಲ್ವನ ಮಾಯೆಗೆ ಮೋಹಗೊಂಡಂತೆ ನಟಿಸಿದನೆಂ'ದು ಬ್ರಹ್ಮಾಂಡ ಪುರಾಣದ ವಚನವನ್ನೂ ಮತ್ತು ಅದಕ್ಕೆ ಮೂಲವಾದ ಋಗ್ವೇದಮಂತ್ರವನ್ನೂ ಉದಾಹರಿಸಿ ಏಕೆ ಕಷ್ಟಪಡುತ್ತಿದ್ದಾರೆ ಎನ್ನುವ ಸಂದೇಹ ನಮಗೆ ಬರುತ್ತಿದೆ.

ವಸ್ತುತಃ 'ಋಷಿ'ಗಳ ಮಾತು 'ಪೂರ್ವೋತ್ತರ ವಿರುದ್ಧ ಅಸಂಗತ' ಎನ್ನುವುದು ಅತ್ಯಂತ ಅನುಚಿತ, ವ್ಯಾಹತ. ಋಷಿಗಳ ಮಾತೆಂದರೆ ಅಸಂಗತವಾಗದು. ಅಸಂಗತವೆಂದರೆ ಅದು ಋಷಿಗಳ ಮಾತಾಗಿರಲಾರದು. 'ಶ್ರೀಕೃಷ್ಣ ಮಾಯೆಗೊಳಗಾಗಿ ಬಳಿಕ ಎಚ್ಚೆತ್ತುಕೊಂಡ' 'ತತೋ ಮುಹೂರ್ತಂ ಪ್ರಕೃತಾವುಪಪ್ಲುತಃ ಅಬುಧ್ಯತ' ಎಂದು ಹೇಳಿದ್ದು ಋಷಿಗಳಲ್ಲ, ಅದು ಶುಕಮುನಿಯ ಮಾತು. 'ಏವಂ ವದಂತಿ ರಾಜರ್ಷೇ' ಎಂದು ಮುಂದೆ ಬರುವ ಶ್ಲೋಕದಲ್ಲಿ 'ಸ್ಮೃತಿಕಾರರಾದ ಋಷಿಗಳು ವೇದವಿರುದ್ಧ

ವಾಗಿ ಭಗವಂತನಿಗೆ ಶೋಕಮೋಹಗಳನ್ನು ಸ್ಮೃತಿಗಳಲ್ಲಿ ಹೇಳುವರೆ? **ಸರ್ವಥಾ** ಇಲ್ಲ.' ಎಂದು ಭಕ್ತರು ಆಡಿದ ಮಾತು ಬರುತ್ತದೆ. ಅದನ್ನು ಕೇಳಿದ **ಬಳಿಕ, ಇನ್ನು** ನಟನೆ ಸಾಕೆಂದು, ನಿಲ್ಲಿಸಿ ಶ್ರೀಕೃಷ್ಣ ಸಾಲ್ವನ ಸಂಹಾರಕ್ಕೆ ತೊಡಗಿದ. **ಅಷ್ಟರವರೆಗೆ** ನಟನೆ ಮಾಡುತ್ತಿದ್ದುದನ್ನು 'ಶ್ರೀಕೃಷ್ಣ ಮಾಯೆಗೊಳಗಾಗಿ ಬಳಿಕ ಎಚ್ಚೆತ್ತುಕೊಂಡ' ಎಂದು ಶುಕಮುನಿ ಹೇಳಿದರು. 'ನಟನೆ' ಎಂದು ಹೇಳಲಿಲ್ಲ. 'ನಿಜವಾಗಿ ಮಾಯೆಗೊಳಗಾದ, ಎಚ್ಚೆತ್ತುಕೊಂಡ'ನೆಂದೇ ಭಾಗವತದ ಓದುಗನಿಗೆ ಭ್ರಮೆ ಉಂಟಾಗಬಾರದೆಂದು ಶ್ರೀಮದಾಚಾರ್ಯರು ಬ್ರಹ್ಮಾಂಡಪುರಾಣ ಹಾಗೂ ಶ್ರುತಿವಚನಗಳಿಂದ ಅವನಿಗೆ ಎಚ್ಚರ ನೀಡಿದ್ದಾರೆ.

ಬೇರೆ ವ್ಯಾಖ್ಯಾನಕಾರರು 'ಇಂದ್ರಪ್ರಸ್ಥಂ ಗತಃ ಕೃಷ್ಣಃ' ಎಂಬ ಶ್ಲೋಕ (ಅವರಪಾಠದಲ್ಲಿ ೭೭ನೇ ಅಧ್ಯಾಯದ ೬ನೇ ಶ್ಲೋಕ)ದಿಂದ ತೊಡಗಿ 'ನ ತತ್ರ ದೂತಂ ನ ಪಿತುಃ ಕಲೇವರಂ' (೭೭-೨೯ನೇ ಶ್ಲೋಕ) ಎಂಬಲ್ಲಿವರೆಗೂ ಋಷಿಗಳು ಆಡಿದ ಪೂರ್ವೋತ್ತರ ವಿರುದ್ಧವಾದ ಮಾತುಗಳ ಅನುವಾದ ಎನ್ನುತ್ತಾರೆ. ಅದು ಪೂರ್ವೋತ್ತರ ವಿರುದ್ಧ ಏಕೆಂದರೆ, [೧]ವೀರರಾಘವವ್ಯಾಖ್ಯಾನ ಹೇಳುತ್ತದೆ—

'ಅಹ ಚಾಹಮಿಹಾಯಾತ ಆರ್ಯಮಿಶ್ರಾನುಸಂಗತಃ । (೭೭-೮) ಎಂಬ ಶ್ಲೋಕದಲ್ಲಿ ಶ್ರೀಕೃಷ್ಣ ತಾನು ಇಂದ್ರಪ್ರಸ್ಥಕ್ಕೆ ಬಲರಾಮನೊಂದಿಗೆ ಬಂದೆನೆಂದು ಧರ್ಮರಾಜನ ಮುಂದೆ ಹೇಳುತ್ತಾನೆ. ಇದು ಹಿಂದೆ 'ಸಂಕರ್ಷಣಮನುಜ್ಞಾಪ್ಯ' (೭೧.೧೩) 'ಬಲರಾಮನ ಅಪ್ಪಣೆ ಪಡೆದು ಕೃಷ್ಣನೊಬ್ಬನೆ ಇಂದ್ರಪ್ರಸ್ಥಕ್ಕೆ ತೆರಳಿದನೆಂ'ದು ಹೇಳಿದ್ದಕ್ಕೆ ವಿರುದ್ಧವಾಗಿದೆ. ಮತ್ತು ಶ್ರೀಕೃಷ್ಣ ಇಂದ್ರಪ್ರಸ್ಥದಲ್ಲಿದ್ದಾಗ ಅತ್ತ ದ್ವಾರಕೆಯನ್ನು ಸಾಲ್ವ ಹಾಳುಗೆಡವುತಿದ್ದನೆಂದು (೭೭.೧೦) ಹೇಳುವುದೂ

೧. ಅತ್ರ ಕೈಶ್ಚಿದೃಷಿಭಿರುಕ್ತಂ ದೂಷಯಿತುಮನುವದತಿ ಶುಕಃ ಇಂದ್ರಪ್ರಸ್ಥಗತ ಇತ್ಯಾದಿನಾ ಏವಂ ವದಂತಿ ರಾಜರ್ಷ ಇತ್ಯತಃ ಪ್ರಾಕ್ತನೇನ। ಆರ್ಯಮಿಶ್ರೋ ಬಲಭದ್ರಃ। ತೇನಾಭಿಸಂಗತಃ ಸಹಿತೋಽಹಮಿಹಾಗತಃ। ಚೈದ್ಯಪಕ್ಷೀಯಾ ರಾಜನ್ಯಾ ಮಮ ಪುರೀಂ ಹನ್ಯುರ್ನಾಶಯೇಯುಃ ಅತೋಽಹಂ ಗಮಿಷ್ಯಾಮೀತಿ ಶೇಷಃ ।... ತತ ಇತಿ। ಪ್ರಕೃತೌ ಮಾನುಷಸ್ವ**ಭಾವೇ** ಉಪಪ್ಲುತೋ ಮಗ್ನಃ।... ಇತೀತ್ಥಮುಪನ್ಯಸ್ತಂ ಪರಮತಂ ನಿರಾಕರೋತಿ ಏವಮಿತಿ। **ಹೇ** ರಾಜರ್ಷೇ ಕೇಚಿದೃಷಯಃ ನಾನ್ವಿತಾ ಅನನ್ವಿತಾಃ ಪೂರ್ವಾಪರಾನುಸಂಧಾನ**ರಹಿತಾ** ಇತ್ಯರ್ಥಃ, ಇತ್ಥಂ ವದಂತಿ। ತದೇವಾಹ ಯತ್ ಸ್ವವಾಚೋ ವಿರುಧ್ಯೇರನ್ **ವಿರೋಧಂ** ಪ್ರಾಪ್ನುಯುರಿತಿ ಯತ್ ತನ್ನಾನುಸ್ಮರಂತಿ ನಾನುಸಂದಧತೇ ನೂನಂ **ಧ್ರುವಂ।** ಅಯಮಭಿಪ್ರಾಯಃ। ನ ತಾವದ್ರಾಜಸೂಯಾರ್ಥಂ ರಾಮೇಣ **ಸಹಾಗತಃ ಶ್ರೀಕೃಷ್ಣಃ।** ಸಂಕರ್ಷಣಮನುಜ್ಞಾಪ್ಯೇತಿ ಪೂರ್ವಮುಕ್ತತ್ವಾತ್। ನ ಚೇಂದ್ರಪ್ರ**ಸ್ಥಂಗತೇ ಕೃಷ್ಣೇ** ಸಾಲ್ವಾಗಮನಂ। ಸಾಲ್ವ ಸಂಗ್ರಾಮವ್ಯಾಸಕ್ತೇನ ಮಯಾ ಯುಷ್ಮದ್**ದ್ಯೂತಂ ನ ಜ್ಞಾತಮಿತಿ** ಕಾಮ್ಯಕವನಸ್ಥಾನ್ ಪಾಂಡವಾನ್ ಸಾಂತ್ವಯತಾ ಶ್ರೀಕೃಷ್ಣೇನ **ಉಕ್ತಮಿತಿ ವ್ಯಾಸೋಕ್ತೇರಿತಿ।**

- ವೀರರಾಘವಃ

ಕೂಡ 'ಸಾಲ್ವನೊಂದಿಗೆ ಯುದ್ಧನಿರತನಾಗಿದ್ದ ನನಗೆ ನಿಮ್ಮ ಜೂಜಿನ ವೃತ್ತಾಂತ ತಿಳಿಯಲಿಲ್ಲ' ಎಂದು ಶ್ರೀಕೃಷ್ಣ ಕಾಮ್ಯಕವನದಲ್ಲಿ ಪಾಂಡವರಿಗೆ ಹೇಳಿದುದಕ್ಕೆ ವಿರುದ್ಧವಾಗಿದೆ' ಎಂದು.

ಮೇಲಿನ ಎರಡು ಕಾರಣಗಳೂ ಅಸಂಗತವಾಗಿವೆ. ಜರಾಸಂಧ ವಧೆಗಾಗಿ ದ್ವಾರಕೆಯಿಂದ ಇಂದ್ರಪ್ರಸ್ಥಕ್ಕೆ ಕೃಷ್ಣನೊಬ್ಬನೇ ಬಂದಿದ್ದರೂ ಬಳಿಕ ರಾಜಸೂಯ ಯಾಗಕ್ಕೆ ಬಲರಾಮನೂ ಬಂದಿದ್ದ. 'ಬಲರಾಮನೊಂದಿಗೆ ಕೂಡಿದುದು' 'ಆರ್ಯಮಿಶ್ರಾನುಸಂಗತಃ' ಇಲ್ಲವೆನ್ನುವಂತಿಲ್ಲ. ರಾಜಸೂಯಯಾಗ ಮುಗಿದ ಬಳಿಕ, ಶ್ರೀಕೃಷ್ಣ ಇಂದ್ರಪ್ರಸ್ಥದಲ್ಲಿದ್ದಾಗಲೇ ಅತ್ತ ಸಾಲ್ವ ದ್ವಾರಕೆಯನ್ನು ಹಾಳುಗೆಡವು ತ್ತಿದ್ದ. ಬಳಿಕ ಶ್ರೀಕೃಷ್ಣ ದ್ವಾರಕೆಗೆ ಹಿಂತಿರುಗಿದುದು ಅಲ್ಲಿ ಸಾಲ್ವ ನಗರವನು ಹಾಳುಗೆಡುವುತ್ತಿದ್ದುದರಿಂದ. ಬಳಿಕ ಜೂಜು ನಡೆಯಿತು. ಹೀಗಾಗಿ ಜೂಜು ನಡೆಯುತ್ತಿದ್ದಾಗ ಶ್ರೀಕೃಷ್ಣ ಸಾಲ್ವಯುದ್ಧದಲ್ಲಿ ನಿರತನಾಗಿದ್ದುದರಿಂದ ಜೂಜಿನ ವೃತ್ತಾಂತ ಅವನಿಗೆ ತಿಳಿಯದೇ ಹೋದುದೂ ಸುಳ್ಳೆನ್ನುವಂತಿಲ್ಲ.

ಇಲ್ಲಿ ಮೊದಲನೆ ಕಾರಣ ಅಸಂಗತವೆಂಬುದು ವಲ್ಲಭವ್ಯಾಖ್ಯಾನದಲ್ಲಿಯೂ

ಸ್ಪಷ್ಟವಿದೆ.

ಪ್ರಕೃತದಲ್ಲಿ ಬೇರೆ ವ್ಯಾಖ್ಯಾನಕಾರರ ಪ್ರಕಾರ ಋಷಿಗಳಾಡಿದ ಸ್ವವ್ಯಾಹತವಾದ ಮಾತು ಇದು—

'ತತೋ ಮುಹೂರ್ತಂ ಪ್ರಕೃತಾವುಪಪ್ಲುತಃ' ಒಂದು ಮುಹೂರ್ತಕಾಲ ಸಾಲ್ವನ ಮಾಯೆಯಿಂದ ಸಾಮಾನ್ಯ ಮಾನವನಂತೆ ಮೋಹಿತನಾಗಿ ಸುಮ್ಮನೆ ನಿಂತ ಶ್ರೀಕೃಷ್ಣ ಬಳಿಕ 'ಮಹಾನುಭಾವಸ್ತದಬುಧ್ಯತ' ಎಚ್ಚೆತ್ತುಕೊಂಡ. ಏಕೆಂದರೆ, ಸುದರ್ಶನಸೂರಿ ವ್ಯಾಖ್ಯಾನ ಹೇಳುತ್ತದೆ— 'ನಿತ್ಯ ಸಾರ್ವಜ್ಞತ್ವಾತ್' 'ನಿತ್ಯ ಸರ್ವಜ್ಞನಾದ್ದರಿಂದ' ಜೀವಗೋಸ್ವಾಮಿವ್ಯಾಖ್ಯಾನ ಹೇಳುತ್ತದೆ— 'ಯತಃ ಪ್ರಕೃತೌ ಸ್ವಭಾವೇ ಸರ್ವಜ್ಞತ್ವೇ ಸ್ಥಿತಃ' 'ಸ್ವಾಭಾವಿಕವಾಗಿ ಸರ್ವಜ್ಞನಾದ್ದರಿಂದ' ಎರಡೂ ವ್ಯಾಹತ. ನಿತ್ಯ ಸ್ವಾಭಾವಿಕ ಸರ್ವಜ್ಞನಾದವನು ಭ್ರಾಂತಿಯಲ್ಲಿ ಮುಳುಗುವ ಎಚ್ಚೆತ್ತುಕೊಳ್ಳುವ ಸಂಭವವಿಲ್ಲ. ಭ್ರಾಂತಿಯೇ ಅವನಿಗೆ ಬರುವುದಿಲ್ಲ. ಬರುವುದೆಂದು ಋಷಿಗಳು ಹೇಳುವುದು ವ್ಯಾಹತ. ಶುಕಮುನಿ ಹಾಗೆ ಹೇಳುತ್ತಾರೆ ಎನ್ನುತ್ತಾರೆ.

ವಸ್ತುತಃ 'ಶ್ರೀಕೃಷ್ಣ ನಿತ್ಯಸರ್ವಜ್ಞನಾದ್ದರಿಂದ ಭ್ರಾಂತಿಯಲ್ಲಿ ಮುಳುಗಲಿಲ್ಲ. ಮುಳುಗಿದಂತೆ ನಟಿಸಿದ, ಬಳಿಕ ಎಚ್ಚೆತ್ತುಕೊಂಡಂತೆಯೂ ನಟಿಸಿದನೆ'ಂದು ಋಷಿಗಳು ವಿರೋಧ ಪರಿಹಾರ ಮಾಡಿದ್ದರೆಂದು ಬಗೆದು ಶ್ರೀಮದಾಚಾರ್ಯರು ಪ್ರಮಾಣಪುರಃ ಸರವಾಗಿ ನಟನೆಯನ್ನು ಸಮರ್ಥಿಸಿದ್ದಾರೆ. ಶುಕಮುನಿಯ ಮಾತಿನಲ್ಲಿ ಮೇಲು ನೋಟಕ್ಕೆ ಕಾಣುವ ವ್ಯಾಹತಿಯನ್ನು ಪರಿಹರಿಸಿದ್ದಾರೆ.

ಜಾನನ್ ಸಾಲ್ವಕೃತಾಂ ಮಾಯಾಮಜಾನನ್ನಿವ ಕೇಶವಃ ।
ಅನ್ವವರ್ತತ ಕಿಂಚಿತ್ತು ತತಸ್ತಾಮಹರದ್ ವಿಭುಃ ।
ಏವಮೇವ ತು ಸರ್ವತ್ರ ಪರಮಾತ್ಮಾ ಸನಾತನಃ ।
ವಿದ್ಧತ್ವಗ್ ರುಧಿರಸ್ರಾವೀ ಕಥಂಚಿದಜಯತ್ ಪರಂ ।
ಇತ್ಯಾದಿ ದರ್ಶಯೇದ್ ವಿಷ್ಣುರ್ಮೋಹಯನ್ ಮಾಯಯಾ ಜಗತ್।
ಚಿದಾನಂದ ಘನಸ್ಯಾಸ್ಯ ಕುತೋ ವೇಧಾದಿ ಸದ್ಗತೇಃ ॥

ಇತಿ ಬ್ರಹ್ಮಾಂಡೇ ॥

ಯದಚರಸ್ತನ್ವಾ ವಾವೃಧಾನೋ
ಬಲಾನೀಂದ್ರ ಪ್ರಬ್ರುವಾಣೋ ಜನೇಷು ।
ಮಾಯೇತ್ ಸಾ ತೇ ಯಾನಿ ಯುದ್ಧಾನ್ಯಾಹು-
ರ್ನಾದ್ಯ ಶತ್ರುಂ ನನು ಪುರಾ ವಿವಿತ್ಸೇ ॥ (ಋಗ್ವೇದ ೧೦.೫೪.೨)

ಇತ್ಯಾದ್ಯಾ ಚ ಶ್ರುತಿಃ ॥

'ವಸುದೇವನ ಶಿರಶ್ಛೇದವನ್ನು ಸಾಲ್ವ ತೋರಿಸಿದುದನ್ನು ಮಾಯೆ ಎಂದು ತಿಳಿದೂ ಕೂಡ ತಿಳಿಯದವನಂತೆ ಸ್ವಲ್ಪಕಾಲ ಅದಕ್ಕೆ ಅನುಸಾರವಾಗಿ ನಟಿಸಿದ. ಬಳಿಕ ಅದನ್ನು ನಾಶಪಡಿಸಿದ ಶ್ರೀಕೃಷ್ಣ. ಹೀಗೇ ಬೇರೆ ಎಲ್ಲ ಅವತಾರಗಳಲ್ಲಿಯೂ ಸನಾತನನಾದ ಪರಮಾತ್ಮ ತನ್ನಿಚ್ಛೆಯಿಂದ ಅಸುರರನ್ನು ಮೋಹಗೊಳಿಸುವುದಕ್ಕಾಗಿ ಮೈಯಲ್ಲಿ ಗಾಯಗೊಂಡವನಂತೆ ನೆತ್ತರು ಸುರಿಸುವಂತೆ ಬಹು ಪ್ರಯಾಸದಿಂದ ಶತ್ರುವನ್ನು ಗೆಲ್ಲುವಂತೆ ಹೀಗೆ ಅನೇಕ ರೀತಿಯಿಂದ ಪ್ರದರ್ಶನ ಮಾಡುತ್ತಾನೆ. ಜ್ಞಾನಾನಂದ ಸ್ವರೂಪನಾದ, ಸಜ್ಜನರಿಗೆ ಮೋಕ್ಷದಾಯಕನಾದ ಈ ಪರಮಾತ್ಮನಿಗೆ ಮೈಗಾಯ ಮುಂತಾದುದು ಹೇಗೆ ಉಂಟಾದೀತು?' ಎಂದು ಬ್ರಹ್ಮಾಂಡಪುರಾಣದಲ್ಲಿ ಉಕ್ತವಾಗಿದೆ.

'ಶ್ರೀಹರಿ, ಶರೀರದಿಂದ ಎಲ್ಲೆಡೆ ವ್ಯಾಪ್ತನಾದವನು ನೀನು ನಿನ್ನ ಬಲಕಾರ್ಯಗಳನ್ನು ಭಕ್ತರಿಗೆ ಉಪದೇಶಿಸುತ್ತ ರಣರಂಗದಲ್ಲಿ ಸಂಚರಿಸುವಿ, ಯುದ್ಧಗಳನ್ನು ಮಾಡುವಿ. ಅವೆಲ್ಲ ನಿನ್ನ ಲೀಲೆಯೇ. ಏಕೆಂದರೆ **ನಿನಗೆ** ಶತ್ರುಗಳು ಯಾವ ಕಾಲದಲ್ಲಿಯೂ ಇಲ್ಲ' ಎಂದು ಮುಂತಾಗಿ **ಶ್ರುತಿಗಳು** ಹೇಳುತ್ತಿವೆ.

❖❖❖

ಅಧ್ಯಾಯ - ೮೯

ಅಧ್ಯಾಯ ಸಾರಾಂಶ

ಒಮ್ಮೆ ಶ್ರೀಕೃಷ್ಣ ಸುಧರ್ಮ ಸಭೆಯಲ್ಲಿ ಕುಳಿತಿದ್ದಾಗ ಒಬ್ಬ ಬ್ರಾಹ್ಮಣ ಬಂದು ಹೇಳಿದ, 'ಮೂರ್ಖ ದುರಾಚಾರಿಯಾದ ದುರ್ಯೋಧನ ಧರ್ಮರಾಜನನ್ನು ಜೂಜಿನಿಂದ ಸೋಲಿಸಿದ. ಧರ್ಮರಾಜ ಭಾರ್ಯೆಯೊಂದಿಗೆ ತಮ್ಮಂದಿರೊಂದಿಗೆ ಕಾಡಿಗೆ ತೆರಳಿದ' ಎಂದು. ಕರ್ಣಕಠೋರವಾದ ಈ ಮಾತನ್ನು ಕೇಳಿ ಶ್ರೀಕೃಷ್ಣ ಕೋಪಪರವಶನಾಗಿ ತಟ್ಟನೆ ಆಸನದಿಂದ ಎದ್ದ. ದಾರುಕ ತಂದ ರಥವನ್ನು ಸತ್ಯಭಾಮೆಯೊಂದಿಗೆ ಏರಿ ದೊಡ್ಡ ಸೈನ್ಯದೊಂದಿಗೆ ಕಾಡಿನಲ್ಲಿ ಪಾಂಡವರಿದ್ದಲ್ಲಿಗೆ ಧಾವಿಸಿದ. ಸುಖದುಃಖಗಳಿಗೆ ಅದೃಷ್ಟ ನಿಯಾಮಕನಾದ ಶ್ರೀಹರಿಯೆ ಕಾರಣ ಎಂದು ಮುಂತಾಗಿ ಹೇಳಿ ಪಾಂಡವರನ್ನು ಸಂತೈಸಿದ. ಅವರ ಅನುಜ್ಞೆಯನ್ನು ಪಡೆದು ಸುಭದ್ರೆಯನ್ನೂ ಅಭಿಮನ್ಯುವನ್ನೂ ರಥದಲ್ಲಿ ಕೂಡಿಸಿಕೊಂಡು ದ್ವಾರಕೆಗೆ ಹಿಂತಿರುಗಿದ. ಪಾಂಡವರ ವಿಯೋಗದಿಂದ ಖಿನ್ನನಾಗಿ ಧರ್ಮದಿಂದ ರಾಜ್ಯಭಾರ ಮಾಡುತ್ತ ವಾಸಮಾಡಿದ.

ಒಮ್ಮೆ ಸಾಂಬ ಪ್ರದ್ಯುಮ್ನ ಚಾರು ಭಾನು ಗದ ಮುಂತಾದ ಯಾದವಕುಮಾರರು ವಿಹಾರಕ್ಕಾಗಿ ಒಂದು ಉಪವನವನ್ನು ಪ್ರವೇಶಿಸಿದರು. ಬಹಳ ಹೊತ್ತು ವಿಹಾರಮಾಡಿ ಬಾಯಾರಿ ನೀರನ್ನು ಅರಸುತ್ತ ಒಂದು ನೀರಿಲ್ಲದ ಬಾವಿಯಲ್ಲಿ ಓತಿಕೇತವನ್ನು ಕಂಡರು. ಬೆಟ್ಟದಾಕಾರದ ಆ ಪ್ರಾಣಿಯನ್ನು ಕಂಡು ಆಶ್ಚರ್ಯಚಕಿತರಾಗಿ ಕೃಪೆಯಿಂದ ಎತ್ತಲು ಪ್ರಯತ್ನ ಮಾಡಿದರು. ಚರ್ಮದ ದಾರ ಹಗ್ಗಗಳಿಂದ ಬಿಗಿದು ಎತ್ತಲು ಯತ್ನಿಸಿ ವಿಫಲರಾಗಿ ಕುತೂಹಲದಿಂದ ಶ್ರೀಕೃಷ್ಣನಿಗೆ ಹೇಳಿದರು. ಶ್ರೀಕೃಷ್ಣ ಬಂದು ನೋಡಿ ಎಡಗೈಯಿಂದ ಅನಾಯಾಸವಾಗಿ ಮೇಲೆತ್ತಿದ. ಭಗವಂತನ ಕರಸ್ಪರ್ಶವಾದೊಡನೆ ಓತಿಕೇತ ಆ ಶರೀರವನ್ನು ತೊರೆದು ಪುಟಕ್ಕಿಟ್ಟ ಚಿನ್ನದಂಥ ಸುಂದರವಾದ ದಿವ್ಯವಸ್ತ್ರಾಭರಣಯುಕ್ತ ಶರೀರದವನಾದ. ಶ್ರೀಕೃಷ್ಣನ ಪಾದಗಳಿಗೆ ಬಿದ್ದು ಸಾಷ್ಟಾಂಗ ನಮಸ್ಕಾರಗೈದ.

ಶ್ರೀಕೃಷ್ಣ ಕೇಳಿದ, 'ನಿನ್ನ ಈ ಪ್ರಾಣಿಜನ್ಮಕ್ಕೆ ಕಾರಣವಾದ ಪಾಪಕರ್ಮವೇನೆಂಬುದನ್ನು ಜನರಿಗೆ ಹೇಳು' ಎಂದು. ಅವನು ಹೇಳತೊಡಗಿದ. 'ಪ್ರಭು, ನಾನು ಹಿಂದೆ ಇಕ್ಷ್ವಾಕು ರಾಜನ ಪುತ್ರನಾದ ನೃಗರಾಜ. ದಾನಿಗಳನ್ನು ಹೆಸರಿಸುವಾಗ ನನ್ನ ಹೆಸರನ್ನು ನೀನು ಕೇಳಿರಬಹುದು. ಸರ್ವಾಂತರ್ಯಾಮಿ ಸರ್ವಕರ್ಮಸಾಕ್ಷಿ ನೀನು, ನಿನಗೆ ತಿಳಿಯದುದೇನಿದೆ? ಆದರೂ ನಿನ್ನಾದೇಶದಂತೆ ಹೇಳುತ್ತೇನೆ. ಭೂಮಿಯಲ್ಲಿ ಎಷ್ಟು ಉಸುಕಿನ ಕಣಗಳೋ ಆಕಾಶದಲ್ಲಿ ಎಷ್ಟು ನಕ್ಷತ್ರಗಳೋ ಮಳೆನೀರಿನ ಧಾರೆಗಳೆಷ್ಟೋ ಅಷ್ಟು ಸಂಖ್ಯೆಯಲ್ಲಿ ನಾನು ಗೋದಾನ ಮಾಡಿದ್ದೇನೆ. ಚಿನ್ನ ಹೊದಿಸಿದ ಕೊಂಬು ಬೆಳ್ಳಿ ಮುಚ್ಚಿದ ಗೊರಸಿನ ತುಂಬ ಹಾಲುಕೊಡುವ ಕಪಿಲೆ ಹಸುಗಳನ್ನು ಕರುಗಳೊಂದಿಗೆ ದಾನ ಮಾಡಿದ್ದೇನೆ. ಸಂಸಾರ ನಿರ್ವಹಿಸಲಾರದೆ ಕಷ್ಟಪಡುವ ಉತ್ತಮ ಬ್ರಾಹ್ಮಣರಿಗೆ ಉತ್ತಮ ಗೋದಾನ ಮಾಡಿದ್ದೇನೆ. ಗೋ ಭೂಮಿ ಹಿರಣ್ಯ ಮುಂತಾದ ದಾನಗಳನ್ನೂ ಕನ್ಯಾದಾನ ತಿಲದಾನಗಳನ್ನೂ ಮಾಡಿದ್ದೇನೆ. ಯಜ್ಞಕಾರ್ಯ ಜನೋಪಯೋಗಿ ಕಾರ್ಯಗಳನ್ನೂ ಮಾಡಿದ್ದೇನೆ.

ಆದರೆ ಒಮ್ಮೆ ಒಬ್ಬ ಒಳ್ಳೆಯ ಬ್ರಾಹ್ಮಣನ ಹಸು ತಪ್ಪಿಸಿಕೊಂಡು ನನ್ನ ಹಸುಗಳ ಗುಂಪಿನಲ್ಲಿ ಬಂದು ಸೇರಿಕೊಂಡಿದ್ದುದನ್ನು ತಿಳಿಯದೆ ನಾನು ಅದನ್ನು ಇನ್ನೊಬ್ಬ ಬ್ರಾಹ್ಮಣನಿಗೆ ದಾನ ಮಾಡಿಬಿಟ್ಟೆ. ಈ ಬ್ರಾಹ್ಮಣ ಹಸುವನ್ನು ಕರೆದೊಯ್ಯುವಾಗ ಅದರ ಒಡೆಯ 'ಈ ಹಸು ನನ್ನದು' ಎಂದ. ಈತ 'ನನ್ನದು' ಎಂದ. 'ನೃಗರಾಜ ನನಗೆ ದಾನ ಮಾಡಿದ್ದು' ಎಂದ. ಇಬ್ಬರೂ ನನ್ನ ಬಳಿ ದೂರಿತ್ತರು. ನಾನು ಬಹಳ ಗೊಂದಲಕ್ಕೊಳಗಾಗಿ 'ಈ ಹಸುವಿಗೆ ಪ್ರತಿಯಾಗಿ ಒಂದು ಲಕ್ಷ ಬೇರೆ ಹಸುಗಳನ್ನು ಕೊಡುವೆನು, ಇದನ್ನು ನನಗೆ ಕೊಡಿರಿ' ಎಂದೆ. ತಿಳಿಯದೆ ನನ್ನಿಂದ ತಪ್ಪಾಗಿದೆ. ಈ ಧರ್ಮಸಂಕಟದಿಂದ ನನ್ನನ್ನು ಪಾರು ಮಾಡಿರಿ ಎಂದು ಬೇಡಿಕೊಂಡೆ. 'ಬೇರೆ ಹಸುಗಳನ್ನು ನಾನು ಸ್ವೀಕರಿಸಲಾರೆ, ನಾನು ಸ್ವೀಕರಿಸಲಾರೆ' ಎಂದು ಹೇಳಿ ಇಬ್ಬರೂ ಹೊರಟು ಹೋದರು.

ಬಳಿಕ ಅಂತ್ಯಕಾಲ ಬಂದಾಗ ಮರಣ ಹೊಂದಿದ ನನ್ನನ್ನು ಯಮದೂತರು ಒಯ್ದು ಯಮನ ಮುಂದೆ ನಿಲ್ಲಿಸಿದರು. ಯಮ

ಕೇಳಿದ. 'ನೀನು ಮೊದಲಿಗೆ ಪಾಪಕರ್ಮದ ಫಲವನ್ನು ಅನುಭವಿಸುವೆಯೋ ಅಥವಾ ಪುಣ್ಯಕರ್ಮಫಲವನ್ನೋ? ನೀನು ಮಾಡಿರುವ ದಾನಧರ್ಮಗಳಿಗೆ ಕೊನೆಯಿಲ್ಲ. ಅದರ ಫಲವಾಗಿ ನಿನಗೆ ಸಿಗುತ್ತಿರುವ ಅನಂತ ಪುಣ್ಯಲೋಕಗಳನ್ನು ನೋಡು' ಎಂದ. ಮೊದಲಿಗೆ ಪಾಪ ಫಲವನ್ನು ಅನುಭವಿಸುವೆನು ಎಂದೆ ನಾನು. 'ಹಾಗಾದರೆ ಬೀಳು' ಎಂದ ಯಮ. ಅಷ್ಟರಲ್ಲಿ ನಾನು ನೋಡುತ್ತಿದ್ದಂತೆಯೆ ಓತಿಕೇತನಾಗಿ ಇಲ್ಲಿ ಬಿದ್ದಿದ್ದೆ. ಪ್ರಭು! 'ನಾ ನಿನ್ನ ದಾಸನಾಗಿ ಇಂದಿಗೂ ನಿನ್ನ ದರ್ಶನಾಕಾಂಕ್ಷಿಯಾಗಿ ನಿನ್ನನ್ನೇ ಸ್ಮರಿಸುತ್ತಿದ್ದೆ. ನನಗೆ ಇನ್ನು ದೇವಲೋಕಕ್ಕೆ ಹೋಗಲು ಅನುಜ್ಞೆ ನೀಡು. ನಾನೆಲ್ಲಿದ್ದರೂ ನಿನ್ನ ಪಾದಸ್ಮರಣೆ ನನಗೆ ತಪ್ಪದಿರಲಿ. ಹೀಗೆ ಹೇಳಿ ನೃಗರಾಜ ಶ್ರೀಕೃಷ್ಣನಿಗೆ ಪ್ರದಕ್ಷಿಣೆ ಮಾಡಿ ತಲೆಯಿಂದ ಅವನ ಪಾದವನ್ನು ಸ್ಪರ್ಶಿಸಿ ಅಪ್ಪಣೆ ಪಡೆದು ಉತ್ತಮವಿಮಾನವನ್ನೇರಿ ಸ್ವರ್ಗಲೋಕಕ್ಕೆ ತೆರಳಿದ.

ಶ್ರೀಕೃಷ್ಣ ಯದುಕುಮಾರರಿಗೆ ಹೀಗೆ ಉಪದೇಶಿಸಿದ– 'ಬ್ರಾಹ್ಮಣರ ಸೊತ್ತನ್ನು ಅದು ಎಷ್ಟೇ ಅಲ್ಪವಿದ್ದರೂ ಅಪಹರಿಸಬೇಡಿ. ತೇಜಸ್ವಿಯಾದ ಅಗ್ನಿಗೂ ಕೂಡ ಅದನ್ನು ಅರಗಿಸಿಕೊಳ್ಳಲಾಗದು. ಹಾಲಾಹಲವನ್ನು ವಿಷವೆಂದು ನಾನು ಪರಿಗಣಿಸುವುದಿಲ್ಲ. ಅದಕ್ಕೆ ಪರಿಹಾರೋಪಾಯವಿದೆ. ಬ್ರಾಹ್ಮಣರ ಸೊತ್ತು ವಿಷ. ಅದಕ್ಕೆ ಪರಿಹಾರವಿಲ್ಲ. ವಿಷ ಉಂಡವನೊಬ್ಬನನ್ನು ಮಾತ್ರ ಕೊಲ್ಲಬಲ್ಲುದು. ಬೆಂಕಿಯೂ ನೀರಿನಿಂದ ಆರಬಲ್ಲುದು. ಬ್ರಾಹ್ಮಣರ ಸೊತ್ತು ಅರಣಿಕಾಷ್ಠದ ಅಗ್ನಿ. ನೀರಿಂದ ಆರದು. ಮೂಲಸಹಿತವಾಗಿ ಕುಲವನ್ನೇ ನಾಶಮಾಡೀತು. ಬ್ರಾಹ್ಮಣ ದಾಕ್ಷಿಣ್ಯದಿಂದ ಬಿಟ್ಟು ಕೊಟ್ಟಿದ್ದನ್ನು ಉಂಡರೂ, ಅವನು, ಅವನ ತಂದೆ, ಅವನಜ್ಜ —ಈ ಮೂವರನ್ನೂ ನರಕಕ್ಕೆ ತಳ್ಳುವುದು. ಬಲಾತ್ಕಾರದಿಂದ ಅಪಹರಿಸಿ ಉಂಡರೆ ಹಿಂದಿನ ಮುಂದಿನ ಹತ್ತು ತಲೆಮಾರುಗಳನ್ನು ನರಕಕ್ಕೆ ತಳ್ಳುವುದು. ಹೆಂಡತಿ ಮಕ್ಕಳನ್ನು ಕಟ್ಟಿಕೊಂಡಿರುವ ಉತ್ತಮ ಬ್ರಾಹ್ಮಣ ಅತ್ತು ಸುರಿಸುವ ಕಣ್ಣೀರು ಎಷ್ಟು ಧೂಳಿನ ಕಣಗಳನ್ನು ಒದ್ದೆ ಮಾಡುವದೋ ಅಷ್ಟು ವರ್ಷ ಕಾಲ ನರಕವಾಸ ಲಭಿಸುವುದು. ತಾನೇ ಕೊಟ್ಟಿರಬಹುದಾದ ಬ್ರಾಹ್ಮಣರ ಸೊತ್ತನ್ನು ತಾನು ಅಪಹರಿಸಿದರೂ

ಅರವತ್ತು ಸಾವಿರ ವರ್ಷಕಾಲ ಅಮೇಧ್ಯದಲ್ಲಿ **ಹುಳುವಾಗಿ** ಜನಿಸುತ್ತಾನೆ. ಬ್ರಾಹ್ಮಣರ ಸೊತ್ತನ್ನು ಉಣ್ಣುವ **ರಾಜರು** ಅಲ್ಪಾಯುಷಿಗಳಾಗುವರು. ಪರಾಜಿತರಾಗಿ ಸ್ಥಾನ **ಭ್ರಷ್ಟರಾಗಿ** ಉದ್ವೇಗಕ್ಕೆ ಒಳಗಾಗುವರು. ಬ್ರಾಹ್ಮಣ ತಪ್ಪು ಮಾಡಿದರೂ **ಅವನಲ್ಲಿ** ದ್ರೋಹ ಮಾಡಬೇಡಿರಿ. ಅವನು ಹಿಂಸೆ ಮಾಡಲಿ, ಶಾಪ ನೀಡಲಿ. ಅವನನ್ನು ಸದಾ ನಮಸ್ಕರಿಸಿರಿ. ನಾನು ಎಲ್ಲ ಕಾಲಗಳಲ್ಲಿ ಬ್ರಾಹ್ಮಣರಿಗೆ ಹೇಗೆ ನಮಿಸುವನೋ ಹಾಗೇ ನೀವು ನಮಿಸಿರಿ. ಯಾರು ನಮಿಸುವುದಿಲ್ಲವೋ ಅವನು ನನಗೆ ಶಿಕ್ಷಾರ್ಹ ನೆನಿಸುತ್ತಾನೆ. ಬ್ರಾಹ್ಮಣರ ಸೊತ್ತನ್ನು ತಿಳಿಯದೆ ಅಪಹರಿಸಿದರೂ ಅದು ಅವನನ್ನು ಕೆಳಗೆ ತಳ್ಳುವುದು, ಬ್ರಾಹ್ಮಣನ ಹಸು ನೃಗರಾಜನನ್ನು ತಳ್ಳಿದಂತೆ.' ಹೀಗೆ ಶ್ರೀಕೃಷ್ಣ ಪ್ರಜೆಗಳಿಗೆ ಉಪದೇಶಿಸಿ ತನ್ನ ಅರಮನೆಗೆ ನಡೆದ.

ಸಜ್ಜನರ ಒಡನಾಟ ಎಂದೂ ನಿಷ್ಫಲವಲ್ಲ. ಬ್ರಾಹ್ಮಣರ ಸಂಗದಿಂದ ನೃಗರಾಜನಿಗೆ ಶ್ರೀಕೃಷ್ಣನ ದರ್ಶನ ಲಾಭವಾಯಿತು. ನರಕ ತಪ್ಪಿತು. ಸಜ್ಜನರ ದರ್ಶನ ಸ್ಪರ್ಶನ ನಾಮೋಚ್ಚಾರಣ ಸ್ಮರಣವೆಲ್ಲವೂ ಗಂಗಾದಿ ಪುಣ್ಯತೀರ್ಥಗಳಂತೆ ಪಾವನವಾಗಿರುತ್ತವೆ.

❖ ❖ ❖

ಅಧ್ಯಾಯ - ೬೦

ಅಧ್ಯಾಯ ಸಾರಾಂಶ

ಪೂಜ್ಯನಾದ ಬಲರಾಮ ನಂದಗೋಕುಲದಲ್ಲಿರುವ ಬಂಧುಗಳನ್ನು ನೋಡುವ ಕುತೂಹಲದಿಂದ ಅಲ್ಲಿಗೆ ಹೋದ. ಬಹುದಿನಗಳಿಂದ ನೋಡಲು ಕಾತುರರಾಗಿದ್ದ ಗೋಪಗೋಪಿಯರು ಅವನನ್ನು ಆಲಿಂಗಿಸಿದರು. ತಂದೆತಾಯಿಗಳಾದ ನಂದ ಯಶೋದೆಯರನ್ನು ಅವನು ನಮಸ್ಕರಿಸಿ ಆಶೀರ್ವಾದವನ್ನು ಪಡೆದ. ಅವರು ಅವನನ್ನು ತೊಡೆಯ ಮೇಲೆ ಕೂಡಿಸಿಕೊಂಡು 'ನೀನು ತಮ್ಮನೊಂದಿಗೆ ಹೀಗೆ ನಮ್ಮನ್ನು ಕಾಪಾಡುತ್ತಿರು' ಎನ್ನುತ್ತ ಆಲಿಂಗಿಸಿ ಆನಂದದ ಕಣ್ಣೀರಿಂದ ಮೀಯಿಸಿದರು. ಗೋಪಾಲಕರು ಅವನ ಸುತ್ತಲೂ ಕುಳಿತು ಹಾಸ್ಯ ವಿನೋದ [illegible] ಮುಂತಾದುವನ್ನು ಮಾಡಿ ಕ್ಷೇಮಸಮಾಚಾರವನ್ನು ಕೇಳಿದರು.

ಗೋಪಿಯರು ಕೃಷ್ಣನ ಬಗ್ಗೆ ಕೇಳಿದರು. 'ನಾವು ಯಾರಿಗಾಗಿ ಎಲ್ಲ ಬಂಧುಗಳನ್ನು ತೊರೆದು ಬಂದೆವೋ ಅವನು ನಮ್ಮನ್ನು ಬಿಟ್ಟು ಕ್ಷಣದಲ್ಲಿ ನಮ್ಮ ಪ್ರೀತಿಯನ್ನು ಮರೆತು ಹೊರಟುಹೋದ. ನಾವು ಅವನ ಮಾತನ್ನು ನಂಬಿದೆವು. ವಿಚಿತ್ರ ಮಾತುಗಳನ್ನಾಡುವ ಚಂಚಲ ಸ್ವಭಾವದ ಕೃತಘ್ನನಾದ ಅವನ ಮಾತುಗಳನ್ನು ಬೇರೆ ಯಾವ ಸ್ತ್ರೀಯರೂ ನಂಬುತ್ತಿರಲಿಲ್ಲ. ಇರಲಿ, ಅವನ ಬಗ್ಗೆ ಹೇಳಿ ಏನು ಪ್ರಯೋಜನ? ನಾವಿಲ್ಲದೆ ಅವನಿಗೆ ಕಾಲ ಹೋಗುವುದಾದರೆ ನಾವೂ ಅವನಿಲ್ಲದೇ ಕಾಲ ಕಳೆಯುವೆವು.' ಹೀಗೆ ಹೇಳಿ ಗೋಪಿಯರು ಅಳಲು ತೊಡಗಿದರು. ಬಲರಾಮ ಶ್ರೀಕೃಷ್ಣನ ಸಂದೇಶಗಳನ್ನು ತಿಳಿಸಿ ಸಂತೈಸಿದ.

ಚೈತ್ರ ವೈಶಾಖಗಳೆರಡು ತಿಂಗಳ ಕಾಲ ಅವನು ಗೋಪಿಯರಿಗೆ ರಾತ್ರಿಗಳಲ್ಲಿ ಸಂತಸ ನೀಡುತ್ತ ಗೋಕುಲದಲ್ಲಿ ವಾಸಮಾಡಿದ. ಅವರೊಂದಿಗೆ ಹುಣ್ಣಿಮೆ ಬೆಳದಿಂಗಳಲ್ಲಿ ಯಮುನೆಯ ಬಳಿಯ ಉದ್ಯಾನಗಳಲ್ಲಿ ವಿಹರಿಸಿದ. ವರುಣ ಕಳಿಸಿದ ವಾರುಣೀದೇವಿ ಮರದ

ಪೊಟರೆಗಳಿಂದ ಮದ್ಯವನ್ನು ಸುರಿಸಿ ವನವನ್ನು ಸುಗಂಧಭರಿತ ವಾಗಿಸಿದಳು. ಬಲರಾಮ ಗೋಪಿಯರೊಂದಿಗೆ ಮದ್ಯಪಾನ ಮಾಡಿ ಮತ್ತನಾಗಿ ಇಂದ್ರನ ಐರಾವತದಂತೆ ವನಗಳಲ್ಲಿ ಸಂಚರಿಸಿದ. ಆಗ ಆಕಾಶದಲ್ಲಿ ದುಂದುಭಿ ಮೊಳಗಿದುವು. ಗಂಧರ್ವರು ಹೂಮಳೆಗರೆದರು. ಮುನಿಗಳು ಸ್ತುತಿಸಿದರು.

ಹಿಮದ ಹನಿಯಂಥ ಬೆವರಿನಿಂದ ಅಲಂಕೃತವಾದ ನಸುನಗುವ ಮುಖಕಮಲ ಉಳ್ಳವನು ಬಲರಾಮ ಜಲಕ್ರೀಡೆಗೆ ತನ್ನ ಬಳಿಗೆ 'ಬಾ' ಎಂದು ಯಮುನೆಯನ್ನು ಕರೆದ. ಕುಡಿದು ಮತ್ತನಾಗಿರುವನೆಂದು ತಿಳಿದ ಯಮುನೆ ಅದಕ್ಕೆ ಲಕ್ಷ್ಯ ಕೊಡಲಿಲ್ಲ. ಬಲರಾಮ ಕುಪಿತನಾಗಿ ನೇಗಿಲಿನ ತುದಿಯಿಂದ ನದಿಯನ್ನು ತನ್ನೆಡೆಗೆ ಸೆಳೆದ. ಯಮುನೆ ಭಯದಿಂದ ಧಾವಿಸಿಬಂದು ಪಾದಗಳಿಗೆ ಎರಗಿ ಸ್ತುತಿಸಿದಳು. ಬೇಡಿದಳು. 'ರಾಮರಾಮ, ನಾನು ನಿನ್ನ ಪರಾಕ್ರಮವನ್ನು ಆಲೋಚಿಸದೆ ನಿನ್ನನ್ನು ಅವಮಾನಿಸಿದೆ. ಒಂದು ಹೆಡೆಯಿಂದ ಜಗತ್ತನ್ನು ಧರಿಸಿದ ಆದಿಶೇಷ ನೀನು. ನಾನು ನಿನ್ನನ್ನು ಶರಣು ಹೊಂದಿದ್ದೇನೆ. ನನ್ನನ್ನು ಬಿಟ್ಟು ಬಿಡು.' ಬಲರಾಮ ಅವಳನ್ನು ಕ್ಷಮಿಸಿ ಬಿಟ್ಟ.

ಬಳಿಕ ಮದ್ದಾನೆ ಹೆಣ್ಣಾನೆಗಳೊಂದಿಗೆ ಕ್ರೀಡಿಸುವಂತೆ ಗೋಪಿಯ ರೊಂದಿಗೆ ಜಲಕ್ರೀಡೆಯಾಡಿದ. ನೀರಿಂದ ಹೊರಗೆ ಬಂದಾಗ ಯಮುನೆ ಅವನಿಗೆ ನೀಲಾಂಬರಗಳನ್ನಿತ್ತಳು. ಲಕ್ಷ್ಮಿ ಆಭರಣ ಗಳನ್ನೂ ಕಮಲದ ಹಾರವನ್ನೂ ನೀಡಿದಳು. ಬಲರಾಮನ ಪರಾಕ್ರಮವನ್ನು ಸೂಚಿಸುವಂತೆ ಇಂದಿಗೂ ಯಮುನಾ ನದಿ ಅವನು ಸೆಳೆದ ಮಾರ್ಗದಿಂದ ಹರಿಯುವುದು ಕಾಣುತ್ತದೆ. ಗೋಕುಲದ ಹೆಣ್ಣುಗಳ ಬೆಡಗು ಬಿನ್ನಾಣಗಳಿಂದ ಮನಸೋತು ವಿಹರಿಸಿದ ಬಲರಾಮನಿಗೆ ಆ ಎರಡು ತಿಂಗಳ ಎಲ್ಲ ರಾತ್ರಿಗಳೂ ಒಂದೇ ರಾತ್ರಿಯಂತೆ ಕಳೆದುಹೋದವು.

❖❖❖

ಅಧ್ಯಾಯ - ೬೧

ಅಧ್ಯಾಯ ಸಾರಾಂಶ

ವಿವಿದನೆಂಬ ಒಬ್ಬ ವಾನರ ಮೈಂದನ ತಮ್ಮ ಮಹಾಪರಾಕ್ರಮಿ. ಹಿಂದೆ ಸುಗ್ರೀವನ ಮಂತ್ರಿಯಾಗಿದ್ದ ಆತ ನರಕಾಸುರನ ಸ್ನೇಹಿತನಾದ. ನರಕಾಸುರ ಶ್ರೀಕೃಷ್ಣನಿಂದ ಹತನಾದಾಗ ಸ್ನೇಹಿತನ ಋಣವನ್ನು ತೀರಿಸಲು ಆತ ರಾಷ್ಟ್ರನಾಶಕ್ಕೆ, ವಿಶೇಷವಾಗಿ ದ್ವಾರಕೆಯ ನಾಶಕ್ಕೆ ತೊಡಗಿದ. ಎಲ್ಲೆಡೆ ಬೆಂಕಿ ಇಟ್ಟು ಸುಡುವುದು ಬೆಟ್ಟಗಳನ್ನು ಕಿತ್ತೆಸೆಯುವುದು ಸಮುದ್ರಜಲವನ್ನು ಬೊಗಸೆಯಿಂದೆತ್ತಿ ತೀರದ ಪ್ರದೇಶಗಳನ್ನು ಮುಳುಗಿಸುವುದು ಮುನಿಗಳ ಆಶ್ರಮಗಳನ್ನು ಧ್ವಂಸಗೊಳಿಸುವುದು ಯಾಗಾಗ್ನಿ ಕುಂಡಗಳಲ್ಲಿ ಮಲ ಮೂತ್ರ ಸುರಿಯುವುದು ಕುಲಸ್ತ್ರೀಯರನ್ನು ಕೆಡಿಸುವುದು ಮುಂತಾಗಿ ಬಹಳ ವಿಧ್ವಂಸಕ ಕೃತ್ಯಗಳನ್ನು ನಡೆಸಿದ. ಸ್ತ್ರೀಪುರುಷರನ್ನು ಬೆಟ್ಟದ ತಪ್ಪಲುಗಳಲ್ಲಿ ಗುಹೆಯೊಳಗೆ ಬಂಧಿಸಿ ಗುಹೆಯ ಬಾಗಿಲುಗಳನ್ನು ಬೆಟ್ಟದ ಶಿಖರಗಳಿಂದ ಮುಚ್ಚಿದ.

ರೈವತ ಪರ್ವತದಲ್ಲಿ ಸ್ತ್ರೀಯರ ನಡುವೆ ಬಲರಾಮ ಮದ್ಯಪಾನ ಮಾಡಿ ಹಾಡುತ್ತಿದ್ದಾಗ ಆ ಧ್ವನಿಯನ್ನು ಕೇಳಿ ವಿವಿದ ಅಲ್ಲಿಗೂ ಬಂದ. ಮರವನ್ನೇರಿ ಕೊಂಬೆಗಳನ್ನು ಅಲ್ಲಾಡಿಸಿ ಶಬ್ದಮಾಡುತ್ತ ತಾನಿರುವುದನ್ನು ತೋರಿಸಿದ. ಗೊಲ್ಲತಿಯರು ಕಪಿಯ ಸ್ವಾಭಾವಿಕ ಚೇಷ್ಟೆಗಳೆಂದು ಬಗೆದು ಕಂಡು ನಕ್ಕರು. ಆದರೆ ಆತ, ಬಲರಾಮ ನೋಡುತ್ತಿದ್ದಂತೆಯೇ, ಅವರ ಮುಂದೆ ಬಂದು ನಿಂತು ಹುಬ್ಬು ಹಾರಿಸುವುದು ಮುಂತಾದ ಚೇಷ್ಟೆ ಮಾಡಿ ಗುದವನ್ನು ತೋರಿಸಿ ಅವಹೇಳನ ಮಾಡಿದ. ಬಲರಾಮ ಕೋಪದಿಂದ ಕಲ್ಲನ್ನೆಸೆದರೆ ಆತ ಅದನ್ನು ತಪ್ಪಿಸಿಕೊಂಡು ಮದ್ಯದ ಕಲಶವನ್ನು ಒಡೆದು, ಜಲಕ್ರೀಡೆಯಾದ ಬಳಿಕ ಸ್ತ್ರೀಯರು ಉಡಬೇಕಾಗಿದ್ದ ಸೀರೆಗಳನ್ನು ಹರಿದು ಹಾಕಿದ. ಬಲರಾಮನ ಮುಂದೆ ನಿಂತು ತೋಳು ತೊಡೆಗಳನ್ನು ತಟ್ಟಿಕೊಂಡು ಅವನನ್ನು ಸಿಟ್ಟಿಗೆಬ್ಬಿಸಿ ಯುದ್ಧಕ್ಕೆ ಆಹ್ವಾನಿಸಿದ.

ಬೆಟ್ಟವನ್ನು ಕಿತ್ತು ಎತ್ತಿ ಬಲರಾಮನ ತಲೆಯ ಮೇಲೆ ಹಾಕಿದ. ಬಲರಾಮ ಅದನ್ನು ಹಿಡಿದು ಮುಸಲದಿಂದ ಅವನ ತಲೆಗೆ ಹೊಡೆದ. ತಲೆ ಒಡೆದು ಮಿದುಳು ಚೂರಾದರೂ ಆತ ಲೆಕ್ಕಿಸದೆ ಮರವನ್ನು ಕಿತ್ತು ಅದರಿಂದ ಬಲರಾಮನನ್ನು ಹೊಡೆದ. ಬಲರಾಮ ಅದನ್ನು ನೂರಾಗಿ ಮುರಿದ. ವಿವಿದ ಇನ್ನೊಂದು ಮರವನ್ನು ಕಿತ್ತು ಎಸೆದ. ಅದನ್ನೂ ಬಲರಾಮ ಮುರಿದ. ಮತ್ತೆ ಮತ್ತೆ ಒಂದೊಂದಾಗಿ ಎಲ್ಲ ಮರಗಳನ್ನೂ ಕಿತ್ತು ಆ ಕಾಡಿನಲ್ಲಿ ಮರವೇ ಇಲ್ಲದಂತೆ ಮಾಡಿದ, ವಿವಿದ. ಬಳಿಕ ಬಂಡೆಕಲ್ಲುಗಳ ಮಳೆಗರೆದ. ಬಲರಾಮ ಅವುಗಳನ್ನೂ ಪುಡಿಗೈದ. ವಿವಿದ ಅವನೆದೆಗೆ ಎರಡೂ ಮುಷ್ಟಿಗಳಿಂದ ಹೊಡೆದ. ಬಲರಾಮನೂ ಕೂಡ ಮುಷ್ಟಿಗಳಿಂದ ವಿವಿದನ ಹೆಗಲುಗಳ ಮೇಲೆ ಹೊಡೆದ. ವಿವಿದ ರಕ್ತಕಾರಿ ಬಿದ್ದು ಸತ್ತ. ಆತ ಬಿದ್ದಾಗ ರೈವತ ಪರ್ವತ ಸಮುದ್ರದಲ್ಲಿ ಬಿರುಗಾಳಿಗೆ ಸಿಲುಕಿದ ನೌಕೆಯಂತೆ ಅಲ್ಲಾಡಿತು. ಆಕಾಶದಲ್ಲಿ ದೇವತೆಗಳು ಸಿದ್ಧರು ಮುನಿಗಳು ಹೂಮಳೆಗರೆದರು ಜಯವಾಗಲಿ ಎಂದರು. ನಮೋ ಎಂದರು. ಭಲೆ ಎಂದರು.

❖❖❖

ಅಧ್ಯಾಯ - ೬೨

ಅಧ್ಯಾಯ ಸಾರಾಂಶ

ಜಾಂಬವತೀ ಪುತ್ರನಾದ ಸಾಂಬ ಸ್ವಯಂವರದಲ್ಲಿ ದುರ್ಯೋಧನನ ಮಗಳಾದ ಲಕ್ಷಣೆಯನ್ನು ಅಪಹರಿಸಿದ. ಕೌರವರು ಕೋಪಗೊಂಡರು. 'ಅವಿನೀತನಾದ ಈ ಹುಡುಗನನ್ನು ಸೆರೆ ಹಿಡಿಯಿರಿ. ಯಾದವರು ಸಿಟ್ಟಾದರೆ ಆಗಲಿ, ನಮ್ಮನ್ನು ಏನು ಮಾಡಬಲ್ಲರು? ಅವರು ನಮ್ಮ ಅನುಗ್ರಹದಿಂದ ಬೆಳೆದು ಕೊಬ್ಬಿದ್ದಾರೆ. ನಾವು ಬಿಟ್ಟುಕೊಟ್ಟ ಭೂಮಿಯನ್ನು ಆಳುತ್ತಿದ್ದಾರೆ. ಅವರು ಇಲ್ಲಿಗೆ ಬಂದರೆ ದರ್ಪವನ್ನು ಕಳೆದುಕೊಂಡು ಹಲ್ಲುಕಿತ್ತ ಹಾವಿನಂತೆ ಆಗುತ್ತಾರೆ.' ಕರ್ಣನ ಮುಖ ನೋಡಿ ಹೀಗೆ ಹೇಳುತ್ತ ಭೂರಿಶ್ರವ ದುರ್ಯೋಧನ ದುಃಶಾಸನ ಶಕುನಿ ಇವರೆಲ್ಲರೂ ವಿದುರಗಾಂಧಾರಿ ಯರನ್ನು ಕೇಳದೆ ಭೀಷ್ಮಾದಿ ಹಿರಿಯರ ಸಹಾಯವನ್ನು ತೆಗೆದು ಕೊಳ್ಳದೆ ಸಾಂಬನನ್ನು ಬೆನ್ನಟ್ಟಿದರು. ಬಾಣಗಳ ಮಳೆಗರೆದರು. ಸಾಂಬ ಅವರಲ್ಲಿ ಪ್ರತಿಯೊಬ್ಬರನ್ನೂ ಒಂದೊಂದು ಬಾಣದಿಂದ ಹೊಡೆದ, ನಾಲ್ಕು ನಾಲ್ಕು ಬಾಣಗಳಿಂದ ಅವರ ಕುದುರೆಗಳನ್ನೂ ಒಂದೊಂದು ಬಾಣದಿಂದ ಸಾರಥಿಗಳನ್ನೂ ಹೊಡೆದ. ಅವರು ನಾಲ್ವರೂ ಸೇರಿ ಸಾಂಬನ ನಾಲ್ಕು ಕುದುರೆಗಳನ್ನು ಕೊಂದರು. ಒಬ್ಬ ಸಾರಥಿಯನ್ನು ಕೊಂದ. ಇನ್ನೊಬ್ಬ ಬಿಲ್ಲನ್ನು ಕಡಿದ. ಹೀಗೆ ಕೌರವರು ಸಾಂಬನನ್ನು ಕಷ್ಟದಿಂದ ವಿರಥನನ್ನಾಗಿ ಮಾಡಿ ಸೆರೆಹಿಡಿದು ಲಕ್ಷಣೆಯನ್ನು ಕರೆದುಕೊಂಡು ನಗರವನ್ನು ಪ್ರವೇಶಿಸಿದರು.

ನಾರದರ ಮಾತಿನಿಂದ ಯಾದವರು ಈ ವೃತ್ತಾಂತವನ್ನು ತಿಳಿದು ಸಿಟ್ಟಾದರು. ಉಗ್ರಸೇನನ ಆದೇಶ ಪಡೆದು ಕೌರವರ ಮೇಲೆ ಯುದ್ಧಕ್ಕೆ ಹೊರಟರು. ಯುದ್ಧದಿಂದ ಇನ್ನೂ ಹೆಚ್ಚಿನ ಕಲಹ ಉಂಟಾದೀತೆಂಬ ಭಯದಿಂದ ಬಲರಾಮನಿಗೆ ಕೌರವ-ಯಾದವರೊಳಗೆ ಯುದ್ಧ ನಡೆಯುವುದು ಇಷ್ಟವಾಗಲಿಲ್ಲ. ಅದರಿಂದ ಅವನು ಕುಪಿತರಾದ ಯಾದವರನ್ನು ಸಮಾಧಾನಪಡಿಸಿ ತಾನೊಬ್ಬನೇ ಹಸ್ತಿನಾವತಿಗೆ ಪ್ರಯಾಣ ಮಾಡಿದ. ಊರ ಹೊರಗಿನ ಉದ್ಯಾನದಲ್ಲಿ

ತಂಗಿದ್ದು ಕಲಹಶಾಂತಿಗಾಗಿ ಧೃತರಾಷ್ಟ್ರನ ಬಳಿಗೆ **ಉದ್ಧವನನ್ನು** ಕಳಿಸಿದ.

ಬಲರಾಮ ಬಂದನೆಂದು ಕೇಳಿದ ಕೌರವರು ಉದ್ಧವನನ್ನು ಸತ್ಕರಿಸಿ ಮಂಗಳದ್ರವ್ಯಗಳನ್ನು ಹಿಡಿದು ಬಲರಾಮನ ಬಳಿಗೆ ಬಂದರು. ವಿಧ್ಯುಕ್ತವಾಗಿ ಪಾದ್ಯ ಅರ್ಘ್ಯಗಳನ್ನಿತ್ತರು. ಪರಸ್ಪರ ಯೋಗಕ್ಷೇಮ ಗಳನ್ನು ಕೇಳಿದ ಬಳಿಕ ಬಲರಾಮ ನುಡಿದ– 'ಪ್ರಭು ಉಗ್ರಸೇನ ಮಹಾರಾಜ ನಿಮಗೆ ಆಜ್ಞೆ ಮಾಡಿದ್ದಾನೆ. ಅದರಂತೆ ಬೇಗನೆ ನಡೆದುಕೊಳ್ಳಿರಿ. ಮಹಾರಾಜ ಹೇಳುತ್ತಾನೆ, 'ನೀವು ಬಹಳ ಜನರು ಸೇರಿ ಅಧರ್ಮದಿಂದ ಏಕಾಂಗಿಯಾದ ಸಾಂಬನನ್ನು ಸೆರೆ ಹಿಡಿದಿರುವಿರಿ. ಬಂಧುಗಳಾದ ನಿಮ್ಮ ಹಿತದೃಷ್ಟಿಯಿಂದ ನಾನು ಅದನ್ನು ಸಹಿಸಿಕೊಳ್ಳುತ್ತೇನೆ' ಎಂದು. ಇದನ್ನು ಕೇಳಿ ಕೌರವರು ಕುಪಿತರಾದರು. 'ಓ ಇದೇನಾಶ್ಚರ್ಯ? ಕಾಲಗತಿ, ಯಾರೂ ಅದನ್ನು ಮೀರಲಾಗದು. ಕಾಲಲ್ಲಿ ಇರಬೇಕಾದ ಪಾಪಾಸು ತಲೆಗೇರಲು ಹವಣಿಸುತ್ತಿದೆ! ಯಾದವರು ನಮಗೆ ವಿವಾಹ ಸಂಬಂಧಿಗಳೆಂದು ಶಯನ ಆಸನ ಭೋಜನ ಮುಂತಾದವುಗಳಲ್ಲಿ ಅವರನ್ನು ಜೊತೆಗೆ ಸೇರಿಸಿಕೊಂಡೆವು. ರಾಜಸಿಂಹಾಸನವನ್ನೂ ಕೊಟ್ಟು ಸಮಾನಸ್ಕಂಧರಂತೆ ನೋಡಿಕೊಂಡೆವು. 'ಇರಲಿ' ಎಂದು ನಾವು ಸುಮ್ಮನಿರುವುದರಿಂದ ಛತ್ರ ಚಾಮರ ಕಿರೀಟ ಎಂದು ಎಲ್ಲವನ್ನೂ ಇವರು ಅನುಭವಿಸುತ್ತಿದ್ದಾರೆ. ಇನ್ನು ಈ ರಾಜವೈಭವ ಅವರಿಗೆ ಸಾಕು. ಅದರಿಂದ ಹಾವಿಗೆ ಹಾಲುಣಿಸಿದಂತೇ ಆಗುತ್ತದೆ. ನಮ್ಮ ದಯೆಯಿಂದ ಬೆಳೆದಿರುವವರು ನಮ್ಮ ಮೇಲೆ ಆಜ್ಞೆ ಮಾಡುತ್ತಿದ್ದಾರೆ! ರಾಜವೈಭವವನ್ನು ಭೀಷ್ಮ ದ್ರೋಣ ಅರ್ಜುನ ಮುಂತಾದ ಕುರುಗಳೇ ಕೊಡಬೇಕು. ಇಲ್ಲದಿದ್ದರೆ ಇಂದ್ರನೂ ಕೂಡ ಹೇಗೆ ಪಡೆದುಕೊಂಡಾನು? ಸಿಂಹದ ಬಾಯಿಗೆ ಬಿದ್ದ ಕುರಿಮರಿ ಏನು ತಾನೆ ಉಣಬಲ್ಲುದು?' ಎಂದರು.

ಕೌರವರಿಗೆ ಕುಲಮದ, ಶೂರವೀರರಾದ ಬಂಧುಗಳ **ಮದ,** ರಾಜ್ಯಸಂಪತ್ತಿನ ಮದವೇರಿದ್ದರಿಂದ ಬಲರಾಮನಿಗೆ ಊರ **ಹೊರಗಿನ** ಅರಣ್ಯದಲ್ಲಿಯೇ ಕೆಟ್ಟಮಾತುಗಳನ್ನಾಡಿ ಊರೊಳಗೆ **ಹೊರಟು** ಹೋದರು. ಅವರ ದುರ್ನಡತೆಯನ್ನು ಕಂಡು, ಅವರು **ಮತ್ತೆ ಮತ್ತೆ**

ಆಡಿದ ಆಡಬಾರದ ಮಾತುಗಳನ್ನು ಕೇಳಿ ಬಲರಾಮ ಕೋಪದಿಂದ ಕಿಡಿಕಿಡಿಯಾದ.

'ಮದೋನ್ಮತ್ತರಾದ ಈ ದುಷ್ಟರಿಗೆ ಶಾಂತಿ ಬೇಡವಾಗಿದೆ. ದಂಡನೆಯೆ ಇವರಿಗೆ ಸರಿಯಾದ ಮದ್ದು. ಎಮ್ಮೆಗೆ ಬಡಿಗೆಯ ಏಟೇ ಮದ್ದು. ಛೆ, ನಾನು ಕೆರಳಿದ ಯಾದವರನ್ನು ತಡೆದೆ, ಸಿಟ್ಟಾದ ಕೃಷ್ಣನನ್ನು ಶಾಂತಗೊಳಿಸಿದೆ. ಇವರೊಡನೆ ಸಂಧಿಗಾಗಿ ಬಂದೆ. ಆದರೆ ಇವರು ಮೂರ್ಖರು ಜಗಳಗಂಟರು. ದುಷ್ಟರು ದುರಭಿಮಾನಿ ಗಳು. ತಮ್ಮ ಬಳಿಗೆ ಇಲ್ಲಿಯವರೆಗೆ ಬಂದ ನನಗೆ ಕೆಟ್ಟ ಮಾತು ಗಳನ್ನಾಡಿ ಹೊರಟು ಹೋದರು. ಇಂದ್ರಾದಿ ಲೋಕಪಾಲಕರೂ ಕೂಡ ಉಗ್ರಸೇನನ ಆಜ್ಞೆಯಂತೆ ನಡೆಯುತ್ತಾರೆ. ಅಂಥ ಉಗ್ರಸೇನ ಇವರಿಗೆ ಪ್ರಭು ಅಲ್ಲವಂತೆ! ದೇವಲೋಕದ ಸುಧರ್ಮ ಸಭೆಯನ್ನು ಪಾರಿಜಾತ ವೃಕ್ಷವನ್ನು ಭೂಮಿಗೆ ತಂದು ಆಳುವ ಕೃಷ್ಣ ರಾಜಸಿಂಹಾಸನಕ್ಕೆ ಅರ್ಹನಲ್ಲವಂತೆ! ಸರ್ವೇಶ್ವರಿಯಾದ ಆ ಮಹಾಲಕ್ಷ್ಮಿ ಅವನ ಚರಣಸೇವೆ ಮಾಡುತ್ತಾಳೆ. ಅಂಥ ಲಕ್ಷ್ಮೀಪತಿ ರಾಜಚಿಹ್ನೆಗಳನ್ನು ಹೊಂದಲು ಅರ್ಹನಲ್ಲವಂತೆ! ಅವನ ಪಾದದೂಳಿಯನ್ನು ಎಲ್ಲ ಲೋಕಪಾಲರು ಶಿರದಲ್ಲಿ ಹೊರುತ್ತಾರೆ. ಅವನ ಪಾದಧೂಳಿಯೆ ಗಂಗಾದಿ ತೀರ್ಥಗಳಿಗೆ ಪಾವಿತ್ರ್ಯ ತಂದು ಕೊಡುತ್ತದೆ. ಬ್ರಹ್ಮರುದ್ರರಾಗಲಿ ನಾನಾಗಲಿ ಅವನ ಅಂಶದ ಅಂಶರಾಗಿದ್ದು ಅವನಲ್ಲಿ ವಿಶ್ವಾಸದಿಂದ ನಡೆದುಕೊಳ್ಳುವೆವು. ಅಂಥ ಕೃಷ್ಣನಿಗೆ ರಾಜಸಿಂಹಾಸನವೆಲ್ಲಿಯದು ಎನ್ನುತ್ತಾರೆ. ಕುರುಗಳು ಕೊಟ್ಟ ಭೂಮಿಯನ್ನು ಯಾದವರು ಅನುಭವಿಸುತ್ತಿರುವರೆ? ಅವರು ತಲೆ, ನಾವು ಪಾದಾಸು! ಎಂಥ ಮಾತು ಕೇಳಿಬಂತು! ಇಂಥ ಮಾತನ್ನು ಶಕ್ತನಾದವನು ಯಾರು ತಾನೆ ಸಹಿಸಿಯಾನು? ಈಗಲೆ ಭೂಮಿಯ ಮೇಲೆ ಕೌರವರಿಲ್ಲದಂತೆ ಮಾಡುತ್ತೇನೆ.'

ಮೂಲೋಕವನ್ನು ಸುಡುವಂಥ ಕೋಪಾಗ್ನಿಯಿಂದ ಉರಿಯುತ್ತ ಬಲರಾಮ ನೇಗಿಲನ್ನು ಹಿಡಿದು ಎದ್ದುನಿಂತ. ನೇಗಿಲ ತುದಿಯಿಂದ ಇಡಿ ಹಸ್ತಿನಾಪುರವನ್ನು ಎತ್ತಿ ಗಂಗೆಯಲ್ಲಿ ಹಾಕಲು ಸೆಳೆಯತೊಡಗಿದ. ನೀರಿನಲ್ಲಿ ದೋಣಿ ಅಲ್ಲಾಡುವಂತೆ ಹಸ್ತಿನಾಪುರ ಅಲ್ಲಾಡುತ್ತ ಗಂಗೆಯಲ್ಲಿ ಬೀಳುತ್ತಿರುವುದನ್ನು ಕಂಡು ಕೌರವರು ಗಾಬರಿ

ಗೊಂಡರು. ಬದುಕುವಾಸೆಯಿಂದ ಲಕ್ಷಣಾ ಸಮೇತನಾದ ಸಾಂಬ ನನ್ನು ಮುಂದೆ ಮಾಡಿಕೊಂಡು ಕುಟುಂಬ ಸಹಿತರಾಗಿ ಬಲರಾಮನಿಗೆ ಶರಣಾದರು. 'ರಾಮರಾಮ, ಸರ್ವೇಶ್ವರ! ನಿನ್ನ ಸಾಮರ್ಥ್ಯವನ್ನರಿಯದೆ ಮೂರ್ಖರಾದ ನಾವು ಮಾಡಿದ ಅಪರಾಧ ವನ್ನು ಮನ್ನಿಸು. ಸೃಷ್ಟಿ ಸ್ಥಿತಿ ಲಯಕಾರಣನಾಗಿದ್ದು ಲೋಕಗಳನ್ನು ಹೊರುವ ನಿನಗೆ ಲೋಕಗಳು ಮಗುವಿಗೆ ಆಟಿಕೆಯಂತೆ ಇವೆ. ಒಂದು ಹೆಡೆಯ ಮೇಲೆ ಬ್ರಹ್ಮಾಂಡವನ್ನು ಹೊರುವೆ. ಲಯದಲ್ಲಿ ಅದನ್ನು ಉದರದೊಳಗೆ ಇರಿಸಿಕೊಂಡು ಮಲಗುವೆ. ನಿನ್ನ ಕೋಪ ದ್ವೇಷದಿಂದಲ್ಲ. ಮತ್ಸರದಿಂದಲ್ಲ. ಲೋಕರಕ್ಷಣೆಗಾಗಿ ಲೋಕಕ್ಕೆ ಶಿಕ್ಷಣ ನೀಡುವೆ. ಸರ್ವಾಂತರ್ಯಾಮಿಯಾದ ನಿನಗಿದೋ ನಮಸ್ಕಾರ!'

ನಿಂತ ನೆಲವೆ ಅಲ್ಲಾಡುತ್ತಿದ್ದುದರಿಂದ ಭಯಭೀತರಾದ ಕೌರವರು ಹೀಗೆ ಶರಣುಹೊಂದಿ ಬೇಡಿದಾಗ ಬಲರಾಮ ಪ್ರಸನ್ನನಾಗಿ ಹೆದರಬೇಡಿರೆಂದು ಅಭಯ ನೀಡಿದ. ದುರ್ಯೋಧನ ಇಪ್ಪತ್ತು ಸಾವಿರ ಆನೆ, ಒಂದು ಲಕ್ಷ ಕುದುರೆ, ಆರು ಸಾವಿರ ಚಿನ್ನದ ರಥ ಮತ್ತು ಚಿನ್ನದ ಹಾರ ಧರಿಸಿದ ಒಂದು ಸಾವಿರ ದಾಸಿಯರನ್ನು ಬಳುವಳಿಯಾಗಿ ಕೊಟ್ಟ. ಅವೆಲ್ಲವನ್ನೂ ಸ್ವೀಕರಿಸಿ ಮಗ ಸೊಸೆಯ ರೊಂದಿಗೆ ಬಲರಾಮ ದ್ವಾರಕೆಗೆ ಹಿಂತಿರುಗಿ ಬಂದ. ತಾನು ಕೌರವರಿಗೆ ಪಾಠ ಕಲಿಸಿದ್ದೆಲ್ಲವನ್ನೂ ಹೇಳಿದ.

ಇಂದಿಗೂ ಕೂಡ ಹಸ್ತಿನಾಪುರ ಗಂಗಾತೀರದಲ್ಲಿ ನದಿಯ ಕಡೆಗೆ ಸ್ವಲ್ಪ ವಾಲಿಕೊಂಡು ದಕ್ಷಿಣದಲ್ಲಿ ಎತ್ತರವಾಗಿದ್ದು ಬಲರಾಮನ ಸಾಮರ್ಥ್ಯ ವನ್ನು ಸೂಚಿಸುತ್ತಿದೆ.

❖❖❖

ಅಧ್ಯಾಯ - ೮೩

ಅಧ್ಯಾಯ ಸಾರಾಂಶ

ಯಾದವರಲ್ಲಿ ಶ್ರುತದೇವನೆಂಬ ಬ್ರಾಹ್ಮಣನಿದ್ದ. ಮಿಥಿಲಾನಗರದಲ್ಲಿ ವಾಸಮಾಡುತ್ತಿದ್ದ, ಪ್ರಯತ್ನವಿಲ್ಲದೆ ಸಿಗುವ ಆಹಾರವನ್ನೇ ಉಂಡು ಜಪಯಜ್ಞವನ್ನು ನಡೆಸುತ್ತಿದ್ದ. ಆ ರಾಜ್ಯದ ದೊರೆ ಬಹುಲಾಶ್ವ ಜನಕ ಮಹಾರಾಜನ ವಂಶದವನು. ಅಹಂಕಾರವಿಲ್ಲದವನು. ಈ ಶ್ರುತದೇವ ಬಹುಲಾಶ್ವರಿಬ್ಬರೂ ಶ್ರೀಕೃಷ್ಣನಿಗೆ ಪ್ರಿಯರಾಗಿದ್ದರು ಅವರಿಗೆ ಒಲಿದ ಶ್ರೀಕೃಷ್ಣನೊಮ್ಮೆ ಮಿಥಿಲಾನಗರಕ್ಕೆ ಹೊರಟ. ನಾರದ ವಾಮದೇವ ಅತ್ರಿ ಶ್ರೀವೇದವ್ಯಾಸರು ಶ್ರೀಪರಶುರಾಮ ಶುಕಮುನಿ ಮುಂತಾದ ಮಹರ್ಷಿಗಳೂ ಶ್ರೀಕೃಷ್ಣನೊಂದಿಗೆ ಮಿಥಿಲೆಗೆ ಹೊರಟರು. ಉದಿಸುವ ಸೂರ್ಯನಿಗೆ ಜನರು ಅರ್ಘ್ಯ ನೀಡಿ ಉಪಾಸನೆ ಮಾಡುವಂತೆ ದಾರಿಯಲ್ಲಿ ಶ್ರೀಕೃಷ್ಣನನ್ನು ಪೌರರು ದೇಶವಾಸಿಗಳು ಅರ್ಘ್ಯನೀಡಿ ಸತ್ಕರಿಸಿದರು. ಆನರ್ತ ಧನ್ವ ಕುರುಜಾಂಗಲ ಟಂಕ ಮತ್ಸ್ಯಪಾಂಚಾಲ ಮುಂತಾದ ದೇಶಗಳ ನರನಾರಿಯರು ಶ್ರೀಕೃಷ್ಣನ ಮುಖಕಮಲವನ್ನು ಕಣ್ಣುಗಳಿಂದ ಪಾನಮಾಡಿದರು. ಶಾಸ್ತ್ರಜ್ಞರು ಅವನ ದರ್ಶನದಿಂದ ಅಜ್ಞಾನವನ್ನು ಪರಿಹರಿಸಿಕೊಂಡು ಅಪರೋಕ್ಷವನ್ನು ಸಂಪಾದಿಸಿ ಮೋಕ್ಷ ಭಾಗಿಗಳಾದರು.

ಹೀಗೆ ದಾರಿಯುದ್ದಕ್ಕೂ ತನ್ನ ಗುಣಗಾನವನ್ನು ಆಲಿಸುತ್ತ ಶ್ರೀಕೃಷ್ಣ ವಿದೇಹನಗರಕ್ಕೆ ಬಂದು ತಲುಪಿದ. ಅಲ್ಲಿಯ ಜನರು ಹಿಂದೆ ಕೃಷ್ಣನ ಬಗ್ಗೆ ಬಹಳ ಕೇಳಿದ್ದರು. ಇದೀಗ ಪ್ರತ್ಯಕ್ಷ ಕಂಡು ಆನಂದಪಟ್ಟರು. ಅವನನ್ನೂ ಜೊತೆಗೆ ಬಂದಿದ್ದ ಮುನಿಗಳನ್ನೂ ಕರಮುಗಿದು ವಂದಿಸಿದರು. ತಮ್ಮ ಮೇಲೆ ಅನುಗ್ರಹ ಮಾಡಲೆಂದೇ ದೂರದ ದ್ವಾರಕೆಯಿಂದ ಆಗಮಿಸಿದ್ದ ಶ್ರೀಕೃಷ್ಣನನ್ನು ಶ್ರುತದೇವ ಬಹುಲಾಶ್ವರಿಬ್ಬರೂ ಏಕಕಾಲದಲ್ಲಿ ನಮಿಸಿ ಶ್ರಾದ್ಧಭೋಜನಕ್ಕೆ ಮುನಿಗಳೊಂದಿಗೆ ಆಗಮಿಸಲು ಆಮಂತ್ರಣ ನೀಡಿದರು. ಶ್ರೀಕೃಷ್ಣ ಎರಡು ರೂಪಗಳನ್ನು ತಳೆದು, ಅವನ ಮನೆಗೆ ಬಂದದ್ದು ಇವನಿಗೆ, ಇವನ ಮನೆಗೆ ಬಂದುದು ಅವನಿಗೆ ತಿಳಿಯದಂತೆ, ಇಬ್ಬರ

ಮನೆಗಳಿಗೂ ಏಕಕಾಲದಲ್ಲಿ ಭೆಟ್ಟಿ ನೀಡಿದ.

ಬಹುಲಾಶ್ವ ಮನೆಗೆ ಬಂದ ಶ್ರೀಕೃಷ್ಣನಿಗೂ ಮುನಿಗಳಿಗೂ ಪಾದ ಪ್ರಕ್ಷಾಳನ ಮಾಡಿ ಆ ನೀರನ್ನು ಕುಟುಂಬ ಸಮೇತನಾಗಿ ತಲೆಯಲ್ಲಿ ಧರಿಸಿದ. ಗಂಧಮಾಲ್ಯವಸ್ತ್ರ ಆಭರಣ ಧೂಪದೀಪ ಅರ್ಘ್ಯಗಳನ್ನೂ ಉತ್ತಮಗೋವುಗಳನ್ನೂ ನೀಡಿದ. ಅನ್ನ ಭೋಜನದಿಂದ ತೃಪ್ತಿಪಡಿಸಿ ಶ್ರೀಕೃಷ್ಣನ ಪಾದಗಳನ್ನು ತೊಡೆಯ ಮೇಲಿರಿಸಿಕೊಂಡು ಮೆಲ್ಲನೆ ಒತ್ತುತ್ತ ನುಡಿದ. 'ಏಕಾಂತ ಭಕ್ತರು ತನಗೆ, ಏಕಾಂತ ಭಕ್ತರಿಗೆ ತಾನು, ಪ್ರಿಯನೆಂದು ನೀನೇ ಹೇಳಿದ್ದನ್ನು ಸತ್ಯಮಾಡಲು ನೀನು ನಮಗೆ ಕಣ್ಣಿಗೆ ಗೋಚರನಾಗಿರುವೆ. ನಮಗೆ ನೀನೇ ಬೇಕು, ನಿನ್ನನ್ನು ಬಿಟ್ಟು ಬೇರೇನೂ ಬೇಡ ಎನ್ನುವ ಏಕಾಂತಭಕ್ತರಿಗೆ ನಿನ್ನನ್ನೇ ನೀನು ಕೊಡುವೆ. ಇದನ್ನು ತಿಳಿದವನು ಯಾರು ತಾನೇ ನಿನ್ನನ್ನು ಬಿಡಬಲ್ಲ? ಪೂರ್ಣನೆ, ನೀನು ನಿನ್ನವರೊಂದಿಗೆ ಕೆಲವು ದಿನಗಳ ಮಟ್ಟಿಗೆ ನಮ್ಮ ಮನೆಯಲ್ಲಿದ್ದು ಪಾದಧೂಳಿಯಿಂದ ನಮ್ಮ ವಂಶವನ್ನು ಉದ್ಧರಿಸಬೇಕು' ಹೀಗೆ ರಾಜ ನೀಡಿದ ಆಮಂತ್ರಣದ ಮೇರೆಗೆ ಶ್ರೀಕೃಷ್ಣ ಮುನಿಗಳೊಂದಿಗೆ ಅವನ ಅರಮನೆಯಲ್ಲಿ ವಾಸಮಾಡಿದ. ಮಿಥಿಲೆಯ ನರನಾರಿಯರಿಗೆ ಮಂಗಳ ಉಂಟುಮಾಡಿದ.

ಅದೇಕಾಲದಲ್ಲಿ ಶ್ರುತದೇವನೂ ಕೂಡ ತನ್ನ ಮನೆಗೆ ಶ್ರೀಕೃಷ್ಣ ಮುನಿಗಳೊಂದಿಗೆ ಬಂದುದನ್ನು ಕಂಡು ಸಂತೋಷದಿಂದ ಉತ್ತರೀಯ ವಸ್ತ್ರವನ್ನು ಹಾರಿಸುತ್ತ ಕುಣಿದ. ಚಾಪೆ ಹಾಸಿ ಶ್ರೀಕೃಷ್ಣನನ್ನೂ ಶಿಷ್ಯರೊಂದಿಗೆ ಮುನಿಗಳನ್ನೂ ಕೂಡಿಸಿ ಸ್ವಾಗತ ನಮಸ್ಕಾರಗಳನ್ನು ಮಾಡಿ ಪತ್ನಿಯೊಂದಿಗೆ ಅವರ ಪಾದಗಳನ್ನು ತೊಳೆದ. ಜಲವನ್ನು ಶಿರದಲ್ಲಿ ಧರಿಸಿದ. ತನ್ನ ಸಕಲಾಭೀಷ್ಟಗಳು ನೆರವೇರಿದುವು ಎಂದುಕೊಂಡ. ಬಿಳಿಸಾಸಿವೆ ಲಾವಂಚ ನೆಲ್ಲಿಕಾಯಿ ಅಮೃತಬಳ್ಳಿಗಳಿಂದ ಕೂಡಿದ ನೀರಿನಿಂದಲೂ ಸುಗಂಧಭರಿತವಾದ ಮೃತ್ತಿಕೆಯಿಂದಲೂ ತುಲಸಿ ದರ್ಭೆ ಕಮಲಗಳಿಂದಲೂ ಅವರನ್ನು ಆರಾಧಿಸಿ ತೃಪ್ತಿಪಡಿಸಿದ. ನನಗೆ ಪರಮಾತ್ಮನ ಮತ್ತು ಪರಮಾತ್ಮ ತತ್ವಜ್ಞಾನಿಗಳ ಸಂಗ ಹೀಗೆ ದೊರೆಯಲು ನಾನೇನು ಪುಣ್ಯ ಮಾಡಿದ್ದೇನೆ? ಇದು ಕೇವಲ ಹರಿಗುರುಗಳ ಅನುಗ್ರಹದ ಫಲ ಎಂದುಕೊಂಡ.

ಆತಿಥ್ಯವನ್ನು ಸ್ವೀಕರಿಸಿ ಸುಖಾಸನದಲ್ಲಿ ಕುಳಿತ ಶ್ರೀಕೃಷ್ಣನಿಗೂ ಮುನಿಗಳಿಗೂ ಶ್ರುತದೇವ ಪತ್ನೀಪುತ್ರ ಬಂಧುಮಿತ್ರರೊಂದಿಗೆ ಸಮೀಪದಲ್ಲಿ ಕುಳಿತು ಕಾಲುಗಳನ್ನು ಒತ್ತುತ್ತ ನುಡಿದ. 'ಇಂದು ನನಗೆ ಪರಮಪುರುಷನ ದರ್ಶನ ಲಭಿಸಿತು. ಸ್ವತಂತ್ರನಾದ ಆತ ಜಗತ್ತನ್ನು ಅಸ್ವತಂತ್ರವಾಗಿ ವಿಲಕ್ಷಣವಾಗಿ ಮಾಡುತ್ತಾನೆ. ಮಲಗಿರುವ ವ್ಯಕ್ತಿ ಭಗವದಿಚ್ಛೆಯಿಂದ ಸ್ವಪ್ನಲೋಕವನ್ನು ಸೃಷ್ಟಿಮಾಡಿ ನೋಡಿ ತಾನು ಅದಕ್ಕಿಂತ ಬೇರೆಯಾಗಿ ಕಾಣುತ್ತಾನೆ. ಹಾಗೆ ಪರಮಾತ್ಮನೂ ಜಗತ್ತನ್ನು ಸೃಷ್ಟಿಮಾಡಿ ಅಸ್ವತಂತ್ರವಾದ ಆ ಜಗತ್ತಿಗಿಂತ ಸ್ವತಂತ್ರನಾದ ತಾನು ಬೇರೆಯಾಗಿ ಕಾಣಿಸಿಕೊಳ್ಳುತ್ತಾನೆ. ಸದಾ ಅವರನ್ನು ಕೇಳುತ್ತ ಹೇಳುತ್ತ ನೋಡುತ್ತ ಅನುಮೋದಿಸುತ್ತಿರುವವರಿಗೆ ಪರಮಾತ್ಮ ಸಮೀಪ ದಲ್ಲಿಯೆ ಇರುತ್ತಾನೆ. ಕಾಣಿಸುತ್ತಾನೆ. ಮನಸ್ಸು ಕಲುಷಿತವಾಗಿದ್ದರೆ ಕಾಣಿಸುವುದಿಲ್ಲ.

ನಿನಗಿದೋ ನಮಸ್ಕಾರ. ನಾವು ನಿನಗೆ ಏನು ಸೇವೆ ಮಾಡಬೇಕು, ದಾಸರಾದ ನಮಗೆ ಅಪ್ಪಣೆ ಮಾಡು. ನೀನು ದರ್ಶನ ಕೊಟ್ಟೆ ಎಂದರೆ ಅಂದೇ ಎಲ್ಲ ದುಃಖ ಪರಿಹಾರವಾಗಿರುತ್ತದೆ. ಅದರಿಂದ ನಾವೇನೂ ನಿನ್ನಲ್ಲಿ ಬೇಡುವುದಿಲ್ಲ' ಎಂದ. ಶ್ರೀಕೃಷ್ಣನೆಂದ, 'ನಿನ್ನನ್ನು ಅನುಗ್ರಹಿಸಲೆಂದೇ ಈ ಎಲ್ಲ ಮುನಿಗಳು ಬಂದಿದ್ದಾರೆ. ಅವರ ಪಾದಧೂಳಿಯಲ್ಲಿ ನನ್ನ ಸನ್ನಿಧಾನವಿರುತ್ತದೆ. ಬ್ರಾಹ್ಮಣರು ಹುಟ್ಟಿನಿಂದಲೆ ಸರ್ವಶ್ರೇಷ್ಠರು. ಇನ್ನು ಅವರಲ್ಲಿ ತಪಸ್ಸು, ವಿದ್ಯೆ, ಸಿಕ್ಕಿದ್ದರಲ್ಲಿ ತೃಪ್ತಿ, ನನ್ನ ಕಥಾಶ್ರವಣಗಳೂ ಸೇರಿದ್ದರೆ ಇನ್ನೇನು ಹೇಳಬೇಕು? ಅವರನ್ನು ಗುರುಗಳೆಂದು ತಿಳಿಯದೆ ಅವಮಾನಿಸುವವರು ಅಜ್ಞಾನಿಗಳು. ಅವರು ಪ್ರತಿಮೆಗಳನ್ನೇ ದೇವರೆಂದು ತಿಳಿದು ನನ್ನನ್ನು ಅವಮಾನಿಸುವವರು. ಅದರಿಂದ ಬ್ರಹ್ಮಜ್ಞಾನಿಗಳಾದ ಮುನಿಗಳನ್ನು ಶ್ರದ್ಧೆಯಿಂದ ಆರಾಧಿಸು. ಅವರನ್ನು ಆರಾಧಿಸಿದರೆ ನನ್ನನ್ನು ಚೆನ್ನಾಗಿ ಆರಾಧಿಸಿದಂತಾಗುವುದು ಹೊರತು ನನ್ನನ್ನೇ ಎಷ್ಟು ವೈಭವದಿಂದ ಪೂಜಿಸಿದರೂ ಅದು ನನ್ನ ಆರಾಧನೆಯಾಗದು' ಹೀಗೆ ಭಕ್ತರಲ್ಲಿ ಪ್ರೀತಿಮಾಡುವ ಭಗವಂತ ಭಕ್ತರ ಬಳಿಗೆ ಹೋಗಿ ವಾಸಮಾಡಿ ಸನ್ಮಾರ್ಗವನ್ನು ಉಪದೇಶಿಸಿ ದ್ವಾರಕೆಗೆ ಹಿಂತಿರುಗಿದ.

❖❖❖

ಅಧ್ಯಾಯ - ೯೪

ಅಧ್ಯಾಯ ಸಾರಾಂಶ

ದೇವ ಅಸುರ ಮನುಷ್ಯರಲ್ಲಿ ಯಾರು ಅಮಂಗಳವೇಷದ ಮಂಗಳ ಕರನಾದ ಶಿವನನ್ನು ಭಜಿಸುವರೋ ಅವರು ಧನಿಕರಾಗುತ್ತಾರೆ. ಲಕ್ಷ್ಮೀಪತಿಯಾದ ಹರಿಯನ್ನು ಭಜಿಸುವವರು ಪ್ರಾಯಃ ಧನಿಕ ರಾಗುವುದಿಲ್ಲ. ಏಕೆಂದರೆ ಶಿವ ತ್ರಿವಿಧ ಅಹಂಕಾರ ಶರೀರಿ ಯಾಗಿದ್ದಾನೆ. ಆ ಅಹಂಕಾರದಿಂದಲೇ ಹದಿನಾರು ತತ್ವಗಳ ಸೃಷ್ಟಿ. ಅದರಿಂದ ಪಂಚಭೂತಗಳಲ್ಲಿ ಶಿವನನ್ನು ಆರಾಧಿಸಿದರೆ ಪಾಂಚಭೌತಿಕವಾದ ಐಶ್ವರ್ಯಗಳನ್ನು ಸಂಪಾದನೆ ಮಾಡಿಕೊಳ್ಳು ತ್ತಾನೆ. ಹರಿಗೆ ತ್ರಿಗುಣಾತ್ಮಕ ಶರೀರವಿಲ್ಲ. ಅವನನ್ನು ಭಜಿಸಿದರೆ ತ್ರಿಗುಣಾತ್ಮಕ ಶರೀರದಿಂದ ಮುಕ್ತನಾಗುತ್ತಾನೆ ಹೊರತು ಪಾಂಚಭೌತಿಕ ಐಶ್ವರ್ಯಗಳನ್ನು ಸಂಪಾದನೆ ಮಾಡಿಕೊಂಡು ತ್ರಿಗುಣಬದ್ಧನಾಗಿರುವುದಿಲ್ಲ.

ಅದರಿಂದ ಧರ್ಮರಾಜನಿಗೆ ಭಾಗವತ ಧರ್ಮಗಳನ್ನು ಉಪದೇಶಿಸುತ್ತ ಶ್ರೀಕೃಷ್ಣ ಹೀಗೆ ಹೇಳಿದ– 'ನಾನು ಯಾರನ್ನು ಅನುಗ್ರಹಿಸಲು ಬಯಸುವೆನೋ ಅವನಿಗೆ ಸಂಪತ್ತನ್ನು ನೀಡುವುದಿಲ್ಲ, ಧನಮದ ಬ್ಬಾರದಂತೆ, ಇದ್ದ ಧನವನ್ನೇ ಅಪಹರಿಸುತ್ತೇನೆ. ಆಗ ಆತ ದರಿದ್ರನಾಗಿ ದುಃಖ ಪಡುತ್ತಾನೆ, ಅವನಿಂದ ಬಂಧುಗಳೂ ದೂರವಾಗುತ್ತಾರೆ. ಹಣದಾಸೆಯಿಂದ ಆತ ಯತ್ನ ಮಾಡಿದರೂ ಅದು ವಿಫಲವಾಗುತ್ತದೆ. ದುಃಖ ತರುತ್ತದೆ. ಅದರಿಂದ ಹಣದಾಸೆ ದುಃಖಕಾರಣವೆಂದು ಅರಿವಾಗಿ ವೈರಾಗ್ಯ ಬರುತ್ತದೆ. ಆಗಲೆ ಅವನಿಗೆ ನನ್ನ ಭಕ್ತರ ಸಂಗ ದೊರಕುತ್ತದೆ. ನನ್ನ ಅನುಗ್ರಹವಾಗುತ್ತದೆ. ಎಲ್ಲ ದುಃಖಗಳೂ ಪರಿಹಾರವಾಗುತ್ತವೆ. ನಾನು ವ್ಯಾಪ್ತನಾದ ಚಿನ್ಮಯ ಪರಬ್ರಹ್ಮನಾಗಿರುವುದರಿಂದ ನನ್ನಾರಾಧನೆ ಕಷ್ಟ. ಕಷ್ಟದಿಂದ ಆರಾಧಿ ಸಿದರೂ ಸಂಪತ್ತನ್ನು ಕಸಿಯುತ್ತೇನೆ. ಹೀಗಾಗಿ ಸಂಪತ್ತಿಗೆ ಆಸೆಪಡುವ

ಅಸುರರು ನನ್ನನ್ನು ಬಿಟ್ಟು ಬೇರೆ ದೇವತೆಗಳನ್ನು ಆರಾಧಿಸುತ್ತಾರೆ. ಬೇರೆ ದೇವತೆಗಳು ಬೇಗನೆ ಒಲಿದು ಪಾಂಚಭೌತಿಕವಾದ ಸಂಪತ್ತನ್ನು ನೀಡುತ್ತಾರೆ. ಆ ಸಂಪತ್ತಿನ ಮದದಿಂದ ವರ ನೀಡಿದ ಆ ದೇವತೆಗಳನ್ನೇ ಮರೆಯುತ್ತಾರೆ. ಅವಮಾನಿಸುತ್ತಾರೆ, ತಾವು ಕೆಡುತ್ತಾರೆ.

ದೇವತೆಗಳೆಲ್ಲರೂ ನಿಗ್ರಹಕ್ಕೂ ಅನುಗ್ರಹಕ್ಕೂ ಶಕ್ತರೆ, ಆದರೆ ಬೇಗನೆ ನಿಗ್ರಹ ಅನುಗ್ರಹಗಳನ್ನು ಮಾಡುವವರು ಶಿವ ಮತ್ತು ಬ್ರಹ್ಮರು ಹೊರತು ವಿಷ್ಣುವಲ್ಲ. ಈ ವಿಷಯದಲ್ಲಿ ಒಂದು ಉದಾಹರಣೆ ಹೀಗಿದೆ– ವೃಕಾಸುರ ದುರ್ಬುದ್ಧಿಯವನು, ನಾರದರನ್ನು ಕಂಡು ಕೇಳಿದ, ತ್ರಿಮೂರ್ತಿಗಳಲ್ಲಿ ಯಾರು ಬೇಗನೆ ಒಲಿಯುವವನು ಎಂದು. ನಾರದರು ಹೇಳಿದರು, ಶೀಘ್ರ ಅಭೀಷ್ಟಸಿದ್ಧಿಯಾಗ ಬೇಕೆಂದರೆ ನೀನು ಶಿವನನ್ನು ಆರಾಧಿಸು. ಅವನು ಸಣ್ಣ ಸೇವೆಗೂ ಬೇಗನೆ ಒಲಿಯುತ್ತಾನೆ. ಸಣ್ಣ ಅಪರಾಧಕ್ಕೂ ಬೇಗನೆ ಮುನಿಯುತ್ತಾನೆ ರಾವಣ ಬಾಣಾಸುರರು ಸ್ತುತಿಪಾಠಕರಂತೆ ಕೇವಲ ಸ್ತುತಿಮಾಡಿದ್ದಕ್ಕೇ ಶಿವ ಅನುಪಮ ಸಂಪತ್ತನ್ನು ನೀಡಿ ಅವರಿಂದಲೇ ಕಷ್ಟಕ್ಕೀಡಾದ.'

ನಾರದರ ಮಾತನ್ನು ಕೇಳಿ ವೃಕಾಸುರ ಕೇದಾರಕ್ಷೇತ್ರದಲ್ಲಿ ನಿಯಮಬದ್ಧವಾಗಿ ತನ್ನ ಮೈಯ ಮಾಂಸದಿಂದ ಅಗ್ನಿಯಲ್ಲಿ ಶಿವನಿಗೆ ಆಹುತಿ ನೀಡಿದ. ಆದರೂ ಶಿವನೊಲಿದು ಮೈ ದೋರದಿದ್ದಾಗ ಬೇಸತ್ತು ಏಳನೇ ದಿನದಲ್ಲಿ ಕೇದಾರ ತೀರ್ಥದಿಂದ ತೊಯ್ದು ತನ್ನ ತಲೆಯನ್ನೇ ಕತ್ತರಿಸಿಕೊಳ್ಳಲು ಉದ್ಯುಕ್ತನಾದ. ಶಿವ ಅಗ್ನಿಯಿಂದ ಎದ್ದು ಬಂದು ಕೈಹಿಡಿದು ಅವನನ್ನು ತಡೆದ. 'ಬೇಕಾದ ವರವನ್ನು ಕೇಳು ಕೊಡುತ್ತೇನೆ' ಎಂದ. ಆಗ ಆ ಮಹಾಪಾಪಿ ಹೇಳಿದ. 'ನಾನು ಯಾರ ತಲೆಯಮೇಲೆ ಕೈಯಿಡುವೆನೋ ಅವನು ಸಾಯಬೇಕು' ಎಂದು. ಶಿವ ಒಂದುಕ್ಷಣ ಎದೆಗುಂದಿದರೂ ಭಗವಂತನನ್ನು ನೆನೆದು 'ಆಗಲಿ' ಎಂದ. ಒಡನೆ ಅಸುರ ಆ ವರವನ್ನು ಪರೀಕ್ಷಿಸಲು ಶಿವನ ತಲೆಯ ಮೇಲೇ ಕೈ ಇಡಲು ಬಂದ. ಶಿವ ಭಯದಿಂದ ನಡುಗುತ್ತ ಭೂಮಿ ಅಂತರಿಕ್ಷ ಪಾತಾಳಗಳಲ್ಲಿ ಎಲ್ಲೆಡೆ ಧಾವಿಸಿದ. ಈ ಸಂಕಷ್ಟಕ್ಕೆ ಪರಿಹಾರ

ಕಾಣದೆ ದೇವೋತ್ತಮರು ಕೂಡ ಎಲ್ಲರೂ ಸುಮ್ಮನಿದ್ದರು.

ಶಿವ ವೈಕುಂಠಕ್ಕೆ ಧಾವಿಸಿದ. ಶ್ರೀಹರಿ ಅಸುರನಿಗೆ ದೂರದಿಂದಲೆ ಒಬ್ಬ ಬಾಲಕನಾಗಿ ಕಂಡುಬಂದ. ಬಾಲಬ್ರಹ್ಮಚಾರಿ ದರ್ಭಪಾಣಿಯಾಗಿ ವಿನೀತನಾಗಿ ವೃಕಾಸುರನಿಗೆ ಅಭಿವಾದನ ಮಾಡಿದ. 'ಅಸುರನೆ, ಏಕೆ ಇಷ್ಟು ದೂರ ಬಂದಿರುವೆ? ನೀನು ಆಯಾಸ ಗೊಂಡಿರುವೆ. ಕ್ಷಣಕಾಲ ವಿಶ್ರಾಂತಿಪಡೆ. ಶರೀರ ಸಕಲಾಭೀಷ್ಟ ಸಾಧಕ. ಅದನ್ನು ಹೀಗೆ ದಂಡಿಸಬಾರದು. ನೀನು ಏನು ಮಾಡಬೇಕೆಂದಿರುವೆ ಅದನ್ನು ಹೇಳು. ಲೋಕದಲ್ಲಿ ಪ್ರತಿಯೊಬ್ಬನೂ ಇನ್ನೊಬ್ಬನ ಸಹಾಯದಿಂದ ತನ್ನ ಉದ್ದೇಶವನ್ನು ಸಾಧಿಸಿಕೊಳ್ಳುತ್ತಾನೆ. ನಾನೀಗ ನಿನಗೆ ಏನಾದರೂ ಸಹಾಯ ಮಾಡಬಲ್ಲೆ' ಎಂದ. ಅಸುರ ನಡೆದ ಎಲ್ಲ ಸಂಗತಿಯನ್ನು ವಿವರವಾಗಿ ತಿಳಿಸಿದ.

ಆಗ ಬಾಲಕ ನುಡಿದ, 'ಶಿವ ನೀಡಿದ ವರವನ್ನು ನಾವು ಯಾರೂ ನಂಬುವುದಿಲ್ಲ. ಅವನು ದಕ್ಷಪ್ರಜಾಪತಿಯ ಶಾಪದಿಂದ ಪಿಶಾಚ ನಾಗಿದ್ದಾನೆ, ಪ್ರೇತಪಿಶಾಚಗಳ ದೊರೆಯಾಗಿದ್ದಾನೆ. ಕೋಪಿಷ್ಠ ಮೈಯೆಲ್ಲ ಕೋಪವನ್ನೇ ತುಂಬಿಕೊಂಡವನು. ಕೋಪ ಉಳ್ಳವನು ಸತ್ಯಹೇಳುವುದಿಲ್ಲ. ಇದನ್ನು ತಿಳಿಯದ ಮೂಢ ನೀನು. ನಿನಗೆ ಅವನ ಮಾತಿನಲ್ಲಿ ವಿಶ್ವಾಸವಿದ್ದರೆ ಸಾಲದು. ನಮಗೆ ವಿಶ್ವಾಸವಿಲ್ಲ. ಅದರಿಂದ, ಅವನ ವರ ನೀನು ಹೇಳುವಂತೆ ನಿಜವೋ ಅಥವಾ ನಾನು ಹೇಳುವಂತೆ ಸುಳ್ಳೋ, ಪರೀಕ್ಷೆ ಮಾಡೋಣ. ನೀನು ನಿನ್ನ ತಲೆಯ ಮೇಲೆ ಕೈಯಿಟ್ಟು ನೋಡು. ಈಗಲೇ ಅದು ಸುಳ್ಳೆಂದು ಸಾಬೀತಾಗುವುದು. ಆಗ ಸುಳ್ಳು ವರ ನೀಡುವ ಆತನನ್ನು ನೀನೆ ಕೊಂದುಬಿಡು. ಅವನು ಮತ್ತೆ ಯಾರಿಗೂ ಸುಳ್ಳುವರ ನೀಡಬಾರದು, ಹಾಗೆ ಮಾಡು.'

ಹೀಗೆ ಭಗವಂತನಾಡಿದ ಮೋಹಕ ನುಡಿಗಳಿಂದ ಅಸುರನ **ಬುದ್ಧಿ** ಮಂಕಾಯಿತು. ವರದಾನವನ್ನೇ ಮರೆತು ಸುಮ್ಮನೆ **ತನ್ನ ತಲೆಯ** ಮೇಲೇ ಕೈಯಿಟ್ಟುಕೊಂಡ. ಒಡನೆ ಆತ ತಲೆಯೊ**ಡೆದು, ಸಿಡಿಲು** ಬಡಿದವನಂತೆ ನೆಲದ ಮೇಲೊರಗಿದ. ಅಂತರಿಕ್ಷ**ದಲ್ಲಿ 'ಶ್ರೀಹರಿಗೆ**

ಜಯವಾಗಲಿ', 'ಶ್ರೀಹರಿಗೆ ನಮಸ್ಕಾರ.' 'ಶ್ರೀಹರಿ ಹೀಗೆ ಮಾಡಿದ್ದು ಒಳ್ಳೆಯದಾಯಿತು' ಎನ್ನುವ ಮಾತುಗಳು ಕೇಳಿಬಂದವು. ದೇವತೆಗಳು ಹೂಮಳೆ ಸುರಿಸಿದರು. ಶಿವ ಸಂಕಟದಿಂದ ಪಾರಾದ. ಭಗವಂತ ಶಿವನಿಗೆ ನುಡಿದ, 'ಈ ಅಸುರ ತನ್ನ ಪಾಪದಿಂದಲೆ ತಾನು ಹತನಾದ. ಪರರಿಗೆ ದ್ರೋಹ ಬಗೆವವನು ಹೇಗೆ ತಾನೆ ಕ್ಷೇಮ ದಿಂದಿರುತ್ತಾನೆ? ಅದರಲ್ಲಿಯೂ ಜಗದ್ಗುರುವಾದ ವಿಶ್ವೇಶನಾದ ನಿನಗೆ ದ್ರೋಹ ಬಗೆವವನು ಸರ್ವಥಾ ಕ್ಷೇಮದಿಂದಿರಲಾರ.'

ಹೀಗೆ ಹರಿ ಮಾಡಿದ ಹರನ ಸಂಕಟ ಮೋಚನ ಕಥೆಯನ್ನು ಕೇಳುವವನು ಸಂಸಾರ ಸಂಕಟದಿಂದ ಮೋಚನ ಪಡೆಯುತ್ತಾನೆ ಎಲ್ಲ ಸಂಕಟಗಳಿಂದಲೂ ಮೋಚನ ಪಡೆಯುತ್ತಾನೆ.

❖ ❖ ❖

ಅಧ್ಯಾಯ - ೯೫

ಅಧ್ಯಾಯ ಸಾರಾಂಶ

ಸರಸ್ವತೀನದೀತೀರದಲ್ಲಿ ಋಷಿಗಳು ಸತ್ರಯಾಗ ಮಾಡಿದರು. ಅವರಿಗೆ ತ್ರಿಮೂರ್ತಿಗಳಲ್ಲಿ ಯಾರು ಉತ್ತಮನೆಂಬ ಜಿಜ್ಞಾಸೆ ಉಂಟಾಯಿತು. ಅದನ್ನು ತಿಳಿದು ಬರಲು ಮುನಿಗಳು ಬ್ರಹ್ಮಪುತ್ರರಾದ ಭೃಗುಮುನಿಯನ್ನು ಕಳಿಸಿದರು. ಮುನಿ ಬ್ರಹ್ಮಸಭೆಗೆ ಹೋದರು. ಬ್ರಹ್ಮನ ಕ್ಷಮಾಗುಣವನ್ನು ಪರೀಕ್ಷಿಸಲು ಸ್ತೋತ್ರ ಮಾಡದೆ ಸುಮ್ಮನೆ ನಿಂತರು. ಬ್ರಹ್ಮ ಮುನಿಯ ಮೇಲೆ ಕುಪಿತನಾದ. ಆದರೆ ಮಗನ ಮೇಲೆ ಉರಿದೆದ್ದ ಕೋಪವನ್ನು, ನೀರಿನಿಂದ ಬೆಂಕಿಯನ್ನು ಆರಿಸುವಂತೆ, ತಾನೆ ಶಾಂತಗೊಳಿಸಿದ. ಭೃಗುಮುನಿ ಮುಂದೆ ಕೈಲಾಸಕ್ಕೆ ಹೋದರು. ಶಿವ ಮುನಿಯನ್ನು ತಮ್ಮನೆಂದು ಆಲಿಂಗಿಸಿಕೊಳ್ಳಲು ಬಂದ. ಆದರೆ ಶಿವನ ಕ್ಷಮಾಗುಣವನ್ನು ಪರೀಕ್ಷಿಸುವುದಕ್ಕಾಗಿ 'ನೀನು ಅಮಂಗಳಾಚಾರದವನು, ನಿನ್ನ ಆಲಿಂಗನ ನನಗೆ ಬೇಡ' ಎಂದರು. ಶಿವ ಕುಪಿತನಾಗಿ ಶೂಲ ವನ್ನೆತ್ತಿದ. ದೇವಿ ಪಾರ್ವತಿ ಪತಿಯ ಪಾದಗಳಿಗೆ ಎರಗಿ ಸಮಾಧಾನ ಪಡಿಸಿದಳು.

ಹೀಗೆ ಕಷ್ಟದಿಂದ ಪಾರಾದ ಮುನಿ ವೈಕುಂಠಕ್ಕೆ ತೆರಳಿದ. ಅಲ್ಲಿ ಲಕ್ಷ್ಮೀದೇವಿಯ ತೊಡೆಯ ಮೇಲೆ ತಲೆಯಿಟ್ಟು ನಾರಾಯಣ ಮಲಗಿದ್ದ. ಅವನೆದೆಯನ್ನು ಮುನಿ ಕಾಲಿಂದ ಒದ್ದರು. ಭಗವಂತ ಲಕ್ಷ್ಮಿಯೊಂದಿಗೆ ಹಾಸಿಗೆಯಿಂದ ಬೇಗನೆ ಇಳಿದು ಮುನಿಗೆ ತಲೆಬಾಗಿ ನಮಿಸಿದ. 'ಮುನಿಯೆ, ನಿನಗೆ ಸ್ವಾಗತ. ಈ ಆಸನದಲ್ಲಿ ಕ್ಷಣಕಾಲ ಕುಳಿತುಕೊಳ್ಳು. ತಿಳಿಯದೆ ನಾವು ಮಾಡಿದ ಅಪರಾಧವನ್ನು ಕ್ಷಮಿಸು. ಗಂಗಾದಿ ತೀರ್ಥಗಳಿಗೂ ಪಾವಿತ್ರ್ಯ ತಂದುಕೊಡುವ ಪಾದೋದಕದಿಂದ ನನ್ನನ್ನೂ ನನ್ನ ಲೋಕವನ್ನೂ ನನ್ನಾಶ್ರಯ ದಲ್ಲಿರುವ ಎಲ್ಲ ಲೋಕಪಾಲರನ್ನೂ ಪವಿತ್ರಗೊಳಿಸು ನಾನಿಂದು ಲಕ್ಷ್ಮಿಗೆ ಎಂದೂ ಬಿಡಲಾಗದಂಥ ಆಶ್ರಯನೆನಿಸಿದೆ. ಏಕೆಂದರೆ ನಿನ್ನ

ಪಾದಧೂಳಿಯಿಂದ ಪವಿತ್ರವಾದ ನನ್ನೆದೆಯಲ್ಲಿ ಇನ್ನು ಮುಂದೆ ಆಕೆ ಸದಾ ನೆಲೆಸಿರುತ್ತಾಳೆ. ನನ್ನದೆಯಲ್ಲಿರುವ ನಿನ್ನ ಪಾದಚಿಹ್ನೆ ಶ್ರೀವತ್ಸ ಎಂಬ ಹೆಸರಿನಿಂದ ಪ್ರಸಿದ್ಧವಾಗಲಿ.'

ಶ್ರೀಹರಿಯ ದಯಾರಸಪೂರ್ಣವಾದ ಈ ಮಾತಿನಿಂದ ಭೃಗುಮುನಿ ತೃಪ್ತರಾದರು. ಭಕ್ತ್ಯುದ್ರೇಕದಿಂದ ಬಿಗಿದ ಕಂಠದವರಾಗಿ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಮೌನವಾದರು. ಪುನಃ ಸತ್ರಕ್ಕೆ ಬಂದು ಮುನಿಗಳ ಮುಂದೆ ತಾನು ಅನುಭವದಿಂದ ಕಂಡಿದ್ದನ್ನೆಲ್ಲ ವರ್ಣಿಸಿ ಹೇಳಿದರು. ಮುನಿಗಳು ಅದನ್ನು ಕೇಳಿ ಸಂಶಯವನ್ನು ದೂರಮಾಡಿ ಕೊಂಡರು. ಶಾಂತಿ ಅಭಯಗಳನ್ನು ನೀಡುವ ವಿಷ್ಣುವನ್ನೇ ಸರ್ವೋತ್ತಮನೆಂದು ನಂಬಿದರು.

❖❖❖

ಅಧ್ಯಾಯ - ೯೬

ಅಧ್ಯಾಯ ಸಾರಾಂಶ

'ಶ್ರೀಹರಿ ಮಾತಿಗೆ ನಿಲುಕುವವನಲ್ಲ. ಗುಣತ್ರಯರಹಿತನೂ ಆಗಿದ್ದಾನೆ ಎಂದು ಶ್ರುತಿಗಳು ಹೇಳುತ್ತಿವೆ. ಆದರೆ ಮಾತಿಗೆ ನಿಲುಕುವ ಗುಣತ್ರಯ ಉಳ್ಳ ವಸ್ತುವನ್ನೇ ಮಾತುಗಳು ತಿಳಿಸಬಲ್ಲವು. ಮಾತಿಗೆ ನಿಲುಕದ ಗುಣವಿಲ್ಲದ ಭಗವಂತನನ್ನು ಶ್ರುತಿ ಹೇಗೆ ಹೇಳುತ್ತದೆ? ಲಯಕಾಲದಲ್ಲಿ ವಿಧಿನಿಷೇಧ ಯೋಗ್ಯರಾದ ಜೀವರು ಭಗವಂತನ ಉದರದೊಳಗೆ ಗಾಢ ಸುಷುಪ್ತಿಯಲ್ಲಿರುವುದರಿಂದ ವೇದಗಳು ಆಗ ಯಾರಿಗೆ ವಿಧಿನಿಷೇಧಗಳನ್ನು ಮಾಡುವುವು? ಹೀಗಾಗಿ ಲಯಕಾಲ ದಲ್ಲಿ ವೇದವು ವಿಧಿನಿಷೇಧಗಳನ್ನು ತಿಳಿಸುವ ಪ್ರಮಾಣವಾಗಿರುವು ದಿಲ್ಲ. ಹರಿಸ್ತುತಿರೂಪವಾಗಿ ಅದು ಯಾವಕಾಲದಲ್ಲಿಯೂ ಪ್ರಮಾಣವಾಗಲು ಸಾಧ್ಯವಿಲ್ಲ. ಏಕೆಂದರೆ ಸ್ತುತಿ ಎಂದರೆ ಗುಣಗಾನ. ಗುಣವೇ ಇಲ್ಲದ ಹರಿಯ ಗುಣಗಾನ ಅಶಕ್ಯ. ಲಯಕಾಲದಲ್ಲಂತೂ ಗುಣಗಾನ ಮಾಡುವ ಜೀವರು ಎಚ್ಚೆತ್ತಿರುವುದಿಲ್ಲ ಎಂದಮೇಲೆ ಆಗ ವೇದವು ಗುಣಗಾನರೂಪವಾಗಿ ಪ್ರಮಾಣವಾಗಿರಲು ಶಕ್ಯವಿಲ್ಲ' ಎಂದು ಪರೀಕ್ಷಿತರಾಜನ ಸಂಶಯಕ್ಕೆ ಶುಕಮುನಿಗಳು ಸಮಾಧಾನ ವನ್ನು ಹೇಳುತ್ತಾರೆ–

ಮುಮುಕ್ಷುಗಳಿಗೆ ತನ್ನ ಬಗ್ಗೆ ತತ್ತ್ವಜ್ಞಾನ ಉಂಟಾಗಲಿ ಎಂದೇ ಭಗವಂತ ವೇದಗಳನ್ನು ಉಪದೇಶಿಸುತ್ತಾನೆ. ಮುಮುಕ್ಷುಗಳು ವೇದಾಧ್ಯಯನದ ಪುಣ್ಯದಿಂದ ಮೋಕ್ಷ ಪಡಯಲಿ ಎಂದೇ ಬುದ್ಧಿ ಮನಸ್ಸು ಇಂದ್ರಿಯ ಪ್ರಾಣಗಳನ್ನು ಸೃಷ್ಟಿ ಮಾಡುತ್ತಾನೆ ಎಂದಮೇಲೆ ಭಗವಂತ ಮಾತಿಗೆ ನಿಲುಕುವವನಲ್ಲವೆನ್ನಲಾಗದು. ಅವನಲ್ಲಿ ತ್ರಿಗುಣಗಳಿಲ್ಲದಿದ್ದರೂ ಸ್ವರೂಪಭೂತ ಅಪ್ರಾಕೃತ ಗುಣಗಳಿವೆ ಎಂದೂ, ಅದರಿಂದ ಅವನ ಬಗ್ಗೆ ವೇದವು ತತ್ತ್ವಜ್ಞಾನ ಉಂಟು ಮಾಡುತ್ತದೆ ಎಂದೂ ಹೇಳಬೇಕು. ಈ ಅಪ್ರಾಕೃತ ಗುಣಗಳು ಅನಂತವಿರುವುದರಿಂದ ಪೂರ್ತಿಯಾಗಿ ಮಾತಿಗೆ ನಿಲುಕುವುದಿಲ್ಲ ಎನ್ನಬೇಕು. ಅವನೇ ವೇದದ ಮೂಲಕ [illegible] ಗುಣಗಳನ್ನು ತಿಳಿಸಬೇಕು ಹೊರತು ಸ್ವತಂತ್ರವಾಗಿ [illegible]

ತಿಳಿಯಲಾರರು ಎನ್ನಬೇಕು. ಆ ಅಭಿಪ್ರಾಯದಿಂದಲೆ 'ಭಗವಂತನು ಗುಣವಿಲ್ಲ ದವನು ಮಾತಿಗೆ ನಿಲುಕದವನು' ಎಂದು ವೇದ ಹೇಳುವುದನ್ನು ಅರ್ಥ ಮಾಡಿಕೊಳ್ಳಬೇಕು. ಲಯಕಾಲದಲ್ಲಿ ಶ್ರುತಿಗಳೇ ಹೀಗೆ ಸ್ತುತಿ ಮಾಡುತ್ತಿರುವುದರಿಂದ ಆ ಕಾಲದಲ್ಲಿ ಸ್ತುತಿ ಮಾಡುವವರಿಲ್ಲ ಎನ್ನಲಾಗದು. ಅದರಿಂದ ಎಲ್ಲ ಕಾಲದಲ್ಲಿಯೂ ವೇದವು ಹರಿಯ ಗುಣಗಾನರೂಪವಾಗಿ ಪ್ರಮಾಣವೆನಿಸಲು ಬಾಧಕವಿಲ್ಲ. 'ಜೀವರ ಮೋಕ್ಷಸಾಧನೆಗಾಗಿ ಬುದ್ಧಿ ಇಂದ್ರಿಯ ಮುಂತಾದುವನ್ನು ಸೃಷ್ಟಿ ಮಾಡುತ್ತಾನೆ' ಎನ್ನುವುದರ ಮೂಲಕ ಸೃಷ್ಟಿಕಾಲದಲ್ಲಿ ಜೀವರಿಗೆ ಶ್ರವಣಾದಿ ವಿಧಿನಿಷೇಧರೂಪವಾಗಿ ವೇದವು ಪ್ರಮಾಣವಾಗುತ್ತದೆ ಎಂದೂ ಹೇಳಿದಂತಾಯಿತು.

ಹೀಗೆ ಪರಮಾತ್ಮ ಅನಂತವೇದಗಳಿಂದ ವೇದ್ಯನೆಂಬ ವಿಷಯದಲ್ಲಿ ನಾರದ ನಾರಾಯಣರ ಸಂವಾದ ಎಲ್ಲ ಸಂಶಯಗಳಿಗೆ ಪರಿಹಾರ ನೀಡುತ್ತದೆ. ನಾರದರು ಬದರಿಯ ನಾರಾಯಣ ಋಷಿಯ ಮುಂದೆ

ವೇದಪ್ರವೃತ್ತಿಯ ಬಗ್ಗೆ ಕೇಳಿದಾಗ, ಜನಲೋಕದಲ್ಲಿ ಸನಂದನ ಮುನಿ ಸನಕಾದಿಗಳಿಗೆ ಮಾಡಿದ್ದ ಪ್ರವಚನದ ವಿವರಗಳನ್ನು ಹೇಳಿದರು.

ಸನಂದನಮುನಿ ಹೀಗೆ ಹೇಳಿದರು– ಶ್ರೀಹರಿ ಲಯಕಾಲದಲ್ಲಿ ಲಕ್ಷ್ಮಿಯೊಡನೆ ಮತ್ತು ಲಕ್ಷ್ಮಿಯ ಶ್ರೀಭೂರೂಪಗಳೊಡನೆ ಆಲದೆಲೆಯ ಮೇಲೆ ಮಲಗಿದ. ಲಯಕಾಲದ ಕೊನೆಭಾಗದಲ್ಲಿ ಲಕ್ಷ್ಮಿಯು ವೇದಾಭಿಮಾನಿದುರ್ಗಾರೂಪದಲ್ಲಿ ಹರಿಯನ್ನು ಸ್ತೋತ್ರ ಮಾಡಿದಳು, ಮಲಗಿದ್ದ ರಾಜನನ್ನು ಉಷಃಕಾಲದಲ್ಲಿ ಸ್ತುತಿಪಾಠಕರು ಸ್ತುತಿಮಾಡಿ ಹೇಗೆ ಎಬ್ಬಿಸುವರೋ ಹಾಗೆ.

'ಹೇ ಅಜಿತ, ನಿನಗೆ ಜಯವಾಗಲಿ. ಎದ್ದೇಳು. ಜೀವಜಡಗಳನ್ನು ಸೃಷ್ಟಿ ಮಾಡು. ಆಗಲೆ ನಾವು ವೇದಾಭಿಮಾನಿ ದುರ್ಗಾರೂಪರು ವಿಧಿ ನಿಷೇಧಗಳ ಮೂಲಕ ನಿನ್ನ ಪ್ರೀತ್ಯರ್ಥವಾಗಿ ಕರ್ಮಮಾಡುವಂತೆ ಜೀವರನ್ನು ಪ್ರೇರಿಸಬಲ್ಲೆವು.

ಪ್ರಕೃತಿಯ ಅಭಿಮಾನಿಯಾದ ದುರ್ಗೆಗಿಂತಲೂ ಉತ್ತಮನಾದ್ದರಿಂದ ನೀನು ಸರ್ವೋತ್ತಮ. ಜ್ಞಾನಿಗಳು ತ್ರಿಕರಣಪೂರ್ವಕವಾಗಿ ನಿನ್ನನ್ನೇ ಸೇವಿಸುತ್ತಾರೆ. ಅವರು ಮನಸ್ಸಿನಿಂದ ನಿನ್ನ ಅನಂತ ಗುಣಗಳನ್ನು

ತಿಳಿಯಲು ಶಕ್ತರಾಗದಿದ್ದರೂ ಶಕ್ತ್ಯನುಸಾರ **ಕೆಲವಾದರೂ** ಗುಣಗಳನ್ನು ತಿಳಿಯಬಲ್ಲರು. ನಿನ್ನ ಸ್ವರೂಪದಲ್ಲಿ ಪೂರ್ಣತ್ವ**ವೆಂಬ** ಒಂದಂಶವನ್ನು ಅವರು ತಿಳಿದರೂ ಅವರು ನಿನ್ನನ್ನು ತಿಳಿದಂ**ತೇ** ಆಯಿತು. ಏಕೆಂದರೆ ಮಾನವ ಇಡೀ ಭೂಮಿ ಪ್ರದಕ್ಷಿಣೆ ಮಾಡಲು ಶಕ್ತನಾಗದಿದ್ದರೂ ಕೆಲವು ಭಾಗದಲ್ಲಿ ಸಂಚಾರ ಮಾಡಿ ಭೂಪ್ರದಕ್ಷಿಣ ಫಲಕ್ಕೆ ಭಾಗಿಯಾಗುತ್ತಾನೆ ತಾನೆ?

ಸಂಸಾರಿ ಜೀವರೆ ನಿನ್ನ ಕಥಾಮೃತದಲ್ಲಿ ಮುಳುಗಿ ಎಲ್ಲ ತಾಪಗಳನ್ನು ಪರಿಹರಿಸಿಕೊಳ್ಳುತ್ತಾರೆ ಎಂದಮೇಲೆ ಮುಕ್ತರು ನಿನ್ನನ್ನು ಪ್ರತ್ಯಕ್ಷ ಕಂಡು ಭಜಿಸುವವರು ತಾಪಗಳೆಲ್ಲವನ್ನೂ ಪರಿಹರಿಸಿಕೊಳ್ಳುವರೆಂದು ಬೇರೇನು ಹೇಳಬೇಕು?

ಬ್ರಹ್ಮಾದಿ ದೇವತೆಗಳಿಗೂ ನಿಯಾಮಕನಾದ ನಿನ್ನನ್ನು **ದ್ವೇಷಿಸು ವವರು** ತಮಸ್ಸಿನಲ್ಲಿ ಬಿದ್ದು ಕಮ್ಮಾರನ ತಿದಿಯಂತೆ ದುಃಖದಿಂದ **ನಿಟ್ಟುಸಿರು** ಬಿಡಬೇಕಾಗುವುದು. ನಿನ್ನನ್ನು ದ್ವೇಷಿಸದೆ ನಿನ್ನ ಕುರಿತು ಯೋಗ್ಯರಿಗೆ ಉಪದೇಶಿಸುವವರು ಮುಕ್ತಿ ಪಡೆಯುತ್ತಾರೆ.

ನೀನು ಉದರದಲ್ಲಿ ಉದರನಾಮನಾಗಿ ಶಾರ್ಕರಾಕ್ಷ್ಯ ಮುನಿ ಗಳಿಂದಲೂ ಹೃದಯದಲ್ಲಿ ಹೃದಯನಾಮಕನಾಗಿ ಆರುಣಿಮುನಿ ಗಳಿಂದಲೂ ಶಿರಸ್ಸಿನಲ್ಲಿ ಚಕ್ಷುರಾದಿ ನಿಯಾಮಕನಾಗಿ ಚಕ್ಷುರಾದಿ ಇಂದ್ರಿಯದೇವತೆಗಳಿಂದಲೂ ಆರಾಧಿಸಲ್ಪಡುತ್ತ ಮುಖ್ಯಪ್ರಾಣನನ್ನು ಮುಂದೆ ಮಾಡಿಕೊಂಡು ಎಲ್ಲ ಜಗದ್‌ವ್ಯಾಪಾರಗಳನ್ನು ನಡೆಸುವೆ. ಹೀಗೆ ಉಪಾಸನೆ ಮಾಡುವವರೆಲ್ಲರೂ ಮುಕ್ತಿ ಪಡೆಯುತ್ತಾರೆ.

ಕಟ್ಟಿಗೆಯಲ್ಲಿ ಬೆಂಕಿ ಕಟ್ಟಿಗೆಯಂತೆಯೇ ವರ್ತಿಸುತ್ತದೆ. ಹಾಗೇ ಜೀವಿಗಳೊಳಗೆ ನೀನು ಜೀವಿಗಳಂತೆಯೇ ವರ್ತಿಸುವುದರಿಂದ ಅಜ್ಞರಿಗೆ ನೀನು ಜೀವಿಗಳಂತೆ ದುಃಖಿ ಎಂದೇ ತೋರಿಕೊ**ಳ್ಳುವೆ**. ಆದರೆ ನೀನು ಸರ್ವಕರ್ತನೆಂದು ಮುಖ್ಯಪ್ರಾಣನಿಗೆ ಗೊತ್ತು. **ಪ್ರತಿಕ್ಷಣ** ರೂಪಾಂತರ ಹೊಂದುವ ಶರೀರಗಳಲ್ಲಿ ನೀನು ಮಾತ್ರ **ಏಕಪ್ರಕಾರ** ದಿಂದಲೆ ಇರುವೆ. ಹೀಗೆ ತಿಳಿಯುವವರು ಮುಕ್ತಿ ಪಡೆ**ಯುತ್ತಾರೆ**.

ಜೀವರ ತಾರತಮ್ಯಾನುಸಾರ ತಾರತಮ್ಯದಿಂದಲೆ **ಅವರಲ್ಲಿ ನಿನ್ನ** ಸನ್ನಿಧಾನವಿರುತ್ತದೆ. ದುರಾಚಾರಿಗಳಲ್ಲಿಯೂ **ನೀನಿದ್ದು ಅವರು**

ಮಾಡುವ ದುರಾಚಾರವನ್ನೇ 'ಬ್ರಹ್ಮಾದಿಗಳು ಅವರಲ್ಲಿ ನಿಂತು ಮಾಡುವ ನಿನ್ನ ಪೂಜೆ' ಎಂದು ಸ್ವೀಕರಿಸುವೆ. ಹೊರಗೆ ವ್ಯಾಸಾದಿ ಮತ್ತು ಬುದ್ಧಾದಿ ರೂಪಗಳಿಂದ ದೇವಾಸುರರಿಗೆ ನೀನು ಮಾಡುವ ಪ್ರೇರಣೆಯು ನೀನು ಮಾಡುವ ನಿನ್ನ ಪೂಜೆಯೆ ಆಗಿದೆ. ಮತ್ತು ಎಲ್ಲರೊಳಗೆ ಅಂತರ್ಯಾಮಿಯಾಗಿ ನೀಡುವ ಪ್ರೇರಣೆಯೂ ನೀನು ಮಾಡುವ ನಿನ್ನ ಪೂಜೆಯೇ ಆಗಿದೆ.

ನಿನ್ನನ್ನು ವೇದಗಳಿಂದ ತಿಳಿದು ವೇದೋಕ್ತ ಕರ್ಮಗಳಿಂದ ಆರಾಧಿಸಿ ಧ್ಯಾನ ಮಾಡಿದರೆ ಅಪರೋಕ್ಷಜ್ಞಾನ ಲಭಿಸುವುದು. ಬಳಿಕ ಜ್ಞಾನಪೂರ್ವಕವಾಗಿ ವೈರಾಗ್ಯದಿಂದ ನಿನ್ನನ್ನು ಭಜಿಸಿದರೆ ಮುಕ್ತಿ ದೊರಕುವುದು.

ನಿನ್ನ ಏಕಾಂತಭಕ್ತರು ನಿನ್ನ ಆರಾಧನೆಗೆ ಫಲವಾಗಿ ಮೋಕ್ಷವನ್ನೂ ಬಯಸುವುದಿಲ್ಲ. ನಿನ್ನ ಆರಾಧನೆಗಾಗಿ ಲೌಕಿಕ ಮನೆಮಠ ಮುಂತಾದ ಸಂಪತ್ತನ್ನು ತೊರೆದು ಬಂದಿರುತ್ತಾರೆ. ಅವರು ತಮ್ಮ ಬಾಹ್ಯ ಜಡಶರೀರವನ್ನು ಕೂಡ ನಿನ್ನ ಆರಾಧನೆಗೆ ಸಾಧನವಾಗುವುದೆಂದೇ ತಮ್ಮ ಸ್ವರೂಪಶರೀರಕ್ಕೆ ಸಮನಾಗಿ ಕಂಡು ಕಾಪಾಡಿಕೊಳ್ಳುತ್ತಾರೆ. ನಿನ್ನನ್ನೇ ಪ್ರಿಯಕರ, ಸ್ವಾಮಿಯೆಂದು ಆರಾಧಿಸುತ್ತಾರೆ.

ನಿನ್ನ ಸ್ವರೂಪವನ್ನು ಅಪಲಾಪ ಮಾಡಿ ಅನ್ಯಥೋಪಾಸನೆ ಮಾಡಿದರೆ ನಿನ್ನನ್ನು ಹತ್ಯೆ ಮಾಡಿದಂತೆಯೇ ಸರಿ. ಇಂಥ ಪಾತಕಿಗಳಿಗೆ ಸುಖಲೇಶವಿಲ್ಲದ ನಿತ್ಯದುಃಖರೂಪವಾದ ತಮಸ್ಸೇ ಗತಿ. ತಮಸ್ಸಿನಲ್ಲಿ ಬಿದ್ದ ಬಳಿಕವೂ ಅವರು ಅಲ್ಲಿ ಅನ್ಯಥೋಪಾಸನೆಯನ್ನೇ ಮಾಡುತ್ತಾರೆ. ಹೀಗೆ ನಿನ್ನನ್ನು ದ್ವೇಷಿಸುವವರು ಮಾತ್ರವಲ್ಲದೆ ನಿನ್ನ ಭಕ್ತರ ದ್ವೇಷ ಮಾಡುವವರೂ ತಮೋಭಾಗಿಗಳಾಗುತ್ತಾರೆ. ಅವರೂ ಆತ್ಮಹತ್ಯಾಪಾತಕಿಗಳೆ. ಏಕೆಂದರೆ ಭಕ್ತರಲ್ಲಿ ಮಾಡುವ ದ್ವೇಷವನ್ನು ತನ್ನ ದ್ವೇಷವೆಂದೇ ತಿಳಿಯುವ ಭಕ್ತವತ್ಸಲ ನೀನು. ಮೋಕ್ಷಸಾಧನವಾದ ಜ್ಞಾನವನ್ನು ಪೂರ್ಣಪ್ರಮಾಣದಲ್ಲಿ ಹೊಂದಿದವನು ವಾಯುದೇವ. ಅವನ ಅನುಗ್ರಹದಿಂದ ಹೃದಯದಲ್ಲಿ ನಿನ್ನನ್ನು ಧ್ಯಾನಿಸುವವರೇ ನಿನ್ನ ಭಕ್ತರು.

ನೀನು ಭಕ್ತರಿಂದ ಭಕ್ತಿಯೊಂದನ್ನೇ ಅಪೇಕ್ಷಿಸುವೆ. ಬೇರೇನನ್ನೂ

ಅಪೇಕ್ಷಿಸುವುದಿಲ್ಲ. ಶೇಷದೇವನ ಭಕ್ತಿಗೆ ಒಲಿದೇ ಅವನ **ಮೇಲೆ** ಪವಡಿಸುವೆ. ಅಂಥ ನಿನ್ನ ಮಹಿಮೆಯನ್ನು ಅದರ ಎತ್ತರಕ್ಕೆ ಸಮ**ವಾಗಿ** ಅಲ್ಲದಿದ್ದರೂ ನಮ್ಮ ಶಕ್ತಿಗೆ ಸಮವಾಗಿ ನಾವು ವೇದಾಭಿಮಾನಿಗಳು ಹೊಗಳುತ್ತೇವೆ. ಇಷ್ಟಾದರೂ ಹೊಗಳಬೇಕೆಂದರೆ ನಮ್ಮಿಬ್ಬರಂತೆ ನಿತ್ಯಮುಕ್ತನಾದವನು ಇನ್ನೊಬ್ಬನು ಯಾರಿದ್ದಾನೆ? ಬ್ರಹ್ಮಾದಿ ದೇವತೆ ಗಳೆಲ್ಲರೂ ನಿನ್ನಿಂದ ಜನ್ಮ ಪಡೆದವರೆ ಹೊರತು ನಿತ್ಯಮುಕ್ತರಲ್ಲ.

ಲಯಕಾಲದಲ್ಲಿ ಸ್ಥೂಲ ಪ್ರಪಂಚವಿರುವುದಿಲ್ಲ. ಸೃಷ್ಟಿಕಾಲದಲ್ಲಿ ನೀನು ಅದನ್ನು ಸೃಷ್ಟಿ ಮಾಡುವೆ. ನಿನಗೆ ಸೃಷ್ಟಿ ಲಯಗಳಿಲ್ಲ. ಹೀಗಾಗಿ ನೀನು ಪ್ರಪಂಚವಿಲಕ್ಷಣನಾಗಿರುವೆ. ಈ ರಹಸ್ಯವನ್ನು ವಾಯುವಿನ ಅನುಗ್ರಹದಿಂದ ಜ್ಞಾನಿಗಳು ತಿಳಿದು ಉಪಾಸನೆ ಮಾಡುತ್ತಾರೆ. ನೀನು ಅವರ ಮಾತಿಗೆ ಗೋಚರನಾಗಿ ಸ್ತುತಿಸಿಕೊಳ್ಳು.

ಜೀವರಲ್ಲಿ ತ್ರಿಗುಣಬದ್ಧತ್ವವಿರುವುದು ಪರಮಾತ್ಮತತ್ವಜ್ಞಾನಾಭಾವ ಪ್ರಯುಕ್ತ. ಪರಮಾತ್ಮನಿಗೆ ಪರಮಾತ್ಮತತ್ವಜ್ಞಾನ ಸದಾ ಇರುವುದ ರಿಂದ ಅವನಲ್ಲಿ ತ್ರಿಗುಣಬದ್ಧತ್ವ ಹೇಗೆ ಇರಲು ಸಾಧ್ಯ? 'ಅವತಾರ ಗಳಲ್ಲಿ ಪರಮಾತ್ಮನಿಗೆ ಆ ತತ್ವಜ್ಞಾನವಿಲ್ಲ. ತ್ರಿಗುಣ ಬದ್ಧತ್ವವಿರುತ್ತದೆ' ಎನ್ನುವುದನ್ನು ಅವತಾರತತ್ವವನ್ನು ಅರಿತಿರುವ ಸಜ್ಜನರು ಒಪ್ಪುವುದಿಲ್ಲ. ಅವತಾರಗಳಲ್ಲಿಯೂ ಪರಮಾತ್ಮನಿಗೆ ತ್ರಿಗುಣಬದ್ಧತ್ವವಿಲ್ಲ.

ಬಂಗಾರ ಬೇಕು, ಬಂಗಾರದ ಒಡವೆ ಬೇಡ ಎಂದು ಯಾರೂ ಹೇಳುವುದಿಲ್ಲ. ಎರಡೂ ಒಂದೇ. ಹಾಗೇ ನಿನ್ನ ಮೂಲರೂಪ ಅವತಾರರೂಪಗಳಿಗೂ ಭೇದವಿರುವುದಿಲ್ಲ. ಹೀಗೆ ಸ್ವಗತ ಭೇದವರ್ಜಿತನಾಗಿ ಎಲ್ಲ ತತ್ವಗಳಲ್ಲಿ ಅಂತರ್ಗತನಾಗಿರುವ ನಿನ್ನನ್ನು ಉಪಾಸನೆ ಮಾಡುವವರೇ ಮುಕ್ತಿ ಪಡೆಯುತ್ತಾರೆ.

ಎತ್ತುಗಳ ಮೇಲಿನ ಪ್ರೀತಿಯಿಂದ ಯಜಮಾನ ಅವುಗಳಿಗೆ ಮೂಗುದಾರ ಹಾಕಿ ಅವುಗಳಿಂದ ಸೇವೆ ಮಾಡಿಸಿ**ಕೊಂಡು** ಸಾಕುತ್ತಾನೆ. ಹಾಗೆಯೇ ನೀನು ಮುಮುಕ್ಷುಗಳ **ಮೇಲಿನ** ಪ್ರೀತಿಯಿಂದ ಅವರನ್ನು ವೇದೋಕ್ತ ವಿಧಿನಿಷೇಧಗಳಿಂದ **ಬಂಧಿಸಿ** ಕರ್ಮ**ಮಾಡಿಸಿ ಅನು**ಗ್ರಹಿಸುವಿ. ಅದರಿಂದ ಮುಮು**ಕ್ಷುಗಳು ನಿನ್ನ** ಆರಾಧನೆ **ಮಾಡಿ ಸುಖಿ**ಗಳಾಗುತ್ತಾರೆ.

ಸಾಮಂತರಾಜರು ಸಾರ್ವಭೌಮ ದೊರೆಗೆ ಕಪ್ಪ ನೀಡುವಂತೆ ಲೋಕಪಾಲಕರಾದ ಬ್ರಹ್ಮಾದಿ ದೇವತೆಗಳು ನಿನಗೆ ಪೂಜೆ ಸಲ್ಲಿಸುತ್ತಾರೆ. ಮೋಕ್ಷದಾಯಕನು ನೀನೇ ಎಂದು ನೀನೇ ವೇದದ ಮೂಲಕ ತಿಳಿಸುತ್ತಿರುವೆ. ಹೀಗಾಗಿ ಮೋಕ್ಷದಾಯಕ ನೀನೆಂದ ಮೇಲೆ ಬಂಧಕನೂ ನೀನೇ ಆಗಿರಬೇಕು ತಾನೆ?

ವಾಯು ಜೀವೋತ್ತಮ, ನೀನು ಸರ್ವೋತ್ತಮ. ಬೇರೆ ಜೀವರು ಸ್ವರೂಪದಿಂದ ಅನಾದಿನಿತ್ಯರೇ ಆದರೂ ಅವರು ವಾಯುವಿನಿಂದ ದೇಹಧಾರಿಗಳಾಗಿ ಜನಿಸುತ್ತಾರೆ, ಸ್ವತಂತ್ರರಲ್ಲ. 'ಏಕಮೇವಾ ದ್ವಿತೀಯಂ' ಎಂಬ ಶ್ರುತಿ 'ಜೀವರು ನಿನಗೆ ಅಭಿನ್ನರೆ ಹೊರತು ಅಧೀನರಲ್ಲ' ಎಂದು ಹೇಳುತ್ತಿಲ್ಲ. ಏಕೆಂದರೆ 'ಅತೋऽನ್ಯದಾರ್ತಂ' ಎಂದು ಶ್ರುತಿ ಜೀವರನ್ನು ನಿನ್ನ ಅಧೀನರೆಂದೇ ಹೇಳುತ್ತಿದೆ.

'ಅಜ'ರೆನಿಸಿರುವ ರಮಾನಾರಾಯಣರಿಗೆ ನಿಮಗೆ ಜನ್ಮ ಕೂಡುವುದಿಲ್ಲ. ಆದರೆ ಜೀವರು ನೀರಮೇಲಿನ ಗುಳ್ಳೆಗಳಂತೆ ನಿಮ್ಮಿಂದ ಜನಿಸುತ್ತಾರೆ. ಅವರು ನಿಮ್ಮನ್ನು ಅರಿತಿರುವ ಗುರುವಿನ ಉಪದೇಶದಿಂದ ಜನನ ಮರಣ ರೂಪವಾದ ಸಂಸಾರದಿಂದ ಮುಕ್ತಿ ಹೊಂದಬೇಕು.

ಅಮೃತರಸ ಸಮುದ್ರದಲ್ಲಿ ಎಲ್ಲ ರಸಗಳು ಅಡಕವಾಗುವಂತೆ ಎಲ್ಲ ದೇವತಾನಾಮಗಳೂ ಅವರ ಮಹಿಮೆಗಳೂ ನಿನ್ನಲ್ಲೇ ಅಡಕವಾಗಿರುತ್ತವೆ. ನಿನ್ನ ಈ ಸರ್ವವೈಲಕ್ಷಣ್ಯವನ್ನು ಜ್ಞಾನಿಗಳು ನಿನ್ನ ಅನುಗ್ರಹದಿಂದಲೇ ತಿಳಿದು ಮುಕ್ತಿ ಪಡೆಯುತ್ತಾರೆ.

ನಿನ್ನ ಅಂಗಸಾಯುಜ್ಯ ಪಡೆಯುವ ಯೋಗ್ಯತೆ ಉಳ್ಳ ದೇವತೆಗಳೂ ಕೂಡ ಗುರುವಿನ ಅನುಗ್ರಹವಿಲ್ಲದೆ ಸಂಸಾರಸಾಗರವನ್ನು ದಾಟಿ ನಿನ್ನನ್ನು ಹೊಂದಲಾರರು. ಕಪ್ತಾನನಿಲ್ಲದ ಹಡಗನಲ್ಲಿ ಪ್ರಯಾಣ ಮಾಡುವ ವರ್ತಕರಂತೆ ನಿಟ್ಟುಸಿರು ಬಿಡಬೇಕಾಗುತ್ತದೆ. ಏಕೆಂದರೆ ನೀನು ಅವರ ಮೋಕ್ಷಸಾಧನೆಗಳನ್ನು ಸ್ವೀಕರಿಸುವುದಿಲ್ಲ. ನಿಯತ ಗುರು ದೊರೆತಾಗಲೆ ಅವರ ಎಲ್ಲ ಸಾಧನೆಗಳನ್ನೂ ನೀನು ಸ್ವೀಕರಿಸುವೆ.

ನಿನ್ನನ್ನು ಅರಿಯದೆ ಲೌಕಿಕ ಸುಖವನ್ನು ಅರಸುವವರಿಗೆ ಮೋಕ್ಷ

ದೊರಕಲಾರದು. ನಿನ್ನನ್ನು ಅರಿತು ಉಪಾಸನೆ ಮಾಡಿ ಒಮ್ಮೆ ಮಿಂಚಿನಂತೆ ಅಪರೋಕ್ಷವನ್ನು ಪಡೆದರೆಂದರೆ ಅವರು ತಿರುಗಿ ಹಿಂದಿನಂತೆ ಸ್ವಾತಂತ್ರ್ಯಾಭಿಮಾನವನ್ನು ಮಾಡುವುದಿಲ್ಲ, ಮುಕ್ತರಾಗುತ್ತಾರೆ.

'ಈ ಜಗತ್ತು ಮಿಥ್ಯೆ. ಅದಕ್ಕೆ ಜೀವವ್ಯತಿರಿಕ್ತನಾದ ಪಾಲಕನೊಬ್ಬನಿಲ್ಲ ಎಂದು ಕುತರ್ಕದಿಂದ ಕೆಲವರು ವಾದಿಸುವುದು ನಿನ್ನ ಇಚ್ಛೆ ಯಿಂದಲೆ. ಏಕೆಂದರೆ ತರ್ಕದಿಂದಲೆ ಏನನ್ನೂ ಸಾಧಿಸಲಾಗುವುದಿಲ್ಲ. ಅದು ಕೆಲವೆಡೆ ವ್ಯಭಿಚರಿತ, ಕೆಲವೆಡೆ ಬಾಧಿತವಾಗಿರುತ್ತದೆ. ಅದ್ವೈತ ಶ್ರುತಿಯೂ ಕೂಡ ತತ್ವನಿರ್ಣಯದಲ್ಲಿ ಸ್ಥಿರಬುದ್ಧಿ ಇಲ್ಲದವರಿಗೆ ಮಾತ್ರ ಭ್ರಾಮಕವಾಗಿರುತ್ತದೆ. ಅದರ ತಾತ್ಪರ್ಯವನ್ನು ಅರಿಯದವರು ಮೋಸಹೋಗುತ್ತಾರೆ. ಹೀಗಾಗಿ ವೇದವಿರುದ್ಧವಾದ ಕಲ್ಪನೆಗಳು ಅಂಧಪರಂಪರೆಯಿಂದಲೇ ಲೋಕದಲ್ಲಿ ಸದಾ ಹರಡಿರುತ್ತದೆ.

ಜೀವ ಹುಟ್ಟುವ ಮೊದಲು ಗರ್ಭವಾಸದುಃಖವನ್ನು ಅನುಭವಿಸುವುದರಿಂದ ಆಗ ಅವನು ಈಶ್ವರನಲ್ಲ. ಸತ್ತಮೇಲೆ ನರಕ ದುಃಖವಿರುವುದರಿಂದ ಆಗಲೂ ಅವನು ಈಶ್ವರನಲ್ಲ. ಹಿಂದೆ ಮುಂದೆ ಈಶ್ವರನಾಗದವನು ನಡುವೆ ಜೀವಿತ ಕಾಲದಲ್ಲಿ ಈಶ್ವರ ಹೇಗಾದಾನು? ಈಶ್ವರನೆ ಜೀವನಾಗುವನೆಂದು ಕೆಲವರಿಗೆ ಭಾಸವಾಗುವುದೂ ಈಶ್ವರನ ಪ್ರೇರಣೆಯಿಂದಲೆ. ಹೀಗಾಗಿ ಸರ್ವೋತ್ತಮನಾದ ನಿನ್ನಲ್ಲಿ ಜೀವಾಭೇದ ಸುಳ್ಳು. ಅಭೇದ ಭ್ರಾಂತಿಯಿಂದಲೇ ಜೀವನನ್ನು ಸಾಕ್ಷಿವಿರುದ್ಧವಾದ ಕಲ್ಪನಾಮಾರ್ಗಗಳಿಂದ ಹೊಗಳುತ್ತಾರೆ. ಇದು ಆಸುರೀ ಬುದ್ಧಿಯ ಕಲ್ಪನಾಜಾಲವೆಂದು ಜ್ಞಾನಿಗಳು ಅರಿತುಕೊಂಡಿರುತ್ತಾರೆ.

ವೇದೋಕ್ತವಾದ ನಿನ್ನ ಗುಣಗಳನ್ನು ಗುರೂಕ್ತ ಕ್ರಮದಿಂದ ಉಪಾಸನೆ ಮಾಡುವವನು ಅಪರೋಕ್ಷವನ್ನು ಸಂಪಾದಿಸಿ ಪ್ರಾರಬ್ಧ ಕಳೆದ ಬಳಿಕ ಮೋಕ್ಷವನ್ನು ಸಂಪಾದಿಸುತ್ತಾನೆ. ಇದಕ್ಕೆ ಅವನು ಸ್ವತಂತ್ರನಲ್ಲ. ಅವನ ಜೀವಾಚ್ಛಾದಕ ಪರಮಾಚ್ಛಾದಕಗಳ ಬಂಧಕ ಶಕ್ತಿಯನ್ನು ನೀನು ಸೆಳೆದುಕೊಂಡಾಗಲೆ ಅವನು ಹಾವು ಪೊರೆ ಬಿಡುವಂತೆ ಆ ಆಚ್ಛಾದಕ ಪ್ರಕೃತಿಗಳನ್ನು ನಾಶಪಡಿಸಿಕೊಳ್ಳುತ್ತಾನೆ. ಅವನು ನಿನ್ನನ್ನು

ಪೂಜಿಸುವುದಕ್ಕೂ ಸ್ವತಂತ್ರನಲ್ಲ. ನೀನೇ ಅವನೊಳಗಿದ್ದು ಅವನ ಮೂಲಕ ನೀನೇ ನಿನ್ನನ್ನು ಪೂಜಿಸಿಕೊಳ್ಳುವೆ.

ಸಜ್ಜನರು ಯತಿವೇಷ ಧರಿಸಿದರೂ ವಿಷಯಾಸೆಗಳನ್ನು ಬಿಡದಿದ್ದರೆ ನೀನು ಅವರ ಹೃದಯದಲ್ಲೇ ನೆಲೆಸಿದ್ದರೂ ಅವರಿಗೆ ಗೋಚರನಾಗಲಾರೆ. ದುರ್ಜನರಿಗಂತೂ ಸರ್ವಥಾ ಕಾಣಿಸಲೊಲ್ಲೆ. ಕೊರಳಲ್ಲಿ ಮಣಿಯನ್ನು ಧರಿಸಿರುವುದನ್ನು ಮರೆತವನಿಗೆ ಮಣಿ ಕೊರಳಲ್ಲೇ ಇದ್ದರೂ ಕಾಣಿಸಲಾರದು. ಹಾಗೇ ಇದು. ವಿಷಯಾಸೆ ಬಿಟ್ಟ ಯೋಗಿಗೆ ನೀನು ಯಮನ ಭಯವನ್ನು ದೂರ ಮಾಡುವಿ. ಇಲ್ಲಿ ಸಂಸಾರದಲ್ಲಿ ವಿಷಯಾಸಕ್ತರನ್ನು ಯಮನು ಯಾರೂ ಅರಿಯದಂತೆ ಬಂದು ಸೆಳೆಯುತ್ತಾನೆ. ಅಲ್ಲಿ ವೈಕುಂಠದಲ್ಲಿ ಅವನ ದರ್ಬಾರು ಏನೂ ನಡೆಯದು.

ಲಕ್ಷ್ಮೀನಾರಾಯಣರ ಬಗ್ಗೆ ಸರಿಯಾದ ಅರಿವು ಕೇವಲ ಶ್ರುತಿಗಳಿಂದ ಬರಲಾರದು. ಅದಕ್ಕೆ ಋಜುಯೋಗಿಗಳ ಉಪದೇಶ ಪರಂಪರೆಯ ಸಹಾಯ ಅವಶ್ಯಬೇಕು. ಮತ್ತು ಜೀವಯೋಗ್ಯತೆಯೂ ಅವಶ್ಯ ಬೇಕು. ಹೊಟ್ಟೆನೊಳಗೆ ಸುರಕ್ಷಿತವಾಗಿರುವ ಕಾಳು ಎಂದೂ ದೂಳಿನ ಸಂಪರ್ಕಕ್ಕೆ ಬರುವುದಿಲ್ಲ. ಹಾಗೇ ವೇದೋಕ್ತತತ್ವ ರಾಜಸ ತಾಮಸರಿಗೆ ತಿಳಿಯುವುದಿಲ್ಲ. ಸಾತ್ವಿಕರಿಗೆ ಮಾತ್ರ ತಿಳಿಯುತ್ತದೆ. ಅವರು ವೇದೋಕ್ತ ಮೋಕ್ಷಸಾಧನ ಮಾಡಿ ಮೋಕ್ಷ ಭಾಗಿಗಳಾಗಬಲ್ಲರು.'

ಹೀಗೆ ಸನಂದನಮುನಿ ಪ್ರವಚನ ಮಾಡಿದ್ದನ್ನು ಕೇಳಿ ಸನಕಾದಿಗಳು ಪ್ರಶಂಸಿಸಿದರು. ಸಕಲವೇದ ಪುರಾಣ ಉಪನಿಷತ್ತುಗಳ ಸಾರಸಂಗ್ರಹ ವಾಗಿತ್ತು ಈ ಪ್ರವಚನ. ಅದರಿಂದ ಅದು ದುಷ್ಟಕಾಮನೆಗಳನ್ನು ದೂರಮಾಡಿ ಸಾತ್ವಿಕ ಕಾಮನೆಗಳನ್ನು ಬೆಳೆಸುತ್ತದೆ. ನಾರದರು ನಾರಾಯಣಮುನಿಯಿಂದ ಇದನ್ನು ಕೇಳಿ ಕೃತಕೃತ್ಯರಾದರು. ಭಗವಾನ್ ಶ್ರೀಕೃಷ್ಣನಿಗೆ ನಮೋ ಎಂದರು. ನಾರಾಯಣಮುನಿಗೆ ನಮಿಸಿ ಹೋಗಿ ಬರುವೆನೆಂದು ಹೇಳಿ ಬಾದರಾಯಣರ ಬಳಿಗೆ ಬಂದರು. ಅವರ ಮುಂದೆ ಈ ಶ್ರುತಿಗೀತೆಯನ್ನು ಬಣ್ಣಿಸಿ ಹೇಳಿದರು.

❖❖❖

'ಹಿಂದೆ ಜನಲೋಕದಲ್ಲಿ ಸನಕಾದಿಗಳು ಬ್ರಹ್ಮವಿಚಾರ ಜ್ಞಾನ ಸತ್ರವನ್ನು ನಡೆಸಿದರು. ಜ್ಞಾನಾದಿಗುಣಗಳಲ್ಲಿ ಸನಕಾದಿಮುನಿಗಳು ಸಮಾನರಾದರೂ ಅವರಲ್ಲಿ ಒಬ್ಬರು ಪ್ರವಚನ ಮಾಡಿದರು ಉಳಿದವರು ಶ್ರವಣ ಮಾಡಿದರು' ಎಂದು ಬದರಿನಾರಾಯಣಮುನಿ ನಾರದರಿಗೆ ಹೇಳುತ್ತಾರೆ—

ಸ್ವಾಯಂಭುವಂ ಬ್ರಹ್ಮಸತ್ರಂ ಜನಲೋಕೇಽಭವತ್ಪುರಾ ।
ತತ್ರತ್ಯಾನಾಂ ಮಾನಸಾನಾಂ ಮುನೀನಾಮೂರ್ಧ್ವರೇತಸಾಮ್ ॥ ೯ ॥

ಹಿಂದೆ ಜನಲೋಕದಲ್ಲಿ ಅಲ್ಲಿಯ ಋಷಿಗಳಿಗೂ ಚತುರ್ಮುಖನ ಮಾನಸ ಪುತ್ರರಾದ ಪರಮಹಂಸರಾದ ಸನಕಾದಿಗಳಿಗೂ ಬ್ರಹ್ಮನಿಂದ ಉಪದಿಷ್ಟವಾದ ಬ್ರಹ್ಮ ವಿಚಾರ ನಡೆಯಿತು.

ತತ್ರಾಪ್ಯಯಮಭೂತ್ ಪ್ರಶ್ನಸ್ತ್ವಂ ಮಾಂ ಯಮನುಪೃಚ್ಛಸಿ ।
ತುಲ್ಯಶ್ರುತತಪಃಶೀಲಾಸ್ತುಲ್ಯಸ್ವೀಯಾರಿಮಧ್ಯಮಾಃ ॥ ೧೦ ॥

ಅಪಿ ಚಕ್ರುಃ ಪ್ರವಚನಮೇಕಂ ಶುಶ್ರೂಷವೋಽಪರೇ ॥ ೧೨ ॥

ಈ ಬ್ರಹ್ಮವಿಚಾರದಲ್ಲಿಯೂ ನೀನು ಈಗ ಕೇಳಿದ ವಿಷಯವೇ ಬಂದಿತು. ಸನಕಾದಿ ಮುನಿಗಳಲ್ಲಿ ಸನತ್ಕುಮಾರ ಮನ್ಮಥನ ಅವತಾರನಾದ್ದರಿಂದ ಅವನನ್ನು ಬಿಟ್ಟು ಉಳಿದವರೆಲ್ಲರೂ ಶ್ರವಣ ತಪಸ್ಸು ಆಚಾರಗಳಲ್ಲಿಯೂ, ಮಿತ್ರಶತ್ರು ತಟಸ್ಥರಲ್ಲಿ ಭೇದವೆಣಿಸದಿರುವುದರಲ್ಲಿಯೂ ಪರಸ್ಪರ ಸಮಾನರೇ ಆದರೂ ಹರಿಯ ವಿಶೇಷಾವೇಶ ಪ್ರಯುಕ್ತವಾಗಿ ಸನಂದನನೊಬ್ಬನನ್ನು ಪ್ರವಚನಕಾರನನ್ನಾಗಿ ಮಾಡಿಕೊಂಡರು. ಉಳಿದವರೆಲ್ಲರೂ ಶ್ರೋತೃಗಳಾದರು.

ಇಲ್ಲಿ 'ಸನಕಾದಿಮುನಿಗಳು ಸಮಾನರು' ಎನ್ನುವುದು ಉತ್ಸರ್ಗ. 'ಸನತ್ಕುಮಾರ ಶ್ರೇಷ್ಠ' ಎನ್ನುವುದು ಅಪವಾದ. ಹಾಗೇ 'ಮರುತ್ತುಗಳನ್ನು ಸಮಾನರೆ'ನ್ನುತ್ತಾರೆ. ಅದು ಉತ್ಸರ್ಗ. 'ಅವರಲ್ಲಿ ಏಳು ಮಂದಿ ಶ್ರೇಷ್ಠರು' ಎನ್ನುವುದು ಅಪವಾದ. **ಅಂದರೆ,** ಸನತ್ಕುಮಾರನೊಬ್ಬನನ್ನು ಬಿಟ್ಟರೆ ಉಳಿದವರೆಲ್ಲರೂ ಸಮಾನರು, **ಸನತ್ಕುಮಾರ** ಎಲ್ಲರಿಗಿಂತ ಶ್ರೇಷ್ಠ. ಮನ್ಮಥನ ಅವತಾರವಾದ್ದರಿಂದ ತಾರತಮ್ಯದಲ್ಲಿ **ಇಂದ್ರನಿಗೆ** ಸಮಾನನಾಗಿದ್ದು ಎಂಟನೇ ಕಕ್ಷ್ಯೆಯಲ್ಲಿದ್ದಾನೆ. ಉಳಿದವರು **ಸನಕ ಸನಂದನ** ಸನತ್ಸುಜಾತರು ಮೂವರೂ ಸಮಾನರಾಗಿದ್ದು ಕರ್ಮಜ ದೇವತೆಗಳ **ಹತ್ತೊಂಬತ್ತನೇ** ಕಕ್ಷೆಯಲ್ಲಿದ್ದಾರೆ. **ಮರುತ್ತುಗಳಲ್ಲಿ** ಅಹಂಪ್ರಾಣ ಇಂದ್ರನ **ಅನಂತರ ಒಂಬತ್ತನೇ**

ಕಕ್ಷೆಯಲ್ಲಿ ಪ್ರವಹವಾಯು ವಾಯುಭೂತಾಭಿಮಾನಿ, ಯಮಸೂರ್ಯ ಚಂದ್ರರಿಗಿಂತ ಮೇಲಿನ ಹನ್ನೊಂದನೆ ಕಕ್ಷೆಯಲ್ಲಿ ಇದ್ದಾನೆ. ಪ್ರಾಣಾದಿ ಪಂಚವಾಯುಗಳೂ ಇನ್ನುಳಿದ ನಲವತ್ತೆರಡು ಮರುತ್ತುಗಳೂ ಉಕ್ತಶೇಷ ಶತಸ್ಥ ದೇವತೆಗಳಾದ್ದರಿಂದ ಹದಿನೆಂಟನೇ ಕಕ್ಷೆಯಲ್ಲಿಯೇ ಇದ್ದಾರೆ. ಆದರೆ ಒಂದೇ ಕಕ್ಷೆಯಲ್ಲಿ ಇರುವ ಇಂದ್ರ ಮನ್ಮಥರೊಳಗೆ ಇಂದ್ರ ಸ್ವಲ್ಪ ಶ್ರೇಷ್ಠನಾಗಿರುವಂತೆ, ಪಂಚಪ್ರಾಣರು ,ಉಳಿದ ಮರುತ್ತುಗಳಿಗಿಂತ ಸ್ವಲ್ಪ ಶ್ರೇಷ್ಠರಾದ್ದರಿಂದ ಮರುತ್ತುಗಳಲ್ಲಿ ಒಟ್ಟು ಏಳುಮಂದಿ ಉಳಿದವರಿಗಿಂತ ಶ್ರೇಷ್ಠರು.

ಬೇರೆ ವ್ಯಾಖ್ಯಾನಕಾರರು ಈ ಸೂಕ್ಷ್ಮ ತಾರತಮ್ಯವನ್ನು ಹೇಳಿಲ್ಲ.

ಸನಕಾದ್ಯಾಃ ಸಮಾಃ ಸರ್ವೇ ತತ್ರ ಶ್ರೇಷ್ಠಃ ಕುಮಾರಕಃ ।

ಮರುತಶ್ಚ ಸಮಾಃ ಸರ್ವೇ ಸಪ್ತ ತೇಷು ಪ್ರಧಾನಕಾಃ ॥

ಇತಿ ಋಕ್‌ಸಂಹಿತಾಯಾಂ ॥

ಸನಕಾದಿಗಳೆಲ್ಲರೂ ಸಮಾನರು, ಅವರಲ್ಲಿ ಸನತ್ಕುಮಾರ ಶ್ರೇಷ್ಠ. ಮರುತ್ತುಗಳೆಲ್ಲ ಸಮಾನರು. ಅವರಲ್ಲಿ ಏಳುಮಂದಿ ಶ್ರೇಷ್ಠರು ಎಂದು ಋಕ್‌ಸಂಹಿತೆಯಲ್ಲಿ ಉಕ್ತವಾಗಿದೆ.

❖ ❖ ❖

ಬ್ರಹ್ಮಪ್ರಳಯಕಾಲ ಶ್ರೀಹರಿಗೆ ರಾತ್ರಿಕಾಲ. ಆ ಕಾಲದಲ್ಲಿ ಆಲದೆಲೆಯ ಮೇಲೆ ಪವಡಿಸಿದ್ದ ಶ್ರೀಹರಿಯನ್ನು ಆ ರಾತ್ರಿ ಕಳೆದು ಉಷಃಕಾಲ ಬಂದಾಗ ಅನಂತ ವೇದಾಭಿಮಾನಿ ಅನಂತ ದುರ್ಗಾರೂಪಗಳು, ಮಲಗಿದ್ದ ರಾಜನಿಗೆ ಸ್ತುತಿಪಾಠಕರು ಬೆಳಿಗ್ಗೆ ಸುಪ್ರಭಾತ ಹಾಡುವಂತೆ, ವೇದಮಂತ್ರಗಳಿಂದ ಕೊಂಡಾಡಿದರು, ಶ್ರುತಿಗೀತೆಯನ್ನು ಹಾಡಿದರೆಂದು ಹೇಳಿ ಸನಂದನರು ಸನಕಾದಿಗಳಿಗೆ ಪ್ರವಚನ ಮಾಡಲು ತೊಡಗುತ್ತಾರೆ.

ಸ್ವಸೃಷ್ಟಮಿದಮಾಪೀಯ ಶಯಾನಂ ಸಹ ಶಕ್ತಿಭಿಃ ।
ತದಂತೇ ಬೋಧಯಾಂಚಕ್ರುಸ್ತಲ್ಲಿಂಗೈಃ ಶ್ರುತಯಃ ಪರಮ್ ॥ ೧೩ ॥

ಶ್ರೀಹರಿ ತಾನು ಸೃಜಿಸಿದ ಈ ಜಗತ್ತನ್ನು ಲಯಕಾಲದಲ್ಲಿ ನುಂಗಿ ಪತ್ನಿಯರಾದ ಲಕ್ಷ್ಮೀದೇವಿ, ಶ್ರೀದೇವಿ, ಭೂದೇವಿಯರೊಂದಿಗೆ ಆಲದೆಲೆಯ ಮೇಲೆ ಮಲಗಿದ. ಲಯಕಾಲದ ಕೊನೆಭಾಗದಲ್ಲಿ ವೇದಾಭಿಮಾನಿ ದುರ್ಗಾದೇವಿಯರು ಅವನ ಗುಣಗಾನ ಮಾಡುವ ವೇದಮಂತ್ರಗಳಿಂದ ಅವನನ್ನು ಸ್ತುತಿಸಿದರು.

ಬ್ರಹ್ಮಪ್ರಳಯಕಾಲದಲ್ಲಿ ಶ್ರೀಹರಿ ಬ್ರಹ್ಮಾಂಡವನ್ನು ಆವರಣ **ಸಮೇತವಾಗಿ** ಲಯಗೈದು ಎಲ್ಲ ಮುಕ್ತಾಮುಕ್ತ ಜೀವರನ್ನು ಹೊಟ್ಟೆಯೊಳಗೆ **ಇರಿಸಿಕೊಂಡು** ಲಕ್ಷ್ಮ್ಯಾತ್ಮಕ ಪ್ರಳಯಸಮುದ್ರದಲ್ಲಿ ಲಕ್ಷ್ಮ್ಯಾತ್ಮಕ ರಾತ್ರಿಯಲ್ಲಿ ಲಕ್ಷ್ಮ್ಯಾತ್ಮಕ **ಆಲದೆಲೆಯ** ಮೇಲೆ ಲಕ್ಷ್ಮ್ಯಾತ್ಮಕರಾದ ರಾಣಿಯರನ್ನು ಆಲಿಂಗಿಸಿ ಯೋಗನಿದ್ರೆ **ಮಾಡುತ್ತಾನೆ.** ಲಕ್ಷ್ಮ್ಯಾತ್ಮಕ ವೇದಗಳೆ ಜೋಗುಳ ಹಾಡುತ್ತಿರುತ್ತವೆ. ರಾತ್ರಿಯ **ಕೊನೆಯ** ಯಾಮದಲ್ಲಿ ಆ ಲಕ್ಷ್ಮ್ಯಾತ್ಮಕ ವೇದಗಳು ಸುಪ್ರಭಾತ ಹಾಡುತ್ತವೆ. ಬಳಿಕ **ಎದ್ದು** ಶ್ರೀಹರಿ ಬ್ರಹ್ಮನನ್ನು ಸೃಷ್ಟಿಮಾಡಿ ಉಚ್ಚಾರಣೆಯಿಂದ ಅವನಿಗೆ ವೇದಗಳನ್ನು ವ್ಯಕ್ತಮಾಡಿ ಉಪದೇಶಿಸುತ್ತಾನೆ.

ಬೇರೆ ವ್ಯಾಖ್ಯಾನಕಾರರು ಹೀಗೆ ವಿವರಣೆ ನೀಡುವುದಿಲ್ಲ. 'ಸ್ವಸೃಷ್ಟಮಿದಮಾಪೀಯ' 'ತಾನು ನಿರ್ಮಿಸಿದ ಜಗತ್ತನ್ನು ನುಂಗಿ' ಎಂದರೆ ಜಗತ್ತನ್ನು ನಾಶಮಾಡಿ ಎಂದಿಷ್ಟೇ ಅರ್ಥ 'ಶಯಾನಂ ಸಹ ಶಕ್ತಿಭಿಃ' 'ಪತ್ನಿಯರಾದ ಲಕ್ಷ್ಮೀರೂಪಗಳೊಂದಿಗೆ, ಅವರನ್ನು ಆಲಿಂಗಿಸಿಕೊಂಡು ಮಲಗಿದ ಶ್ರೀಹರಿ' ಎನ್ನದೆ 'ಸೂಕ್ಷ್ಮರೂಪದಲ್ಲಿರುವ ಪ್ರಕೃತಿಕಾಲಗಳೊಂದಿಗೆ ಸುಮ್ಮನೆ, ಸೃಷ್ಟಿವ್ಯಾಪಾರವನ್ನು ತೊರೆದು, ಇರುತ್ತಾನೆ ಪರಮಾತ್ಮ' ಎನ್ನುತ್ತಾರೆ. [೧]ಲಕ್ಷ್ಮೀಯನ್ನು ಆಲಿಂಗಿಸಿ ಮಲಗುವ ಲೀಲೆಯನ್ನು ಅವರು ಒಪ್ಪಿಲ್ಲ ಎಂದು ವೀರರಾಘವ ವ್ಯಾಖ್ಯಾನದಿಂದ ತಿಳಿಯುತ್ತದೆ. ಮತ್ತು ಪ್ರಳಯದ ಕೊನೆಯಲ್ಲಿ ವೇದಗಳು ಪರಮಾತ್ಮನನ್ನು ಎಬ್ಬಿಸುತ್ತವೆ ಎನ್ನುವಲ್ಲಿ ವೇದಗಳೆಂದರೆ ಹಯಗ್ರೀವನ ನಿಶ್ವಾಸರೂಪವಾದ ವೇದಗಳು ಮೂರ್ತಿಮತ್ತಾಗಿ ನಿಂತು ಸ್ತುತಿಸುತ್ತವೆ, ಅಥವಾ ವೇದಾಭಿಮಾನಿ ದೇವತೆಗಳು ಸ್ತುತಿಸುತ್ತಾರೆ (ಅದರಿಂದ ಇದು 'ವೇದಸ್ತುತಿ') ಎಂದೂ ವೀರರಾಘವವ್ಯಾಖ್ಯಾನವೇ ಹೇಳುತ್ತದೆ. ಇದೆಲ್ಲವೂ ಪ್ರಮಾಣವಿರುದ್ಧ, ಸ್ವವ್ಯಾಹತವೂ ಹೌದು. ಜಡವಾದ ವೇದಗಳು ಮೂರ್ತಿಮತ್ತಾಗಿ ಬಂದು ನಿಲ್ಲುವುದು ಸ್ತುತಿಸುವುದು ಅಶಕ್ಯ. ಚೇತನರು ಶರೀರವನ್ನು ಧರಿಸಬಲ್ಲರು. ಜಡವಾದ ವೇದಗಳು ಶರೀರ ಧರಿಸಲಾರವು. 'ಯದ್ವಾ' ಎಂದು ಇನ್ನೊಂದು ಪಕ್ಷದಲ್ಲಿ ವೇದಾಭಿಮಾನಿ ಬ್ರಹ್ಮಾದಿ ದೇವತೆ**ಗಳು** ಶರೀರ ಧರಿಸಲು ಶಕ್ತರಾದರೂ ಲಯದ ಕೊನೆಭಾಗದಲ್ಲಿ, ಇನ್ನೂ ಮಹ**ದಾದಿ** ಸೃಷ್ಟಿಯಾಗದೆ ಇರುವಾಗ ಈ ಬ್ರಹ್ಮಾದಿ ದೇವತೆಗಳು ಶರೀರವನ್ನು ಧರಿ**ಸುವುದು**

---

೧. ಸ್ವೇನಾತ್ಮನಾ ಸೃಷ್ಟಮಿದಂ ಚಿದಚಿದಾತ್ಮಕಂ ಜಗತ್ ಆಪೀಯ **ಸಂಹೃತ್ಯ ಶಕ್ತಿಭಿಃ** ಸೂಕ್ಷ್ಮಾವಸ್ಥಾಮಾಪನ್ನಾಭಿಃ ಪ್ರಕೃತಿ ಕಾಲಾತ್ಮಿಕಾಭಿಃ ಸಹ ಶಯಾನಂ **ನಿದ್ರಾಣಮಿವ** ವರ್ತಮಾನಂ ಪರಮಪುರುಷಂ ತದಂತೇ ಪ್ರಲಯಾಂತೇ ಸೃಷ್ಟ್ಯಾದೌ **ಇತ್ಯರ್ಥಃ। ಶ್ರುತಯಃ** ಸ್ವನಿಶ್ವಾಸರೂಪಾ ಮೂರ್ತಿಧರಾ ವೇದಾಃ, ಯದ್ವಾ ವೇದಾಭಿಮಾನಿ**ನೋ ದೇವಾಃ**..॥

-ವೀರರಾಘವಃ

ಹೇಗೆ? ಮತ್ತು ಅವರು ಇನ್ನೂ ಭಗವಂತನ ಉದರದೊಳಗೇ ಸುಷುಪ್ತಿಯಲ್ಲಿರುತ್ತಾರೆ, ಹೊರಗೆ ಹೇಗೆ ಬರುತ್ತಾರೆ? ಭಗವಂತನೇ ಸೃಷ್ಟಿಯಾದಿಯಲ್ಲಿ ನಿದ್ರೆಯಿಂದ ಏಳಬೇಕು. ಎದ್ದು ನಿಶ್ವಾಸರೂಪವಾಗಿಯೋ, ನಿಶ್ವಾಸದಿಂದ ವ್ಯಕ್ತವಾಗಿಯೋ ವೇದಗಳನ್ನು ಸೃಷ್ಟಿಮಾಡಬೇಕು. ಅವುಗಳು ಮೊದಲೇ ಭಗವಂತನನ್ನು ನಿದ್ದೆಯಿಂದ ಎಬ್ಬಿಸುವುದು ಸ್ವವ್ಯಾಹತವಾದ ಮಾತಾಗುತ್ತದೆ. ಅದರಿಂದ ಶಕ್ತಿಗಳೆಂದರೆ ಶ್ರೀಭೂರೂಪಳಾದ ಲಕ್ಷ್ಮಿಯ ರೂಪಗಳು ಅನಂತ ಇವೆ. ಶ್ರುತಿಗಳೆಂದರೆ ಶ್ರುತ್ಯಭಿಮಾನಿಗಳಾದ ದುರ್ಗಾರೂಪಗಳೂ ಅನಂತ ಇವೆ. ಶಕ್ತ್ಯಾಲಿಂಗಿತನಾಗಿ ಮಲಗಿದ ಹರಿಯನ್ನು ಶ್ರುತ್ಯಭಿಮಾನಿ ದುರ್ಗಾರೂಪಗಳು ಪ್ರಳಯಕಾಲದ ರಾತ್ರಿ ಇಡೀ ಪದಸಮನ್ವಯದಿಂದ ಹೊಗಳುತ್ತ ಜೋಗುಳ ಹಾಡುತ್ತ ಮಲಗಿಸಿ, ಬೆಳಗಿನ ಜಾವದಲ್ಲಿ ಸುಪ್ರಭಾತ ಹಾಡಿ 'ಎದ್ದೇಳು, ಸೃಷ್ಟಿ ಮಾಡೆ'ನ್ನುತ್ತ ಸ್ತುತಿಸುತ್ತಿವೆ. ಬಳಿಕ ಶ್ರೀಹರಿ ಎದ್ದು ವೇದಾಭಿಮಾನಿಗಳಾದ ಬ್ರಹ್ಮಾದಿ ದೇವತೆಗಳನ್ನು ಸೃಷ್ಟಿಮಾಡಿ ನಿಶ್ವಾಸದಿಂದ ವೇದಗಳನ್ನು ವ್ಯಕ್ತಮಾಡಿ ಉಪದೇಶಿಸುತ್ತಾನೆ ಎನ್ನುವುದು ಸಂಗತವಾಗುತ್ತದೆ.

[1]ಜೀವಗೋಸ್ವಾಮಿಯ ವೈಷ್ಣವತೋಷಿಣಿವ್ಯಾಖ್ಯಾನ ಪ್ರಕಾರ ಶಕ್ತಿಗಳೆಂದರೆ ಭಗವಂತನ ಶಕ್ತಿಮಯವಾದ ಅವತಾರಗಳು. ಅವುಗಳೊಂದಿಗೆ ಮಲಗುವುದೆಂದರೆ ಏಕೀಭೂತನಾಗಿದ್ದು ಸೃಷ್ಟಿಕಾರ್ಯದಲ್ಲಿ ವಿಮುಖನಾಗಿರುವುದು. ಬ್ರಹ್ಮಪ್ರಳಯ ಕಾಲದಲ್ಲಿಯೂ ಶ್ರೀಕೃಷ್ಣನ ಗೋಲೋಕಕ್ಕೆ ಲಯವಿಲ್ಲ. ಅಲ್ಲಿ ವಾಸಮಾಡುವ ಶ್ರೀಕೃಷ್ಣನನ್ನು ಬಹಿರಾವರಣದಲ್ಲಿರುವ ವೇದಾಭಿಮಾನಿ ದೇವತೆಗಳು ಸ್ತುತಿಸುತ್ತಾರೆ.

ಆದರೆ ಇದೂ ಸರಿಯಲ್ಲ. ಬ್ರಹ್ಮಪ್ರಳಯದಲ್ಲಿ ಬ್ರಹ್ಮಾಂಡಮಾತ್ರವಲ್ಲದೆ ಅದರ ಆವರಣಗಳೂ ಲಯಹೊಂದುತ್ತವೆ. ವಿಷ್ಣುವಿನ ಪ್ರಾಕೃತಲೋಕಗಳೂ ನಾಶಹೊಂದುತ್ತವೆ. ಚಿನ್ಮಯವಾದ ಲಕ್ಷ್ಮೀರೂಪವಾದ ಲೋಕಗಳೂ ಅವ್ಯಕ್ತವಾಗಿರುತ್ತವೆ. ಸೃಷ್ಟಿಕಾಲದಲ್ಲಿ ಅವು ವ್ಯಕ್ತವಾಗಬೇಕು. ವೇದಾಭಿಮಾನಿ ದೇವತೆಗಳೂ ಭಗವಂತನ ಉದರದಲ್ಲಿರುತ್ತಾರೆ, ಆವರಣಗಳಲ್ಲಿ ಅಲ್ಲ.

ಜಯಜಯ ಜಹ್ಯಜಾಮಜಿತ ದೋಷಗೃಭೀತಗುಣಾಂ
ತ್ವಮಸಿ ಯದಾತ್ಮನಾ ಸಮವರುದ್ಧಸಮಸ್ತಭಗಃ ।

---

೧. ಶಕ್ತಿಭಿಃ ತತ್ತಚ್ಛಕ್ತಿಮಯ ಪುರುಷಾದಿ ನಿಜಾವತಾರೈಃ ಸಹ ಮಿಲಿತ್ವಾ ಏಕೀಭೂಯೇತ್ಯರ್ಥಃ। ಮಹಾಪುರುಷಸ್ಯ ಸ್ವಪ್ರಕೃತೌ ಶ್ರೀಭಗವತಿ ಪ್ರವೇಶಶ್ರವಣಾತ್। ಶಯಾನಂ ಜಗತ್ಕಾರ್ಯಂ ಪ್ರತಿ ನಿದ್ರಾಣಮಿವ ಕೃತಾನವಧಾನಂ ಸಂತಂ ಪರಂ ಸ್ವಯಂ ಭಗವಂತಂ ಶ್ರೀಕೃಷ್ಣಂ ಸ್ವಲೋಕವಾಸಿನಂ ತದಂತೇ ತಾದೃಶ ಶಯನಾಂತೇ ಬಹಿರಾವರಣಗತಾಃ ಶ್ರುತಯಃ ತದಧಿಷ್ಠಾತ್ರ್ಯ ದೇವತಾಃ....॥
-ಜೀವಗೋಸ್ವಾಮೀ

ಅಗಜಗದೋಕಸಾಮಖಿಲಶಕ್ತ್ಯವಬೋಧಕ ತೇ
ಕ್ವಚಿದಜಯಾತ್ಮನಾ ಚ ಚರತೋನುಚರೇನ್ನಿಗಮಃ ॥

ಎಂಬ ಶ್ರುತಿಗೀತೆಯ ಮೊದಲನೇ ಪದ್ಯದ ಅಭಿಪ್ರಾಯ ಶ್ರೀಧರವ್ಯಾಖ್ಯಾನ ಪ್ರಕಾರ ಹೀಗೆ—

[೩]'ಹೇ ಅಜಿತ, ಜಯಜಯ, ನಿನ್ನ ಉತ್ಕೃಷ್ಟತೆಯನ್ನು ವ್ಯಕ್ತಮಾಡು. ಅಗಜಗದೋಕಸಾಂ ಸ್ಥಾವರಜಂಗಮಶರೀರಿಗಳ, ದೋಷಗೃಭೀತಗುಣಾಂ ಆನಂದಾದ್ಯಾವರಣರೂಪದೋಷಕ್ಕಾಗಿಯೇ ತ್ರಿಗುಣಗಳನ್ನು ಧರಿಸಿರುವ 'ಅಜಾಂ ಜಹಿ' ಅವಿದ್ಯೆಯನ್ನು ನಾಶಪಡಿಸು. ಶೀಲಗೆಟ್ಟ ಹೆಣ್ಣು ಪರಪುರುಷರನ್ನು ವಂಚಿಸಲೆಂದೇ ಸೌಂದರ್ಯ ಸಾಧನಗಳಿಂದ ಸೌಂದರ್ಯಾದಿಗುಣಗಳನ್ನು ಮೈಯಲ್ಲಿ ಧರಿಸುವಂತೆ ಅವಿದ್ಯೆಯೂ ಜೀವರ ವಂಚನೆಗಾಗಿಯೇ ತ್ರಿಗುಣಗಳನ್ನು ಧರಿಸುತ್ತಾಳೆ. ಅವಳನ್ನು ಗುಣವಂತೆ ಎಂದು ಕೊಲ್ಲದೆ ಬಿಡಲಾಗದು. ಆ ಸ್ಥಾವರಜಂಗಮ ಶರೀರಿಗಳು ತಾವೇ ಅವಿದ್ಯೆಯನ್ನು ನಾಶಪಡಿಸಿಕೊಳ್ಳುವಲ್ಲಿ ಸ್ವತಂತ್ರರಲ್ಲ. ಅವರ 'ಅಖಿಲ ಶಕ್ತ್ಯವಬೋಧಕ'ನು ಎಲ್ಲ ಶಕ್ತಿ ವ್ಯಕ್ತ ಮಾಡಬಲ್ಲವನು ನೀನು. 'ಸಮವರುದ್ಧ ಸಮಸ್ತಭಗ'ನು. ಮಾಯೆಯನ್ನು ವಶೀಕರಿಸಿಕೊಂಡು ಸಮಸ್ತ ಐಶ್ವರ್ಯಾದಿ ಷಡ್ಗುಣಗಳನ್ನು ಸಂಪಾದಿಸಿಕೊಂಡವನು. ಈ ವಿಷಯದಲ್ಲಿ ಪ್ರಮಾಣ ಆಗಮವೆ. ಅದು 'ಕ್ವಚಿತ್' ಕೆಲವೊಮ್ಮೆ, ಸೃಷ್ಟಿಕಾಲದಲ್ಲಿ 'ಅಜಯಾ' ಅನಾದಿ ಮಾಯೆಯಿಂದ 'ಚರತಃ' ಕ್ರೀಡಿಸುವ ಮತ್ತು ನಿತ್ಯವೂ 'ಆತ್ಮನಾ' ಜ್ಞಾನಾನಂದ ಸ್ವರೂಪದಿಂದಿರುವ ನಿನ್ನನ್ನು 'ಅನುಚರೇತ್' ಪ್ರತಿಪಾದಿಸುತ್ತದೆ.'

ಆದರೆ ಜೀವರ ಅವಿದ್ಯೆಯನ್ನು 'ಕೊಲ್ಲಬೇಕೆ'ನ್ನುವುದು ಸಮರ್ಥನೀಯವಲ್ಲ. ಅವರನ್ನು ಶೀಲಗೆಟ್ಟ ಹೆಣ್ಣಿನಂತೆ ವಂಚಿಸುವುದು ಅವಿದ್ಯೆಯಲ್ಲ, ಮಾಯೆ. ಅವಿದ್ಯೆ ಕೇವಲ ಜೀವಸ್ವರೂಪವಾದ ಆನಂದಾದಿಗಳನ್ನು ಆವರಿಸುತ್ತಾಳೆ. ಮಾಯೆ ತ್ರಿಗುಣಗಳಿಂದ ವಿಚಿತ್ರ ಪ್ರಪಂಚ ಸೃಷ್ಟಿಮಾಡಿ ಜೀವರನ್ನು ವಿಷಯಸುಖಕ್ಕೆ ಆಕರ್ಷಿಸಿ ದುಃಖ ನೀಡುತ್ತಾಳೆ. ಅವಳೇ ವಂಚಕಿ. ಯಾರ ತಪ್ಪಿಗೆ ಯಾರಿಗೆ ಶಿಕ್ಷೆ?

ಮಾಯೆಯನ್ನೂ ಕೂಡ ಈಶ್ವರ ಕೊಲ್ಲುವುದಿಲ್ಲ. ವಶೀಕೃತಮಾಯನಾಗಿದ್ದು

---

೩. **ಭೋ** ಅಜಿತ ಜಯಜಯ ಉತ್ಕರ್ಷಮಾವಿಷ್ಕುರು। ಕೇನ **ವ್ಯಾಪಾರೇಣ। ಅಗಜಗದೋಕಸಾಂ** ಅಗಾನಿ ಸ್ಥಾವರಾಣಿ ಜಗಂತಿ ಜಂಗಮಾನಿ ಚ **ಓಕಾಂಸಿ ಶರೀರಾಣಿ ಯೇಷಾಂ ಜೀವಾನಾಂ** ತೇಷಾಮಜಾಮವಿದ್ಯಾಂ ಜಹಿ ನಾಶಯ। **ಕಿಮಿತಿ ಗುಣವತೀ ಹಂತವ್ಯೇತ್ಯತ ಆಹ ದೋಷಾಯಾ**ನಂದಾದ್ಯಾವರಣಾಯ ಗೃಹೀತಾ **ಗುಣಾ ಯಯಾ ತಾಂ।** ಇಯಂ ಹಿ **ಸ್ವೈರಿಣೀವ ಪರಪ್ರತಾರಣಾ**ಯ ಗುಣಾನ್‌ಗೃಹ್ಣಾತೀತ್ಯ**ತೋ ಹಂತವ್ಯೇತಿ।**

-ಶ್ರೀಧರಃ

ಮಾಯೆಯನ್ನು ಜೋಪಾನವಾಗಿರಿಸಿಕೊಂಡಿದ್ದಾನೆ. ಕೊಲ್ಲಲು ಒಂದುವೇಳೆ ಬಯಸಿದರೂ ಕೊಲ್ಲಲು ಈಶ್ವರ ಸಮರ್ಥನಲ್ಲ. ಜೀವರೆ ಅಪರೋಕ್ಷವನ್ನು ಸಂಪಾದಿಸಿ ಅದರ ಬಲದಿಂದ ಈಶ್ವರನ ಮಾಯೆಯನ್ನು ಕೊಲ್ಲಬೇಕಷ್ಟೆ.

ಜಡವಾದ ಅವಿದ್ಯೆ ಮತ್ತು ಮಾಯೆಗಳನ್ನು 'ಕೊಲ್ಲು'ವುದು ಅರ್ಥವಿಲ್ಲದ್ದು. ಜಡವಾದ ಮಾಯೆಯೂ ವಂಚಕಿಯಲ್ಲ, ಚೇತನನಾದ ಮಾಯಾವಿ ಈಶ್ವರನೇ ವಂಚಕ.

ಜಡಪ್ರಕೃತಿ ಸ್ವತಂತ್ರಳೆಂದು ಸಾಂಖ್ಯರು ಹೇಳುವಂತೆ ಮಾಯೆ ಸ್ವತಂತ್ರಳೆಂದು ಅದ್ವೈತಿಗಳು ಒಪ್ಪುವುದೂ ಇಲ್ಲ. ಹೀಗಾಗಿ ಅಸ್ವಂತ್ರಳಾದ ಜಡವಸ್ತುವಾದ ಅವಳು ಶಿಕ್ಷಾರ್ಹಳೆ ಅಲ್ಲ. ಸ್ವತಂತ್ರಳೆನ್ನುವುದಾದರೆ ಸ್ವತಂತ್ರಳನ್ನು ಕೊಲ್ಲುವುದೂ ಅಶಕ್ಯ ಹೆಣ್ಣಿನ ರೂಪಕಮಾತ್ರವೆಂದರೂ ರೂಪವೇಕೆ ಬೇಕು? ಮತ್ತು ರೂಪಕವನ ಸಮರ್ಪಕವಾಗಿ ನಿರ್ವಹಿಸಬೇಕಾಗಿತ್ತು.

[೪]ವಲ್ಲಭವ್ಯಾಖ್ಯಾನ ಪ್ರಕಾರ 'ಭಗವಂತ ತನ್ನ ಯೋಗನಿದ್ರೆ ಎನಿಸಿರುವ ಮಾಯೆಯನ್ನು ಕೊಲ್ಲಬೇಕಾಗಿದೆ. ಇಲ್ಲದಿದ್ದರೆ ಅವನಿಗೆ ನಿದ್ರೆಯಿಂದ ಚೆನ್ನಾಗಿ ಎಚ್ಚರವಾಗದು. ಅವನು ಆ ಮಾಯೆಯನ್ನು ಲೀಲೆಯಿಂದಲೇ ಅಂಗೀಕರಿಸಿದ್ದರಿಂದ ಅವಳನ್ನು ಅತ ಕೊಲ್ಲಲು ಸಮರ್ಥ. ಮಾಯೆ ಯೋಗನಿದ್ರಾಸ್ವರೂಪಳಾದ್ದರಿಂದಲೆ ಮಾರ್ಕಂಡೇಯಪುರಾಣದಲ್ಲಿ ಬ್ರಹ್ಮ ಯೋಗನಿದ್ರೆಯನ್ನು ಸ್ತುತಿಸುತ್ತಾನೆ.'

ಇದೂ ಅಸಂಗತವೆ. ಚೆನ್ನಾಗಿ ಎಚ್ಚರವಾಗದೆ ಅವಳನ್ನು ಕೊಲ್ಲುವಂತಿಲ್ಲ. ಕೊಲ್ಲದೆ ಚೆನ್ನಾಗಿ ಎಚ್ಚರವಾಗುವುದಿಲ್ಲ. ಇದು ಅನ್ಯೋನ್ಯಾಶ್ರಯ. ಮತ್ತು ಲೀಲೆಗಾಗಿ ತಾನೇ ಅವಳನ್ನು ತಬ್ಬಿಕೊಂಡು ಮಲಗಿದವನು ಅವಳನ್ನು ಏಕೆ ಕೊಲ್ಲಬೇಕು? ಮಾರ್ಕಂಡೇಯಪುರಾಣದಲ್ಲಿ ಬ್ರಹ್ಮನ ಸ್ತುತಿಯನ್ನು ಕೇಳಿ ಯೋಗನಿದ್ರೆ ತಾನೇ ಭಗವಂತನ ಆಲಿಂಗನವನ್ನು ಬಿಟ್ಟು ದೂರ ಸರಿದು ನಿಲ್ಲುತ್ತಾಳೆ. ಭಗವಂತನಿಗೆ ಚೆನ್ನಾಗಿ ಎಚ್ಚರವಾಗುತ್ತದೆ. ಎಚ್ಚರವಾಗುವುದಕ್ಕೆ ಅವಳನ್ನು ಕೊಲ್ಲುವ ಪ್ರಮೇಯವೆ ಇಲ್ಲ. ವಸ್ತುತಃ ಮಾಯೆ, ಯೋಗನಿದ್ರೆ ಎಂದರೆ ಮಹಾಲಕ್ಷ್ಮಿ. ಅವಳನ್ನು ಕೊಲ್ಲುವುದುಂಟೆ?

---

೪. ನಿದ್ರಾಂ ತ್ಯಜ ಮೂಲತೋ ನಾಶಯ। ಯೇನ ಸಮ್ಯಕ್‌ಪ್ರಬೋಧೋ ಭವತೀತಿ ಭಾವಃ। ನನು ತಯೈವಾಹಂ ಏತಾವತ್‌ಕಾಲಂ ವಶೇ ನೀತಃ ಕಥಂ ಹಂತುಂ ಶಕ್ಯೇತಿಚೇತ್ ತತ್ರಾಹುಃ ಹೇ ಅಜತೇತಿ। ತ್ವಂ ನ ಕೇನಾಪಿ ಜಿತಃ। ಯೋಗನಿದ್ರಾ ತ್ವಯಾ ಲೀಲಯೈವ ಗೃಹೀತಾ। ನ ತು ಜೀವ ಇವ ನಿದ್ರಯಾಽಭಿಭೂತಃ। ಭಗವನ್ನಿದ್ರಾ ಮಾಯಾ ಸೈವ ಪ್ರಕೃತಿರಿತಿ ಸ್ವರೂಪ-ತ್ರಯಮೇಕಮೇವ। ಅತ ಏವ ಮಾರ್ಕಂಡೇಯಪುರಾಣೇ ಬ್ರಹ್ಮಣಾ ಯೋಗನಿದ್ರಾ ಸ್ತುತಾ ॥
-ವಲ್ಲಭಃ

ಶ್ರೀಮದಾಚಾರ್ಯರು ಅತ್ಯಂತ ಸಂಗತವಾದ ರೀತಿಯಲ್ಲಿ ಶ್ರುತಿಗೀತೆಗೆ ವ್ಯಾಖ್ಯಾನ ಮಾಡಿರುವಾಗ, ಬೇರೆ ವ್ಯಾಖ್ಯಾನಕಾರರು ಏಕೆ ಹೀಗೆ ಅಸಂಗತವಾಗಿ ವ್ಯಾಖ್ಯಾನಿಸುತ್ತಾರೆ?

ಶ್ರೀಭೂರ್ಮಿರಿತಿ ರೂಪಾಭ್ಯಾಂ ಪ್ರಕೃತಿರ್ವಿಷ್ಣುನಾ ಸಹ|
ಶೇತೇ ಶ್ರುತಿಸ್ವರೂಪೇಣ ಸ್ತೌತಿ ಬ್ರಹ್ಮಲಯೇ ಹರಿಂ ।
ಏಕಾऽಪ್ಯನಂತರೂಪಾ ಸಾ ವಾಕ್ಯಭೇದಾತ್ ಸರಸ್ವತೀ ।
ಅನಾದಿನಿಧನಾ ನಿತ್ಯಾ ಸ್ತೌತಿ ನಾರಾಯಣಂ ಪ್ರಭುಂ ॥

ಇತಿ ಜ್ಯೋತಿಃಸಂಹಿತಾಯಾಂ ॥

ಬ್ರಹ್ಮಪ್ರಲಯಕಾಲದಲ್ಲಿ ಶ್ರೀ ಮತ್ತು ಭೂ ಎಂಬ ತನ್ನ ಎರಡು ರೂಪಗಳೊಂದಿಗೆ ಮೂಲರೂಪಳಾದ ಲಕ್ಷ್ಮಿ ವಿಷ್ಣುವಿನೊಡನೆ ಮಲಗಿರುತ್ತಾಳೆ. ಶ್ರುತ್ಯಭಿಮಾನಿ ದುರ್ಗಾ ರೂಪದಿಂದ ವಿಷ್ಣುವಿನ ಸ್ತೋತ್ರವನ್ನು ಮಾಡುತ್ತಾಳೆ. ಶ್ರುತಿ ಒಂದೇ ಆದರೂ ವಾಕ್ಯ ಪ್ರಕರಣ ಮುಂತಾಗಿ ಭೇದವಿರುವುದರಿಂದ ಅನಂತವೇ ಆಗಿದೆ. ಆದ್ಯಂತರಹಿತ ವಾಗಿದ್ದು ನಿತ್ಯವಾಗಿದೆ. ಆದ್ದರಿಂದ ಅಭಿಮಾನಿ ಲಕ್ಷ್ಮಿಯ ರೂಪಗಳೂ ಅನಂತ, ಆದ್ಯಂತರಹಿತ ನಿತ್ಯ. ಅಂಥ ರೂಪಗಳಿಂದ ಲಕ್ಷ್ಮಿ ವೇದಮಂತ್ರಗಳಿಂದ ಪ್ರಭು ನಾರಾಯಣನನ್ನು ಸ್ತುತಿಸುತ್ತಾಳೆ. (ಇದೇ, ಶ್ರುತ್ಯಭಿಮಾನಿನಿ ದುರ್ಗೆಯ ಅನಂತ ರೂಪಗಳು ಅನಂತವೇದ ಮಂತ್ರಗಳಿಂದ ಮಾಡುವ ಗೀತೆಯೇ, ಶ್ರುತಿಗೀತೆ.) ಇದು ಜ್ಯೋತಿಃಸಂಹಿತೆ ಯಲ್ಲಿ ಸ್ಪಷ್ಟವಿದೆ.

ಸರ್ವದಾ ಜಯತೋ ವಿಷ್ಣೋರ್ಜಯಸ್ತಸ್ಯ ಪ್ರಕಾಶನಂ ।
ಶ್ರವಣಂ ದೃಷ್ಟಿರಿತ್ಯಾದಿ ಪ್ರಾರ್ಥ್ಯಂ ತಜ್ಜ್ಞಾಪನಂ ಸ್ಮೃತಂ ।
ಶೃಣೋತಿ ಪಶ್ಯತಿ ಹ್ಯೇಷ ಜಯತೀತ್ಯಾದಿಕಂ ಸ್ವತಃ ।
ಜಯ ಪಶ್ಯ ಶೃಣುಷ್ವೇತಿ ತತ್ತಜ್ಞಾಪನಮೇವ ತು ॥

ಇತಿ ವಿಮಲಸಂಹಿತಾಯಾಂ ॥

'ಸರ್ವದಾ ಜಯಶಾಲಿಯೇ ಆಗಿರುವ ವಿಷ್ಣುವಿಗೆ 'ಜಯಜಯ' ಎಂದು ಜಯವನ್ನು ಹೇಳುವುದು ವಸ್ತುತಃ ಜಯಪ್ರಕಾಶನದ **ಪ್ರಾರ್ಥನೆ** ಯಾಗಿರುತ್ತದೆ. ಹಾಗೆ ಶೃಣು ಪಶ್ಯ ಎಂದು ಶ್ರವಣ **ದರ್ಶನಗಳನ್ನು** ಪ್ರಾರ್ಥಿಸುವುದು ಕೂಡ ವಸ್ತುತಃ ಶ್ರವಣದರ್ಶನ **ಜ್ಞಾಪನದ**

ಪ್ರಾರ್ಥನೆಯೇ ವಿವಕ್ಷಿತವಾಗಿರುತ್ತದೆ. ಏಷ ಶೃಣೋತಿ ಏಷ ಪಶ್ಯತಿ, ಏಷ ಜಯತಿ ಎಂದು ಹೇಳುವಲ್ಲಿ ಸ್ವತಃ ಸಿದ್ಧವಾದ ಶ್ರವಣ ದರ್ಶನ ಜಯಗಳೇ ವಿವಕ್ಷಿತವಾಗಿವೆ. ಜಯ ಪಶ್ಯ ಶೃಣುಷ್ವ ಎಂಬಲ್ಲಿ ಜಯ ದರ್ಶನ ಶ್ರವಣಗಳ ಜ್ಞಾಪನ ಮಾಡೆಂದು ಪ್ರಾರ್ಥನೆ ವಿವಕ್ಷಿತವಾಗಿದೆ' ಎಂದು ವಿಮಲಸಂಹಿತೆ ಯಲ್ಲಿ ಹೇಳಿದೆ.

ಶ್ರೀರ್ಭೂರ್ದುರ್ಗೇತಿ ಯಾ ಭಿನ್ನಾ ಪ್ರಕೃತಿಃ ಶಕ್ತಿರುಚ್ಯತೇ ।
ವಿಷ್ಣೋಃ ಸ್ವರೂಪಶಕ್ತೇಃ ಸಾ ಶಕ್ಯತ್ವಾಚ್ಛಕ್ತಿರುಚ್ಯತೇ ।
ನಿತ್ಯಾವ್ಯವಹಿತತ್ವಾತ್ತು ವಿಶೇಷಾಚ್ಛಕ್ತಿನಾಮಿಕಾ ।
ಯಥೈವ ಪಂಕಜಂ ಬ್ರಹ್ಮಾ ರುದ್ರ ಇತ್ಯಾದಿಕಂ ಪದಂ ।
ತಾಭಿಃ ಶಯಾನಂ ಪುರುಷಂ ಸೈವ ತು ಶ್ರುತಿರೂಪಿಣೀ ।
ಅಸ್ತೌತ್ ಪ್ರಕಾಶಯಾತ್ಮಾನಂ ಪ್ರಕೃತಿಂ ಜೀವಬಂಧನಾಂ ।
ಜಹಿ ದೋಷೈರ್ಯಯಾ ಸರ್ವೇ ಗುಣಾ ಜೀವಸ್ಯ ಸಂವೃತಾಃ ॥

ಇತಿ ತಂತ್ರಭಾಗವತೇ ॥

ಶ್ರೀ ಭೂ ದುರ್ಗಾ ಎಂದು ಹೆಸರುಳ್ಳ ಲಕ್ಷ್ಮಿ ವಿಷ್ಣುವಿನ ಸ್ವರೂಪಶಕ್ತಿಗಿಂತ ಭಿನ್ನಳಾಗಿದ್ದು ಅದಕ್ಕೆ ಅಧೀನಳಾಗಿದ್ದಾಳೆ, ಶಕ್ತಿ ಎನಿಸಿದ್ದಾಳೆ. ಸ್ವರೂಪ ಶಕ್ತಿಗೆ ವಿಷಯಳಾದ್ದರಿಂದಲೆ ಶಕ್ತಿ ಎಂಬ ಹೆಸರು, ಹೊರತು, ಅಭಿನ್ನಳಾದ್ದ ರಿಂದಲ್ಲ. ಪ್ರಪಂಚದಲ್ಲಿ ಎಲ್ಲರೂ ಶಕ್ತಿಗೆ ವಿಷಯರೇ ಆದರೂ ಲಕ್ಷ್ಮಿ ವಿಷ್ಣುವಿನ ಸ್ವರೂಪಶಕ್ತಿಯಂತೆ ಅವನಿಗೆ ನಿತ್ಯಾವಿಯೋಗಿನಿ ಯಾಗಿದ್ದಾಳೆ ಎಂಬ ವಿಶೇಷವಿರುವ ಪ್ರಯುಕ್ತ ಅವಳನ್ನೇ ಶಕ್ತಿ ಎಂದು ಕರೆಯುತ್ತಾರೆ. ಕೆಸರಲ್ಲಿ ಕಪ್ಪೆ ಹುಟ್ಟಿದರೂ ಕಮಲವೇ ಪಂಕಜವೆನಿಸುತ್ತದೆ. ಬ್ರಾಹ್ಮಣ ಜಾತಿಗೆ ಬ್ರಹ್ಮಾ ಎಂದು ಹೆಸರಿದ್ದರೂ ಚತುರ್ಮುಖನಲ್ಲಿ ಅದು ಹೆಚ್ಚು ಪ್ರಸಿದ್ಧ. ರೌದ್ರಗುಣ ಉಳ್ಳವರೆಲ್ಲರನ್ನೂ ರುದ್ರ ಎನ್ನಲು ಶಕ್ಯವಿದ್ದರೂ ಶಂಕರನನ್ನೇ ರುದ್ರ ಎನ್ನುತ್ತಾರೆ. ಹಾಗೇ ಇದು. ಆದರಿಂದ ಶಕ್ತಿ ಎಂದು ಹೆಸರು ಲಕ್ಷ್ಮಿಯಲ್ಲಿಯೇ ಹೆಚ್ಚು ಪ್ರಸಿದ್ಧವಾದ್ದರಿಂದ, ಶಕ್ತಿ ಎನಿಸುವ ಲಕ್ಷ್ಮೀರೂಪಗಳೊಂದಿಗೆ ಪ್ರಳಯಕಾಲದಲ್ಲಿ ಆಲದೆಲೆಯ ಮೇಲೆ ಮಲಗಿದವನು ಪರಮಪುರುಷ ನಾರಾಯಣ. ಆ ಲಕ್ಷ್ಮಿಯೇ ಶ್ರುತ್ಯಭಿಮಾನಿ ದುರ್ಗಾರೂಪಗಳಿಂದ ಅವನನ್ನು ಸ್ತುತಿಸಿದಳು. ಅವತಾರ ಮಾಡಿ ದುರ್ಜನ ಸಂಹಾರದಿಂದ ನೀನು ಸದಾ ಜಯಶಾಲಿ ಎನ್ನುವುದನ್ನು

ತೋರಿಸು, ಜೀವನನ್ನು ಸಂಸಾರದಲ್ಲಿ ಬಂಧಿಸುವ ಜೀವಾಚ್ಛಾದಕ ಪ್ರಕೃತಿಯನ್ನು ನಾಶಮಾಡು. ಅದು ಜೀವನ ಎಲ್ಲ ಗುಣಗಳನ್ನೂ ದೋಷ ಗಳಿಂದ ಮುಚ್ಚಿಹಾಕುತ್ತದೆ' ಎಂದು ತಂತ್ರಭಾಗವತದಲ್ಲಿ ಉಕ್ತವಾಗಿದೆ.

ಶ್ರೀಃ ಪರಾ ಪ್ರಕೃತಿಃ ಪ್ರೋಕ್ತಾ ಬ್ರಹ್ಮಾಣೀ ತ್ವವರಾ ತತಃ ।
ಉಮಾಶಚೀಮುಖಾಸ್ತಸ್ಯಾ ಅವರಾಃ ಸಂಪ್ರಕೀರ್ತಿತಾಃ ।
ಅಥಾನ್ಯೇ ಪ್ರಕೃತೀ ದುಷ್ಟೇ ನೃಷು ಪ್ರಾತಿಸ್ವಿಕಂ ಸ್ಥಿತೇ ।
ಸ್ವಗುಣಾಚ್ಛಾದಿಕಾ ತ್ವೇಕಾ ಪರಮಾಚ್ಛಾದಿಕಾಽಽ ಪರಾ ।
ಸ್ವಗುಣಾಚ್ಛಾದಿಕಾಂ ಹತ್ವಾ ಪರಮಾಚ್ಛಾದಿಕಾಂ ಪರಃ ।
ವ್ಯಾಘುಟ್ಯ ಮೋಕ್ಷಪದವೀಂ ದದಾತಿ ಪುರುಷೋತ್ತಮಃ ।
ಅಜೇ ದ್ವೇ ಅಪಿ ತೇ ಪ್ರೋಕ್ತೇ ಅನಂತಾಽಽಚ್ಛಾದಿನೀ ಹರೇಃ ।
ನ ವಿಷ್ಣುಂ ಛಾದಯತ್ಯೇಷಾ ತಜ್ಜ್ಞಾನಂ ಛಾದಯೇತ್ ಪರಂ ।
ಜೀವಸ್ಯೈವ ನ ತತ್ರಾಪಿ ಬ್ರಹ್ಮಾದೇರಸ್ತಿ ಸಾ ಕ್ವಚಿತ್ ।
ಸರ್ವಾವರೇ ತೇ ಪ್ರಕೃತೀ ಸತತಂ ದುಃಖಿತೇಽಪಿಚ ।
ಪಿಶಾಚವತ್ ಸಮುದ್ದಿಷ್ಟೇ ಪುರುಷಸ್ಯಾಧಿಕಾರಿಣಃ ।
ಪ್ರೇರಕಾಸ್ತು ತಯೋರ್ದೇವ್ಯ ಇಂದಿರಾದ್ಯಾಃ ಸುಖಾತ್ಮಿಕಾಃ ॥

ಇತಿ ಮಹಾತತ್ವವಿವೇಕೇ ।

'ಅಜಾ' 'ಪ್ರಕೃತಿ' ಎಂದರೆ ಮುಖ್ಯವಾಗಿ ಲಕ್ಷ್ಮೀದೇವಿ. ಅವಳಿಗಿಂತ ಕಡಿಮೆಯವಳು 'ಪ್ರಕೃತಿ' ಸರಸ್ವತಿ. ಅವಳಿಗಿಂತ ಕಡಿಮೆಯವರು ಪಾರ್ವತಿ ಶಚಿ ಮುಂತಾದವರು. ಇನ್ನೂ ಕಡಿಮೆಯವರು ಬೇರೆ ಇಬ್ಬರು ದುಷ್ಟ ಪ್ರಕೃತಿಗಳಿದ್ದಾರೆ. ಮನುಷ್ಯರಲ್ಲಿ ಪ್ರತಿಯೊಬ್ಬರಲ್ಲಿಯೂ ಬೇರೆಬೇರೆ ಯಾಗಿರುತ್ತಾರೆ. ಒಬ್ಬಳು ಜೀವಾಚ್ಛಾದಿಕೆ ಜೀವರ ಗುಣಗಳನ್ನು ಜೀವರಿಗೇ ಮುಚ್ಚಿಹಾಕುತ್ತಾಳೆ. ಇನ್ನೊಬ್ಬಳು ಪರಮಾಚ್ಛಾದಿಕೆ ಪರಮಾತ್ಮನ ಜ್ಞಾನವನ್ನು ಜೀವರಿಗೆ ಬಾರದಂತೆ ಮಾಡುತ್ತಾಳೆ. ಇವರಲ್ಲಿ ಜೀವಾಚ್ಛಾದಿಕೆಯನ್ನು ನಾಶಮಾಡಿ ಪರಮಾಚ್ಛಾದಿಕೆಯನ್ನು ದೂರಮಾಡಿ ಶ್ರೀಹರಿ **ಮೋಕ್ಷ** ನೀಡುತ್ತಾನೆ. ಇಬ್ಬರೂ ಅನಾದಿಗಳೇ ಆದರೆ ಹರಿಯ **ಜ್ಞಾನವನ್ನು** ಮರೆಮಾಡುವ ಪರಮಾಚ್ಛಾದಿಕೆ ಮಾತ್ರ ನಾಶರಹಿತಳು ಏಕೆಂದರೆ **ಅವಳು** ಜೀವಾಚ್ಛಾದಿಕೆಯಂತೆ ತಮೋಯೋಗ್ಯಳಲ್ಲ. **ನಿತ್ಯಸಂಸಾರಿಣಿಯಾಗಿರು** ವಳು. ಇವಳು 'ಪರಮಾಚ್ಛಾದಿಕೆ' ಎನಿಸಿದರೂ **ವಿಷ್ಣುವನ್ನು ಆಚ್ಛಾದನ**

ಮಾಡುವುದಿಲ್ಲ. ಜೀವನನ್ನು ಆಚ್ಛಾದಿಸಿ ಅವನಿಗೇ ವಿಷ್ಣುಜ್ಞಾನವನ್ನು ತಡೆಯುತ್ತಾಳೆ. ಜೀವರಲ್ಲಿಯೂ ಬ್ರಹ್ಮಾದಿದೇವತೆಗಳಿಗೆ ಅವಳು ವಿಷ್ಣುಜ್ಞಾನವನ್ನು ಪ್ರತಿಬಂಧಿಸುವುದಿಲ್ಲ. ಪ್ರಕೃತಿಗಳಲ್ಲೆಲ್ಲ ಕಡಿಮೆಯವರೆಂದರೆ ಇವರೇ ಇಬ್ಬರು, ಸದಾ ದುಃಖಿಗಳು. ಜೀವಶರೀರದಲ್ಲಿ ಜೀವನೊಂದಿಗೆ ಪಿಶಾಚಿ ಆವೇಶಗೊಂಡು ಇರುವಂತೆ ಈ ಇಬ್ಬರು ಪ್ರಕೃತಿಗಳೂ ಆವೇಶಗೊಂಡು ಇರುತ್ತಾರೆ. ಸುಖಸ್ವರೂಪರಾದ ಲಕ್ಷ್ಮೀ ಮುಂತಾದ ದೇವಿಯರು ಇವರಿಗೆ ಪ್ರೇರಕರು ಎಂದು ಮಹಾತತ್ತ್ವವಿವೇಕದಲ್ಲಿ ಉಕ್ತವಾಗಿದೆ.

ಶ್ರುತಿಗೀತೆ ಸ್ತುತಿಪಾಠಕರ ಸ್ತುತಿಗಳಂತಿತ್ತು ಎನ್ನುತ್ತಾರೆ—

ರಾಜವಜ್ಜಯಶಬ್ದಾದ್ಯಾ ನಿತ್ಯಬುದ್ಧಸ್ಯ ಬೋಧನಂ ।
ವಿಡಂಬಮಾತ್ರಂ ಕ್ವೈವಾಸ್ಯ ನಿದ್ರಾ ವಿದ್ಯಾಪತೇರ್ಹರೇಃ ॥
ಇತಿ ಕಾಪಿಲೇಯೇ ॥

'ಶ್ರೀಹರಿಗೂ ರಾಜನಂತೆ ಜಯಶಬ್ದ ಮುಂತಾದವು ಯುಕ್ತವೆ. ಆದರೆ ಆ ಶಬ್ದಗಳಿಂದ ನಿತ್ಯ ಎಚ್ಚರವಾಗಿರುವ ಅವನನ್ನು ಎಚ್ಚರಿಸುವುದು ಕೇವಲ ವಿಡಂಬನೆ. ಏಕೆಂದರೆ ವಿದ್ಯಾಧಿಪತಿಯಾದ ಹರಿಗೆ ನಿದ್ದೆ ಎಲ್ಲಿ?' ಎಂದು ಕಾಪಿಲೇಯಗ್ರಂಥದಲ್ಲಿದೆ.

❖ ❖ ❖

ಶ್ರುತಿಗೀತೆಯಲ್ಲಿ ಮೊದಲನೆ ಪದ್ಯ—

ಜಯ ಜಯ ಜಹ್ಯಜಾಮಜಿತ ದೋಷಗೃಹೀತಗುಣಾಂ
ತ್ವಮಸಿ ಯದಾತ್ಮನಾ ಸಮವರುದ್ಧಸಮಸ್ತಭಗಃ ।
ಅಜ ಜಗದೋಕಸಾಮಖಿಲಶಕ್ತ್ಯವಬೋಧಕ ತೇ
ಕ್ವಚಿದಜಯಾಽಽತ್ಮನಾಽನುಚರತೋಽನುಚರೇನ್ನಿಗಮಃ ॥ ೧೫ ॥

ಎಂದೂ ಪರಾಜಿತನಾಗದ ಪ್ರಭುವೆ, ನಿನಗೆ ಜಯವಾಗಲಿ, ಜಯವಾಗಲಿ. ಜೀವರಿಗೆ ಅವರ ಸ್ವರೂಪಭೂತವಾದ ಆನಂದಾದಿಗುಣಗಳನ್ನೂ ನಿನ್ನ ಕಲ್ಯಾಣ ಗುಣಗಳನ್ನೂ ಮರೆಮಾಡುವ ಜೀವಾಚ್ಛಾದಕ-ಪರಮಾಚ್ಛಾದಕ ಪ್ರಕೃತಿಗಳನ್ನು ನಾಶಮಾಡು, ದೂರ ಮಾಡು. ನಿನ್ನಲ್ಲಿ ಷಡ್ಗುಣಗಳು ಜೀವರಂತೆ ಪ್ರಕೃತಿಯಿಂದ ಆವೃತವಾಗಿಲ್ಲ. ಅನಾದಿಕಾಲದಿಂದಲೂ ನೀನು ಸ್ವತಂತ್ರವಾಗಿ ಹೀಗೇ ಇರುವೆ. ರಮಾಬ್ರಹ್ಮಾದಿಗಳೆಲ್ಲರೊಳಗೂ ಬಿಂಬರೂಪನಾಗಿ ನಿಂತು ನೀನೇ ಅವರ ಎಲ್ಲ

ಶಕ್ತಿಗಳನ್ನೂ ವ್ಯಕ್ತಮಾಡುವವನು. ನಿದ್ದೆಯಿಂದ ಎದ್ದೇಳು. ಜೀವಜಡಗಳನ್ನು ಸೃಷ್ಟಿಮಾಡು. ಆಗಲೆ ನಾವು ವೇದಾಭಿಮಾನಿಗಳು ವೇದದ ವಿಧಿನಿಷೇಧಗಳ ಮೂಲಕ ನಿನ್ನ ಪ್ರೀತ್ಯರ್ಥವಾಗಿ ಕರ್ಮ ಮಾಡಲು ಜೀವರನ್ನು ಪ್ರೇರಿಸಬಲ್ಲೆವು.

ಅಜಿತ ! ಜಯಜಯ

ಎಂದೂ ಪರಾಜಿತನಾಗದವನಾದ್ದರಿಂದ 'ಅಜಿತ'ನಾಮಕನಾಗಿರುವ ಹೇ ಹರಿಯೆ! ಜಯಶಾಲಿಯಾಗು. ಜಯಶಾಲಿಯಾಗು.

ನೀನು 'ಜಯ' **ಶಾ**ಲಿಯೆ. ಜಯವೆಂದರೆ ಬೇರೆ ರಮಾಬ್ರಹ್ಮಾದಿಗಳಲ್ಲಿ ಯಾರಲ್ಲಿಯೂ ಇಲ್ಲದಂಥ ಸರ್ವೋತ್ಕೃಷ್ಟ ಮಹಾಮಹಿಮೆ. ಅದು ನಿನ್ನಲ್ಲಿ ಇದೆ. ಅದು ಈ ಲಯಕಾಲದಲ್ಲಿ ಜೀವರಿಗೆ ಯಾರಿಗೂ ತಿಳಿಯುವುದಿಲ್ಲ. ಅದಕ್ಕೆ ನೀನು ಎದ್ದು ಅವರನ್ನೂ ನಿದ್ದೆಯಿಂದ ಎಬ್ಬಿಸಬೇಕು. ಸ್ಥೂಲಶರೀರದಿಂದ ಸೃಷ್ಟಿಮಾಡಿ ಅವರಿಗೆ ನಿನ್ನ ಮಹಿಮೆ ತೋರಬೇಕು. 'ಜಯವಾಗಲಿ' ಎನ್ನುವುದಕ್ಕೆ ಹೀಗೇ ಅರ್ಥ. ಇಲ್ಲದಿದ್ದರೆ ಎಂದೂ ಪರಾಜಯವಿಲ್ಲದ ಅಜಿತನಿಗೆ ಜಯವಾಗುವುದು ಎಂದರೇನು?

ದೋಷಗೃಹೀತ ಗುಣಾಂ ಅಜಾಂ ಜಹಿ

ಜೀವರ ಅನಾದಿ ಸ್ವರೂಪಭೂತ ಆನಂದಾದಿ ಗುಣಗಳನ್ನು ಪ್ರಕೃತಿಯು ದುಃಖಾದಿ ದೋಷಗಳಿಂದ ಆವರಿಸುತ್ತಿದೆ. ಅದನ್ನು ನಾಶ ಮಾಡು.

ಭಗವಂತನ **ಇಚ್ಛಾ**ವರಣವೇ ಅನಾದಿಕಾಲದಿಂದ ಸ್ವರೂಪಾನಂದ ಆವಿರ್ಭಾವವಾಗ**ದಂತೆ ತಡೆ**ಯುವ ಮುಖ್ಯ ಆವರಣ. ಪ್ರಕೃತಿ ನಿಮಿತ್ತ ಮಾತ್ರ. ಜೀವ **ಅನಾದಿಕಾಲದಿಂ**ದಲೂ ನಾಶವಾಗದೆ ಇರುವುದೂ ಅವನ ಆನಂದಾದಿಗುಣ **ಅವ್ಯಕ್ತವಾಗಿ** ಇರುವುದೂ ಭಗವಂತನ ಇಚ್ಛೆ ಹಾಗಿರುವುದರಿಂದ **ಎಂದರ್ಥ**. ಆ ಇಚ್ಛೆಗನುಸಾರವಾಗಿ ಪ್ರಕೃತಿಯೂ ಆವರಿಸಿ ಜೀವನ ಗುಣ**ಗಳನ್ನು** ಅವ್ಯಕ್ತವಾಗಿರಿಸುತ್ತದೆ. ಸೂರ್ಯನಿಗೆ ರಾಹುಗ್ರಹಣವಾಗುವಂತೆ **ಜೀವನಿಗೆ ಜೀವಾಚ್ಛಾ**ದಕ ಪರಮಾಚ್ಛಾದಕ ಎಂಬ ಎರಡು ಪ್ರಕೃತಿಯ **ಆವರಣಗಳಿವೆ. ಪ್ರಕೃತಿಯಿಂದ ಜೀವನ** ಬಾಹ್ಯಮನಸಿನಲ್ಲಿ ದುಃಖಾದಿಗಳು **ಉಂಟಾಗುವುದರಿಂದ ಸ್ವರೂಪ** ಭೂತವಾದ ಆನಂದ ವ್ಯಕ್ತವಾಗುವುದಿ**ಲ್ಲ. ವ್ಯಕ್ತಮಾಡುವ ಪರಮಾತ್ಮಾ** ಪರೋಕ್ಷವೂ ಬಾರದಂತೆ ಪ್ರಕೃತಿ ತಡೆಯು**ತ್ತದೆ. ಅದಕ್ಕೆ ಪರಮಾತ್ಮನೆ** ತನ್ನ ಅಪರೋಕ್ಷ ನೀಡಿ ಪ್ರಕೃತಿಯ ಆವರಣವ**ನ್ನು ತೆಗೆಯಬೇಕು**. ಜೀವ

ಸ್ವರೂಪವಾದ **ಆನಂದಾದಿಗುಣವನ್ನು** ವ್ಯಕ್ತಮಾಡಿಕೊಡಬೇಕು. ಜೀವಾಚ್ಛಾದಕ **ಪ್ರಕೃತಿಗೆ ತಮೋಯೋಗ್ಯ** ಚೇತನ ಅಭಿಮಾನಿ. ಅವಳು ಜೀವಸ್ವರೂಪಭೂತ **ಆನಂದಾದಿಗುಣ**ಗಳನ್ನು ದುಃಖಾದಿದೋಷಗಳಿಂದ ಆವರಿಸು**ತ್ತಾಳೆ. ಪರಮಾಚ್ಛಾದಕ** ಪ್ರಕೃತಿಗೆ ನಿತ್ಯಸಂಸಾರಿ ಚೇತನ ಅಭಿಮಾನಿ, **ಅವಳು ಪರಮಾತ್ಮಾ ಪರೋಕ್ಷ** ಬಾರದಂತೆ ತಡೆಯುತ್ತಾಳೆ. ಪರಮಾತ್ಮ ತನ್ನ **ಅಪರೋಕ್ಷ ನೀಡಿ ಜೀವಾಚ್ಛಾ**ದಕವನ್ನು ಕೊಲ್ಲುತ್ತಾನೆ. ಅಂದರೆ ತಮಸ್ಸಿನಲ್ಲಿ **ಹಾಕುತ್ತಾನೆ. ಪರಮಾಚ್ಛಾ**ದಕವನ್ನು ದೂರ ಸರಿಸುತ್ತಾನೆ. ತಮಸ್ಸಿನಲ್ಲಿ ಹಾಕುವುದಿಲ್ಲ. **ಏಕೆಂದರೆ** ಅವಳು ನಿತ್ಯ ಸಂಸಾರಿ. ಮತ್ತು ಅಪರೋಕ್ಷಿಗಳಿಗೂ **ಕೆಲವೊಮ್ಮೆ ಪರಮಾತ್ಮ** ಮರೆಯಾಗುತ್ತಾನೆ. ಪ್ರಾರಬ್ಧಕರ್ಮದಿಂದ ಅವರು **ಪರಮಾತ್ಮನಲ್ಲಿ ವಿರೋಧ** ಮಾಡುತ್ತಾರೆ. ಇದಕ್ಕೆ ಆ ಕಾಲದಲ್ಲಿ ಮಾತ್ರ **ಪರಮಾಚ್ಛಾದಕ** ತಿರುಗಿ ಬಂದು ಪರಮಾತ್ಮಾಪರೋಕ್ಷವನ್ನು ತಡೆಯುವ **ಕಾರ್ಯ** ಮಾಡಬೇಕು. ಅದರಿಂದ ಪರಮಾಚ್ಛಾದಕವನ್ನು ಕೊಲ್ಲದೆ ದೂರ ಸರಿಸು ಎಂದು ವೇಧಾಭಿಮಾನಿ **ದುರ್ಗಾದೇವಿಯರು ಕೇಳಿಕೊಳ್ಳುತ್ತಾ**ರೆ. 'ಜಹಿ' ಎಂದರೆ **ಎರಡೂ ಅರ್ಥ. ಹನನ ಮಾಡು, ಹಾನ** ಮಾಡು, 'ಕೊಲ್ಲು', 'ದೂರ **ಸರಿಸು'** ಎಂದು. ಎರಡು ಪ್ರಕೃತಿಗಳಿಗೆ ಮುಖ್ಯಾಭಿಮಾನಿನಿ **ರಮಾದೇವಿಯೆ**, ಆದರೂ ಅವಳು ಇಬ್ಬರು ದುಷ್ಟಜೀವರಿಗೂ ಅವರ **ಸಾಧನವಾಗಲೆಂದು** ಅವರನ್ನು ನಿಮಿತ್ತ ಮಾಡಿಕೊಳ್ಳುತ್ತಾಳೆ, ಅವರಿಂದ **ಜಡಪ್ರಕೃತಿಯ** ಮೂಲಕ ಜೀವರನ್ನು ಆಚ್ಛಾದಿಸುವ ಕಾರ್ಯ **ಮಾಡಿಸುತ್ತಾಳೆ.**

ಯತ್‌ತ್ವಂ ಆತ್ಮನಾ ಸಮವರುದ್ಧ ಭಗಃ ಅಸಿ

ನೀನು **ಸ್ವತಃ ನಿನ್ನ ಎಲ್ಲ ಷಡ್ಗುಣ**ಗಳನ್ನು ನಿನ್ನಲ್ಲಿ ವ್ಯಕ್ತವಾಗಿ ಸ್ಥಿರವಾಗಿ ಇರಿಸಿಕೊಂಡಿರುವೆ.

> ಐಶ್ವರ್ಯಸ್ಯ **ಸಮಗ್ರಸ್ಯ ವೀರ್ಯಸ್ಯ ಯಶಸಃ** ಶ್ರಿಯಃ ।
> ಜ್ಞಾನ ವಿಜ್ಞಾನಯೋ**ಶ್ಚೈವ ಷಣ್ಣಾಂ ಭಗ ಇತೀ**ರಣಾ ॥

ಭಗ ಎಂದರೆ **ಐಶ್ವರ್ಯ ವೀರ್ಯ ಯಶಸ್** ಶ್ರೀ ಜ್ಞಾನ ಮತ್ತು ವಿಜ್ಞಾನ ಎಂಬ ಆರು **ಗುಣಗಳು. ಇವುಗಳು** ಜೀವನಂತೆ ಭಗವಂತನಲ್ಲಿ ಎಂದೂ ಪ್ರಕೃತಿಯಿಂದ **ಆವೃತ**ವಾಗಿರುವುದಿಲ್ಲ. ಅವ್ಯಕ್ತವಾಗಿರುವುದಿಲ್ಲ, ನಾಶಹೊಂದುವುದೂ ಇಲ್ಲ.

ಅಜ, ಜಗದೋಕಸಾಂ ಅಖಿಲ ಶಕ್ತ್ಯವಬೋಧಕ !

ಜನನ ರಹಿತನೆ, ಜಗತ್ತಿಗೆ ಆಧಾರರಾದ ಬ್ರಹ್ಮಾದಿದೇವತೆಗಳಿಗೂ ಅವರ ಎಲ್ಲ ಶಕ್ತಿಗಳನ್ನು ವ್ಯಕ್ತಮಾಡಿಕೊಡುವವನೆ !

ಬ್ರಹ್ಮಾದಿ ಜೀವರಲ್ಲಿ ಪ್ರಕೃತಿಯಿಂದ ಆವೃತವಾದ ಸುಪ್ತವಾದ ಶಕ್ತಿಗಳನ್ನು ವ್ಯಕ್ತಗೊಳಿಸುವ ನಿನಗೆ ನಿನ್ನ ಶಕ್ತಿಗಳು ಆವೃತವಾಗಿರಲು ಸಾಧ್ಯವಿಲ್ಲ.

ಕ್ವಚಿದಜಯಾ ಆತ್ಮನಾ ಅನುಚರತಸ್ತೇ ನಿಗಮೋಽನುಚರೇತ್

ವೇದೋಕ್ತಾನುಸಾರವಾಗಿ ಸೃಷ್ಟಿಕಾಲದಲ್ಲಿ ನೀನು ಪ್ರಕೃತಿಯನ್ನೂ ಜೀವಾತ್ಮನನ್ನೂ ಸೇರಿಸಿ ಶರೀರ ಸೃಷ್ಟಿಮಾಡಿದರೆ ವೇದ ನಿನ್ನಿಚ್ಛೆಗನುಸಾರವಾಗಿ ವಿಧಿ ನಿಷೇಧಗಳ ಮೂಲಕ ಜೀವರಿಂದ ನಿನ್ನ ಪ್ರೀತ್ಯರ್ಥವಾಗಿ ಕರ್ಮ ಮಾಡಿಸುತ್ತದೆ.

ಅವತಾರಗಳಲ್ಲಿ ಮಹಾಲಕ್ಷ್ಮಿಯೊಂದಿಗೆ ಸೇರಿ ನೀನು ವೇದೋಕ್ತಾನುಸಾರವಾಗಿ ಯಜ್ಞಾದಿ ಕರ್ಮಾನುಷ್ಠಾನ ಮಾಡಿ ತೋರಿಸಿದರೆ ವೇದವು ನಿನ್ನಿಚ್ಛೆಗನುಸಾರವಾಗಿ ವಿಧಿನಿಷೇಧಗಳ ಮೂಲಕ ಜೀವರಿಂದ ನಿನ್ನ ಪ್ರೀತಿಗಾಗಿ ಕರ್ಮ ಮಾಡಿಸುತ್ತದೆ. ಅದರಿಂದ, ನೀನು ನಿದ್ದೆಯಿಂದ ಎದ್ದು ವೇದೋಕ್ತಾನುಸಾರ ಸೃಷ್ಟಿಮಾಡು. ಅವತಾರಗಳನ್ನೂ ಮಾಡಿ ವೇದೋಕ್ತ ರೀತಿಯಿಂದ ಕರ್ಮಮಾಡಿ ಸಜ್ಜನರಿಗೆ ಮಾರ್ಗ ದರ್ಶನವನ್ನೂ ನೀಡು ಎಂದು ವೇದಾಭಿಮಾನಿನಿ ದುರ್ಗೆ ಪ್ರಾರ್ಥಿಸುತ್ತಿದ್ದಾಳೆ.

ದೋಷೈರ್ದುಃಖಾದ್ಯೈ ರ್ಜೀವಗುಣಾ ಆನಂದಾದ್ಯಾ ಗೃಹೀತಾ ಯಯಾ ಸಾ ದೋಷಗೃಹೀತಗುಣಾ। ತ್ವಮಸಿ ಯದಾತ್ಮನಾ ಸಮವರುದ್ಧಸಮಸ್ತಭಗಃ। ಯಸ್ಮಾತ್ ತ್ವಂ ಸ್ವತ ಏವಾನಪಗತ-ಪೂರ್ಣೈಶ್ವರ್ಯಾದಿಗುಣೋಽಸಿ। ಅತಸ್ತ್ವದಾಭಾಸಸ್ಯ ಜೀವಸ್ಯ ಪ್ರಕೃತಿಗೃಹೀತತ್ವಾದೇವ ನೈಶ್ವರ್ಯಾದ್ಯಾ ಗುಣಾ ಅವಭಾಸಂತೇ। ಜಗದೋಕಸಾಂ ಶ್ರೀಬ್ರಹ್ಮಾದೀನಾಮಪ್ಯಖಿಲಶಕ್ತ್ಯವಬೋಧಕ। ಕ್ವಚಿತ್ ಸೃಷ್ಟಿಕಾಲೇ ಆತ್ಮನಾ ಜೀವೇನ ಪ್ರಕೃತ್ಯಾ ಚ ಪ್ರವರ್ತತಸ್ತೇ ಅನುಚರೇದ್ ವೇದೋ ವಿಧಿನಿಷೇಧರೂಪೇಣ। ಅನ್ಯದಾ ಸ್ತುತಿಮಾತ್ರೋ ನತು ಜೀವಾನಾಂ ಪ್ರಯೋಜಕಃ। ತಸ್ಮಾತ್ ಸೃಷ್ಟಿಂ ಕೃತ್ವಾ ವೇದೈರ್ಜೀವಾನ್ ಬೋಧಯಿತ್ವಾ ತತ್ಸ್ಥಾಮಜಾಂ ಜಹಿ।

'ದೋಷಗೃಹೀತಗುಣಾ' ಎಂದರೆ ದುಃಖಾದಿದೋಷಗಳಿಂದ ಜೀವರ ಆನಂದಾದಿ ಗುಣಗಳನ್ನು ಮುಚ್ಚುವ ಪ್ರಕೃತಿ ಎಂದರ್ಥ. 'ತ್ವಮಸಿ ಯದಾತ್ಮನಾ ಸಮವರುದ್ಧ ಸಮಸ್ತಭಗಃ' ಎಂದರೆ ನೀನು ಸ್ವಯಂ ನಿನ್ನ ಪೂರ್ಣೈಶ್ವರ್ಯಾದಿ ಗುಣಗಳಿಗೆ ಚ್ಯುತಿ ಇಲ್ಲದವನು. ಅದರಿಂದ, ನಿನ್ನ ಪ್ರತಿಬಿಂಬನಾದ್ದರಿಂದ ಜೀವನಿಗೆ ತನ್ನಲ್ಲಿಯೇ ಸ್ವರೂಪಭೂತವಾದ ಐಶ್ವರ್ಯಾದಿಗುಣಗಳು ಇದ್ದರೂ ಅವು ಪ್ರಕೃತಿಯಿಂದ ಆವೃತವಾದ್ದರಿಂದ ಭಾಸವಾಗುವುದಿಲ್ಲ. 'ಜಗದೋಕಸಾಮಖಿಲಶಕ್ತ್ಯವಬೋಧಕ' ಎಂದರೆ ಜಗತ್ತಿಗೆ ಆಶ್ರಯಭೂತರಾದ ಬ್ರಹ್ಮಾದಿಗಳಿಗೂ ಕೂಡ ಅವರ ಎಲ್ಲ ಶಕ್ತಿಗಳನ್ನೂ ವ್ಯಕ್ತಗೊಳಿಸುವವನು ನೀನು. 'ಕ್ವಚಿದಜಯಾಽಽತ್ಮನಾಽನುಚರತೋಽನುಚರೇನ್ನಿಗಮಃ' ಎಂದರೆ ಸೃಷ್ಟಿಕಾಲದಲ್ಲಿ ನೀನು ಪ್ರಕೃತಿಯನ್ನೂ ಜೀವಾತ್ಮನನ್ನೂ ಸೇರಿಸಿ ಸೃಷ್ಟಿಕಾರ್ಯದಲ್ಲಿ ಪ್ರವೃತ್ತಿ ಮಾಡಿದರೆ ವೇದವೂ ವಿಧಿನಿಷೇಧ ರೂಪದಿಂದ ನಿನಗೆ ಅನುಕೂಲವಾಗಿ ಪ್ರವೃತ್ತಿ ಮಾಡುತ್ತದೆ. ಬೇರೆ ಕಾಲದಲ್ಲಿ ಅದು ಜೀವರಿಗೆ ಪ್ರೇರಣೆ ಮಾಡುವುದಿಲ್ಲ. ನಿನ್ನ ಸ್ತುತಿಮಾತ್ರವನ್ನು ಮಾಡುತ್ತದೆ. ಅದರಿಂದ ಸೃಷ್ಟಿ ಮಾಡಿ ವೇದಗಳಿಂದ ಜೀವರಿಗೆ ಕರ್ಮವನ್ನು ಬೋಧಿಸಿ ಅವರಲ್ಲಿರುವ ಬಂಧಕ ಪ್ರಕೃತಿಯನ್ನು ಜ್ಞಾನದಿಂದ ನಾಶಮಾಡು ಎಂದರ್ಥ.

ಜಯಜಯ ಹನಹನ ಪ್ರಕೃತಿಂ ದ್ರಾವಯದ್ರಾವಯ। ಭಿಂಧಿಭಿಂಧಿ ದುಃಖಂ ತಮೋಽರತಿಮಜಿತ। ಪರಮ ಪರಮೇಶಾನ ವಾಸುದೇವ ವೈಕುಂಠ ನಾರಾಯಣ ಹೃಷೀಕೇಶ। ಅನಯಾ ಹಿ ಜೀವಗುಣಾ ವಿಸಂವೃತಾ ಅಧಿಸಂವೃತಾಃ। ಏಷ ಹ್ಯಾನಂದೋಽಜರೋಽಮರೋಽಧಿಶಕ್ತಿಮಾನ್। ತ್ವದಾಭಾಸಸ್ತ್ವಯಾ ತಥಾಽಧಿಸಂಭಾವ್ಯಃ। ಯತಃ ಪರಃ ಪರಮೇಶ್ವರಃ ಪರಜ್ಞಾನಃ ಪರಾನಂದಃ ಪರಶಕ್ತಿಃ ಪರಶ್ರೀಃ ಪರಯಶಾಃ ಪರಪ್ರವೃತ್ತಿ ರ್ನಿತ್ಯಮೇವ ಸ್ವತೋಽಸಿ। ತ್ವಂ ರಮಾಯಾಸ್ತ್ವಂ ವಿರಿಂಚಸ್ಯ ರುದ್ರೇಂದ್ರಸೋಮಸೂರ್ಯಮುಖಾನಾಮದಭ್ರಶಕ್ತಿದೋಽಸಿ। ಪ್ರವರ್ತಕೋಽಸಿ ನಿವರ್ತಕೋಽಸ್ಯನೋಽಸ್ಯನಂತೋಽಸಿ। ಸೃಜತೋ ಹಿ ತೇ ಶ್ರುತಯೋಽನುವರ್ತಂತೇ ನೈವಾಸೃಜತಃ। ಕಂ ವಿದಧತೇ ಕಂ ವಾ ನಿಷೇಧಂತಿ ಸ್ತುತಿಮಾತ್ರಾ ಏವ ತೇ ಸ್ಯುಃ। ಪ್ರಭೋ ವಿಭೋ ಸಮಾಸ್ವ ವ್ಯಾಸ್ವೋತ್ತಿಷ್ಠ ಪ್ರಚರ ವಿಚರ।

ಸಂಧಿನುಸಂಧಿನು ಮಾ ತೇ ಕ್ಷಣೋಽತ್ಯಗಾತ್ ಮಾ ತೇ ಕ್ಷಣೋಽತ್ಯಗಾತ್ ॥ -ಇತಿ ಶಾಂಡಿಲ್ಯಶ್ರುತಿಃ

ಶ್ರುತಿಗೀತೆಯ ಮೊದಲನೆ ಪದ್ಯಕ್ಕೆ ಮೂಲಶ್ರುತಿ ಇದು, ಶಾಂಡಿಲ್ಯಶ್ರುತಿ—

ಜಯಜಯ ಹನಹನ ಪ್ರಕೃತಿಂ ದ್ರಾವಯದ್ರಾವಯ

ಶ್ರೀಹರಿ, ನೀನು ಸೃಷ್ಟಿಮಾಡಿ ನೀನು ಸದಾ ಜಯಶಾಲಿ ಎನ್ನುವುದನ್ನು ತೋರಿಸು. ತೋರಿಸು. ಜೀವರ ಜೀವಾಚ್ಛಾದಕವನ್ನು ನಾಶಮಾಡು ನಾಶಮಾಡು ಪರಮಾಚ್ಛಾದಕವನ್ನು ದೂರ ಸರಿಸು ದೂರ ಸರಿಸು.

ಭಿಂಧಿಭಿಂಧಿ ದುಃಖಂ ತಮೋಽರತಿಂ, ಅಜಿತ !

ಹೇ ಅಜಿತ, ಜೀವರ ಲಿಂಗಶರೀರವನ್ನೂ ಅಜ್ಞಾನವನ್ನೂ ಮೋಕ್ಷ ಸಾಧನಾನುಷ್ಠಾನದಲ್ಲಿ ಅನಾಸಕ್ತಿಯನ್ನೂ ನಾಶಪಡಿಸು ನಾಶಪಡಿಸು.

ಪರಮ ಪರಮೇಶಾನ ವಾಸುದೇವ ವೈಕುಂಠ ನಾರಾಯಣ ಹೃಷೀಕೇಶ

ಹೇ ಸರ್ವೋತ್ತಮ ಪರಮೇಶ್ವರ ವಾಸುದೇವ ವೈಕುಂಠ ನಾರಾಯಣ ಹೃಷೀಕೇಶನೆ!

ಅನಯಾ ಹಿ ಜೀವಗುಣಾ ವಿಸಂವೃತಾ ಅಧಿಸಂವೃತಾಃ

ಈ ಪ್ರಕೃತಿಯಿಂದ ಜೀವನ ಗುಣಗಳು ಆವೃತವಾಗಿವೆ ಮರೆ ಮಾಡಲ್ಪಟ್ಟಿವೆ. (ಜೀವಾಚ್ಛಾದಕದಿಂದ ಜೀವಾತ್ಮನ ಗುಣಗಳು ಆವೃತವಾಗಿವೆ. ಪರಮಾಚ್ಛಾದಕದಿಂದ 'ಜೀವೋ ವಿನಯಿತಾ ಸಾಕ್ಷೀ' ಎಂಬಂತೆ ಜೀವನಿಯಾಮಕಜೀವನಾಮಕ ಹರಿಯ ಗುಣಗಳು ಜೀವಾತ್ಮರಿಗೆ ಮರೆಯಾಗಿವೆ.)

ಏಷ ಹ್ಯಾನಂದೋಽಜರೋಽಮರೋಽಧಿಶಕ್ತಿಮಾನ್

ಈ ಜೀವನು ಸ್ವರೂಪದಲ್ಲಿ ಆನಂದ, ಅಜರ, ಅಮರ, ತನಗಿಂತ ಕೆಳಗಿನವರಾದ ಬೇರೆ ಜೀವರಿಗಿಂತ **ಅಧಿಕ ಶಕ್ತಿಶಾಲಿ.**

ತ್ವದಾಭಾಸಸ್ತ್ವಯಾ ತಥಾಽಧಿಸಂಭಾವ್ಯಃ

ಏಕೆಂದರೆ ಜೀವನು ನಿನ್ನ ಪ್ರತಿಬಿಂಬ. **ಹೀಗಾಗಿ ನೀನೇ ಅವನ** ಸ್ವರೂಪವನ್ನು ಅವನಿಗಿಂತ 'ತಥಾ ಅಧಿ' ಅವನಿಗಿಂತ **ಕೆಳಗಿನ ಜೀವರಿಗಿಂತ** ಅಧಿಕವಾಗಿ ಆವಿರ್ಭಾವಗೊಳಿಸಬೇಕು.

ಯತಃ ಪರಃ ಪರಮೇಶ್ವರಃ ಪರಜ್ಞಾನಃ ಪರಾನಂದಃ ಪರಶಕ್ತಿಃ ಪರಶ್ರೀಃ ಪರಯಶಾಃ ಪರಪ್ರವೃತ್ತಿರ್ನಿತ್ಯಮೇವ ಸ್ವತೋಽಸಿ

ಏಕೆಂದರೆ ನೀನು ಜೀವವಿಲಕ್ಷಣ, ಪರಮೇಶ್ವರ, ಪೂರ್ಣಜ್ಞಾನ ಪೂರ್ಣಾನಂದ ಪೂರ್ಣಶಕ್ತಿ ಪೂರ್ಣಕಾಂತಿ ಪೂರ್ಣಯಶಸ್ವಿ ಸದಾ ಪರಪ್ರಯೋಜನಕ್ಕಾಗಿಯೇ ಸ್ವತಂತ್ರವಾಗಿ ಸೃಷ್ಟ್ಯಾದಿಗಳಲ್ಲಿ ಪ್ರವೃತ್ತಿ ಮಾಡುವವನು.

ತ್ವಂ ರಮಾಯಾಸ್ತ್ವಂ ವಿರಿಂಚಸ್ಯ ರುದ್ರೇಂದ್ರ ಸೋಮ ಸೂರ್ಯ ಮುಖಾನಾಮದಭ್ರಶಕ್ತಿದೋಽಸಿ

ನೀನೇ ರಮೆಗೆ ಬ್ರಹ್ಮನಿಗೆ ರುದ್ರ ಇಂದ್ರ ಚಂದ್ರ ಸೂರ್ಯಾದಿಗಳಿಗೆ ಯಥಾಯೋಗ್ಯವಾಗಿ ಪೂರ್ಣಶಕ್ತಿ ವ್ಯಕ್ತಮಾಡಿ ನೀಡುವವನು.

ಪ್ರವರ್ತಕೋಽಸಿ ನಿವರ್ತಕೋಽಸ್ಯನೋಽಸ್ಯನಂತೋಽಸಿ

ರಮಾಬ್ರಹ್ಮಾದಿಗಳಿಂದ ಪ್ರವೃತ್ತಿ ಮಾಡಿಸುವವನೂ ನೀನೇ. ನಿವೃತ್ತಿ ಮಾಡಿಸುವವನೂ ನೀನೆ. ಚೇಷ್ಟಕ ನೀನೆ. ದೇಶಕಾಲಗುಣಗಳಲ್ಲಿ ಪರಿಮಿತಿ ಇಲ್ಲದವನೂ ನೀನೆ.

ಸೃಜತೋ ಹಿ ತೇ ಶ್ರುತಯೋಽನುವರ್ತಂತೇ ನೈವಾಸೃಜತಃ

ನೀನು ಜೀವರನ್ನು ಸೃಜಿಸಿದರೆ ಮಾತ್ರ ಅವರಲ್ಲಿ ನಿನಗೆ ಅನುಕೂಲವಾಗಿ ಕರ್ಮವಿಧಿ ನಿಷೇಧಗಳನ್ನು ಬೋಧಿಸಲು ಶ್ರುತಿಗಳು ಪ್ರವೃತ್ತಿ ಮಾಡುತ್ತವೆ. ಇಲ್ಲದಿದ್ದರೆ ಇಲ್ಲ.

ಕಂ ವಿದಧತೇ ಕಂ ವಾ ನಿಷೇಧಂತಿ ಸ್ತುತಿಮಾತ್ರಾ ಏವ ತೇ ಸ್ಯುಃ

ನೀನು ಜೀವರನ್ನು ಸೃಜಿಸದಿದ್ದರೆ ಶ್ರುತಿಗಳು ಕರ್ಮಗಳನ್ನು ಯಾರಿಗೆ ವಿಧಿಸಬಲ್ಲುವು, ಯಾರಿಗೆ ನಿಷೇಧಿಸಬಲ್ಲುವು? ಆದರಿಂದ ಶ್ರುತಿಗಳು ಆಗ ಕೇವಲ ನಿನ್ನ ಸ್ತುತಿಯನ್ನು ಮಾಡುತ್ತಿರಬೇಕಾಗುತ್ತದೆ.

ಪ್ರಭೋ ವಿಭೋ ಸಮಾಸ್ವ ವ್ಯಾಸ್ವೋತ್ತಿಷ್ಠ ಪ್ರಚರ ವಿಚರ

ಸರ್ವಶಕ್ತನೆ, ನಾನಾರೂಪನೆ, ಸಂಕ್ಷೇಪದಿಂದ ತತ್ವಸೃಷ್ಟಿ ಮಾಡು, ವಿಸ್ತಾರವಾಗಿ ಬ್ರಹ್ಮಾಂಡಸೃಷ್ಟಿ ಮಾಡು. ನೀನು ಸದಾ ಎಚ್ಚರವಿರುವವನೆಂಬುದನ್ನು

ತೋರು, ಉತ್ತಮ ಕಾರ್ಯಗಳನ್ನು ಮಾಡು, ವಿವಿಧ ಕಾರ್ಯಗಳನ್ನು ಮಾಡು.

ಸಂಧಿನುಸಂಧಿನು ಮಾ ತೇ ಕ್ಷಣೋಽತ್ಯಗಾತ್ ಮಾ ತೇ ಕ್ಷಣೋಽತ್ಯಗಾತ್

ಸಜ್ಜನರನ್ನು ಪೋಷಿಸು. ದುರ್ಜನರನ್ನು ಸಂಹರಿಸು. ಶಯನದಲ್ಲಿಯೇ ನಿನ್ನ ಈ ಸೃಷ್ಟಿ ಕಾಲವೆಂಬ ಕ್ಷಣ ಕಳೆದುಹೋಗದಿರಲಿ. ಕಳೆದು ಹೋಗದಿರಲಿ.

ಲಯಸ್ಯ ತ್ವಷ್ಟಮೋ ಭಾಗಃ ಸೃಷ್ಟಿಕಾಲ ಉದಾಹೃತಃ ।
ತತ್ರೈವ ವೇದಸಂಚಾರೋ ಹ್ಯನ್ಯದಾ ಸ್ತುತಿಮಾತ್ರಕಾಃ ॥
ಇತಿ ನಾರದೀಯೇ ॥

ಚತುರ್ಮುಖ ಬ್ರಹ್ಮನ ನೂರು ವರ್ಷದಷ್ಟಿರುವ ಬ್ರಹ್ಮಪ್ರಳಯ ಕಾಲದಲ್ಲಿ ಕೊನೆಯ ಎಂಟನೆ ಭಾಗ, ಅಂದರೆ ಹನ್ನೆರುಡವರೆ ವರ್ಷ. ಅಲ್ಲಿಂದ ~~ತೊಡಗಿ ಮುಂದಿನ ಲಯಕಾಲದವರೆಗೆ ಎಲ್ಲ ಕಾಲ ಸೃಷ್ಟಿಕಾಲವೆನಿಸುತ್ತದೆ.~~ ಆ ಕಾಲದಲ್ಲಿಯೇ ವೇದಗಳು ಜೀವರಿಗೆ ವಿಧಿನಿಷೇಧ ಬೋಧಕ ವಾಗುವುವು. ಲಯಕಾಲದಲ್ಲಿ ಕೇವಲ ಸ್ತುತಿಪರವಾಗಿರುತ್ತವೆ ಎಂದು ನಾರದೀಯ ಪುರಾಣದಲ್ಲಿ ಉಕ್ತವಾಗಿದೆ.

'ಸೃಷ್ಟಿಕಾಲ ಏವ ಗುಣವೃತ್ತಯಃ, ಸರ್ವದಾ ನಿರ್ಗುಣೇ ಪರಮೇಶ್ವರ ಏವ ವರ್ತಂತೇ ಶ್ರುತಯ' ಇತಿ 'ಕಥಂ ಚರಂತಿ ಶ್ರುತಯ' ಇತ್ಯಸ್ಯ ಪರಿಹಾರಃ। ಯತ್‌ಪ್ರಾಪ್ತ್ಯರ್ಥಂ ಯನ್ನಿಯಮಾದ್ ವಿಧಿನಿಷೇಧಾ ವರ್ತಂತೇ ಸ ತ್ವಮಿತ್ಯಾದಿ ವಿಧಿನಿಷೇಧಾನಾಂ ಸ್ತುತಿಪರತ್ವಂ ।

ವಿಧ್ಯಾದೀನಾಂ ನಿಯಂತಾಽಯಂ ಪೂಜ್ಯಃ ಪ್ರಾಪ್ಯಶ್ಚ ತದ್ವತಾಂ ।
ಇತ್ಯಾದಿಸ್ತುತಿರೂಪೇಣ ವಿಧ್ಯಾದಿಶ್ರುತಯೋಽಪಿ ತು।
ಹರಿಂ ವದಂತಿ ಸರ್ವೇಷಾಂ ತನ್ನಾಮತ್ವಾದಥಾಪಿ ವಾ ॥
ಇತಿ ಶ್ರುತಿನಿರ್ಣಯೇ ॥

'ಸೃಷ್ಟಿಕಾಲದಲ್ಲಿ ಮಾತ್ರ ಗುಣಬದ್ಧನಾದ ಜೀವನಿಗೆ **ಗುಣಜನ್ಯವಾದ ಕರ್ಮಾದಿಗಳನ್ನು ಬೋಧಿಸುತ್ತ** ನಿನ್ನನ್ನು ಸ್ತುತಿಸಲು ವಾಕ್ಯ **ಸಮನ್ವಯದಿಂದ** ವೇದಗಳ **ಪ್ರವೃತ್ತಿ**. ನಿರ್ಗುಣನಾದ ಪರಮಾತ್ಮನ **ಸ್ತುತಿರೂಪವಾಗಿ**

ಪದಸಮನ್ವಯದಿಂದ ಪ್ರವೃತ್ತಿಯು ಸರ್ವದಾ, ಅಂದರೆ ಸೃಷ್ಟಿಕಾಲದಲ್ಲಿ ಮಾತ್ರವಲ್ಲದೆ ಲಯಕಾಲದಲ್ಲಿಯೂ ಕೂಡ, ಇರುತ್ತದೆ' —ಇದು 'ನಿರ್ಗುಣೇ ಗುಣವೃತ್ತಯಃ ಕಥಂ ಚರಂತಿ ಶ್ರುತಯಃ?' 'ಗುಣಜನ್ಯವಾದ ಕರ್ಮಗಳ ವಿಧಿನಿಷೇಧಗಳಲ್ಲಿ ಪ್ರವೃತ್ತಿಮಾಡುವ ವೇದಗಳು ಗುಣತ್ರಯ ರಹಿತನಾದ ಭಗವಂತನ ವಿಷಯದಲ್ಲಿ ಹೇಗೆ ಪ್ರವೃತ್ತಿ ಮಾಡುತ್ತವೆ?' ಎಂದು ಪರೀಕ್ಷಿತ ಹಿಂದೆ ಕೇಳಿದ್ದ ಪ್ರಶ್ನೆಗೆ ಉತ್ತರ. ವಿಧಿನಿಷೇಧಗಳಲ್ಲಿ ಪ್ರವೃತ್ತಿ ಮಾಡುತ್ತ ವೇದಗಳು 'ಈ ವಿಧಿನಿಷೇಧಗಳನ್ನು ನಿಯಮನ ಮಾಡುವವನು ಹರಿ. ಅವನ ಪೂಜೆಗಾಗಿಯೇ ಅವನ ಪ್ರಾಪ್ತ್ಯರ್ಥವಾಗಿಯೇ ಈ ವಿಧಿ ನಿಷೇಧಗಳಿವೆ' ಎಂದು ಬೋಧಿಸುವುದ ರಿಂದ ಅವು ಹರಿಸ್ತುತಿ ಪರವಾಗಿವೆ.

'ವಿಧಿ ನಿಷೇಧಗಳನ್ನು ಹೀಗೇ ಎಂದು ನಿಯಮನ ಮಾಡುವವನೂ ಶ್ರೀಹರಿಯೆ. ವಿಹಿತಾಚರಣೆ ನಿಷಿದ್ಧತ್ಯಾಗಗಳಿಂದ ಪೂಜಿಸಲ್ಪಡ ಬೇಕಾದವನೂ ಅವನೆ. ಅವುಗಳ ಫಲವಾಗಿ ಜ್ಞಾನದಿಂದ ಸಾಧಕರು ಮೋಕ್ಷದಲ್ಲಿ ಹೊಂದುವುದೂ ಅವನನ್ನೇ. ಹೀಗೆ ವಿಧಿ ನಿಷೇಧಪರವಾದ ವೇದಗಳೂ ಕೂಡ ವಾಕ್ಯಸಮನ್ವಯದಿಂದ ಸ್ತುತಿರೂಪವಾಗಿ ಹರಿಪರವಾಗುತ್ತವೆ. ಅಥವಾ ಪದಸಮನ್ವಯದಿಂದ ಅವುಗಳ ಎಲ್ಲ ಪದಗಳೂ ಪ್ರತ್ಯೇಕವಾಗಿ ಹರಿನಾಮರೂಪವಾಗಿ ಹರಿಪರವಾಗುತ್ತವೆ' ಎಂದು ಶ್ರುತಿನಿರ್ಣಯ ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

ಪೃಥಕ್‌ಶ್ರುತಿತ್ವಾನ್ನ ಪೂರ್ವಾಪರಸಂಬಂಧಃ। ಉಪಲಕ್ಷಣತ್ವಾತ್, ಅನಂತತ್ವಾಚ್ಛ್ರುತೀನಾಂ, ಸರ್ವಶ್ರುತ್ಯರ್ಥೋಪಬೃಂಹಿತತ್ವಾಚ್ಚೈತೇಷಾಂ ಶ್ಲೋಕಾನಾಂ, ನ ಸರ್ವಶ್ರುತೀನಾಂ ಪೃಥಗುಕ್ತಿಃ।

ಸರ್ವಶ್ರುತ್ಯರ್ಥಸಂಪನ್ನಾನ್ ಶ್ಲೋಕಾನ್ ಸತ್ಯವತೀಸುತಃ ।
ಏಕೈಕಶಾಖಾಸುತ್ಯರ್ಥಾನ್ ಜಗೌ ಸರ್ವೋಪಲಕ್ಷಣಾನ್ ।
ಬಬಂಧ ತಾನ್ ಭಾಗವತೇ ಪ್ರತಿಶ್ಲೋಕಂ ಪೃಥಕ್‌ಶ್ರುತೀನ್ ॥

ಇತಿ ತಂತ್ರಭಾಗವತೇ ॥

'ಜಯಜಯ' ಎಂಬ ಶ್ಲೋಕಕ್ಕೂ ಮುಂದೆ ಬರುವ 'ಬೃಹದುಪಲಬ್ಧಂ' ಎಂದು ಮುಂತಾದ ಶ್ಲೋಕಗಳಿಗೂ ಪೂರ್ವಾಪರ ಸಂಬಂಧವಿಲ್ಲ. ಏಕೆಂದರೆ ಈ ಶ್ಲೋಕಗಳು ಪೂರ್ವಾಪರ ಸಂಬಂಧವಿಲ್ಲದೆ ನಾನಾ

ಶಾಖೆಗಳಲ್ಲಿ ಬರುವ ಬೇರೆಬೇರೆ ಶ್ರುತಿಗಳ ಅರ್ಥಗಳನ್ನು ಉಪಲಕ್ಷಣವಾಗಿ ಸಂಗ್ರಹಿಸಲು ಹೊರಟಿವೆ. ಈ ಶ್ಲೋಕಗಳಿಗೆ ಮೂಲಭೂತವಾಗಿರುವ ಎಲ್ಲ ಶ್ರುತಿಗಳನ್ನೂ ನಾವು ಇಲ್ಲಿ ಉದಾಹರಿಸಲಿಲ್ಲ. ಏಕೆಂದರೆ ಉದಾಹರಿಸಿರುವ ಶ್ರುತಿಗಳು ಅದೇ ಅರ್ಥದ ಬೇರೆ ಶ್ರುತಿಗಳಿಗೂ ಉಪಲಕ್ಷಣವಾಗಿವೆ. ಎಲ್ಲ ಶ್ರುತಿಗಳನ್ನೂ ಅನಂತವಾಗಿರುವುದರಿಂದ ಉದಾಹರಿಸುವುದು ಶಕ್ಯವೂ ಅಲ್ಲ. ಮತ್ತು ಎಲ್ಲ ಶ್ರುತಿಗಳ ಅರ್ಥಗಳಿಂದ ತುಂಬಿಕೊಂಡಿರುವ ಈ ಶ್ಲೋಕಗಳಿಗೆ ಮೂಲವೆಂದು ಉದಾಹರಿಸಿರುವ ಶ್ರುತಿಗಳೂ ಕೂಡ ಎಲ್ಲ ಶ್ರುತಿಗಳ ಅರ್ಥಗಳಿಂದ ಗರ್ಭಿತವೇ ಆಗಿವೆ.

'ಸರ್ವಶ್ರುತಿಗಳ ಅರ್ಥಗಳಿಂದ ತುಂಬಿಕೊಂಡು ಪ್ರತಿಶಾಖೆಗಳ ಸ್ತುತಿಗಾಗಿ ಉಪಲಕ್ಷಣವಾಗಿ ಪ್ರತಿ ಶ್ಲೋಕಗಳಲ್ಲಿಯೂ ಬೇರೆಬೇರೆ ಶ್ರುತಿಯನ್ನು ಸಂಗ್ರಹಿಸುತ್ತ ಶ್ರುತಿಗೀತಾ ಪದ್ಯಗಳನ್ನು ಬಾದರಾಯಣರು ಭಾಗವತದಲ್ಲಿ ರಚಿಸಿಕೊಟ್ಟರು' ಎಂದು ತಂತ್ರಭಾಗವತದಲ್ಲಿ ಹೇಳಿದೆ.

❖❖❖

ಶ್ರುತಿಗೀತೆಯಲ್ಲಿ ಎರಡನೇ ಪದ್ಯ—

ಬೃಹದುಪಲಬ್ಧಮೇತದವಶೇಷತಯಾ
ಯತ ಉದಗಾಸ್ತಮಸ್ಯವಿಕೃತೇಽವಿಕೃತಃ ।
ಅತ ಋಷಯೋ ದಧುಸ್ತ್ವಯಿ ಮನೋವಚನಾಚರಿತಂ
ಕಥಮಯಥಾ ಭವಂತಿ ಭುವಿ ದತ್ತಪದಾನಿ ನೃಣಾಮ್ ॥ ೧೬ ॥

ನಿನ್ನ ಸ್ವರೂಪವು ಸರ್ವಾಧಿಕ ಗುಣಪೂರ್ಣವೆಂದು ವೇದದಲ್ಲಿ ಕಂಡುಬರುತ್ತದೆ. ಪ್ರಕೃತಿಯ ಅಭಿಮಾನಿನಿಯಾದ ದುರ್ಗಾದೇವಿಗಿಂತಲೂ ನೀನು ಉತ್ತಮನಾಗಿರುವಿ, ನಿರ್ವಿಕಾರನಾಗಿರುವಿ. ಅದರಿಂದ ಇವನಿಗಿಂತ ಇವನು ಇವನಿಗಿಂತ ಇವನು ಶ್ರೇಷ್ಠ ಎನ್ನುವ ತಾರತಮ್ಯ ಸಾಲಿನಲ್ಲಿ ಕೊನೆಗೆ ಸರ್ವೋತ್ತಮನಾಗಿ ಉಳಿಯುವವನು ನೀನೆ. ಅದರಿಂದ ಜ್ಞಾನಿಗಳು **ನಿನ್ನನ್ನೇ** ಮನಸ್ಸಿನಿಂದ ತಿಳಿದು, ಮಾತಿನಿಂದ ಸ್ತುತಿಸಿ ಆಚಾರದಿಂದ ಸೇವಿಸುತ್ತಾರೆ. **ಅವರು** ನಿನ್ನ ಸ್ವರೂಪದಲ್ಲಿ ಪೂರ್ಣತ್ವವೆಂಬ ಒಂದಂಶವನ್ನು ತಿಳಿಯಲು ಒಂದು **ಗುಣವನ್ನು** ತಿಳಿದರೂ **ಅವರು** ನಿನ್ನನ್ನು ತಿಳಿದ ಹಾಗಾಯಿತು. ಮಾನವರು **ಭೂಮಿಯಲ್ಲಿ** ಯಾವುದೇ **ಒಂದು ಭಾಗದಲ್ಲಿ** ಹೆಜ್ಜೆ ಇಟ್ಟರೂ ಅದು '**ಭೂಸಂಚಾರವಲ್ಲ**' **ಎಂದು** ಹೇಗಾದೀತು?

ಬೃಹದುಪಲಬ್ಧಮೇತದ್

ಈ ನಿನ್ನ ಸ್ವರೂಪ ಸರ್ವಾಧಿಕ ಪರಿಪೂರ್ಣವೆಂದು ವೇದದಲ್ಲಿ ಉಪಲಬ್ಧವಿದೆ. ಬೃಹಿ ವೃದ್ಧೌ ಧಾತುವಿಗೆ ಪೂರ್ಣತ್ವ ಎಂದರ್ಥ. ಅದರಿಂದ ಬ್ರಹ್ಮ ಬೃಹತ್ ಶಬ್ದಗಳು ವೇದದಲ್ಲಿ ಪರಮಾತ್ಮನನ್ನು ಗುಣಪೂರ್ಣನೆಂದು ಹೇಳುತ್ತವೆ.

ಅವಿಕೃತೇ ತಮಸಿ ಉದಗಾಃ

'ಅವಿಕೃತ' ಎಂದರೆ ಲಯಕಾಲದಲ್ಲಿ ವಿಕಾರವನ್ನು, ಕಾರ್ಯರೂಪದಿಂದ ಪರಿಣಾಮ ವನ್ನು ಹೊಂದದಿರುವ ಮೂಲಪ್ರಕೃತಿ. ಅದಕ್ಕೆ ತಮಸ್ಸೆಂದೂ ಹೆಸರಿದೆ. ಅದಕ್ಕೆ ಅಭಿಮಾನಿ ತಮೋನಾಮಕಳಾದ ದುರ್ಗಾದೇವಿ. ಅದರಿಂದ ಅವಳೂ 'ಅವಿಕೃತ'ಳೆನಿಸಿದ್ದಾಳೆ.

'ತಮ ಆಸೀತ್ ತಮಸಾ ಗೂಹ್ಯಮಗ್ರೇ'

ಎಂದು ವೇದದಲ್ಲಿ 'ಪ್ರಳಯಕಾಲದಲ್ಲಿ ತಮೋನಾಮಕ ದುರ್ಗಾ ದೇವಿ ವ್ಯಾಪಿಸಿದ್ದಾಳೆ' ಎಂದಿದೆ. ಆ ದುರ್ಗೆಗಿಂತಲೂ ಉತ್ತಮನು ಶ್ರೀಹರಿ. 'ಅವಿಕೃತೇ ತಮಸಿ' ಎಂದು ಸಪ್ತಮೀ ವಿಭಕ್ತಿ ಪಂಚಮ್ಯರ್ಥದಲ್ಲಿ ಪ್ರಯುಕ್ತವಾಗಿದೆ.

ಅವಶೇಷತಯಾ ಬೃಹತ್

ಇವನಿಗಿಂತ ಇವನು ಶ್ರೇಷ್ಠ ಇವನಿಗಿಂತ ಇವನು ಶ್ರೇಷ್ಠ ಎನ್ನುವ ತಾರತಮ್ಯ ಪಂಕ್ತಿಯಲ್ಲಿ ಕೊನೆಗೆ ಸರ್ವಶ್ರೇಷ್ಠನಾಗಿ ಉಳಿಯುವವನು ಶ್ರೀಹರಿ.

ಪುರುಷಾನ್ನ ಪರಂ ಕಿಂಚಿತ್ ಸಾ ಕಾಷ್ಠಾ ಸಾ ಪರಾ ಗತಿಃ।

ಎಂದು ವೇದವೆ ಹೇಳುತ್ತದೆ. ಅದರಿಂದ ಅವನೇ ಸರ್ವೋತ್ತಮ.

ಅವಿಕೃತಃ ಯತಃ

ಮೂಲ ಪ್ರಕೃತಿಗೆ ಸೃಷ್ಟಿಕಾಲದಲ್ಲಿ ವಿಕೃತಿ, ಕಾರ್ಯರೂಪದಿಂದ ಪರಿಣಾಮವಿರುವುದರಿಂದ ಆಗ ಅದು 'ಅವಿಕೃತ'ವಲ್ಲ. ಪರಮಾತ್ಮ ನೆಂದೂ ಹೀಗೆ ವಿಕೃತಿ ಹೊಂದುವುದಿಲ್ಲ. ಅವನಿಗೆ ಇನ್ನೊಬ್ಬರ ಅಧೀನ ವಾಗಿ ಅಥವಾ ಕಾಲ ಅದೃಷ್ಟಾದಿಗಳ ಅಧೀನವಾಗಿ ಎಂದೂ ಯಾವುದೇ ವಿಶೇಷ ಗುಣಧರ್ಮಗಳೂ ಬರುವುದಿಲ್ಲ. ಅದರಿಂದ ಅವನು 'ಅವಿಕೃತ' ನೆನಿಸುತ್ತಾನೆ. ರಮಾಬ್ರಹ್ಮಾದಿಗಳೆಲ್ಲರೂ ಅವನ ಅಧೀನವಾಗಿ ಪರಾಧೀನ ವಾದ ವಿಶೇಷವನ್ನು ಹೊಂದುವುದರಿಂದ ಅವರು ಯಾರೂ ಅವಿಕೃತರಲ್ಲ.

ನಿತ್ಯವಾದ ವರ್ಣ ಅವ್ಯಾಕೃತಾಕಾಶಾದಿಗಳಿಗೂ ಅಭಿವ್ಯಕ್ತಿ ಮುಂತಾದುವು ವಿಶೇಷಗಳು ಹರಿಯ ಅಧೀನವಾಗಿ ಬರುತ್ತವೆ. ಅದರಿಂದ ಹರಿಯೊಬ್ಬನೇ ಅವಿಕೃತ. ಅದರಿಂದ ಸರ್ವೋತ್ತಮ.

ಅತ ಋಷಯೋ ಮನೋವಚನಾಚರಿತಂ ತ್ವಯಿ ದಧುಃ

ಅದರಿಂದ ಜ್ಞಾನಿಗಳು ಸರ್ವಾಧಿಕ ಪೂರ್ಣನೆಂದು ನಿನ್ನಲ್ಲಿಯೇ ತಮ್ಮ ಮನಸ್ಸನ್ನೂ ವಚನವನ್ನೂ ಆಚರಿತವನ್ನೂ ಸಮರ್ಪಿಸಿದ್ದಾರೆ. ಮನದಲ್ಲಿ ನಿನ್ನನ್ನೇ ನೆನೆಯುತ್ತಾರೆ. ಮಾತಿನಲ್ಲಿ ನಿನ್ನ ಗುಣಗಾನವನ್ನೇ ಮಾಡುತ್ತಾರೆ. ಆಚರಣೆಯಲ್ಲಿ ನಿನ್ನ ಆರಾಧನೆಯನ್ನೇ ಮಾಡುತ್ತಾರೆ.

ಅತಃ ಭುವಿ ನೃಣಾಂ ದತ್ತಪದಾನಿ ಕಥಮಯಥಾ ಭವಂತಿ ?

ಭೂಪ್ರದಕ್ಷಿಣ ಸಂಕಲ್ಪಮಾಡಿ ಮನುಷ್ಯರು ಭೂಮಿಯ ಕೆಲವೇ ಭಾಗದಲ್ಲಿ ಸಂಚರಿಸಿದರೂ ಅದು 'ಅಯಥಾ' ಭೂಸಂಚಾರವಲ್ಲ ಎಂದು ಹೇಗಾದೀತು? ಹಾಗೇ ನಿನ್ನ ಅನಂತಗುಣಗಳಲ್ಲಿ ಯಥಾಶಕ್ತಿ ಕೆಲವೇ ಗುಣಗಳನ್ನು ತಿಳಿದರೂ ಪರಮಾತ್ಮಜ್ಞಾನಿಯಲ್ಲ ಎಂದು ಹೇಗಾದಾನು? ಅವನು ನಿನ್ನಲ್ಲಿ ತಿಳಿದ ಕೆಲವು ಗುಣವೂ ಕೂಡ ನಿನ್ನ ಸ್ವರೂಪವೆ ತಾನೆ? ಭೂಪ್ರದಕ್ಷಿಣೆ ಮಾಡುವವನು ಜಲಮಾರ್ಗ ವಾಯುಮಾರ್ಗಗಳಲ್ಲಿ ಸಂಚರಿಸಿದರೂ ಅದು ಭೂಪ್ರದಕ್ಷಿಣೆ ಅಲ್ಲ ಎಂದಾಗುವುದಿಲ್ಲ. ಜಲ ವಾಯು ನೆಲವೆಲ್ಲವೂ ಆಧಾರಶಕ್ತಿಯುಕ್ತವಾದ್ದರಿಂದ ಭೂಮಿ ಎಂದೇ ಎನಿಸುವುದು. ಹಾಗೇ ನಿನ್ನ ಯಾವುದೇ ಗುಣವನ್ನು ತಿಳಿದರೂ ಅದು ಪೂರ್ಣವಾಗಿರುವುದರಿಂದ ನಿನ್ನ ಪೂರ್ಣತ್ವವನ್ನು ತಿಳಿಯುವ ಉದ್ದೇಶ ದಿಂದಲೆ ಕೂಡಿದ್ದರಿಂದ ಅವನು ಪರಮಾತ್ಮಜ್ಞಾನಿ ಎಂದೇ ಎನಿಸುತ್ತಾನೆ.

ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ ಈ ಪದ್ಯ ಬೇರೆ ತೆರನಾಗಿದೆ–

ಬೃಹದುಪಲಬ್ಧಮೇತದವಯಂತ್ಯವಶೇಷತಯಾ
ಯತ ಉದಯಾಸ್ತಮಯೌ ವಿಕೃತೇರ್ಮೃದಿ ವಾಽವಿಕೃತಾತ್ ।
ಅತ ಋಷಯೋ ದಧುಸ್ತ್ವಯಿ ಮನೋವಚನಾಚರಿತಂ
ಕಥಮಯಥಾ ಭವಂತಿ ಭುವಿ ದತ್ತಪದಾನಿ ನೃಣಾಂ ॥

[1]ವೇದದಲ್ಲಿ ಕಂಡುಬರುವ ಇಂದ್ರಾದಿ ದೇವ **ಸಮುದಾಯವೆಲ್ಲವೂ**

೧. ಏತದುಪಲಬ್ಧಂ ದೃಷ್ಟಮಿಂದ್ರಾದಿ ಸರ್ವಂ ಬೃಹದ್ ಬ್ರಹ್ಮ ತ್ವಮಿತ್ಯೇವಾವ[illegible] **ನಂತಿ**। ಕಥಂ? ಬೃಹತ ಏವಾವಶೇಷತಯಾ ಅವಶಿಷ್ಯಮಾಣತ್ವೇನ। **ಕುತಃ?** [illegible] **ಬೃಹತಃ**

ಬ್ರಹ್ಮಸ್ವರೂಪವೇ ಎಂದು ಬಲ್ಲವರು ಅಂಗೀಕರಿಸುತ್ತಾರೆ. ಏಕೆಂದರೆ ಕೊನೆಯಲ್ಲಿ ಉಳಿಯುವುದು ಬ್ರಹ್ಮ ಒಂದೇ, ಅದು ಎಲ್ಲಕ್ಕೂ ಉಪಾದಾನವಾಗಿರುವುದರಿಂದ. ಅದರಿಂದಲೆ ಎಲ್ಲರೂ ಹುಟ್ಟುತ್ತಾರೆ, ಲಯ ಹೊಂದುತ್ತಾರೆ. ಆದರೂ ಬ್ರಹ್ಮ ವಿಕಾರಿಯಲ್ಲ. 'ಅವಿಕೃತಾತ್' ವಿವರ್ತಾಧಿಷ್ಠಾನವಾದ್ದರಿಂದ ವಿಕಾರ ಹೊಂದುವುದಿಲ್ಲ. ಈ ವಿಷಯದಲ್ಲಿ ಮಣ್ಣಿನಲ್ಲಿಯೇ ಅದರ 'ವಿಕೃತೇಃ' ವಿಕಾರವಾದ ಘಟಾದಿಗಳು ಉತ್ಪತ್ತಿಲಯ ಹೊಂದುವುದು ದೃಷ್ಟಾಂತ. ಇದು ವಾಚಾರಂಭಣಶ್ರುತಿಯಲ್ಲಿ ಉಕ್ತವಾಗಿದೆ. ಅದರಿಂದ ಮುನಿಗಳೂ ವೇದಗಳೂ ತಾತ್ಪರ್ಯದಿಂದಲೂ ಶಬ್ದವೃತ್ತಿಯಿಂದಲೂ, ಮನಆಚರಿತ ವಚನಾಚರಿತಗಳಿಂದ, ನಿನ್ನನ್ನೇ ತಿಳಿಸುತ್ತಾರೆ. ಭೂಸಂಚಾರಿ ಎಲ್ಲೇ ಕಾಲಿಟ್ಟರೂ ಭೂಮಿಯ ಮೇಲೇ ಇಟ್ಟಂತಾಗುವುದು. ಎಲ್ಲ ಸ್ಥಳವೂ ಭೂಮಿಯೇ ತಾನೆ? ಹಾಗೇ ಇಂದ್ರಾದಿ ಮಂತ್ರಗಳೆಲ್ಲವೂ ನಿನ್ನನ್ನೇ ಹೇಳುತ್ತವೆ.'

ಇಲ್ಲಿ 'ಇಂದ್ರಾದಿ ಸಕಲ ದೇವತಾಸೂಕ್ತಗಳೂ ಇಂದ್ರಾದಿನಾಮಗಳಿಂದ ಭಗವಂತನನ್ನೇ ಹೊಗಳುತ್ತವೆ' ಎನ್ನುವುದು ಸರ್ವಸಮ್ಮತ. ಇಂದ್ರಾದಿ ಸಕಲ ದೇವತೆಗಳಿಗೂ ಸೃಷ್ಟ್ಯಾದಿ ಕರ್ತನಾದ ಸ್ವತಂತ್ರನಾದ ಭಗವಂತನಲ್ಲಿಯೇ ಮುಖ್ಯ ತಾತ್ಪರ್ಯ ವೇದಗಳಿಗೆ ಇರುವುದು ಸಹಜವೆ. 'ಸೃಷ್ಟ್ಯಾದಿಕರ್ತೃ ಅವಿದ್ಯೆಯೆ, ಭಗವಂತ ಕೇವಲ ವಿವರ್ತಾಧಿಷ್ಠಾನ' ಎಂಬ ಅಂಶ ವಿವಾದಾಸ್ಪದವಾಗಿದೆ. ಅದು ಶ್ಲೋಕದಲ್ಲಿ ಎಲ್ಲಿಯೂ ಹೇಳಿಲ್ಲ. 'ಅವಿಕೃತಾತ್' ಎಂಬ ಶಬ್ದ ಬ್ರಹ್ಮನನ್ನು ವಿವರ್ತಾಧಿಷ್ಠಾನವೆಂದು ತಿಳಿಸುತ್ತದೆ ಎಂದು ಶ್ರೀಧರವ್ಯಾಖ್ಯಾನ ಹೇಳಿದರೂ ಅದು ಯುಕ್ತವಲ್ಲ. ನಿಮಿತ್ತಕಾರಣವೂ ವಿಕಾರ ಹೊಂದುವುದಿಲ್ಲ. ಅವಿಕೃತವಾಗಿಯೇ ಇರುತ್ತದೆ. ಮತ್ತು 'ಅವಿಕೃತಾತ್' ಎಂಬ ಅಪಾದಾನ ಪಂಚಮೀವಿಭಕ್ತಿ ವಿವರ್ತೋಪಾದಾನ ಪಕ್ಷದಲ್ಲಿ ಸ್ವರಸವಲ್ಲ. ನಿಮಿತ್ತಕಾರಣ ಪಕ್ಷದಲ್ಲಿಯೇ ಸ್ವರಸ. ಮುಂದೆ 'ಸತ ಇದಮುತ್ಥಿತಂ' (ಶ್ಲೋ.೩೭) ಎಂಬಲ್ಲಿ 'ಅಪಾದಾನತ್ವ ನಿರ್ದೇಶೇನೈವ ಭೇದ ಪ್ರತೀತೇಃ' ಎಂದು ಶ್ರೀಧರ ವ್ಯಾಖ್ಯಾನ ಹೇಳಿದೆ. 'ಮೃದಿ' ಮಣ್ಣಿನಲ್ಲಿ ಘಟದ ಉತ್ಪತ್ತಿಲಯಗಳು ಹೇಗೋ

ಸರ್ವಸ್ಯೋದಯಾಸ್ತಮಯಾವುತ್ಪತ್ತಿಲಯೌ। ಸರ್ವೋಪಾದಾನತ್ವಾತ್। ತರ್ಹಿ ಕಿಂ ವಿಕಾರಿತ್ವಂ ಬೃಹತಃ? ನ। ಅವಿಕೃತಾತ್। ವಿವರ್ತಾಧಿಷ್ಠಾನತ್ವೇನಾವಿಕಾರಾಧಿತ್ಯರ್ಥಃ। ವಾ ಶಬ್ದ ಉಪಮಾರ್ಥಃ ಯಥಾ ಘಟಾದೇರ್ವಿಕೃತೇರ್ಮೃದಿ ಉದಯಾಸ್ತಮಯೌ ತದ್ವತ್। ಅತಃ ಕಾರಣಾದ್ ಋಷಯೋ ಮಂತ್ರಾಸ್ತದ್ದ್ರಷ್ಟಾರೋ ವಾ ತ್ವಯ್ಯೇವ ಮನೋವಚನಾ-ಚರಿತಂ ದಧುಃ। ಮನಸಾ ಆಚರಿತಂ ತಾತ್ಪರ್ಯಂ ವಚನಾಚರಿತಮಭಿಧಾನಂ ಧೃತವಂತಃ। ನ ಪೃಥಗ್ ವಿಕಾರೇಷ್ವಿತ್ಯರ್ಥಃ। ಯತ್ಕಿಮಪಿ ವಿಕಾರಜಾತಂ ವದಂತೋ ವೇದಾಸ್ತ್ವಾಮೇವ ಸರ್ವಕಾರಣಂ ಪರಮಾರ್ಥಭೂತಂ ಪ್ರತಿಪಾದಯಂತೀತ್ಯರ್ಥಃ। -ಶ್ರೀಧರಃ

ಹಾಗೆ ಬ್ರಹ್ಮನಲ್ಲಿ ಜಗತ್ತಿನ ಉತ್ಪತ್ತಿಲಯಗಳೆಂದು ಹೇಳಿದ್ದರೆ, 'ಅವಿಕೃತೇ' ಎಂದು ಸಪ್ತಮೀ ವಿಭಕ್ತಿ ಹೇಳಿದ್ದರೆ, ಉಪಾದಾನ ಪಕ್ಷಕ್ಕೆ ಅನುಕೂಲವಾಗುತ್ತಿತ್ತು. ಹಾಗೆ ಹೇಳದೆ 'ಅವಿಕೃತಾತ್' ಎಂದು ಅಪಾದಾನ ಪಂಚಮೀವಿಭಕ್ತಿ ಹೇಳಿದ್ದರಿಂದ, ಮತ್ತು ಶುಕ್ತಿ ಹಗ್ಗ ಮುಂತಾದ ದೃಷ್ಟಾಂತಗಳನ್ನು ಬಿಟ್ಟು ಮಣ್ಣಿನ ದೃಷ್ಟಾಂತ ಕೊಟ್ಟಿದ್ದರಿಂದ ವಿವರ್ತೋಪಾದಾನಾಭಿಪ್ರಾಯ ಶ್ಲೋಕದಲ್ಲಿ ಕಾಣುವುದಿಲ್ಲ. ಹೀಗಾಗಿ ಬೇರೆ ವ್ಯಾಖ್ಯಾನಕಾರರ ಶ್ಲೋಕಪಾಠ ಅವರಿಗೇ ಅನುಕೂಲವಾಗಿಲ್ಲ.

ಅವಿಕೃತತಮೋವಿಷಯೇ ತ್ವಮುದಗಾಃ। ಮೂಲಪ್ರಕೃತೇರಪಿ ತ್ವಮಧಿಕೋ ಯತಃ। ಅತೋ ಬೃಹತ್ತ್ವೇನ ತೇ ಸ್ವರೂಪಮುಪಲಬ್ಧಂ। ಇತ ಇದಮಧಿಕಮಿತೋಽಪೀದಮಧಿಕಮಿತಿ ಸರ್ವಾಧಿಕತ್ವೇನ ತತೋಽಧಿಕಾಭಾವೇನಾವಶೇಷಿತತ್ವೇನ।

ದ್ವಿತೀಯಾರ್ಥೇ ತೃತೀಯಾರ್ಥೇ ಚತುರ್ಥ್ಯರ್ಥೇ ಚ ಸಪ್ತಮೀ।
ಪಂಚಮ್ಯರ್ಥೇ ಚ ಸಂಪ್ರೋಕ್ತಾ ವಿಷಯೇತಿ ಚ ತಾಂ ವಿದುಃ।

ಇತಿ ಮಹಾವ್ಯಾಕರಣೇ।

ತಮಸೋಽಧಿಕೋಽಭವ ಇತ್ಯರ್ಥಃ।

'ಅವಿಕೃತ' ಎಂದರೆ ಕಾರ್ಯರೂಪವಾಗಿ ಇನ್ನೂ ಪರಿಣಾಮ ಹೊಂದದಿರುವ 'ತಮಸ್ಸು' ಮೂಲ ಪ್ರಕೃತಿ. ಅದಕ್ಕೆ ಅಭಿಮಾನಿನಿ 'ತಮೋ'ನಾಮಕಳಾದ ದುರ್ಗಾದೇವಿ. ಆದರಿಂದ ಅವಳೂ 'ಅವಿಕೃತ'ಳು ಅಂಥ ದುರ್ಗಾದೇವಿಯ ವಿಷಯದಲ್ಲಿ ನೀನು ಉತ್ತಮನೆನಿಸಿರುವೆ ಅಂದರೆ ದುರ್ಗೆಗಿಂತಲೂ ನೀನು ಉತ್ತಮನು. ಇಂದ್ರನಿಗಿಂತ ರುದ್ರ ಉತ್ತಮ, ರುದ್ರನಿಗಿಂತಲೂ ಬ್ರಹ್ಮ ಉತ್ತಮ ಎಂದು ಮುಂತಾದ ತಾರತಮ್ಯದಲ್ಲಿ ಕೊನೆಗೆ, ಸರ್ವಶ್ರೇಷ್ಠನಾಗಿ, ನಿನಗಿಂತ ಇನ್ನೊಬ್ಬ ಶ್ರೇಷ್ಠನಿಲ್ಲದಿರುವ ಕಾರಣ, ನೀನೇ ಉಳಿಯುವವನಾದ್ದರಿಂದ ನಿನ್ನ ಸ್ವರೂಪ ಸರ್ವೋತ್ತಮವೆಂದು ಸಿದ್ಧವಾಗಿದೆ.

'ದ್ವಿತೀಯಾವಿಭಕ್ತಿಯ ಅರ್ಥದಲ್ಲಿಯೂ ತೃತೀಯಾರ್ಥದಲ್ಲಿಯೂ ಚತುರ್ಥ್ಯರ್ಥದಲ್ಲಿಯೂ ಪಂಚಮ್ಯರ್ಥದಲ್ಲಿಯೂ ಸಪ್ತಮೀವಿಭಕ್ತಿ ಪ್ರತ್ಯಯ ಬರಬಹುದು. ಇದನ್ನು ವಿಷಯಸಪ್ತಮೀ ಎನ್ನುತ್ತಾರೆ.' ಎಂದು ಮಹಾವ್ಯಾಕರಣದಲ್ಲಿ ಹೇಳಿದೆ.

ಅದರಂತೆ 'ತಮಸಿ' ಎಂದು ವಿಷಯಸಪ್ತಮಿ. ಇದು ಪಂಚಮ್ಯರ್ಥದಲ್ಲಿ ಬಂದಿದೆ. 'ತಮಸಿಗಿಂತ ಉತ್ತಮನಾಗಿರುವೆ' ಅಂದರೆ, ತಮೋನಾಮಕಳಾದ ದುರ್ಗಾದೇವಿಗಿಂತ ನೀನು ಉತ್ತಮನಾಗಿರುವೆ ಎಂದರ್ಥ.

ಅತಸ್ತ್ವಂ ಸರ್ವೋತ್ತಮ ಇತ್ಯೇವ ತ್ವಯಿ ಮನೋವಚನಾಚರಿತಾನಿ ದಧತಾಂ ನಾಯಥಾ ತಾನಿ ಭವಂತಿ । ಯಥಾ ಭೂಮೌ ಪದಂ ನಿಕ್ಷಿಪಾಮೀತಿ ಪ್ರವರ್ತತೋ ಭೂಮೇರ್ನಾನ್ಯತ್ರ ಭವಂತಿ। ಉದಕವೃಕ್ಷಾದೇ ಭೂರ್ಮ್ಯಂತರ್ಭಾವಾತ್ ।

ಆಧಾರಶಕ್ತಿಯುಕ್ತತ್ವಾದ್ ಭೂರುದಂ ಚ ಪ್ರಕೀರ್ತಿತಂ ।
ಸಾಽಪಿ ವಾಯ್ವಂತರಂಗೈವ ಸ ಹ್ಯಾಧಾರೋಽಖಿಲಸ್ಯ ಚ ॥

ಇತಿ ಮಹಾಸಂಹಿತಾಯಾಂ ॥

ಅದರಿಂದ ನೀನೇ ಸರ್ವೋತ್ತಮನೆಂದು ನಿನ್ನಲ್ಲಿ ತಮ್ಮ ಮನಸ್ಸು ವಾಕ್ಕು ಆಚಾರಗಳನ್ನು ಇರಿಸಿಕೊಂಡಿರುವ ಜ್ಞಾನಿಗಳಲ್ಲಿ ಆ ಮನೋವಚನ ಆಚಾರಗಳು ನಿನ್ನ ಪರವಲ್ಲವೆಂದಾಗುವುದಿಲ್ಲ. ನೆಲದ ಮೇಲೆ ಹೆಜ್ಜೆ ಇಡುವೆನೆಂದು ಹೊರಟವನು ಎಲ್ಲಿ ಹೆಜ್ಜೆ ಇಟ್ಟರೂ ನೆಲದ ಮೇಲೆಯೆ ಹೆಜ್ಜೆ ಇಟ್ಟಂತಾಗುವುದು. ಬೇರೆ ಕಡೆಯಲ್ಲಲ್ಲ. ನೀರು ಮರ ಮುಂತಾದುವೂ ಭೂಮಿಯಲ್ಲಿಯೇ ಸೇರಿರುತ್ತದೆ ತಾನೆ?

'ಭೂಶಬ್ದಾರ್ಥವಾದ ಆಧಾರಶಕ್ತಿ ಇರುವುದರಿಂದಲೆ ಭೂಮಿಯೂ ನೀರೂ 'ಭೂ' ಎನಿಸಿದೆ. ಆ ಭೂಮಿಯೂ ಕೂರ್ಮರೂಪಿ ವಾಯುವಿಗೆ ಅಧೀನವೆ. ವಾಯುವೆ ಸರ್ವಾಧಾರ' ಎಂದು ಮಹಾಸಂಹಿತೆಯಲ್ಲಿ ಉಕ್ತವಾಗಿದೆ.

(ನೀರು ಮರ ಮುಂತಾದವೂ ಭೂಮಿಯಲ್ಲಿಯೇ ಸೇರಿದ ಭಾಗಗಳಾದ್ದರಿಂದ ಭಾಗಗಳಿಂದ ಭೂಮಿಗೆ ಅಭೇದವಿರುವುದರಿಂದ ಅವುಗಳ ಮೇಲೆ ಹೆಜ್ಜೆ ಇಟ್ಟರೂ ಅದು ಭೂಸಂಚಾರವೆ. ಹಾಗೇ ಭಗವಂತನಲ್ಲಿ ಜ್ಞಾನಿ ಸ್ವಯೋಗ್ಯವಾದ ಕೆಲವೇ ಗುಣಗಳನ್ನು ತಿಳಿದರೂ ಪ್ರತಿ ಗುಣವೂ ಪೂರ್ಣ ಬ್ರಹ್ಮಸ್ವರೂಪವೇ ಆದ್ದರಿಂದ ಅದು ಬ್ರಹ್ಮಜ್ಞಾನವೆ. ಬ್ರಹ್ಮಜ್ಞಾನವಲ್ಲವೆನ್ನುವಂತಿಲ್ಲ. ಅದರಿಂದ ಭಗವಂತ ಸರ್ವಥಾ ಅಜ್ಞೇಯನಲ್ಲ.)

ಅತ ಇತಿ ಹೇತ್ವರ್ಥೇ ತಥೇತ್ಯರ್ಥೇ ಚ। ತಸ್ಮಾದ್ ಬೃಹತ್ತ್ವೇನ ದಧುರಿತಿ ।

ಅತಃಶಬ್ದಸ್ತು ಹೇತ್ವರ್ಥೇ ತಥೇತ್ಯರ್ಥೇ ಚ ವರ್ತತೇ ।
ಉಭಯಾರ್ಥೇ ಚ ಭವತಿ ಯಥಾ ಶಬ್ದವಿದೋ ವಿದುಃ ॥

ಇತಿ ಶಬ್ದನಿರ್ಣಯೇ ॥

ಉಪಲಬ್ಧಂ ವೇದೇಷು ।

ಶ್ಲೋಕದಲ್ಲಿ 'ಅತ ಋಷಯೋ ದಧುಃ' ಎಂದು 'ಅತಃ' ಶಬ್ದ 'ಈ ಕಾರಣದಿಂದ, ಈ ಪ್ರಕಾರವಾಗಿ' ಎಂದು ಎರಡೂ ಅರ್ಥವನ್ನು ಜೊತೆಯಾಗಿ ಹೇಳುತ್ತದೆ. ೧. ನೀನು ಸರ್ವೋತ್ತಮನಾಗಿರುವುದರಿಂದ ೨. ನೀನು ಸರ್ವೋತ್ತಮನೆಂದು ಜ್ಞಾನಿಗಳು ತಿಳಿಯುತ್ತಾರೆ ಎಂದು ಎರಡು ಅರ್ಥಗಳಿಗೂ ಒಂದು ವಾಕ್ಯದಲ್ಲಿ ಅನ್ವಯವನ್ನು ಹೇಳಬೇಕು. ಹೊರತು 'ಸರ್ವೋತ್ತಮನೆಂದು' ಎಂದು ಅಧ್ಯಾಹಾರ ಬೇಕಾಗಿಲ್ಲ.

(ಒಂದು ಶಬ್ದಕ್ಕೆ ಅನೇಕಾರ್ಥವಿರುವಲ್ಲಿ ಆ ಎಲ್ಲ ಅರ್ಥಗಳೂ ಒಂದೇ ವಾಕ್ಯದಲ್ಲಿ ಒಮ್ಮೆಲೆ ಪರಸ್ಪರ ಅನ್ವಯ ಹೊಂದುವುದಿಲ್ಲ. ಪ್ರಕರಣಾನುಸಾರವಾಗಿ ಯಾವುದಾದರೊಂದು ಅರ್ಥಮಾತ್ರ ಅನ್ವಯ ಹೊಂದುತ್ತದೆ. ಆದರೆ) ಅತಃಶಬ್ದಕ್ಕೆ ಕೆಲವು ಕಡೆ 'ಈ ಕಾರಣದಿಂದ' ಎಂದು ಅರ್ಥ, ಕೆಲವೆಡೆ 'ಈ ಪ್ರಕಾರವಾಗಿ' ಎಂದು ಅರ್ಥ, ಇನ್ನು ಕೆಲವೆಡೆ 'ಈ ಕಾರಣದಿಂದ ಈ ಪ್ರಕಾರವಾಗಿ' ಎಂದು ಎರಡೂ ಅರ್ಥಗಳು ಒಮ್ಮೆಲೇ ಒಂದೇ ವಾಕ್ಯದಲ್ಲಿ ಅನ್ವಯಹೊಂದುವುದುಂಟು. ಹೀಗೆ ಶಬ್ದನಿರ್ಣಯ ಹೇಳುತ್ತದೆ.

'ಬೃಹದುಪಲಬ್ಧಂ' ನಿನ್ನ ಸ್ವರೂಪ ಸರ್ವೋತ್ತಮವೆಂದು ಸಿದ್ಧವಾಗಿದೆ, ಎಲ್ಲಿ ಎಂದರೆ, 'ವೇದೇಷು' ವೇದಗಳಲ್ಲಿ ಎಂದು ಅಧ್ಯಾಹಾರ ಮಾಡಿ ಅನ್ವಯಿಸಬೇಕು.

ಬೃಹದ್ಧಿ ದೃಷ್ಟಮವಶೇಷಿತಂ ಯತ್
ಸ್ವರೂಪಮೀಶಸ್ಯ ತಮೋಽಧಿಕಸ್ಯ ।
ಸರ್ವಾಧಿಕತ್ವೇನ ತಮೋ ಹಿ ದುರ್ಗಾ
ತತಸ್ತಥೈನಂ ವಿಬುಧಾ ಯಥಾಽಗುಃ ॥

ಇತ್ಯೌದ್ದಾಲಕಾಯನ ಶ್ರುತಿಃ॥

ಇದು ಈ ಶ್ರುತಿಗೀತೆಯ ಎರಡನೆ ಪದ್ಯದ ಮೂಲಶ್ರುತಿ.

ತಮೋಧಿಕಸ್ಯ ಈಶಸ್ಯ ಸ್ವರೂಪಂ ಬೃಹದ್ ಹಿ ದೃಷ್ಟಂ

ತಮೋನಾಮಕ ದುರ್ಗೆಗಿಂತಲೂ ಉತ್ತಮವಾದ ವಿಷ್ಣುವಿನ ಸ್ವರೂಪ ವೇದಗಳಲ್ಲಿ ಸರ್ವಾಧಿಕ ಪೂರ್ಣವೆಂದು ಸಿದ್ಧವಾಗಿದೆ.

ಯತ್ ಸರ್ವಾಧಿಕತ್ವೇನ ಅವಶೇಷಿತಂ

ಏಕೆಂದರೆ ಅದು **ತಾರತಮ್ಯದಲ್ಲಿ ತುತ್ತತುದಿ** ಎಂದು ಪರ್ಯವಸಾನ ಹೊಂದಿದೆ.

ತಮೋ ಹಿ ದುರ್ಗಾ

ತಮಸ್ಸೆಂದರೆ ದುರ್ಗೆ ಎಂದು '**ತಮ ಆಸೀತ್**' ಇತ್ಯಾದಿ ಶ್ರುತಿಯಲ್ಲಿ ಪ್ರಸಿದ್ಧವಾಗಿದೆ.

ತತ ಏನಂ ವಿಬುಧಾಃ ತಥಾ ಅಗುಃ ಯಥಾ

ಆದರಿಂದ ವಿಷ್ಣುವನ್ನು ಬ್ರಹ್ಮಾದಿಜ್ಞಾನಿಗಳು 'ತಥಾ' ಸರ್ವಾಧಿಕ ಪೂರ್ಣನೆಂದು '**ಯಥಾ**' **ತಮ್ಮ ಯೋಗ್ಯತಾನುಸಾರ** 'ಯಥಾ' ಭೂಸಂಚಾರ ನಿದರ್ಶನದಂತೆ 'ಅಗುಃ' ತಿಳಿದರು. ಆದರಿಂದ 'ಅದ್ರೇಶ್ಯ'ನೆಂದರೆ **ಪೂರ್ಣವಾಗಿ** ತಿಳಿಯಲಾಗದವನೆಂದರ್ಥ ಹೊರತು ಸರ್ವಥಾ **ಅಜ್ಞೇಯನೆಂದಲ್ಲ**.' ಎಂದು ಔದ್ದಾಲಕಾಯನ ಶ್ರುತಿಯಲ್ಲಿ ಉಕ್ತವಾಗಿದೆ.

ಅನಿರ್ದೇಶ್ಯಮಪ್ಯೇಕದೇಶನಿರ್ದೇಶೇನ ನಿರ್ದಿಷ್ಟಂ ಭವತೀತ್ಯುಕ್ತಂ 'ಕಥಮಯಥಾ ಭವಂತೀ'ತ್ಯನೇನ । ಯಥಾ ಸರ್ವಾಂ ಭೂಮಿಮಸಂಚರನ್ನಪ್ಯೇಕದೇಶಸಂಚಾರೇಣ ಭೂಸಂಚಾರೀ ಭವತಿ ತಥೇತಿ ।

ನಿರಪೇಕ್ಷ ಬೃಹತ್ತ್ವಸ್ಯ ಜ್ಞಾನಾಜ್ಞಾತಂ ಭವೇತ್ ಪರಂ ।
ಬೃಹತ್ತ್ವಮೇವ ತು ಗುಣೈಃ ಸರ್ವೈರುದ್ದಿಶ್ಯತೇ ಯತಃ ॥
ಇತಿ ಮಾನ್ಯಸಂಹಿತಾಯಾಂ ॥

'**ಕಥಮಯಥಾ ಭವಂತಿ**' ಎಂಬುದರಿಂದ, 'ಪೂರ್ತಿಯಾಗಿ ಹೇಳಲಾಗದುದನ್ನು ಕೂಡ ಯೋಗ್ಯತಾನುಸಾರ ಸ್ವಲ್ಪ ಹೇಳಿದಾಗ ಆ ಸ್ವಲ್ಪವೂ ಪರಿಪೂರ್ಣದ ಸ್ವರೂಪವೇ ಆಗಿರುವುದರಿಂದ 'ಹೇಳಲೇ ಇಲ್ಲ' ಎಂದು ಹೇಗಾದೀತು?' ಎಂದು ಉಕ್ತವಾಯಿತು. ಇಡೀ ಭೂಮಿಯಲ್ಲಿ ಎಲ್ಲೆಡೆ

ಸಂಚಾರ ಮಾಡದಿದ್ದರೂ ಕೆಲವೆಡೆ ಸಂಚಾರ ಮಾಡಿದ ಮಾತ್ರಕ್ಕೆ ಆ ಸ್ಥಳಗಳೂ ಭೂಮಿಯೇ ಆಗಿರುವುದರಿಂದ 'ಭೂಸಂಚಾರ ಮಾಡಿದನೆಂ'ದೇ ಆಗುತ್ತದೆ. ಹಾಗೆ ಎಂದು, 'ಬ್ರಹ್ಮನ್ ಬ್ರಹ್ಮಣ್ಯನಿರ್ದೇಶ್ಯೇ' ಎಂದು ಪರೀಕ್ಷಿತ ಕೇಳಿದ ಪ್ರಶ್ನೆಗೆ ಇಲ್ಲಿ ಉತ್ತರ ಬಂದಿದೆ.

ಎಲ್ಲ ಗುಣಗಳೂ ಪೂರ್ಣವೇ ಆಗಿರುವುದರಿಂದ ಪರಮಾತ್ಮನ ಪೂರ್ಣತ್ವದಲ್ಲಿಯೇ ಪರ್ಯವಸಾನವಾಗುವುದರಿಂದ ಪರಮಾತ್ಮನ ಆ ಸರ್ವಾಧಿಕಪೂರ್ಣತ್ವವನ್ನು ತಿಳಿದರೆ ಅದರಿಂದ ಅಭಿನ್ನನಾದ ಪರಮಾತ್ಮನನ್ನು ತಿಳಿದಂತೇ ಆಗುವುದು ಎಂದು ಮಾನ್ಯಸಂಹಿತೆಯಲ್ಲಿ ಉಕ್ತವಾಗಿದೆ.

❖❖❖

ಶ್ರುತಿಗೀತೆಯಲ್ಲಿ ಮೂರನೇ ಪದ್ಯ—

~~ಇತಿ ಸೂರಯಸ್ತ್ರ್ಯಧಿಪತೇಽಖಿಲಲೋಕಮಲ-~~
ಕ್ಷಪಣಂ ಕಥಾಮೃತಾಬ್ಧಿಮವಗಾಹ್ಯ ತಪಾಂಸಿ ಜಹುಃ ।
ಕಿಮುತ ಪುನಃ ಸ್ವಧಾಮವಿಧುತಾಶಯಕಾಲಗುಣಾಃ
ಪರಮ ಭಜಂತಿ ಯೇ ಪದಮಜಸ್ರಸುಖಾನುಭವಮ್ ॥ ೧೭ ॥

ಉತ್ತಮ ಮಧ್ಯಮ ಅಧಮರೆಂದು ಮೂರು ಬಗೆಯಾದ ಜನರಿಗೂ ಸ್ವಾಮಿಯಾದ ಸರ್ವೋತ್ತಮನಾದ ಶ್ರೀಹರಿಯೆ, ಸಂಸಾರಿಗಳಾದ ಜ್ಞಾನಿಗಳೂ ಕೂಡ ಸಕಲಲೋಕಪಾವನವಾದ ನಿನ್ನ ಕಥಾಮೃತ ಸಮುದ್ರದಲ್ಲಿ ಮುಳುಗಿದ್ದು ಎಲ್ಲ ತಾಪಗಳನ್ನು ಕಳೆದುಕೊಳ್ಳುತ್ತಾರೆ ಎಂದ ಮೇಲೆ ಮುಕ್ತರು ಬಾಹ್ಯಮನಸ್ಸೇ ಇಲ್ಲದವರಾದ್ದರಿಂದ ಅದರಿಂದಾಗುವ ದುಃಖಶೋಕಗಳನ್ನು ನೀಗಿಕೊಂಡವರು, ಜಡಶರೀರವಿಲ್ಲವಾದ್ದರಿಂದ ಕಾಲದಿಂದಾಗುವ ಜನನ ಮರಣಾದಿಗಳನ್ನು ನಿನ್ನ ಅನುಗ್ರಹದಿಂದ ನೀಗಿಕೊಂಡವರು ನಿನ್ನ ನಿತ್ಯಾನಂದಾನುಭವ ಸ್ವರೂಪವನ್ನು ಸದಾ ಪ್ರತ್ಯಕ್ಷವಾಗಿ ಕಂಡು ಭಜಿಸುತ್ತ ಎಲ್ಲ ತಾಪಗಳನ್ನೂ ಪರಿಹರಿಸಿಕೊಳ್ಳುವರೆಂದು ಬೇರೇನು ಹೇಳಬೇಕು.

ತ್ರ್ಯಧಿಪತೇ ! ಪರಮ !

ಉತ್ತಮ ಮಧ್ಯಮ ಅಧಮರೆಂದು ಮೂರು ಬಗೆಯಾದ ಜೀವರಿಗೂ ... ಸರ್ವೋತ್ತಮನಾದ ಶ್ರೀಹರಿಯೆ !

ಉತ್ತಮ ಜೀವರಿಂದ ಶುದ್ಧಭಕ್ತಿಯನ್ನೂ ಮಧ್ಯಮಜೀವರಿಂದ ಭಕ್ತಿದ್ವೇಷ ಮಿಶ್ರವನ್ನೂ ಅಧಮಜನರಿಂದ ಕೇವಲ ದ್ವೇಷವನ್ನೂ ಮಾಡಿಸಿಕೊಂಡು ಅವರಿಗೆ ಕ್ರಮವಾಗಿ ನಿತ್ಯಸುಖ, ಸುಖದುಃಖ ಮಿಶ್ರ, ನಿತ್ಯ ದುಃಖಗಳನ್ನು ಅವರ ಸ್ವರೂಪದಲ್ಲಿ ವ್ಯಕ್ತಮಾಡಿಕೊಡುವುದರಿಂದ ಮೂವರಿಗೂ ಶ್ರೀಹರಿ ಸ್ವಾಮಿ, ಸರ್ವೋತ್ತಮ.

ಸೂರಯಃ ಅಖಿಲಲೋಕ ಮಲಕ್ಷಪಣಂ
ಕಥಾಮೃತಾಬ್ಧಿಮವಗಾಹ್ಯ ತಪಾಂಸಿ ಜಹುಃ

ಸಂಸಾರಿಗಳಾದ ಜ್ಞಾನಿಗಳು ಸಕಲಲೋಕ ಪಾವನವಾದ ನಿನ್ನ ಕಥಾಮೃತ ಸಮುದ್ರದಲ್ಲಿ ಮುಳುಗಿದ್ದು ತ್ರಿವಿಧ ತಾಪಗಳನ್ನು ನೀಗಿಕೊಳ್ಳುತ್ತಾರೆ.

ಇತಿ ಕಿಮುತ ಪುನಃ ಸ್ವಧಾಮ ವಿಧುತಾಶಯಕಾಲಗುಣಾಃ ?

'ಇತಿ' ಹೀಗೆಂದ ಮೇಲೆ ಮುಕ್ತರು 'ಸ್ವಧಾಮ' ಇನ್ನೊಬ್ಬನ ಹಂಗಿಲ್ಲದೆ ತನ್ನನ್ನೆ ತಾನು ಆಶ್ರಯಿಸಿರುವ ಸ್ವತಂತ್ರಪುರುಷನಾದ ಹರಿಯ ಅನುಗ್ರಹದಿಂದ 'ವಿಧುತ ಆಶಯ ಕಾಲಗುಣ' ಆಶಯ ಎಂದರೆ ಬಾಹ್ಯ ಅಂತಃಕರಣ, ಲಿಂಗಶರೀರದಲ್ಲಿ ಇರುವಂಥದ್ದು. ಲಿಂಗಭಂಗ ಹೊಂದಿದ ಮುಕ್ತರಿಗೆ ಈ ಬಾಹ್ಯ ಅಂತಃಕರಣ ಇಲ್ಲದ್ದರಿಂದ ಮಾನಸಿಕವಾದ ದುಃಖ ಶೋಕಾದಿ 'ಆಶಯ ಗುಣ' ಅಂತಃಕರಣ ಪರಿಣಾಮಗಳು 'ವಿಧುತ' ದೂರವಾಗಿವೆ. 'ಕಾಲಗುಣ' ಕಾಲಪರಿಣಾಮವಾದ ಜನನ ಮರಣಾದಿಗಳೂ ವಿಧುತವಾಗಿವೆ. ಲಿಂಗಭಂಗವಾಗಿರುವುದರಿಂದ, ಜಡಶರೀರ ಬಾರದಿರುವುದರಿಂದ, ಜನನ ಮರಣ ಪ್ರಸಕ್ತಿಯೆ ಇಲ್ಲ. ಅಂಥ ಮುಕ್ತರು ತಾಪತ್ರಯಗಳನ್ನು ಪರಿಹರಿಸಿಕೊಳ್ಳುವರೆಂದು ಬೇರೇನು ಹೇಳಬೇಕು?

ಅಜಸ್ರ ಸುಖಾನುಭವಂ ಪದಂ ಯೇ ಭಜಂತಿ

ಸದಾ ಸುಖಾನುಭವವುಳ್ಳ ಹರಿಯ ಸ್ವರೂಪವನ್ನು ಪ್ರತ್ಯಕ್ಷವಾಗಿ ಕಾಣುತ್ತ ಭಜಿಸುವವರು ಮುಕ್ತರು. ಅದರಿಂದ ತಾಪತ್ರಯಗಳನ್ನು ಪರಿಹರಿಸಿಕೊಳ್ಳುವರೆಂದು ಬೇರೇನು ಹೇಳಬೇಕು?

ಸಂಸಾರದಲ್ಲಿ ಜೀವಾಚ್ಛಾದಕವಿರುವುದರಿಂದ ಬಾಹ್ಯ ಮನಸ್ಸಿನ ದುಃಖಶೋಕಾದಿಗಳ ಆಘಾತವಿರುತ್ತದೆ. ಅಪರೋಕ್ಷ ಬಂದಾಗ ಜೀವಾಚ್ಛಾದಕ ಶಿಥಿಲವಾಗುತ್ತದೆ. ಬಹುಪಾಲು ಸುಟ್ಟಬಟ್ಟೆಯಂತೆ

ನಿಷ್ಕ್ರಿಯವಾಗುತ್ತದೆ. ಆದರೂ ಸ್ವರೂಪಾನಂದ ವ್ಯಕ್ತವಾಗುವುದಿಲ್ಲ. ಅದಕ್ಕೆ ದುಃಖಶೋಕಾದಿ ಆಘಾತವನ್ನು ಭಗವಂತನ ಕಥಾಮೃತ ಪಾನದಿಂದ ಕಡಿಮೆ ಮಾಡಿಕೊಳ್ಳುತ್ತಾರೆ, ಸ್ವರೂಪಾನಂದವನ್ನು ಸ್ವಲ್ಪಮಟ್ಟಿಗೆ ವ್ಯಕ್ತಮಾಡಿಕೊಳ್ಳುತ್ತಾರೆ. ಏಕೆಂದರೆ ಹೃದಯದಲ್ಲಿ ಆಗ ತತ್ಕಾಲದಲ್ಲಿ ಹರಿಯ ದರ್ಶನವಿದೆ. ಮುಕ್ತರಿಗೆ ಜೀವಾಚ್ಛಾದಕವಿಲ್ಲ. ಬಾಹ್ಯ ಮನಸ್ಸಿಲ್ಲ. ಅದರ ದುಃಖಶೋಕಗಳಿಲ್ಲ. ಪರಮಾತ್ಮನೂ ಸದಾ ಪ್ರತ್ಯಕ್ಷವಾಗಿ ಕಾಣುತ್ತಾನೆ. ಸದಾ ಸುಖಾನುಭವ ಸ್ವರೂಪನಾದ ಹರಿಯ ಸ್ವರೂಪವನ್ನು ಪ್ರತ್ಯಕ್ಷ ಕಾಣುವುದರಿಂದ ಅವರ ಸ್ವರೂಪಾನಂದ ವ್ಯಕ್ತವಾಗುತ್ತದೆ. ಹೀಗಾಗಿ ಹೊರಗಿನ ತಾಪತ್ರಯಗಳಿಗೆ ಅವಕಾಶವೇ ಇರುವುದಿಲ್ಲ.

[೧]'ಕಥಾಶ್ರವಣ ಮಾತ್ರದಿಂದಲೇ ಕರ್ಮಲೇಪವಿಲ್ಲವಾಗುವಾಗ ಅಪರೋಕ್ಷಾನಂತರ ತಮ್ಮ ಅಖಂಡಾನಂದಾನುಭವಸ್ವರೂಪಸ್ಫುರಣದಿಂದ ಅಂತಃಕರಣ ಧರ್ಮವಾದ ರಾಗಾದಿಗಳನ್ನೂ ಕಾಲಧರ್ಮವಾದ ಜರಾದಿಗಳನ್ನೂ ನೀಗಿಕೊಂಡಿರುವವರು ಕರ್ಮಲೇಪ ವರ್ಜಿತರೆಂದು ಬೇರೇನು ಹೇಳಬೇಕು?' ಎಂದು ಶ್ರೀಧರವ್ಯಾಖ್ಯಾನವಿದೆ. 'ತದ್ಯಥಾ ಪುಷ್ಕರ ಪಲಾಶ ಆಪೋ ನ ಶ್ಲಿಷ್ಯಂತೇ ಏವಮೇವಂವಿದಿ ಪಾಪಂ ಕರ್ಮ ನ ಶ್ಲಿಷ್ಯತೇ' ಎಂದು ಶ್ರುತಿಯನ್ನು ಕಥಾಶ್ರವಣ ಮಾತ್ರದಿಂದಲೆ ಕರ್ಮಲೇಪ ಪರಿಹಾರವಾಗುವುದಕ್ಕೆ ಆಧಾರವಾಗಿ ತೋರಿಸಿದ್ದಾರೆ. ಆದರೆ ಈ ಶ್ರುತಿ 'ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ' ಎಂಬ ಬ್ರಹ್ಮಸೂತ್ರ (೪.೧.೧೩)ದಲ್ಲಿ ಅಪರೋಕ್ಷಾನಂತರದ ಜೀವನ್ಮುಕ್ತ್ಯವಸ್ಥೆಯಲ್ಲಿ ಮಾತ್ರ ಅಪರೋಕ್ಷದ ಫಲವಾಗಿ ಉಂಟಾಗುವ ಕರ್ಮಲೇಪಾಭಾವವನ್ನು ಹೇಳುತ್ತದೆ ಎಂದು ಸ್ಪಷ್ಟ ಹೇಳಿದೆ, ಹೊರತು ಕಥಾಶ್ರವಣ ಮಾತ್ರದಿಂದ ಕರ್ಮಲೇಪವಿಲ್ಲವಾಗುವುದೆನ್ನಲು ಏನೂ ಆಧಾರವಿಲ್ಲ. ಹೀಗಾಗಿ ಕೈಮುತ್ಯನ್ಯಾಯವೇ ಇಲ್ಲದಿರುವುದ

---

೧. ಸೂರಯೋ ವಿವೇಕಿನಸ್ತವಾಖಿಲ ಲೋಕಮಲಕ್ಷಪಣಕಥಾಮೃತಾಬ್ಧಿಮವಗಾಹ್ಯ ನಿಷೇವ್ಯ **ತಪಾಂಸಿ** ತಪಂತೀತಿ ತಪಾಂಸಿ ಪಾಪಾನಿ ದುಃಖಾನಿ ವಾ ಜಹುಸ್ತ್ಯಕ್ತವಂತಃ। **ತ್ವದೀಯ ಕಥಾಮಾತ್ರೇಣ** ಯದಾ ಪಾಪತ್ಯಾಗಸ್ತದಾ ಕಿಮು ವಕ್ತವ್ಯಂ ಯೇ ಪುನಃ **ಸ್ವಧಾಮ ವಿಧುತಾಶಯಕಾಲಗುಣಾಃ** ಸ್ವಧಾಮ್ನಾ ಸ್ವರೂಪಸ್ಫುರಣೇನೈವ ವಿಧುತಾಸ್ತ್ಯಕ್ತಾ **ಆಶಯಗುಣಾ ಅಂತಃಕರಣಧರ್ಮಾ** ರಾಗದಯಃ ಕಾಲಗುಣಾ ಜರಾದಯಶ್ಚ ಯೈಸ್ತೇ **ತಥಾ ತವಾಜಸ್ರ ಸುಖಾನುಭವಮಖಂಡಾನಂದಾನುಭವಂ** ಪದಂ ಸ್ವರೂಪಂ **ಭಜಂತೇ ಸೇವಂತೇ ತಥಾಭೂತಾ ದುಃಖಾನಿ ತ್ಯಜಂತೀತಿ**। ತದ್ಯಥಾ ಪುಷ್ಕರಪಲಾಶ **ಆಪೋ ನ ಶ್ಲಿಷ್ಯಂತೇ ಏವಮೇವಂವಿದಿ ಪಾಪಂ ಕರ್ಮ** ನ ಶ್ಲಿಷ್ಯತೇ ಇತ್ಯಾದಿ **ಶ್ರುತೇರಿತ್ಯರ್ಥಃ**॥ -ಶ್ರೀಧರಃ

ರಿಂದ 'ಕಿಮುತ' ಎಂದು **ಶ್ಲೋಕದಲ್ಲಿ** ಹೇಳಿದ್ದು ಅರ್ಥಹೀನ ವಾಗುತ್ತದೆ. 'ತದ್ಯಥಾ ಪುಷ್ಕರಪಲಾಶೇ' ಎಂಬ **ಶ್ರುತಿಯನ್ನು** ಇಲ್ಲಿ ಅಪರೋಕ್ಷದಿಂದ ಪಾಪಲೇಪಾಭಾವ ಉಂಟಾಗುವುದಕ್ಕೇ **ಆಧಾರವಾಗಿ** ತೋರಿಸಲಾಗಿದೆ ಎನ್ನುವುದಾದರೆ, ಕಥಾಮಾತ್ರದಿಂದ **ಪಾಪಲೇಪಾಭಾವ** ಲಭ್ಯವೆನ್ನಲು ಏನು ಆಧಾರ ಕೊಡುತ್ತಾರೆ? ಕಥಾಮಾತ್ರದಿಂದಲೇ **ಪಾಪಲೇಪವಿಲ್ಲವಾಗುವುದಾದರೆ**, ಅಪರೋಕ್ಷ ಏಕೆ ಬೇಕು?

[1]ಜೀವಗೋಸ್ವಾಮಿ **ವ್ಯಾಖ್ಯಾನದಲ್ಲಿ** 'ಶ್ರವಣದಲ್ಲಿ ನಿರತರು ತಪ ಆದಿಗಳಲ್ಲಿ ಜುಗುಪ್ಸೆ ಪಡುತ್ತಾರೆ. **ಧ್ಯಾನ ಮಾಡುವವರು** ಜುಗುಪ್ಸೆ ಪಡುವರೆಂದು ಬೇರೇನ ಹೇಳಬೇಕು ಎಂದು **ಕೈಮುತ್ಯವನ್ನು ತೋರಿಸಿದ್ದಾರೆ**. ವೀರರಾಘವ ಮುಂತಾ ವ್ಯಾಖ್ಯಾನಗಳೂ ಹಾಗೇ **ಹೇಳಿವೆ. ಆದರೆ ಶೌಚಸಂಧ್ಯಾವಂದನಾದಿ** ನಿತ್ಯಕರ್ಮ ಗಳಲ್ಲಿ ಏಕಾದಶ್ಯುಪವಾಸಾದಿ **ತಪಸ್ಸುಗಳಲ್ಲಿ ಜುಗುಪ್ಸೆ ಪಡುವವರಿಗೆ** ಶ್ರವಣದಲ್ಲಿ ಅಧಿ ಕಾರವೆ ಇಲ್ಲವಾಗುತ್ತದೆ. **ಶ್ರವಣವಿಲ್ಲದಿದ್ದರೆ ಧ್ಯಾನವೂ** ಇಲ್ಲ ಎನ್ನುವುದ ಕೈಮುತ್ಯನ್ಯಾಯದಿಂದ **ಸಿದ್ಧವಾಗುತ್ತದೆ. 'ಇಜ್ಯತೇ ಯಜ್ಞಶೀಲೈಃ** ಸ ಯಜ್ಞಃ' ಎಂಬಂ ಮುಕ್ತರೂ **ಕೂಡ ಯಜ್ಞ ದಾನ ತಪಸ್ಸುಗಳನ್ನು** ನಡೆಸುತ್ತಿರುವಾಗ ಕಥಾಶ್ರವಣಾ ಸಕ್ತರಾದವರು **ಅವುಗಳಲ್ಲಿ** ಜುಗುಪ್ಸೆ ಪಡುವುದು ತೀರ ಅಸಂಗತವೆನಿಸುತ್ತದೆ.

ಅದರಿಂದ ಶ್ಲೋಕದಲ್ಲಿ 'ತಪಾಂಸಿ' ಎಂದು ಹೇಳಿದ ತಪಸ್ಸು ಶ್ರೀಧರವ್ಯಾಖ್ಯಾನ **ಹೇಳುವಂತೆ ದುಃಖಕರವಾದ** ಪಾಪಕರ್ಮಲೇಪವೂ ಅಲ್ಲ, ಜೀವಗೋಸ್ವಾಮಿ **ಮುಂತಾದವರು** ಹೇಳುವಂತೆ ಕ್ಲೇಶದಾಯಕವಾದ ತಪಸ್ಸೂ ಅಲ್ಲ, ಸಂಸಾರದಲ್ಲಿ **ಬರುವ ಆಧ್ಯಾತ್ಮಿಕಾದಿ** ತ್ರಿವಿಧ ತಾಪಗಳು ಎಂದರ್ಥ. ಕಥಾಶ್ರವಣದಿಂದ ಮುಂದೆ **ತಾಪತ್ರಯ** ಪರಿಹಾರವಾಗುತ್ತದೆ. ಜ್ಞಾನಿಗಳಿಗೆ ಶ್ರವಣಕಾಲದಲ್ಲಿಯೂ **ಸ್ವರೂಪಸುಖಾಭಿವ್ಯಕ್ತಿ** ಯಾಗುವುದರಿಂದ ಆಗ ತಾಪತ್ರಯವಿರುವುದೂ ಇಲ್ಲ. **ಸ್ವರೂಪಸುಖಾಭಿವ್ಯಕ್ತಿಗೆ ಪ್ರತಿಬಂಧಕವಾದ** ಪ್ರಕೃತಿಯ ಆವರಣ ಸಂಸಾರದಲ್ಲಿ ಇರುವಾಗಲೂ **ಕೂಡ ಕಥಾಶ್ರವಣದಲ್ಲಿ** ತನ್ಮಯರಾಗುವವರಿಗೆ ಸ್ವರೂಪ ಸುಖಾಭಿವ್ಯಕ್ತಿ **ಸ್ವಲ್ಪಮಟ್ಟಿಗೆ** ಇರುತ್ತದೆ ಎಂದಮೇಲೆ, ಪ್ರತಿಬಂಧಕವಿಲ್ಲದಿರುವ ಮುಕ್ತರಿಗೆ ಅದು **ಉಂಟೆಂದು** ಬೇರೇನು ಹೇಳಬೇಕೆಂದು ಕೈಮುತ್ಯ ಶ್ಲೋಕದಲ್ಲಿ ವಿವಕ್ಷಿತವಾಗಿದೆ. **ಏಕೆಂದರೆ ಈ** ಶ್ರುತಿಗೀತಾಶ್ಲೋಕಕ್ಕೆ ಮೂಲಶ್ರುತಿಯಾಗಿರುವ

---

೧. ತ್ವತ್ಕಥಾಂ ಶೃಣ್ವಂತ **ಏವ ಸಂತಿ ತತ್ಕೃತಾ**ನಂದೇನ ತಪಃಸು ಜುಗುಪ್ಸೈವ ತೇಷಾಂ ಜಾಯತೇ ನ ತು ತೇಷು ಪುನಃ **ಪ್ರವೃತ್ತಿಃ। ಅಜಸ್ರಸುಖಾ**ನುಭವಂ ತವಪದಂ ಚರಣಾರವಿಂದಂ ಯೇ ಭಜಂತಿ ತೇ ಪುನಸ್ತತ್ರ ತಪ **ಆದಿಷು ಯಜ್ಜುಗುಪ್ಸಾಂ** ಕರಿಷ್ಯಂತಿ ತತ್ ಕಿಮುತೇತಿ ಭಾವಃ।

-ಜೀವಗೋಸ್ವಾಮಿಕೃತ ಬೃಹತ್ಕ್ರಮಸಂದರ್ಭಃ

ಇಂದ್ರದ್ಯುಮ್ನ ಶ್ರುತಿ ಹಾಗೇ ಹೇಳುತ್ತಿದೆ.

ಶುಕದೇವನ ಸಿದ್ಧಾಂತಪ್ರದೀಪವ್ಯಾಖ್ಯಾನದಲ್ಲಿ ಈ ಇಂದ್ರದ್ಯುಮ್ನಶ್ರುತಿಯನ್ನು ಇಲ್ಲಿ ಮೂಲಶ್ರುತಿ ಎಂದು ಒಪ್ಪಿದ್ದಾರೆ.

ಶ್ಲೋಕದಲ್ಲಿ 'ಸ್ವಧಾಮ' ಎಂದರೆ 'ಸ್ವರೂಪಸ್ಫುರಣ' ಎಂದು ಶ್ರೀಧರವ್ಯಾಖ್ಯಾನ ಹೇಳಿದೆ. ಆದರೆ ಅದ್ವೈತದಲ್ಲಿ ಅಂತಃಕರಣ ಧರ್ಮವಾದ ರಾಗಾದಿಗಳಿಗೂ ಕಾಲಕೃತವಾದ ಜರಾದಿಗಳಿಗೂ, ಏಕೆ, ಸಮಸ್ತ ಪ್ರಪಂಚಕ್ಕೂ ನಿವರ್ತಕವಾದುದು ಅಂತಃಕರಣ ಪರಿಣಾಮವಾದ ಚರಮವೃತ್ತಿಯೆ ಹೊರತು ಸ್ವಪ್ರಕಾಶವಾದ ಸ್ವರೂಪಸ್ಫುರಣವಲ್ಲ. ಸ್ವರೂಪಸ್ಫುರಣ ಅಜ್ಞಾನಕ್ಕೆ ಸಾಧಕವೆ ಹೊರತು ಬಾಧಕವಲ್ಲ. ಅದರಿಂದ ಆಶಯ ಕಾಲ ಗುಣಗಳು ಸ್ವರೂಪಸ್ಫುರಣದಿಂದ 'ವಿಧುತ'ವಾಗುವುದು ಶಕ್ಯವಿಲ್ಲ. ವೀರರಾಘವ ಮುಂತಾದ ವ್ಯಾಖ್ಯಾನಗಳಲ್ಲಿ 'ಸ್ವ' ಎಂದರೆ ಪರಮಾತ್ಮ. ಅವನ 'ಧಾಮ' ಎಂದರೆ ಜ್ಞಾನ. ಪರಮಾತ್ಮನ ಜ್ಞಾನದಿಂದ ಅಂತಃಕರಣ ಕಾಲಗುಣಗಳು ನಿವೃತ್ತಿ ಹೊಂದುತ್ತವೆ ಎಂದಿದೆ. ವಸ್ತುತಃ ಸಂಸಾರ ನಿವೃತ್ತಿಗೆ ಜ್ಞಾನವೇ ಕಾರಣವಲ್ಲ. ಜ್ಞಾನದಿಂದ ಪ್ರಸನ್ನನಾಗುವ ಪರಮಾತ್ಮ ಕಾರಣ. 'ಬಂಧಕೋ ಭವಪಾಶೇನ ಭವಪಾಶಾಚ್ಚ ಮೋಚಕಃ' ಬಂಧಮೋಕ್ಷಗಳೆರಡಕ್ಕೂ ಅವನೇ ಕಾರಣ. ಅದರಿಂದ 'ಸ್ವಧಾಮ' ಎಂದರೆ ಸ್ವಾಶ್ರಯನಾದ ಸ್ವತಂತ್ರನಾದ ಪರಮಾತ್ಮ ಎಂದು ಶ್ರೀಮದಾಚಾರ್ಯರು ಹೇಳುವುದೇ ಯುಕ್ತ.

ಅನನ್ಯಾಶ್ರಯತ್ವಾತ್ ಸ್ವಧಾಮಾ ಪರಮಃ। ತೇನ ವಿಧುತಾ ದುಃಖಾದ್ಯಾಃ ಆಶಯಗುಣಾಃ ಉತ್ಪತ್ತ್ಯಾದ್ಯಾಃ ಕಾಲಧರ್ಮಾಶ್ಚ ಯೇಷಾಂ ತೇ ಮುಕ್ತಾಃ ತಾಪಾನ್ ಜಹುರಿತಿ ಕಿಂ ಪುನಃ? ಕಥಾಮೃತಾಬ್ಧಿಮವಗಾಹ್ಯಾಪಿ ಜಹುರಿತಿ ಯದಿತಿ ಹೇತ್ವರ್ಥೇ ಇತಿ ಶಬ್ದಃ ।

ಬೇರೊಬ್ಬ ಆಶ್ರಯನಿಲ್ಲದಿರುವುದರಿಂದ 'ಸ್ವ' ತನಗೆ ತಾನೇ 'ಧಾಮ' ಆಶ್ರಯನೆನಿಸಿಕೊಂಡವನು ಪರಮಾತ್ಮ. ಅವನ ಅನುಗ್ರಹದಿಂದ 'ಆಶಯ' ಬಾಹ್ಯಮನಸಿನ 'ಗುಣ'ಗಳು ದುಃಖಾದಿಗಳು ಮತ್ತು ಕಾಲಧರ್ಮವಾದ ಜನನ ಮರಣಾದಿಗಳು 'ವಿಧುತ'ವಾಗಿವೆ. ನಿವೃತ್ತಿ ಹೊಂದಿವೆ. **ಇಂಥ ಮುಕ್ತರು** ತಾಪತ್ರಯಗಳನ್ನು ದೂರಮಾಡಿಕೊಂಡಿದ್ದಾರೆ ಎಂದು **ಬೇರೇನು ಹೇಳಬೇಕು?** ಏಕೆಂದರೆ ಪರಮಾತ್ಮನ ಕಥಾಮೃತಸಮುದ್ರ**ದಲ್ಲಿ ಮುಳುಗಿ ಸಂಸಾರಿಗಳೂ ಕೂಡ** ತಾಪತ್ರಯಗಳನ್ನು ದೂರಮಾ**ಡಿಕೊಂಡಿದ್ದಾರೆ ಎಂದು 'ಇತಿ ಸೂರಯಃ'** ಎಂಬಲ್ಲಿ 'ಇತಿ' ಶಬ್ದ ಹೇತುವನ್ನು **ಹೇಳುತ್ತದೆ**.

ತ್ಯಜಂತಿ ತಾಪಂ ಯ ಉ ತೇ ಭವತ್ಕಥಾ
ಇತಿ ಸ್ಮ ಮುಕ್ತಾಃ ಕಿಮು ತೇ ಸ್ವರೂಪಗಾಃ ?
ಪರಾವರೇಶೇಶಪದಂ ಭಜಂತಃ
ಪರಂ ಪರಾನಂದಮನಾರತಂ ತೇ ॥

ಇತಿ ಇಂದ್ರದ್ಯುಮ್ನಶ್ರುತಿಃ

'ನಿನ್ನ ಕಥೆಯಲ್ಲಿ ಆಸಕ್ತರಾದ ಸಂಸಾರಿಗಳೂ ಕೂಡ ತಾಪತ್ರಯಗಳನ್ನು ದೂರಮಾಡಿಕೊಳ್ಳುತ್ತಾರೆ ಎಂದಮೇಲೆ, 'ಪರ-ಅವರ'ರಾದ ಬ್ರಹ್ಮಾದಿ ತೃಣ ಪರ್ಯಂತ ಎಲ್ಲರಿಗೂ 'ಈಶಾ' ನಿಯಾಮಕಳಾದ ಲಕ್ಷ್ಮಿಗೂ 'ಈಶ'ನಾದ ನಿನ್ನ ಪರಮಾನಂದಮಯವಾದ ಉತ್ತಮವಾದ ಸ್ವರೂಪವನ್ನು ಸದಾ ಭಜಿಸುವ, ಆ ಭಜನೆಯಿಂದ ಸ್ವರೂಪಾನುಭವ ಹೊಂದುವ ಮುಕ್ತರು ತಾಪತ್ರಯವನ್ನು ದೂರಮಾಡಿಕೊಳ್ಳುವರೆಂದು ಬೇರೇನು ಹೇಳಬೇಕು?' ಎಂದು ಇಂದ್ರದ್ಯುಮ್ನ ಶ್ರುತಿ ಇದೆ.

❖ ❖ ❖

ಶ್ರುತಿಗೀತೆಯಲ್ಲಿ ನಾಲ್ಕನೆ ಪದ್ಯ—

ದೃತಯ ಇವೋಚ್ಛ್ವಸಂತ್ಯಸುಹೃದೋ ಯದಿ ತೇ
ಮಹದಹಮಾದಯೋಽಂಡಮಸೃಜನ್ ಯದನುಗ್ರಹತಃ ।
ಪುರುಷವಿಧಾನ್ವಯೋಽತ್ರ ಚರಮೋತ್ತಮಮಧ್ಯಮಾದಿಷು ಯ-
ಸ್ತವ ಸದಸತಃ ಪರಂ ಪ್ರಥಯೇದವಿಶೇಷಮೃತಮ್ ॥ ೧೮ ॥

ಮಹತ್ತತ್ತ್ವ ಅಹಂಕಾರತತ್ತ್ವ ಮುಂತಾದವುಗಳಿಗೆ ಅಭಿಮಾನಿಗಳಾದ ಬ್ರಹ್ಮಾದಿ ದೇವತೆಗಳೂ ಕೂಡ ನಿನ್ನ ಅನುಗ್ರಹದಿಂದಲೆ ಬ್ರಹ್ಮಾಂಡವನ್ನು ಸೃಜಿಸಿದರು ಅಂಥ ನಿನ್ನನ್ನು ದ್ವೇಷಿಸಿದರೆ ಅದರ ಪರಿಣಾಮವಾಗಿ ಅವರು ತಮಸ್ಸಿನಲ್ಲಿ ಬಿದ್ದು ಕಮ್ಮಾರನ ತಿದಿಯಂತೆ ನಿಟ್ಟುಸಿರು ಬಿಡಬೇಕಾಗುವುದು. ಮುಕ್ತಿಯೋಗ್ಯರಲ್ಲಿ ಮೊದಲನೆಯವನಾದ ಬ್ರಹ್ಮ ಉತ್ತಮರಾದ ದೇವತೆಗಳು ಮಧ್ಯಮರಾದ ಋಷಿ ಗಂಧರ್ವಾದಿಗಳು ಕೊನೆಯವರಾದ ಮನುಷ್ಯೋತ್ತಮರು ಇವರಲ್ಲಿ ಯಾರು ಯಾರು ನಿನ್ನನ್ನು ದ್ವೇಷಿಸದೆ ನಿನ್ನನ್ನು ಕುರಿತು ಯೋಗ್ಯರಿಗೆ ಉಪದೇಶ ಮಾಡುವನೋ ಅವನು ನಿನ್ನನ್ನು ಹೊಂದುತ್ತಾನೆ. ನೀನು ಮೂರ್ತಾಮೂರ್ತ ವಿಲಕ್ಷಣ, ಏಕಪ್ರಕಾರವಾಗಿದ್ದು ಸರ್ವೋತ್ತಮನೇ ಆಗಿರುತ್ತಿ.

ಮಹದಹಮಾದಯಃ ಯದನುಗ್ರಹತಃ ಅಂಡಮಸೃಜನ್

ಮಹದಹಂಕಾರಾದಿಗಳ ಅಭಿಮಾನಿಗಳಾದ ಬ್ರಹ್ಮಾದಿ ದೇವತೆಗಳು ಕೂಡ ನಿನ್ನ ಅನುಗ್ರಹದಿಂದಲೆ ಬ್ರಹ್ಮಾಂಡ ನಿರ್ಮಾಣ ಮಾಡಿದರು. ಅವರು ಬೇಡಿಕೊಂಡಾಗ ನೀನು ತತ್ವಗಳಲ್ಲಿ ಪ್ರವೇಶಿಸಿ ಬ್ರಹ್ಮಾಂಡವಾಗಿ ಪರಿಣಮಿಸುವ ಶಕ್ತಿಯನ್ನು ಉದ್ಬೋಧಗೊಳಿಸಿದಿ. ಆದರಿಂದ ಬ್ರಹ್ಮಾದಿಗಳಿಗೆ ಆ ತತ್ವಗಳಿಂದ ಬ್ರಹ್ಮಾಂಡ ನಿರ್ಮಾಣ ಮಾಡಲು ಸಾಧ್ಯವಾಯಿತು.

ಯದಿ ತೇ ಅಸುಹೃದಃ ದೃತಯ ಇವೋಚ್ಛ್ವಸಂತಿ

ನಿನ್ನನ್ನು ದ್ವೇಷಿಸಿದರೆ ಅವರು ತಮೋಯೋಗ್ಯರೇ ಆಗಿರುವುದರಿಂದ ತಮಸ್ಸಿನಲ್ಲಿ ಬಿದ್ದು ನರಳುತ್ತ ಕಮ್ಮಾರನ ತಿದಿಯಂತೆ ಜೋರಾಗಿ ನಿಟ್ಟುಸಿರು ಬಿಡುತ್ತಾರೆ. ತಿದಿ ಜೋರಾಗಿ ಗಾಳಿ ಹಾಕಿದಷ್ಟು ಬೆಂಕಿ ಇನ್ನೂ ಹೆಚ್ಚು ಉರಿಯುತ್ತದೆ. ಹಾಗೇ ಇವರು ನಿಟ್ಟುಸಿರು ಬಿಟ್ಟಷ್ಟು ದುಃಖ ಹೆಚ್ಚುತ್ತದೆ.

ಅತ್ರ ಚರಮೋತ್ತಮ ಮಧ್ಯಮಾದಿಷು ಯಃ ಪ್ರಥಯೇತ್
ಸ ಪುರುಷವಿಧಾನ್ವಯಃ (ಭವತಿ)

ಈ ಮುಕ್ತಿಯೋಗ್ಯರಾದ ಚೇತನರಲ್ಲಿ ಕೊನೆಯವರಾದ ಮನುಷ್ಯೋತ್ತಮರು, ಮಧ್ಯಮರಾದ ಋಷಿಗಂಧರ್ವರು ಉತ್ತಮರಾದ ದೇವತೆಗಳು ಮತ್ತು ಇವರೆಲ್ಲರಿಗೂ 'ಆದಿ' ಮೊದಲಿಗನಾದ ಚತುರ್ಮುಖ ಇವರಲ್ಲಿ ಯಾರಾರು ಯೋಗ್ಯರಿಗೆ ನಿನ್ನ ತತ್ವವನ್ನು ಉಪದೇಶ ಮಾಡುವನೋ ಅವನು ಪುರುಷವಿಧನಾದ ನಿನ್ನನ್ನು ಹೊಂದುತ್ತಾನೆ. ನೀನು ಪುರುಷನಾದ ಜೀವನಂತೆ ಅವನ ಶರೀರದಲ್ಲಿ ಅವನೊಂದಿಗೆ ಬಿಂಬರೂಪನಾಗಿ ಇರುವುದರಿಂದ ಪುರುಷವಿಧನೆನಿಸಿರುವಿ.

ತವಃ ಸದಸತಃ ಪರಂ ಅವಿಶೇಷಂ ಋತಂ ಪ್ರಥಯೇತ್

ಮೂರ್ತಾಮೂರ್ತ ವಿಲಕ್ಷಣವಾಗಿ ಏಕಪ್ರಕಾರವಾಗಿ ಸರ್ವೋತ್ತಮನಾಗಿರುವೆ ಎಂದು ನಿನ್ನನ್ನು ಮುಮುಕ್ಷುವು ಯೋಗ್ಯರಿಗೆ ಉಪದೇಶಿಸಬೇಕು. 'ಸತ್' ಮೂರ್ತ, 'ಅಸತ್' ಅಮೂರ್ತ. ಎರಡಕ್ಕಿಂತ 'ಪರ' ವಿಲಕ್ಷಣ. 'ಋತ' ಏಕಪ್ರಕಾರ. ಏಕೆಂದರೆ ಹರಿ ಜಗದ್ರೂಪನಾಗಿ ನಾನಾ ಪ್ರಕಾರವಾಗಿ ಪರಿಣಾಮ ಹೊಂದುವುದಿಲ್ಲ. ನಾನಾ ಪ್ರಕಾರವಾದ

ಪ್ರಪಂಚವನ್ನು ಪ್ರಕೃತಿಯಿಂದ ನಿರ್ಮಿಸುತ್ತಾನೆ. ನೀನು 'ಅವಿಶೇಷ' ನಿನ್ನನ್ನು ಮೀರಿಸುವ ವಿಶೇಷ ವ್ಯಕ್ತಿ ಇನ್ನೊಬ್ಬನಿಲ್ಲ. ನೀನು ಸರ್ವೋತ್ತಮ. ಹೀಗೆ ನಿನ್ನನ್ನು ಉಪದೇಶ ಮಾಡಬೇಕು. ಸ್ವಾಧ್ಯಾಯ ಪ್ರವಚನಗಳೆರಡೂ ಆವಶ್ಯಕ.

'ಉಸಿರಾಡುವ ಮಾನವರು ನಿನ್ನ ಭಕ್ತರಾದರೆ ಅವರ ಉಸಿರು ಸಾರ್ಥಕ. ಇಲ್ಲದಿದ್ದರೆ ಕಮ್ಮಾರನ ತಿದಿಯ ಶ್ವಾಸದಂತೆ ವ್ಯರ್ಥ. ವಿಷಯ ಭೋಗವಿದೆ ತಾನೆ, ಏಕೆ ವ್ಯರ್ಥ ಎಂದರೆ ಬ್ರಹ್ಮಾಂಡ ಸೃಷ್ಟಿ ಅದರೊಳಗೆ ಪಂಚಕೋಶ ಸೃಷ್ಟಿ ಮಾಡಿದ ನಿನ್ನನ್ನು ಭಜಿಸದವನು ಕೃತಘ್ನ. ಅವನಿಗೆ ವಿಷಯ ಭೋಗವು ಸಿಗದು. ವಸ್ತು ಅನ್ನಮಯಾದಿಕೋಶದಲ್ಲಿ ಪ್ರವೇಶಿಸಿದ್ದರಿಂದ ನಿನಗೆ ಬಂದಿರುವ ಆಕಾರ ಔಪಾಧಿ ಮಿಥ್ಯೆ, ಅನ್ನಮಯಾದಿಗಳನ್ನು ಹೇಳುವಾಗ ಕೊನೆಯಲ್ಲಿ 'ಬ್ರಹ್ಮ ಪುಚ್ಛಂ ಪ್ರತಿಷ್ ಎಂದು ಪುಚ್ಛಶಬ್ದದಿಂದ ಹೇಳಿದ ನಿನ್ನ ಸ್ವರೂಪವೇ ಸತ್ಯ.' ಎಂ [1]ಶ್ರೀಧರವ್ಯಾಖ್ಯಾನದಲ್ಲಿ ಹೇಳಿದೆ. ಇವರ **ಶ್ಲೋಕಪಾಠ ಹೀಗಿದೆ—**

ದೃತಯ ಇವ ಶ್ವಸಂತ್ಯಸುಭೃತೋ ಯದಿ ತೇಽನುವಿಧಾ
ಮಹದಹಮಾದಯೋಽಂಡಮಸೃಜನ್ ಯದನುಗ್ರಹತಃ
ಪುರುಷವಿಧೋಽನ್ವಯೋಽತ್ರ ಚರಮೋಽನ್ನಮಯಾದಿಷು ಯಃ
ಸದಸತಃ ಪರಂ ತ್ವಮಥ ಯದೇಷ್ವವಶೇಷಮೃತಂ ॥

ಇಲ್ಲಿ ಪದ್ಯದ ಮೊದಲನೆ ಸಾಲಿನಲ್ಲಿ 'ಉಸಿರಾಡುವ ಮಾನವರು ನಿನ್ನ **ಭಕ್ತರಾದರೆ ತಿದಿಯಂತೆ** ವ್ಯರ್ಥವಾಗಿ ಉಸಿರಾಡುವರು' 'ಅಸುಭೃತೋ ಯದಿ ತೇ **ಅನುವಿಧಾಃ ತರ್ಹಿ ದೃತಯ** ಇವ ಶ್ವಸಂತಿ' ಎಂದು ವ್ಯಾಹತವಾಗಿ ಹೇಳಿದೆ. ಅದಕ್ಕೆ **ವಾಕ್ಯವನ್ನು ಎರಡಾಗಿ ಒಡೆದು** 'ಭಕ್ತರಾದರೆ ಉಸಿರಾಡುವರು' ಎಂದು ಒಂದು

1. **ಅಸುಭೃತೋ ನರಾ ಯದಿ ತೇ** ಅನುವಿಧಾ ಭಕ್ತಾ ಇತಿ ಯಾವತ್ ತರ್ಹಿ ಶ್ವಸಂತಿಜೀವಂತಿ। **ಸಫಲ ಜೀವನಾ ಭವಂತಿ**। ಇತರಥಾ ದೃತಯ ಇವ ಭಸ್ತ್ರಾ ಇವ ವೃಥಾಶ್ವಾಸಾ ಇತ್ಯರ್ಥಃ। ನನ್ವಭಕ್ತಾನಾಮಪಿ **ಕಾಮಾದಿಫಲಮಸ್ತ್ಯೇವ**। ನ। ಕಾರ್ಯಕಾರಣಾನುಗ್ರಾಹಕತ್ವೇನ ಜೀವನ **ಹೇತೋಸ್ತವಾಭಜನೇ ಕೃತಘ್ನಾನಾಂ** ತದಪಿ ನ ಸಿಧ್ಯೇದಿತ್ಯಾಶಯೇನಾಹ ಮಹದಹಮಾದಯ ಇತಿ। **ಮಹಾನಹಂಕಾರಶ್ಚಾದಿರ್ಯೇಷಾಂ** ತೇ ಯದನುಗ್ರಹತೋ ಯಸ್ಯಾನುಪ್ರವೇಶೇನ ಲಬ್ಧಸಾಮರ್ಥ್ಯಾಃ **ಸಂತೋಽಂಡಂ** ದೇಹಂ ಸಮಷ್ಟಿವ್ಯಷ್ಟಿ ರೂಪಂ ಸೃಷ್ಟವಂತಃ ತತ್ರ ಚ ಪಂಚಾಪಿ **ಕೋಶಾನನ್ನಮಯಾದೀನಾವಿಶ್ಯ** ತತ್ತದಾಕಾರಃ ಸನ್ ಯಶ್ಚೇತಯತೇ ಸ ತ್ವಂ। ಏವಂ ತರ್ಹಿಸತ್ಯತ್ವ**ಮಸಂಗತ್ವಂ** ಚ ಕಥಂ ತತ್ರಾಹ ಚರಮೋಽನ್ನಮಯಾದಿಷು ಯ ಇತಿ। ಅನ್ನಮಯಾದಿಷೂಪದಿಶ್ಯ**ಮಾನೇಷು** ಯಶ್ಚರಮೋ ಬ್ರಹ್ಮ ಪುಚ್ಛಂ ಪ್ರತಿಷ್ಠೇತಿ ಪುಚ್ಛತ್ವೇನೋಕ್ತಃ ಸ ತ್ವಮಿತಿ। -ಶ್ರೀಧರಃ

ವಾಕ್ಯ, 'ಇಲ್ಲದಿದ್ದರೆ' ಎಂದು ಅಧ್ಯಾಹಾರಮಾಡಿ, 'ತಿದಿಯಂತೆ **ವ್ಯರ್ಥವಾಗಿ** ಉಸಿರಾಡುವರು' ಎಂದು ಇನ್ನೊಂದು ವಾಕ್ಯಮಾಡಿದ್ದಾರೆ.

ಪದ್ಯದ ಮೂರನೇ ಸಾಲಿನಲ್ಲಿ 'ಅನ್ನಮಯಾದಿಷು ಚರಮಃ **ಯಃ**' 'ಅನ್ನಮಯಾದಿಗಳಲ್ಲಿ ಕೊನೆಯವನು, ಅಂದರೆ ಆನಂದಮಯನು ನೀನು' ಎಂದು ಸ್ಪಷ್ಟ ಹೇಳಿದರೂ 'ಆನಂದಮಯನಲ್ಲ, ಅವನ ಪುಚ್ಛ ನೀನು' ಎಂದು ವ್ಯಾಖ್ಯಾನ. ಹೀಗೆ ಶ್ರುತಿಗೀತೆ ಹೇಳಿದ್ದನ್ನು ಸುಳ್ಳೆಂದು ನಿರಾಕರಿಸುವುದೇ ಶ್ರುತಿಗೀತೆಗೆ ವ್ಯಾಖ್ಯಾನ!

'ಮಹತ್ತತ್ತ್ವ ಅಹಂಕಾರಾದಿಗಳಲ್ಲಿ ಆವಿಷ್ಟನಾಗಿ ಅವುಗಳಿಂದ ಬ್ರಹ್ಮಾಂಡವನ್ನೂ ಅದರೊಳಗೆ ಜೀವರ ಶರೀರಗಳನ್ನೂ ನಿರ್ಮಿಸಿದ, ಭಕ್ತರ ಭಜನೆಗೆ ಯೋಗ್ಯನಾದ ಭಗವಂತ ನೀನು. ಪಂಚಕೋಶಗಳಲ್ಲಿ ಪ್ರವಿಷ್ಟನಾಗಿ ಅವುಗಳಿಗೆ ಚೈತನ್ಯ ನೀಡುವ ಜೀವನೂ ನೀನೆ. ಅಂಥ ನಿನ್ನಲ್ಲಿ ಭಕ್ತಿ ಮಾಡದವನು ಬದುಕುವುದು ವ್ಯರ್ಥ, ಅವನು ಬದುಕಿದ್ದೂ ಸತ್ತಂತೆಯೆ. ಕಮ್ಮಾರನ ತಿದಿಯಂತೆ ಅವನು ವ್ಯರ್ಥವಾಗಿ ಉಸಿರಾಡುತ್ತಾನೆ. ವಸ್ತುತಃ ಆ ಭಗವಂತನಾಗಿ ಈ ಜೀವನಾಗಿ ಭ್ರಮೆಯಲ್ಲಿ ಕಾಣಿಸಿಕೊಳ್ಳುವವನು, 'ಪುಚ್ಛ' ಅಂದರೆ, ಭ್ರಮಾಧಿಷ್ಠಾನ, ನೀನು' ಎಂದು ಇಲ್ಲಿ ಶ್ರುತಿಗೀತೆ ಹೇಳಿದರೆ, ಅರ್ಥಾತ್ ಮಿಥ್ಯೆಯಾದ ಭಗವಂತನಲ್ಲಿ ಮತ್ತು ಜೀವರಾದ ತತ್ತ್ವಾಭಿಮಾನಿ ದೇವತೆಗಳಲ್ಲಿ ಮಿಥ್ಯೋಪಾಸನೆ ಮಾಡಬೇಕೆಂದು ಉಪದೇಶಿಸಿ ದಂತಾಗುವುದು. ಈ ಮಿಥ್ಯೋಪಾಸನೆ ಮಾಡದಿದ್ದರೆ 'ಉಣಲು ಅನ್ನವೂ ಸಿಗಲಾರದು. ಏಕೆಂದರೆ ಅವನು ಕೃತಘ್ನನೆನಿಸುತ್ತಾನೆ' ಎಂದು ಅನರ್ಥ ಭಯವನ್ನೂ ತೋರಿಸುತ್ತಾರೆ. ಅದರಿಂದ ಬೇರೆ ವ್ಯಾಖ್ಯಾನಕಾರರು ಹಿಡಿದ ಪಾಠವೂ ತಪ್ಪು, ಅದರ ವ್ಯಾಖ್ಯಾನವೂ ತಪ್ಪು.

ಚರಮೋತ್ತಮಮಧ್ಯಮಾದಿಷು ಪುರುಷೇಷು ಯಸ್ತವ ಸ್ವರೂಪಂ
ಪ್ರಥಯೇತ್ ಸ ಪುರುಷವಿಧಂ ತ್ವಾಮನ್ವೇತಿ ।

ಮುಕ್ತಿಯೋಗ್ಯರ ತಾರತಮ್ಯದಲ್ಲಿ 'ಚರಮ' ಕೊನೆಯವರಾದ ಮನುಷ್ಯೋತ್ತಮರು 'ಮಧ್ಯಮ'ರಾದ ಋಷಿಗಂಧರ್ವಾದಿಗಳು 'ಉತ್ತಮ'ರಾದ ದೇವತೆಗಳು ಮತ್ತು 'ಆದಿ' ಇವರಿಗೆ ಎಲ್ಲರಿಗೂ ಮೊದಲಿಗನಾದ ಚತುರ್ಮುಖ— ಇವರಲ್ಲಿ ಯಾರಾರು ಪ್ರಪಂಚದಲ್ಲಿ ಪರಮಾತ್ಮನಾದ ನಿನ್ನ ಸ್ವರೂಪವನ್ನು ಪ್ರಸಾರ ಮಾಡುವರೋ ಅವರು 'ಪುರುಷವಿಧ'ನಾದ, ಅಂದರೆ ಜೀವಶರೀರದೊಳಗಿದ್ದೂ ಜೀವವಿಲಕ್ಷಣ ನಾಗಿರುವ ನಿನ್ನನ್ನು ಹೊಂದುತ್ತಾರೆ ಎಂದು ಶ್ಲೋಕದಲ್ಲಿ ಅನ್ವಯಾರ್ಥ.

ಬ್ರಹ್ಮೈವ ಮುಕ್ತಿಗೇಷ್ವಾದಿಃ ಸುರಾಸ್ತದವರೋತ್ತಮಾಃ ।
ಮಧ್ಯಮಾ ಋಷಿಗಂಧರ್ವಾಶ್ಚರಮಾ ಮಾನುಷೋತ್ತಮಾಃ ॥
ಇತಿ ಪ್ರಭಾವಲ್ಯಾಂ ॥

ಅಸಕ್ತೋ ದೇಹಪುರ್ಯೇಷ ಜೀವವದ್ ದೇಹಗೋಽಪಿಯತ್ ।
ಅಥವಾ ಪುಂವಿಧಾತೃತ್ವಾತ್ ಪುಂವಿಧಃ ಪುರುಷೋತ್ತಮಃ ॥
ಇತಿ ಪುರುಷೋತ್ತಮ ತಂತ್ರೇ ॥

'ಮುಕ್ತಿ ಹೊಂದುವವರಲ್ಲಿ ಚತುರ್ಮುಖನೇ ಆದಿ ಮೊದಲಿಗ. ಅವನಿಗಿಂತ ಕೆಳಗಿನವರಾದರೂ ಉತ್ತಮಜೀವರುಗಳಲ್ಲಿ ಉತ್ತಮರಾದವರು ದೇವತೆಗಳು. ಮಧ್ಯಮರು ಋಷಿಗಂಧರ್ವರು. ಕೊನೆಯವರು ಮನುಷ್ಯೋತ್ತಮರು' ಎಂದು ಪ್ರಭಾವಲಿ ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

'ಶ್ರೀಹರಿ 'ಪುರುಷವಿಧ'ನೆನಿಸುತ್ತಾನೆ ಏಕೆಂದರೆ 'ಪುರ' ಎನಿಸುವ ~~ದೇಹದಲ್ಲಿದ್ದು 'ಪುರುಷ'ನೆನಿಸಿದರೂ ಜೀವನಂತೆ ಅದರಲ್ಲಿ~~ ಆಸಕ್ತನಾಗಿರುವುದಿಲ್ಲ. ಮತ್ತು ಪುರುಷನನ್ನು ಸೃಷ್ಟಿ ಮಾಡುವುದರಿಂದಲೂ ಅವನು 'ಪುರುಷವಿಧ' ಎಂದು ಪುರುಷೋತ್ತಮ ತಂತ್ರದಲ್ಲಿ ಉಕ್ತವಾಗಿದೆ.

ಅನಿಶಮುಚ್ಛ್ವಸಂತ್ಯಸುಖೋದ್ಧುರಿತಾ-
ಸ್ತವ ರಿಪವೋ ದೃತಿವತ್ತಮಸಿ ಪ್ರವಿಷ್ಟಾಃ ।
ತವ ಗುಣಪ್ರಥನಃ ಪರಿಹಾಯ ತಮಃ
ಪರಿಯಾತಿ ತೇ ಪದಮಜಸ್ರಮನಂತಸುಖಂ ॥
ಇತಿ ಪೈಂಗಿಶ್ರುತಿಃ ॥

—ಇದು ಶ್ರುತಿಗೀತೆಯ ನಾಲ್ಕನೇ ಪದ್ಯದ ಮೂಲಶ್ರುತಿ.

'ತವ ರಿಪವಃ ತಮಸಿ ಪ್ರವಿಷ್ಟಾಃ ಅಸುಖೋದ್ಧುರಿತಾಃ'

ನಿನ್ನನ್ನು ದ್ವೇಷಿಸುವವರು ತಮಸ್ಸಿನಲ್ಲಿ ಬಿದ್ದು ದುಃಖಭಾರಾಕ್ರಾಂತರಾಗುತ್ತಾರೆ.

'ದೃತಿವದ್ ಅನಿಶಂ ಉಚ್ಛ್ವಸಂತಿ'

ತಿದಿಯಂತೆ ಸದಾ ಏದುಸಿರು ಬಿಡುತ್ತಾರೆ.

'ತವ ಗುಣಪ್ರಥನಃ ಪರಿಹಾಯ ತಮಃ'

ನಿನ್ನ ಗುಣಗಳನ್ನು ಉಪದೇಶಿಸಿ ಲೋಕದಲ್ಲಿ ಪ್ರಸಾರ ಮಾಡುವವನು ಅವಿದ್ಯೆಯನ್ನು ದೂರಮಾಡಿಕೊಂಡು...

'ಅಜಸ್ರಂ ಅನಂತಂ ತೇ ಪದಂ ಪರಿಯಾತಿ'

ನಿತ್ಯವಾದ ಅನಂತಸುಖಮಯವಾದ ನಿನ್ನ ಸ್ವರೂಪವನ್ನು ಮುಕ್ತಿಯಲ್ಲಿ ಹೊಂದುತ್ತಾನೆ.

ಹೀಗೆ ಪೈಂಗಿಶ್ರುತಿಯಲ್ಲಿ ಉಕ್ತವಾಗಿದೆ.

❖ ❖ ❖

ಶ್ರುತಿಗೀತೆಯಲ್ಲಿ ಐದನೇ ಪದ್ಯ—

ಉದರಮುಪಾಸತೇ ಯರ್ಹಿ ವರ್ತ್ಮನಿ ಸೂಕ್ಷ್ಮದೃಶಃ
ಪರಿಸರಪದ್ಧತಿಂ ಹೃದಯಮಾರುಣಯೋ ದಹರಮ್ ।
ತತ ಉದಗಾಚ್ಚ ನಂದನಪಥಾऽಥ ಶಿರಃ ಪರಮಂ
ಪುನರಿಹ ಯತ್ಸಮೇತ್ಯ ನ ಪತಂತಿ ಕೃತಾಂತಮುಖೇ ॥ ೧೯ ॥

ಬ್ರಹ್ಮವಿಚಾರ ಮಾರ್ಗದಲ್ಲಿ ಸೂಕ್ಷ್ಮದೃಷ್ಟಿಯವರಾದ ಶಾರ್ಕರಾಕ್ಷ್ಯ ಮುನಿಗಳು ಉದರ ನಾಮಕ ಪರಮಾತ್ಮನನ್ನು ಉಪಾಸನೆ ಮಾಡುತ್ತಾರೆ. ಆರುಣಿ ಮುನಿಗಳು ಸೂಕ್ಷ್ಮನಾದ ಹೃದಯ ನಾಮಕನನ್ನು ಉಪಾಸನ ಮಾಡುತ್ತಾರೆ. ಶ್ರೀಹರಿ ಹೃದಯದಿಂದಲೂ ಮೇಲೆ ಬ್ರಹ್ಮನಾಡಿ ಮಾರ್ಗದಿಂದ ಶಿರಸ್ಸಿಗೆ ಹೋಗಿ ಅಲ್ಲಿ ಚಕ್ಷುರಾದಿ ಇಂದ್ರಿಯದೇವತೆಗಳಿಂದ ಉಪಾಸನೆಯನ್ನು ಸ್ವೀಕರಿಸುತ್ತಾನೆ. ಅವನು ಮುಖ್ಯಪ್ರಾಣನನ್ನು ಮುಂದುಮಾಡಿಕೊಂಡು ಎಲ್ಲ ಜಗದ್ವ್ಯಾಪಾರವನ್ನು ಮಾಡುವವನು, ಮುಖ್ಯಪ್ರಾಣನಿಗೆ ನಿಯಾಮಕ. ಹೀಗೇ ಎಲ್ಲರೂ ಅವನನ್ನು ಉಪಾಸನೆ ಮಾಡುತ್ತಾರೆ. ಅದರಿಂದ ಅವನನ್ನು ಹೊಂದುತ್ತಾರೆ. ತಿರುಗಿ ಸಂಸಾರಕ್ಕೆ ಬರುವುದಿಲ್ಲ.

ಯರ್ಹಿವರ್ತ್ಮನಿ ಸೂಕ್ಷ್ಮದೃಶಃ ಉದರಮುಪಾಸತೇ ಯತ್ ಸಮೇತ್ಯ ನ ಪತಂತಿ

ಬ್ರಹ್ಮವಿಚಾರ ಮಾರ್ಗದಲ್ಲಿ ಸೂಕ್ಷ್ಮದೃಷ್ಟಿಯುಳ್ಳ ಶಾರ್ಕರಾಕ್ಷ್ಯ ಮುನಿಗಳು ಉದರನಾಮಕನಾದ ಹರಿಯನ್ನು ಉಪಾಸನೆ ಮಾಡುತ್ತಾರೆ. ಬ್ರಹ್ಮನಾಡಿಯಿಂದ ಉತ್ಕ್ರಮಿಸಿ ಹರಿಯನ್ನು ಹೊಂದುತ್ತಾರೆ. 'ಶರ್ಕರಾ' 'ಸಣ್ಣ ಮರಳಿನಂತೆ ಸೂಕ್ಷ್ಮವಾದ 'ಅಕ್ಷಿ' ಕಣ್ಣಿನದೃಷ್ಟಿ ಉಳ್ಳವರಾದ್ದರಿಂದ ಶಾರ್ಕರಾಕ್ಷ್ಯರೆಂದು ಹೆಸರು. ಅವರು ಉದರದಲ್ಲಿ ಉದರನಾಮಕನಾದ

ಸೂಕ್ಷ್ಮನಾದ ಹರಿಯನ್ನು ಉಪಾಸನೆ ಮಾಡಿ ಬ್ರಹ್ಮನಾಡಿಯಿಂದ ಉತ್ಕ್ರಮಣ ಮಾಡಿ ಹರಿಯನ್ನು ಹೊಂದುವುದರಿಂದ ತಿರುಗಿ ಸಂಸಾರದಲ್ಲಿ ಬೀಳುವುದಿಲ್ಲ.

ಯರ್ಹಿ ಆರುಣಯಃ ದಹರಂ ಹೃದಯಂ ಉಪಾಸತೇ, ನ ಪತಂತಿ

ಆರುಣಿ ಮುನಿಗಳು ಸೂಕ್ಷ್ಮನಾದ ಹೃದಯನಾಮಕ ಹರಿಯನ್ನು ಉಪಾಸನ ಮಾಡುವುದರಿಂದ ಹರಿಯನ್ನು ಹೊಂದಿ ತಿರುಗಿ ಸಂಸಾರದಲ್ಲಿ ಬೀಳುವುದಿಲ್ಲ.

'ದಹರ' ಸೂಕ್ಷ್ಮವಾಗಿ, ಆದರೆ 'ಆರುಣ' ಉದಿಸುವ ಸೂರ್ಯನಂತೆ ಕೆಂಪಾಗಿ ಹೃದಯದಲ್ಲಿ ಇರುವುದರಿಂದ ಹೃದಯ ನಾಮಕನಾಗಿರುವ ನಾರಾಯಣನನ್ನು ಆರುಣಿ ಮುನಿಗಳು ಉಪಾಸನ ಮಾಡುವುದರಿಂದ ಆರುಣಿ ಎಂದು ಅವರಿಗೆ ಹೆಸರು.

ಅಥ ತತಃ ನಂದನಪಥಾ ಶಿರಃ ಉದಗಾಚ್ಚ ಪುನರಿಹ

ಚತುರ್ಮುಖನ ಶರೀರದಲ್ಲಿ ಹರಿ ಕಾಲಿನ ತುದಿಯಿಂದ ಪ್ರವೇಶಿಸಿ ಮೇಲೇರಿ 'ಅಥ' ಬಳಿಕ 'ತತಃ' ಆ ಹೃದಯದಿಂದಲೂ ಮೇಲೆ 'ನಂದನಪಥಾ' ಬ್ರಹ್ಮನಾಡೀಮಾರ್ಗದಿಂದ ಶಿರಸ್ಸಿಗೆ ಏರಿದ. ಅಲ್ಲಿ ಚಕ್ಷುರಾದಿ ಇಂದ್ರಿಯ ದೇವತೆಗಳಿಂದ ಹರಿ ಪೂಜಿಸಲ್ಪಡುತ್ತಾನೆ. 'ಪುನರಿಹ' ಮತ್ತೆ ಹೃದಯಾದಿಗಳಲ್ಲಿಯೂ ಕಾಲಿನ ತುದಿವರೆಗೆ ಎಲ್ಲಕಡೆ ಉಪಾಸಕರಿಂದ ಪೂಜಿಸಲ್ಪಡುತ್ತಾನೆ. ಅಪರೋಕ್ಷಜ್ಞಾನಿಯೂ ಕೂಡ ಬ್ರಹ್ಮನಾಡೀ ಮಾರ್ಗವಾಗಿ ಹೃದಯದಿಂದ ಶಿರಸಿನವರೆಗೆ ಹೋಗಿ ಅಲ್ಲಿಂದ ಉತ್ಕ್ರಮಣ ಹೊಂದಿ ಹರಿಯನ್ನು ಹೊಂದುತ್ತಾನೆ. ಆದರಿಂದ ಅವನು ತಿರುಗಿ ಸಂಸಾರದಲ್ಲಿ ಬೀಳುವುದಿಲ್ಲ.

ಪರಿಸರ ಪದ್ಧತಿಂ ಉಪಾಸತೇ

ಎಲ್ಲ ಉಪಾಸಕರೂ ಮುಖ್ಯಪ್ರಾಣನಲ್ಲಿ ಅವನಿಗೆ ನಿಯಾಮಕನಾದ ಮತ್ತು ಅವನನ್ನು ಮುಂದೆ ಮಾಡಿಕೊಂಡೇ ಬ್ರಹ್ಮಾಂಡದಲ್ಲಿ ಎಲ್ಲೆಡೆ ಎಲ್ಲ ಜಗದ್‌ವ್ಯಾಪಾರ ಮಾಡುವ ಹರಿಯನ್ನೇ ಉಪಾಸನೆ ಮಾಡುತ್ತಾರೆ.

ಜೀವರ ಶರೀರದಲ್ಲಿಯೂ ಹರಿ ಪ್ರಾಣನನ್ನು ಮುಂದೆ ಮಾಡಿ ಕೊಂಡೇ ಪ್ರವೇಶವನ್ನಾಗಲೀ ನಿಷ್ಕ್ರಮಣವನ್ನಾಗಲೀ ಮಾಡುತ್ತಾನೆ.

ಇಂದ್ರಿಯಗಳಲ್ಲಿಯೂ ಹರಿ ವಿಷಯಭೋಗದಿಂದ ತಾನು ತನ್ನ ಸುಖಾಭಿವ್ಯಕ್ತಿ ಮಾಡಿಕೊಂಡು ಬಳಿಕ ಪ್ರಾಣನ ಸುಖಾಭಿವ್ಯಕ್ತಿ

ಮಾಡಿಕೊಡುತ್ತಾನೆ. ಮುಖ್ಯಪ್ರಾಣ 'ಪರಿಸರ' ಏಕೆಂದರೆ ಅವನು 'ಪರಿತಃ' 'ಎಲ್ಲೆಡ' 'ಸರತಿ' ಸಂಚರಿಸುತ್ತಾನೆ, ಎಲ್ಲವನ್ನೂ ತಿಳಿಯುತ್ತಾನೆ. 'ಪರಿತ್ಯಜ್ಯ' ಇಂದ್ರಿಯಾಭಿಮಾನಿಗಳನ್ನು ಬಿಟ್ಟು ಸ್ವತಂತ್ರನಾಗಿ 'ಸರತಿ' ಜೀವಶರೀರದಲ್ಲಿ ಪ್ರವೇಶ ನಿಷ್ಕ್ರಮಣಗಳನ್ನು ಮಾಡುತ್ತಾನೆ. ಇಂಥ ಮುಖ್ಯಪ್ರಾಣ ಹರಿಗೆ 'ಪದ್ಧತಿ' ಮಾರ್ಗ. ಅವನನ್ನು ಮುಂದೆ ಮಾಡಿಕೊಂಡೇ ಹರಿ ನಡೆಯುತ್ತಾನೆ. ಆದರೆ ಅವನೇ ಪ್ರಾಣನಿಗೆ ನಿಯಾಮಕನಾದ್ದರಿಂದ ಪ್ರಾಣನಿಗೆ ಅವನು 'ಪದ್ಧತಿ' ಮಾರ್ಗ. ಹೀಗೆ ಎರಡು ಅರ್ಥಗಳಲ್ಲಿ 'ಪರಿಸರ ಪದ್ಧತಿ' ಎನಿಸುವ ಹರಿಯನ್ನು ಮುಖ್ಯಪ್ರಾಣನ ಅಧಿಷ್ಠಾನದಲ್ಲಿ ಶರೀರದೊಳಗೆ ಉದರ ಹೃದಯಾದಿ ಸ್ಥಾನದಲ್ಲಿ ಜ್ಞಾನಿಗಳು ಉಪಾಸನೆ ಮಾಡುತ್ತಾರೆ.

ಯತ್ ಪರಮಂ ಸಮೇತ್ಯ ಪುನರಿಹ ಕೃತಾಂತಮುಖೇ ನ ಪತಂತಿ

ಶರೀರದಲ್ಲಿ ಹೀಗೆ ಹರಿಯನ್ನು ಉಪಾಸನೆ ಮಾಡಿ ಅವನನ್ನು ಹೊಂದುವುದರಿಂದ ಆ ಉಪಾಸಕರು ತಿರುಗಿ ಈ ಸಂಸಾರದಲ್ಲಿ

ಮೃತ್ಯುಕೂಪದಲ್ಲಿ ಬೀಳುವುದಿಲ್ಲ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ ಹೀಗಿದೆ—

ಉದರಮುಪಾಸತೇ ಯ ಋಷಿವರ್ತ್ಮಸು ಕೂರ್ಪದೃಶಃ
ಪರಿಸರಪದ್ಧತಿಂ ಹೃದಯಮಾರುಣಯೋ ದಹರಂ ।
ತತ ಉದಗಾದನಂತ ತವ ಧಾಮ ಶಿರಃ ಪರಮಂ
ಪುನರಿಹ ಯತ್ ಸಮೇತ್ಯ ನ ಪತಂತಿ ಕೃತಾಂತಮುಖೇ ॥

[೧]'ಋಷಿ ಸಂಪ್ರದಾಯ ಮಾರ್ಗಗಳಲ್ಲಿ ಸ್ಥೂಲದೃಷ್ಟಿಯವರಾದ ಋಷಿಗಳು ಸುಷುಮ್ನಾನಾಡಿಯ ಮಣಿಪೂರಚಕ್ರದಲ್ಲಿ ಉದರೋಪಾಧಿಕನಾದ ಸ್ಥೂಲ ಬ್ರಹ್ಮನನ್ನು ಉಪಾಸನೆ ಮಾಡುತ್ತಾರೆ. ಆರುಣಿ ಮುನಿಗಳು ಹೃದಯೋಪಾಧಿಕನಾದ ಸೂಕ್ಷ್ಮಬ್ರಹ್ಮನನ್ನು ಉಪಾಸನೆ ಮಾಡುತ್ತಾರೆ. ಸುಷುಮ್ನಾನಾಡಿ ಮೂಲಾಧಾರದಿಂದ

೧. ಉಪಾಧ್ಯಾಲಂಬನಮುಪಾಸನಂ ಉದರಂ ಬ್ರಹ್ಮೇತಿ ಶಾರ್ಕರಾಕ್ಷಾ ಇತ್ಯಾದ್ಯಾಃ **ಶ್ರುತಯೋ** ವಿದಧತೀತ್ಯಾಹ । ಋಷಿವರ್ತ್ಮಸು ಋಷೀಣಾಂ ಸಂಪ್ರದಾಯ **ಮಾರ್ಗೇಷು ಯೇ** ಕೂರ್ಪದೃಶಃ ತೇ ಉದರಾಲಂಬನಂ ಮಣಿಪೂರಕಸ್ಥಂ ಬ್ರ**ಹ್ಮೋಪಾಸತೇ ಧ್ಯಾಯಂತಿ** । ಕೂರ್ಪಂ ಶರ್ಕರಾ ರಜೋ ವಿದ್ಯತೇ ದೃಕ್ಷ್ವಕ್ಷಿಷು ಯೇಷಾಂ **ತೇ ತಥಾ** । ರಜಃ ಪಿಹಿತದೃಷ್ಟಯಃ ಸ್ಥೂಲದೃಷ್ಟಯ ಇತಿ ಯಾವತ್ । **ಉದರಸ್ಯ ಹೃದಯಾಪೇಕ್ಷಯಾ**

ತೊಡಗಿ ಹೃದಯದ ಮೂಲಕ ಶಿರಸ್ಸಿನಲ್ಲಿರುವ ಬ್ರಹ್ಮರಂಧ್ರದವರೆಗೆ ಹಬ್ಬಿದೆ. ಅಲ್ಲಿ ಉತ್ಕ್ರಮಣ ಹೊಂದುವವನು ತಿರುಗಿ ಸಂಸಾರದಲ್ಲಿ ಬೀಳುವುದಿಲ್ಲ.' ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ.

ಇಲ್ಲಿ 'ಉದರವು ಹೃದಯಕ್ಕಿಂತ ಸ್ಥೂಲವಾದ್ದರಿಂದ ಉದರೋಪಾಧಿಯಲ್ಲಿ ಬ್ರಹ್ಮೋಪಾಸನೆ ಮಾಡುವವರು ಸ್ಥೂಲದೃಷ್ಟಿಯವರು' ಎನ್ನುವುದು ಸರಿಯಲ್ಲ. 'ಉದರ' ಎಂದರೆ ಇಲ್ಲಿ ನಾಭಿಪ್ರದೇಶದಲ್ಲಿರುವ ಸುಷುಮ್ನಾನಾಡ್ಯಂತರ್ಗತ ಮಣಿಪೂರ ಚಕ್ರ ಎಂದು ಶ್ರೀಧರವ್ಯಾಖ್ಯಾನವೇ ಹೇಳಿದೆ. ಸುಷುಮ್ನಾನಾಡಿ ಅತ್ಯಂ ಸೂಕ್ಷ್ಮ. ಅದರ ಷಟ್ಚಕ್ರಗಳಲ್ಲಿ ಒಂದಾದ ಮಣಿಪೂರ ಚಕ್ರ ಸ್ಥೂಲ ಹೇಗಾದೀತು' ಉದರ ಎಂದರೆ ಹೊಟ್ಟೆ ಹೃದಯವೆಂದರೆ ಎದೆ ಎಂದೇ ಇಟ್ಟುಕೊಂಡರೂ, ಎ ವಿಶಾಲವಾಗಿರಬೇಕು, ಹೊಟ್ಟೆ ಸಣ್ಣದಾಗಿರಬೇಕು, ಇದು ಒಳ್ಳೆಯ ಲಕ್ಷಣ ವಿಪರೀತವಾದರೆ ಅವಲಕ್ಷಣ. ಉಪನಿಷತ್ತೂ ಕೂಡ 'ಉರ್ವೇವ ಮೇ ಕುರು ಎಂದಿದೆ. 'ಉರು ಸ್ಥಾನಂ ನಿವಾಸಂ ಮೇ ಕುರು ವಿಸ್ತಾರಸಂಯುತಂ' ಎಂದು ಭಾಷ್ಯ 'ನನಗೆ ಎದೆಯಲ್ಲಿ [illegible]ದ ವಾಸಸ್ಥಾನ ಬೇಕೆ'ನ್ನುತ್ತಾನೆ, ಭಗವಂತ. 'ಹೃದಯ ಎಂದರೆ ಎದೆಯೊಳಗಿರುವ 'ಪ್ರಾದೇಶ' ಪರಿಮಾಣದ ಮಾಂಸಖಂಡ ಎನ್ನುವುದು 'ಪದ್ಮಕೋಶ ಪ್ರತೀಕಾಶಂ ಹೃದಯಂ ಚಾಪ್ಯಧೋಮುಖಂ' ಎಂಬ ಉಪನಿಷತ್ತಿನಲ್ಲಿ ಸ್ಪಷ್ಟವಾಗುತ್ತದೆ ಎಂದಮೇಲೆ ಮಣಿಪೂರಚಕ್ರ ಈ ಹೃದಯಕಮಲಕ್ಕಿಂತಲೂ ಸ್ಥೂಲವೆನ್ನಬಹುದೆ? ಹೊಟ್ಟೆ ಸ್ಥೂಲವಿದ್ದರೂ ಅದರೊಳಗೆ 'ಅಹಂ ವೈಶ್ವಾನರೋ ಭೂತ್ವಾ' ಎಂಬಂತೆ ವೈಶ್ವಾನರ ಎಂಬ ಜಾಠರಾಗ್ನಿಶರೀರಕನಾಗಿ ಇರುವ ಭಗವಂತನ ಉಪಾಸನೆ, ಅತ್ಯಂತ ಸೂಕ್ಷ್ಮವಾದ ಜಠರಾಗ್ನಿಯ ಉಪಾಧಿಯಲ್ಲಿ ಮಾಡುವ ಉಪಾಸನೆಯಾಗಿರುವಾಗ ಅದು ಸ್ಥೂಲೋಪಾಸನೆ ಹೇಗೆ? ಸೂಕ್ಷ್ಮವೇ ಆಗಿರುವ ಬ್ರಹ್ಮವನ್ನು ಸ್ಥೂಲ ಉಪಾಧಿಯಲ್ಲಿ ಉಪಾಸನೆ ಮಾಡಿದ ಮಾತ್ರಕ್ಕೆ ಅದು ಸ್ಥೂಲವಾಗುವುದೆ? 'ಸ್ಥೂಲೋಪಾಧಿಯಲ್ಲಿ ಉಪಾಸನೆ ಎಂದರೆ ಸ್ಥೂಲೋಪಾಧಿ

ಸ್ಥೂಲತ್ವಾತ್। ಯದಾ ಕೂರ್ಪಂ ಸೂಕ್ಷ್ಮಂ ಸೂಕ್ಷ್ಮದೃಶ ಇತ್ಯರ್ಥಃ ತದಾ ಹೃದಯಸ್ಥಂ ಸೂಕ್ಷ್ಮಮೇವಾಲಕ್ಷ್ಯ ತತ್ಪ್ರವೇಶಾಯ ಪ್ರಥಮಮುದರಮುಪಾಸತ ಇತಿ ಭಾವಃ। ಆರುಣಯಸ್ತು ಸಾಕ್ಷಾತ್ ಹೃದಯಸ್ಥಂ ದಹರಂ ಸೂಕ್ಷ್ಮಮೇವೋಪಾಸತೇ। ಹೃದಯವಿಶೇಷಣಂ ಪರಿಸರಪದ್ಧತಿಮಿತಿ। ಪರಿತಃ ಸರಂತಿ ಪ್ರಸರ್ಪಂತೀತಿ। ತತೋ ಹೃದಯಾತ್ ಭೋ ಅನಂತ ತವಧಾಮ ಉಪಲಬ್ಧಿಸ್ಥಾನಂ ಸುಷುಮ್ನಾಖ್ಯಂ ಪರಮಂ ಶ್ರೇಷ್ಠಂ ಜ್ಯೋತಿರ್ಮಯಂ ಶಿರೋ ಮೂರ್ಧಾನಂ ಪ್ರತ್ಯುದಗಾತ್ ಉದಸರ್ಪತ್। ಮೂಲಾಧಾರಾದಾರಭ್ಯ ಹೃದಯಮಧ್ಯಾತ್ ಬ್ರಹ್ಮರಂಧ್ರಂ ಪ್ರತಿ ಉದ್ಗತಮಿತ್ಯರ್ಥಃ।

-ಶ್ರೀಧರಃ

ವಿಶಿಷ್ಟನ ಉಪಾಸನೆ' ಎನ್ನುವ ಅಭಿಪ್ರಾಯವಿದ್ದರೆ ಹೃದಯೋಪಾಧಿ ವಿಶಿಷ್ಟನೂ ಸ್ಥೂಲನೆ. ಅವನಿಗಿಂತ ಉದರೋಪಾಧಿ ವಿಶಿಷ್ಟನು ಸ್ಥೂಲ ಹೇಗಾಗುತ್ತಾನೆ.

ಶ್ರೀಧರವ್ಯಾಖ್ಯಾನವಾದ ಭಾವಾರ್ಥದೀಪಿಕೆಗೆ ವ್ಯಾಖ್ಯಾನ ಮಾಡುತ್ತ ರಾಧಾರಮಣದಾಸಗೋಸ್ವಾಮಿ ಹೇಳುತ್ತಾರೆ—

'ಬ್ರಹ್ಮೋಪಾಸಕಾನಾಂ ಸ್ಥೂಲದೃಷ್ಟಿತ್ವಕಥನಮಶ್ಲೀಲಮಿತ್ಯಸ್ವರಸಾದಾಹ'

'ಬ್ರಹ್ಮೋಪಾಸಕರನ್ನು ಸ್ಥೂಲದೃಷ್ಟಿಯವರೆನ್ನುವುದು ಅಶ್ಲೀಲ, ಅಸಹ್ಯ' ಎಂದು ಶ್ರೀಧರಸ್ವಾಮಿಗೇ ಅನಿಸಿತಂತೆ! ಅದಕ್ಕೆ 'ಶಾರ್ಕರಾಕ್ಷ ಮುನಿಗಳು ಸ್ಥೂಲವಾದ ದೃಷ್ಟಿಯವರಲ್ಲ, ಮುಂದೆ ಹೃದಯದಲ್ಲಿ ಸೂಕ್ಷ್ಮೋಪಾಸನೆ ಮಾಡುವ ದೃಷ್ಟಿಯಿಂದ ಮೊದಲಿಗೆ ಸ್ಥೂಲೋಪಾಸನೆ ಮಾಡುವ ದೃಷ್ಟಿ ಇಟ್ಟುಕೊಳ್ಳುತ್ತಾರೆ' ಎಂದು ಎರಡನೇ ವ್ಯಾಖ್ಯಾನ ಮಾಡುತ್ತಾರೆ. ಆದರೆ ಆ ಎರಡನೇ ವ್ಯಾಖ್ಯಾನವೂ ಸರಿಯಿಲ್ಲ. ಏಕೆಂದರೆ ಬ್ರಹ್ಮನ ಉಪಾಸನೆ ಸ್ಥೂಲ ದೃಷ್ಟಿಯಲ್ಲ; ಬ್ರಹ್ಮನೂ ಸ್ಥೂಲನಲ್ಲ, ಉಪಾಧಿಯೂ ಮಣಿಪೂರಚಕ್ರ ಅಥವಾ ಜಾಠರಾಗ್ನಿ ಸ್ಥೂಲವಲ್ಲ. ಹಾಗಾದರೆ ಶಾರ್ಕರಾಕ್ಷ ಶಬ್ದಕ್ಕೆ ಏನರ್ಥ? ಸೂಕ್ಷ್ಮದೃಷ್ಟಿಯವರೆಂದರ್ಥ. ಇದು ಶ್ರೀಮದಾಚಾರ್ಯರ\ಐತರೇಯ ಭಾಷ್ಯದಲ್ಲಿ ಸ್ಪಷ್ಟವಿದೆ. ಶುಕದೇವನ ಸಿದ್ಧಾಂತ ಪ್ರದೀಪದಲ್ಲಿ ಇದನ್ನು ಒಪ್ಪಿದ್ದಾರೆ— 'ಕೂರ್ಪದೃಶಃ ಶರ್ಕರಾಖ್ಯಾಃ 'ಶರ್ಕರಾಃ ಕ್ಷುದ್ರಪಾಷಾಣೇ ಸೂಕ್ಷ್ಮೇ ಚ ಖಂಡಿತೇ ಗುಡೇ' ಇತಿ ಕೋಶಾತ್, ಸೂಕ್ಷ್ಮದೃಷ್ಟಯಃ' ಎಂದಿದ್ದಾರೆ.

'ಪರಿಸರ ಪದ್ಧತಿ' ಎಂದರೆ 'ನಾಡಿಗಳ ಪ್ರಸರಣ ಸ್ಥಾನ' ಎಂದು ಶ್ರೀಧರವ್ಯಾಖ್ಯಾನ. ಹೃದಯದಲ್ಲಿ ನಾಡಿಗಳ ಪ್ರಸರಣವಿರುವುದರಿಂದ ಹೃದಯವನ್ನು 'ಪರಿಸರಪದ್ಧತಿ' ಎನ್ನಲಾಗಿದೆ ಎನ್ನುತ್ತಾರೆ. ಆದರೆ ಮೂಲಾಧಾರದಿಂದ ಹೊರಡುವ ನಾಡಿಗಳಲ್ಲಿ ಪ್ರಧಾನವಾದ ಸುಷುಮ್ನಾನಾಡಿ ಹೃದಯದಲ್ಲಿರುವ ಅನಾಹತಚಕ್ರದಲ್ಲಿ ಪಸರಿಸುತ್ತದೆ ಎಂದ ಮಾತ್ರಕ್ಕೆ ಹೃದಯವೇ ಪರಿಸರಪದ್ಧತಿ ಎಂದು ಏಕೆ ಕರೆಸಿಕೊಳ್ಳುತ್ತದೆ? ನಾಭಿ ಮುಂತಾದವು ಏಕೆ ಹಾಗೆ ಕರೆಸಿಕೊಳ್ಳುವುದಿಲ್ಲ? ಅದರಿಂದ ಈ ವಿಶೇಷಣ ವ್ಯರ್ಥ.

[೨]ಯೋಗಿರಾಮಾನುಜವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ—

---

೨. ಆರುಣಯಸ್ತದ್ವಂಶಜಾ ಹೃದಯಸ್ಥಂ ಪರಿಸರಪದ್ಧತಿಂ **ಸಮೀಪಮಾರ್ಗಭೂತಂ** ಮೋಕ್ಷಪ್ರಾಪಕಂ ದಹರಂ 'ದಹರಾಖ್ಯಂ ಪರಮಾತ್ಮಾನಮುಪಾಸತೇ । **ಪರಿಸರ ಪದ್ಧತಿಃ** ಸಮೀಪದೇಶಸಂಬಂಧಿ ಮಾರ್ಗಃ। ಪರಿಸರಃ **ಸಮೀಪಃ, ಪದ್ಧತಿರ್ಮಾರ್ಗರೂಪ** ಇತ್ಯರ್ಥಃ। ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟಃ ಇತ್ಯುಕ್ತತ್ವಾತ್ **ಭಗವತಃ ಸಮೀಪವೃತ್ತಿತ್ವಂ**

'ಪರಿಸರ ಎಂದರೆ ಸಮೀಪ, ಸಮೀಪದಲ್ಲಿರುವ ಭಗವಂತ. 'ಪದ್ಧತಿ' ಎಂದರೆ ಮಾರ್ಗ, ಮೋಕ್ಷಮಾರ್ಗ. ಮೋಕ್ಷಮಾರ್ಗದಲ್ಲಿ ಕೊಂಡೊಯ್ಯುವ ಭಗವಂತ. ಉದರಾದಿ ಉಪಾಸನೆ ಸ್ಥೂಲವಾಗಿದ್ದು ವಿಲಂಬದಿಂದ ಮೋಕ್ಷಜನಕವಾಗಿದೆ. ಹೃದಯೋಪಾಸನೆ ಸೂಕ್ಷ್ಮವಾಗಿದ್ದು ಶೀಘ್ರವಾಗಿ ಮೋಕ್ಷ ಜನಕವಾಗಿದೆ. ಭಗವದ್ಗೀತೆಯಲ್ಲಿ 'ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟಃ' ಎಂದು ಹೇಳಿರುವುದು ಇದೇ ಅಭಿಪ್ರಾಯದಿಂದ' ಎನ್ನುತ್ತಾರೆ. ಆದರೆ ಉದರಾದ್ಯುಪಾಸನೆ ಸ್ಥೂಲ, ಹೃದಯೋಪಾಸನೆ ಸೂಕ್ಷ್ಮವೆಂದು ತಪ್ಪಾಗಿ ತಿಳಿದು ಇವರು 'ಹೃದಯ' ನಾಮಕನನ್ನು 'ಪರಿಸರಪದ್ಧತಿ' ಎಂದು ಪರಿಗಣಿಸಿದ್ದಾರೆ. ಭಗವದ್ಗೀತೆಯಲ್ಲಿ 'ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟಃ' ಎಂದು 'ಹೃದಯ'ನಾಮಕನ ಉಪಾಸನೆಯನ್ನು ಹೇಳಿದಂತೆ 'ಅಹಂ ವೈಶ್ವಾನರೋ ಭೂತ್ವಾ' ಎಂದು 'ಉದರ'ನಾಮಕನ ಉಪಾಸನೆಯನ್ನೂ ಹೇಳಿರುವುದರಿಂದ ಎರಡು ಉಪಾಸನೆಗಳಲ್ಲಿ ದೂರ-ಸಮೀಪ ಸ್ಥೂಲ-ಸೂಕ್ಷ್ಮ ವಿಲಂಬ-ಶೀಘ್ರ ಎಂದು ಭೇದವನ್ನು ತಿಳಿಯಲು ಆಸ್ಪದವಿಲ್ಲ. ಐತರೇಯೋಪನಿಷತ್ತೇ—

'ಬ್ರಹ್ಮಾ ಹ್ಯೇವ ತಾ ಇ'

ಎರಡೂ ಬ್ರಹ್ಮವೇ ಹೊರತು ಎರಡರಲ್ಲಿ ವ್ಯತ್ಯಾಸ ಇಲ್ಲ ಎಂದಿದೆ. ಭಾಷ್ಯದಲ್ಲಿ—

ಉದರಸ್ಥಂ ಹೃದ್ಗತಂ ಚ ತೇ ಉಭೇ ಬ್ರಹ್ಮ ತತ್ ಪರಂ ।

ಏಕಮೇವ ಯತಸ್ತಸ್ಮಾತ್ ಉಭಯೇ ಹ್ಯಪಿ ತದ್ವಿದಃ ॥

'ಉದರದಲ್ಲಿರುವವನೂ ಹೃದಯದಲ್ಲಿರುವವನೂ ಇಬ್ಬರೂ ಒಬ್ಬನೆ ಪರಬ್ರಹ್ಮ. ಆದ್ದರಿಂದ ಶಾರ್ಕರಾಕ್ಷ್ಯ ಅರುಣಿ ಮುನಿಗಳಿಬ್ಬರೂ ಆ ಪರಬ್ರಹ್ಮನನ್ನು ತಿಳಿದವರೆ, ಹೊಂದಿದವರೆ.' ಎಂದು ವಿವರಣೆ ಇದೆ. ಅದರಿಂದ 'ಪರಿಸರ ಪದ್ಧತಿ' ಶಬ್ದಕ್ಕೆ ಶ್ರೀಮದಾಚಾರ್ಯರು ಉದಾಹರಿಸಿರುವ ಹಿರಣ್ಯನಾಭಶ್ರುತಿಯ ಆಧಾರದಿಂದ 'ಪರಿಸರ' ಎಂದರೆ ಎಲ್ಲೆಡೆ ಸಂಚರಿಸುವ, ಎಲ್ಲವನ್ನೂ ತಿಳಿಯುವ ಮುಖ್ಯಪ್ರಾಣ. ಅವನು 'ಪದ್ಧತಿ' ಹರಿಗೆ ಮಾರ್ಗದಂತೆ. ಅವನಿಗೆ ಹರಿ 'ಪದ್ಧತಿ' ಮಾರ್ಗದಂತೆ. ಹೀಗಾಗಿ ಇಬ್ಬರೂ 'ಪರಿಸರಪದ್ಧತಿ'ಗಳು, ಎಂದರ್ಥ.

ಬೋಧ್ಯಂ। ಪರ್ಯಂತಭೂಃ ಪರಿಸರಃ ಇತ್ಯಮರಃ। ಹೃದಯೇ ಉಪಾಸ್ಯಮಾನಸ್ಯ ಪರಮಾತ್ಮನಃ ಶೀಘ್ರಂ ಮೋಕ್ಷ ಪ್ರಾಪಕತ್ವಾತ್ ಸಮೀಪ ಮಾರ್ಗತ್ವೇನ ರೂಪಿತಃ । ಉದರಾದ್ಯುಪಾಸನಸ್ಯ ಸ್ಥೂಲತ್ವೇನ ದೂರಮಾರ್ಗಃ। ವಿಲಂಬೇನ ಕಾರ್ಯಜನಕತ್ವಾತ್॥

- ಯೋಗಿರಾಮಾನುಜಃ

'ಯರ್ಹಿ' ಯಸ್ಮಾತ್ ಬ್ರಹ್ಮವರ್ತ್ಮನಿ ಸೂಕ್ಷ್ಮದೃಕ್ತ್ವಾಚ್ಛಾರ್ಕರಾಕ್ಷ್ಯ-ನಾಮಾನಃ ಪ್ರಾಣಂ ಪ್ರತ್ಯುರು ಗೃಣೀಹೀತಿ ವಚನಾದುದರನಾಮಕಂ ಬ್ರಹ್ಮೋಪಾಸತೇ, ಯಸ್ಮಾಚ್ಚಾರುಣಯೋ ಹೃದ್ಯಯನಾದ್ಧೃದಯ-ನಾಮಕಂ, ತಸ್ಮಾದೇವ ತತ್ ಸಮುಪೇತ್ಯ ಕೃತಾಂತಮುಖೇ ನ ಪತಂತಿ, ಇತರೇಽಪಿ ।

'ಯರ್ಹಿ' ಎಂದರೆ, ಯಾವ ಕಾರಣದಿಂದ, ಬ್ರಹ್ಮವಿಚಾರದಲ್ಲಿ ಸೂಕ್ಷ್ಮದೃಷ್ಟಿಯವರಾದ್ದರಿಂದ ಶಾರ್ಕರಾಕ್ಷ್ಯರೆನಿಸಿದ ಮುನಿಗಳು, ಉದರದಲ್ಲಿ ಹರಿ ವಾಯುವಿಗೆ 'ನೀನಿಲ್ಲಿ ಚೆನ್ನಾಗಿ ಉಣ್ಣು ಮತ್ತು ಚೆನ್ನಾಗಿ ನನ್ನನ್ನು ಸ್ತುತಿಸು' ಎಂದು ಹೇಳಿದ್ದರಿಂದ 'ಉದರ'ನೆನಿಸಿದ ಹರಿಯನ್ನು ಉಪಾಸನೆ ಮಾಡುವರೋ ಮತ್ತು ಯಾವ ಕಾರಣದಿಂದ ಆರುಣಿ ಮುನಿಗಳು, ಹೃದಯದಲ್ಲಿರುವುದರಿಂದ 'ಹೃದಯ'ನಾಮಕನಾದ ಹರಿಯನ್ನು ಉಪಾಸನೆ ಮಾಡುವರೋ, ಆ ಕಾರಣದಿಂದಲೇ, ಅವರು ಆ ಪರಬ್ರಹ್ಮನಾರಾಯಣನನ್ನು ಹೊಂದಿ ಮುಕ್ತರಾಗುತ್ತಾರೆ, ಸಂಸಾರವೆಂಬ ಮೃತ್ಯುವಿನ ಬಾಯಿಯಲ್ಲಿ ಬೀಳುವುದಿಲ್ಲ. ಅವರಂತೆ ಮಾಂಡೂಕೇಯಾದಿ ಇತರರೂ ಉಪಾಸನೆ ಮಾಡಿ ಸಂಸಾರದಿಂದ ಮುಕ್ತರಾಗುತ್ತಾರೆ.

ಪರಿಸರಃ ಪ್ರಾಣಃ ಪದ್ಧತಿರ್ಮಾರ್ಗೋ ಯಸ್ಯ ಸಃ ಪರಿಸರಪದ್ಧತಿಃ । 'ಕಸ್ಮಿನ್ನ್ವಹಮುತ್ಕ್ರಾಂತ ಉತ್ಕ್ರಾಂತೋ ಭವಿಷ್ಯಾಮಿ, ಕಸ್ಮಿನ್ವಾ ಪ್ರತಿಷ್ಠಿತೇ ಪ್ರತಿಷ್ಠಾಸ್ಯಾಮೀತಿ ಸ ಪ್ರಾಣಮಸೃಜತ' ಇತಿ ಶ್ರುತಿಃ ॥

'ಪ್ರಾಣ ಏವೈನಮನುಪ್ರವಿಶತಿ, ಪ್ರಾಣಮಿತರಾ ದೇವತಾಃ, ನ ಪ್ರಾಣಾದಪರಃ ಪರಮನುಪ್ರವಿಶತಿ । ಪ್ರಾಣ ಏವೈನಮನು ಭುಂಕ್ತೇ, ಪ್ರಾಣಮಿತರಾ ದೇವತಾಃ, ನ ಪ್ರಾಣಾದಪರಃ ಪರಮನು ಭುಂಕ್ತೇ । ಪ್ರಾಣ ಏವೈನಮನ್ವಾನಂದೀ ಭವತಿ, ಪ್ರಾಣಮಿತರಾ ದೇವತಾಃ, ನ ಪ್ರಾಣಾದಪರಃ ಪರಮನ್ವಾನಂದೀ ಭವತಿ । ತಸ್ಮಾದಾಹುಃ ಪ್ರಾಣಪದ್ಧತಿರಿತಿ ॥' ಇತಿ ಹಿರಣ್ಯನಾಭ ಶ್ರುತಿಃ ॥

ಅತಃ ಪರಿಸರಸ್ಯ ಪದ್ಧತಿರಿತಿ ವಾ ।

'ಪರಿಸರ'ನೆಂದರೆ ಮುಖ್ಯಪ್ರಾಣ. ಅವನು ಹರಿಗೆ ಜೀವಶರೀರಗಳಲ್ಲಿ ಪ್ರವೇಶ ನಿರ್ಗಮಗಳಿಗೆ ಮಾರ್ಗದಂತೆ. ಮುಂದೆ **ಹೋಗುತ್ತಾನೆ,** ಅದರಿಂದ **'ಪರಿಸರ ಪದ್ಧತಿ'** ಎನಿಸುತ್ತಾನೆ.

'ಯಾರು ಶರೀರದಿಂದ ಉತ್ಕ್ರಮಣ ಮಾಡಿದೊಡನೆ ನಾನು ಉತ್ಕ್ರಮಣ ಮಾಡುವೆನೋ, ಯಾರು ಶರೀರದೊಳಗೆ ಪ್ರವೇಶ ಮಾಡಿದೊಡನೆ ನಾನು ಪ್ರವೇಶ ಮಾಡುವೆನೋ ಆ ಪ್ರಾಣನನ್ನು ಸೃಜಿಸುವೆನೆಂದು ಆಲೋಚಿಸಿ ಶ್ರೀಹರಿ ಪ್ರಾಣನನ್ನು ಸೃಜಿಸಿದ' ಎಂದು ಪ್ರಶ್ನೋಪನಿಷತ್ತು ಹೇಳಿದೆ.

'ಪ್ರಾಣನೆ ಹರಿಯನ್ನು ಅನುಸರಿಸಿ ಅವನ ಅನುಗ್ರಹದಿಂದಲೇ ಜೀವಶರೀರವನ್ನು ಪ್ರವೇಶಿಸುತ್ತಾನೆ. ಪ್ರಾಣನನ್ನು ಅನುಸರಿಸಿ ಅವನ ಅನುಗ್ರಹದಿಂದ ಬೇರೆ ದೇವತೆಗಳೂ ಪ್ರವೇಶಿಸುತ್ತಾರೆ. ಪ್ರಾಣ ಹೊರತು ಬೇರೆ ಯಾರೂ ಹರಿಯನ್ನು ಅನುಸರಿಸಿ ಪ್ರವೇಶಿಸುವುದಿಲ್ಲ. ಪ್ರಾಣನೆ ಹರಿಯನ್ನು ಅನುಸರಿಸಿ ಶರೀರದಲ್ಲಿ ವಿಷಯವನ್ನು ಅನುಭವಿಸುತ್ತಾನೆ. ಪ್ರಾಣನನ್ನು ಅನುಸರಿಸಿ ಬೇರೆ ದೇವತೆಗಳು ವಿಷಯವನ್ನು ಅನುಭವಿಸುತ್ತಾರೆ. ಪ್ರಾಣ ಹೊರತು ಬೇರೆ ಯಾರೂ ಹರಿಯನ್ನು ಅನುಸರಿಸಿ ವಿಷಯವನ್ನು ಅನುಭವಿಸುವುದಿಲ್ಲ. ಪ್ರಾಣನೆ ಹರಿಯನ್ನು ಅನುಸರಿಸಿ ಶರೀರದಲ್ಲಿ ಆನಂದಪಡುತ್ತಾರೆ. ಪ್ರಾಣನನ್ನು ಅನುಸರಿಸಿ ಬೇರೆ ದೇವತೆಗಳು ಶರೀರದಲ್ಲಿ ಆನಂದಪಡುತ್ತಾರೆ. ಪ್ರಾಣ ಹೊರತು ಬೇರೆ ಯಾರೂ ಹರಿಯನ್ನು ಅನುಸರಿಸಿ ಶರೀರದಲ್ಲಿ ಆನಂದಪಡುವುದಿಲ್ಲ. ಆದರಿಂದ ಹರಿ ಪ್ರಾಣನಿಗೆ ಮಾರ್ಗ ಎಂದು ಜ್ಞಾನಿಗಳು ಹೇಳುತ್ತಾರೆ'—ಎಂದು ಹಿರಣ್ಯನಾಭಶ್ರುತಿ ಹೇಳಿದೆ.

ಆದರಿಂದ ಹರಿ ಪ್ರಾಣನಿಗೆ ಮಾರ್ಗ ಎಂದಾದರೂ ಅರ್ಥವನ್ನು ಗ್ರಹಿಸಬಹುದು.

ತತಃ ಹೃದಃ। ನಂದನಪಥಾ ಬ್ರಹ್ಮನಾಡೀದ್ವಾರಾ ಶಿರ ಉದಗಾದ್ ಯತ್ ಪರಮಂ ಬ್ರಹ್ಮ ತತ್ ಸಮುಪೇತ್ಯ। ಪುನರಿಹೈವ ಹೃದಾದಿಷು ಸ್ಥಿತಂ ಯತ್।

'ತತಃ' ಎಂದರೆ ಹೃದಯದಿಂದ, 'ನಂದನಪಥಾ' ಬ್ರಹ್ಮನಾಡೀ ಮಾರ್ಗದಿಂದ ಶಿರಸ್ಸಿಗೆ ಮೇಲೆ ಏರಿದ ಪರಬ್ರಹ್ಮನನ್ನು ಹೊಂದಿದ ಬಳಿಕ ಜ್ಞಾನಿ ಮೃತ್ಯುವಿನ ಬಾಯಿಯಲ್ಲಿ ಬೀಳುವುದಿಲ್ಲ. ಕಾಲಿನ ತುದಿಯಿಂದ ಶಿರದವರೆಗೆ ಬ್ರಹ್ಮಶರೀರದಲ್ಲಿ ಪ್ರಯಾಣ ಮಾಡಿ ಹರಿ ಪುನಃ 'ಇಹೈವ' ಹೃದಯದಿಂದ ಶಿರದವರೆಗಿನ ಈ ಅವಯವಗಳಲ್ಲಿ ಒಂದೊಂದು

ರೂಪದಿಂದ ಇದ್ದಾನೆ, ಅವನನ್ನು ಹೊಂದಿದ ಬಳಿಕ ಮೃತ್ಯುವಿನ ಬಾಯಿಯಲ್ಲಿ ಬೀಳುವುದಿಲ್ಲ.

ಶ್ರುತಿಗೀತೆಯ ಈ ಐದನೇ ಪದ್ಯಕ್ಕೆ ಮೂಲ ಶ್ರುತಿ ಇದು—

'ತಂ ಪ್ರಪದಾಭ್ಯಾಂ ಪ್ರಾಪದ್ಯತ ಬ್ರಹ್ಮೇಮಂ ಪುರುಷಂ। ಯತ್ಪ್ರಪದಾಭ್ಯಾಂ ಪ್ರಾಪದ್ಯತ ಬ್ರಹ್ಮೇಮಂ ಪುರುಷಂ ತಸ್ಮಾತ್ ಪ್ರಪದೇ ತಸ್ಮಾತ್ಪ್ರಪದೇ ಇತ್ಯಾಚಕ್ಷತೇ। ಶಫಾಃ ಖುರಾ ಇತ್ಯನ್ಯೇಷಾಂ ಪಶೂನಾಂ। ತದೂರ್ಧ್ವಮುದಸರ್ಪತ್। ತಾವೂರೂ ಅಭವತಾಂ। ಉರು ಗೃಣೇಹೀತ್ಯಬ್ರವೀತ್ ತದುದರಮಭವತ್। ಉರ್ವೇವ ಮೇ ಕುರ್ವಿತ್ಯಬ್ರವೀತ್। ತದುರೋऽಭವತ್। ಉದರಂ ಬ್ರಹ್ಮೇತಿ ಶಾರ್ಕರಾಕ್ಷ್ಯ ಉಪಾಸತೇ, ಹೃದಯಂ ಬ್ರಹ್ಮೇತ್ಯಾರುಣಯೋ, ಬ್ರಹ್ಮಾ ಹೈವ ತಾಇ। ಊರ್ಧ್ವಂ ತ್ವೇವೋದಸರ್ಪತ್। ತಚ್ಛಿರೋऽಶ್ರಯತ। ಯಚ್ಛಿರೋऽಶ್ರಯತ ತಚ್ಛಿರೋऽಭವತ್ ತಚ್ಛಿರಸಃ ಶಿರಸ್ತ್ವಂ। ತಾ ಏತಾಃ ಶೀರ್ಷನ್ ಶ್ರಿಯಃ ಶ್ರಿತಾಶ್ಚಕ್ಷುಃ ಶ್ರೋತ್ರಂ ಮನೋ ವಾಕ್ ಪ್ರಾಣಃ। ಶ್ರಯಂತೇऽಸ್ಮಿನ್ ಶ್ರಿಯೋ ಯ ಏವಮೇತಚ್ಛಿರಸಃ ಶಿರಸ್ತ್ವಂ ವೇದ' ಇತ್ಯಾದ್ಯಾ ಶ್ರುತಿಃ ॥

ಪರಬ್ರಹ್ಮ ವಾಸುದೇವ ಪುರುಷಾಕಾರದ ಚತುರ್ಮುಖಶರೀರವನ್ನು ಕಾಲಿನ ತುದಿಯಿಂದ ಪ್ರವೇಶಿಸಿದ. ಕಾಲಿನ ತುದಿಯಿಂದ ಪ್ರವೇಶಿಸಿದ್ದರಿಂದ ಪುರುಷನ ಕಾಲಿನ ತುದಿಗೆ ಪ್ರಪದ ಎಂದು ಹೆಸರು. ಬೇರೆ ಪಶುಗಳ ಕಾಲಿನ ತುದಿಯನ್ನು ಗೊರಸು ಎಂದು ಮುಂತಾಗಿಯೇ ಕರೆಯುತ್ತಾರೆ. ಅನಂತರ ವಾಸುದೇವ ತೊಡೆಗಳ ವರೆಗೆ ಬಹಳ ಮೇಲೇರಿದ. ಅದರಿಂದ ತೊಡೆಗಳು ಊರು ಎನಿಸಿದುವು. ಬಳಿಕ ವಾಸುದೇವ ಇನ್ನೂ ಮೇಲೇರಿ ಹೊಟ್ಟೆಯಲ್ಲಿ ನಿಂತು ಜೊತೆಗೆ ಬಂದಿದ್ದ ವಾಯುವಿಗೆ ಇಲ್ಲಿ ನೀನು ಚೆನ್ನಾಗಿ ಉಣ್ಣು, ಚೆನ್ನಾಗಿ ಸ್ತುತಿಸು ಎಂದನು. ವಾಯು ಚೆನ್ನಾಗಿ ಉಂಡಿದ್ದರಿಂದ ಚೆನ್ನಾಗಿ ಸ್ತುತಿಸಿದ್ದರಿಂದ ಹೊಟ್ಟೆ ಉದರ ಎನಿಸಿತು. ವಾಸುದೇವನೂ ಉದರನೆನಿಸಿದ. ಅವನು ಇನ್ನೂ ಮೇಲೇರಿ ಎದೆಯಲ್ಲಿ ನಿಂತು ಇಲ್ಲಿ ನನಗೆ ವಿಶಾಲವಾದ ವಾಸಸ್ಥಾನವನ್ನು ಮಾಡಿಕೊಡು ಎಂದ. ಎದೆ ವಿಶಾಲವಾದ ವಾಸಸ್ಥಾನವಾದ್ದರಿಂದ ಉರಸ್ ಎನಿಸಿತು. ಶಾರ್ಕರಾಕ್ಷ್ಯ ಮುನಿಗಳು

ಉದರದಲ್ಲಿ ಉದರನಾಮಕನಾಗಿರುವ ವಾಸುದೇವನನ್ನು ಪರಬ್ರಹ್ಮನೆಂದು ಉಪಾಸನ ಮಾಡುವರು. ಆರುಣಿ ಮುನಿಗಳು ಹೃದಯದಲ್ಲಿ ಹೃದಯನಾಮಕನಾಗಿರುವ ವಾಸುದೇವನನ್ನು ಪರಬ್ರಹ್ಮನೆಂದು ಉಪಾಸನ ಮಾಡುವರು. ಆ ಎರಡೂ ರೂಪಗಳೂ ಸಾಕ್ಷಾತ್ ಪರಬ್ರಹ್ಮವೆ. ಅವುಗಳಲ್ಲಿ ಪರಸ್ಪರ ಏನೂ ವೈಲಕ್ಷಣ್ಯವಿಲ್ಲ. ಬಳಿಕ ವಾಸುದೇವ ವಾಯುವಿನೊಂದಿಗೆ ಇನ್ನೂ ಮೇಲೇರಿ ತಲೆಯನ್ನು ಆಶ್ರಯಿಸಿದ. ತಲೆಯನ್ನು ಆಶ್ರಯಿಸಿದ ಪ್ರಯುಕ್ತ ತಲೆ ಶಿರಸ್ಸೆನಿಸಿತು. ತಲೆ ಶಿರಸ್ಸೆನಿಸಲು ಅದೇ ಕಾರಣ. ಚಕ್ಷು ಶ್ರೋತ್ರ ಮನ ವಾಕ್ ಪ್ರಾಣ ಮೊದಲಾದ ಇಂದ್ರಿಯ ದೇವತೆಗಳು ಶಿರವನ್ನು ಆಶ್ರಯಿಸಿದ್ದು ಅಲ್ಲಿ ಪರಬ್ರಹ್ಮನನ್ನು ಉಪಾಸನೆ ಮಾಡುತ್ತಾರೆ. ಆದರಿಂದಲೂ ತಲೆಗೆ ಶಿರಸ್ಸೆಂದು ಹೆಸರು. ಹೀಗೆ ತಲೆ ಶಿರಸ್ಸೆನಿಸಲು ಕಾರಣವನ್ನು ಯಾರು ತಿಳಿಯುವನೋ ಅವನಲ್ಲಿ ಶ್ರೀ ಅಂದರೆ ಐಹಿಕ ಆಮುಷ್ಮಿಕ ಸಕಲ ಸಂಪತ್ತು ನೆಲೆಸುತ್ತದೆ.' ಎಂದು ಮುಂತಾಗಿ ಐತರೇಯೋಪನಿಷತ್ತು ಹೇಳಿದೆ.

❖ ❖ ❖

ಶ್ರುತಿಗೀತೆಯಲ್ಲಿ ಆರನೇ ಪದ್ಯ—

ಸ್ವಕೃತವಿಚಿತ್ರಯೋನಿಷು ವಿಶನ್ನಿವ ಹೇತುತಯಾ
ಭರತಮತಶ್ಚಕಾಸ್ಸ್ಯನಲವತ್ ಸ್ವಕೃತಾನುಕೃತಿಃ ।
ಅಪಿ ವಿತಥಾಸ್ವಮೂಷ್ವವಿತಥೋರುವಿಧಂ ಮನಸಿ
ನಿಕಟಧಿಯೋ ನಯಂತ್ಯಭಿವಿಪತ್ಯ ತವ ॥ ೨೦ ॥

ಶ್ರೀಹರಿ ನೀನೇ ನಿರ್ಮಿಸಿರುವ ಜೀವಿಗಳ ನಾನಾ ಬಗೆಯ ಶರೀರದಲ್ಲಿ ನೀನಿದ್ದು ಕಟ್ಟಿಗೆಯಲ್ಲಿ ಬೆಂಕಿ ಕಟ್ಟಿಗೆಯ ಹಾಗೇ ವರ್ತಿಸುವಂತೆ ನೀನು ಜೀವಿಗಳಲ್ಲಿ ಜೀವಿಗಳಂತೇ ವರ್ತಿಸುವೆ. ಅವರ ಹಾಗೇ ಸುಖಿಯಂತೆ ದುಃಖಿಯಂತೆ ತೋರಿಕೊಳ್ಳುವೆ. ಆದರೆ ನೀನು ಸರ್ವಕರ್ತನೆಂದು ಮುಖ್ಯಪ್ರಾಣನಿಗೆ ಗೊತ್ತು. ಪ್ರತಿಕ್ಷಣದಲ್ಲಿ ರೂಪಾಂತರ ಹೊಂದುವ ಶರೀರಗಳಲ್ಲಿ ನೀನು ಮಾತ್ರ ಏಕ ಪ್ರಕಾರನಾಗಿಯೇ ಇದ್ದು ನಾನಾ ರೂಪನಾಗಿರುವೆ. ಅಂಥ ನಿನ್ನ ಸಾಮೀಪ್ಯವನ್ನು ಬಯಸಿ ಜ್ಞಾನಿಗಳು ವಿಚಾರಮಾಡಿ ಮನಸ್ಸಿನಲ್ಲಿ ನಿನ್ನನ್ನು ತಂದಿಟ್ಟುಕೊಳ್ಳುತ್ತಾರೆ.

ಸ್ವಕೃತ ವಿಚಿತ್ರ ಯೋನಿಷು

ನೀನೇ ನಿರ್ಮಿಸಿರುವ ಜೀವಿಗಳ ನಾನಾ ಬಗೆಯ ಶರೀರಗಳಲ್ಲಿದ್ದು.

ಅನಲವತ್ ಸ್ವಕೃತಾನುಕೃತಿಃ

ಬೆಂಕಿ ತಾನೇ ನಿರ್ಮಿಸಿರುವ ಕಟ್ಟಿಗೆಯಲ್ಲಿದ್ದು ಕಟ್ಟಿಗೆಯಂತೆಯೇ ವರ್ತಿಸುತ್ತದೆ. ಹಾಗೇ ನೀನೂ ಜೀವಿಗಳಲ್ಲಿ ಜೀವಿಗಳಂತೆಯೆ ವರ್ತಿಸುವಿ. ಕಟ್ಟಿಗೆ ಪಾಂಚಭೌತಿಕವಾದ್ದರಿಂದ ಪಂಚಭೂತಗಳಲ್ಲಿ ಒಂದಾದ ಅಗ್ನಿಯಿಂದ ಕಟ್ಟಿಗೆ ಹುಟ್ಟಿರುತ್ತದೆ. ಅದರೊಳಗೆ ಅಗ್ನಿ ಇದ್ದು ಅದರಂತೇ ವರ್ತಿಸುತ್ತದೆ. ಅದು ಚಲಿಸಿದರೆ ಚಲಿಸುತ್ತದೆ. ನಿಂತರೆ ನಿಂತಿರುತ್ತದೆ. ಹಾಗೇ ಪರಮಾತ್ಮ ತಾನು ನಿರ್ಮಿಸಿದ ಜೀವರ ಶರೀರಗಳಲ್ಲಿದ್ದು ಜೀವರಂತೆಯೇ ವರ್ತಿಸುತ್ತಾನೆ. ಅವರಂತೆಯೇ ಸುಖದುಃಖಗಳು ಬಂದಾಗ ಸುಖಿಯಂತೆ ದುಃಖಿಯಂತೆ ತೋರಿಕೊಳ್ಳುತ್ತಾನೆ.

ವಿಶನ್ನಿವ ಚಕಾಸ್ಸಿ

ಶರೀರದಲ್ಲಿ ಸುಖದುಃಖ ಉಣ್ಣುವುದಕ್ಕೂ ಕರ್ಮ ಮಾಡುವುದಕ್ಕೂ ಜೀವ ಪ್ರವೇಶಿಸಿ ಇರುತ್ತಾನೆ. 'ವಿಶತಿ' ಪ್ರವೇಶಿಸುವುದರಿಂದ 'ವಿಶನ್' ಎಂದರೆ ಜೀವ. 'ವಿಶನ್ ಇವ' ಜೀವನಂತೆ ಅಜ್ಞದೃಷ್ಟಿಗೆ ತೋರುವಿ. ಆದರಿಂದ ಅಜ್ಞರು ತಮಗಿಂತ ಬೇರೆ ಪರಮಾತ್ಮನಿಲ್ಲ ಎಂದು ಭ್ರಮಿಸುತ್ತಾರೆ.

ಹೇತುತಯಾ ಭರತಮತಃ

'ಭರತ' ಎಂದರೆ ಮುಖ್ಯಪ್ರಾಣ. 'ಭ' ಪ್ರಕಾಶಸ್ವರೂಪನಾದ ಹರಿಯಲ್ಲಿ 'ರತ' ಆಸಕ್ತನಾದವನು ಅವನೇ ನಿನ್ನನ್ನು ಸರ್ವಕ್ಕೂ ಹೇತುವೆಂದು ತಿಳಿಯಬಲ್ಲ. ಅವನಿಂದ ನೀನು ಹಾಗೆ 'ಮತಃ' ತಿಳಿಯಲ್ಪಟ್ಟಿರುವೆ.

ವಿತಥಾಸ್ವಪಿ ಅಮೂಷು ಅವಿತಥೋರುವಿಧಂ

ಪಾರ್ಥಿವ ಶರೀರಗಳು ಈಗಿರುವಂತೆ ಮರುಕ್ಷಣದಲ್ಲಿ ಇರುವುದಿಲ್ಲ. ರೂಪಾಂತರ ಹೊಂದಿರುತ್ತವೆ. ಆದರಿಂದ 'ವಿ-ತಥ'ವಾಗಿವೆ. ಅವುಗಳಲ್ಲಿರುವ ನೀನು ಮಾತ್ರ 'ಅ-ವಿತಥ' ರೂಪಾಂತರ ಹೊಂದದವನು. ಮತ್ತು ಅನಂತ ಶರೀರಗಳಲ್ಲಿ 'ಉರು-ವಿಧ' ಅನಂತರೂಪನೂ ಆಗಿರುವಿ.

ತವ ನಿಕಟಧಿಯಃ ಅಭಿವಿಪತ್ಯ ಮನಸಿ ನಯಂತಿ

ನಿನ್ನ ಸಾಮೀಪ್ಯವನ್ನು ಬಯಸುವವರು, ಸಾಮೀಪ್ಯ [illegible] ಮುಂತಾದ ಮೋಕ್ಷವನ್ನು ಬಯಸುವವರು 'ನಿಕಟಧಿಯಃ [illegible] [illegible]

ಅವರು 'ಅಭಿವಿಪತ್ಯ' ನಿನ್ನ ಬಗ್ಗೆ ಚೆನ್ನಾಗಿ ವಿಚಾರಮಂಥನ ಮಾಡಿ ಮನಸಿನಲ್ಲಿ ನಿನ್ನನ್ನು ತಂದುಕೊಳ್ಳುತ್ತಾರೆ ಧ್ಯಾನಮಾಡುತ್ತಾರೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಶ್ಲೋಕ ಪಾಠ—

ಸ್ವಕೃತವಿಚಿತ್ರಯೋನಿಷು ವಿಶನ್ನಿವ ಹೇತುತಯಾ
ತರತಮಶ್ಚಕಾಸ್ಸ್ಯನಲವತ್ ಸ್ವಕೃತಾನುಕೃತಿಃ ।
ಅಥ ವಿತಥಾಸ್ವಮೂಷ್ವವಿತಥಂ ತವ ಧಾಮ ಸಮಂ
ವಿರಜಧಿಯೋಽನ್ವಯಂತ್ಯಭಿವಿಪನ್ಯವ ಏಕರಸಂ ॥

'ನೀನೇ ನಿರ್ಮಿಸಿರುವ ದೇಹಾದಿ ನಾನಾ ವಸ್ತುಗಳಲ್ಲಿ ನೀನು ಉಪಾದಾನ ಕಾರಣ ರೂಪದಿಂದ ಇದ್ದು ಪ್ರವೇಶಿಸಿದಂತಿರುವೆ. ಅಗ್ನಿ ತಾರತಮ್ಯರಹಿತವಾಗಿದ್ದರೂ ಕಾಷ್ಠದ ಗಾತ್ರ ವೈಲಕ್ಷಣ್ಯದಿಂದ ವಿಲಕ್ಷಣವಾಗಿ ಕಾಣುವಂತೆ ನೀನೂ ವಸ್ತುವೈಲಕ್ಷಣ್ಯದಿಂದ ವಿಲಕ್ಷಣನಾಗಿ ಕಾಣಿಸಿಕೊಳ್ಳುವೆ. ಮಿಥ್ಯೆಯಾದ ವಸ್ತುಗಳಲ್ಲಿ ಸತ್ಯನಾಗಿ ಹಾಸುಹೊಕ್ಕಾಗಿ ಇರುವ ನಿನ್ನನ್ನು ನಿರ್ಮಲ ಬುದ್ಧಿ ಉಳ್ಳವರು ತಿಳಿಯುತ್ತಾರೆ' ಎಂದು [೧]ಶ್ರೀಧರ ವ್ಯಾಖ್ಯಾನದಲ್ಲಿ ಹೇಳಿದೆ.

ಇಲ್ಲಿ 'ವಿಶನ್ನಿವ ಹೇತುತಯಾ' ಎಂದರೆ ಉಪಾದಾನ ಕಾರಣವಾಗಿರುವುದರಿಂದ ಕಾರ್ಯದಲ್ಲಿ ಮೊದಲೇ ಇದ್ದ ಭಗವಂತ ಗೂಡಿನೊಳಕ್ಕೆ ಹಕ್ಕಿ ಪ್ರವೇಶಿಸುವಂತೆ ಪ್ರವೇಶಿಸುವುದು ಅಸಂಭವವಾದ್ದರಿಂದ 'ಪ್ರವೇಶಿಸಿದಂತೆ' ಇದ್ದಾನೆ ಹೊರತು ಪ್ರವೇಶಿಸಿಲ್ಲ ಎಂದು ವಿವರಣೆ ನೀಡಿದ್ದಾರೆ. ಆದರೆ ಅದ್ವೈತಮತದಲ್ಲಿ ಕಾರ್ಯಕ್ಕೆ ಭಗವಂತ ಕರ್ತ, ನಿಮಿತ್ತನೂ ಆಗಿದ್ದಾನೆ ಹೊರತು ಕೇವಲ ಉಪಾದಾನನಲ್ಲ. ಅದರಿಂದ ತಾನು ಕಟ್ಟಿಸಿದ ಮನೆಯನ್ನು ತಾನು ಪ್ರವೇಶಿಸುವಂತೆ ಭಗವಂತ 'ಹೇತುತಯಾ' ಶರೀರದ ಚಟುವಟಿಕೆಗಳಿಗೆ ನಿಮಿತ್ತ ಕಾರಣನಾಗಿ ಶರೀರದಲ್ಲಿ ಪ್ರವೇಶಿಸುತ್ತಾನೆ. ಪ್ರವೇಶ ಅಸಂಭವವೆನ್ನುವಂತಿಲ್ಲ. ಇವ ಶಬ್ದವೇಕೆ?

---

೧. ಸ್ವಯಂ ಕೃತಾಸು ವಿಚಿತ್ರಾಸು ಉಚ್ಚನೀಚಮಧ್ಯಮಾಸು ಯೋನಿಷ್ವಭಿವ್ಯಕ್ತಿ ಸ್ಥಾನೇಷು ಕಾರ್ಯೇಷು ದೇಹಾದಿಷು ಹೇತುತಯೋಪಾದಾನತಯಾ ಪ್ರಾಗೇವ ವಿದ್ಯಮಾನತ್ವೇನ ಮುಖ್ಯಪ್ರವೇಶಾಸಂಭವಾತ್ ವಿಶನ್ನಿವ ವರ್ತಮಾನಸ್ತರತಮತೋ ನ್ಯೂನಾಧಿಕ ಭಾವೇನ ಚಕಾಸ್ಸಿ ಅವಭಾಸಸೇ। ಸ್ವಕೃತಾ ಯೋನೀರನುಕರೋತೀತಿ ಸ್ವಕೃತಾನುಕೃತಿಃ ಅನಲವತ್ ಅಗ್ನಿರ್ಯಥಾ ತಾರತಮ್ಯಹೀನೋಽಪಿ ಕಾಷ್ಠಾನುಸಾರೇಣ ನ್ಯೂನಾಧಿಕ ಇವ ತಥಾ । ಅಥಾತೋ ವಿತಥಾಸು ಮಿಥ್ಯಾಭೂತಾಸ್ವಮೂಷು ಯೋನಿಷ್ವವಿತಥಂ ಸತ್ಯಂ ತವ ಧಾಮ ಸ್ವರೂಪಂ ವಿರಜಧಿಯೋ ನಿರ್ಮಲಮತಯೋಽನ್ವಯಂತಿ ಜಾನಂತಿ। -ಶ್ರೀಧರಃ।

ನಿಮಿತ್ತಕಾರಣನಾದ ಭಗವಂತ ಹೀಗೆ ಅಂತರ್ಯಾಮಿಯಾಗಿ ಪ್ರವೇಶಿಸುವುದನ್ನು ಭಾಗವತ ಸ್ಪಷ್ಟವಾಗಿ ಹಿಂದೆ ಅನೇಕಕಡೆ ಹೇಳಿದೆ. ಉದಾ:

ಇತಿ ತಾಸಾಂ ಸ್ವಶಕ್ತೀನಾಮಸತೀನಾಂ ಸಮೇತ್ಯ ಸಃ ।
ಪ್ರಸುಪ್ತಲೋಕತಂತ್ರಾಣಾಂ ನಿಶಮ್ಯ ಗಿರಮೀಶ್ವರಃ ।
ಕಾಲಸಂಜ್ಞಾಂ ತದಾ ದೇವೀಂ ಬಿಭ್ರಚ್ಛಕ್ತಿಮುರುಕ್ರಮಃ ।
ತ್ರಯೋವಿಂಶತಿ ತತ್ವಾನಾಂ ಗಣಂ ಯುಗಪದಾವಿಶತ್ ॥

(ಭಾಗ. ೩.೬.೧,೨)

'ಮಹತ್ತತ್ತ್ವಾದಿ ತ್ರಯೋವಿಂಶತಿ ತತ್ವಗಳು ಜೊತೆಗೆ ಸೇರದೆ ಬೇರೆಯಾಗಿದ್ದು ಬ್ರಹ್ಮಾಂಡಸೃಷ್ಟಿಕಾರ್ಯದಲ್ಲಿ ಅಸಮರ್ಥವಾಗಿದ್ದರಿಂದ ತತ್ವದೇವತೆಗಳ ಪ್ರಾರ್ಥನೆಯನ್ನು ಆಲಿಸಿ ಶ್ರೀಹರಿ ಆ ತತ್ವಗಳಲ್ಲಿ ಪ್ರವೇಶಿಸಿದ.' ಹೀಗಾಗಿ ಶ್ರೀಧರ ವ್ಯಾಖ್ಯಾನಪ್ರಕಾರ, ಭಗವಂತನನ್ನು ಕೇವಲ ಉಪಾದಾನಕಾರಣವೆಂದಿಟ್ಟುಕೊಂಡು ಕಾರ್ಯಗಳಲ್ಲಿ ಅವನ ಪ್ರವೇಶ ಅಸಂಭವವಾದ್ದರಿಂದ 'ವಿಶನ್ನಿವ' ಎಂದು ಇವ ಶಬ್ದವನ್ನು ಭಾಗವತ ಪ್ರಯೋಗಿಸಿದೆ ಎನ್ನುವುದು ಭಾಗವತಕ್ಕೇ ವಿರುದ್ಧವಾಗುವುದು.

'ಅಗ್ನಿ ತಾರತಮ್ಯರಹಿತವಾದರೂ ಕಾಷ್ಠಗಳ ವೈಲಕ್ಷಣ್ಯದಿಂದ ವಿಲಕ್ಷಣವಾಗಿ ಕಾಣಿಸಿಕೊಳ್ಳುತ್ತದೆ' ಎನ್ನುವುದೂ ಸರಿಯಲ್ಲ. ಅಗ್ನಿಯಲ್ಲಿ ಕಾಷ್ಠವೈಲಕ್ಷಣ್ಯದಿಂದ ವೈಲಕ್ಷಣ್ಯವಿದ್ದೇ ಇದೆ. ಇಲ್ಲದ್ದು ಕಾಣಿಸಿಕೊಳ್ಳುವುದಿಲ್ಲ. ಘಟಾಕಾಶ ಮಠಾಕಾಶಾದಿಗಳಲ್ಲಿ ವೈಲಕ್ಷಣ್ಯ ಘಟಮಠಾದ್ಯುಪಾಧಿಪ್ರಯುಕ್ತ ಕಾಣಿಸಿಕೊಳ್ಳುವುದು ಎಂದು ಹೇಳಿದ್ದರೆ ದೃಷ್ಟಾಂತ ಸರಿ ಹೊಂದುತ್ತಿತ್ತು. ಅಗ್ನಿದೃಷ್ಟಾಂತ ಸರಿಯಲ್ಲ.

ವಸ್ತುವೈಲಕ್ಷಣ್ಯದಿಂದ ಭಗವಂತನಲ್ಲಿ ವೈಲಕ್ಷಣ್ಯ ಕಾಣುತ್ತದೆ ಎನ್ನುವುದೂ ಭಗವಂತನು ಉಪಾದಾನ ಎನ್ನುವ ಪಕ್ಷದಲ್ಲಿ ಕೂಡುವುದಿಲ್ಲ. ಉಪಾದಾನ ವೈಲಕ್ಷಣ್ಯದಿಂದ ಕಾರ್ಯವೈಲಕ್ಷಣ್ಯವೇ ಹೊರತು, ಕಾರ್ಯವೈಲಕ್ಷಣ್ಯದಿಂದ ಉಪಾದಾನದಲ್ಲಿ ವೈಲಕ್ಷಣ್ಯ ಎನ್ನುವುದು ತಿರುವುಮುರುವು.

'ಉಪಾದಾನವೆಂದರೆ ಅದ್ವೈತದಲ್ಲಿ ಬ್ರಹ್ಮ ಜಗತ್ತಿಗೆ ಪರಿಣಾಮಿ ಉಪಾದಾನವಲ್ಲ, ವಿವರ್ತೋಪಾದಾನ' ಎಂದರೂ ಫಲವಿಲ್ಲ. ವಿವರ್ತೋಪಾದಾನ **ವೈಲಕ್ಷಣ್ಯ**ದಿಂದ ಕಾರ್ಯ ವೈಲಕ್ಷಣ್ಯ ಕಂಡಿದೆ. ಸಣ್ಣ ಹಗ್ಗ ಸಣ್ಣ ಹಾವಾಗಿ, ದೊಡ್ಡ ಹಗ್ಗ **ದೊಡ್ಡ** ಹಾವಾಗಿ ಕಾಣಬಹುದು ಹೊರತು ಇದನ್ನು ತಿರುವು ಮುರುವು **ಮಾಡುವಂತಿಲ್ಲ**.

ವಸ್ತುತಃ 'ದೇಹಾತ್ಮೈಕ್ಯಭ್ರಮದಲ್ಲಿ ದೇಹಗತ ವೈಲಕ್ಷಣ್ಯ **ಆತ್ಮನಲ್ಲಿ ಕಾಣುತ್ತದೆ'** **ಎನ್ನುವುದೇ ತಪ್ಪು**. ಅಂಥ ಭ್ರಮವೇ ಯಾರಿಗೂ ಇಲ್ಲ.

'ಭರತಮತಶ್ಚಕಾಸ್ಸಿ' ಎಂದು ಶ್ರೀಮದಾಚಾರ್ಯರು ಹಿಡಿದಿರುವ ಪ್ರಾಚೀನಪಾಠವನ್ನು ಉದ್ದೇಶಪೂರ್ವಕವಾಗಿ ಮೊದಲನೆ ಅಕ್ಷರವಾದ ಭಕಾರವನ್ನು ತೆಗೆದು 'ರತ' 'ಮತ' ಈ ಎರಡನ್ನೂ ತಿರುವುಮುರುವು ಮಾಡಿ 'ತರತಮ' ಎಂದು ವ್ಯತ್ಯಾಸ ಮಾಡಿದಂತೆ ಕಾಣುತ್ತದೆ. ಇದರಿಂದ ಶ್ಲೋಕದ ಛಂದಸ್ಸಿಗೆ ಭಂಗ ಬಂದಿದೆ—

ಸ್ವಕೃತ, ವಿಚಿತ್ರ, ಯೋನಿಷು, ವಿಶನ್ನಿ, ವಹೇತು, ತ, ಯಾ

ಎಂದು **'ನ ಜ ಭ ಜ ಜ' ಎಂದು** ಐದು ಗಣಗಳು ಮತ್ತು ಒಂದು ಲಘು ಒಂದು ಗುರು ಬಂದರೆ **ನರ್ಕುಟಕ ಛಂದಸ್ಸಾಗುವುದು.**

'ತನ್ನರ್ಕುಟಕಮಾಖ್ಯಾತಂ ನಜ್‌ಭೈರ್ಜಜಲಗೈರ್ಯುತಂ।' ಎಂದು ಅದ ಲಕ್ಷಣ.

ಭರತ, ಮತಶ್ಚ ಕಾಸ್ಸ್ಯನ, ಲವತ್ಸ್ವ, ಕೃತಾನು, ಕೃ, ತಿಃ ಎಂಬಲ್ಲಿ ಸ್ಪಷ್ಟವಾ ನರ್ಕುಟಕಲಕ್ಷಣ ಕಾಣುತ್ತದೆ.

ತರತ, ಮಶ್ಚಕಾ, ಸ್ಸ್ಯನಲ, ವತ್ಸ್ವಕೃ, ತಾನುಕೃ, ತಿಃ ಎಂಬಲ್ಲಿ 'ನ ರ ನ ಭ ಭ' **ಎಂಬ ಐದು** ಗಣಗಳೂ, **ಕೊನೆಯಲ್ಲಿ** ಒಂದು ಗುರು ಮಾತ್ರವೂ ಬರುತ್ತವೆ ಇದು **ನರ್ಕುಟಕವೇ ಅಲ್ಲ**

'**ಛಂದಸ್ತುಲ್ಯವಾದ್ದರಿಂದ** ಛಂದೋಭಂಗ ಅಲ್ಲಲ್ಲಿ ಬರುತ್ತದೆ. ಅದು '**ಸಹ್ಯ**'**ವೆಂದೂ** ಹೇಳಬಹುದು. ಆದರೆ ಪ್ರಾಚೀನಪಾಠದಲ್ಲಿ ಛಂದೋಭಂಗ **ವಿಲ್ಲದಿರುವುದು** ಗಮನಾರ್ಹವಾಗಿದೆ.

ವಿಚಿತ್ರಯೋನಿಷು ವಿಶನ್ ಜೀವಃ। ತದ್ವದಜ್ಞಾನಾಂ ಚಕಾಸ್ಸಿ। ಅನಲೋ ಯಥಾ ಸ್ವಕೃತಂ ದಾರ್ವಾದಿ, ತದಪನಯನೇ ಗಚ್ಛನ್ ತತ್‌ಸ್ಥಾಪನೇ ತಿಷ್ಠನ್ನನುವರ್ತತೇ, ಏವಮೇವ ಸ್ವಕೃತ ಶರೀರಾದ್ಯನುವರ್ತಸೇ ತದ್ಗತಃ ಸನ್ ।

ಭರತಮತೋ ವಾಯುಜ್ಞಾತಃ ।

ಅನ್ಯಥಾಭವಂತೀಷ್ವಪಿ ಯೋನಿಷು ಅನನ್ಯಥಾಭೂತ್ವೈವ ಬಹುವಿಧಂ ತಿಷ್ಠಂತಂ ಭವಂತಂ ತ್ವತ್‌ಸಮೀಪಸ್ಥಬುದ್ಧಯೋ ಮಹಾಂತಸ್ತವಾಭಿಪತ್ಯ ಮನಸಾಽಭಿಗಮ್ಯ ಮನಸಿ ತ್ವಾಂ ನಯಂತಿ ॥

ನಾನಾ ಬಗೆಯ ಶರೀರಗಳಲ್ಲಿ, ಕರ್ಮಭೋಗಕ್ಕಾಗಿ ಪ್ರವೇಶಿಸುವವನಾದ್ದರಿಂದ 'ವಿಶನ್' ಎಂದರೆ ಜೀವ. ಅಜ್ಞಾನಿಗಳಿಗೆ ನೀನು ಜೀವನಂತೆ ಕಾಣಿಸಿಕೊಳ್ಳುವೆ. ಏಕೆಂದರೆ, ಬೆಂಕಿ ತಾನು ಹುಟ್ಟುಹಾಕಿರುವ ಕಟ್ಟಿಗೆ ಮುಂತಾದುವನ್ನು ಅನುಕರಣ ಮಾಡುತ್ತದೆ, ಕಟ್ಟಿಗೆ ಮುಂತಾದುವನ್ನು ದೂರ ಸರಿಸಿದರೆ ಅದರೊಳಗಿರುವ ಬೆಂಕಿಯೂ ದೂರ ಸರಿಯುತ್ತದೆ. ಅವನ್ನು ತಂದು ಇರಿಸಿದರೆ ಬೆಂಕಿ ತಾನೂ ಬಂದು ಇರುತ್ತದೆ. ಹಾಗೆಯೇ ನೀನೂ ನೀನೆ ಸೃಷ್ಟಿಮಾಡಿರುವ ಶರೀರಾದಿಗಳನ್ನು ಅವುಗಳೊಳಗಿದ್ದು ಅನುಕರಿಸುವೆ. 'ಭರತಮತಃ' ಎಂದರೆ ವಾಯುವಿನಿಂದ ತಿಳಿಯಲ್ಪಟ್ಟವನು, ಹರಿ. ಕ್ಷಣಕ್ಷಣಕ್ಕೆ ರೂಪಾಂತರ ಹೊಂದುವ ಶರೀರಗಳಲ್ಲಿ ವ್ಯತ್ಯಾಸ ಹೊಂದದೆಯೇ ನಾನಾ ರೂಪನಾಗಿ ಇರುವ ನಿನ್ನನ್ನು, ನಿನ್ನ ಸಾಮೀಪ್ಯಾದಿ ಮೋಕ್ಷಾರ್ಥಿಗಳಾದ ಮಹಾತ್ಮರು ನಿನ್ನ ಸ್ವರೂಪವನ್ನು ವಿಚಾರಮಾಡಿ ತಿಳಿದು, ಮನಸ್ಸಿನಲ್ಲಿ ತಂದುಕೊಳ್ಳುತ್ತಾರೆ, ಧ್ಯಾನಿಸುತ್ತಾರೆ.

ರತತ್ವಾದ್ ಭಾತ್ಮಕೇ ವಿಷ್ಣಾವಥವಾऽಪಿ ಜಗದ್ಭೃತೇಃ ।
ಭರತೋ ವಾಯುರುದ್ದಿಷ್ಟೋ ಭಾರತೀ ತತ್ ಸರಸ್ವತೀ ।
ಇತಿ ನಾಮಸಂಹಿತಾಯಾಂ ॥

ಯೋನಿವೇಶ್ಯಾಹ್ವಯೋ ಜೀವಸ್ತ್ವಜ್ಞಾನಾಂ ತದ್ವದೇವ ತು ।
ಪ್ರಕಾಶತೇ ಪರೋ ದೇವಸ್ತೇನ ಯಾಂತ್ಯಧರಂ ತಮಃ ॥
ಸರ್ವಹೇತುತಯೈವೇಶಂ ಪ್ರಾಜ್ಞೋ ಜಾನಾತಿ ತತ್ವತಃ ।
ತೇನ ಚಾಸೌ ಪರೋ ದೇವಸ್ತತ್ಪರಂ ಯಾತಿ ಕೇಶವಂ ।
ಇಂಧನಾನಯನೇ ತ್ವಗ್ನಿರ್ಯಥೈವಾನೀಯತೇ ಸಹ ।
ಏವಂ ದೇಹಗತೋ ವಿಷ್ಣುಃ ಸಹ ಗಚ್ಛೇನ್ನಿಜೇಚ್ಛಯಾ ।
ಅಶಾಶ್ವತೇಷು ದೇಹೇಷು ಶಾಶ್ವತಂ ಬಹುಧಾ ಸ್ಥಿತಂ ।
ನಿಚಾಯ್ಯ ಮನಸಾ ಸಂತೋ ಜಾನಂತಿ ನಿಕಟೇಚ್ಛವಃ ॥
ಇತಿ ತಂತ್ರಭಾಗವತೇ ॥

'ಜ್ಞಾನರೂಪನಾದ ವಿಷ್ಣುವಿನಲ್ಲಿ ಆಸಕ್ತನಾದ್ದರಿಂದ ಅಥವಾ ಜಗತ್ತನ್ನು ಪೋಷಿಸುವುದರಿಂದ ಮುಖ್ಯಪ್ರಾಣ ಭರತನೆನಿಸುತ್ತಾನೆ. ಅವನ ಪತ್ನಿ ಭಾರತಿ ಎನಿಸುತ್ತಾಳೆ' ಎಂದು ನಾಮಸಂಹಿತೆಯಲ್ಲಿ ಉಕ್ತವಾಗಿದೆ.

ಶರೀರದಲ್ಲಿ ಕರ್ಮಭೋಗಕ್ಕಾಗಿ ಪ್ರವೇಶಮಾಡಲು ಅರ್ಹನಾದ್ದರಿಂದ ಜೀವನು 'ಯೋನಿವೇಶ್ಯ' 'ಯೋನಿಷು ವಿಶನ್' ಎಂದು ಕರೆಸಿಕೊಳ್ಳುತ್ತಾನೆ. ಅಜ್ಞರಿಗೆ ದೇವೋತ್ತಮನಾದ ಶ್ರೀಹರಿ ಅಂಥ ಜೀವನಂತೆ ಭಾಸನಾಗುತ್ತಾನೆ. ಅದರಿಂದ ಅವರು ತಮಸ್ಸಿನಲ್ಲಿ ಬೀಳುತ್ತಾರೆ. ಆದರೆ ಮುಖ್ಯಪ್ರಾಣ ಶ್ರೀಹರಿಯನ್ನು ಸರ್ವಕರ್ತನೆಂದು ಯಥಾರ್ಥವಾಗಿ ತಿಳಿದಿದ್ದಾನೆ. ಅದರಿಂದ ದೇವೋತ್ತಮನಾದ ಅವನು ಅವನಿಗಿಂತಲೂ ಉತ್ತಮನಾದ ಶ್ರೀಹರಿಯನ್ನು ಹೊಂದುತ್ತಾನೆ. ಕಟ್ಟಿಗೆಯನ್ನು ತರುವಾಗ ಜೊತೆಗೆ ಅದರಲ್ಲಿರುವ ಅಗ್ನಿಯೂ ಬರುತ್ತದೆ. ಹಾಗೆಯೇ ದೇಹದಲ್ಲಿರುವ ಹರಿಯೂ ದೇಹದೊಂದಿಗೆ ತಾನೂ ತನ್ನಿಚ್ಛೆಯಂತೆ ಚಲಿಸುತ್ತಾನೆ. ಅಶಾಶ್ವತವಾದ ದೇಹಗಳಲ್ಲಿ ಶಾಶ್ವತನಾಗಿ ಬಹುರೂಪಗಳಿಂದ ಇರುವ ಹರಿಯನ್ನು ಅವನ ಸಾಮೀಪ್ಯವನ್ನು ಬಯಸುವ ಸಜ್ಜನರು ಮನಸಿನಿಂದ ವಿಚಾರಮಾಡಿ ತಿಳಿಯುತ್ತಾರೆ ಎಂದು ತಂತ್ರಭಾಗವತದಲ್ಲಿ ಉಕ್ತವಾಗಿದೆ.

ಶ್ರುತಿಗೀತೆಯ ಈ ಆರನೇ ಪದ್ಯಕ್ಕೆ ಮೂಲಶ್ರುತಿ ಇದು—

ಯೋ ಜೀವವದ್ಯೋನಿಷು ಭಾತ್ಯನಂತೋ
ಮೂಢೈಸ್ತಮೋಗೈರ್ಭರತಾಧಿಗಮ್ಯಃ ।
ನಿಚಾಯ್ಯ ತಂ ಶಾಶ್ವತಮಾತ್ಮಸಂಸ್ಥಂ
ತದಿಚ್ಛವೋ ತ್ಯನ್ಯದಧುರ್ಮಹಾಂತಂ ॥ ಇತಿ ಕಮಠಶ್ರುತಿಃ ॥

'ಶ್ರೀಹರಿ ಜೀವರ ಶರೀರದಲ್ಲಿ ಮೂಢರಾದ ತಮೋಯೋಗ್ಯರಿಗೆ ಜೀವರಂತೆ ಕಾಣಿಸಿಕೊಳ್ಳುತ್ತಾನೆ. ಸರ್ವಕರ್ತನೆಂದು ಮುಖ್ಯಪ್ರಾಣ ತಿಳಿದಿರುವ ಶಾಶ್ವತನಾದ ಆ ಅನಂತನನ್ನು ಅವನ ಸಾಮೀಪ್ಯವನ್ನು ಬಯಸುವ ಮಹಾತ್ಮರು ಮನಸ್ಸಿನಲ್ಲಿ ವಿಚಾರಮಾಡಿ ತಿಳಿದು ಧ್ಯಾನಿಸುತ್ತಾರೆ' ಎಂದು ಕಮಠಶ್ರುತಿ ಹೇಳಿದೆ.

❖ ❖ ❖

ಶ್ರುತಿಗೀತೆಯಲ್ಲಿ ಏಳನೇ ಪದ್ಯ—

ಪ್ರಕ್ರಮವತ್ ಸ್ವಸತ್ಕೃತಂ ।
ಪುರುಷೇಷು ಧೀಷು ತು ಬಹಿರಂತರಸಚ್ಚರಣೇ ।
ತವ ಪುರುಷ ವದಂತ್ಯಖಿಲಶಕ್ತಿಧೃತಃ ಸ್ವಕೃತಮ್ ॥ ೨೦ ॥

ಹೇ ಪುರುಷನೆ, ನೀನು ತಾರತಮ್ಯದಿಂದ ಇರುವ ಎಲ್ಲ ಜೀವರಲ್ಲಿ ಎಲ್ಲ ಜ್ಞಾನೇಂದ್ರಿಯಗಳಲ್ಲಿ ಸನ್ನಿಧಾನ ತಾರತಮ್ಯದಿಂದ ಇದ್ದು ಅವರ ಮೂಲಕ ನಿನ್ನಿಂದಲೇ ನೀನು ಪೂಜಿಸಿಕೊಳ್ಳುವಿ. ದುರಾಚಾರಿಗಳಲ್ಲಿಯೂ ನೀನಿದ್ದು ಬ್ರಹ್ಮಾದಿಗಳು ಅವರಿಂದ ಮಾಡಿಸುವ ಪಾಪಾಚರಣೆಯನ್ನು ನೀನು ನಿನ್ನ ಪೂಜೆಯಾಗಿಯೇ ಸ್ವೀಕರಿಸುವಿ. ನಮ್ಮ ಎಲ್ಲ ಕ್ರಿಯೆಗಳೂ ಎಲ್ಲ ಇಂದ್ರಿಯಗಳ ಇಂದ್ರಿಯದೇವತೆಗಳ ಶಕ್ತಿಪ್ರೇರಕನಾದ ನೀನೆ ಸ್ವತಂತ್ರವಾಗಿ ಮಾಡಿದವುಗಳೆಂದು ಜ್ಞಾನಿಗಳು ಹೇಳುತ್ತಾರೆ. ಹೊರಗೆ ದೇವತೆಗಳಿಗೆ ವೇದವ್ಯಾಸಾದಿರೂಪಗಳಿಂದ, ದೈತ್ಯರಿಗೆ ಬುದ್ಧಾದಿರೂಪಗಳಿಂದ ಏನೇನು ಮಾಡುವೆಯೊ, ಮತ್ತು ಎಲ್ಲರಿಗೂ ಒಳಗೆ ಅಂತರ್ಯಾಮಿಯಾಗಿ ಏನೇನು ಮಾಡುವಿಯೊ ಅದೆಲ್ಲವೂ ನೀನೇ ಮಾಡಿಕೊಳ್ಳುವ ನಿನ್ನ ಪೂಜೆ ಎಂದು ಜ್ಞಾನಿಗಳು ಹೇಳುತ್ತಾರೆ. ಹೀಗೆ ಪೂಜೆ ಮಾಡಿಸಿಕೊಳ್ಳಲು ನಿದ್ದೆ ಬಿಟ್ಟೇಳು. ಸೃಷ್ಟಿ ಮಾಡು.

ಹೇ ಪುರುಷ! ಪ್ರಕ್ರಮವತ್ ಪುರುಷೇಷು ಧೀಷು ಸ್ವಸತ್ಕೃತಂ

ಪರಮಪುರುಷನೆ, ತಾರತಮ್ಯ ಕ್ರಮಾನುಸಾರ ನೀನು ಜೀವರಲ್ಲಿಯೂ ಅವರ ಇಂದ್ರಿಯಾದಿಗಳಲ್ಲಿಯೂ ನೆಲೆಸಿ ನೀನೇ ನಿನ್ನ ಪೂಜೆ ಮಾಡಿಸಿಕೊಳ್ಳುವಿ.

'ಪ್ರ-ಕ್ರಮ' ಪ್ರಕರ್ಷಕ್ರಮ, ತಾರತಮ್ಯಕ್ರಮ, ದೊಡ್ಡವರಲ್ಲಿದ್ದು ದೊಡ್ಡಪೂಜೆ, ಸಣ್ಣವರಲ್ಲಿದ್ದು ಸಣ್ಣಪೂಜೆ ಮಾಡಿಸಿಕೊಳ್ಳುವಿ. ಜೀವರು ಸಣ್ಣವರು. ಅವರಲ್ಲಿರುವ ತತ್ವದೇವತೆಗಳು ದೊಡ್ಡವರು ಅವರಲ್ಲಿಯೂ ಬ್ರಹ್ಮಾದಿಗಳು ರುದ್ರಾದಿಗಳಿಗಿಂತ ದೊಡ್ಡವರು.

ಅಸಚ್ಚರಣೇ ತವ ಸ್ವಸತ್ಕೃತಂ ವದಂತಿ

ಅಸಚ್ಚರಣರಲ್ಲಿ ದುರಾಚಾರಿಗಳಲ್ಲಿ ನಡೆಯುವ ಎಲ್ಲ ಕರ್ಮಗಳೂ ನಿನಗೆ ಪೂಜೆ ಎಂದೇ ಜ್ಞಾನಿಗಳು ಹೇಳುತ್ತಾರೆ.

ದುರಾಚಾರಿಗಳು ಪಾಪಾಚರಣೆಯಲ್ಲಿ ಸ್ವತಃ ಶಕ್ತರಲ್ಲ. ದೇವತೆಗಳೇ ಮಾಡಿಸುತ್ತಾರೆ. ಅದರಿಂದ ದುರಾಚಾರಿಗೆ ನರಕವಾಗುವುದು ಅವನ ಯೋಗ್ಯತೆಗೆ ಅನುಗುಣವಾದ್ದರಿಂದ ಹರಿಗೆ ಅದು ಇಷ್ಟ. ಹರಿಗೆ ಇಷ್ಟ**ವಾದ** ಆ ಪಾಪಾಚರಣೆಯನ್ನು ದೇವತೆಗಳು ಮಾಡಿಸುವುದು **ಅವರು ಹರಿಗೆ** **ಮಾಡುವ** ಪೂಜೆಯೆ. ಸಜ್ಜನರು ಮಾಡುವ ಪುಣ್ಯಕರ್ಮ**ವೂ ಕೂಡ** **ಹರಿಪೂಜೆ** ಎನಿಸುವುದು ಅದು ಅವರ ಯೋಗ್ಯತೆಗೆ **ಅನುಗುಣವಾಗಿದ್ದು**

ಹರಿಗೆ ಇಷ್ಟವೆನಿಸುವುದರಿಂದಲೇ. ಹೀಗಾಗಿ ತತ್ತ್ವದೇವತೆಗಳು ಪುಣ್ಯಕರ್ಮ ಮಾಡಿಸುವುದೂ ಮೋಕ್ಷ ಕೊಡಿಸುವುದೂ ಹಾಗೇ ಪುಣ್ಯಕರ್ಮವನ್ನು ಸಜ್ಜನರು ಮಾಡುವುದೂ ಹರಿಗೆ ಪೂಜೆಯಾಗುವುದು. ಸಜ್ಜನರು ಇದನ್ನು ಅನುಸಂಧಾನ ಮಾಡುವುದರಿಂದ ಮೋಕ್ಷಫಲ ದೊರಕುವುದು. ದುರ್ಜನರು ತಾವೇ ಪಾಪಕರ್ಮ ಮಾಡುವೆವೆಂದು ಅಹಂಕಾರ ಪಡುವುದರಿಂದ ಮತ್ತು ಆ ಕರ್ಮ ಪಾಪವಲ್ಲವೆಂದೂ, ಅದರ ಫಲವಾದ ನರಕ ತಮ್ಮ ಯೋಗ್ಯತೆಗೆ ಅನುಗುಣವಲ್ಲವೆಂದೂ ಭ್ರಮಿಸುವುದರಿಂದ ಪಾಪಕರ್ಮವೆನಿಸಿ ನರಕಫಲ ನೀಡುವುದು. ತತ್ತ್ವದೇವತೆಗಳು ಭ್ರಮಿಸದಿರುವುದರಿಂದ ಅದು ಅವರಿಗೆ ಪುಣ್ಯಕರ್ಮ ವೆನಿಸಿ ಮೋಕ್ಷಫಲವನ್ನೇ ನೀಡುವುದು.

ಅಖಿಲಶಕ್ತಿಧೃತಃ ತವ ಸ್ವಕೃತಂ

ಜೀವರ ಎಲ್ಲ ಕ್ರಿಯೆಗಳೂ ಎಲ್ಲ ಇಂದ್ರಿಯಗಳಿಗೆ ಎಲ್ಲ ವಿಷಯಗಳಲ್ಲಿ [illegible] ಮಾಡಿದವುಗಳು.

ಬಹಿರಂತಃ ಸ್ವಕೃತಂ ಸ್ವಸತ್ಕೃತಂ ವದಂತಿ

ಹೊರಗೆ ಒಳಗೆ ಪ್ರೇರಣೆ ನೀಡುತ್ತ ನೀನೇ ಮಾಡುವ ಎಲ್ಲ ಕರ್ಮವೂ ನಿನ್ನದೇ ಪೂಜೆ ಎಂದು ಜ್ಞಾನಿಗಳು ಹೇಳುತ್ತಾರೆ.

ಹೊರಗೆ, ದೇವತೆಗಳಿಗೆ ವ್ಯಾಸಾದಿರೂಪದಿಂದ ತತ್ತ್ವೋಪದೇಶ ಮಾಡಿ, ದೈತ್ಯರಿಗೆ ಬುದ್ಧಾದಿರೂಪದಿಂದ ದುರ್ಬೋಧನೆ ಮಾಡಿ, ಒಳಗೆ ಎಲ್ಲರಿಗೂ ಅಂತರ್ಯಾಮಿಯಾಗಿ ಅವರವರ ಯೋಗ್ಯತಾನುಸಾರ ಸತ್ಕರ್ಮ ದುಷ್ಕರ್ಮಗಳನ್ನು ನೀನು ಮಾಡಿಸುವುದು, ಸ್ವತಂತ್ರವಾಗಿ ನಿನ್ನದೇ ಕರ್ಮವಾಗಿದ್ದು ಅದು ಸತ್ಕರ್ಮವಿರಲಿ ದುಷ್ಕರ್ಮವೇ ಇರಲಿ ಎರಡೂ ಜೀವಯೋಗ್ಯತಾನುಸಾರವೇ ಆಗಿರುವುದರಿಂದ, ನಿನಗೆ ಇಷ್ಟವೇ ಆಗಿರುವುದರಿಂದ, ನಿನ್ನ ಪೂಜೆಯೇ ಆಗಿರುತ್ತದೆ ಎಂದು ಜ್ಞಾನಿಗಳು ಹೇಳುತ್ತಾರೆ.

ಬೇರೆ ವ್ಯಾಖ್ಯಾನಕಾರರು ಒಪ್ಪಿರುವ ಶ್ಲೋಕಪಾಠ ಹೀಗಿದೆ—

ಸ್ವಕೃತ ಪುರೇಷ್ವಮೀಷ್ವಬಹಿರಂತರಸಂವರಣಂ
ತವ ಪುರುಷಂ ವದಂತ್ಯಖಿಲಶಕ್ತಿಧೃತೋಽಂಶಕೃತಂ ।

ಇದಕ್ಕೆ ಶ್ರೀಧರವ್ಯಾಖ್ಯಾನ—

[೧]'ತನ್ನ ಕರ್ಮದಿಂದ ಸಂಪಾದಿಸಿದ ನರ ಮೃಗಾದಿ **ಶರೀರಗಳಲ್ಲಿ** ಭೋಕ್ತನಾಗಿರುವ ಜೀವನು ಸರ್ವಶಕ್ತನಾದ ನಿನ್ನ ಅಂಶ. 'ಅಂಶ' **ಎಂದರೆ** ಅಂಶದಂತೆ. 'ಕೃತ' ಎಂದರೆ ಕೃತವಾದಂತೆ. ನೀನೆ ಆಗಿರುವಿ ಎಂದರ್ಥ. ಹೊರಗೆ ಒಳಗೆ ಎಂದರೆ ಕಾರ್ಯಕಾರಣಗಳಾದ ಅವಿದ್ಯಾ ಅಂತಃಕರಣಗಳು ಜೀವನಿಗೆ ಆವರಣಗಳಾಗಿದ್ದರೂ ಅವು ಮಿಥ್ಯೆಯಾದ್ದರಿಂದ ವಸ್ತುತಃ ಆವರಣಶೂನ್ಯನಾಗಿದ್ದಾನೆ ಜೀವ ಎಂದು ಹೇಳಿದೆ.' ಎಂದು.

ಈ ಶ್ಲೋಕದಲ್ಲಿ 'ಜೀವ ಈಶ್ವರನ ಅಂಶ' ಎಂದಿದೆ. ಅದ್ವೈತದಲ್ಲಿ ಇದು ಅಸಂಭವ. ಅವಿದ್ಯಾ ಅಂತಃಕರಣಗಳಿಂದ ಆವೃತನಾದ ಜೀವ ಸರ್ವಶಕ್ತನಾದ ಈಶ್ವರನ ಒಂದು ಭಾಗವಲ್ಲ. ಅದರಿಂದ 'ಅಂಶ' ಎಂದರೆ ಸ್ವರೂಪವೇ ವಿವಕ್ಷಿತ. 'ತ್ವದ್ರೂಪಂ ವದಂತೀತ್ಯರ್ಥಃ' ಎಂದು ಶ್ರೀಧರವ್ಯಾಖ್ಯಾನ ಹೇಳಿದೆ. ಆದರೆ ಈ ಅಭೇದವನ್ನೂ ಅದ್ವೈತ ಒಪ್ಪುವುದಿಲ್ಲ. 'ತತ್ವಮಸಿ' ಎಂಬಲ್ಲಿ ಪದದ್ವಯಲಕ್ಷಣೆ ಯನ್ನೇ ಒಪ್ಪಿದೆ. ಹೀಗಾಗಿ 'ಅಖಿಲಶಕ್ತಿಧೃಕ್' ಶಬ್ದಕ್ಕೆ ಶುದ್ಧ ಬ್ರಹ್ಮನಲ್ಲಿ ಲಕ್ಷಣಾ. 'ಪುರುಷ' ಶಬ್ದಕ್ಕೂ ಶುದ್ಧದಲ್ಲಿ ಲಕ್ಷಣಾ. 'ಅಂಶ' ಶಬ್ದಕ್ಕೆ ತತ್ಸ್ವರೂಪ, ಅಭಿನ್ನ ಎಂಬ ಅರ್ಥದಲ್ಲಿ ಲಕ್ಷಣಾ 'ಕೃತ' ಎಂದರೂ 'ಕೃತ ಇವ' ಆರೋಪಿಸಿದ್ದೆಂದು ಲಕ್ಷಣಾ. 'ಬಹಿಃ' ಹೊರಗೆ ಎಂದರೆ ಕಾರ್ಯ ಎಂದೂ 'ಅಂತಃ' ಒಳಗೆ ಎಂದರೆ ಕಾರಣ ಎಂದೂ ಲಕ್ಷಣಾ. ಅದಕ್ಕೂ ಅಂತಕರಣ ಅವಿದ್ಯೆಗಳೆಂಬಲ್ಲಿ ಲಕ್ಷಣಾ. 'ಅಬಹಿರಂತರ' ಎಂದು ನಞಗೆ ಅಭಾವ ಅರ್ಥವಲ್ಲ, ಆವರಣವಿದೆ. ಆದರೆ ಅದು ಮಿಥ್ಯೆಯಾಗಿದೆ ಹೊರತು ಅದಿಲ್ಲವೆಂದಲ್ಲ ಎಂದೂ ಲಕ್ಷಣಾ.

ಹೀಗೆ ಭಾಗವತದ ಈ ಶ್ಲೋಕದಲ್ಲಿ ಯಾವ ಶಬ್ದವನ್ನೂ ಸರಿ ಎಂದು ಅದ್ವೈತ ಒಪ್ಪಿಕೊಳ್ಳುವು ದಿಲ್ಲ. ಎಲ್ಲಕ್ಕೂ ಲಕ್ಷಣಾ ಮಾಡುತ್ತಿದೆ. ವಸ್ತುತಃ ಅದ್ವೈತದಲ್ಲಿ ಶುದ್ಧಬ್ರಹ್ಮನಲ್ಲಿ ಲಕ್ಷಣಾ ಇಲ್ಲ. ಮುಖ್ಯಾರ್ಥದ ಸಂಬಂಧವಿಲ್ಲ. ಇದ್ದರೆ ಅದು ಶುದ್ಧವೆನಿಸುವುದಿಲ್ಲ. ಅದರಿಂದ,

'ಗುರೋಸ್ತು ಮೌನಂ ವ್ಯಾಖ್ಯಾನಂ'

ಎಂಬಂತೆ ಭಾಗವತಕ್ಕೆ ಮೌನವೇ ಸರಿಯಾದ ವ್ಯಾಖ್ಯಾನವೆಂದರೆ ಉಚಿತವಾಗುವುದು.

---

೧. ಸ್ವಕರ್ಮೋಪಾರ್ಜಿತೇಷು ಪುರೇಷು ದೇಹೇಷು ಅಮೀಷು ನರಾದಿಷು **ಭೋಕ್ತೃತ್ವೇನ** ವರ್ತಮಾನಂ ಪುರುಷಂ ಅಖಿಲಶಕ್ತಿಧೃತಃ ಸರ್ವಶಕ್ತ್ಯಾಶ್ರಯಸ್ಯ ಪೂರ್ಣಸ್ಯ ತವ **ಅಂಶಕೃತಂ** ವದಂತಿ। ಅಂಶ ಇವಾಂಶಃ, ಕೃತ ಇವ ಕೃತಃ। ತ್ವದ್ರೂಪಂ ವದಂ**ತೀತ್ಯರ್ಥಃ। ಬಹಿಃ ಕಾರ್ಯ**ಮಂತರಂ ಕಾರಣಂ। ವಸ್ತುತಸ್ತದಾವರಣ ಶೂನ್ಯಂ। **ತಯೋರಸತ್ವಾದಿತ್ಯರ್ಥಃ।**

-ಶ್ರೀಧರಃ

ಸರ್ವಪುರುಷೇಷು ಸರ್ವಧೀಷು ಚ ಸ್ಥಿತ್ವಾ ಶ್ರೀಬ್ರಹ್ಮಾದಿಷು ಪ್ರಕರ್ಷೇಣ ಕ್ರಮೇಣ ಸ್ವಾತ್ಮನೈವ ಸತ್ಕೃತಂ । ಅಂಡಾದ್ಯಂತರ್ಬಹಿಶ್ಚ ಅಸಚ್ಚರಣೇ ಪಾಪಾಚಾರೇ ಚ ಸ್ಥಿತ್ವಾ ಪಾಪಾಚಾರಮಪಿ ಸ್ವಾತ್ಮನಃ ಪೂಜಾತ್ವೇನೈವ ಕಾರಯಂತಂ ತ್ವಾಂ ವದಂತಿ ತಸ್ಯಾಧೋಗತ್ಯರ್ಥಂ । ತಸ್ಮಾತ್ ಸರ್ವಂ ತವ ಸ್ವಕೃತಮೇವ ವದಂತಿ ।

ಲಕ್ಷ್ಮೀಬ್ರಹ್ಮಾದಿ ಸರ್ವಚೇತನರಲ್ಲಿಯೂ ಅವರ ಇಂದ್ರಿಯಗಳಲ್ಲಿಯೂ ಮನೋವೃತ್ತಿಗಳಲ್ಲಿಯೂ ನಿಯಾಮಕನಾಗಿದ್ದು ತಾರತಮ್ಯದಿಂದ ನಿನ್ನ ಪೂಜಾರೂಪವಾಗಿ ನೀನೇ ಕರ್ಮ ಮಾಡಿಸಿಕೊಳ್ಳುವಿ. ಬ್ರಹ್ಮಾಂಡದ ಒಳಗೂ ಹೊರಗೂ ಶರೀರದ ಒಳಗೂ ಹೊರಗೂ ಪಾಪಾಚಾರಿಯಲ್ಲಿಯೂ ಇದ್ದು ಪಾಪಿಗಳ ಅಧೋಗತಿಗಾಗಿ ತತ್ವದೇವತೆಗಳು ದೈತ್ಯರಿಂದ ಮಾಡಿಸುವ ಪಾಪಾಚರಣೆಯನ್ನೂ ಕೂಡ ತನ್ನ ಪೂಜೆಯಾಗಿಯೇ ಮಾಡಿಸುವವನೆಂದು ಹೇಳುತ್ತಾರೆ. ಸರ್ವಶಕ್ತನಾದ್ದರಿಂದ ಎಲ್ಲ ಕರ್ಮವನ್ನೂ ನೀನೇ ಸ್ವತಂತ್ರವಾಗಿ ಮಾಡಿದ್ದೆಂದು ಹೇಳುತ್ತಾರೆ.

ಸ್ತುತಿಗೀತೆಯ ಈ ಏಳನೇ ಪದ್ಯಕ್ಕೆ ಮೂಲಶ್ರುತಿ ಇದು—

ನಿ ಷು ಸೀದ ಗಣಪತೇ ಗಣೇಷು
ತ್ವಾಮಾಹುರ್ವಿಪ್ರತಮಂ ಕವೀನಾಂ ।
ನ ಋತೇ ತ್ವತ್ ಕ್ರಿಯತೇ ಕಿಂಚನಾರೇ
ಮಹಾಮರ್ಕಂ ಮಘವನ್ ಚಿತ್ರಮರ್ಚ ॥ ಇತ್ಯಾದ್ಯಾ ಶ್ರುತಿಃ ॥

'ದೇವಗಣಾಧಿಪತಿಯೆ, ದೇವಗಣಗಳಲ್ಲಿಯೂ ಇಂದ್ರಿಯ ಗಣಗಳಲ್ಲಿಯೂ ವಿಶೇಷವಾಗಿ ಸನ್ನಿಹಿತನಾಗಿರು. ಜ್ಞಾನಿಗಳಲ್ಲಿ ಅತ್ಯುತ್ತಮನೆಂದು ನಿನ್ನನ್ನೇ ಜ್ಞಾನಿಗಳು ಹೊಗಳುತ್ತಾರೆ. ಬ್ರಹ್ಮಾಂಡದ ಹೊರಗೂ ಒಳಗೂ ನೀನಿಲ್ಲದೆ ಯಾವ ಕ್ರಿಯೆಯೂ ನಡೆಯುವುದಿಲ್ಲ. ಯಜ್ಞೇಶ್ವರನೆ, ಪೂಜ್ಯನಾದ ಆಶ್ಚರ್ಯಕರನಾದ ನಿನ್ನನ್ನು ನೀನೆ ಪೂಜೆ ಮಾಡಿಸಿಕೊಳ್ಳು.' ಎಂದು ಮುಂತಾಗಿ ಶ್ರುತಿಗಳಿವೆ.

ಶ್ರೀಬ್ರಹ್ಮರುದ್ರ ಪೂರ್ವೇಷು ಕ್ರಮಾತ್ ಸ್ಥಿತ್ವಾ ಜನಾರ್ದನಃ ।
ಸ್ವಾತ್ಮಾನಮರ್ಚಯತ್ಯದ್ಧಾ ಬಹಿರಂತರಸತ್ಸು ಚ ।

ಅಸತಾಮಧಮಾಚಾರೋ ಹರಿದೃಷ್ಟ್ಯಾಽಽತ್ಮಪೂಜನಂ ।
ತಸ್ಯಾಧೋಗಮನಾಯೇತಿ ಶ್ರುತಿರಾಹಾಖಿಲಕ್ರಿಯಂ ।
ಇತಿ ತಂತ್ರಭಾಗವತೇ ।

ಸ್ವಕೃತಮಿತ್ಯನನ್ಯಾಪೇಕ್ಷಯಾ ।

'ಶ್ರೀಹರಿಯು ಲಕ್ಷ್ಮಿಬ್ರಹ್ಮರುದ್ರ ಮುಂತಾದವರಲ್ಲಿ ತಾರತಮ್ಯದಿಂದ ಇದ್ದು ಬ್ರಹ್ಮಾಂಡದ ಹೊರಗೂ ಒಳಗೂ ಪಾಪಾಚಾರಿಗಳಲ್ಲಿಯೂ ಇದ್ದು ಪಾಪಾಚರಣೆಯಿಂದಲೂ ತನ್ನನ್ನು ತಾನೇ ಪೂಜಿಸಿಕೊಳ್ಳುತ್ತಾನೆ. ಪಾಪಿಗಳು ತಮ್ಮನ್ನೇ ಹರಿಯೆಂದು ತಿಳಿದು ಪೂಜಿಸಿಕೊಳ್ಳುತ್ತಾರೆ. ಅದರಿಂದ ಪಾಪಿಗಳ ಆಚಾರ ಅಧಮಾಚಾರವಾಗಿದ್ದು ತಮಗೇ ಅಧೋಗತಿಗೆ ಕಾರಣವಾಗುತ್ತದೆ ಎಂದೂ, ಹರಿಯೇ ಎಲ್ಲ ಕ್ರಿಯೆಗಳನ್ನು ಮಾಡುವವನೆಂದೂ 'ನ ಋತೇ ತ್ವತ್ಕ್ರಿಯತೇ' ಎಂದು ಮುಂತಾದ ಶ್ರುತಿಯು ಹೇಳುತ್ತಿದೆ' ಎನ್ನುತ್ತದೆ ತಂತ್ರಭಾಗವತ.

ಅನ್ಯರ ಅಪೇಕ್ಷೆ ಇಲ್ಲದೆ ಸ್ವತಂತ್ರವಾಗಿ ಮಾಡಿದ್ದರಿಂದ 'ಸ್ವಕೃತ'ವೆನಿಸುತ್ತದೆ.

❖ ❖ ❖

ಶ್ರುತಿಗೀತೆಯಲ್ಲಿ ಎಂಟನೇ ಪದ್ಯ—

ಇತಿ ವಿಮೃಶಂತಿ ಕವಯೋ ನಿಗಮಾವಪನಂ
ಭಜಂತ ಉಪಾಸತೇ ಭವಮಧ್ಯವಿನಿಶ್ವಸಿತಾಃ ।
ದುರವಗಮಾತ್ಮತತ್ತ್ವ ನಿಗಮಾಯತವಾಙ್ಮನಸ-
ಶ್ಚರಿತಮಹಾಮೃತಾಬ್ಧಿಪರಿವರ್ತಪರಿಶ್ರಮಣಾಃ ॥ ೨೨ ॥

ತನ್ನ ಅನುಗ್ರಹವಿಲ್ಲದೇ ಯಾರಿಗೂ ತಿಳಿಯಲಾಗದವನೆ, ಸಂಸಾರದಲ್ಲಿ ವಿವಿಧ ದುಃಖಗಳಿಂದ ಏದುಸಿರುಬಿಡುವ ವಿವೇಕಿಗಳು ನಿನ್ನನ್ನೇ ವಿಚಾರಮಾಡುವರು. ವೇದಶಾಸ್ತ್ರಗಳಲ್ಲಿಯೇ ವಿಶೇಷವಾಗಿ ಮಾತು ಮನಸುಗಳನ್ನು ತೊಡಗಿಸಿಕೊಳ್ಳುವರು. ನಿನ್ನ ಚರಿತಮಹಾಮೃತ ಸಮುದ್ರವಾದ ವೇದಗಳ ಆಲೋಚನದಲ್ಲಿ ಪರಿಶ್ರಮ ಮಾಡುವರು. ವೇದೋಕ್ತ ಕರ್ಮಬೀಜ ಬಿತ್ತಲು ಯೋಗ್ಯಕ್ಷೇತ್ರವಾಗಿರುವ ನಿನ್ನನ್ನೇ ಕರ್ಮಗಳಿಂದ ಆರಾಧಿಸುವರು ಧ್ಯಾನ ಮಾಡುವರು. ಅಪರೋಕ್ಷ ಸಂಪಾದಿಸುವರು ಸಂಸಾರದಲ್ಲಿ ವಿರಕ್ತರಾಗಿ ನಿನ್ನನ್ನು ಭಜಿಸಿ ಸಂಸಾರದಿಂದ ಮುಕ್ತರಾಗುವರು. ಅವರು ಹೀಗೆ ಮಾಡುವುದಕ್ಕೆ ನೀನು ಎದ್ದು ಸೃಷ್ಟಿ ಮಾಡಬೇಕು.

ಹೇ ದುರವಗಮಾತ್ಮತತ್ತ್ವ!

ನೀನು ನಿನ್ನ ಅನುಗ್ರಹದಿಂದಲೆ ನಮ್ಮ ಯೋಗ್ಯತಾನುಸಾರ ಅಲ್ಪ ಮಾತ್ರ ಅರಿವಿಗೆ ಗೋಚರನಾಗುವವನು. ಸ್ವತಂತ್ರವಾಗಿ ಯಾರಿಂದಲೂ ಯಾವ ರೀತಿಯಿಂದಲೂ ಸ್ವಲ್ಪವೂ ತಿಳಿಯಲಾಗದವನು. ಅಂಥ ಶ್ರೀಹರಿಯೆ!

ಭವಮಧ್ಯವಿನಿಃ ಶ್ವಸಿತಾ ಇತಿ ಕವಯಃ ತ್ವಾಂ ವಿಮೃಶಂತಿ

ಸಂಸಾರ ಮಧ್ಯದಲ್ಲಿ ವಿವಿಧ ದುಃಖಗಳನ್ನು ಉಂಡು ನಿಟ್ಟುಸಿರು ಬಿಡುವುದರಿಂದ ವಿವೇಕಿಗಳು ನಿನ್ನ ಅನುಗ್ರಹದಿಂದ ನಿನ್ನ ಬಗ್ಗೆ ಶಾಸ್ತ್ರದಲ್ಲಿ ವಿಚಾರ ಮಾಡುತ್ತಾರೆ.

ನಿಗಮಾಯತ ವಾಙ್ಮನಸಃ

ವೇದದಲ್ಲಿಯೂ ವೇದವೇದ್ಯನಾದ ನಿನ್ನಲ್ಲಿಯೂ ವಿಶೇಷವಾಗಿ ಮಾತು ಮನಸುಗಳನ್ನು ಅಂದರೆ ಎಲ್ಲ ಇಂದ್ರಿಯಗಳನ್ನು ತೊಡಗಿಸಿ ಕೊಳ್ಳುತ್ತಾರೆ.

ಚರಿತಮಹಾಮೃತಾಬ್ಧಿ ಪರಿವರ್ತ ಪರಿಶ್ರಮಣಾಃ

ನಿನ್ನ ಚರಿತ ಮಹಾಮೃತಸಮುದ್ರವನ್ನು ತಮ್ಮ ಮನಸೆಂಬ ಮಂದರಪರ್ವತದಿಂದ ಮಥಿಸುವ ಮಹಾಶ್ರಮವನ್ನು ಕೈಗೊಳ್ಳುತ್ತಾರೆ. ನಿನ್ನ ಪರೋಕ್ಷಜ್ಞಾನವನ್ನು ಸಂಪಾದಿಸುತ್ತಾರೆ.

ನಿಗಮಾವಪನಂ ಭಜಂತ ಉಪಾಸತೇ

ವೇದವೆಂಬ ಬೀಜಬಿತ್ತಲು ಭಗವಂತನೆ ಫಲವತ್ತಾದ ಭೂಮಿ. ಏಕೆಂದರೆ ಅವನನ್ನೇ ಮುಖ್ಯವಾಗಿ ವೇದಗಳು ತಿಳಿಸುತ್ತವೆ. ಬೇರೆ ವಿಷಯಗಳು ಬಂದರೂ ಅವು ಭಗವಂತನ ಜ್ಞಾನ ಬರಲು ಸಹಾಯಕವಾಗಿ ಬರುತ್ತವೆ. ಅದರಿಂದ ವೇದವನ್ನು ಭಗವತ್ಪರವಾಗಿ ಅಧ್ಯಯನ ಮಾಡಬೇಕು.

ವೇದೋಕ್ತ ಕರ್ಮದ ಬೀಜ ಬಿತ್ತುವುದಕ್ಕೂ ಭಗವಂತನೇ ಕ್ಷೇತ್ರ. ಅವನಲ್ಲಿ ಕರ್ಮದ ಬೀಜ ಅರ್ಪಿಸಿದಾಗಲೆ ಅದು ಅಂಕುರಿಸಿ ಮರವಾಗಿ ಬೆಳೆದು ಒಳ್ಳೆಯ ಫಲವನ್ನು ನೀಡುತ್ತದೆ. ಅರ್ಪಿಸದೆ ಹೋದರೆ ವ್ಯರ್ಥವಾಗುತ್ತದೆ. ಬೇರೆ ದೇವತೆಗಳ ಆರಾಧನೆ ಮಾಡಿದರೂ ಅವರೊಳಗಿರುವ ಭಗವಂತನಿಗೇ ಅರ್ಪಣ ಮಾಡಬೇಕು.

ವೇದವೃಕ್ಷ ಬೆಳೆದು ನಿಂತಿರುವುದೂ ಭಗವಂತನೆಂಬ **ಕ್ಷೇತ್ರದಲ್ಲಿ.** ಅವನೆ ಕಲ್ಪದ ಆದಿಯಲ್ಲಿ ಬ್ರಹ್ಮನಿಗೆ ಉಪದೇಶಿಸುವ ಮೂಲಕ ವೇದವನ್ನು ವ್ಯಕ್ತಮಾಡ್ಡಿದಾನೆ. ಬ್ರಹ್ಮಸೂತ್ರ ಭಾರತಾದಿಗಳ ಮೂಲಕ ವ್ಯಾಖ್ಯಾನ ಮಾಡಿ ಬಲವಾಗಿ ಬೇರೂರುವಂತೆ ಮಾಡಿದ್ದಾನೆ. ಶಾಖಾಭೇದದಿಂದ ವಿಭಾಗಮಾಡಿ ವಿಶಾಲವಾಗಿ ಹಬ್ಬಿಸಿದ್ದಾನೆ. ಅದರಿಂದ ವೇದವೃಕ್ಷದ ಕ್ಷೇತ್ರವೆಂದು ಆರಾಧಿಸಿ ಹರಿಯ ಅನುಗ್ರಹದಿಂದ ಅವನನ್ನು ತಿಳಿಯಬೇಕು.

ಇತಿ ಭವಮಧ್ಯವಿನಿಃ ಶ್ವಸಿತಾಃ ಭಜಂತ ಉಪಾಸತೇ

ಅದರಿಂದ ಸಂಸಾರದಲ್ಲಿ ವಿರಕ್ತರಾಗಿ ನಿನ್ನನ್ನು ಯಜ್ಞಾದಿಕರ್ಮಗಳಿಂದ ಭಜಿಸಿ ಧ್ಯಾನರೂಪ ಉಪಾಸನೆಯನ್ನೂ ಮಾಡುತ್ತಾರೆ. ಅಪರೋಕ್ಷ ಸಂಪಾದಿಸಿ ಸಂಸಾರದಿಂದ ಮುಕ್ತರಾಗುತ್ತಾರೆ. ಮುಕ್ತರಾದ ಬಳಿಕವೂ ವೈಕುಂಠದಲ್ಲಿ ಯಜ್ಞಾದಿ ಕರ್ಮವನ್ನೂ ಧ್ಯಾನೋಪಾಸನೆಯನ್ನೂ ಮಾಡುತ್ತಾರೆ. ಆ ಕರ್ಮಗಳು ಉಪಾಸನೆಗಳು ಫಲಸಾಧನವಲ್ಲ. ಫಲರೂಪವಾಗಿಯೇ ನಡೆಯುತ್ತವೆ. ಆನಂದೋದ್ರೇಕದಿಂದ ನಗುವಂತೆ ಕುಣಿಯುವಂತೆ ಯಾಗಾದಿಕರ್ಮವನ್ನೂ ಧ್ಯಾನಾದಿ ಉಪಾಸನೆಯನ್ನೂ ಮುಕ್ತರು ಆನಂದೋದ್ರೇಕದಿಂದಲೆ ಮಾಡುತ್ತಾರೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಹಿಡಿದಿರುವ ಪಾಠ ಹೀಗಿದೆ—

ಇತಿ ನೃಗತಿಂ ವಿವಿಚ್ಯ ಕವಯೋ ನಿಗಮಾವಪನಂ
ಭವತ ಉಪಾಸತೇऽಂಘ್ರಿಮಭವಂ ಭುವಿ ವಿಶ್ವಸಿತಾಃ ।
ದುರವಗಮಾತ್ಮತತ್ವನಿಗಮಾಯ ತವಾತ್ತತನೋ
ಶ್ಚರಿತ ಮಹಾಮೃತಾಬ್ಧಿ ಪರಿವರ್ತ ಪರಿಶ್ರಮಣಾಃ ॥

'ಜೀವನ ಈ ಸ್ವರೂಪವನ್ನು ವಿಮರ್ಶಿಸಿ ತಿಳಿದು ಜ್ಞಾನಿಗಳು ಈ ಸ್ವರೂಪ ಪ್ರಾಪ್ತಿಗಾಗಿ ವೇದೋಕ್ತ ಸಕಲ ಕರ್ಮಸಮರ್ಪಣೆಗೆ **ಯೋಗ್ಯವಾದ** ಮುಕ್ತಿಫಲದಾಯಕವಾದ ನಿನ್ನ ಚರಣವನ್ನು ದೃಢವಿಶ್ವಾಸದಿಂದ **ಭಜಿಸುತ್ತಾರೆ.** ದುರ್ಗಮವಾದ ಆತ್ಮ ತತ್ವವನ್ನು ಬೋಧಿಸಲು ಅವತರಿಸಿರುವ ನಿನ್ನ **ಚರಿತ್ರೆಗಳ** ಮಹಾಮೃತ ಸಮುದ್ರದಲ್ಲಿ ಮುಳುಗಿ ಸಂಸಾರಶ್ರಮವನ್ನು ಪರಿಹರಿ**ಸಿಕೊಳ್ಳುತ್ತಾರೆ.**'

ನಮ್ಮ ಪಾಠದಲ್ಲಿ ಏಳನೇ ಪದ್ಯ ಒಂದು ತ್ರಿಪದಿ. **ಬೇರೆ ವ್ಯಾಖ್ಯಾನಕಾರರು** **ಅದನ್ನು** ಎರಡು ಪಾದಗಳ ಪೂರ್ವಾರ್ಧವಾಗಿ **ಮಾಡಿಕೊಂಡು ಅದಕ್ಕೆ ಎಂಟನೇ**

ಪದ್ಯದ ಮೊದಲಿನ ಎರಡು ಪಾದಗಳನ್ನು ತಂದು ಉತ್ತರಾರ್ಧವಾಗಿ ಸೇರಿಸಿದ್ದಾರೆ. ಅದರಿಂದ ಇನ್ನು ಮುಂದೆ ೨೧ನೇ ಪದ್ಯದವರೆಗೂ ಅವರ ಎಲ್ಲ ಪದ್ಯಗಳಲ್ಲಿ ಪೂರ್ವಾರ್ಧವು ನಮ್ಮ ಪಾಠದ ಪ್ರಕಾರ ಹಿಂದಿನ ಪದ್ಯದ ಉತ್ತರಾರ್ಧವಾಗಿರುತ್ತದೆ.

ಭವಮಧ್ಯವಿನಿಶ್ವಸಿತಾ ಇತಿ ಯತೋಽತೋ ವಿಮೃಶಂತಿ ಕವಯೋ ನಿಗಮಾವಪನಂ ತ್ವಾಂ। ಚರಿತಮಹಾಬ್ಧಿ ಪರಿವರ್ತ ಪರಿಶ್ರಮಣಾ ಇತಿ **ಯದತೋ ಭವಮಧ್ಯಾದ್** ವಿನಿಶ್ವಸಿತಾ **ಮುಕ್ತಾಃ।** ನಿಗಮಾನಾಮಾವಪನಂ ಸ್ಥಾನಂ ತ್ವಾಂ ವಿಮೃಶ್ಯ ಯಜ್ಞಾದಿಭಿರ್ಭಜಂತ **ಉಪಾಸತೇ। ನಿಗಮ** ವಿಷಯೇ ಆಯತ ವಾಙ್ಮನಸಃ। ನಿಗಮಾನಾಂ **ತತೋ ವ್ಯಕ್ತೇಸ್ತ್ರ** ಏವ ಫಲಪ್ರದತ್ವಾತ್ ತದ್ವಿಷಯತ್ವಾಚ್ಚ ನಿಗಮಾವಪನಂ। **ಪರಿವರ್ತೋ** ಮಥನಂ।

ಸಂಸಾರದಲ್ಲಿ ದುಃಖಗಳನ್ನು ಉಂಡು ವಿರಕ್ತಿ ಹೊಂದಿರುವುದರಿಂದ **ಜ್ಞಾನಿಗಳು ವೇದೋಕ್ತಕರ್ಮಗಳಿಂದ** ಆರಾಧ್ಯನಾದ ನಿನ್ನನ್ನು ಭಜಿಸುತ್ತಾರೆ ನಿನ್ನ **ಚರಿತ್ರೆಗಳ ಮಹಾಸಮುದ್ರದ ಮಥನಶ್ರಮವನ್ನು** ಕೈಗೊಂಡುದರಿಂದ **ಆ ಜ್ಞಾನಿಗಳು ಸಂಸಾರದಿಂದ** ವಿರಕ್ತರಾಗಿ ಮುಕ್ತಿ ಹೊಂದುತ್ತಾರೆ. **ಮುಕ್ತರಾದ ಬಳಿಕ ಕೂಡ** ವೇದವೇದ್ಯನಾದ ನಿನ್ನನ್ನು ವಿಚಾರಮಾಡಿ **ಯಜ್ಞಾದಿಗಳಿಂದ** ಭಜಿಸುತ್ತ ಉಪಾಸನ ಮಾಡುತ್ತಾರೆ. **'ನಿಗಮಾಯತವಾಙ್ಮನಸಃ'** ಎಂದರೆ ವೇದದ ವಿಷಯದಲ್ಲಿಯೂ **ವೇದವೇದ್ಯನಾದ** ನಿನ್ನ ವಿಷಯದಲ್ಲಿಯೂ ವಿಶೇಷವಾಗಿ ಮಾತು **ಮನಸ್ಸುಗಳನ್ನು ಅಂದರೆ** ಎಲ್ಲ ಇಂದ್ರಿಯಗಳನ್ನೂ ತೊಡಗಿಸಿಕೊಳ್ಳುತ್ತಾರೆ. **ಶ್ರೀಹರಿ 'ನಿಗಮಾವಪನ'** ಏಕೆಂದರೆ, ವೇದಗಳು ಅವನಿಂದಲೇ **ವ್ಯಕ್ತವಾಗುತ್ತವೆ. ಅವನಿಂದಲೆ** ವೇದೋಕ್ತಕರ್ಮಗಳು ಫಲಪ್ರದವಾಗು **ತ್ತವೆ. ಮತ್ತು ವೇದಪ್ರತಿಪಾದ್ಯನೂ** ಅವನೆ. ಚರಿತಮಹಾಮೃತ ಸಮುದ್ರದ **'ಪರಿವರ್ತ' ಎಂದರೆ ಮಥನ.**

ಶ್ರುತಿಗೀತೆಯ **ಈ ಎಂಟನೇ** ಪದ್ಯಕ್ಕೆ ಮೂಲಶ್ರುತಿ ಇದು—

ವಿಮಥ್ಯ ವೇದಾಬ್ಧಿಮತಿಶ್ರಮೇಣ
ಜ್ಞಾತ್ವಾ ಪರೇಶಂ ಮುನಯೋ ವಿಮುಕ್ತಾಃ।
ಮೃಶಂತಿ ಯಜ್ಞೈಶ್ಚ ಯಜಂತಿ ನಿತ್ಯಂ
ಉಪಾಸತೇ ವೇದಫಲಪ್ರದಂ ತಂ ॥ ಇತಿ ಕುಶಿಕ ಶ್ರುತಿಃ ॥

'ಜ್ಞಾನಿಗಳು ವೇದಸಮುದ್ರವನ್ನು ಬಹಳ ಶ್ರಮದಿಂದ ಮಥನಮಾಡಿ ಪರಮಾತ್ಮನನ್ನು ತಿಳಿದು ಮುಕ್ತರಾಗುತ್ತಾರೆ. ಮುಕ್ತರಾಗಿಯೇ ವೇದೋಕ್ತ ಕರ್ಮಫಲಪ್ರದನಾದ ಹರಿಯನ್ನು ವಿಚಾರ ಮಾಡುತ್ತಾರೆ. ಯಜ್ಞಗಳಿಂದ ಆರಾಧಿಸುತ್ತಾರೆ. ನಿತ್ಯವೂ ಉಪಾಸನೆ ಮಾಡುತ್ತಾರೆ' ಎಂದು ಕುಶಿಕ ಶ್ರುತಿ ಹೇಳಿದೆ.

❖ ❖ ❖

ಶ್ರುತಿಗೀತೆಯಲ್ಲಿ ಒಂಬತ್ತನೇ ಪದ್ಯ—

ನ ಪರಿಲಷಂತಿ ಕೇಚಿದಪವರ್ಗಮಪೀಶ್ವರ ತೇ
ಚರಣಸರೋಜಹಂಸಕುಲಸಂಗವಿಸೃಷ್ಟಗೃಹಾಃ ।
ತ್ವದನುಪಥಂ ಕುಲಾಯಮಿದಮಾತ್ಮಸುಹೃತ್ಪ್ರಿಯವ-
ಚ್ಚರಂತಿ ತಥೋನ್ಮುಖಾಸ್ತ್ವಯಿ ಹಿ ತೇ ಪ್ರಿಯ ಆತ್ಮನಿ ಚ ॥ ೨೩ ॥

ಪ್ರಭು, ನಿನ್ನ ಏಕಾಂತಭಕ್ತರು ಕೆಲವರು ನಿನ್ನ ಆರಾಧನೆಗೆ ಫಲವಾಗಿ ಮೋಕ್ಷವನ್ನೂ ಬಯಸುವುದಿಲ್ಲ. ನಿನ್ನ ಪಾದಕಮಲಗಳಲ್ಲಿ ಹಂಸಗಳಂತಿರುವ ಜ್ಞಾನಿ ಸಮೂಹದ ಸೇವೆಗಾಗಿ ಮನೆಮಠಗಳನ್ನು ತೊರೆದು ಈಚೆ ಬಂದಿರುತ್ತಾರೆ. ತಮ್ಮ ಬಾಹ್ಯ ಜಡಶರೀರವನ್ನು ಕೂಡ ಅದು ನಿನ್ನ ಆರಾಧನೆಗೆ ಸಾಧನವಾಗುವುದೆಂದು ತಮಗೆ ನಿರ್ವ್ಯಾಜ ಬಂಧುವಿನಂತಿರುತ್ತದೆ ಎಂದೇ ತಮ್ಮ ಚಿನ್ಮಯ ಶರೀರಕ್ಕೆ ಸಮಾನವಾಗಿ ಕಾಣುತ್ತಾರೆ. ತಮಗಿಂತಲೂ ತಮ್ಮವುಗಳೆಲ್ಲಕ್ಕಿಂತಲೂ ಪ್ರಿಯನಾಗಿರುವಿ ಸ್ವಾಮಿಯಾಗಿರುವಿ ಎಂದು ತಿಳಿದು ನಿನ್ನಲ್ಲಿಯೆ ಮನಸ್ಸನ್ನಿಟ್ಟಿರುತ್ತಾರೆ. ನಿನ್ನ ಸೇವೆಗೆ ಸದಾ ಸಿದ್ಧರಾಗಿರುತ್ತಾರೆ.

ಹೇ ಈಶ್ವರ, ಕೇಚಿದ್ ಅಪವರ್ಗಮಪಿ ನ ಪರಿಲಷಂತಿ

ಹೇ ಪ್ರಭು, ನಿನ್ನ ಭಕ್ತರು ಕೆಲವರು ಏಕಾಂತಿಗಳು ನಿನ್ನ ಸಾಮಿಪ್ಯ ಒಂದನ್ನೇ ಬಯಸಿ ಬೇರೆ ಯಾವುದೇ ಫಲವನ್ನು ಅಪೇಕ್ಷಿಸದೆ ನಿನ್ನಲ್ಲಿ ಭಕ್ತಿ ಮಾಡುವರು. ಭಕ್ತಿ ಮಾಡುವುದಕ್ಕೆ ಫಲವಾಗಿ ನೀನು ಮೋಕ್ಷಸುಖ ಕೊಡುವೆನೆಂದರೂ ಬೇಡ ಎನ್ನುವರು. ಮೋಕ್ಷದಲ್ಲಿ ನಿನ್ನ **ಸಾಮೀಪ್ಯ** ದೊರಕುವುದೆಂಬ ಕಾರಣಕ್ಕೇ ಮೋಕ್ಷವನ್ನು ಸ್ವೀಕರಿಸುತ್ತಾರೆ **ಹೊರತು** ಅಲ್ಲಿ ತಮ್ಮ ಎಲ್ಲ ಕಷ್ಟ ಪರಿಹಾರವಾಗುತ್ತದೆ ಎಂದಲ್ಲ, **ನಿತ್ಯಸುಖ** ಲಭಿಸುತ್ತದೆ ಎಂದೂ ಅಲ್ಲ.

ತೇ ಚರಣ ಸರೋಜ ಹಂಸಕುಲ ಸಂಗವಿಸೃಷ್ಟಗೃಹಾಃ

ನಿನ್ನ ಪಾದಗಳೆಂಬ ಕಮಲಗಳಿಗೆ ಆಸೆ ಪಡುವ ಹಂಸಗಳು ಪರಮಹಂಸರಾದ ಜ್ಞಾನಿಗಳು ಅವರ ಕುಲವನ್ನು ಸೇವಿಸುವುದಕ್ಕಾಗಿ ನಿನ್ನ ಏಕಾಂತ ಭಕ್ತರು ತಮ್ಮ ಮನೆ ಮಠಗಳನ್ನು ತೊರೆದು ಬರುತ್ತಾರೆ. ಜ್ಞಾನಿಗಳಾದ ಪರಮಹಂಸರ ಸೇವೆ ಮಾಡಿದರೆ ಅದು ನಿನಗೆ ಇಷ್ಟವಾಗುವುದೆಂದು ಅವರು ನಂಬುತ್ತಾರೆ.

ತ್ವದನುಪಥಮಿದಂ ಕುಲಾಯಮೂತ್ಮ ಸುಹೃತ್ ಪ್ರಿಯವಚ್ಚರಂತಿ

ನಿನ್ನ ಸೇವೆಗೆ ಸಲ್ಲುವುದೆಂದು ಈ ಪಾರ್ಥಿವ ಶರೀರವನ್ನು ಪ್ರೀತಿಯಿಂದ ಕಾಣುವುದಕ್ಕೆ ಹೊರತು ವಿಷಯ ಭೋಗಸಾಧನವಾಗುವುದೆಂದಲ್ಲ. ಭಗವತ್ ಪ್ರಾಪ್ತಿಗೆ ಯೋಗ್ಯವೆಂದು ಅವರ ಸ್ವರೂಪಭೂತ ಚಿನ್ಮಯ ಶರೀರವನ್ನು ಪ್ರೀತಿಸುವುದಕ್ಕೆ. ಹಾಗೇ ನಿನ್ನ ಜ್ಞಾನ ಸಂಪಾದನೆಯ ಮೂಲಕ ನಿನ್ನ ಪ್ರಾಪ್ತಿಗೆ ಸಾಧನವಾಗುತ್ತ ನಿರ್ವ್ಯಾಜ ಬಂಧುವಿನಂತೆ ಇರುತ್ತದೆ ಎಂದು ಪಾರ್ಥಿವ ಶರೀರವನ್ನು ಪ್ರೀತಿಸುತ್ತಾರೆ. ವಸ್ತುತಃ ಪ್ರಿಯವಾದ ಸ್ವರೂಪ ಶರೀರವನ್ನು ಪ್ರೀತಿಸುವಂತೆ ಪಾರ್ಥಿವ ಶರೀರವನ್ನು ಪ್ರೀತಿಸುವುದಿಲ್ಲ. ಪಾರ್ಥಿವಶರೀರ ಮೋಕ್ಷಸಾಧನವಾಗುತ್ತಿದ್ದರೆ ಮಾತ್ರ 'ಪ್ರಿಯವತ್' ಪ್ರಿಯ ವಸ್ತುಗಳನ್ನು ವ್ಯರ್ಥವಾಗಿ ಹಾಳಾಗಿ ಹೋಗದಂತೆ ನೋಡಿಕೊಳ್ಳುವ ಹಾಗೆ, ಪಾರ್ಥಿವಶರೀರವನ್ನು ವ್ಯರ್ಥವಾಗಿ ಹಾಳಾಗ ಬಾರದೆಂದು ಜೋಕೆಯಿಂದ ನೋಡಿಕೊಳ್ಳುತ್ತಾರೆ.

ಪ್ರಿಯೇ ಆತ್ಮನಿ ಚ ತ್ವಯಿ ತಥಾ ಹಿ ತೇ ಉನ್ಮುಖಾಃ

ನೀನು ಶ್ರವಣ ಸ್ಮರಣ ದರ್ಶನಾದಿಗಳಿಂದ ದಿವ್ಯಸುಖ ನೀಡುತ್ತ ಪ್ರಿಯಕರನಾಗಿರುವೆ. ಬಿಂಬರೂಪನಾಗಿ ನಮ್ಮನ್ನು ಆಳುವ ಸ್ವಾಮಿಯಾಗಿರುವೆ ಎಂದು ನಿನ್ನಲ್ಲಿಯೇ ಸಕಲ ಇಂದ್ರಿಯ ಪ್ರವೃತ್ತಿಗಳನ್ನೂ ತೊಡಗಿಸಿಕೊಂಡು ನಿನಗೆ ಉನ್ಮುಖರಾದವರು, ನಿನ್ನಸೇವೆಗೇ ಸದಾಸಿದ್ಧರು ಏಕಾಂತಭಕ್ತರು ತಮ್ಮ ಸುಖಕ್ಕಾಗಿ ಮೋಕ್ಷವನ್ನು ಬಯಸಲಾರರು.

ಬೇರೆ ವ್ಯಾಖ್ಯಾನಕಾರರು ಇಲ್ಲಿ ಇಟ್ಟುಕೊಂಡಿರುವ ಪಾಠ ಹೀಗಿದೆ—

ನ ಪರಿಲಷಂತಿ ಕೇಚಿದಪವರ್ಗಮಪೀಶ್ವರ ತೇ
ಚರಣ ಸರೋಜ ಹಂಸಕುಲ ಸಂಗವಿಸೃಷ್ಟ ಗೃಹಾಃ ।

ತ್ವದನುಪಥಂ ಕುಲಾಯಮಿದಮಾತ್ಮ ಸುಹೃತ್‌ಪ್ರಿಯವ-
ಚ್ಚರತಿ ತಥೋನ್ಮುಖೇ ತ್ವಯಿ ಹಿತೇ ಪ್ರಿಯ ಆತ್ಮನಿ ಚ ॥

'ನಿನ್ನ ಚರಣಕಮಲಗಳಲ್ಲಿ ಹಂಸಗಳಂತಿರುವ ಭಕ್ತರ **ಸಂಗಕ್ಕಾಗಿ** ಮನೆಮಠಗಳನ್ನು ತೊರೆದು ಬಂದವರು ಕೆಲವರು ಮೋಕ್ಷವನ್ನು **ಕೂಡ** ಬಯಸುವುದಿಲ್ಲ, ಅವರಿಗೆ ಈ ಪಾರ್ಥಿವ ಶರೀರ ನಿನ್ನ ಸೇವೆಗೆ ಸಾಧನವಾಗುತ್ತ**ದೆ;** ತಮ್ಮ ಆತ್ಮದಂತೆಯೆ, ಬಂಧುವಿನಂತೆಯೆ, ಮಿತ್ರನಂತೆಯೆ ಪ್ರಿಯವೆನಿಸುತ್ತದೆ. ನೀನೂ ಅವರಿಗೆ ಆತ್ಮನಾಗಿ ಪ್ರಿಯನಾಗಿ ಹಿತಕರನಾಗಿ ಅನುಗ್ರಹಿಸಲು ಸಿದ್ಧನಾಗಿರುವೆ.'

ತ್ವತ್‌ಪ್ರಾಪ್ತ್ಯನುಸಾರಿತ್ವಾಚ್ಛರೀರಂ ಪ್ರಿಯವತ್ ಪಶ್ಯಂತಿ । ಸರ್ವಪ್ರಿಯ-ತಮೇ ಸರ್ವಾದಾನಾದಿಕರ್ತರಿ ಚ ತ್ವಯಿ । ತಥಾ ಹಿ ತೇಽಭಿಮುಖಾಃ ।

ನಿನ್ನ ಪ್ರಾಪ್ತಿಗೆ ಅನುಕೂಲವಾಗಿರುವುದರಿಂದ ಜಡಶರೀರವನ್ನು ಕೂಡ ಪ್ರಿಯಬಂಧುವಿನಂತೆ ತಿಳಿಯುತ್ತಾರೆ. ಏಕೆಂದರೆ ಎಲ್ಲಕ್ಕಿಂತ ಹೆಚ್ಚು ಪ್ರಿಯನಾದ, ಸರ್ವರನ್ನೂ ವಶಕ್ಕೆ ತಂದುಕೊಂಡಿರುವ ನಿನ್ನಲ್ಲಿಯೇ ಅವರು ಆಸಕ್ತರು. 'ತಥಾ ಹಿ ತೇ ಉನ್ಮುಖಾಃ' ಎಂದು ಅನ್ವಯ. ಹಾಗೇ ಅವರು ನಿನ್ನಲ್ಲಿ ಸೇವೆ ಸಲ್ಲಿಸಲು ಸದಾ ಸಿದ್ಧರಾಗಿದ್ದಾರೆ.

ಶ್ರುತಿಗೀತೆಯ ಈ ಒಂಬತ್ತನೇ ಪದ್ಯಕ್ಕೆ ಮೂಲಶ್ರುತಿ—

ನ ಕಿಂಚಿದಭಿವಾಂಛಂತಿ ಯತಯಃ ಸುಸದಾಶ್ರಯಾಃ ।
ಪ್ರೇಷ್ಠಸ್ಯ ಪರಮಸ್ಯಾಪ್ತ್ಯೈ ಪ್ರಿಯವದ್ ದೇಹದೃಷ್ಟಯಃ ॥
ಇತಿ ವಿಮದಶ್ರುತಿಃ ॥

ಸ್ವೋತ್ತಮರಾಗಿರುವ ಸಜ್ಜನರನ್ನಾಶ್ರಯಿಸಿ ಪರಮಪ್ರಿಯನಾದ ಹರಿಯ ಪ್ರಾಪ್ತಿಗೆಂದು ಹೊರಟಿರುವ ಪರಮಹಂಸರು ಜ್ಞಾನಭಕ್ತ್ಯಾದಿಗಳನ್ನು ಹೊರತು ಬೇರೇನನ್ನೂ ಬಯಸುವುದಿಲ್ಲ. ಆದರೂ ಭಗವತ್ ಪ್ರಾಪ್ತಿಗೆ ಯೋಗ್ಯವಾದ ಪ್ರಿಯವಾದ ತಮ್ಮ ಚಿನ್ಮಯ ಶರೀರದಂತೆಯೇ ಭಗವತ್‌ಪ್ರಾಪ್ತಿಗೆ ಸಾಧನವಾದ ತಮ್ಮ ಬಾಹ್ಯ ಶರೀರವನ್ನು **ಕೂಡ** ಪ್ರೀತಿಯಿಂದಲೇ ಅವರು ಕಾಣುತ್ತಾರೆ ಅನಿಷ್ಟವೆಂದು **ದ್ವೇಷಿಸುವುದಿಲ್ಲ** ಎಂದು ವಿಮದಶ್ರುತಿ ಹೇಳುತ್ತದೆ.

❖❖❖

ಶ್ರುತಿಗೀತೆಯಲ್ಲಿ ಹತ್ತನೇ ಪದ್ಯ—

ನಚ ರಮಂತ್ಯಹೋ ಅಸದುಪಾಸನಯಾಽಽತ್ಮಹನೋ
ಯದನುಶಯಾ ಭ್ರಮಂತ್ಯಭವಾಃ ಕುಶರೀರಭೃತಃ ।
ನಿಭೃತಮೋಕ್ಷಹೃದಯಯೋಗಯುಜೋ ಹೃದಯಂ
ಮುನಯ ಉಪಾಸತೇ ತದರಯೋಽಪಿ ಯಯುಃ ಸ್ಮರಣಾತ್ ೨೪

ನಿನ್ನನ್ನು **ಅನ್ಯಥಾ ಉಪಾಸನೆ ಮಾಡು**ವವರಿಗಾಗುವ ಮಹಾ ಅನರ್ಥವನ್ನು **ನೋಡಿದರೆ ಆಶ್ಚರ್ಯವಾಗುವುದು.** ಏಕೆಂದರೆ ಅನ್ಯಥಾ ಉಪಾಸನೆ ಮಾಡುವವರು **ಆತ್ಮಹತ್ಯಾ ಪಾತಕಿಗಳೆನಿಸುತ್ತಾರೆ. ಪರಮಾತ್ಮ**ನ ಸರ್ವೋತ್ತಮ ಸ್ವರೂಪವನ್ನು **ಅಪಲಾಪ ಮಾಡಿದರೆ ಅವನ ಹತ್ಯೆ ಮಾಡಿ**ದಂತೆಯೆ ಸರಿ. ಇಂಥ ಆತ್ಮಘಾತಿಗಳು ತಮಸ್ಸಿನಲ್ಲಿ **ಕೇವಲ ದುಃಖವನ್ನೇ ಅನುಭವಿಸುತ್ತಾರೆ.** ಸ್ವಲ್ಪ ಸುಖವನ್ನೂ ಅನುಭವಿಸುವುದಿಲ್ಲ, **ತಮಸ್ಸಿನಿಂದ ಹೊರಗೆ ಬರಲಾಗದೆ ಅಲ್ಲಿಯೇ** ಹೊರಳಾಡುತ್ತಾರೆ. **ಹೊರಳುತ್ತಲೇ ಅನ್ಯಥೋಪಾಸನೆಯನ್ನೇ ಮಾಡುತ್ತಾರೆ.** ಅವರಿಗೆ ~~ಮರಣವಿಲ್ಲ **ಪುನರ್ಜನ್ಮವಿಲ್ಲ** ನರಕದುಃಖ ಅನುಭವಿಸಲು ಶಕ್ತವಾದ ಕೆಟ್ಟ~~ ಯಾತನಾಶರೀರಗಳನ್ನು **ಹೊಂದಿರುತ್ತಾರೆ. ಪರಮಾತ್ಮ**ನ ದ್ವೇಷ ಮಾಡುವವರು **ಮಾತ್ರವಲ್ಲದೆ ಅವನ ಭಕ್ತರನ್ನು ದ್ವೇಷಿಸುವವರೂ** ತಮಸ್ಸಿನಲ್ಲಿ ಬೀಳುತ್ತಾರೆ. **ಮೋಕ್ಷಸಾಧನ ಸಾಮರ್ಥ್ಯವುಳ್ಳ ಜ್ಞಾನವನ್ನು** ಪೂರ್ತಿಯಾಗಿ ಹೊಂದಿರುವವರು **ವಾಯುದೇವರು. ಅವರ ಅನುಗ್ರಹ** ಪಡೆದು ಸಜ್ಜನರು ಮನನಶೀಲರಾಗಿ **ಹೃದಯದಲ್ಲಿರುವ ಪರಮಾತ್ಮ**ನನ್ನು ಧ್ಯಾನಿಸುವರು. ಅಂಥವರನ್ನು ದ್ವೇಷಿಸುವವರೂ **ಆತ್ಮಘಾತಿಗಳೆನಿಸುತ್ತಾರೆ. ತಮಸ್ಸ**ನ್ನು ಹೊಂದುತ್ತಾರೆ, ಏಕೆಂದರೆ ಜ್ಞಾನೀ ತ್ವಾತ್ಮೈವ **ಮೇ ಮತಂ ಜ್ಞಾನಿ ಬೇರೆ ಅಲ್ಲ ತಾನು** ಬೇರೆ ಅಲ್ಲ ಎನ್ನುವಷ್ಟು ಪ್ರೀತಿ ಇರುವುದರಿಂದ **ಜ್ಞಾನಿಯಲ್ಲಿ ಮಾಡುವ ದ್ವೇಷ**ವನ್ನು ತನ್ನ ದ್ವೇಷ, ತನ್ನ ಹತ್ಯೆ ಎಂದೇ ತಿಳಿಯುತ್ತಾನೆ ಶ್ರೀಹರಿ.

ಅಹೋ !

ಅನ್ಯಥೋಪಾಸನೆ ಮಾಡುವವರಿಗೆ ಉಂಟಾಗುವ ಅನರ್ಥ **ಆಶ್ಚರ್ಯಕರ.**

ಅಸದುಪಾಸನಯಾ ಆತ್ಮಹನಃ ನ ಚ ರಮಂತಿ

ಅನ್ಯಥೋಪಾಸನೆಯಿಂದ ಆತ್ಮಘಾತಿಗಳೆನಿಸಿದವರು ಲಿಂಗಭಂಗಾನಂತರ ಒಂದಿಷ್ಟೂ ಸುಖ ಅನುಭವಿಸುವುದಿಲ್ಲ, ಮಾತ್ರವಲ್ಲ, ಅಪಾರ ದುಃಖವನ್ನೇ ಅನುಭವಿಸ್ತಾರೆ.

ಯದನುಶಯಾ ಭ್ರಮಂತಿ

ಅನ್ಯಥೋಪಾಸಕರು ತಮಸಿನಲ್ಲಿಯೇ ಬಿದ್ದು ಹೊರಳಾಡುತ್ತಾರೆ. ಕೇವಲ ದುಃಖ ಅನುಭವಿಸುತ್ತ ದ್ವೇಷ ಪ್ರತೀಕಾರ ಭಾವನೆಗಳಿಂದ ಪುನಃ ಅನ್ಯಥೋಪಾಸನೆಯಲ್ಲಿಯೇ ಮುಳುಗಿ ಹೊರಳಾಡುತ್ತಾರೆ.

ಅಭವಾಃ ಕುಶರೀರಭೃತಃ

'ಭವ' ಶಬ್ದಕ್ಕೆ ಎರಡು ಅರ್ಥ. ಮಂಗಳ, ಸಂಸಾರ ಎಂದು 'ಅಭವ'ರು ಅಮಂಗಳಕರ ಸ್ವರೂಪರಾದ್ದರಿಂದ, ಲಿಂಗಭಂಗಾನಂತರ ಪುನಃ ಸಂಸಾರವೂ ಇಲ್ಲದಿರುವುದರಿಂದ ಅವರಿಗೆ ತಮಸ್ಸಿನಿಂದ ಬಿಡುಗಡೆ ಇಲ್ಲ, ಅಲ್ಲಿ ಮರಣವಿಲ್ಲ, ಪುನರ್ಜನ್ಮವಿಲ್ಲ, 'ಕು-ಶರೀರ' ಕೆಟ್ಟಯಾತನಾಶರೀರಗಳು ಬೇಕಾದಷ್ಟು ಬರುತ್ತವೆ, ಅವರಿಗೆ ಶಿಕ್ಷೆ ಮಾಡಲು ನೇಮಕಗೊಂಡಿರುವ ವಾಯುದೂತರ ಇಚ್ಛಾನುಸಾರ ಬೇಕಾದ ಶುದ್ಧತಮೋಮಯ ಶರೀರಗಳು ಅವರ ಇಚ್ಛಾಮಾತ್ರದಿಂದ ಲಭ್ಯವಾಗುವುವು.

ನಿಭೃತ ಮೋಕ್ಷಹೃದಯ ಯೋಗಯುಜಃ

ಪೂರ್ಣವಾದ ಮೋಕ್ಷಸಾಧನಜ್ಞಾನ ಉಳ್ಳವನು, 'ನಿಭೃತ-ಮೋಕ್ಷ-ಹೃದಯ' ಉಳ್ಳವನು ಮುಖ್ಯಪ್ರಾಣ. 'ಹೃದಯ' ಎಂದರೆ 'ಹೃತ್' ಹೃದಯದಿಂದಲೆ ಅಂದರೆ ಪ್ರತಿಭೆಯಿಂದಲೆ ಬರುವ 'ಅಯ' ಜ್ಞಾನ. ಮುಖ್ಯಪ್ರಾಣನಿಗೆ ಜ್ಞಾನ ವೇದವನ್ನು ಓದಿಯೇ ಬರಬೇಕಾಗಿಲ್ಲ. ಸ್ವಾಭಾವಿಕ ಪ್ರತಿಭೆಯಿಂದ ಬರುವ ಜ್ಞಾನವೇ ವೇದಕ್ಕೆ ಸಮ್ಮತವಾಗಿರುತ್ತದೆ. ಅದು 'ನಿಭೃತ' 'ಪೂರ್ಣ'ವೆಂದರೆ ಮೋಕ್ಷಸಾಧನ ಸಾಮರ್ಥ್ಯದಿಂದ ಪೂರ್ಣ ವಾಗಿದೆ ಎಂದರ್ಥ. ಅಂಥ ಪೂರ್ಣಪ್ರಜ್ಞರ ಯೋಗ, ಅಂದರೆ, ಅನುಗ್ರಹವುಳ್ಳವರು ಸಜ್ಜನರು ಮೋಕ್ಷಯೋಗ್ಯರಾಗಿರುತ್ತಾರೆ.

ಹೃದಯಮುಪಾಸತೇ

ಪೂರ್ಣಪ್ರಜ್ಞರ ಅನುಗ್ರಹಪಾತ್ರರು ತಂತ್ರಸಾರೋಕ್ತ ಕ್ರಮದಿಂದ **ಹೃದಯದಲ್ಲಿರುವ** ಬಿಂಬವನ್ನು ಉಪಾಸನೆ ಮಾಡಿ **ಮೋಕ್ಷ ಪಡೆಯುತ್ತಾರೆ.**

ತದರಯೋಽಪಿ ಯಯುಃ (ಸ್ಮರಣಾತ್)

ಹರಿವಾಯುಗಳ ಭಕ್ತರನ್ನು ದ್ವೇಷಿಸುವವರೂ **ಕೂಡ ತಮಸ್ಸಿಗೆ**

ಹೋಗುತ್ತಾರೆ. '**ಯಯುಃ**' ಹಿಂದೆ ಹೋಗಿದ್ದಾರೆ, ಮುಂದೆಯೂ ಅವಶ್ಯ ಹೋಗುತ್ತಾರೆ. '**ತದ್ಭಕ್ತದ್ವೇಷ ಏವ ಚ**' ಎಂಬಂತೆ ಅವರೂ ವಿಷ್ಣುದ್ವೇಷಿಗಳೆನಿಸಿ **ಆತ್ಮಘಾತಿಗಳೆನಿಸುತ್ತಾರೆ.** ('ಸ್ಮರಣಾತ್' ಎಂಬುದು ಮುಂದಿನ **ಶ್ಲೋಕಕ್ಕೆ ಅನ್ವಯಿಸುತ್ತದೆ)**

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ ಹೀಗಿದೆ—

ನ ಬತ ರಮಂತ್ಯಹೋ **ಅಸದುಪಾಸನಯಾಽಽತ್ಮಹನೋ**
ಯದನುಶಯಾ ಭ್ರಮಂತ್ಯುರುಭ**ಯೇ ಕುಶರೀರಭೃತಃ** ।
ನಿಭೃತಮರುನ್ಮನೋಽಕ್ಷದೃಢಯೋಗ**ಯುಜೋ** ಹೃದಿ ಯನ್
ಮುನಯ ಉಪಾಸತೇ ತದರಯೋಽಪಿ **ಯಯುಃ** ಸ್ಮರಣಾತ್ ॥

[೧]ಶರೀರ ಸ್ವಾಧೀನವಿದ್ದು ನೀನೂ **ಸೇವೆ ಸ್ವೀಕರಿಸಲು** ಸಿದ್ಧನಿರುವಾಗ ಕೆಲವರು 'ನ ರಮಂತಿ' ನಿನ್ನ **ಪೂಜೆ ಮಾಡುವುದಿಲ್ಲ, ಆಸಕ್ತಿ** ಇಲ್ಲ. ತಮ್ಮ ಶರೀರ ಇಂದ್ರಿಯಗಳನ್ನೇ **ಆರಾಧಿಸುತ್ತ ತಮಗೆ ತಾವೇ ದ್ರೋಹ** ಮಾಡಿಕೊಳ್ಳುತ್ತಾ ~~ಶರೀರಪೂಜೆ ಮಾಡಿ ಅದರ ಸಂಸ್ಕಾರದಿಂದ ಕೆಟ್ಟ ಶರೀರಗಳಲ್ಲಿ ಜನ್ಮ~~ ದುಃಖಮಯವಾದ **ಸಂಸಾರದಲ್ಲಿಯೇ ಬಿದ್ದು** ಹೊರಳಾಡುತ್ತಾರೆ. ಆದರೆ ಪ್ರಾಣ ಮನ **ಇಂದ್ರಿಯಗಳನ್ನು ವಶಪಡಿಸಿಕೊಂಡು** ದೃಢವಾಗಿ ಯೋಗಾಭ್ಯಾಸ ಮಾಡುವ **ಮುನಿಗಳು ಯಾವ** ನಿನ್ನ ಸ್ವರೂಪವನ್ನು ಧ್ಯಾನ ಮಾಡುವರೋ ಅದನ್ನು ನಿನ್ನ **ದ್ವೇಷಿಗಳೂ ಕೂಡ** ಸ್ಮರಣದಿಂದ ಪಡೆದುಕೊಳ್ಳುತ್ತಾರೆ' ಎಂದು ವಿವರಣೆ. ಆದರೆ,

'**ಬಾಲಸ್ತಾವತ್** ಕ್ರೀಡಾಸಕ್ತಃ' ಎನ್ನುವಂತೆ, ದೇಹಾದಿಗಳಲ್ಲಿ ಆಸಕ್ತಿಯೇ **ಉಪಾಸನೆಯೆನಿಸುವುದಿಲ್ಲ.**

ಭಾಗವತವು ಹೇಳುವ 'ಅಸದುಪಾಸನೆ' ಎಂದರೆ ಕಾಲ್ಪನಿಕ ವಸ್ತುವಿನ **ಉಪಾಸನೆ ಹೊರತು** ವ್ಯವಹಾರಸಿದ್ಧವಾದ ಶರೀರಾದಿಗಳ ಉಪಾಸನೆಯಲ್ಲ. **ಭಗವಂತನಲ್ಲಿ ಗುಣಗಳು** ಅಸತ್ಯವಾದರೂ ಉಪಾಸನೆ ಮಾಡಬಹುದು, ಏಕೆಂದರೆ **ಅವು ಕೇವಲ ಕಾಲ್ಪನಿಕವಲ್ಲ,** ಶ್ರುತಿಸ್ಮೃತಿ ಸಿದ್ಧವಾಗಿವೆ ಎಂದು ಅದ್ವೈತಮತವಿದೆ. **ಇಲ್ಲದಿದ್ದರೆ,**

'**ಅಚೇತನಾಸತ್ಯಾಯೋಗ್ಯಾ**ನ್ಯನುಪಾಸ್ಯಾನ್ಯಫಲತ್ವವಿಪರ್ಯಯಾಭ್ಯಾಂ'

---

೧. **ಏವಂಭೂತೇ ಸುಸೇವ್ಯೇಽಪಿ** ತ್ವಯಿ ಬತಾಹೋ ಕಷ್ಟಂ ನ ರಮಂತಿ, ನ ಸಖ್ಯಾದಿನಾ ಭಜಂತಿ **ಅಸದುಪಾಸನಯಾ ದೇಹಾದ್ಯು**ಪಲಾಲನೇನಾತ್ಮಹನಃ ಪ್ರಮಾದಿನಃ। ಕುತಃ। ಯದನುಶಯಾ ಯಸ್ಯಾಮಸದುಪಾಸನಾಯಾಮನುಶಯೋ ವಾಸನಾ ಯೇಷಾಂ ತೇ ಕುಶರೀರಭೃತಃ ಸಂತಃ। ಉರುಭಯೇ ಸಂಸಾರೇ ಭ್ರಮಂತಿ ಪರಿವರ್ತಂತೇ ಅತ ಆತ್ಮಹನ ಇತಿ ಭಾವಃ ॥-ಶ್ರೀಧರಃ ।

ಎಂಬ ಸಾಂಕರ್ಷಣ ಸೂತ್ರವು ಅಸತ್ಯೋಪಾಸನೆಯನ್ನು ನಿಷೇಧಿಸಿರುವುದರಿಂದ ನಿರ್ಗುಣನಾದ ಬ್ರಹ್ಮನಲ್ಲಿ ಅಸತ್ಯವಾದ ಗುಣಗಳನ್ನು ಉಪಾಸನೆ ಮಾಡುವುದು ನಿಷಿದ್ಧವೆನ್ನಬೇಕಾದೀತು.

ದೇಹಾತ್ಮೈಕ್ಯದ ಅಧ್ಯಾಸದಲ್ಲಿ ದೇಹಾದಿಗಳಲ್ಲಿ ಕಾಲ್ಪನಿಕವಾದ ಆತ್ಮತ್ವದ ಉಪಾಸನೆ ಇಲ್ಲ, ಭ್ರಮವಿದೆ. ತನ್ನಿಂದ ತಾನೆ ಉಂಟಾಗುವ ಭ್ರಮವನ್ನು ಉಪಾಸನೆ ಎನ್ನುವುದಿಲ್ಲ. ಹಗ್ಗದಲ್ಲಿ ಹಾವಿನ ಭ್ರಮೆ ತಾನಾಗಿ ಬಂದಮಾತ್ರಕ್ಕೆ ಹಾವಿನ ಉಪಾಸನೆ ಮಾಡಿದಂತಾಗುವುದಿಲ್ಲ.

ಭಾಗವತದಲ್ಲಿ ಹೇಳಿದ 'ಅಸದುಪಾಸನೆ' ಎಂದರೆ ದೇಹಾದಿಗಳಲ್ಲಿ ಆತ್ಮತ್ವದ ಉಪಾಸನೆಯೊಂದನ್ನೇ ಗ್ರಹಿಸುವುದಕ್ಕೂ ಕಾರಣವಿಲ್ಲ. ಪರಮಾತ್ಮತ್ವದ ಉಪಾಸನೆಯನ್ನೂ ಗ್ರಹಿಸಿದರೆ, ಅದಕ್ಕೆ ನಿತ್ಯನರಕದಲ್ಲಿ 'ಕುಶರೀರ', ನರಕಯಾತನೆಯನ್ನು ಅನುಭವಿಸಲು ಯೋಗ್ಯವಾದ ಸ್ವರೂಪಭೂತ ದೈತ್ಯಶರೀರಪ್ರಾಪ್ತಿ ಎಂಬ ಫಲವನ್ನು ಹೇಳಿದಂತಾಗುವುದು. ಹೀಗಾಗಿ 'ನ ಚ ರಮಂತಿ' ಎಂಬುದಕ್ಕೆ 'ಸುಖಲೇಶವಿಲ್ಲದ ನಿತ್ಯ ನರಕದಲ್ಲಿ ನಿತ್ಯದುಃಖಾನುಭವ' ಎಂಬ ಅರ್ಥವನ್ನು ಬಿಟ್ಟು 'ಪರಮಾತ್ಮನಲ್ಲಿ ಅನಾಸಕ್ತಿ' ಎಂದು ವಿವರಣೆ ನೀಡಿದ ಮಾತ್ರಕ್ಕೆ ಉದ್ದೇಶ ಸಿದ್ಧಿಯಾಗುವುದಿಲ್ಲ.

ನಿತ್ಯನರಕವಿದೆ ಎನ್ನುವಲ್ಲಿ ಪ್ರಮಾಣವಿಲ್ಲ ಎಂದು ಬೇರೆ ವ್ಯಾಖ್ಯಾನಕಾರರು ಹೇಳಬಹುದು. ಆದರೆ, ಸ್ಕಾಂದಪುರಾಣ ವೈಷ್ಣವಖಂಡ ವೈಶಾಖಮಾಸಮಾಹಾತ್ಮ್ಯ (ಅಧ್ಯಾಯ ೨೦ ಶ್ಲೋಕ ೩೬,೩೭)ದಲ್ಲಿ ಸ್ಪಷ್ಟವಾಗಿ ಉಕ್ತವಾಗಿದೆ—

ಕಲಿನಾ ಸಹ ಗಚ್ಛಂತಿ ಸ್ವಾಂ ಗತಿಂ ನಿರಯಾಲಯಾಃ ।
ತೇಷಾಂ ಚ ರಾಶಿಸಂಸ್ಥಾ ಯೇ ತನ್ನಾಮಾನೋಽಪರೇಽಪಿ ಚ ।
ಜಾಯಂತೇ ಕರ್ಮಣಾ ಸ್ವೇನ ತತ್ತತ್‌ಕರ್ಮವಿಧಾಯಕಾಃ ॥

'ಕಲಿಯೊಂದಿಗೆ ತಮೋಯೋಗ್ಯರೆಲ್ಲರೂ ತಮ್ಮ ಆ ತಮೋಗತಿಯನ್ನು ಹೊಂದುತ್ತಾರೆ. ಅವರು ತಿರುಗಿ ಭೂಮಿಯಲ್ಲಿ ಹುಟ್ಟುವುದಿಲ್ಲ. 'ಅಪಿಚ' ಮತ್ತು ಅವರ ಗಣಗಳಲ್ಲಿರುವ ಅವರ ಹೆಸರಿನವರೇ ಆದ ಬೇರೇ ಅಸುರರು ಭೂಮಿಯಲ್ಲಿ ತಮ್ಮ ಕರ್ಮಾನುಸಾರ ಹುಟ್ಟುತ್ತಾರೆ, ಆಯಾ ತಾಮಸಕರ್ಮಗಳನ್ನು ಮಾಡುತ್ತಾರೆ.'

ಅನ್ಯಥೋಪಾಸನಯಾಽತ್ಮಹನೋಽಸುರ್ಯಾನ್ ನಾಮ ಲೋಕಾನ್ ನಿತ್ಯನಿರತಿಶಯದುಃಖಾನ್ ನಿರಸ್ತಸಮಸ್ತಸುಖಾನ್ ಪ್ರಾಪ್ನುವಂತಿ । ತದೇತನ್ನ ಚ ರಮಂತ್ಯನುಭವಂತಿ ಚ ನಿತ್ಯದುಃಖಮಿತಿ ಚಶಬ್ದೇನೋಕ್ತಂ । ಅಸುರ್ಯಶಬ್ದೇನ ಚ ಶ್ರುತೌ । ಸುಪ್ತ

ಅರಮಣರೂಪತ್ವಾದಸುರಪ್ರಾಪ್ಯತ್ವಾಚ್ಚ। ಯತ್ರಾನುಶಯನಂ ಕುರ್ವಂತಸ್ತಮಸ್ಯೇವ ಭ್ರಮಂತಿ। ಅಭವಾ ಜನ್ಮವರ್ಜಿತಾಃ।

ಅನ್ಯಥೋಪಾಸನೆಯಿಂದ ಆತ್ಮಘಾತಿಗಳೆನಿಸುವ ಅಸುರರು ಅಸುರ್ಯ ಎಂಬ ನಿತ್ಯ ಮಹಾದುಃಖ ಉಳ್ಳ ಸುಖಲೇಶವಿಲ್ಲದ ಲೋಕಗಳನ್ನು ಹೊಂದುತ್ತಾರೆ. ಇದು 'ನ ಚ ರಮಂತಿ' ಎಂಬಲ್ಲಿರುವ ಚ ಶಬ್ದದಿಂದ ಉಕ್ತವಾಗಿದೆ, ಸುಖಪಡುವುದಿಲ್ಲ ಮಾತ್ರವಲ್ಲ, ನಿತ್ಯದುಃಖವನ್ನೂ ಅನುಭವಿಸುತ್ತಾರೆ ಎಂದು ಸಮುಚ್ಚಯವನ್ನು ಚಶಬ್ದ ಬೋಧಿಸುತ್ತದೆ. ಶ್ರುತಿಯಲ್ಲಿ ಅಸುರ್ಯ ಶಬ್ದವೂ ಇದನ್ನು ಹೇಳುತ್ತದೆ. ಕೇವಲ ಒಳ್ಳೆಯ ಸುಖರೂಪವಾದುದು ವೈಕುಂಠ, ಸುರ್ಯ. ಅದಕ್ಕೆ ವಿಪರೀತವಾದುದು ಕೇವಲ ಮಹಾದುಃಖರೂಪವಾದುದು 'ಅಸುರ್ಯ' ಎನಿಸುವ ತಮಸ್ಸು. ಕೇವಲ ಅಸುರರಿಂದಲೆ ಲಭ್ಯವಾಗುವುದರಿಂದಲೂ ಅದು 'ಅಸುರ್ಯ' ಎನಿಸುತ್ತದೆ. 'ಯದನುಶಯಾಃ ಭ್ರಮಂತಿ' ಎಂದರೆ ಅಸದುಪಾಸನೆಯಲ್ಲಿ ಆಗ್ರಹಪಡುವವರು ತಮಸ್ಸಿನಲ್ಲಿಯೇ ಹೊರಳಾಡುತ್ತಾರೆ ಎಂದರ್ಥ. 'ಅಭವಾಃ' ಎಂದರೆ, ಅವರು ಜಡಶರೀರದಿಂದ ಹುಟ್ಟುವುದಿಲ್ಲ.

ಆತ್ಮಹನ ಇತ್ಯೇಷ ಶಬ್ದೋ ಭಗವದ್ಭಕ್ತದ್ವೇಷಿಣಾಮಪಿ ಸಮ ಇತಿ ದರ್ಶಯತಿ- ನಿಭೃತಮೋಕ್ಷಹೃದಯಯೋಗಯುಜ ಇತ್ಯಾದಿನಾ। ಯೇ ಮುನಯೋ ಹೃದ್ಯಯನಂ ಭಗವಂತಂ ನಿಭೃತಮೋಕ್ಷಹೃದಯೇನ ವಾಯುನಾ ಯೋಗೇನ ಯುಕ್ತಾ ನಿಯಮಿತಾಃ ಸಂತ ಉಪಾಸತೇ ತೇಷಾಮರಯೋಽಪಿ ತದೇವ ತಮೋ ಯಯುಃ। ಪರಿಪೂರ್ಣಂ ಮೋಕ್ಷಾರ್ಥಂ ಜ್ಞಾನಂ ಯಸ್ಯ ಸಃ ನಿಭೃತ ಮೋಕ್ಷ ಹೃದಯಃ।

ಭಗವದ್ದ್ವೇಷಿಗಳಿಗೆ ಹೇಳಿದ 'ಆತ್ಮಹನಃ' ಎಂಬ ಶಬ್ದ ಭಗವದ್ಭಕ್ತ ದ್ವೇಷಿಗಳಿಗೂ ಸಮಾನವಾಗಿದೆ ಎಂದು, 'ನಿಭೃತ ಮೋಕ್ಷ ಹೃದಯ ಯೋಗಯುಜಃ' ಎಂದು ಮುಂತಾದ ವಾಕ್ಯ ತೋರಿಸುತ್ತದೆ. ಯಾವ ಜ್ಞಾನಿಗಳು 'ಹೃದಯ'ನನ್ನು ಎಂದರೆ, 'ಹೃದ್' ಹೃದಯದಲ್ಲಿ 'ಅಯ' ನೆಲೆಸಿರುವ ಭಗವಂತನನ್ನು 'ನಿಭೃತಮೋಕ್ಷಹೃದಯ'ನೆನಿಸಿದ ವಾಯುವಿನ ನಿಯೋಗದಿಂದ ಪ್ರೇರಣೆಯಿಂದ ಯುಕ್ತರಾಗಿ ಉಪಾಸನ ಮಾಡುವರೋ ಅವರ ದ್ವೇಷಿಗಳೂ ಕೂಡ ಅದೇ ತಮಸ್ಸನ್ನು ಹೊಂದುತ್ತಾರೆ ಎಂದು. 'ನಿಭೃತಮೋಕ್ಷ ಹೃದಯ' ಎಂದರೆ ಪರಿಪೂರ್ಣವಾದ, ಮೋಕ್ಷಕ್ಕೆ

ಸಾಧನವಾದ ಜ್ಞಾನ ಉಳ್ಳವನು ವಾಯು ಎಂದರ್ಥ.

ಅಸುರ್ಯಾ ನಾಮ ತೇ ಲೋಕಾ ಅಂಧೇನ ತಮಸಾಽಽವೃತಾಃ ।
ತಾಂಸ್ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇ ಚಾತ್ಮಹನೋ ಜನಾಃ ॥
ಇತಿ ಶ್ರುತಿಃ ।

ನಿತ್ಯದುಃಖಸುಸಂಪೂರ್ಣಂ ನಿರಸ್ತಾನಂದಮವ್ಯಯಂ ।
ತಮೋ ಯಾಂತ್ಯನ್ಯಥಾಜ್ಞಾನಾದ್ ದ್ವೇಷಾದ್ವಾ ಹರಿಸಂಶ್ರಯೇ ॥
ಇತಿ ಪ್ರಾಣಸಂಹಿತಾಯಾಂ ॥

ನಿಭೃತೋ ಮೋಕ್ಷವಿತ್ ಪ್ರಾಣಸ್ತದ್ಯೋಗಾತ್ ತತ್ಪ್ರಸಾದತಃ।
ಜಾನಂತಿ ಪರಮಂ ದೇವಂ ನಾನ್ಯಥಾ ತು ಕಥಂಚನ ॥
ಇತಿ ಭಾಗವತಸಂಹಿತಾಯಾಂ ॥

'ದುಃಖಾನುಭವವೇ ತುಂಬಿದ್ದು ಸುಖಾನುಭವಲೇಶವಿಲ್ಲದ ನಿತ್ಯನರಕ ಲೋಕಗಳು ಅಸುರರಿಗಾಗಿಯೇ ಇರುವ ಲೋಕಗಳಾದ್ದರಿಂದ ಅಸುರ್ಯಲೋಕಗಳೆಂದು ಪ್ರಸಿದ್ಧವಾಗಿವೆ, ಅಂಧಕಾರದಿಂದ ಆವೃತ ವಾಗಿವೆ. ಪರಮಾತ್ಮನ ಸುಂದರ ಸ್ವರೂಪವನ್ನು ಅಲ್ಲಗಳೆಯುತ್ತ ಅನ್ಯಥೋಪಾಸನೆಯನ್ನು ಮಾಡುವವರು ಮತ್ತು ಅವನ ಭಕ್ತರನ್ನು ದ್ವೇಷಿಸುವವರು ಯಾರಾರು ಇರುವರೋ ಅವರೆಲ್ಲರೂ ಸತ್ತಮೇಲೆ ಆ ಲೋಕಗಳನ್ನೇ ಹೋಗಿ ಸೇರುತ್ತಾರೆ' ಎಂದು ಈಶಾವಾಸ್ಯೋಪನಿಷತ್ತು ಹೇಳಿದೆ.

ಅನ್ಯಥಾಜ್ಞಾನದಿಂದಲೂ ಭಗವದ್ಭಕ್ತನಲ್ಲಿ ದ್ವೇಷ ಮಾಡುವುದರಿಂದಲೂ, ನಿತ್ಯದುಃಖಪೂರ್ಣವೂ ಸುಖಲೇಶರಹಿತವೂ ನಿತ್ಯವೂ ಆದ ತಮಸ್ಸನ್ನು ಹೊಂದುತ್ತಾರೆ ಎಂದು ಪ್ರಾಣಸಂಹಿತೆಯಲ್ಲಿ ಉಕ್ತವಾಗಿದೆ.

ಪರಿಪೂರ್ಣ ಮೋಕ್ಷೋಪಯೋಗಿ ಜ್ಞಾನ ಉಳ್ಳವನೆಂದರೆ ಮುಖ್ಯಪ್ರಾಣ. ಅವನ ಯೋಗದಿಂದ ಅಂದರೆ ಅನುಗ್ರಹದಿಂದಲೇ ಪರಮಾತ್ಮನನ್ನು ತಿಳಿಯುತ್ತಾರೆ ಹೊರತು ಸರ್ವಥಾ ಬೇರೆ ರೀತಿಯಿಂದಲ್ಲ ಎಂದು ಭಾಗವತ ಸಂಹಿತೆಯಲ್ಲಿ ಹೇಳಿದೆ.

❖ ❖ ❖

ಶ್ರುತಿಗೀತೆಯಲ್ಲಿ ಹನ್ನೊಂದನೇ ಪದ್ಯ—

ಸ್ವನುರಾಗ ತದ್ಭವಾನ್ ।
ಉರಗೇಂದ್ರಭೋಗದಂಡವಿಷಕ್ತಧಿಯೋ ।
ವಯಮಪಿ ತೇ ಸಮಾಸಮದೃಶೋಽಂಘ್ರಿಸರೋಜಸುಧಾಮ್ ।
ಕ ಇಹ ನು ವೇದ ವಕ್ತುಮಪೇತಜನ್ಮಲಯೋ ।
ಯತ ಉದಗಾದೃಷಿರನು ದೇವಗಣಾ ಉಭಯೇ ॥ ೨೫ ॥

ಕೇವಲ ತನ್ನ ಸ್ಮರಣೆಯೊಂದೇ ಸಾಕೆಂದು ಭಕ್ತರಲ್ಲಿ ಅನುರಕ್ತನಾಗುವ ಶ್ರೀಹರಿಯೆ, **ಶೇಷದೇವನ ಭಕ್ತಿಗೆ ಮೆಚ್ಚಿಯೇ ಅವನ** ನೀಳವಾದ ಶರೀರದ ಮೇ ಮಲಗಲು ಸರ್ವಶಕ್ತನಾದ ನಿನ್ನ ಮನಸ್ಸು ಆಸಕ್ತವಾಗಿದೆ. ಅಂಥ ನಿನ್ನ ಸ್ವರೂಪವ ನೀನು ಒಬ್ಬನೇ ಪೂರ್ತಿ **ತಿಳಿಯಬಲ್ಲೆ, ನಾವು** ನಿನ್ನ ಪಾದಕಮಲ ಮಕರಂ ಸುಧೆಯನ್ನು ಅದರ ಮಹಾಮಹಿಮೆಯ **ಎತ್ತರಕ್ಕೆ ಸಮವಾಗಿ ಅಲ್ಲದಿದ್ದರೂ** ನ ಶಕ್ತಿಗೆ ಸಮವಾಗಿ ತಿಳಿದು **ಹೇಳುತ್ತೇವೆ. ನಮ್ಮಿಬ್ಬರಂತೆ** ನಿತ್ಯಮುಕ್ತನಾದವನ ಹೇಳಬಲ್ಲವನು, ಇನ್ನೊಬ್ಬ ಯಾರಿದ್ದಾನೆ? **ಏಕೆಂದರೆ ಸರ್ವಜ್ಞನೆನಿಸಿರುವ** ಬ್ರಹ್ಮನ ನಿನ್ನಿಂದ ಜನಿಸಿದ್ದಾನೆ. ದೇವಪದವಿಗಳನ್ನು **ಹೊಂದಿರುವ ಇನ್ನು** ಹೊಂದಲಿರು ಬೇರೆ ದೇವ ಸಮೂಹಗಳೂ ಬ್ರಹ್ಮನ **ಅನಂತರ ಜನಿಸಿದವರು** ತಾನೆ? ಅವರು ಯಾರೂ ಹೇಳಲಾರರು.

ಸ್ಮರಣಾತ್ಸ್ವನುರಾಗ !

ಕೇವಲ ಸ್ಮರಣೆಗೇ ಒಲಿದು **ಭಕ್ತರಲ್ಲಿ ಒಳ್ಳೆಯ** ಅನುರಾಗ ಹೊಂದುವವನೆ!

ಹಿಂದಿನ ಶ್ಲೋಕದಲ್ಲಿ ಕೊನೆಯಲ್ಲಿ ಬರುವ **'ಸ್ಮರಣಾತ್'** ಎಂಬುದು ಈ ಶ್ಲೋಕದ ಮೊದಲಲ್ಲಿ ಬರುವ **'ಸ್ವನುರಾಗ' ಎಂಬುದರೊಡನೆ** ಸೇರಿ 'ಸ್ಮರಣಾತ್ಸ್ವನುರಾಗ' ಎಂದು **ಒಂದು ಪದವಾಗಿದೆ.** ಅಲುಕ್ ಸಮಾಸವಾದ್ದರಿಂದ ಪಂಚಮೀಲೋಪವಾಗಿಲ್ಲ. **ವೈದಿಕಸಾಹಿತ್ಯದಲ್ಲಿ ಅಪರೂಪವಾಗಿ ಇಂಥ ಶೈಲಿ ಕಂಡುಬರುತ್ತದೆ.** ಉದಾ: **ಐತರೇಯೋಪನಿಷನ್ಮಂತ್ರ (2.2.5.3)ದ ಕೊನೆಯಲ್ಲಿ** ಬರುವ 'ಇತಿ ಹ ಸ್ಮಾಹಾ' **ಎಂಬುದು ಮುಂದಿನ ಮಂತ್ರದ ಆದಿಯಲ್ಲಿ** ಬರುವ 'ಕೃತ್ಸ್ನೋ ಹ್ಯೇಷಃ' **ಎಂಬುದರೊಡನೆ ಸೇರುತ್ತದೆ.** 'ಇತಿ ಹ ಸ್ಮಾಹಅ' ಎನ್ನುವ ಅಕಾರ 'ಕೃತ್ಸ್ನ' ಶಬ್ದದೊಂದಿಗೆ **ಸಮಾಸಹೊಂದಿ** 'ಅಕೃತ್ಸ್ನ' ಎಂದು ಒಂದು ಪದವಾಗಿದೆ. '**ಛಂದಸ್ಸುಗಳಲ್ಲಿ ಅನುಷ್ಟುಪ್** ಶ್ರೇಷ್ಠ. ಬೇರೆ ಛಂದಸ್ಸುಗಳನ್ನು

ಪ್ರಶಸ್ತವೆಂದು ಹೇಳುವ ಎಲ್ಲ ಪಕ್ಷಗಳೂ 'ಅಕೃತ್ಸ್ನ' ಅಪೂರ್ಣ, ಅಸಮರ್ಥ' ಎಂದು ಉಪನಿಷತ್ತು ಇಲ್ಲಿ ಹೇಳುತ್ತದೆ. ಹಾಗೇ ಪ್ರಕೃತ 'ಸ್ಮರಣಾತ್‌ಸ್ವನುರಾಗ' ಎಂದು ಒಂದು ಪದವೆಂದು ಗ್ರಹಿಸಬೇಕು.

ಉರಗೇಂದ್ರ ಭೋಗ ದಂಡ ವಿಷಕ್ತಧಿಯಃ

'ಉರಗೇಂದ್ರ' ದೊಡ್ಡಹಾವು ನಾಗರಾಜ, ಶೇಷದೇವ, ಅವನ 'ಭೋಗ' ಅಂದರೆ ಶರೀರ. ಅದು ದಂಡದಂತೆ ನೀಳವಾದುದು. ಸರ್ವಶಕ್ತನಾದ ಸ್ವತಂತ್ರನಾದ ಶ್ರೀಹರಿ ಲೀಲೆಯಿಂದ ಹಾವಿನ ಶರೀರದಲ್ಲಿಯೂ ಮನಸ್ಸಿಟ್ಟಿದ್ದಾನೆ. 'ವಿಷಕ್ತಧೀ' ಎನಿಸಿದ್ದಾನೆ. ಅವನ ಭಕ್ತಿಗೆ ಮೆಚ್ಚಿ ಅವನಿಗೆ ಸಾಧನೆಯಾಗಲಿ ಎಂದು ಅವನನ್ನು ಹಾಸಿಗೆಯಾಗಿ ಆಸನವಾಗಿ ಮಾಡಿಕೊಂಡಿದ್ದಾನೆ. ಅದರಿಂದ ಅವನ ಮಹಿಮೆ ಅಚಿಂತ್ಯ.

ತದ್ ಭವಾನ್ ವೇದ

ನಿನ್ನ ಅಚಿಂತ್ಯವಾದ ಮಹಿಮೆಯನ್ನು ಭಕ್ತವಾತ್ಸಲ್ಯವನ್ನು ನೀನೊಬ್ಬನೇ ಅರಿಯಬಲ್ಲೆ.

ಅಂಘ್ರಿ ಸರೋಜಸುಧಾಂ ವಯಮಪಿ ಸಮಾಸಮದೃಶಃ

ನಿನ್ನ ಅಂಘ್ರಿಕಮಲ ಸುಧೆಯನ್ನು ನಾವು, ವೇದಾಭಿಮಾನಿ ಲಕ್ಷ್ಮೀರೂಪಗಳು ಕೂಡ ಪೂರ್ತಿಯಾಗಿ ತಿಳಿಯಲಾರೆವು. ಕೇವಲ 'ಸಮ ಅಸಮ'ರಾಗಿಯೇ ತಿಳಿಯಬಲ್ಲೆವು. ಅಂದರೆ, ನಮ್ಮ ಶಕ್ತಿಗೆ ಸಮವಾಗಿ, ಶಕ್ತಿ ಇದ್ದಷ್ಟೇ ತಿಳಿದೇವು. ಹಕ್ಕಿ ಆಕಾಶದಲ್ಲಿ ಹಾರುವುದು ಪೂರ್ತಿ ಆಕಾಶದಲ್ಲಿ ಅಲ್ಲ. ತನ್ನ ಶಕ್ತಿ ಇದ್ದಷ್ಟು ಮಾತ್ರ. ವಸ್ತುತಃ ನಿನ್ನ ಭಕ್ತವಾತ್ಸಲ್ಯ ಮಹಿಮೆಯ ಎತ್ತರಕ್ಕೆ ಹೋಲಿಸಿದರೆ ನಮ್ಮ ಜ್ಞಾನ ಅದಕ್ಕೆ ಸಮವಲ್ಲ 'ಅಸಮ'ವೇ ಆಗಿದೆ. ಹೀಗಿದ್ದರೂ ಆ ಮಹಿಮೆಯನ್ನು ನಾವೇ ಹೇಳಬೇಕು. ಬೇರೆ ಯಾರೂ ಹೇಳಲಾರರು.

ಕ ಇಹ ನು ವೇದ ವಕ್ತುಮಪೇತ ಜನ್ಮಲಯಃ ?

'ಅಪೇತ ಜನ್ಮಲಯ' ಜನನ ಮರಣರಹಿತ, ನಿತ್ಯಮುಕ್ತ ನೀನು. **ನೀನು ನಿನ್ನ** ಮಹಿಮೆಯನ್ನು ತಿಳಿದು ಹೇಳಬಲ್ಲೆ. ನಾವೂ ನಿತ್ಯಮುಕ್ತರು **ಯಥಾಶಕ್ತಿ ಮಾತ್ರ** ಹೇಳಬಲ್ಲೆವು. ಎಂದಮೇಲೆ ಇನ್ನಾರು **ತಿಳಿದು ಹೇಳಬಲ್ಲರು?** ನಮ್ಮಿಬ್ಬರಂತೆ ನಿತ್ಯಮುಕ್ತನಿನ್ನಾರು? **ಮುಕ್ತಜೀವರು ಕೂಡ ಹಿಂದೆ ಜನ್ಮಲಯವಿದ್ದ**ವರೆ.

ಯತ ಉದಗಾದೃಷಿಃ, ಅನು ಉಭಯೇ ದೇವಗಣಾಃ

'ಋಷಿ' ಜ್ಞಾನಿ, ಸರ್ವಜ್ಞನಾದ ಚತುರ್ಮುಖ ಬ್ರಹ್ಮನೂ ಕೂಡ ನಿನ್ನಿಂದ 'ಉದಗಾತ್' ಜನಿಸಿದ್ದಾನೆ. ಉಭಯ ವಿಧರಾದ ದೇವಸಮೂಹಗಳು ತಮಗೆ ಯೋಗ್ಯವಾದ ದೇವಪದವಿಗಳನ್ನು ಈಗಾಗಲೆ ಪಡೆದಿರುವವರು ಮುಂದೆ ಪಡೆಯಲಿರುವವರು ಎಂದು ಎರಡು ಬಗೆಯಾದ ದೇವ ಸಮೂಹಗಳು ಕೂಡ 'ಅನು' ಬ್ರಹ್ಮನ ಅನಂತರ ಅವನಿಂದಲೆ ಜನಿಸಿದ್ದಾರೆ. ಯಾರೂ ನಿತ್ಯ ಮುಕ್ತರಲ್ಲ. ನಿತ್ಯಮುಕ್ತಳಾದ ನಾನೇ ಪೂರ್ತಿ ತಿಳಿದು ಹೇಳ ಲಾರೆ ಎಂದ ಮೇಲೆ ಬೇರೆಯವರು ಏನು ತಿಳಿಯಬಲ್ಲರು ಹೇಳಬಲ್ಲರು?

ಇಲ್ಲಿ ಬೇರೆ ವ್ಯಾಖ್ಯಾನಕಾರರ ಶ್ಲೋಕಪಾಠ ಹೀಗಿದೆ—

ಸ್ತ್ರಿಯ ಉರಗೇಂದ್ರ ಭೋಗ ಭುಜದಂಡ ವಿಷಕ್ತಧಿಯೋ
ವಯಮಪಿ ತೇ ಸಮಾಃ ಸಮದೃಶೋಽಂಘ್ರಿಸರೋಜಸುಧಾಃ ।
ಕ ಇಹ ನು ವೇದ ಬತಾವರ ಜನ್ಮಲಯೋಽಗ್ರಸರಂ
ಯತ ಉದಗಾದೃಷಿರ್ಯಮನು ದೇವಗಣಾ ಉಭಯೇ ॥

'ಗೋಪಿಕಾ ಸ್ತ್ರೀಯರು ನಿನ್ನ ಹಾವಿನಂಥ ನೀಳವಾದ ತೋಳುಗಳನ್ನೇ ಕಾಮಭಾವನೆಯಿಂದ ನೋಡುವವರು ಅಲ್ಪದೃಷ್ಟಿಯವರು. ನಾವು ವೇದಾಭಿಮಾನಿಗಳು ಪೂರ್ಣದೃಷ್ಟಿಯವರು. ಆದರೂ ನಿನ್ನ ದಯಾದೃಷ್ಟಿಗೆ ನಾವು ಸಮರಾಗಿಯೇ ಕಾಣುತ್ತೇವೆ. ಏಕೆಂದರೆ ನಾವು ನಿನ್ನ ಚರಣಕಮಲವನ್ನು ಧ್ಯಾನಮಾಡುತ್ತೇವೆ. ನೀನು ಅಜ್ಞೇಯ. ಏಕೆಂದರೆ ಅನಾದಿಕಾಲದಿಂದ ಇದ್ದವನು. ಚತುರ್ಮುಖನೂ ಆಧ್ಯಾತ್ಮಿಕ ಆಧಿದೈವಿಕರೆಂದು ಎರಡು ಬಗೆಯ ದೇವತೆಗಳೂ ಇತ್ತೀಚೆಗೆ ಜನಿಸಿದ್ದು ಸಾಯುವವರು. ದೇಹಾದಿ ಉಪಾಧಿಗಳು ಅವರಿಗೆ ಜ್ಞಾನಕ್ಕೆ ಪ್ರತಿಬಂಧಕವಾಗಿವೆ, ಮನಸ್ಸು ಕೂಡ ಕಾಲವಶದಿಂದ ಮಲಿನವಾಗಿದೆ. ಅದರಿಂದ ನಿನ್ನ ಜ್ಞಾನ ಹೊಂದುವ ಸಾಮರ್ಥ್ಯವಿಲ್ಲ. ಹೀಗಾಗಿ ಜ್ಞಾನ ದುರ್ಲಭ. ಅದರಾಸೆ ಬಿಟ್ಟು ಭಕ್ತಿಯನ್ನೇ ನೆಚ್ಚಿಕೊಳ್ಳಬೇಕು' ಎಂದು ಶ್ರೀಧರವ್ಯಾಖ್ಯಾನ[1] ಹೇಳಿದೆ.

೧. ಸ್ತ್ರಿಯೋಽಪಿ ಕಾಮತ ಉರಗೇಂದ್ರಭೋಗ ಭುಜದಂಡ ವಿಷಕ್ತಧಿಯಃ ಅಹೀಂದ್ರ ದೇಹ ಸದೃಶಯೋರ್ಭುಜದಂಡಯೋರ್ವಿಷಕ್ತಾ ಧೀರ್ಯಾಸಾಂ ತಾಃ ಪರಿಚ್ಛಿನ್ನದೃಷ್ಟಯಃ, ಸಮದೃಶಃ ಸಮಮಪರಿಚ್ಛಿನ್ನಂ ತ್ವಾಂ ಪಶ್ಯಂತ್ಯೋ ವಯಂ ಶ್ರುತ್ಯಭಿಮಾನಿನ್ಯೋ ದೇವತಾ ಅಪಿ ತೇ ಸಮಾ ಏವ ಕೃಪಾವಿಷಯತಯಾ। ಅಂಘ್ರಿಸರೋಜಸುಧಾ ಅಂಘ್ರಿಸರೋಜಂ

ಇಲ್ಲಿ 'ಗೋಪಿಕಾ ಸ್ತ್ರೀಯರು ಅಲ್ಪದೃಷ್ಟಿಯವರು, **ವೇದಾಭಿಮಾನಿಗಳು** ಪೂರ್ಣದೃಷ್ಟಿ ಉಳ್ಳವರು ಎಂದು ಇಬ್ಬರಲ್ಲಿ ಬಹಳ ವ್ಯತ್ಯಾಸವಿದ್ದರೂ **ಭಗವಂತ** ಇಬ್ಬರನ್ನೂ ದಯೆಯಿಂದ ಸಮಾನವಾಗಿಯೇ ಕಾಣುತ್ತಾನೆ' ಎನ್ನುವುದು **ಸರಿಯಲ್ಲ**, ಇದನ್ನು ದಯೆ ಎನ್ನಲಾಗದು, ಮೋಹ ಅವಿವೇಕ ಎನ್ನಬೇಕಾಗುವುದು. ವಿವೇಕವಿಲ್ಲದೆ ಎಲ್ಲರಿಗೂ ಒಂದೇ ಬಗೆಯಾಗಿ ಅನುಗ್ರಹ ಮಾಡುವುದು ದೋಷವೆನಿಸುತ್ತದೆ. ಹಾಗೆ ಅನುಗ್ರಹ ಸುಲಭವಾಗಿ ಸಿಗುವುದಾದರೆ ಏಕೆ ಭಜನೆ ಮಾಡಬೇಕು?

ತದ್ದರ್ಶನಾಹ್ಲಾದ ವಿಧೂತಹೃದ್ರುಜೋ
ಮನೋರಥಾಂತಂ ಶ್ರುತಯೋ ಯಥಾ ಯಯುಃ ॥ (೧೦.೩೨.೧೩)

'ವೇದಾಭಿಮಾನಿಗಳು ಜ್ಞಾನಕಾಂಡದಲ್ಲಿ ಪೂರ್ಣನಾದ ಭಗವಂತನನ್ನು ಕಂಡು ಪೂರ್ಣಕಾಮರಾದಂತೆ, ಗೋಪಿಯರೂ ಕೂಡ ಪೂರ್ಣನಾದ ಕೃಷ್ಣನನ್ನು ಕಂಡು ಪೂರ್ಣಕಾಮರಾದರು.' ಎಂದು ಶ್ರೀಧರವ್ಯಾಖ್ಯಾನ ಹೇಳುವಂತೆ, ಗೋಪಿಯರು ~~ಬರಿ ಕಾಮಭಾವನೆಯಿಂದ ಕೇವಲ ಪರಿಚ್ಛಿನ್ನವಾದ ಅಲ್ಪವಾದ ತೋಳುಗಳನ್ನು~~ ಕಂಡರೆನ್ನುವುದು ಭಾಗವತದಲ್ಲಿಯೇ ಪೂರ್ವೋತ್ತರಗಳಿಗೆ ವಿರುದ್ಧವಾಗುವುದು.

ಅದರಿಂದ 'ಸಮಾಸಮದೃಶಃ ವಯಂ ಅಪಿ' ಎಂಬುದನ್ನು 'ವಯಂ ಅಸಮದೃಶಃ ಅಪಿ ಸಮಾಃ' ಎಂದು ಬಿಡಿಸುವುದು ಯುಕ್ತವಾಗುವುದು.

'ಸೃಷ್ಟಿಕಾಲದಲ್ಲಿ ದೇವತೆಗಳಿಗೆ ದೇಹಾದಿ ಉಪಾಧಿಗಳು ಜ್ಞಾನಕ್ಕೆ ಪ್ರತಿಬಂಧಕವಾಗಿರುತ್ತವೆ' ಎನ್ನುವುದೂ ಅಸಂಗತ. ದೇಹಾದಿ ಉಪಾಧಿಗಳಿರುವುದು ಜ್ಞಾನಪ್ರತಿಬಂಧ ಮಾಡುವುದಕ್ಕಾಗಿ ಅಲ್ಲ, ಸಾಧನಶರೀರವಿರುವುದು ಜ್ಞಾನಸಾಧನೆಗಾಗಿ.

ಸುಷ್ಠು ಧಯಂತ್ಯಃ। ಅಯಂ ಭಾವಃ ಇಂತ್ಥಂಭೂತಸ್ತವ ಸ್ಮರಣಾನುಭಾವೋ, ಯೇ ಯೋಗಿನಸ್ತ್ವಾಂ ಹೃದ್ಯಾಲಂಬನಮುಪಾಸತೇ, ಯಾಶ್ಚ ವಯಂ ತ್ವಾಂ ಸಮಂ ಪಶ್ಯಾಮೋ, ಯಾಶ್ಚ ಸ್ತ್ರಿಯಃ ಕಾಮತಃ ಪರಿಚ್ಛಿನ್ನಂ ಧ್ಯಾಯಂತಿ, ಯೇಚ ದ್ವೇಷೇಣ, ಸರ್ವಾನಪಿ ತಾಂಸ್ತ್ವಾಮೇವ ಪ್ರಾಪಯತೀತಿ। ಇಹ ಜಗತ್ಯಗ್ರಸರಂ ಪೂರ್ವಮೇವ ಸಿದ್ಧಂ ತ್ವಾಮವರ ಜನ್ಮಲಯೋಽರ್ವಾಚೀನೋತ್ಪತ್ತಿನಾಶವಾನ್ ಕೋ ನು ಪುಮಾನ್ ವೇದ **ಜಾನಾತಿ।** **ಯತಸ್ತ್ವತ್ತ** ಋಷಿರ್ಬ್ರಹ್ಮಾ ಉತ್ಪನ್ನೋ ಯಂ ಬ್ರಹ್ಮಾಣಮನು ಉಭಯೇ ಆಧ್ಯಾತ್ಮಿ**ಕಾಧಿದೈವಿಕಾ ದೇವಗಣಾ** ಉತ್ಪನ್ನಾಸ್ತತೋಽಪ್ಯರ್ವಾಚೀನಾಃ ಸರ್ವೇ। **ಅಯಮಭಿಪ್ರಾಯಃ।** **ಅರ್ವಾಕ್‌ಸೃಷ್ಟಿಗತಾನಾಂ** ದೇಹಾದ್ಯುಪಾಧಿಕೃತಾಂತರಾಣಾಂ ಕಾಲವ**ಶೇನ ಚ ಮಲಿನ** ಸತ್ವಾನಾಂ **ನ ತಾವದ್**‌ಭಗವಜ್ಜ್ಞಾನ ಸಾಮರ್ಥ್ಯಂ। **ಅತಸ್ತ್ವದೇಕಶರಣತಯಾ** ಶ್ರವಣಕೀರ್ತ**ನಾದಿ ಭಕ್ತಿರೇವ ಸುಕರೇತಿ।** **-ಶ್ರೀಧರಃ।**

ಭಗವಂತನ ಸೇವೆ ಮಾಡುವುದಕ್ಕಾಗಿ 'ತ್ವದನುಪಥಂ ಕುಲಾಯಮಿದಂ' ಎಂದು ಭಾಗವತ ಇಲ್ಲಿಯೇ ಹಿಂದೆ ಒಂಬತ್ತನೆ ಶ್ಲೋಕದಲ್ಲಿ ಸ್ಪಷ್ಟವಾಗಿ ಹೇಳಿದೆ.

'ಬ್ರಹ್ಮಾದಿ ದೇವತೆಗಳಿಗೂ ಜ್ಞಾನ ಸಾಮರ್ಥ್ಯವಿಲ್ಲ' ಎಂದು ಶ್ರೀಧರವ್ಯಾಖ್ಯಾನ ಹೇಳುವುದು ಆಶ್ಚರ್ಯಕರ. ತ್ರಿಮೂರ್ತಿಗಳಲ್ಲಿ ಒಬ್ಬನಾದ ಅಥವಾ ತ್ರಿಮೂರ್ತಿ ರೂಪನಾದ ಭಗವಂತನಿಗೂ ಜ್ಞಾನವಿಲ್ಲ ಎಂದಂತಾಗುತ್ತದೆ.

ವೇದಾಭಿಮಾನಿಗಳು ಮಾತ್ರ ತಾವು ಜ್ಞಾನಕಾಂಡದಲ್ಲಿ ಪೂರ್ಣನಾದ ಅಪರಿಚ್ಛಿನ್ನನಾದ ಭಗವಂತನನ್ನು ಕಂಡು ಪೂರ್ಣಕಾಮರಾಗಿದ್ದಾರೆ. ಆದರೆ ತಾವು ಕಂಡಿದ್ದನ್ನು ಯಾರಿಗೂ ಹೇಳುವುದಿಲ್ಲ 'ಯತೋ ವಾಚೋ ನಿವರ್ತಂತೇ!' ಆದರಿಂದ ಜ್ಞಾನ ದುರ್ಲಭ. ಆದರಾಸೆ ಬಿಟ್ಟು ಭಕ್ತಿಯನ್ನೇ ನೆಚ್ಚಬೇಕು ಎನ್ನುವರೆ?

'ಅನಂತಗುಣಗಳಿರುವುದರಿಂದ ಪೂರ್ಣವಾಗಿ ಯಾರಿಗೂ ತಿಳಿಯಲಾಗದು. ಹೇಳಲಾಗದು' ಎನ್ನುವ ಪ್ರಶ್ನೆಗೆ 'ಕಥಮಯಥಾ ಭವಂತಿ ಭುವಿ ದತ್ತಪದಂ ನೃಣಾಂ' ಎಂದು ಹಿಂದೆಯೇ ಸಮಾಧಾನ ಬಂದಿದೆ. ಆದರಿಂದ 'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ' ಎಂದು ಶ್ರುತಿ ಹೇಳುವಂತೆ ಅಜ್ಞೇಯನಾದ ಭಗವಂತನನ್ನು ಜ್ಞಾನದಿಂದ ಆರಾಧಿಸಲಾಗದು, ಭಕ್ತಿಯಿಂದಲೇ ಆರಾಧಿಸಬೇಕು' ಎಂದು ಶ್ರೀಧರವ್ಯಾಖ್ಯಾನ ಇಲ್ಲಿ ಹೇಳಿದ್ದು ಯುಕ್ತವಲ್ಲ. ವಸ್ತುತಃ ಜ್ಞಾನವಿಲ್ಲದೆ ಭಕ್ತಿ ಇಲ್ಲ.

'ಋಷಿಯಾದ ಬ್ರಹ್ಮನೂ ಇತ್ತೀಚೆಗೆ ಜನಿಸಿದವನು, ಅನಾದಿಯಾದ ಭಗವಂತನನ್ನು ತಿಳಿಯಲಾರ' ಎನ್ನುವ ಪ್ರಶ್ನೆಯೂ ಅಸಂಗತ. ಅನಾದಿಯಾದ ವೇದದಿಂದ ಎಲ್ಲರೂ ಭಗವಂತನನ್ನು ತಿಳಿಯಬಲ್ಲರು. ತಿಳಿದು ಹೇಳಬೇಕೆಂದರೆ ಭಗವಂತನೊಬ್ಬ ಶಕ್ತ.

'ದೇವಗಣಾ ಉಭಯೇ' ಎಂಬಲ್ಲಿ ಆಧ್ಯಾತ್ಮಿಕ ಮತ್ತು ಆಧಿದೈವಿಕ ಎಂದು ಎರಡು ಬಗೆಯಾದ ದೇವತೆಗಳು ಎಂದು ಹೇಳಿದ್ದೂ ಯುಕ್ತವಲ್ಲ. ದೇವತೆಗಳಲ್ಲಿ ಕೆಲವರು ಅಧ್ಯಾತ್ಮದಲ್ಲಿ, ಕೆಲವರು ಅಧಿದೈವದಲ್ಲಿ ಎಂದು ವಿಭಾಗ ಎಲ್ಲಿಯೂ ಹೇಳಿಲ್ಲ. ಎಲ್ಲ ತತ್ತ್ವದೇವತೆಗಳಿಗೂ ನಾನಾ ರೂಪಗಳಿವೆ. ಅವುಗಳಲ್ಲಿ ಕೆಲವು ಅಧ್ಯಾತ್ಮದಲ್ಲಿ, ಕೆಲವು ಅಧಿದೈವದಲ್ಲಿ ಇನ್ನು ಕೆಲವು ಅಧಿಭೂತದಲ್ಲಿ ಎಂದು ಮೂರು ಸ್ಥಳಗಳು. ಅವುಗಳಲ್ಲಿ ಅಧಿಭೂತವನ್ನು ಬಿಟ್ಟು ಕೇವಲ ಎರಡನ್ನೇ ತೆಗೆದುಕೊಂಡು 'ಉಭಯೇ' ಎಂಬ ಶಬ್ದಕ್ಕೆ ವಿವರಣೆ ನೀಡುವುದು ಹೇಗೆ ಸಂಗತ?

ವಸ್ತುತಃ ದೇವತೆಗಳಲ್ಲಿ ಕೆಲವರು ತಮ್ಮ ಪದವಿ ಸಂಪಾದನೆ ಮಾಡಿಕೊಂಡಿರುವವರು, ಇನ್ನು ಕೆಲವರು ಸಂಪಾದನೆ ಮಾಡುತ್ತಿರುವವರು ಎಂದು ಎರಡು

ವಿಭಾಗಗಳನ್ನು 'ಉಭಯೇ' ಎಂದು ಭಾಗವತ ನಿರ್ದೇಶಿಸುತ್ತಿದೆ.

[೨]'ಕೃಷ್ಣಾಕಾರದ ಭಗವಂತನ ಮಹಿಮೆ ಇದು— ನಿರಾಕಾರವನ್ನು ಆರಾಧಿಸುವ ಮುನಿಗಳು ಇನ್ನೂ ಆರಾಧಿಸುತ್ತಲೇ ಇದ್ದಾರೆ. ಈ ನಡುವೆ ಕಂಸಾದಿಗಳು ಸಾಕಾರನಾದ ಕೃಷ್ಣನನ್ನು ದ್ವೇಷದಿಂದ ಸ್ಮರಿಸಿ ಅದೇ ನಿರಾಕಾರದಲ್ಲಿ ಲೀನರಾಗಿ ಹೋದರು. ಮುನಿಗಳು ಎಂದು ನಿರಾಕಾರವನ್ನು ಹೊಂದುವರೋ ತಿಳಿಯದು. ಗೋಪಿಯರು ಕೃಷ್ಣಾಕಾರವನ್ನು ಪ್ರತ್ಯಕ್ಷವಾಗಿ ಎತ್ತಿ ಸ್ತನಗಳ ಮೇಲಿರಿಸಿಕೊಂಡು ಅನುಭವಿಸಿದರು. ವೇದಾಭಿಮಾನಿಗಳು ಸಮದರ್ಶಿಗಳು. ಅಂದರೆ, ಗೋಪಿಯರು ನಡೆದ ದಾರಿಯಲ್ಲಿಯೇ ದೃಷ್ಟಿ ಹಾಕುವವರು, ತಪಸ್ಸಿನಿಂದ ಗೋಪಿಯರಾಗಿ ಜನ್ಮವೆತ್ತಿ ಅವರಿಗೆ 'ಸಮಾಃ' ಸಮಾನರಾಗಿ ಕೃಷ್ಣನನ್ನು ಹೊಂದಬೇಕು' ಎಂದು ವಿಶ್ವನಾಥ ವ್ಯಾಖ್ಯಾನ ಹೇಳಿದೆ.

ಇಲ್ಲಿ ಮುನಿಗಳಾಗಲಿ, ಕಂಸಾದಿ ದ್ವೇಷಿಗಳು, ಎಂದರೆ ಅವರಲ್ಲಿರುವ ಸಜ್ಜೀವರು ಆಗಲಿ ಎಲ್ಲರೂ 'ಪರಾಂತಕಾಲೇ ಪರಾಮೃತಾತ್ ಪರಿಮುಚ್ಯಂತಿ ~~ಸರ್ವೇ' ಎನ್ನುವಂತೆ ಬ್ರಹ್ಮಪ್ರಳಯ ಪರ್ಯಂತ ಕಾಯಲೇಬೇಕು. ಅದರಿಂದ~~ ಮುನಿಗಳು ಎಂದು ಮುಕ್ತಿ ಪಡೆಯುವರೋ ಎಂದು ಚಿಂತಿಸಲು ಕಾರಣವಿಲ್ಲ. ಮತ್ತು ಮುನಿಗಳು ಯಾರೂ ಅದ್ವೈತಿಗಳಲ್ಲ, ನಿರಾಕಾರೋಪಾಸಕರಲ್ಲ.

ದ್ವೇಷಿಗಳು ದ್ವೇಷದಿಂದ ಮುಕ್ತಿಪಡೆಯುವುದಿಲ್ಲ ಎಂದು ಹಿಂದೆಯೇ ಹೇಳಿದೆ.

ದ್ವೇಷಿಗಳು ಸಾಕಾರಕೃಷ್ಣನ ಧ್ಯಾನದಿಂದ ನಿರಾಕಾರದಲ್ಲಿ ಲೀನರಾಗುವುದು ಅದ್ವೈತಕ್ಕೂ ಸಮ್ಮತವಲ್ಲ. 'ತತ್ತ್ವಮಸಿ' ಧ್ಯಾನದಿಂದಲೇ ನಿರಾಕಾರದಲ್ಲಿ ಐಕ್ಯ ಸಾಧ್ಯ ಎನ್ನುತ್ತಾರೆ, ಅವರು.

---

೨. ಅಹೋ ಕೃಷ್ಣಾಕಾರಸ್ಯ ಮಾಹಾತ್ಮ್ಯಂ। ತಾದೃಶಾ ಅಪಿ ಮುನಯೋಽಪರಿಚ್ಛಿನ್ನ ದೃಷ್ಟಯೋಽಪಿ ಯಾವದ್ ಬ್ರಹ್ಮ ಕೈವಲ್ಯಮುಪಾಸೀನಾ ಏವ ತಿಷ್ಠಂತಿ,ತನ್ಮಧ್ಯ ಏವ ಕಂಸಾದಯೋಽಸುರಾಃ ಪರಿಚ್ಛಿನ್ನದರ್ಶಿನಃ ಪಾಪಾತ್ಮತ್ವಾದಶುದ್ಧ ಚಿತ್ತಾ ಅಪಿ ಅವಿಭಾವವತ್ತ್ವಾತ್ ಕೃಷ್ಣಾಂಗ ಸಂಗಮಾಧುರ್ಯಸ್ಯಾಪರೋಕ್ಷಾನುಭವರಹಿತಾ ಅಪಿ ಕೇವಲ ತದಾಕಾರ ಮಾತ್ರ ಸ್ಮರಣಾತ್ ತದೇವ ಬ್ರಹ್ಮ ಪ್ರಾಪ್ಯೈವ ಸ್ಥಿತಾಃ। ಮುನಯಸ್ತು ನ ಜಾನೀಮಹೇ ಕಿಯತಾ ಕಾಲೇನ ತತ್ ಪ್ರಾಪ್ಸ್ಯಂತೀತಿ ಭಾವಃ। ಸ್ತ್ರಿಯೋ ವ್ರಜದೇವ್ಯೋ ಹೃದಿ ವಕ್ಷಃಸ್ಥಲೇ ಯತ್ತೇ ಸುಜಾತ ಚರಣಾಂಬುರುಹಂ ಸ್ತನೇಷ್ವಿತ್ಯುಕ್ತರೀತ್ಯಾ ಅಂಘ್ರಿಸರೋಜಯೋರ್ಯಾಃ ಸುಧಾ ಉಪಾಸತೇ ಸೇವಂತೇ ಅನುಭವಂತೀತಿ ಯಾವತ್, ತಾ ಏವ ವಯಂ ಶ್ರುತಯೋಽಪಿ ಯಯಿಮ, ಸಮಾಃ ತಪಸಾ ಗೋಪೀತ್ವಪ್ರಾಪ್ಯಾ ತತ್ತುಲ್ಯರೂಪಾಃ ಸತ್ಯಃ। ಕಥಂ ಪ್ರಾಪ್ನುತೇತಿ ತತ್ರಾಹುಃ ಸಮದೃಶಃ ಸಮದೃಷ್ಟಯಃ। ತಾಸಾಂ ಯಸ್ಮಿನ್ ವರ್ತ್ಮನಿ ದೃಷ್ಟಿಸ್ತಸ್ಮಿನ್ನೇವ ವರ್ತ್ಮನಿ ತದನುಗತ್ಯಾ ದೃಷ್ಟಿಂ ದದಾನಾ ಇತ್ಯರ್ಥಃ। - ವಿಶ್ವನಾಥ

ವೇದಾಭಿಮಾನಿಗಳೆಂದರೆ, ಪ್ರಕೃತದಲ್ಲಿ ದುರ್ಗಾರೂಪಗಳು, ನಿತ್ಯಮುಕ್ತರು. ಅವರು ಗೋಪಾಂಗನೆಯರಾಗಿ ಜನ್ಮತಳೆದು ಮೋಕ್ಷಸಾಧನೆ ಮಾಡಿಕೊಳ್ಳುವ ಪ್ರಸಂಗವಿಲ್ಲ. ಬೇರೆ ವೇದಾಭಿಮಾನಿಗಳು ಲಯಕಾಲದಲ್ಲಿ ಹರಿಯ ಉದರದಲ್ಲಿ ಗಾಢಸುಪ್ತಿಯಲ್ಲಿ ಇರುವುದರಿಂದ ಅವರು ಈಗ ಭಗವಂತನಲ್ಲಿ ತಮ್ಮ ಸಾಧನೆಯ ಬಗ್ಗೆ ಹೇಳಿಕೊಳ್ಳುವ ಸ್ಥಿತಿಯಲ್ಲಿಲ್ಲ. ತಾವು 'ಸಮ'ರು 'ಸಮದರ್ಶಿ'ಗಳು ಹೇಗೆ ಎನ್ನುವುದನ್ನು ಹೇಗೆ ಹೇಳುತ್ತಾರೆ?

ಹೇ ಸ್ಮರಣಾದೇವ ಸ್ವನುರಕ್ತ। ತತ್ತೇ ಸ್ವರೂಪಂ ಭವಾನೇವ ವೇದ। ಉರಗೇಂದ್ರಭೋಗದಂಡೇ ವಿಷಕ್ತಬುದ್ಧೇಸ್ತೇಽಂಘ್ರಿ ಸರೋಜಸುಧಾಂ ವಯಮಪಿ ಸಮಾಸಮದೃಶಃ। ಸರ್ವಮಾಹಾತ್ಮ್ಯಸ್ಯ ವೇದೈರಪಿ ವಕ್ತುಮಶಕ್ಯತ್ವಾತ್ ಅಸಮದೃಶಃ। ವೇದಾಗಮ್ಯಮಾಹಾತ್ಮ್ಯಸ್ಯಾಪಿ ವೇದೈರೇವ ಗಮ್ಯತ್ವಾತ್ ಸಮದೃಶಃ। ಅತಃ ಕೋಽನ್ಯೋ ವಕ್ತುಂ ವೇದ? ಕೋ ಹ್ಯಸ್ಮಾಂಸ್ತ್ವಾಂ ಚರ್ತೇಽಪೇತಜನ್ಮಲಯಃ। ಯತ ಉದಗಾದ್ ಉತ್ಪತ್ತಿಮಾನೇವ ಋಷಿರ್ಬ್ರಹ್ಮಾ।

ಪ್ರಾಪ್ತಪದಾ ಅಪ್ರಾಪ್ತಪದಾಶ್ಚ ದೇವಗಣಾಃ।

ಕೇವಲ ಸ್ಮರಣೆಗೆ ಒಲಿದು ಜ್ಞಾನಿಗಳಲ್ಲಿ ಒಳ್ಳೆಯ ಅನುರಾಗ ತೋರುವವನೆ! ನಿನ್ನ ಅಚಿಂತ್ಯ ಸ್ವರೂಪವನ್ನು ನೀನೊಬ್ಬನೆ ಬಲ್ಲೆ. ಸರ್ವಶಕ್ತನಾದ ಸ್ವತಂತ್ರನಾದ ನೀನು ದಂಡದಂತೆ ನೀಳವಾದ ಶೇಷ ಶರೀರದ ಮೇಲೆ ಮಲಗಲು ಮನಸ್ಸು ಮಾಡಿರುವೆ. ಇಂಥ ಭಕ್ತವತ್ಸಲನಾದ ನಿನ್ನ ಪಾದಕಮಲ ಸುಧೆಯನ್ನು ವೇದಾಭಿಮಾನಿಗಳು ನಾವೂ ಕೂಡ ನಮ್ಮ ಸಾಮರ್ಥ್ಯಕ್ಕೆ 'ಸಮ'ವಾಗಿಯೇ ಮತ್ತು ನಿನ್ನ ಮಹಿಮೆಯ ವಿಸ್ತಾರಕ್ಕೆ ಎತ್ತರಕ್ಕೆ 'ಅಸಮ'ವಾಗಿಯೇ ತಿಳಿದೇವು. ನಿನ್ನ ಎಲ್ಲ ಮಹಿಮೆಯನ್ನು ವೇದಗಳಿಂದಲೂ ಹೇಳಲಾಗದುದರಿಂದ ವೇದಾಭಿಮಾನಿಗಳು ನಾವು ಅಸಮದರ್ಶಿಗಳು. ವೇದಾಗಮ್ಯಮಾಹಾತ್ಮ್ಯ ಉಳ್ಳವನೇ ಆದರೂ ವೇದಗಳಿಂದಲೇ ಗಮ್ಯನಾದ್ದರಿಂದ ನಾವು ಸಮದರ್ಶಿಗಳು. ಹೀಗೆ ವೇದಗಳೇ ನಿನ್ನನ್ನು ಪೂರ್ತಿ ತಿಳಿಯಲಾರವೆಂದ ಮೇಲೆ ಇನ್ನಾರು ತಿಳಿಯಬಲ್ಲ? ಹೇಳಬಲ್ಲ? ನನ್ನನ್ನೂ ನಿನ್ನನ್ನೂ ಬಿಟ್ಟರೆ ಇನ್ನಾರು ಜನನಮರಣಗಳಿಲ್ಲದ ನಿತ್ಯಮುಕ್ತನಿದ್ದಾನೆ? ಏಕೆಂದರೆ ಜ್ಞಾನಿಯಾದ ಬ್ರಹ್ಮನೂ ನಿನ್ನಿಂದ ಹುಟ್ಟಿದ್ದಾನೆ. ಅವನು ಜನನ ಮರಣವಿಲ್ಲದ ನಿತ್ಯಮುಕ್ತನಲ್ಲ.

'ಉಭಯೇ ದೇವಗಣಾಃ' ಎಂದರೆ ರುದ್ರಾದಿ ಪದವಿಯನ್ನು ಹೊಂದಿರುವವರು. ಹೊಂದಲು ಯೋಗ್ಯರಾದವರು ಎಂದು ಎರಡು ಬಗೆಯಾದ ದೇವತೆಗಳೆಂದರ್ಥ.

ಈ ಶ್ರುತಿಗೀತಾಶ್ಲೋಕಕ್ಕೆ ಮೂಲಶ್ರುತಿ ಇದು—

ತ್ವಂ ವೇತ್ಥ ನಾಪರಸ್ತೇ ಸ್ವರೂಪಂ
ನ ನಿತ್ಯವಾಙ್ನಾಗಭೋಗಪ್ರಿಯಸ್ಯ ।
ಕುತೋ ಬ್ರಹ್ಮಾ ಪ್ರಾಪ್ತಲೋಕಾಶ್ಚ ದೇವಾ—
ಸ್ತಥಾಽಪ್ರಾಪ್ತಾ ಜನಿಮಂತೋ ಯತೋಽಸ್ಮಾತ್ ॥

ಇತಿ ಸಂಕೃತಿ ಶ್ರುತಿಃ॥

'ಶೇಷಶಾಯಿಯಾದ ನಿನ್ನ ಸ್ವರೂಪವನ್ನು ನೀನು ಬಲ್ಲೆ. ಬೇರೆಯವರು ಯಾರೂ ಪೂರ್ತಿಯಾಗಿ ತಿಳಿಯರು. ವೇದಾಭಿಮಾನಿನಿ ದುರ್ಗೆಯೂ ಪೂರ್ತಿ ತಿಳಿಯಳು. ಇನ್ನು ಬ್ರಹ್ಮ ಹೇಗೆ ತಿಳಿದಾನು? ಬ್ರಹ್ಮನಾಗಲಿ, ಲೋಕಾಧಿಪತ್ಯವನ್ನು ಹೊಂದಿರುವವರು, ಹೊಂದಲು ಯೋಗ್ಯರಾಗಿರುವವರೆಂದು ಎರಡು ಬಗೆಯಾದ ಬೇರೆ ದೇವತೆಗಳಾಗಲಿ, ಉತ್ಪತ್ತಿ ಉಳ್ಳವರೇ ಹೊರತು ಜನನ ಮರಣ ರಹಿತರಲ್ಲ.' ಎಂದು ಸಂಕೃತಿ ಶ್ರುತಿ ಇದೆ.

ಮಹಿಮ್ನಃ ಸರ್ವಶೋಽನುಕ್ತೇರ್ವೇದಾಶ್ಚಾಸಮದರ್ಶಿನಃ ।
ತಸ್ಯಾಪಿ ವೇದಗಮ್ಯತ್ವಾತ್ ತಥೈವ ಸಮದರ್ಶಿನಃ ॥

ಇತಿ ತಂತ್ರಭಾಗವತೇ ॥

'ಹರಿಯ ಎಲ್ಲ ಮಹಿಮೆಗಳನ್ನು ಹೇಳದಿರುವುದರಿಂದ ವೇದಾಭಿಮಾನಿಗಳು ಅಸಮದರ್ಶಿಗಳು. ಆ ಮಹಿಮೆಗಳನ್ನು ವೇದದಿಂದಲೇ ತಿಳಿಯಬೇಕಾಗಿರುವುದರಿಂದ ಅವರು ಸಮದರ್ಶಿಗಳೂ ಆಗಿರುವರು' ಎಂದು ತಂತ್ರಭಾಗವತದಲ್ಲಿ ಉಕ್ತವಾಗಿದೆ.

ವಿಜಯಧ್ವಜೀಯದಲ್ಲಿ 'ಸ್ಮರಣಾತ್' ಎಂಬ ಶಬ್ದ ಹಿಂದಿನ ಶ್ಲೋಕದಲ್ಲಿ **ಕೊನೆಗೆ** ಬರುತ್ತದೆ ಹೊರತು ಪ್ರಕೃತ ಶ್ಲೋಕದಲ್ಲಿ ಮೊದಲಿಗೆ ಅಲ್ಲ. ಆದರೂ **ಅದು 'ಹೇ** ಸ್ಮರಣಾದೇವ ಸ್ವನುರಕ್ತ!' ಎಂಬ ತಾತ್ಪರ್ಯವಚನಾನುಸಾರ **ಪ್ರಕೃತ ಶ್ಲೋಕದ ಮೊದಲ ಶಬ್ದವೆನಿಸುತ್ತದೆ'** ಎಂದು ಹೇಳಿದೆ—

'ಸ್ಮರಣಾದಿತ್ಯುತ್ತರ ಶ್ಲೋಕಾನ್ವಯಿ'

'ಈ ಶ್ಲೋಕದಲ್ಲಿ ಕೊನೆಗೆ ಬರುವ ಸ್ಮರಣಾತ್ ಎಂಬುದು ಮುಂದಿನ ಶ್ಲೋಕದಲ್ಲಿ ಅನ್ವಯ ಹೊಂದುತ್ತದೆ' ಎಂದು.

ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿಯೂ 'ಸ್ಮರಣಾತ್' ಎಂಬುದು ಹಿಂದಿನ ಶ್ಲೋಕದಲ್ಲಿ ಕೊನೆಯದಾಗಿ ಬರುತ್ತದೆ.

❖ ❖ ❖

ಶ್ರುತಿಗೀತೆಯಲ್ಲಿ ಹನ್ನೆರಡನೇ ಪದ್ಯ—

ತರ್ಹಿ ನ ಸನ್ನಚಾಸದುಭಯಂ ನಚ ಕಾಲಜವಃ
ಕಿಮಪಿ ನ ತತ್ರ ಶಾಸ್ತ್ರಮುಪಕೃಷ್ಯ ಶಯೀತ ಯದಾ ।
ಜನಿಮಸತಃ ಸತೋ ಮೃತಿಮಜಾತ್ಮನಿ ಯೇ ಚ ಭಿದಾಂ
ವಿಪಣಮೃತೇ ಸ್ಮರಂತ್ಯುಪವಿಶ ಧ್ವನಿಮಾರುವತಃ ॥ ೨೬ ॥

ಜನನರಹಿತನೆ, ನೀನು ವೇದವನ್ನು ತನ್ನ ಸ್ತುತಿ ಮಾತ್ರ ಪರವಾಗಿ ಮಾಡಿಕೊಂಡು ಲಯಕಾಲದಲ್ಲಿ ಮಲಗಿದಾಗ ಸ್ಥೂಲವಾದ ಬ್ರಹ್ಮಾಂಡವಾಗಲಿ ಸೂಕ್ಷ್ಮವಾದ ಮಹದಾದಿ ತತ್ವವಾಗಲಿ ಪಂಚಭೂತವಾಗಲಿ ಇರಲಿಲ್ಲ. ಕಾಲ ದಿಂದಾಗುವ ಜರೆ ಮರಣಗಳಿರಲಿಲ್ಲ. ಸ್ಥೂಲಪ್ರಪಂಚ ಲಯ ಹೊಂದಿತ್ತು. ಬಳಿಕ ಸೃಷ್ಟಿ ಕಾಲದಲ್ಲಿ ಸೂಕ್ಷ್ಮನಾದ ನಿನ್ನಿಂದ ಸ್ಥೂಲ ಪ್ರಪಂಚ ಹುಟ್ಟುತ್ತದೆ. ಸ್ಥೂಲ ಪ್ರಪಂಚದ ಈ ಹುಟ್ಟು ಸಾವುಗಳನ್ನು ನಿನ್ನಲ್ಲಿರುವ ಜೀವಜಡ ಪಂಚಭೇದವನ್ನೂ ವೇದೋಪದೇಶಕನಾದ ವಾಯುವಿನ ಅನುಗ್ರಹದಿಂದಲೆ ಫಲಾಪೇಕ್ಷೆಯಿಲ್ಲದೆ ಜ್ಞಾನಿಗಳು ಉಪಾಸನೆ ಮಾಡುತ್ತಾರೆ. ಅದರಿಂದಲೇ ನೀನು ಅವರ ನುಡಿಯಲ್ಲಿ ಸನ್ನಿಹಿತನಾಗಿರು.

ಅಜ! ಶಾಸ್ತ್ರಮುಪಕೃಷ್ಯ ಯದಾ ಶಯೀತ

ಜನನ ರಹಿತನೆ, ನೀನು ಲಯಕಾಲದಲ್ಲಿ ವೇದಶಾಸ್ತ್ರವನ್ನು ತನ್ನ ಕಡೆಗೆ ಸೆಳೆದುಕೊಂಡು ಮಲಗುವೆ.

ಸೃಷ್ಟಿಕಾಲದಲ್ಲಿ ವೇದಶಾಸ್ತ್ರ ಜೀವರಿಗೆ ವಿಧಿನಿಷೇಧಗಳನ್ನು ಮಾಡುತ್ತಲೆ ವಾಕ್ಯಸಮನ್ವಯದಿಂದ ನಿನ್ನನ್ನು ಸ್ತುತಿಸುತ್ತಿದ್ದರೂ, ಲಯಕಾಲದಲ್ಲಿ ಜೀವರು ಭಗವಂತನ ಉದರದಲ್ಲಿ ಗಾಢನಿದ್ರೆಯಲ್ಲಿ

ಮಲಗಿರುವುದರಿಂದ ಅವರಿಗೇ ವಿಧಿನಿಷೇಧಗಳನ್ನು ಮಾಡದೆ **ಕೇವಲ** ಪದಸಮನ್ವಯ**ದಿಂದ** ಭಗವಂತನನ್ನೇ ಸ್ತುತಿಸುತ್ತದೆ. ಹೀಗೆ ಭಗ**ವಂತ** ವೇದಶಾಸ್ತ್ರವನ್ನು ಜೀವರ ಕಡೆಯಿಂದ ತನ್ನ ಕಡೆಗೇ ಸೆಳೆದುಕೊಂಡಿರು ತ್ತಾನೆ.

ತರ್ಹಿ ಸತ್ ನ, ಅಸತ್ ನ, ಉಭಯಂ ಕಾಲಜವಶ್ಚ ನ

ಆಗ ಪ್ರಳಯಕಾಲದಲ್ಲಿ 'ಸತ್' ಸ್ಥೂಲವಾದ ಬ್ರಹ್ಮಾಂಡವಿಲ್ಲ. 'ಅಸತ್' ಸೂಕ್ಷ್ಮವಾದ ಮಹದಾದಿ ತತ್ವವಿಲ್ಲ. 'ಉಭಯಂ' ಅಗ್ನಿ ಜಲಗಳಿಲ್ಲ. ಅಂದರೆ, ಪಂಚಭೂತಗಳಿಲ್ಲ. ಕಾಲದಿಂದಾಗುವ ಜರೆ ಮರಣಗಳೂ ಇಲ್ಲ.

ಕಿಮಪಿ ನ

ಜೀವರಿಗೆ ಸುಖ ಸಾಧನವಾದ ಯಾವ ವಸ್ತುವೂ ಲಯಕಾಲದಲ್ಲಿ ಇಲ್ಲ. ಅಗಾಧವಾದ ಸಮುದ್ರವೂ ಇಲ್ಲ. ಜಲವೇ ಇಲ್ಲವೆಂದ ಮೇಲೆ ಸಮುದ್ರವೆಲ್ಲಿ? ಕೇವಲ ಚೇತನಪ್ರಕೃತ್ಯಾತ್ಮಕ ಸಮುದ್ರದಲ್ಲಿ ಚೇತನ ಪ್ರಕೃತ್ಯಾತ್ಮಕ ಆಲದೆಲೆಯ ಮೇಲೆ ಹರಿ ಮಲಗುತ್ತಾನೆ.

ಅಸತಃ ಸತೋ ಜನಿಂ ಮೃತಿಂ ಆತ್ಮನಿ ಭಿದಾಂ ಚ ಸ್ಮರಂತಿ

'ಅಸತ್' ಸೂಕ್ಷ್ಮನಾದ ಭಗವಂತ. 'ಸತ್' ಸ್ಥೂಲಪ್ರಪಂಚ. ಭಗವಂತನಿಂದ ಪ್ರಪಂಚದ ಜನಿಮೃತಿ, ಹುಟ್ಟುಸಾವುಗಳಾಗುವುದನ್ನು ಜ್ಞಾನಿಗಳು 'ಸ್ಮರಂತಿ' ಧ್ಯಾನ ಮಾಡುತ್ತಾರೆ. 'ಆತ್ಮನಿ ಭಿದಾಂ ಚ' ಪರಮಾತ್ಮನಲ್ಲಿ ಜೀವ ಜಡ ಪ್ರಪಂಚದ ಭೇದವನ್ನೂ ಧ್ಯಾನಿಸುತ್ತಾರೆ.

ಆರುವತೋ ವಿಪಣಮೃತೇ ಸ್ಮರಂತಿ

'ಆ-ರುವತಃ' ಚೆನ್ನಾಗಿ ವೇದೋಚ್ಚಾರಣ ಮಾಡುವ, ವೇದೋಪದೇಶ ಗೈವ ಮುಖ್ಯಪ್ರಾಣನ ದಯೆಯಿಂದ ಜ್ಞಾನಿಗಳು 'ವಿಪಣಂ ಋತೇ' ಫಲಾಪೇಕ್ಷೆ ಇಲ್ಲದೆ ಕೇವಲ ಭಕ್ತಿಯಿಂದ ಉಪಾಸನೆ ಮಾಡುತ್ತಾರೆ.

ಧ್ವನಿಮುಪವಿಶ

ಆದರಿಂದ ಜ್ಞಾನಿಗಳ 'ಧ್ವನಿ'ಯಲ್ಲಿ ಮಾತಿನಲ್ಲಿ ನೀನು' **ಉಪವಿಶ** ಸನ್ನಿಹಿತ**ನಾಗಿರು.** 'ವಿಪ್ರವಾಕ್ಯೋ ಜನಾರ್ದನಃ' **ಎಂಬಂತೆ ಅವರ** ಮಾತಿನಲ್ಲಿ **ನೀನಿದ್ದು ಶಾಪಾನುಗ್ರಹಶಕ್ತಿ** ನೀಡು. **ಮತ್ತು ಅವರ ಮಾತಿಗೆ**

ಗೋಚರವಾಗಿ ಸ್ತುತಿಸಿಕೊಳ್ಳು. ಮತ್ತು ಅವರು ಉಪದೇಶಿಸುವ ವೇದಧ್ವನಿಯಲ್ಲಿ ಸನ್ನಿಹಿತನಾಗಿ ಶ್ರೋತೃಗಳಿಗೆ ತತ್ವಜ್ಞಾನ ಬರುವಂತೆ ಮಾಡು.

ಬೇರೆ ವ್ಯಾಖ್ಯಾನಕಾರರ ಈ ಶ್ಲೋಕಪಾಠ ಹೀಗಿದೆ—

ತರ್ಹಿ ನ ಸನ್ನ ಚಾಸದುಭಯಂ ನಚ ಕಾಲಜವಃ
ಕಿಮಪಿ ನ ತತ್ರ ಸರ್ವಮವಕೃಷ್ಯ ಶಯೀತ ಯದಾ ।
ಜನಿಮಸತಃ ಸತೋ ಮೃತಿಮುತಾತ್ಮನಿ ಯೇಚ ಭಿದಾಂ
ವಿಪಣಮೃತಂ ಸ್ಮರಂತ್ಯುಪದಿಶಂತಿ ತ ಆರುಪಿತೈಃ ॥

೧"ನೀನು ಪ್ರಳಯಕಾಲದಲ್ಲಿ ಸಕಲ ಪ್ರಪಂಚವನ್ನು ತನ್ನೊಳಗೆ ಲಯ ಮಾಡಿಕೊಂಡು ಮಲಗಿದಾಗ ಸ್ಥೂಲವಾದ ಆಕಾಶಾದಿಗಳಿಲ್ಲ, ಸೂಕ್ಷ್ಮವಾದ ಮಹದಾದಿಗಳಿಲ್ಲ, ಸ್ಥೂಲಸೂಕ್ಷ್ಮಗಳಿಂದಾದ ಶರೀರಾದಿಗಳಿಲ್ಲ, ಕಾಲಪರಿಣಾಮವಾದ ಜರೆ ಮುಂತಾದುವು ಇಲ್ಲ, ಜ್ಞಾನ ಸಾಧನವಾದ ಇಂದ್ರಿಯ ಪ್ರಾಣಾದಿಗಳಿಲ್ಲ, ತತ್ತ್ವಬೋಧಕವಾದ ಶಾಸ್ತ್ರವಿಲ್ಲ, ಜೀವರಿಗೆ ಜ್ಞಾನಪ್ರತಿಬಂಧಕವಾದ ದೇಹಾದಿ ಉಪಾಧಿಗಳ ಆವರಣವಿಲ್ಲದಿದ್ದರೂ ಜ್ಞಾನಸಾಧಕವಿಲ್ಲದ್ದರಿಂದ ಜ್ಞಾನ ಲಾಭವಿಲ್ಲ, ಸೃಷ್ಟಿಕಾಲದಲ್ಲಿ ಜ್ಞಾನಸಾಧನವಿದ್ದರೂ ದೇಹಾದಿ ಆವರಣಗಳು ಕಾಲಕೃತ ಜರಾದಿಗಳಿರುವುದರಿಂದ ಜ್ಞಾನಸಾಧನ ಸಾಮರ್ಥ್ಯವಿಲ್ಲ; ಮತ್ತು ಅಸತ್ಕಾರ್ಯವಾದಿಗಳಾದ ವೈಶೇಷಿಕರು 'ಅಸತೋ ಜನಿಂ' ಅಸತ್ತಿಗೆ ಉತ್ಪತ್ತಿಯನ್ನೂ,

೧. ಯದಾ ತು ಭವಾನ್ ಸರ್ವಮವಕೃಷ್ಯೋಪಸಂಹೃತ್ಯ ಶಯೀತ ತರ್ಹಿ ತದಾಽನುಶಯಿನಾಂ ಜೀವಾನಾಂ ಜ್ಞಾನಸಾಧನಂ ನಾಸ್ತಿ। ಯತಸ್ತದಾ ನ ಸತ್ ಸ್ಥೂಲಮಾಕಾಶಾದಿ, ನ ಚಾಸತ್ ಸೂಕ್ಷ್ಮಂ ಮಹದಾದಿ, ನ ಚೋಭಯಂ ಸದಸದ್ಭ್ಯಾಮಾರಬ್ಧಂ ಶರೀರಂ। ನ ಚ ಕಾಲ ಜವಸ್ತನ್ನಿಮಿತ್ತಭೂತಂ ಕಾಲವೈಷಮ್ಯಂ। ಏವಂ ಸತಿ ತತ್ರ ತದಾ ನ ಕಿಮಪೀಂದ್ರಿಯ ಪ್ರಾಣಾದ್ಯಪಿ। ನ ಚ ಜ್ಞಾಪಕಂ ಶಾಸ್ತ್ರಮಪಿ। ಅಯಮಭಿಪ್ರಾಯಃ। ಅರ್ವಾಕ್ ಸೃಷ್ಟಿಗತಾನಾಂ ದೇಹಾದ್ಯುಪಾಧಿಕೃತಾಂತರಾಣಾಂ ಕಾಲವಶೇನ ಚ ಮಲಿನಸತ್ವಾನಾಂ ನ ತಾವದ್ ಭಗವಜ್ಞಾನಸಾಮರ್ಥ್ಯಂ। ಯದಾ ತು ಪ್ರಳಯಸಮಯೇ ನ ಬಹ್ವಂತರಮಸ್ತಿ ತದಾಽಪಿ ಸಾಧನಾಭಾವಾನ್ನ ಭಗವಜ್ಞಾನ ಸಾಮರ್ಥ್ಯಂ ಅಸತೋ ಜಗತೋ ಜನಿಮುತ್ಪತ್ತಿಂ ಯೇ ವೈಶೇಷಿಕಾದಯೋ ವದಂತಿ, ಸತ ಏಕವಿಂಶತಿ ಪ್ರಕಾರಸ್ಯ ದುಃಖಸ್ಯ ನಾಶಂ ಮೋಕ್ಷಂ ವದಂತಿ ಯೇ ನೈಯಾಯಿಕಾಃ ಉತಾಪಿ ಯೇ ಚ ಸಾಂಖ್ಯಾದಯ ಆತ್ಮನಿ ಭಿದಾಂ ಭೇದಂ ಚ, ಯೇ ಮೀಮಾಂಸಕಾಃ ಕರ್ಮಫಲ ವ್ಯವಹಾರಂ ಋತಂ ಸತ್ಯಂ ಸ್ಮರಂತಿ ವದಂತಿ, ತೇ ಸರ್ವೇ ಆರುಪಿತೈರ್ಭ್ರಮೈರೇವೋಪದಿಶಂತಿ, ನ ತತ್ವದೃಷ್ಟ್ಯಾ। ಇತೋಽಪಿ ಜ್ಞಾನಂ ನ ಸುಶಕಂ। ಉಪದಿಶತಾಮಪಿ ಭ್ರಮಬಾಹುಲ್ಯಾತ್। -ಶ್ರೀಧರಃ

ನೈಯಾಯಿಕರು 'ಸತೋ ಮೃತಿಂ' ಏಕವಿಂಶತಿ ದುಃಖ ಧ್ವಂಸರೂಪ **ಮುಕ್ತಿಯನ್ನೂ** ಹೇಳುತ್ತಾರೆ, ಸಾಂಖ್ಯರು ಆತ್ಮರಲ್ಲಿ ಪರಸ್ಪರ ಭೇದವನ್ನು **ಹೇಳುತ್ತಾರೆ**. ಮೀಮಾಂಸಕರು ಕರ್ಮಫಲವಾದ ವ್ಯವಹಾರವನ್ನು ಸತ್ಯ ಎನ್ನುತ್ತಾರೆ. **ಹೀಗೆ** ಇವರೆಲ್ಲರೂ '**ಆರುಪಿತ**'ಗಳಿಂದಲೇ ಭ್ರಮೆಗಳಿಂದಲೇ ಉಪದೇಶ ಮಾಡುತ್ತಾರೆ. ಹೀಗೆ ಸರಿಯಾದ ಉಪದೇಶಕರಿಲ್ಲದುದರಿಂದಲೂ ಜ್ಞಾನ ದುರ್ಲಭವಾಗಿದೆ. ಅದರಾಸೆ ಬಿಟ್ಟು ಭಕ್ತಿಯನ್ನೇ ನೆಚ್ಚಿಕೊಳ್ಳಬೇಕು.'

'ಲಯಕಾಲದಲ್ಲಿ ಶರೀರ ಇಂದ್ರಿಯಗಳು ಜ್ಞಾನ ಸಾಧನಗಳಿಲ್ಲ. ಅದರಿಂದ ಜ್ಞಾನ ಪ್ರತಿಬಂಧಕವಾದ ದೇಹಾದಿ ಉಪಾಧಿಗಳ ಆವರಣವಿಲ್ಲದಿದ್ದರೂ ಜ್ಞಾನಸಾಧನವಿಲ್ಲದಿರುವುದರಿಂದಲೇ ಜ್ಞಾನ ದುರ್ಲಭ. ಅದರಿಂದ ಭಕ್ತಿಯನ್ನೇ ಮುಕ್ತಿಗೆ ಸಾಧನವಾಗಿ ಬಳಸಿಕೊಳ್ಳಬೇಕು' ಎಂದು ಶ್ರೀಧರವ್ಯಾಖ್ಯಾನ **ಹೇಳುವುದು**, ಲಯಕಾಲದಲ್ಲಿ ಭಕ್ತಿ ಮಾಡಬೇಕೆಂದೇ? ಅದು **ಸಾಧ್ಯವೆ? ಶ್ರವಣ** ಕೀರ್ತನಾದಿಗಳನ್ನು ನಡೆಸಲು ಶರೀರಬೇಡವೆ?

'ನಾನ್ಯಃ ಪಂಥಾ' ಎಂದು ವೇದ ಘೋಷಿಸುತ್ತಿರುವಾಗ ಜ್ಞಾನವನ್ನು ದುರ್ಲಭವೆಂದು ಕೈಬಿಡಲಾದೀತೆ?

'ಜ್ಞಾನೋಪದೇಶಕರು ವೈಶೇಷಿಕಾದಿ ದರ್ಶನಕಾರರು ಭ್ರಮೆಗೊಳಗಾಗಿರುವುದರಿಂದಲೂ ಜ್ಞಾನ ದುರ್ಲಭ' ಎನ್ನುತ್ತಾರೆ. ಆದರೆ ಈ ಮಾತನ್ನು ಹೇಳುವುದು ಅವರ ಪ್ರಕಾರ ವೇದಗಳು. ವೇದಾಭಿಮಾನಿಗಳು. ಅವರು ತಾವೂ ಹೀಗೇ ಭ್ರಮೆಗೊಳಗಾಗಿದ್ದೇವೆ ಎನ್ನುತ್ತಿರುವರೆ?

'ವೇದಾ ಹ್ಯೇವೈನಂ ವೇದಯಂತಿ ತಸ್ಮಾದಾಹುರ್ವೇದಾ ಇತಿ।'

'ವೇದಗಳು ಮಾತ್ರವೇ ಪರಮಾತ್ಮನ ಬಗ್ಗೆ ಸರಿಯಾದ ಜ್ಞಾನ ನೀಡಬಲ್ಲುವು, ಅದರಿಂದಲೆ ಅವುಗಳಿಗೆ 'ವೇದ'ಗಳೆಂದು ಹೆಸರು ಎಂದು ವೇದವೇ ಹೇಳುತ್ತಿದೆ. ಅಂಥ ವೇದದಿಂದಲೆ ಜ್ಞಾನ ಸಿಗುತ್ತಿರುವಾಗ ಅದನ್ನು ಬಿಟ್ಟು ಭಕ್ತಿಮಾರ್ಗವನ್ನು ಏಕೆ ಹಿಡಿಯಬೇಕು?

ಪ್ರಳಯಕಾಲದಲ್ಲಿ ಜ್ಞಾನಸಾಧನ ಶರೀರಾದಿಗಳಿಲ್ಲದಿರುವುದರಿಂದ **ಜ್ಞಾನಲಾಭ ಅಪ್ರಸಕ್ತ**. **ಅದನ್ನು** ನಿಷೇಧಮಾಡುವುದು ಅಯುಕ್ತ. ಸೃಷ್ಟಿಕಾಲದಲ್ಲಿ **ಜ್ಞಾನಸಾಧಕವಾದ ಶರೀರಾದಿಗಳಿದ್ದರೂ** ಅವುಗಳನ್ನು ಜ್ಞಾನಪ್ರತಿಬಂಧಕಗಳೆಂದು **ಕರೆಯುವುದೂ** ಅಯುಕ್ತ.

'ಶಾಸ್ತ್ರಮುಪಕೃಷ್ಯ' ಪ್ರಳಯೇ ಶಾಸ್ತ್ರಸ್ಯ ಪ್ರವೃತ್ತ್ಯಭಾವಾತ್ । 'ಅಸತಃ'

ಸೂಕ್ಷ್ಮರೂಪಾತ್ ಸತಃ ಸ್ಥೂಲರೂಪಸ್ಯ ಪರಮೇಶ್ವರಪರ್ಯಂತಂ ಯಥಾಕ್ರಮಂ ಜನ್ಮ ಮೃತಿಂ ಚ, ಸರ್ವಸ್ಮಾತ್ ಪರಮಾತ್ಮನಿ ಭೇದಂ ಚ 'ವಿಪಣಂ' ಫಲಾಪೇಕ್ಷಾಮೃತೇ ಯೇ ಸ್ಮರಂತಿ ತೇಷಾಂ ಧ್ವನಿಮುಪವಿಶ । ಆರುವತೋ ವಾಯೋಃ ಪ್ರಸಾದಾತ್ ತಥಾ ಸ್ಮರಂತಿ ॥

'ಶಾಸ್ತ್ರಮುಪಕೃಷ್ಯ' ಎಂದರೆ, ಪ್ರಳಯಕಾಲದಲ್ಲಿ ವಿಧಿನಿಷೇಧರೂಪವಾದ ಶಾಸ್ತ್ರವನ್ನು ಕೇಳುವರಿಲ್ಲದ್ದರಿಂದ ಅದನ್ನು ಕೇವಲ ತನ್ನ ವಿಷಯದಲ್ಲಿಯೇ ಸ್ತುತಿರೂಪವಾಗಿ ಇಟ್ಟುಕೊಂಡು ಮಲಗುತ್ತಾನೆ ಭಗವಂತ ಎಂದರ್ಥ. 'ಅಸತಃ' ಎಂದರೆ ಸೂಕ್ಷ್ಮರೂಪವಾದ ಮಹದಾದಿಗಳಿಂದ 'ಸತಃ' ಸ್ಥೂಲರೂಪವಾದ ಬ್ರಹ್ಮಾಂಡಕ್ಕೆ, ಸೂಕ್ಷ್ಮರೂಪನಾದ ನಿನ್ನಿಂದ ಸ್ಥೂಲರೂಪದ ಬ್ರಹ್ಮಾಂಡಕ್ಕೆ, ಪರಮೇಶ್ವರಪರ್ಯಂತ ಕ್ರಮವಾಗಿ ಉತ್ಪತ್ತಿಯನ್ನೂ ಲಯವನ್ನೂ, ಎಲ್ಲಕ್ಕಿಂತ ಪರಮಾತ್ಮನಲ್ಲಿ ಭೇದವನ್ನೂ 'ವಿಪಣಂ' ಅಂದರೆ ಫಲಾಪೇಕ್ಷೆಯನ್ನು 'ಋತೇ' ಬಿಟ್ಟು ಯಾರು ಉಪಾಸನೆ ಮಾಡುತ್ತಾರೋ ಅವರ ಮಾತಿನಲ್ಲಿ ನೀನು ಸನ್ನಿಹಿತನಾಗಿರು. 'ಆರುವತಃ' ಎಂದರೆ 'ಆ' ಚೆನ್ನಾಗಿ 'ರುವತಃ' ವೇದೋಪದೇಶ ಮಾಡುವ ವಾಯುವಿನ ಅನುಗ್ರಹದಿಂದ ಹಾಗೆ ಉಪಾಸನೆ ಮಾಡುತ್ತಾರೆ.

ನಾಸದಾಸೀನ್ನೋ ಸದಾಸೀತ್ ತದಾನೀಂ
ನಾಸೀದ್ ರಜೋ ನೋ ವ್ಯೋಮಾ ಪರೋ ಯತ್ ।
ಕಿಮಾವರೀವಃ ಕುಹ ಕಸ್ಯ ಶರ್ಮ-
ನ್ನಂಭಃ ಕಿಮಾಸೀದ್ ಗಹನಂ ಗಭೀರಂ ॥ ಇತ್ಯಾದ್ಯಾ ಶ್ರುತಿಃ ॥

'ಪ್ರಳಯ ಕಾಲದಲ್ಲಿ ಸೂಕ್ಷ್ಮವಾದ ಮಹದಾದಿಗಳಿರಲಿಲ್ಲ, ಸ್ಥೂಲವಾದ ಬ್ರಹ್ಮಾಂಡಾದಿಗಳಿರಲಿಲ್ಲ, ರಜಸ್ಸು ಮುಂತಾದ ಗುಣಗಳಿರಲಿಲ್ಲ, ಮೂರ್ತ ಯಾವುದೂ ಇಲ್ಲದ್ದರಿಂದ ಮೂರ್ತಸಂಬದ್ಧವಾಗಿ ಅವ್ಯಾಕೃತಾಕಾಶವೂ ಇರಲಿಲ್ಲ, ಆಗ ಎಲ್ಲಿ ಯಾರ ಸುಖಕ್ಕಾಗಿ ಏನಿತ್ತು? ಅಗಾಧವಾದ ಆಳವಾದ ನೀರಿತ್ತೇನು?' ಎಂದು ಮುಂತಾಗಿ ಶ್ರುತಿ ಇದೆ.

ಸೂಕ್ಷ್ಮಾಣಿ ಮಹದಾದೀನಿ ಸ್ಥೂಲಾನ್ಯಂಡಾದಿಕಾನಿ ಚ ।
ಉಭಯಂ ತ್ವಗ್ನಿರಾಪಶ್ಚ ನ ಕಿಂಚಿತ್ ಪ್ರಳಯೇಽಭವತ್ ॥

ಇತಿ ಪ್ರಕಾಶಸಂಹಿತಾಯಾಂ ॥

'ಸೂಕ್ಷ್ಮವಾದ ಮಹದಾದಿಗಳಾಗಲಿ ಸ್ಥೂಲವಾದ ಬ್ರಹ್ಮಾಂಡಾದಿಗಳಾಗಲಿ ಅಗ್ನಿಜಲಗಳೆರಡಾಗಲಿ ಯಾವುದೂ ಪ್ರಳಯದಲ್ಲಿರಲಿಲ್ಲ' ಎಂದು ಪ್ರಕಾಶಸಂಹಿತೆಯಲ್ಲಿ ಹೇಳಿದೆ.

ಸರ್ವ ವೇದಾದಿರೂಪೇಣ ಪ್ರಾಣಸ್ಯಾರುವತಃ ಸದಾ ।
ಪ್ರಸಾದಾದ್ ಯೇ ವಿಜಾನಂತಿ ಸೂಕ್ಷ್ಮಾತ್ ಸ್ಥೂಲಜನಿಂ ಕ್ರಮಾತ್ ॥
ಮೃತಿಂ ಚ ಸರ್ವಜೀವಾದೇರೀಶಸ್ಯ ವ್ಯತಿರಿಕ್ತತಾಂ ।
ಜಾನಂತಿ ಯೇ ನಿರಾಕಾಂಕ್ಷಾಸ್ತೇಷಾಂ ವಾಚಿ ಜನಾರ್ದನಃ ॥
ಇತಿ ತಂತ್ರಭಾಗವತೇ ॥

'ಸಕಲ ವೇದಾದಿರೂಪದಿಂದ ಸದಾ ಭಗವಂತನನ್ನು ಸ್ತೋತ್ರ ಮಾಡುವ ವಾಯುವಿನ ಅನುಗ್ರಹದಿಂದ, ಸೂಕ್ಷ್ಮದಿಂದ ಕ್ರಮವಾಗಿ ಸ್ಥೂಲದ ಉತ್ಪತ್ತಿಯನ್ನೂ ಲಯವನ್ನೂ ಎಲ್ಲ ಜೀವಾದಿಗಳಿಂದ ಭಗವಂತನಿಗೆ ಭೇದವನ್ನೂ ಯಾರು ಫಲಾಪೇಕ್ಷೆಯಿಲ್ಲದೆ ಉಪಾಸನೆ ಮಾಡುವರೋ ಅವರ ಮಾತಿನಲ್ಲಿ ಭಗವಂತನಿರುತ್ತಾನೆ' ಎಂದು ತಂತ್ರಭಾಗವತ ಹೇಳಿದೆ.

❖❖❖

ಶ್ರುತಿಗೀತೆಯಲ್ಲಿ ಹದಿಮೂರನೆ ಪದ್ಯ—

ತ್ರಿಗುಣಮಯಃ ಪುಮಾನಿತಿ ಯದಬೋಧಕೃತಾ
ತ್ವಯಿ ನತು ಭವೇತ್ತದವಬೋಧರಸೇ ।
ಸದಿವ ಮನಸ್ತ್ರಿವೃತ್ ತ್ವಯಿ ಭವತ್ಯಸತಾಂ ಮನುಜಾ-
ದಯೋ ವಿಮೃಶಂತ್ಯಶೇಷಮಿದಮಾರ್ತತಯಾऽऽತ್ಮವಿದಃ ॥ ೨೭ ॥

ಜೀವರಲ್ಲಿ ತ್ರಿಗುಣ ಬದ್ಧತ್ವವೆಂಬುದು ಪರಮಾತ್ಮ ತತ್ವಜ್ಞಾನಾಭಾವ ಪ್ರಯುಕ್ತ. ಜ್ಞಾನಸ್ವರೂಪನೇ ಆದ ನಿನ್ನಲ್ಲಿ ಅದು ಹೇಗೆ ಇರಲು ಸಾಧ್ಯ? ಮೂಲ ರೂಪದಲ್ಲಿಲ್ಲದಿದ್ದರೂ ಅವತಾರಗಳಲ್ಲಿ ಅದು ಇದೆ ಎನ್ನುವುದು ದುರ್ಜನರ ಪಕ್ಷ, ದೇವತೆಗಳ ಪಕ್ಷವಲ್ಲ. ದೇವತೆಗಳು ಪರಮಾತ್ಮನನ್ನೂ ಅವನ ಅವತಾರಗಳನ್ನೂ ಸರಿಯಾಗಿ ತಿಳಿದವರಾದ್ದರಿಂದ ಅವನಿಗಿಂತ ಬೇರೆಯಾದ **ಜೀವಾತ್ಮನನ್ನೇ ತ್ರಿಗುಣಬದ್ಧನೆಂದು** ದುಃಖಿ ಎಂದು ವಿಮರ್ಶೆಯಿಂದ ತಿಳಿಯುತ್ತಾರೆ.

ತ್ರಿಗುಣಮಯಃ ಪುಮಾನಿತಿ ಯತ್ ಅಬೋಧಕೃತಾ ।

'ಪುಮಾನ್' ಜೀವನು 'ತ್ರಿಗುಣಮಯ' **ತ್ರಿಗುಣಬದ್ಧನೆನ್ನುವುದು**

'ಅಬೋಧಕೃತಾ' ಪರಮಾತ್ಮ ತತ್ತ್ವಜ್ಞಾನಾಭಾವಕೃತವಾಗಿದೆ, ಹೊರತು ಸ್ವಾಭಾವಿಕವಲ್ಲ. ಜ್ಞಾನ ಬಂದಾಗ ಪರಮಾತ್ಮ ಅವನ ತ್ರಿಗುಣ ಬಂಧವನ್ನು ಕಳೆಯುತ್ತಾನೆ.

ತ್ವಯಿ ನತು ಭವೇತ್ ತದವಬೋಧರಸೇ

ನಿನ್ನಲ್ಲಿ ಈ ತ್ರಿಗುಣಬದ್ಧತ್ವವಿರಲಾರದು. ಏಕೆಂದರೆ ಅದಕ್ಕೆ **ಕಾರಣವಾದ ಪರಮಾತ್ಮ ತತ್ತ್ವಜ್ಞಾನಾಭಾವ** ಪರಮಾತ್ಮನಾದ ನಿನಗೆ ಇಲ್ಲ. **ನೀನು ಜ್ಞಾನಸ್ವರೂಪ. ನಿತ್ಯಮುಕ್ತ.** ನಿನ್ನ ಜ್ಞಾನ ಸದಾ ನಿನಗಿದೆ **ಎಂದಮೇಲೆ ತ್ರಿಗುಣಬದ್ಧತ್ವ ಎಂದೂ** ನಿನ್ನಲ್ಲಿರಲಾರದು. ಜೀವನೂ **ಜ್ಞಾನಸ್ವರೂಪನೇ ಆದರೂ ಆ ಜ್ಞಾನ** ಸಂಸಾರಾವಸ್ಥೆಯಲ್ಲಿ **ವ್ಯಕ್ತವಾಗಿಲ್ಲದ್ದರಿಂದ ತ್ರಿಗುಣ ಬದ್ಧತ್ವವಿದೆ.**

ಸದಿವ ಮನಸ್ತ್ರಿವೃತ್ ತ್ವಯಿ ಭವತ್ಯಸತಾಂ

ಮನ ಇಂದ್ರಿಯ ಶರೀರಗಳು ನಿನ್ನಲ್ಲಿಯೂ ಅವತಾರಗಳಲ್ಲಿ

'ತ್ರಿವೃತ್' ತ್ರಿಗುಣಾತ್ಮಕವಾಗಿರುತ್ತವೆ ಎನ್ನುವುದು ದುರ್ಜನರ ಪಕ್ಷ. '**ಪರಮಾತ್ಮ ಮೂಲರೂಪದಲ್ಲಿ** ನಿರ್ಗುಣ. ಮೂಲರೂಪದಲ್ಲಿ ಅವನಲ್ಲಿ **ತ್ರಿಗುಣಬದ್ಧತ್ವ**ವಿಲ್ಲ ಎನ್ನೋಣ. ಆದರೆ ರಾಮಕೃಷ್ಣಾದಿ ಅವತಾರಗಳಲ್ಲಿ **ಜನನ ಮರಣಾದಿಗಳು** ಕಾಣುವುದರಿಂದ ಅವನು ತ್ರಿಗುಣಬದ್ಧನೆ. ಅವನ **ಮನ ಇಂದ್ರಿಯ** ಶರೀರಗಳು ಮಾಯಾನಿರ್ಮಿತವಾಗಿದ್ದು ತ್ರಿಗುಣಾತ್ಮಕವೆ **ಆಗಿರುತ್ತವೆ.** ಹೀಗಾಗಿ ತ್ರಿಗುಣಬದ್ಧತ್ವ 'ಸದಿವ' ಇದೆ ಎಂದರೂ ಸರಿ, **ಇಲ್ಲವೆಂದರೂ ಸರಿ.** ಅವತಾರಗಳಲ್ಲಿ ಇದೆ, ಮೂಲರೂಪದಲ್ಲಿ ಇಲ್ಲ.' **—ಇದು ದುರ್ಜನರ ಪಕ್ಷ.** ಏಕೆಂದರೆ ಅವತಾರಗಳಲ್ಲಿ ಜನನ **ಮರಣಾದಿಗಳು ಕೇವಲ ಪ್ರದರ್ಶನ,** ದುರ್ಜನ ಮೋಹಕ.

ಆತ್ಮವಿದಃ ಮನುಜಾದಯಃ ಇದಮಶೇಷಮಾರ್ತತಯಾ ವಿಮೃಶಂತಿ

ಮನುಜರಿಗೆ ಆದಿಗಳು ಸೃಷ್ಟಿಕರ್ತರು ಬ್ರಹ್ಮಾದಿ ದೇವತೆಗಳು. ಅವರು '**ಆತ್ಮವಿದಃ' ಪರಮಾತ್ಮ ತತ್ತ್ವಜ್ಞಾನಿಗಳು.** ಅವರಿಗೆ ಪರಮಾತ್ಮ ಸ್ವರೂಪವೂ **ಗೊತ್ತು ಮನುಜರ ಸ್ವರೂಪವೂ ಗೊತ್ತು.** ಅವರು ವಿಮರ್ಶೆ ಮಾಡಿ ಹೇಳುತ್ತಾರೆ, '**ಪರಮಾತ್ಮನೊಬ್ಬನನ್ನು** ಹೊರತುಪಡಿಸಿ ಈ ಚೇತನ ಪ್ರಪಂಚವೆಲ್ಲವೂ **'ಆರ್ತ'** ದುಃಖಿಯಾಗಿದೆ. ತ್ರಿಗುಣಬದ್ಧವಾಗಿದೆ. ಪರಮಾತ್ಮ ಮೂಲರೂಪದಲ್ಲಾಗಲಿ **ಅವತಾರ**ರೂಪಗಳಲ್ಲಾಗಲಿ ತ್ರಿಗುಣ ಬದ್ಧನಲ್ಲ' ಎಂದು.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಶ್ಲೋಕ ಪಾಠ—

ತ್ರಿಗುಣಮಯಃ ಪುಮಾನಿತಿ ಭಿದಾ ಯದಬೋಧಕೃತಾ
ತ್ವಯಿ ನ ತತಃ ಪರತ್ರ ಸ ಭವೇದವಬೋಧರಸೇ
ಸದಿವ ಮನಸ್ತ್ರಿವತ್ ತ್ವಯಿ ವಿಭಾತ್ಯಸದಾಮನುಜಾತ್
ಸದಭಿಮೃಶಂತ್ಯಶೇಷಮಿದಮಾತ್ಮತಯಾಽಽತ್ಮವಿದಃ ॥

[೧]'ಆತ್ಮನು ತ್ರಿಗುಣಮಯನಾದ್ದರಿಂದ ಭೇದಾದಿ ಪ್ರಪಂಚ ಸತ್ಯ' ಎಂದು ತಿಳಿಯುವುದು ನಿನ್ನ ವಿಷಯದಲ್ಲಿರುವ ಅವಿದ್ಯೆಯಿಂದ. ಆ ಅವಿದ್ಯೆಯೂ ಪಾರಮಾರ್ಥಿಕವಲ್ಲ. ಅವಿದ್ಯೆಯಿಂದಾಚೆ ಇರುವ ಜ್ಞಾನಸ್ವರೂಪಿಯಾದ ನಿನ್ನಲ್ಲಿ ವಾಸ್ತವವಾಗಿ ಅಜ್ಞಾನ ಇರಲಾರದು. ಅದರಿಂದ ತ್ರಿಗುಣಾತ್ಮಕಪ್ರಪಂಚ ಸತ್ಯವಲ್ಲ. ಸತ್ಯವಾಗಿರುವಂತೆ ಕಾಣುವುದು ಕೇವಲ ಮನಸ್ಸಿನ ಭ್ರಮೆ. ಪ್ರಪಂಚ ನಿನ್ನಲ್ಲಿ ಆರೋಪಿತವಾದ್ದರಿಂದ ನಿನ್ನ ಅಸ್ತಿತ್ವವೇ ಅದರಲ್ಲಿ ಕಾಣುವುದು. ಜೀವನಲ್ಲಿಯೂ ನಿನ್ನ ಅಸ್ತಿತ್ವವೇ ಹೊರತು ಬೇರೆ ಅಸ್ತಿತ್ವವಿಲ್ಲ. ಬೇರೆ ಅಸ್ತಿತ್ವ ಕಾಣುವುದು ಮನಸ್ಸಿನ ಭ್ರಮೆ. ಆತ್ಮಜ್ಞಾನಿಗಳು ಜಗತ್ತನ್ನು ಸತ್ಯವೆಂದು ವ್ಯವಹರಿಸಿದರೆ ಅದು ಆತ್ಮಪರಿಣಾಮ ವಾದ್ದರಿಂದ ಬೇರೆಯಲ್ಲ ಎಂಬ ಅಭಿಪ್ರಾಯದಿಂದ.' ಎಂದು ಶ್ರೀಧರವ್ಯಾಖ್ಯಾನದಲ್ಲಿ ವಿವರಣೆ ಇದೆ.

'ಸ ಆತ್ಮಾ ತತ್ವಮಸಿ' ಎಂಬ ವಾಕ್ಯ ಅದ್ವೈತವನ್ನು ಹೇಳುವಂತೆ ಕಂಡರೂ 'ಅತತ್ವಮಸಿ' ಎಂದು ಪದಚ್ಛೇದದಿಂದ ಅದ್ವೈತ ನಿರಾಕರಣೆಯನ್ನೂ ಮಾಡುತ್ತದೆ. ಹಾಗೇ ಬೇರೆ ವ್ಯಾಖ್ಯಾನಕಾರರ ಈ ಶ್ರುತಿಗೀತಾಶ್ಲೋಕ ಶ್ರೀಧರವ್ಯಾಖ್ಯಾನ ರೀತಿಯಿಂದ ಅದ್ವೈತವನ್ನು ಹೇಳುವಂತೆ ಕಂಡರೂ ವಲ್ಲಭ-ಶುಕದೇವರ ವ್ಯಾಖ್ಯಾನ

೧. ತ್ರಿಗುಣಮಯಃ ಪುಮಾನಿತ್ಯನೇನ ಹೇತುನಾ ಯಾ ಭಿದಾ। ಉಪಲಕ್ಷಣಮೇತತ್ ಭಿದಾದಿ। ಸಾ ಯಸ್ಮಾತ್ ತ್ವಯಿ ವಿಷಯೇ ಅಬೋಧಕೃತಾ ತ್ವದ್ವಿಷಯಾಜ್ಞಾನ ವಿಜೃಂಭಿತಾ ತರ್ಹಿ ಕಿಮಜ್ಞಾನಮಸ್ತಿ ವಸ್ತುತಃ ಪುಂಸಿ, ನೈವೇತ್ಯಾಹ ತತಃ ಅಬೋಧಾತ್‌ಪರತ್ರ ಪರೇಽಸಂಗೇಽವಬೋಧರಸೇ ಸಃ ಅಬೋಧೋ ನ ಭವೇನ್ನ ಸಂಭವತೀತ್ಯರ್ಥಃ। ಮನೋ ಮನೋಮಾತ್ರವಿಲಸಿತಮಿದಂ ತ್ರಿವೃತ್ ತ್ರಿಗುಣಾತ್ಮಕಂ ಪ್ರಪಂಚಜಾತಂ ಅಸದೇವ ಸದಿವ ವಿಭಾತಿ। ತ್ವಯ್ಯಧಿಷ್ಠಾನೇ ಅಧಿಷ್ಠಾನ ಸತ್ತಯಾ ಸದ್ವತ್‌ಪ್ರತೀಯತ ಇತ್ಯರ್ಥಃ। ನ ಕೇವಲಮಿದಂಕಾರಾಸ್ಪದಂ, ಕಿಂತ್ವಾಮನುಜಾತ್ ಪುರುಷಮಭಿವ್ಯಾಪ್ಯೇತಿ। **ಪುರುಷಸ್ಯಾಪಿ ಪೃಥಕ್** ಸತ್ವಪ್ರತೀತಿರ್ಮನೋಮಾತ್ರವಿಲಸಿತೇತ್ಯರ್ಥಃ। **ಆತ್ಮವಿದಸ್ತ್ವಶೇಷಮಿದಂ** ವಿಶ್ವಮಾತ್ಮತಯೈವ ಸದಭಿಮೃಶಂತಿ ಸದಿತಿ ಜಾನಂತಿ। ಆತ್ಮಕಾರ್ಯ**ತ್ವಾನ್ನ ಪೃಥಗಿತ್ಯರ್ಥಃ।**

-ಶ್ರೀಧರಃ

ರೀತಿಯಿಂದ ಅದ್ವೈತವನ್ನು ನಿರಾಕರಿಸುತ್ತದೆ. [೨]ವಲ್ಲಭವ್ಯಾಖ್ಯಾನ ಹೇಳುತ್ತದೆ—

'ಅದ್ವೈತದ **ಈಶ್ವರ ತ್ರಿಗುಣಾತ್ಮಕ**ಮಾಯೆಯಿಂದಾದವನು, ತ್ರಿಗುಣಮಯ. ಸತ್ವದಿಂದ ವಿಷ್ಣು ರಜದಿಂದ **ಬ್ರಹ್ಮ** ತಮಸ್ಸಿನಿಂದ ಶಿವ ಉಂಟಾಗುತ್ತಾನೆ. ಆದರೆ ಈ ತ್ರಿಮೂರ್ತಿಭೇದಕಲ್ಪನೆ **ಅವಿದ್ಯೆಯಿಂದ** ಅಂದರೆ ಪರಮಾತ್ಮ ಸ್ವರೂಪವನ್ನು ತಿಳಿಯದಿದ್ದುದರ **ಪರಿಣಾಮವಾಗಿದೆ.** ಪರಮಾತ್ಮ ನಿರ್ಗುಣ. ನಿರ್ಗುಣ ಬ್ರಹ್ಮ ನಲ್ಲಿಯೆ **ಅಜ್ಞಾನವೆಂದು ಅದ್ವೈತಿಗಳು** ಹೇಳುವುದು ಯುಕ್ತವಲ್ಲ. ಏಕೆಂದರೆ ಅವನು **'ಆದಿತ್ಯವರ್ಣಂ ತಮಸಃ ಪರಸ್ತಾತ್ ।'** ಎಂಬಂತೆ ಅಜ್ಞಾನ ಸಂಬಂಧರಹಿತನಾಗಿ ದ್ದಾನೆ. ಮತ್ತು **'ಅವಬೋಧರಸ'** ಜ್ಞಾನಸ್ವರೂಪ, ಬೆಳಕು. ಬೆಳಕನ್ನು ಕತ್ತಲು ಆವರಿಸುವುದಿಲ್ಲ. ಅದರಿಂದ **'ಸ್ವಾರ್ತ'**ರು 'ಸ್ಮ ಆರ್ತ'ರು 'ಆರ್ತ'ರೆಂದು ದುಃಖಭಾಗಿಗಳೆಂದು 'ಸ್ಮ' ಪ್ರಸಿದ್ಧರು **ಹೇಳುವ** ಬ್ರಹ್ಮವಿಷ್ಣುಮಹೇಶ್ವರರು ತ್ರಿಗುಣಮಯರಾದ **ಬೇರೇ ಜೀವರು, ಪರಮಾತ್ಮನ** ಸನ್ನಿಧಾನ ಪಾತ್ರರಾದ ವಿಭೂತಿಗಳೆನ್ನಬಹುದು. **ಅವರೇ ಈಶ್ವರರಲ್ಲ** ಹೀಗಾಗಿ ಅದ್ವೈತ ಮತವೂ ಇತರ ~~ಮತಗಳಂತೆ [illegible] ಆಗಿದೆ. ಭ್ರಾಂತಿಮೂಲಕವಾದ ಮತಗಳ~~ ವಿರೋಧದಿಂದ ಪರಬ್ರಹ್ಮನಾದ ಕೃಷ್ಣನನ್ನು ಪರಿತ್ಯಾಗ ಮಾಡುವಂತಿಲ್ಲ.'

ಅಬೋಧಕೃತಾ ತ್ರಿಗುಣಬದ್ಧತಾ ಯಸ್ಮಾತ್ ಜೀವಸ್ಯಾಪಿ, ತಸ್ಮಾ-ದವಬೋಧರಸೇ ತ್ವಯಿ ಸಾ ನ ವಿದ್ಯತೇ । ತ್ರಿಗುಣಾತ್ಮಕಂ ಮನಸ್ತವಾಪಿ ವಿದ್ಯತ ಇತ್ಯಸತಾಂ ಪಕ್ಷಃ । ಮನುಜಾನಾಮಾದಯೋ ದೇವಾ-'ಸ್ತ್ರಿಗುಣಾತೀತತ್ವಾದ್ ಭವತೋ, ಭವಾನೇವ ಪರಮಾನಂದಃ, ತ್ವದನ್ಯತ್ ಸರ್ವಂ ಜೀವಜಾತಮಾರ್ತಮಿ'ತ್ಯೇವ ವಿಮೃಶಂತಿ ।

ಜೀವನಿಗೂ ಕೂಡ ತ್ರಿಗುಣ ಬದ್ಧತ್ವವು ಪರಮಾತ್ಮನ ವಿಷಯದಲ್ಲಿರುವ ಅಜ್ಞಾನದ ಪ್ರಯುಕ್ತವೇ ಆಗಿರುವುದರಿಂದ ಜ್ಞಾನಸ್ವರೂಪನಾದ ನಿನ್ನಲ್ಲಿ

---

೨. ತ್ರಿಗುಣಮಯಃ **ಪುಮಾನಿತಿ ಯೋ** ಭಜನೀಯ **ಭೇದಃ ಸೋऽಪಿ** ಯದಬೋಧಕೃತಃ ಭಗವತ್ಸ್ವರೂಪಾ**ಜ್ಞಾನಾದೇವ ಜಾಯತೇ। ಯೇ ಸ್ಮ** ಪ್ರಸಿದ್ಧಾ ಆರ್ತಾಃ ಸ್ವಾರ್ತ ಶಬ್ದವಾಚ್ಯಾಃ **ತೇ ಯಮೂಚಕ್ಷತೇ ಸಾ ತ್ವೀಶಾ ಭಗವದ್**ವಿಭೂತಿಃ। ನತು ತಾವನ್ಮಾತ್ರೋ ಭಗವಾನ್ ಭಕ್ತಿ**ಮಾರ್ಗಪ್ರತಿಪಾದ್ಯಃ। ಕಿಂತು ಪುರುಷೋತ್ತಮಃ**। ತ್ವಯಿ ಪುರುಷೋತ್ತಮೇ ಸಃ ಅಬೋಧಃ **ಕಥಮಪಿ ನ ಪ್ರವರ್ತತೇ। ತತ್ರ** ಹೇತುದ್ವಯಂ—ತತಃ ಪರತ್ರೇತಿ, ಅವಬೋಧರಸೇ ಇತಿ ಚ ।

ಭ್ರಾಂತಿಮೂಲತಯಾ ಸರ್ವಸಮಯಾನಾಮಯುಕ್ತಿತಃ।
ನ ತದ್ವಿರೋಧಾತ್ ಕೃಷ್ಣಾಖ್ಯಂ ಪರಂ ಬ್ರಹ್ಮ ತ್ಯಜೇದ್ ಬುಧಃ ॥ -ವಲ್ಲಭಃ

ತ್ರಿಗುಣಬದ್ಧತ್ವವಿಲ್ಲ. ತ್ರಿಗುಣಾತ್ಮಕವಾದ ಮನಸ್ಸು ನಿನಗೂ ಅವತಾರಗಳಲ್ಲಿ ಇದೆ ಎನ್ನುವುದು ದುರ್ಜನರ ಪಕ್ಷ. 'ಮನುಜಾದಿ'ಗಳೆಂದರೆ ಮನುಜರಿಗೆ ಆದಿ ಎನಿಸಿದ ದೇವತೆಗಳು 'ನಿನಗೆ ಗುಣತ್ರಯ ಸಂಬಂಧವಿಲ್ಲದಿರುವುದರಿಂದ ನೀನೇ ಪರಮಾನಂದ ಸ್ವರೂಪಿ ಹೊರತು ನಿನಗಿಂತ ಬೇರೆ ಎಲ್ಲ ಜೀವಸಮೂಹವೂ ದುಃಖಭಾಗಿ' ಎಂದೇ ವಿಮರ್ಶೆಯಿಂದ ತಿಳಿಯುತ್ತಾರೆ.

ಸತ್ವಾದಿಜಂ ದೇಹಮಥೋ ಮನಶ್ಚ
ಸತ್ವಾದಿಬದ್ಧಂ ಚ ವದಂತ್ಯಸಂತಃ ।
ಪರಂ ಪುಮಾಂಸಂ ನ ಸುರಾಸ್ತು ತೈರ್ಹಿ
ಜೀವಾಃ ಸುದೃಷ್ಟಾಃ ಪರಮಾರ್ತರೂಪಾಃ ॥

ಇತಿ ಸೂಕರಾಯಣ ಶ್ರುತಿಃ ॥

ತ್ರೈಗುಣ್ಯದೇಹೇಂದ್ರಿಯಕಮಾಸುರಾ ಜಾನತೇ ಹರಿಂ ।
ತ್ರಿಗುಣಾತೀತಮೀಶೇಶಮತಃ ಪೂರ್ಣಸುಖಂ ಸುರಾಃ ।
ಜಾನಂತಿ ಗುಣಬದ್ಧತ್ವಾಜ್ಜೀವಾನಾರ್ತಾಂಶ್ಚ ಕೃತ್ಸ್ನಶಃ ।
ಅನಾರ್ತಸ್ಯ ಪ್ರಸಾದೇನ ತೇಷಾಮಾರ್ತಿವಿನಾಶನಂ ॥

ಇತಿ ಚೈತನ್ಯವಿವೇಕೇ ॥

ಶ್ರುತಿಗೀತೆಯ ಈ ಹದಿಮೂರನೇ ಪದ್ಯಕ್ಕೆ ಮೂಲಶ್ರುತಿ ಇದು—
'ಪರಮಪುರುಷ ನಾರಾಯಣನನ್ನು ಸತ್ವಾದಿಗುಣಜನ್ಯ ಶರೀರ ಮನಸ್ಸುಗಳುಳ್ಳವನೆಂದು ಸತ್ವಾದಿಗುಣಬದ್ಧನೆಂದು ದುರ್ಜನರು ಹೇಳುತ್ತಾರೆ. ದೇವತೆಗಳು ಹಾಗೆ ಹೇಳುವುದಿಲ್ಲ. ಏಕೆಂದರೆ ಜೀವರು ಮಾತ್ರ ಬಹಳ ದುಃಖಿಗಳೆಂದು ಅವರು ಚೆನ್ನಾಗಿ ಬಲ್ಲರು' ಎಂದು ಸೂಕರಾಯಣಶ್ರುತಿ ಹೇಳಿದೆ.

ಇಲ್ಲಿ ತಾತ್ಪರ್ಯದಲ್ಲಿ 'ಸೂಕರಾಯಣ' 'ಸುರಾಯಣ' 'ಸೂತ್ರಾಯಣ' ಎಂದು ಬೇರೆ ಬೇರೆ ಪಾಠಗಳಿವೆ.

ಹರಿಯು ತ್ರಿಗುಣಾತ್ಮಕ ದೇಹೇಂದ್ರಿಯಉಳ್ಳವನೆಂದು ಅಸುರ ಸ್ವಭಾವದವರು ಉಪಾಸನೆ ಮಾಡುತ್ತಾರೆ. ಹರಿ ತ್ರಿಗುಣಾತೀತ, ಆದರಿಂದ ಪೂರ್ಣಾನಂದನೆಂದೂ ಜೀವರೆಲ್ಲರೂ ಗುಣಬದ್ಧರಾದ್ದರಿಂದ ದುಃಖಭಾಗಿಗಳೆಂದೂ ದೇವತೆಗಳು ಉಪಾಸನೆ ಮಾಡುತ್ತಾರೆ. ದುಃಖರಹಿತನಾದ

ಹರಿಯ ಅನುಗ್ರಹದಿಂದಲೇ ಜೀವರಿಗೆ ದುಃಖಪರಿಹಾರ' ಎಂದು ಚೈತನ್ಯ ವಿವೇಕದಲ್ಲಿ ಉಕ್ತವಾಗಿದೆ.

❖ ❖ ❖

ಶ್ರುತಿಗೀತೆಯಲ್ಲಿ ಹದಿನಾಲ್ಕನೆ ಪದ್ಯ—

ನಹಿ ವಿಕೃತಂ ತ್ಯಜಂತಿ ಕನಕಸ್ಯ ತದಾತ್ಮತಯಾ
ಸ್ವಕೃತಮನುಪ್ರವಿಷ್ಟ ಇದಮಾತ್ಮತಯಾ ರಸಿತಮ್ ।
ತವ ಯೇ ಪರಿಚರಂತ್ಯಖಿಲತತ್ತ್ವನಿಕೇತತಯಾ
ನನು ತೇ ಪದಾಽಽಕ್ರಮಂತ್ಯವಿಗಣಯ್ಯ ಶಿರೋ ನಿರ್‌ಋತೇಃ ॥೨೮

ಯಾರೂ ಬಂಗಾರವಿರಲಿ ಅದರ ಒಡವೆ ಬೇಡ ಎನ್ನುವುದಿಲ್ಲ. ಏಕೆಂದ ಅವೆರಡೂ ಒಂದೇ. ಹಾಗೇ ತಾನು ಮಾಡಿದ ಈ ಜಗತ್ತಿನಲ್ಲಿ ನೀನು ಪ್ರವೇಶಿಸಿ ವಾಗ ನಿನ್ನ **ಮೂಲರೂಪ** ಉಪಾಸನೆಗೆ ಬೇಕು. ಪ್ರವಿಷ್ಟವಾದ ರೂಪ ಬೇಡ ಎನ್ನುವಂತಿಲ್ಲ, **ಎರಡೂ ಒಂದೆ.** ಹೀಗೆ ಸ್ವಗತಭೇದ ವರ್ಜಿತನಾಗಿ ಎಲ್ಲ ತತ್ತ್ವಗಳಲ್ಲಿ **ನೆಲೆಸಿದವನು ನೀನೆಂದು ಉಪಾಸನೆ** ಮಾಡುವವರು ನಿರಾತಂಕವಾಗಿ ಸಂಸಾರದ **ತಲೆಯನ್ನು ತುಳಿಯುತ್ತಾರೆ.**

ನ ಹಿ ಕನಕಸ್ಯ ವಿಕೃತಂ ತ್ಯಜಂತಿ ತದಾತ್ಮತಯಾ

ಬಂಗಾರದೊಡವೆ ಬೇಡೆನ್ನುವವರು ಯಾರೂ ಬಂಗಾರದ **ಒಡವೆಯನ್ನು ಮಾತ್ರ** ಬಿಡುವುದಿಲ್ಲ. ಏಕೆಂದರೆ ಅವೆರಡೂ ಬಂಗಾರವೆ.

ಸ್ವಕೃತಂ ರಸಿತಂ ಇದಂ ಆತ್ಮತಯಾ ಅನುಪ್ರವಿಷ್ಟಃ

'ಸ್ವಕೃತಂ' ತಾನು ಮಾಡಿದ 'ರಸಿತಂ' ಲಸಿತಂ, ಅನೇಕಾಕಾರಗಳಿಂದ ಶೋಭಿಸುವ **ಈ ಜಗತ್ತನ್ನು** 'ಆತ್ಮತಯಾ' ಮೂಲರೂಪದಿಂದ ಅಭಿನ್ನನಾಗಿದ್ದೇ **ಆಯಾ** ವಸ್ತುಗಳ ಆಕಾರಗಳಿಗೆ ಅನುಗುಣವಾದ ಆಕಾರಗಳಿಂದ **ಪ್ರವೇಶಿಸಿರುವೆ.** ಪ್ರವಿಷ್ಟವಾದ ನಿನ್ನ ಆಕಾರಗಳಿಗೂ ನಿನಗೂ ಭೇದವಿಲ್ಲ. '**ನಿರ್ದೋ**ಷನಾದ ನಿನ್ನನ್ನು ಉಪಾಸನೆ ಮಾಡುತ್ತೇವೆ, ನಿನ್ನ ಅವತಾರ **ಆಕಾರಗಳಲ್ಲಿ** ದೋಷವಿರುವುದರಿಂದ ಉಪಾಸನೆ ಮಾಡುವುದಿಲ್ಲ' ಎನ್ನಲಾಗದು.

ಯೇ ತವ ಅಖಿಲ ತತ್ವನಿಕೇತತಯಾ ಪರಿಚರಂತಿ

ಹೀಗೆ ಜ್ಞಾನಿಗಳು ನಿನ್ನನ್ನು ಅಖಿಲ ತತ್ವಗಳಲ್ಲಿ ನೆಲೆಸಿರುವವನೆಂದೇ ಪೂಜಿಸುತ್ತಾರೆ.

ತೇ ನಿರ್ಋತೇಃ ಶಿರೋಽವಿಗಣಯ್ಯ ಪದಾಽಽಕ್ರಮಂತಿ ನನು

ಅಂಥ ಜ್ಞಾನಿಗಳೇ ಸಂಸಾರಾಭಿಮಾನಿಯ ತಲೆಯನ್ನು ಲೆಕ್ಕಿಸದೆ ನಿರಾತಂಕವಾಗಿ ಕಾಲಿಂದ ತುಳಿಯುತ್ತಾರೆ.

'ನಿರ್ಋತಿ' ಎಂದರೆ ಸಂಸಾರ. 'ಋತಿ' ಎಂದರೆ ಸದಾ ಏಕಪ್ರಕಾರನಾಗಿ ಸರ್ವೋತ್ತಮನಾಗಿಯೇ ಇರುವವನು ಪರಮಾತ್ಮ ಎಂದು ರೂಢ್ಯರ್ಥ. 'ಋಗತೌ' ಧಾತುವಿನಿಂದ ಪ್ರಾಪ್ತಿ ಎಂದೂ ಅರ್ಥ. ಇಲ್ಲಿ ಎರಡೂ ಅರ್ಥ ವಿವಕ್ಷಿತ. 'ಪರಮಾತ್ಮಪ್ರಾಪ್ತಿ' ಎಂದರ್ಥ. ತಂತ್ರೇಣ ಅಂದರೆ ಆವೃತ್ತಿ ಇಲ್ಲದೆಯೇ ಎರಡು ಅರ್ಥಹೇಳಿ ಅವುಗಳಿಗೆ ಪರಸ್ಪರ ಅನ್ವಯವನ್ನು ಹೇಳಬಹುದು. 'ನಿರ್‌ಋತಿ' ಎಂದರೆ ಪರಮಾತ್ಮನ ಪ್ರಾಪ್ತಿಗೆ ವಿರುದ್ಧವಾದ ಸಂಸಾರ. ಅದರ ಅಭಿಮಾನಿ ಚೇತನದ ತಲೆಮೆಟ್ಟಿ ಮೇಲೆ ವೈಕುಂಠಕ್ಕೆ ಹೋಗುತ್ತಾರೆ ಮೋಕ್ಷವನ್ನು ಹೊಂದುತ್ತಾರೆ ಎಂದಂತಾಗುವುದು.

ಬೇರೆ ವ್ಯಾಖ್ಯಾನಕಾರರ ಶ್ಲೋಕಪಾಠ ಹೀಗಿದೆ—

ನಹಿ ವಿಕೃತಿಂ ತ್ಯಜಂತಿ ಕನಕಸ್ಯ ತದಾತ್ಮಯಾ
ಸ್ವಕೃತಮನುಪ್ರವಿಷ್ಟಮಿದಮಾತ್ಮತಯಾಽವಸಿತಂ
ತವ ಪರಿ ಯೇ ಚರಂತ್ಯಖಿಲ ಸತ್ವ ನಿಕೇತತಯಾ ।
ತ ಉತ ಪದಾಽಽಕ್ರಮಂತ್ಯವಿಗಣಯ್ಯ ಶಿರೋ ನಿರ್ಋತೇಃ ॥

ಬಂಗಾರದ ಒಡವೆಯನ್ನು ಬಂಗಾರವಲ್ಲವೆಂದು ಯಾರೂ ಎಸೆಯುವುದಿಲ್ಲ. ಏಕೆಂದರೆ ಅದು ಬಂಗಾರವೆ. ಹಾಗೆಯೇ ಬ್ರಹ್ಮ ತಾನು ಮಾಡಿದ ಈ ಪ್ರಪಂಚವೂ ಅದರಲ್ಲಿ ಪ್ರವಿಷ್ಟವಾದ ತನ್ನ ಜೀವರೂಪವೂ ತಾನೇ ಎಂದು ಶಾಸ್ತ್ರದಲ್ಲಿ ನಿರ್ಣೀತವಾಗಿದೆ. 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಇತ್ಯಾದಿ ಶ್ರುತಿಗಳಿಂದ ಇದರ ಜ್ಞಾನ ಬರುತ್ತಿದ್ದರೂ ಬ್ರಹ್ಮವಸ್ತು ಅಪರೋಕ್ಷವಾಗಿರುವುದರಿಂದ ಅಪರೋಕ್ಷ ವಾಗಿಯೇ ಅದು ಕಂಡುಬರುತ್ತಿದ್ದರೂ ಮನಸ್ಸು ಮಲಿನವಾಗಿರುವುದರಿಂದ ಅದರಲ್ಲಿ ಬ್ರಹ್ಮವಸ್ತು ಸ್ಫುಟವಾಗಿ ಕಾಣದಿರುವುದರಿಂದ, ಸ್ಫುಟವಾಗಿ ಕಾಣುವ

ಸಂಸಾರಭ್ರಮವನ್ನು ಆ ಅಸ್ಫುಟ ಪ್ರತ್ಯಕ್ಷ ಪರಿಹರಿಸಲಾರದು. ಅದಕ್ಕೆ ಸರ್ವಜೀವಾಂತರ್ಯಾಮಿ ಎಂದು ನಿನ್ನ ಪರಿಚರ್ಯೆಬೇಕು' ಎಂದು ಶ್ರೀಧರವ್ಯಾಖ್ಯಾನ[1] ಹೇಳಿದೆ.

ಆದರೆ 'ತಾನು ಮಾಡಿದ ಪ್ರಪಂಚವನ್ನು ಪ್ರವೇಶ ಮಾಡಿರುವ 'ಪುರುಷರೂಪ' ಜೀವರೂಪ ತಾನೇ' ಎಂದು ಶ್ಲೋಕದಲ್ಲಿ ಇಲ್ಲ.'ಪ್ರವೇಶ ಮಾಡಿರುವ ರೂಪ ತಾನೇ' 'ಸ್ವಕೃತಮಿದಮನುಪ್ರವಿಷ್ಟಂ ಆತ್ಮತಯಾಽವಸಿತಂ' ಎಂದಿಷ್ಟು ಮಾತ್ರ ಹೇಳಿದೆ. ಪರಮಾತ್ಮನ ಮೂಲರೂಪದಿಂದ ಅವತಾರರೂಪಗಳು ಹೊರಟು ಪ್ರಪಂಚವನ್ನು ಪ್ರವೇಶಿಸುತ್ತವೆ. ಈ ಮೂಲರೂಪಕ್ಕೂ ಅವತಾರರೂಪಗಳಿಗೂ ಭೇದವಿಲ್ಲ 'ನೇಹ ನಾನಾಸ್ತಿ' ಇತ್ಯಾದಿ ಶ್ರುತಿಗಳಿಂದ ಇದರ ಜ್ಞಾನ ಬರುತ್ತಿದ್ದರೂ ಅದು ಪರೋಕ್ಷ. ಅಪರೋಕ್ಷಕ್ಕೆ ಪರಿಚರ್ಯೆಯೇ ಬೇಕು ಎಂದು ಶ್ಲೋಕ ಹೇಳುತ್ತಿದೆ. ಅದರಿಂ ಜೀವಬ್ರಹ್ಮೈಕ್ಯವನ್ನು ಹೇಳಿದಂತಾಗುವುದಿಲ್ಲ. ಮತ್ತು 'ಅಖಿಲಸತ್ವನಿಕೇತತಯ 'ಎಲ್ಲ ಜೀವರಲ್ಲಿ ವಾಸಮಾಡುವ ಪರಬ್ರಹ್ಮ' ಎಂದು 'ಪರಿಚರ್ಯೆ' ಮಾಡೇ ಅಂದರೆ ಉಪಾಸನೆ ಮಾಡಲು ಈ ಶ್ಲೋಕ ವಿಧಿಸುವುದರಿಂದ ಪ್ರವಿಷ್ಟವಾದ ರೂ ಜೀವರೂಪವಲ್ಲ, [illegible] ರೂಪವೆನ್ನಬೇಕು.

ಯಥಾ ಕನಕಸ್ಯ ವಿವಿಧಕೃತಂ ಕುಂಡಲಾದಿ ಕನಕಂ ವಿನಾ ಪರಿತ್ಯಕ್ತುಂ ನ ಶಕ್ಯತೇ ತಥಾ ಸ್ವಕೃತಂ ಜಗದನುಪ್ರವಿಷ್ಟೋ ಭಗವಾನ್ ಮೂಲರೂಪಂ ವಿನಾ ಪರಿತ್ಯಕ್ತುಂ ನ ಶಕ್ಯಃ। ಆತ್ಮತಯಾ ಏಕಸ್ವರೂಪತ್ವಾತ್ । ರಸಿತಂ ಆತ್ಮನಾ ಪ್ರಕಾಶಿತಂ ಜಗತ್ ಪ್ರವಿಷ್ಟಃ, ತಸ್ಮಾತ್ ಸರ್ವಗತೋ ವಿಷ್ಣುರಿತಿ ಜ್ಞಾತವ್ಯ ಇತ್ಯರ್ಥಃ। ಇತ್ಥಂ ಯೇ ಜ್ಞಾತ್ವಾ ಪರಿಚರಂತಿ ತವ ಸ್ವರೂಪಂ ತೇ ಋತಾತ್ಮಕ ಬ್ರಹ್ಮಪ್ರಾಪ್ತಿವಿರುದ್ಧತ್ವಾನ್ನಿರ್ಋತ್ಯಾಖ್ಯ ಸಂಸಾರಸ್ಯ ಶಿರಃ ಸ್ಫುಟಂ ಪದಾಽಽಕ್ರಮಂತಿ ।

ಬಂಗಾರದಿಂದ ನಾನಾರೂಪವಾಗಿ ಮಾಡಿದ ಕುಂಡಲಾದಿ ಆಭರಣವನ್ನು ಬಂಗಾರವನ್ನು ಬಿಟ್ಟು ಪ್ರತ್ಯೇಕವಾಗಿ ಎಸೆಯಲು ಆಗುವುದಿಲ್ಲ ಹೇಗೋ ಹಾಗೇ ತಾನು ಮಾಡಿದ ಜಗತ್ತನ್ನು ಪ್ರವೇಶಿಸಿದ ಭಗವಂತನ

---

೧. ಕನಕಸ್ಯ ವಿಕೃತಿಂ ಕುಂಡಲಾದಿಕಂ ಕನಕಾರ್ಥಿನೋ ನ ತ್ಯಜಂತಿ। ಅತ್ರ ಹೇತುಃ ತದಾತ್ಮತಯಾ। ಕನಕರೂಪತ್ವೇನೇತ್ಯರ್ಥಃ। ಅತಃ ಸ್ವಕೃತಮಿದಂ ವಿಶ್ವಮನುಪ್ರವಿಷ್ಟಂ ಚ ಪುರುಷರೂಪಮಾತ್ಮತಯೈವಾವಸಿತಂ। ಸತ್ಯಂ ಜ್ಞಾನಮಿತ್ಯಾದಿ ಶ್ರುತಿಭಿರೇವಂಭೂತಸ್ಯ ಭಗವತಃ ಪ್ರತಿಪಾದನಾತ್ತಜ್ಞಾನಂ ಸುಕರಮೇವೇತಿ ಕೃತಂ ಭಕ್ತ್ಯಾ। ಅತ ಆಹ ತವ ಪರಿಯೇ ಚರಂತೀತಿ। ಕೇನ ರೂಪೇಣ। ಅಖಿಲಸತ್ವ ನಿಕೇತತಯಾ। ಅಖಿಲಾನಿ ಸತ್ವಾನಿ ನಿಕೇತೋ ಯಸ್ಯ ಸ ತಥಾ। ತಸ್ಯಭಾವಸ್ತತ್ತಾ ತಯಾ। ಸರ್ವಭೂತಾವಾಸತಯೇತ್ಯರ್ಥಃ। -ಶ್ರೀಧರಃ

ಅವತಾರರೂಪವನ್ನು, ಮೂಲರೂಪವನ್ನು ಬಿಟ್ಟು ಪ್ರತ್ಯೇಕವಾಗಿ ಪರಿತ್ಯಾಗ ಮಾಡಲಾಗುವುದಿಲ್ಲ. ಏಕೆಂದರೆ 'ಆತ್ಮತ್ವಾತ್' ಎರಡರ ಸ್ವರೂಪ ಒಂದೇ ಆಗಿದೆ. 'ರಸಿತಂ' ಎಂದರೆ ಲಸಿತವಾದ ತನ್ನಿಂದ ಪ್ರಕಾಶಿತವಾದ ಜಗತ್ತನ್ನು ಪ್ರವೇಶಿಸಿದ್ದಾನೆ ಎಂದರ್ಥ. ಅದರಿಂದ ವಿಷ್ಣು ಸರ್ವತ್ರವ್ಯಾಪ್ತನೆಂದು ತಿಳಿಯಬೇಕೆಂದು ಅಭಿಪ್ರಾಯ. ಸರ್ವತ್ರವ್ಯಾಪ್ತನಾದ್ದರಿಂದ ವಿಷ್ಣು ಎನಿಸಿದ್ದಾನೆ ಎಂದು. ಹೀಗೆ ತಿಳಿದು ಯಾರು ನಿನ್ನ ಸ್ವರೂಪವನ್ನು ಉಪಾಸನೆ ಮಾಡುವರೋ ಅವರು 'ನಿರ್ಋತಿ' ಎನಿಸಿರುವ ಸಂಸಾರದ ತಲೆಯನ್ನು ಕಾಲಿಂದ ಚೆನ್ನಾಗಿ ತುಳಿಯುತ್ತಾರೆ. 'ಋತ' ಎಂದರೆ ಜ್ಞಾನಾತ್ಮಕನಾದ ಭಗವಂತ. ಅವನ ಪ್ರಾಪ್ತಿ 'ಋತಿ' ಅವನ ಪ್ರಾಪ್ತಿಗೆ ವಿರುದ್ಧವಾದ್ದರಿಂದ ಸಂಸಾರ 'ನಿರ್ಋತಿ' ಎನಿಸುತ್ತದೆ.

ಸರ್ವಗಂ ಯೇ ಪ್ರಪಶ್ಯಂತಿ ಬ್ರಹ್ಮಾನಂದಮಜಾಕ್ಷರಂ ।
ಏಕಮೇವಾದ್ವಯಂ ನಿತ್ಯಂ ನಿರ್ಋತೇಸ್ತೇ ಶಿರೋ ಗತಾಃ ॥

ಇತಿ ಸೌಕರಾಯಣ ಶ್ರುತಿಃ ॥

ಯಥೈವ ಕುಂಡಲಂ ತ್ಯಕ್ತ್ವಾ ನಾದಾತುಂ ಕನಕಂ ಶಕಂ
ತಸ್ಯೈವ ತದವಸ್ಥತ್ವಾತ್ ಕೇವಲಾಭೇದತಃ ಸ್ಫುಟಂ
ಏವಂ ಸುರಾಸುರ ನರೇಷ್ವಾಸ್ಥಿತೋ ಭಗವಾನ್ ಹರಿಃ
ನೈವ ಭೇದೇನ ಮಂತವ್ಯೋ ಜೀವಭೇದೇ ತು ಸತ್ಯಪಿ
ಯೇ ತಥಾಽಭಿನ್ನಮೀಶೇಶಂ ಪಶ್ಯಂತಿ ಪರಮರ್ಷಯಃ
ಋತಪ್ರಾಪ್ತಿವಿರುದ್ಧತ್ವಾತ್ ಸಂಸಾರನಿರ್ಋತೇಃ ಶಿರಃ
ಅಗಣಯ್ಯ ಪದಾಽಽಕ್ರಮ್ಯ ವೈಷ್ಣವಂ ನಿಲಯಂ ಯಯುಃ ॥

ಇತಿ ಗಾರುಡೇ ॥

ಆನಂದಸ್ವರೂಪನೂ ಉತ್ಪತ್ತಿನಾಶರಹಿತನೂ ಆದ ಗುಣಪೂರ್ಣನಾದ ವಿಷ್ಣುವನ್ನು ಸರ್ವಗತನೆಂದು ಎಲ್ಲ ಅಧಿಷ್ಠಾನಗಳಲ್ಲಿಯೂ ಅಭಿನ್ನನಾಗಿರುವನು, ಅದ್ವಿತೀಯನೂ ನಿತ್ಯನೂ ಆಗಿರುವನೆಂದು ಯಾರು ಉಪಾಸನೆ ಮಾಡುವರೋ ಅವರು ಸಂಸಾರವನ್ನು ಅನಾಯಾಸ ಮೆಟ್ಟುತ್ತಾರೆ ಎಂದು ಸೌಕರಾಯಣ ಶ್ರುತಿಯಲ್ಲಿ ಉಕ್ತವಾಗಿದೆ.

'ಬಂಗಾರಕ್ಕೇ ಕುಂಡಲದಾಕಾರ ಬಂದಿದ್ದರಿಂದ ಅವೆರಡಕ್ಕೂ ಅತ್ಯಂತ ಅಭೇದವೇ ಇರುವುದರಿಂದ ಬಂಗಾರವನ್ನು ಬಿಟ್ಟು ಕೇವಲ ಕುಂಡಲವನ್ನು

ಎತ್ತಿಕೊಳ್ಳುವುದಾಗಲಿ ಎಸೆಯುವುದಾಗಲಿ ಹೇಗೆ ಶಕ್ಯವಿಲ್ಲವೋ ಹಾಗೇ ಸುರ ಅಸುರ ನರರಲ್ಲಿ ಅಂತರ್ಗತನಾದ ಭಗವಾನ್ ಶ್ರೀಹರಿಯನ್ನು ಮೂಲರೂಪದಿಂದ ಭಿನ್ನನೆಂದು ಸರ್ವಥಾ ಉಪಾಸನೆ ಮಾಡಬಾರದು. ಸುರ ಅಸುರಾದಿ ಜೀವರಲ್ಲಿ ಭೇದವಿದ್ದರೂ ಅವರಲ್ಲಿರುವ ಪರಮೇಶ್ವರ ರೂಪಗಳನ್ನು ಪರಸ್ಪರವಾಗಿಯೂ ಮೂಲರೂಪದಿಂದಲೂ ಅಭಿನ್ನವೆಂದೇ ಮಹರ್ಷಿಗಳು ತಿಳಿಯುತ್ತಾರೆ. ಜ್ಞಾನಸ್ವರೂಪನಾದ ಆ ಭಗವಂತನ ಪ್ರಾಪ್ತಿಗೆ ವಿರುದ್ಧವಾದ್ದರಿಂದ 'ನಿರ್ಋತಿ' ಎನಿಸಿರುವ ಸಂಸಾರವನ್ನು ಲೆಕ್ಕಿಸದೆ ಅದರ ತಲೆಯನ್ನು ಮೆಟ್ಟಿ ವಿಷ್ಣುಲೋಕವನ್ನು ಹೊಂದುತ್ತಾರೆ' ಎಂದು ಗರುಡಪುರಾಣದಲ್ಲಿ ಹೇಳಿದೆ.

ಶ್ರುತಿಗೀತೆ ಕೇವಲ ಶ್ರುತ್ಯರ್ಥವನ್ನು ಸಂಗ್ರಹ ಮಾಡಲು ಹೊರಟಿಲ್ಲ. ಮುಂ (ಶ್ಲೋ.೪೩) 'ಇತ್ಯಶೇಷ ಸಮಾಮ್ನಾಯ ಪುರಾಣೋಪನಿಷದ್ರಸಃ ಸಮುದ್ಧೃತಃ 'ಹೀಗೆ ಎಲ್ಲ ವೇದ ಪುರಾಣ ಉಪನಿಷತ್ತುಗಳ ಸಾರವನ್ನು ಸನಂದನಮುಃ ~~ಸಂಗ್ರಹಿಸಿದ್ದಾರೆ' [illegible]ದರಿಂದ ಇಲ್ಲಿ ಮೂಲಶ್ರುತಿಯೊಂದಿಗೆ ಮೂ~~ ಪುರಾಣ ವಚನವನ್ನೂ ತೋರಿಸಿದ್ದಾರೆ. ಹೀಗೇ ಮುಂದೆಯೂ ವೇದಪುರಾಣ ವಚನಗಳನ್ನು ತೋರಿಸುತ್ತಾರೆ.

ಗರುಡ ಪುರಾಣದಲ್ಲಿ ಬಂಗಾರದ ಒಡವೆಗೂ ಅದರ ಅವಯವವಾದ ಬಂಗಾರಕ್ಕೂ 'ಕೇವಲಾಬೇಧತಃ ಸ್ಫುಟಂ' ಎಂದು ಅತ್ಯಂತಾಭೇದವನ್ನು ಹೇಳಿದೆ. ಇದರ ಅಭಿಪ್ರಾಯ ಹೀಗಿದೆ. ಒಂದು ಅವಯವಿಯ ಅವಯವಗಳನ್ನು ಪ್ರತ್ಯೇಕವಾಗಿ ವಿವಕ್ಷೆ ಮಾಡಿದರೆ ಅವುಗಳಿಗೆ ಅವಯವಿಯಿಂದ ಭೇದಾಭೇದವಿದ್ದರೂ, ಪರಸ್ಪರ ಕೂಡಿರುವ ಸಮಸ್ತಾವಯವ ಸಮುದಾಯ ವಿವಕ್ಷೆಯಲ್ಲಿ ಭೇದವಿಲ್ಲ, ಅತ್ಯಂತಾ ಭೇದವೇ ಇದೆ. ಅದನ್ನೇ ಇಲ್ಲಿ ದೃಷ್ಟಾಂತವೆಂದಿಟ್ಟುಕೊಳ್ಳಬೇಕು. ಏಕೆಂದರೆ ಹರಿಯ ಮೂಲರೂಪದಿಂದ ಹೊರಬಂದ ಅವತಾರ ರೂಪಗಳಿಗೆ ಮೂಲರೂಪದಿಂದ ಅತ್ಯಂತಾಭೇದವೇ ಇದೆ. ಹರಿಯ ಅನೇಕರೂಪಗಳು ಪರಸ್ಪರವಾಗಿ ಕೂಡಿ ಇನ್ನೊಂದು ರೂಪವನ್ನು ನವನಾರೀ ಕುಂಜರದಂತೆ ವ್ಯಕ್ತ ಮಾಡುವಲ್ಲಿ ಆ ಸಮಸ್ತರೂಪ ಸಮುದಾಯಕ್ಕೂ ಆ ಇನ್ನೊಂದು ರೂಪಕ್ಕೂ ಅತ್ಯಂತಾಭೇದವಿದೆ ಮತ್ತು ಆ ಸಮಸ್ತರೂಪಗಳನ್ನು ಪ್ರತ್ಯೇಕವಾಗಿ ವಿವಕ್ಷೆ ಮಾಡಿದಾಗಲೂ ಅತ್ಯಂತಾಭೇದವೆ ಹೊರತು ಭೇದಾಭೇದವಿಲ್ಲ ಎನ್ನುವುದು ವಿಶೇಷ.

❖ ❖ ❖

ಶ್ರುತಿಗೀತೆಯಲ್ಲಿ ಹದಿನೈದನೇ ಪದ್ಯ—

ಪರಿವಯಸೇ ಪಶೂನಿವ ಗಿರಾ ವಿಬುಧಾನಪಿ ತಾಂ-
ಸ್ತ್ವಯಿ ದೃಢಸೌಹೃದಾ ನನು ಪುನಂತಿ ನ ತೇ ವಿಮುಖಾಃ ।
ತ್ವಮೇಕಃ ಸ್ವರಾಡಖಿಲಕಾರಕಶಕ್ತಿಧರ-
ಸ್ತವ ಬಲಿಮುದ್ವಹಂತಿ ಸಮದಂತಿ ಚ ಯೇಽನಿಮಿಷಾಃ ॥ ೨೯ ॥

ಎತ್ತುಗಳಿಗೆ ಮೂಗುದಾರ ಹಾಕಿ ಹಗ್ಗದಿಂದ ಕಟ್ಟುವಂತೆ ನೀನು ದೇವತೆಗಳಿಗೂ ಕೂಡ ಬ್ರಹ್ಮರುದ್ರಾದಿ ನಾಮಗಳು ಮತ್ತು ಬ್ರಾಹ್ಮಣ ಕ್ಷತ್ರಿಯಾದಿ ನಾಮಗಳೆಂಬ ಮೂಗುದಾರ ಹಾಕಿ ವಿಧಿನಿಷೇಧ ಬಂಧನಗಳಿಗೆ ಒಳಪಡಿಸಿ ಕರ್ಮಬಂಧನದಲ್ಲಿ ಇಡುತ್ತಿ. ನಿನ್ನಲ್ಲಿ ದೃಢವಾದ ಭಕ್ತಿಉಳ್ಳವರು ಅವರು ಲೋಕಪಾವನರು. ನಿನ್ನ ದ್ವೇಷಿಗಳು ಹಾಗಿರುವುದಿಲ್ಲ. ನೀನು ಸ್ವತಂತ್ರನಾಗಿದ್ದು ಎಲ್ಲರ ಎಲ್ಲ ಕರ್ಮಶಕ್ತಿ ಧಾರಕನಾಗಿರುವೆ. ನಿನ್ನ ಪ್ರೇರಣೆಯಿಂದ ಎಲ್ಲ ದೇವತೆಗಳೂ ನಿನ್ನ ಆರಾಧನೆ ಮಾಡಿ ಸುಖಿಗಳಾಗುತ್ತಾರೆ.

ತಾನ್ ವಿಬುಧಾನಪಿ ಪಶೂನಿವ ಗಿರಾ ಪರಿವಯಸೇ

ಸುಪ್ರಸಿದ್ಧರಾದ ಆ ಬ್ರಹ್ಮಾದಿ ದೇವತೆಗಳನ್ನೂ ಕೂಡ ಪಶುಗಳಂತೆ ವೇದವಚನದಿಂದ ನೀನು ಬಂಧಿಸುವೆ.

ಬ್ರಹ್ಮರುದ್ರಾದಿ ದೇವತೆಗಳು ಎಷ್ಟೇ ದೊಡ್ಡವರಾದರೂ ಅಸ್ವತಂತ್ರರಾಗಿದ್ದು ನಿನ್ನ ಅಧೀನದಲ್ಲಿರುವವರು, ನಿನಗೆ ಪ್ರೀತಿಪಾತ್ರರು. ಅದರಿಂದ ವೇದದ ವಿಧಿ ನಿಷೇಧ ವಚನಗಳ ಮೂಲಕ ಅವರನ್ನು ದುಷ್ಕರ್ಮ ಮಾಡದಂತೆ, ಸತ್ಕರ್ಮ ಮಾಡುವಂತೆ ಪ್ರೇರಿಸಿ ಅನಿಷ್ಟ ಪರಿಹಾರಪೂರ್ವಕ ಇಷ್ಟಪ್ರಾಪ್ತಿಯನ್ನು ಹೊಂದಿಸುವೆ. ಪ್ರೀತಿಯ ಪಶುಗಳಿಗೆ ಅನಿಷ್ಟವಾಗದಂತೆ ಇಷ್ಟಪ್ರಾಪ್ತಿಯಾಗುವಂತೆ ಮೂಗುದಾರ ಹಾಕುತ್ತಾನೆ, ಪಶುಪಾಲಕ. ಹಾಗೇ ದೇವತೆಗಳಿಗೆ, ಎಲ್ಲ ಸಜ್ಜನರಿಗೆ ಪರಮಾತ್ಮ ನೀನು ಬ್ರಹ್ಮರುದ್ರಾದಿ ನಾಮಗಳೆಂಬ ಮೂಗುದಾರಗಳನ್ನು ಬ್ರಾಹ್ಮಣಕ್ಷತ್ರಿಯಾದಿ ನಾಮಗಳೆಂಬ ಮೂಗುದಾರಗಳನ್ನೂ ಹಾಕುವಿ. ಬ್ರಾಹ್ಮಣ ಹೀಗೆ ಬದುಕಬೇಕು ಕ್ಷತ್ರಿಯ ಹೀಗೆ ಬದುಕಬೇಕೆಂದು ಮುಂತಾಗಿ ಪ್ರೀತಿಯಿಂದ ನಾಮ ನಿರ್ದೇಶಪೂರ್ವಕವಾಗಿ ವಿಧಿ ನಿಷೇಧಗಳನ್ನು ಮಾಡಿ ಆ ವಿಧಿನಿಷೇಧಗಳನ್ನು ಅತಿಕ್ರಮಿಸದಂತೆ

ಎಲ್ಲರನ್ನೂ ಬಂಧನದಲ್ಲಿರಿಸುವಿ. ವಿಧಿನಿಷೇಧಗಳೇ ಎತ್ತನ್ನು ಕಟ್ಟುವ ಹಗ್ಗಗಳು. ನಾಮಗಳೆ ಮೂಗು ದಾರಗಳು.

ತ್ವಯಿ ದೃಢಸೌಹೃದಾಃ ಪುನಂತಿ, ನ ತು ತೇ ವಿಮುಖಾಃ

ವೇದವಿಧಿಬದ್ಧರಾಗಿ ವೇದೋಕ್ತಕರ್ಮಗಳನ್ನು ನಿನ್ನಲ್ಲಿ ದೃಢಭಕ್ತಿಯಿಂದ **ಆಚರಿಸುವ ದೇವತೆಗಳು** ಲೋಕಪಾವನರು. ಲೋಕಕ್ಕೆ **ಮಾರ್ಗದರ್ಶನ ನೀಡಿ** ಸತ್ಕರ್ಮ ಮಾಡಿಸುವವರು. ನಿನಗೆ **ವಿಮುಖರಾಗಿದ್ದು ವೇದದ ವಿಧಿ ನಿಷೇ**ಧಗಳನ್ನು ಉಲ್ಲಂಘಿಸುವ ಅಸುರರು **ತಾವು ಅಶುಚಿಗಳಾಗಿರುತ್ತಾರೆ**. **ವಿಹಿತ**ಕರ್ಮಾನುಷ್ಠಾನ ಮಾಡುವುದಿಲ್ಲ. **ಲೋಕವನ್ನೂ ಸತ್ಕರ್ಮ ಮಾಡದಂತೆ** ತಡೆದು ಅಶುಚಿಗೊಳಿಸುತ್ತಾರೆ. **'ಸಂಧ್ಯಾಹೀನೋಽಶುಚಿಃ'** ಎಂಬಂತೆ ವಿಹಿತಕರ್ಮಾನುಷ್ಠಾನ **ಮಾಡದವನೆ ಅಶುಚಿ. ಮಾಡುವವನೇ ಶುಚಿ.**

ತ್ವಮೇಕಃ ಸ್ವರಾಟ್ ಅಖಿಲಕಾರಕ ಶಕ್ತಿಧರಃ

~~**'ನೀನೊಬ್ಬನೇ** ಸ್ವತಂತ್ರ ಅಂತರ್ಯಾಮಿಯಾಗಿದ್ದು ಎಲ್ಲರ ಎಲ್ಲ~~ **ಕರ್ಮಶಕ್ತಿಗಳನ್ನು ನಿಯಂತ್ರಿಸುವವನು.'**

ಅದರಿಂದ ಅಶಕ್ತರಾದ ಜೀವರಿಗೆ ನಿಷ್ಠುರವಾಗಿ ವಿಧಿನಿಷೇಧಗಳನ್ನು **ಹೇರಿ ಹೆದರಿಸಿ ಬಲಾತ್ಕಾರ**ವಾಗಿ ಕರ್ಮಮಾಡಿಸುವ ನಿಷ್ಕರುಣಿ ದೊರೆ **ಶ್ರೀಹರಿಯಲ್ಲ**. **ಅವನು** ಪ್ರೀತಿಯಿಂದಲೆ ವಿಧಿನಿಷೇಧಗಳನ್ನು ಮಾಡಿ **ಅವುಗಳಿಗನುಸಾರ**ವಾಗಿ ತನ್ನ ಪೂಜಾರೂಪವಾಗಿ ಸತ್ಕರ್ಮಗಳನ್ನು ತಾನೇ **ಅವರಲ್ಲಿ ನಿಂತು ಮಾಡಿಸಿ** ಫಲ ನೀಡುತ್ತಾನೆ. ಕರ್ಮ ಮಾಡಿಸಲು **ಕರ್ಮಶಕ್ತಿಯನ್ನು ಜಾಗೃತ**ಗೊಳಿಸಿ ನಿಯಂತ್ರಿಸುತ್ತಾನೆ.

ಯೇ ಅನಿಮಿಷಾಃ ತೇ ತವ ಬಲಿಮುದ್ವಹಂತಿ

'ಅ–ನಿಮಿಷ'ರು ಕಣ್ಣು ರೆಪ್ಪೆ ಮುಚ್ಚದವರು ದೇವತೆಗಳು ಸದಾ **ಜಾಗೃತರಾಗಿದ್ದು ಕಾಲ**ಕಾಲಕ್ಕೆ ವೇದೋಕ್ತ ಕರ್ಮಗಳನ್ನು ಸಾಂಗವಾಗಿ ಮಾಡುವವರು **ಉತ್ತಮ** ಕಲ್ಪದಿಂದ ಕರ್ಮಮಾಡಿ ಪರಮಾತ್ಮನ ಆರಾಧನೆ ಮಾಡುತ್ತಾರೆ. ಪರಮಾನುಗ್ರಹ ಭಾಜನರಾಗುತ್ತಾರೆ.

ಸಮದಂತಿ ಚ

ವೇದೋಕ್ತ ಕರ್ಮಗಳಿಂದ ತಮ್ಮ ಬಿಂಬಮೂರ್ತಿಯನ್ನು ಆರಾಧಿಸಿ ಸಂತೋಷಗೊಳಿಸುವ ಮೂಲಕ ಪ್ರತಿಬಿಂಬರಾದ ತಾವೂ ಸಂತೋಷ ಪಡುತ್ತಾರೆ. ಹೇಗೆ ಎತ್ತುಗಳು ಯಜಮಾನನ ಸೇವೆಮಾಡಿ ಅವನ

ಪ್ರೀತಿಪಾತ್ರವಾಗಿ ಅವನಿಂದ ಹುಲ್ಲು ನೀರು ಮುಂತಾದುವನ್ನು ಪಡೆದು ಸುಖಿಸುವುವೋ ಹಾಗೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ ನಮಗಿಂತ ಹೆಚ್ಚು ಬೇರೆಯಾಗಿಲ್ಲ. ಅದಕ್ಕೆ ವಿವರಣೆ ಬೇರೆಯಾಗಿದೆ—

[೧]'ನಿನ್ನ ಭಜನೆಗೆ ವಿಮುಖರಾದವರು ಸರ್ವಶಾಸ್ತ್ರವೇತ್ತರಾದರೂ ಅವರನ್ನು ವೇದವಾಣಿ ಪಶುಗಳನ್ನು ಹಗ್ಗದಿಂದ ಕಟ್ಟುವಂತೆ ಕರ್ಮಬಂಧನದಲ್ಲಿ ಕಟ್ಟಿಹಾಕುತ್ತದೆ. ಮೋಕ್ಷಮಾರ್ಗದಲ್ಲಿ ನಡೆಯದಂತೆ ಮಾಡುತ್ತದೆ' ಎಂದು ಯೋಗಿರಾಮಾನುಜ ವ್ಯಾಖ್ಯಾನ ಹೇಳುತ್ತದೆ.

ಇದು ಸ್ವವ್ಯಾಹತ. ಸರ್ವಶಾಸ್ತ್ರವೇತ್ತರು ಭಜನೆಗೆ ವಿಮುಖರಾಗಿರುವುದಿಲ್ಲ. ವಿಮುಖರು ವೇತ್ತರಲ್ಲ. ಮತ್ತು ಇದು ಭಗವದ್ಗೀತೆಗೆ ವಿರುದ್ಧ. 'ತ್ರೈಗುಣ್ಯವಿಷ ಯಾ ವೇದಾಃ' ವೇದಗಳು ತ್ರೈಗುಣ್ಯವಿಷವನ್ನು ದೂರಮಾಡುತ್ತವೆ. 'ಸ್ವರ್ಗಕಾಮೋ ಯಜೇತ' ಎಂಬಲ್ಲಿ 'ಸ್ವರ್ಗಕಾಮನಾಗು' 'ಸ್ವರ್ಗಕ್ಕಾಗಿ ಯಾಗಮಾಡು' ಎಂದು ಎರಡು ವಿಧಿ ಇಲ್ಲ. 'ಪ್ರಾರಬ್ಧವಶದಿಂದ ಸ್ವರ್ಗಕಾಮನಾಗಿರುವುದಾದರೆ, ಯಾಗ ಮಾಡು' ಎನ್ನುತ್ತದೆ. ಇದು ವಿಮುಖರಾದ ಮೋಕ್ಷಯೋಗ್ಯರಿಗೆ ವೇದೋಕ್ತ ಭಜನದಲ್ಲಿ ವಿಶ್ವಾಸ ಹುಟ್ಟಿಸುವ ಉದ್ದೇಶದಿಂದ. 'ರೋಚನಾರ್ಥಂ ಫಲಶ್ರುತಿಃ' ಮುಮುಕ್ಷುಗಳನ್ನು ಕಾಮ್ಯಕರ್ಮದಲ್ಲಿಯೇ ತೊಡಗಿಸಿ ಮೋಕ್ಷ ಮಾರ್ಗಪ್ರತಿಬಂಧ ಮಾಡುವುದಕ್ಕಾಗಿ ಅಲ್ಲ. ಭಗವಂತ ವೇದವಾಣಿಯಿಂದ ಕಟ್ಟಿಹಾಕಿ ಜನರನ್ನು ಸಂಸಾರದಲ್ಲಿ ಮುಳುಗಿಸುವಂಥ ಕ್ರೌರ್ಯವನ್ನು ತೋರುವು ದಿಲ್ಲ. 'ತವ ಬಲಿಮುದ್ವಹಂತಿ' ಎಂದು ಇಲ್ಲಿಯೇ ಹೇಳುವಂತೆ ತನ್ನ ಸೇವೆ ಭಜನೆ ಮಾಡಿಸಿಕೊಂಡು ಮುಕ್ತಿ ನೀಡುತ್ತಾನೆ.

[೨]ವಲ್ಲಭವ್ಯಾಖ್ಯಾನಪ್ರಕಾರ ಪ್ರಸಿದ್ಧರಾದ ದೇವತೆಗಳನ್ನು ಕೂಡ ವೇದವಾಣಿ

---

೧. ತ್ವದ್‌ಭಜನವಿಮುಖಾನ್ ವಿಬುಧಾನಪಿ ಸರ್ವಶಾಸ್ತ್ರಜ್ಞಾನಪಿ ತ್ವಂ ಗಿರಾ ವೇದರೂಪವಾಣ್ಯಾ ಪಶೂನಿವ ವಯಸೇ। ತತ್ತತ್‌ಕರ್ಮಸ್ವೇವ ಬಧ್ನಾಸಿ। ಯಥಾ ಪಶವಃ ಯತ್ರ ನಿಬದ್ಧಾ ಸ್ತಸ್ಮಾದನ್ಯತ್ರ ಗಂತುಂ ನ ಶಕ್ನುವಂತಿ ತಥಾ, ಭಗವದ್ವಿಮುಖಾ ಅಪಿ ತ್ರೈಗುಣ್ಯವಿಷಯ ವೇದವಾಕ್ಯೈಃ ಸ್ವಸ್ವಪ್ರಕೃತ್ಯನುಗುಣ ರಾಜಸ ತಾಮಸ ಕರ್ಮಸ್ವೇವ ವಿಶ್ವಾಸವಂತಸ್ತತ್ರೈವ ನಿಬದ್ಧಾ ಭವಂತೀತಿ ಭಾವಃ। - ಯೋಗಿರಾಮಾನುಜಃ

೨. ಪ್ರಸಿದ್ಧಾನಪಿ ವಿಬುಧಾನ್ ಪಶೂನಿವ ಪರಿವಯಸೇ ಬಧ್ನಾಸಿ। ಯತ್ರ ಸ್ವಸ್ವಾಮೀ ಮೃತ್ಯೋರಪಿ ಶ್ರೇಷ್ಠಾನ್ ದೇವಾನ್ ಬಧ್ನಾತಿ ತತ್ರ ತತ್ಸೇವಕಾನಾಂ ಮೃತ್ಯೋರವಗಣನಾಯಾಂ ಕಾ ಶಂಕೇತ್ಯರ್ಥಃ। ಸೇವಕಾ ಏವ ತಾನ್ ಭಗವತ್‌ಸೇವಾಯಾಂ ನಿಯೋಜಯಂತಿ। ಅತಃ

ಯಿಂದ ಕಟ್ಟಿಹಾಕುತ್ತಾನೆ. ಆದರೆ ಭಕ್ತರನ್ನು ಕಟ್ಟುವುದಿಲ್ಲ. ಭಕ್ತರೇ ಭಗವಂತನ ಆಜ್ಞೆಯಂತೆ ದೇವತೆಗಳನ್ನು ಪಶುಗಳಂತೆ ವೇದವಾಣಿಯಿಂದ ಕಟ್ಟಿ ಭಗವಂತನ ಸೇವೆಯನ್ನು ಅವರಿಂದ ಮಾಡಿಸಿ ಮೋಕ್ಷಕೊಡಿಸುತ್ತಾರೆ.

ಆದರೆ ದೇವತೆಗಳು ಹೊರತು ಇನ್ನಾರು ಭಕ್ತರು ಎನ್ನುವುದನ್ನು ಇವರು ಹೇಳಿಲ್ಲ. 'ನೈವ ದೇವಪದಂ ಪ್ರಾಪ್ತಾ ಬ್ರಹ್ಮದರ್ಶನವರ್ಜಿತಾಃ' ಎಂಬಂತೆ ದೇವ ಪದವಿಗೆ ಬಂದವರೆಲ್ಲರೂ ಅಪರೋಕ್ಷಜ್ಞಾನಿ ಗಳು. ಅವರು ವಿಧಿಬದ್ಧರಾಗಿ ಪ್ರೀತಿಯಿಂದ ಸ್ವತಃ ಭಗವಂತನಿಗೆ ಸೇವೆ ಮಾಡುವವರು. 'ತವ ಬಲಿಮುದ್ವಹಂ[೩] ಅನಿಮಿಷಾಃ' ಎಂದು ಇಲ್ಲಿಯೇ ಇದು ಸ್ಪಷ್ಟವಿದೆ. ದೇವತೆಗಳಿಂದ ಅವರಿಗಿಂ ಉತ್ತಮರಾದ ದೇವತೆಗಳೇ ಭಗವತ್ಸೇವೆ ಮಾಡಿಸುತ್ತಾರೆ. ಉಳಿದ ಋ ಗಂಧರ್ವಾದಿ ಭಕ್ತರಿಂದ ಈ ದೇವತೆಗಳೇ ಸೇವೆ ಮಾಡಿಸಬೇಕು. ಅದರಿಂ 'ಸೇವಕಾನಾಂ ದೇವಾಪೇಕ್ಷಯಾಽಪ್ಯುತ್ಕರ್ಷಃ' ಭಕ್ತರು ದೇವತೆಗಳಿಗಿಂತಲ ಹೆಚ್ಚಿನವರು' ಎಂದು ವಲ್ಲಭವ್ಯಾಖ್ಯಾನ ಹೇಳುವುದು ಸಮರ್ಥನೀಯವಲ್ಲ.

[೩] ವೀರರಾಘವವ್ಯಾಖ್ಯಾನದಲ್ಲಿ 'ಅಪಬುಧಾನಪಿ' ಎಂದು ಪದಚ್ಛೇ ಮಾಡಿದ್ದಾರೆ. ಅಜ್ಞಾನಿಗಳನ್ನು ವೇದವು ಪಶುಗಳಿಗೆ ಮೂಗುದಾರ ಹಾಕಿ ಕಟ್ಟುವಂತೆ ಬಲಾತ್ಕಾರವಾಗಿ ಶಾಸ್ತ್ರದಿಂದ ಸರಿದಾರಿಗೆ ತರುತ್ತದೆ. ಶಾಸ್ತ್ರದಲ್ಲಿ ಪ್ರವೇಶವಿಲ್ಲದವರನ್ನು ಸಜ್ಜನರಾದ ಭಕ್ತರು ಪಾವನಗೊಳಿಸುತ್ತಾರೆ. ಸಜ್ಜನ ಸೇವೆಯನ್ನೂ ಮಾಡದವರಿಗೆ ಅಧೋಗತಿಯೆ ಎಂದಿದ್ದಾರೆ.

ಇದೂ ಸರಿಯಲ್ಲ. ವೇದದ ವಿಧಿನಿಷೇಧಗಳು ಅಜ್ಞರಿಗಾಗಿ ಇವೆ. ಅಜ್ಞರೇ ಕರ್ಮಾಧಿಕಾರಿಗಳು ಎನ್ನುವುದು ಅದ್ವೈತಮತ. ವೇದೋಕ್ತಕರ್ಮದಿಂದ ಅಜ್ಞರಿಗೆ ಮಾತ್ರವಲ್ಲ ಜ್ಞಾನಿಗೂ ಪ್ರಯೋಜನವಿದೆ. ಜ್ಞಾನಿಗೇ ಹೆಚ್ಚು ಪ್ರಯೋಜನ. ಅಜ್ಞನಿಗೆ ಕೇವಲ ಅಂತಃಕರಣಶುದ್ಧಿಯಿಂದ ಜ್ಞಾನಯೋಗ್ಯತಾ ಸಂಪಾದನೆಯಾಗುವುದು

ಸೇವಾಂ ಪ್ರಾಪ್ಯ ಕೃತಾರ್ಥಾ ಏವ ತೇ ಭವಂತಿ। ಅತಃ ಸೇವಕಾನಾಂ ದೇವಾಪೇಕ್ಷಯಾಽಪ್ಯುತ್ಕರ್ಷೋ ನಿರೂಪಿತಃ। -ವಲ್ಲಭಃ

೩. ಅವಿದುಷಃ ಪರಿವಯಸೇ ಬೋಧಯಸೀತ್ಯರ್ಥಃ। ಯದ್ವಾ ಗಮಯಸಿ ಸನ್ಮಾರ್ಗಂ ನಯಸೀತ್ಯರ್ಥಃ। ಪಶೂನಿವ। ಯಥಾ ದುರ್ದಮಾನ್ ಪಶೂನ್ ನಾಸಿಕಾ ಸೂತ್ರಾದಿಭಿಃ ಸಮ್ಯಕ್ ಶಿಕ್ಷಯಂತಿ ತದ್ವತ್ ಶಾಸ್ತ್ರಾತ್ ತ್ವಾಮಿತ್ಥಂಭೂತಂ ಜ್ಞಾತ್ವಾ ಕ್ರಮೇಣೋಪಾಸೀನಾ ಮುಚ್ಯಂತ ಇತಿ ಭಾವಃ। ತ್ವದ್‌ಭಕ್ತಾ ಅಜ್ಞಾನ್ ಶಾಸ್ತ್ರಾಧಿಕಾರರಹಿತಾನಪಿ ಪುನಂತಿ ಖಲು। ಭಾಗವತಸೇವಯಾ ತೇಽಪಿ ಮುಚ್ಯಂತ ಇತಿ ಭಾವಃ। ಯೇಷಾಂ ಸತ್ಸೇವಾಽಪಿ ನ ರೋಚತೇ ತೇಷಾಮಧೋಗತಿ ರೇವೇತಿ ಭಾವಃ। -ವೀರರಾಘವಃ

ಪ್ರಯೋಜನ. ಜ್ಞಾನಿಗೆ ಜ್ಞಾನಪೂರ್ವಕ ಕರ್ಮದಿಂದ ಮೋಕ್ಷದಲ್ಲಿ **ಆನಂದಾತಿಶಯ**ವೆಂಬ ಮಹಾಪ್ರಯೋಜನವಿದೆ. ಕರ್ಮ ಮಾಡದಿದ್ದರೆ ಆನಂದಹ್ರಾಸ**ವೆಂಬ ಮಹಾ** ಅನರ್ಥವಿದೆ. ಮಹಾ ಅನರ್ಥ ಅದು ಏಕೆಂದರೆ ಸಂಸಾರದಲ್ಲಿ **ಎಲ್ಲ** ಅನರ್ಥಗಳಿಗೂ ಪರಿಹಾರವಿದೆ. ಲಿಂಗಭಂಗಾನಂತರದ ಆನಂದಹ್ರಾಸರೂ**ಪವಾದ** ಅನರ್ಥಕ್ಕೆ ಎಂದೂ ಪರಿಹಾರವೇ ಇಲ್ಲ. ಏಕೆಂದರೆ ಅವರಿಗೆ ಪುನರ್ಜನ್ಮವಿಲ್ಲ. ಜ್ಞಾನಿಗಳಾದ 'ಅನಿಮಿಷ'ರು 'ದೇವತೆ'ಗಳು ವಿಧಿಬದ್ಧರಾಗಿ ಭಗವಂತನಿಗೆ ಸೇವೆ ಮಾಡುವರು ಎಂದು ಇಲ್ಲಿಯೇ ಹೇಳಿರುವಾಗ 'ಅವಿಬುಧಾನಪಿ' ಎಂದು ಪದಚ್ಛೇದ ಮಾಡಿ ಅಜ್ಞಾನಿಗಳನ್ನೇ ವಿಧಿಬದ್ಧರೆನ್ನುವುದು ಶ್ರುತಿಗೀತೆಗೇ ವಿರುದ್ಧವಾದ ಶ್ರುತಿಗೀತಾ ವ್ಯಾಖ್ಯಾನವಾಗುತ್ತದೆ. 'ವಿಬುಧಾನಪಿ' ಎಂಬಲ್ಲಿ ಅಪಿಶಬ್ದ 'ಜ್ಞಾನಿಯನ್ನೂ ಅಜ್ಞಾನಿಯನ್ನೂ ವೇದವು ವಿಧಿನಿಷೇದಗಳಿಂದ ಬಂಧಿಸುತ್ತದೆ' ಎಂದು ಸ್ವರಸವಾಗಿ ಹೇಳುತ್ತಿರುವಾಗ ಅಜ್ಞಾನಿಗೇ ವಿಧಿನಿಷೇಧ ಬಂಧನವೆಂದು ಏಕೆ ಹೇಳಬೇಕು? ವೇದಾಭ್ಯಾಸವಿಲ್ಲದೆಯೇ ಭಾಗವತರ ಸೇವೆಯಿಂದಲೇ **ಅಜ್ಞರು ಮುಕ್ತಿ** ಪಡೆಯುವುದಂತೂ ಒಂದು ದೊಡ್ಡ ಪವಾಡವೇ ಸರಿ.

ವಯತಿ ಗಾ ಇವ ಯಃ ಸುರಾದಿಕಾಂ
ಸ್ತನ್ಮನಸೋ ಜಗದಪುನಂಭುಚಯೋ ನ ಪರೇ ।
ಸ ಏಕ ಈಶಃ ಪರಿಪೂರ್ಣಶಕ್ತಿ-
ರ್ಬಲಿಂ ಹರಾ ಇತರೇ ಸ್ಯುಃ ಸುರಾಃ ಸುಖಿನಃ ॥

ಇತ್ಯಾರುಣಿ ಶ್ರುತಿಃ॥

ವಿಷ್ಣುನಾ ದೇವತಾ ಬದ್ಧಾ ವಿಷ್ಣವೇ ಚ ಬಲಿಪ್ರದಾಃ ।
ವಿಷ್ಣುರಾಸಾಂ ಪತಿರ್ನಿತ್ಯಂ ನ ವಿಷ್ಣೋರ್ಬಂಧಕಃ ಕ್ವಚಿತ್ ॥

ಇತಿ ವಾಮನೇ ॥

ಗಾಣದೆತ್ತುಗಳಂತೆ ದೇವಾದಿ ಸಜ್ಜನರನ್ನು ವಿಧಿನಿಷೇಧಾತ್ಮಕವಾದ ವೇದದಿಂದ ಯಾರು ಕಟ್ಟುವನೋ ಆ ಹರಿಯೊಬ್ಬನೆ ಸರ್ವೇಶ. ಏಕೆಂದರೆ ಅವನೆ ಪರಿಪೂರ್ಣಕಾರಕಶಕ್ತಿ ಉಳ್ಳವನು. ಅವನಲ್ಲಿ ಭಕ್ತಿ ಉಳ್ಳವರೇ ಶುಚಿಯಾಗಿದ್ದು ಲೋಕವನ್ನು ಕೂಡ ಪವಿತ್ರಗೊಳಿಸುತ್ತಾರೆ ಹೊರತು ಇತರರಲ್ಲ. ವೇದದ ವಿಧಿನಿಷೇಧಗಳಿಗೆ ಬದ್ಧರಾಗಿ ಹರಿಗೆ ಸೇವೆ ಸಲ್ಲಿಸುವ ದೇವತೆಗಳಂಥ ಸಜ್ಜನರೇ ಸುಖಿಗಳಾಗುತ್ತಾರೆ ಹೊರತು ಇತರರಲ್ಲ ಎಂದು ಆರುಣಿ ಶ್ರುತಿ ಹೇಳುತ್ತಿದೆ.

ದೇವಾದಿ ಸಜ್ಜನರು ವಿಷ್ಣುವಿನಿಂದ ವೇದದ ವಿಧಿನಿಷೇಧಗಳಿಗೆ ಬದ್ಧರಾಗಿ ವಿಷ್ಣುವಿಗೆ ಆರಾಧನೆ ಸಲ್ಲಿಸುತ್ತಾರೆ. ವಿಷ್ಣುವೇ ಅವರಿಗೆ ಸದಾ ಪ್ರಭುವಾಗಿರುತ್ತಾನೆ. ವಿಷ್ಣುವಿಗೆ ಬಂಧಕನು ಎಲ್ಲಿಯೂ ಯಾವ ಕಾಲದಲ್ಲಿಯೂ ಇಲ್ಲ ಎಂದು ವಾಮನಪುರಾಣದಲ್ಲಿ ಹೇಳಿದೆ.

❖ ❖ ❖

ಶ್ರುತಿಗೀತೆಯಲ್ಲಿ ಹದಿನಾರನೇ ಪದ್ಯ—

ವರ್ಷಭುಜೋಽಖಿಲಕ್ಷಿತಿಪತೇರಿವ ವಿಶ್ವಸೃಜೋ
ವಿದಧತಿ ಯತ್ರ ಯೇ ತ್ವಧಿಕೃತಾ ಭವತಶ್ಚಕಿತಾಃ ।
ಸ್ಥಿರಚರಜಾತಯಃ ಸ್ಯುರಜ ಯೇ ತ್ವನಿಮಿತ್ತಯುಜೋ
ವಿರಹ ಉದೀಕ್ಷಯೇದ್ಯದಿ ಪರಸ್ಯ ವಿಮುಕ್ತಸತಃ ॥ ೩೦ ॥

~~ಸಾಮಂತರಾಜರು ಸಾರ್ವಭೌಮ ದೊರೆಗೆ ಕಪ್ಪ ನೀಡುವಂತೆ ಪ್ರಪಂಚಕ್ಕೆ~~
ಸೃಷ್ಟಿಕರ್ತರಾಗಿ ಒಡೆಯರಾದ ಬ್ರಹ್ಮಾದಿ ದೇವತೆಗಳೂ ನಿನಗೆ ಪೂಜೆ ಸಲ್ಲಿಸುತ್ತಾರೆ. ನೀನು ಅವರನ್ನು ಯಾವ ಅಧಿಕಾರದಲ್ಲಿ ನಿಯುಕ್ತಗೊಳಿಸುವೆಯೋ ಆ ಅಧಿಕಾರಗಳಲ್ಲಿಯೇ ಇದ್ದು ಹೆದರಿಕೊಂಡು ಅವರು ನಿನ್ನನ್ನು ಆರಾಧಿಸುತ್ತಾರೆ. ಮೋಕ್ಷದ ವಿಷಯದಲ್ಲಿ 'ತಮೇವಂ ವಿದ್ವಾನಮೃತ ಇಹ ಭವತಿ' ಮೋಕ್ಷ ನಿನ್ನಿಂದಲೇ ಲಭ್ಯವೆಂದು ವೇದದ ಮೂಲಕ ನೀನು ತಿಳಿಸುತ್ತಿರುವಿ. ಹಾಗೇ ಜ್ಞಾನಿಗಳು ತಿಳಿದು ಪರರಿಗೆ ಉಪದೇಶಿಸುತ್ತಾರೆ. ಹೀಗೆ ನೀನೇ ಮೋಕ್ಷದಾಯಕನೆಂದ ಮೇಲೆ ಚರಾಚರ ಜಂತುಗಳೆಲ್ಲರೂ ನಿನ್ನಿಂದಲೇ ಸಂಸಾರಬಂಧನ ಉಳ್ಳವರು ತಾನೆ?

ವರ್ಷಭುಜಃ ಅಖಿಲಕ್ಷಿತಿಪತೇರಿವ ವಿಶ್ವಸೃಜಃ ಭವತಃವಿದಧತಿ

ಭಾರತ ಹರಿವರ್ಷ ಕಿಂಪುರುಷಾದಿ ವರ್ಷಗಳನ್ನಾಳುವ ದೊರೆಗಳು ಸಾರ್ವಭೌಮ ರಾಜನಿಗೆ ಹೆದರಿಕೊಂಡು ಕಪ್ಪ ಕೊಡುವಂತೆ ಪ್ರಪಂಚಸೃಷ್ಟಿಕರ್ತರಾದ ಬ್ರಹ್ಮಾದಿಗಳು ಒಂದೊಂದು ಲೋಕಪಾಲು ವವರು ಸಕಲಲೋಕಾಧಿಪತಿಯಾದ ನಿನಗೆ ಹೆದರಿಕೊಂಡು ಪೂಜೆ ಸಲ್ಲಿಸುತ್ತಾರೆ. ಮುಕ್ತಿ ಭಾಗಿಗಳಾಗುತ್ತಾರೆ.

ಯೇ ಯತ್ರ ಅಧಿಕೃತಾಃ ಚಕಿತಾಃ ಭವತಃ ವಿದಧತಿ

ದೇವತೆಗಳು ಯಾವ ಅಧಿಕಾರಗಳಲ್ಲಿ ನಿಯುಕ್ತರಾಗಿರುವರೋ ಆ

ಅಧಿಕಾರಗಳಲ್ಲಿದ್ದೇ ಹೆದರಿಕೊಂಡು ಪೂಜೆ ಸಲ್ಲಿಸುತ್ತಾರೆ. ಹರಿ ಪ್ರಸನ್ನನಾಗದೆ ಹೋಗಬಹುದೆಂದು ಅವರಿಗೆ ಭಯ, ಮಗು ಅಳಬಹುದೆಂದು ತಾಯಿ ಭಯಪಡುವಂತೆ, ಪ್ರೀತಿ ವಾತ್ಸಲ್ಯ ಪ್ರಯುಕ್ತವಾದ ಭಯ ಹೊರತು ದ್ವೇಷ ಪ್ರಯುಕ್ತವಲ್ಲ.

ಅಜ, ಯದಿ ವಿಮುಕ್ತಸ್ತತಃ ಪರಸ್ಯ ವಿರಹೇ ಉದೀಕ್ಷಯೇತ್

ಜನನವಿಲ್ಲದವನೆ, 'ವಿಮುಕ್ತ ಸತಃ' ಸಜ್ಜನರನ್ನು ಸಂಸಾರದಿಂದ ವಿಮುಕ್ತಗೊಳಿಸುವ 'ಪರಸ್ಯ' ನಿನ್ನ ಅನುಗ್ರಹದಿಂದಲೇ ಮೋಕ್ಷವೆಂದು 'ವಿರಹೇ' ಸಂಸಾರವಿರಹರೂಪವಾದ ಮೋಕ್ಷದ ವಿಷಯದಲ್ಲಿ 'ಪರಃ ಯದಿ ಉದೀಕ್ಷಯೇತ್' ಪರಮಾತ್ಮನಾದ ನೀನು ತಿಳಿಸುವುದಾದರೆ, ಅಂದರೆ 'ತಮೇವಂ ವಿದ್ವಾನಮೃತ ಇಹ ಭವತಿ' ಎಂದು ವೇದದ ಮೂಲಕ ತಿಳಿಸುವುದಾದರೆ...

ಯೇ ಸ್ಥಿರ ಚರಜಾತಯಃ ತೇ ತು ಅನಿಮಿತ್ತಯುಜಃ ಸ್ಯುಃ

ಯಾರಾರು ಸ್ಥಾವರ ಜಂಗಮ ಪ್ರಾಣಿಗಳಿರುವರೋ ಅವರೆಲ್ಲರೂ 'ಅ-ನಿಮಿತ್ತ' ಅಕಾರ ನಾಮಕನಾದ ನಿನ್ನಿಂದಲೇ 'ಯುಜಃ' ಸಂಸಾರ ಯುಕ್ತರು ಎನ್ನುವಲ್ಲಿ ಸಂಶಯ ಉಳಿಯುವುದಿಲ್ಲ. ಸಂಸಾರ ಇನ್ನೊಬ್ಬರ ನಿಮಿತ್ತದಿಂದ ಬಂದಿದ್ದರೆ ಅದರ ನಿವೃತ್ತಿ ನಿನ್ನಿಂದಾಗದು. ಅದರಿಂದ ಮೋಚಕನಾದ ನೀನೇ ಬಂಧಕನೂ ಆಗಿರುವೆ. ಸಂಸಾರ ಬಂಧನವೆಂದರೆ ಹೊಸಹೊಸ ಶರೀರಗಳು ಬಂದು ಹೋಗುವುದು. ಇದು ಕರುಣೆಯೆ. ಸಾಧನ ಶರೀರ ನೀಡಿ ಸಾಧನ ಮಾಡಿಸುತ್ತಾನೆ. ಅದರ ಫಲವಾಗಿ ಮೋಕ್ಷ ನೀಡುತ್ತಾನೆ.

ಬೇರೆ ವ್ಯಾಖ್ಯಾನಕಾರರ **ಪಾಠದಲ್ಲಿ** ಕೊನೆಯ ಸಾಲು ಹೀಗಿದೆ—

ವಿಹರ ಉದೀಕ್ಷಯಾ ಯದಿ ಪರಸ್ಯ ವಿಮುಕ್ತ ತತಃ ॥

ಅದಕ್ಕೆ ಹೀಗೆ ಅರ್ಥ— **'ಹೇ ವಿಮುಕ್ತನೆ,** ನಿತ್ಯಮುಕ್ತನೆ, ಯಾವಾಗ ನಿನ್ನ ಸಂಕಲ್ಪಲೇಶದಿಂದ ಮಾಯೆಯೊಂದಿಗೆ ನಿನ್ನ ವಿಹಾರ ನಡೆಯುವುದೋ ಆಗ ಜೀವಿಗಳ ಜನನ ನಿಮಿತ್ತವಾದ **ಕರ್ಮಗಳೂ ಲಿಂಗಶರೀರಗಳೂ** ನಿನ್ನ ಸಂಕಲ್ಪದಿಂದಲೇ ಆವಿರ್ಭವಿಸುವುವು ಅವುಗಳಿಂದ **ಯುಕ್ತರಾದ ಜೀವರು** ಸ್ಥಾವರ ಜಂಗಮ **ಜಾತಿಯ ಶರೀರಗಳಿಂದ** ಜನಿಸುತ್ತಾರೆ' ಎಂದು.

ನಮ್ಮ ಪಾಠದಲ್ಲಿ ಮೋಕ್ಷಪ್ರದನೇ ಬಂಧಪ್ರದನೂ ಆಗಿರುತ್ತಾನೆ ಎಂಬ ವಿಶೇಷ ಪ್ರಮೇಯವಿರುವುದು ಗಮನಾರ್ಹವಾಗಿದೆ.

ಸ್ಥಿರಚರಜಾತಯೋ ಯೇ ತೇಽನಿಮಿತ್ತಯುಜಃ ಸ್ಯುಃ। ಭಗವನ್ನಿಯಮಾದೇವ ಸಂಸಾರಯುಜಃ ಸ್ಯುಃ। ವಿರಹೇ ಮುಕ್ತೌ। ಯದಿ ಪರಸ್ಯ ಸಕಾಶಾನ್ಮುಕ್ತಿರೇವೇತ್ಯುದೀಕ್ಷಯೇತ್ ಸ ಪರಃ। ವಿಮುಕ್ತಾಃ ಸಂತೋ ಯೇನ ಪರೇಣ ತಸ್ಯ ವಿಮುಕ್ತಸತಃ। ನಾನ್ಯಃ ಪಂಥಾ ಅಯನಾಯ ವಿದ್ಯತ ಇತಿ ಶ್ರುತೇಃ ಮುಕ್ತಿಸ್ತಸ್ಮಾದೇವೇತ್ಯಂಗೀಕರ್ತವ್ಯಂ, ಅತೋ ಬಂಧೋಽಪಿ ತತ ಏವೇತ್ಯರ್ಥಃ ॥

ಸ್ಥಾವರ ಜಂಗಮ ಜೀವಿಗಳು ಅಕಾರವಾಚ್ಯನಾದ ಪರಮಾತ್ಮನ ಇಚ್ಛೆಯಿಂದಲೇ ಸಂಸಾರವನ್ನು ಹೊಂದುತ್ತವೆ ಎಂದು 'ಅನಿಮಿತ್ತಯುಜಃ ಸ್ಯು' ಎನ್ನುವುದರ ಅರ್ಥ. 'ವಿರಹೇ' ಎಂದರೆ ಸಂಸಾರವಿರಹರೂಪವಾದ ಮುಕ್ತಿಯ ವಿಷಯದಲ್ಲಿ ಎಂದರ್ಥ. 'ವಿರಹ ಉದೀಕ್ಷಯೇದ್ ಯದಿ ಪರಸ್ಯ' ಎಂದರೆ ಮುಕ್ತಿಯ ವಿಷಯದಲ್ಲಿ ಅದು ಪರಮಾತ್ಮನಿಂದಲೇ ಎಂದು ಪರಮಾತ್ಮ ತಿಳಿಸುವುದಾದರೆ ಎಂದರ್ಥ. 'ಪರಸ್ಯ' ಎಂಬಲ್ಲಿ ಸಕಾಶಾತ್ ಎಂದು ಅಧ್ಯಾಹಾರ. ಯಾರು ತಿಳಿಸುವನೆಂದರೆ 'ಪರಸ್ಯ' ಎಂಬಲ್ಲಿ ಪ್ರಕೃತನಾದ್ದರಿಂದ 'ಪರಃ' ಪರಮಾತ್ಮನೆ ಎಂದು ಅಧ್ಯಾಹಾರ ಮಾಡಬೇಕು.

'ವಿಮುಕ್ತಸತಃ' ಎಂದು ಪಾಠ. 'ವಿಮುಕ್ತತತಃ' ಎಂದಲ್ಲ. ವಿಮುಕ್ತರಾಗುವವರು ಸಜ್ಜನರು ಯಾರಿಂದಲೋ ಅವನು 'ವಿಮುಕ್ತಸತ್' ಅವನಿಂದ, 'ವಿಮುಕ್ತಸತಃ' ಎಂದು ವಿಗ್ರಹ. 'ನಾನ್ಯಃ ಪಂಥಾ ಅಯನಾಯ ವಿದ್ಯತೇ' ಎಂಬ ಶ್ರುತಿ ಈ ವಿಷಯದಲ್ಲಿ ಪ್ರಮಾಣವಾಗಿದೆ. ಅದರಿಂದ, 'ಮುಕ್ತಿ ಹರಿಯಿಂದಲೇ' ಎಂದು ಒಪ್ಪಬೇಕೆಂದಮೇಲೆ 'ಬಂಧವೂ ಹರಿಯಿಂದಲೇ' ಎಂದಾಗುವುದೆಂದರ್ಥ.

ಸತಾಂ ವಿಮುಕ್ತಿದಾದ್ ವಿಷ್ಣೋರ್ಮುಕ್ತಿರ್ಯದ್ಯಭ್ಯುಪೇಯತೇ ।
ಬಂಧೋಽಪಿ ತತ ಏವ ಸ್ಯಾದ್ ಯಸ್ಮಾದೇಕಸ್ತಯೋಃ ಪತಿಃ ॥
ಇತಿ ಸ್ಕಾಂದೇ ।

ಆತ್ಮಾನಂ ಮುಕ್ತಿದಂ ವಿಷ್ಣುರ್ಯದಿ ಪುಂಸ ಉದೀಕ್ಷಯೇತ್ ।
ಸುಪ್ರಸನ್ನಸ್ತದಾ ಬಂಧಸ್ತತ ಏವೇತಿ ಸೇತ್ಸ್ಯತಿ ॥ ಇತಿ ಬ್ರಾಹ್ಮೇ ॥

ಖಂಡಾಧೀಶಾಃ ಸಾರ್ವಭೌಮಸ್ಯಯದ್ವದ್
ಬ್ರಹ್ಮೇಶಾದ್ಯಾಃ ಕುರ್ವತೇ ತೇಽನುಶಾಸ್ತಿಂ ।
ತ್ವಂ ಮುಕ್ತಿದೋ ಬಂಧದೋಽತೋ ಮತೋ ನ–
ಸ್ತ್ವಂ ಜ್ಞಾನದೋಽಜ್ಞಾನದಶ್ಚಾಸಿ ವಿಷ್ಣೋ ॥

ಇತ್ಯುದಾರ ಶಾಂಡಿಲ್ಯ ಶ್ರುತಿಃ ॥

ಸಜ್ಜನರಿಗೆ ಮೋಕ್ಷದಾಯಕನಾದ ವಿಷ್ಣುವಿನಿಂದಲೇ ಮುಕ್ತಿ ಎಂದೊಪ್ಪುವುದಾದರೆ ಬಂಧವೂ ವಿಷ್ಣುವಿನಿಂದಲೇ ಆಗುತ್ತದೆ ಎಂದು ಅಂಗೀಕರಿಸಬೇಕು. ಏಕೆಂದರೆ ಬಂಧ ಮೋಕ್ಷಗಳೆರಡಕ್ಕೂ ಒಬ್ಬನೆ ಅಧಿಪತಿಯಾಗಿರಬೇಕು ಎಂದು ಸ್ಕಂದಪುರಾಣದಲ್ಲಿ ಉಕ್ತವಾಗಿದೆ.

ಸುಪ್ರಸನ್ನನಾದ ವಿಷ್ಣು ತನ್ನನ್ನೇ ಮುಕ್ತಿದಾಯಕನೆಂದು ಮುಮುಕ್ಷುವಿಗೆ ತಿಳಿಸುವುದಾದರೆ ಬಂಧವೂ ಅವನಿಂದಲೇ ಎಂದು ಅದರಿಂದಲೇ ಸಿದ್ಧವಾಗುವುದು ಎಂದು ಬ್ರಾಹ್ಮಪುರಾಣದಲ್ಲಿ ಉಕ್ತವಾಗಿದೆ.

'ಸಾಮಂತರಾಜರು ಸಾರ್ವಭೌಮನಿಗೆ ಕಪ್ಪ ಕೊಡುವಂತೆ ಬ್ರಹ್ಮರುದ್ರಾದಿ ಲೋಕಪಾಲಕರು ನಿನಗೆ ಅಧೀನರಾಗಿಯೇ ಲೋಕವನ್ನು ಆಳುತ್ತಾರೆ. ನೀನು ಮೋಕ್ಷದಾಯಕನಾದ್ದರಿಂದ ಬಂಧದಾಯಕನೂ ನೀನೆ ಆಗಿರುವೆ. ನೀನು ಜ್ಞಾನದಾಯಕನಾದ್ದರಿಂದ ಅಜ್ಞಾನದಾಯಕನೂ ನೀನೇ ಆಗಿರುವೆ ಎಂಬುದು ನಮ್ಮ ಸಿದ್ಧಾಂತವಾಗಿದೆ' ಎಂದು ಉದಾರಶಾಂಡಿಲ್ಯ ಶ್ರುತಿ ಹೇಳುತ್ತಿದೆ.

❖❖❖

ಶ್ರುತಿಗೀತೆಯಲ್ಲಿ ಹದಿನೇಳನೆ ಪದ್ಯ—

ನಹಿ ಪರಮಸ್ಯ ಕಶ್ಚಿದಪರೋಽನಪರಸ್ಯ ಭವೇದ್
ವ್ಯಯತ ಇವಾತ್ರ ಯಸ್ಯ ಚ ಶೂನ್ಯತುಲ ಸಂದಧತಃ ।
ಅಪರಿಮಿತಾ ಧ್ರುವಾಸ್ತನುಭೃತೋ ಯದಿ ಸರ್ವ ತತೋ
ನಹಿ ನ ಶಾಸ್ಯತೇತಿ ನಿಯಮೋ ಬ್ರುವತೇ ಚ ತಥಾ ॥ ೩೧ ॥

ಪರಿಪೂರ್ಣನಾಗಿದ್ದು ಅಸದೃಶನಾದ ಹರಿಯೆ, ಪ್ರಾಣನಿಗಿಂತ ಉತ್ತಮನೂ ಸರ್ವಾಧಾರನೂ ಆದ ನಿನಗಿಂತ ಬೇರೆ ಸ್ವತಂತ್ರನು ಯಾರೂ ಇಲ್ಲ. ವಾಯು ಜೀವೋತ್ತಮ ಹೇಗೋ ಹಾಗೆ ನೀನು ಸರ್ವೋತ್ತಮ. ಜೀವರು ಸ್ವರೂಪದಿಂದ

ನಿತ್ಯರಾಗಿದ್ದು ಅಸಂಖ್ಯಾತರಾಗಿದ್ದಾರೆ. ಎಂದರೆ ಅದು ಸರಿಯೆ. ಆದರೆ ಅವರೆಲ್ಲರೂ ಪ್ರಾಣನಿಂದ ದೇಹಧಾರಿಗಳಾಗಿರುತ್ತಾರೆ. ಸ್ವತಂತ್ರರಲ್ಲ. 'ಏಕಮೇವಾದ್ವಿತೀಯಂ' ಎಂಬ ಶ್ರುತಿಯಲ್ಲಿ 'ಜೀವರು ನಿನಗೆ ಅಧೀನರಲ್ಲ, ಅಭಿನ್ನರು' ಎಂಬ ನಿಯಮ ವಿವಕ್ಷಿತವಾಗಿಲ್ಲ. ಏಕೆಂದರೆ, 'ಅತೋಽನ್ಯದಾರ್ತಂ' ಎಂದು ಮುಂತಾಗಿ ಶ್ರುತಿಗಳು ಜೀವರನ್ನು ನಿನ್ನ ಅಧೀನರೆನ್ನುತ್ತಿವೆ.

ಹೇ ಸರ್ವ ! ಶೂನ್ಯತುಲ !

ಪರಿಪೂರ್ಣನಾದ ಅಸದೃಶನಾದ ಹರಿಯೆ !

ಅನಪರಸ್ಯ ಸಂದಧತಃ ಪರಮಸ್ಯ ಯಸ್ಯ ತೇ ಕಶ್ಚಿದಪರೋ ನಹಿ ಭವೇತ್

'ಅನ-ಪರಸ್ಯ' **ಮುಖ್ಯ ಪ್ರಾಣ**ನಿಗಿಂತ ಉತ್ತಮನಾದ 'ಸಂದಧತಃ' ಸರ್ವ**ಲೋಕಾಧಾರನಾ**ದ '**ಪರಮಸ್ಯ**' **ಸರ್ವೋ**ತ್ತಮನಾದ ನಿನಗೆ '**ಕಶ್ಚಿದಪರಃ**' **ಬೇರೆ ಸ್ವತಂತ್ರನೂ ಯಾರೂ** 'ನಹಿ' ಇಲ್ಲ. ನೀನೇ ಸರ್ವೋತ್ತಮ.

ಅತ್ರ ವ್ಯಯತ ಇವ ಸಂದಧತಃ ತೇ ಕಶ್ಚಿದಪರೋ ನಹಿ ಭವೇತ್

'**ಅತ್ರ**' **ಜೀವರಲ್ಲಿ** 'ವ್ಯಯತ ಇವ' ಸರ್ವಜ್ಞನಾದ ಪ್ರಾಣನಿಗಿಂತ **ಬೇರೆ ಸ್ವತಂತ್ರನಿಲ್ಲ**- ಹೇಗೋ ಹಾಗೆ ಸರ್ವಾಧಾರನಾದ ನಿನಗಿಂತ ಬೇರೆ **ಸ್ವತಂತ್ರ ಸರ್ವಾ**ಧಾರನಿಲ್ಲ.

ಜೀವರಲ್ಲಿ ಸರ್ವಜ್ಞ ಪ್ರಾಣನೊಬ್ಬನೆ ಉತ್ತಮ. ಅವನಿಗಿಂತ **ಹೆಚ್ಚಿನವನು ಯಾರೂ** ಇಲ್ಲ. ಹಾಗೇ ಸರ್ವರಲ್ಲಿ ಸರ್ವಾಧಾರ **ಹರಿಯೊಬ್ಬನೆ. ಅವನಿಗಿಂತ** ಹೆಚ್ಚಿನ ಸರ್ವಾಧಾರ ನಿನ್ನೊಬ್ಬನಿಲ್ಲ. **ಸರ್ವೋತ್ತಮನಿಲ್ಲ**. 'ವಿ-ಅಯ' ವಿವಿಧ ವಿಶೇಷಜ್ಞಾನ ಉಳ್ಳವನು '**ವ್ಯಯತ್**' **ಸರ್ವಜ್ಞ**.

ಯದಿ ತನುಭೃತಃ ಧ್ರುವಾಃ ಅಪರಿಮಿತಾಃ, ತತಃ ತನುಭೃತಃ

ಜಡಶರೀರ**ಧಾರಿಗಳಾದ** ಜೀವರು '**ಧ್ರುವಾಃ**' ನಿತ್ಯರು, ಅಸಂಖ್ಯಾತರು **ನಿಜ. ಆದರೆ ಅವರೆಲ್ಲರೂ 'ತತಃ'** ಪ್ರಾಣನಿಂದಲೇ 'ತನುಭೃತಃ' **ಶರೀರಧಾರಿಗಳಾಗುತ್ತಾರೆ. ಅವನು** ಶರೀರದಿಂದ ಹೊರಗೆ ನಡೆದರೆ ಶವವಾಗಿ **ಬೀಳುತ್ತಾರೆ**.

ನ ಶಾಸ್ಯತೇತಿ ನಿಯಮಃ ನಹಿ

'ಏಕಮೇವಾದ್ವಿ**ತೀಯಂ**' ಎಂಬ ಶ್ರುತಿ ಏವಕಾರದಿಂದ 'ಅಧೀನ

ರಾದ ಜೀವರಿಲ್ಲ' ಎಲ್ಲರೂ ಅಭಿನ್ನರು' ಎಂಬ ನಿಯಮವನ್ನುಹೇಳುವು **ದಿಲ್ಲ.** 'ಶಾಸ್ಯತಾ ನ' ಅಧೀನತ್ವವಿಲ್ಲ ಎಂದು ನಿಯಮ 'ನಹಿ' ವಿವಕ್ಷಿತವಾಗಿಲ್ಲ.

ಬ್ರುವತೇ ಚ ತಥಾ

'ಅತೋಽನ್ಯದಾರ್ತಂ' ಬೇರೆ ಆತ್ಮರು ದುಃಖಿಗಳು ಅಧೀನರು ಅಸ್ವತಂತ್ರರು ಎಂದೇ ಶ್ರುತಿಗಳು ಹೇಳುತ್ತಿವೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಶ್ಲೋಕ ಪಾಠ ಹೀಗಿದೆ—

ನಹಿ ಪರಮಸ್ಯ ಕಶ್ಚಿದಪರೋ ನ ಪರಶ್ಚ ಭವೇದ್
ವಿಯತ ಇವಾಪದಸ್ಯ ತವ ಶೂನ್ಯತುಲಾಂ ದಧತಃ ।
ಅಪರಿಮಿತಾ ಧ್ರುವಾಸ್ತನುಭೃತೋ ಯದಿ ಸರ್ವಗತಾ
ಸ್ತರ್ಹಿ ನ ಶಾಸ್ಯತೇತಿ ನಿಯಮೋ ಧ್ರುವ ನೇತರಥಾ ॥

[೧]'ಪರಮಕಾರುಣಿಕನಾದ ನಿನಗೆ ಯಾರಲ್ಲಿಯೂ ತನ್ನವನು ಪರಕೀಯನೆಂದು ಭೇದಭಾವನೆ ಕೂಡುವುದಿಲ್ಲ. ಆಕಾಶದಂತೆ ಎಲ್ಲೆಡೆ ಸಮಾನವಾಗಿ ಇರುವವನು. ಶೂನ್ಯದಂತೆ ಮನೋವಾಚಾಮಗೋಚರನು ಜೀವಕರ್ಮಾನುಸಾರ ಸೃಷ್ಟಿ ಮಾಡುವುದರಿಂದ ವೈಷಮ್ಯಾದಿ ದೋಷ ನಿನಗಿಲ್ಲ. ಅಂತರ್ಯಾಮಿ ಬ್ರಾಹ್ಮಣ ಹೇಳುವಂತೆ ನೀನು ಜೀವಾತ್ಮರನ್ನು ಆಳಬಲ್ಲೆ. ಜೀವರು ಅಪರಿಮಿತರಾಗಿದ್ದು ನಿತ್ಯರಾಗಿದ್ದು ಸರ್ವವ್ಯಾಪ್ತರಾಗಿದ್ದರೆ ನಿನಗೆ ಸಮಾನರೇ ಆಗುತ್ತಿದ್ದರು. ನಿನ್ನ ವಶದಲ್ಲಿ ಇರುತ್ತಿರಲಿಲ್ಲ. ಆದರೆ ಅವರು ನಿನ್ನಿಂದಲೇ ನಾನಾ ಅವಿದ್ಯೆಗಳ ಸಂಬಂಧದಿಂದ ಅಪರಿಮಿತರಾಗಿ ಹುಟ್ಟಿದ್ದಾರೆ. ಅದರಿಂದ ನಿನ್ನ ವಶದಲ್ಲಿದ್ದಾರೆ.' ಎಂದು ಶ್ರೀಧರವ್ಯಾಖ್ಯಾನದಲ್ಲಿ ನೀಡಿರುವ ವಿವರಣೆ. ಬೇರೆ ವ್ಯಾಖ್ಯಾನಕಾರರೆಲ್ಲರೂ ಇದನ್ನೇ ಒಪ್ಪುತ್ತಾರೆ.

ನೈಯಾಯಿಕರೂ ಸಾಂಖ್ಯರೂ ಜೀವರನ್ನು ಅಪರಿಮಿತರು ನಿತ್ಯರು ಸರ್ವವ್ಯಾಪ್ತರೆಂದು ಹೇಳಿದ್ದಾರೆ. ಸಾಂಖ್ಯರು ಈಶ್ವರನನ್ನು ಒಪ್ಪದಿರುವುದರಿಂದ ಜೀವರಿಗೆ ಈಶ್ವರಾಧೀನತ್ವವನ್ನು ಒಪ್ಪುವ ಪ್ರಸಕ್ತಿ ಇಲ್ಲ. ನೈಯಾಯಿಕರು ಈಶ್ವರನನ್ನು ಒಪ್ಪಿದ್ದಾರೆ. ಈಶ್ವರಾಧೀನತ್ವವನ್ನು ಜೀವರಿಗೆ ಒಪ್ಪಿದ್ದಾರೆ. ಶ್ರುತಿಗೀತೆ **'ಜೀವರು**

೧. ವಸ್ತುತ ಏವಾನಂತಾ ಧ್ರುವಾ ಸ್ತೇನೈವ ರೂಪೇಣ ನಿತ್ಯಾಃ ಸರ್ವಗತಾಶ್ಚ ತನುಭೃತೋ ಜೀವಾ ಯದಿ ಸ್ಯುಸ್ತರ್ಹಿ ತೇಷಾಂ ಸಮತ್ವಾಚ್ಛಾಸ್ಯತಾ ನ ಘಟತೇ ಇತಿ ಕೃತ್ವಾ ಹೇ ಧ್ರುವ ನಿಯಮೋ ನಿಯಮನಂ ತ್ವಯಾ ನ ಸ್ಯಾದಿತರಥಾ ತು ಘಟೇತ । -ಶ್ರೀಧರಃ

ಅಪರಿಮಿತ ನಿತ್ಯ ಸರ್ವವ್ಯಾಪ್ತರಾದರೆ ಈಶ್ವರಾಧೀನರಾಗಿರಲಾರರು. ಏಕೆಂದರೆ ನಿತ್ಯಸರ್ವಗತರಾದ್ದರಿಂದ ಈಶ್ವರನಿಗೆ ಸಮಾನರೇ ಆಗಿರುತ್ತಾರೆ' ಎಂದು ಹೇಳುತ್ತಿದೆ. ಆದರೆ ನೈಯಾಯಿಕರು ಜೀವರನ್ನು ವಿಭು ಪರಿಮಾಣರೆಂದು ಒಪ್ಪಿದರೂ ನಿತ್ಯಜ್ಞಾನೇಚ್ಛಾದಿಗಳುಳ್ಳವರಲ್ಲ. ಅವರಿಗೆ ಜ್ಞಾನಾದಿಗಳು ಶರೀರದಿಂದ ಸಿಗಬೇಕು. 'ತನುಭೃತಃ' ಶರೀರವನ್ನು ಧರಿಸಬೇಕು. ಶರೀರಸೃಷ್ಟಿ ನಿತ್ಯಜ್ಞಾನಾದಿಗಳುಳ್ಳ ಈಶ್ವರನಿಂದಲೇ ಸಾಧ್ಯ. ಮತ್ತು ಶರೀರದೊಳಗೆ ಅಂತರ್ಯಾಮಿಯಾಗಿದ್ದು ಜೀವರನ್ನು ನಿಯಮಿಸುವುದೂ ನಿತ್ಯಜ್ಞಾನಾದಿಉಳ್ಳ ಈಶ್ವರನಿಂದಲೇ ಸಾಧ್ಯ ಎನ್ನುತ್ತಾರೆ.

[1]ಜೀವರು ವ್ಯಾಪಕರಾದ ಮಾತ್ರಕ್ಕೆ ಬೇರೆಯವರಿಂದ ನಿಯಮ್ಯರಾಗುವುದಿಲ್ಲ ಎನ್ನಲಾಗದು. ಸಣ್ಣ ಸಿಂಹವೂ ದೊಡ್ಡ ಆನೆಯನ್ನು ನಿಗ್ರಹಿಸಬಹುದು. ಸಣ್ಣ ರಾಜ ದೊಡ್ಡ ರಾಷ್ಟ್ರವನ್ನು ಆಳಬಹುದು. ಪರಿಮಾಣ ದೊಡ್ಡದೆನ್ನುವುದು ಅಪ್ರಯೋಜಕ ಎಂದು ವಲ್ಲಭವ್ಯಾಖ್ಯಾನ ಹೇಳಿದೆ. ಆದರಿಂದ ಪಾಠ ತಪ್ಪು. ವ್ಯಾಖ್ಯಾನವೂ ತಪ್ಪು.

ಯಸ್ಯ ಪರಮಸ್ಯ ತೇ ಕಶ್ಚಿದಪರಃ ಸ್ವತಂತ್ರೋ ನಾಸ್ತಿ। ಅನಪರಸ್ಯ ಪ್ರಾಣೋತ್ತಮಸ್ಯ। ಅತ್ರ ಜೀವಸಮುದಾಯೇ ವ್ಯಯತಃ ವಿಶೇಷೇಣಾಯತಃ ಸರ್ವಜ್ಞಸ್ಯ ಯಥಾ ಪ್ರಾಣಸ್ಯ ನಾಪರಃ ಸ್ವತಂತ್ರಃ ತದ್ವತ್ ಪ್ರಾಣಃ ಶ್ರೀರನ್ಯೋ ವಾ ತ್ವಾಂ ವಿನಾ ಸ್ವತಂತ್ರೋ ನಾಸ್ತಿ। ಹೇ ಶೂನ್ಯತುಲ ಸಮಾನವರ್ಜಿತ। ಸರ್ವಂ ಸಂದಧತಸ್ತೇ।

ಸರ್ವೋತ್ತಮನಾದ ನಿನಗಿಂತ ಬೇರೆ ಸ್ವತಂತ್ರನಿಲ್ಲ. 'ಅನಪರಸ್ಯ' ಎಂದರೆ ಪ್ರಾಣನಿಗಿಂತ ಉತ್ತಮನಾದ ಎಂದರ್ಥ. 'ಅತ್ರ' ಈ ಜೀವರಲ್ಲಿ 'ವ್ಯಯತಃ' 'ವಿ ಆಯತಃ' ವಿಶೇಷವಾಗಿ ಎಲ್ಲವನ್ನೂ ತಿಳಿಯಬಲ್ಲ ಸರ್ವಜ್ಞನಾದ ಪ್ರಾಣನಿಗೆ ಇನ್ನೊಬ್ಬ ಸ್ವತಂತ್ರ ಹೇಗೆ ಇಲ್ಲವೋ ಹಾಗೇ 'ಅತ್ರ' ಈ ಚೇತನವರ್ಗದಲ್ಲಿ ಪ್ರಾಣನಾಗಲಿ ಲಕ್ಷ್ಮಿಯಾಗಲಿ ಬೇರೊಬ್ಬನಾಗಲಿ ನಿನ್ನನ್ನು ಹೊರತು ಸ್ವತಂತ್ರನಿಲ್ಲ. 'ಶೂನ್ಯತುಲ' ಎಂಬುದು ಸಂಬುದ್ಧಿ, ಸಮಾನಿಕರಿಲ್ಲದವನೆ! ಎಂದರ್ಥ. 'ಸಂದಧತಃ' ಎಂದರೆ ಸರ್ವವನ್ನು ಧರಿಸುವ 'ತೇ' ನಿನಗೆ ಎಂದರ್ಥ.

ಯದಿ ತತಃ ಪ್ರಾಣಾತ್ ತನುಭೃತೋ ಜೀವಾ ಧ್ರುವಾಸ್ತರ್ಹ್ಯಪರಿಮಿತಾಃ

---

೧. ವ್ಯಾಪಕತ್ವಮಪ್ಯಸ್ತು ನಿಯಮ್ಯತ್ವಮಪ್ಯಸ್ತು ಕೋ ದೋಷಃ। ಅಲ್ಪೇನಾಪಿ ಸಿಂಹೇನ ಮಹಾಗಜೋ ನಿಯಮ್ಯತೇ। ಸೂಕ್ಷ್ಮೇಣಾಪಿ ರಾಜ್ಞಾ ಸರ್ವಲೋಕಾ ನಿಯಮ್ಯಂತೇ ಅತೋ ವ್ಯರ್ಥ ಆಗ್ರಹಃ। -ವಲ್ಲಭಃ

ಸಂತಿ। ಹೇ ಸರ್ವ ಪೂರ್ಣ। 'ಏಕಮೇವಾದ್ವಿತೀಯಂ' 'ಏಕಂ ಪರಂ ಜ್ಯೋತಿರನನ್ಯಮದ್ವಯಂ' ಇತ್ಯಾದಿನಿಯಮೋ ಜೀವಾನಾಂ ಶಾಸ್ಯತಾ ನೇತ್ಯತ್ರ ನಹಿ। ಕಿಂತು ಸ್ವಗತಭೇದಸ್ಯ ಈಶ್ವರಾಂತರಸ್ಯ ಅತತ್ತಂತ್ರಸ್ಯ ಚ ನಿಷೇಧೇ। 'ಅತೋಽನ್ಯದಾರ್ತಂ' 'ನೇಹ ನಾನಾಸ್ತಿ ಕಿಂಚನ' 'ನ ತತ್‌ಸಮಶ್ಚಾಭ್ಯಧಿಕಶ್ಚ ದೃಶ್ಯತೇ' ಇತ್ಯಾದಿ ತಥಾ ಬ್ರುವತೇ ಚ।

ಒಂದು ವೇಳೆ 'ತತಃ' ಹರಿಯಿಂದ ಪ್ರಾಣನಿಂದ ಬೇರೆ ನಿತ್ಯರಾದ 'ತನುಭೃತಃ' ಜೀವರು ಅಪರಿಮಿತರಾಗಿ ಇದ್ದಾರೆ ಎನ್ನುವುದಾದರೆ ಅದೂ ಸರಿಯೆ. ಆದರೆ ಅವರೂ ತತಃ ಹರಿಯಿಂದ ಪ್ರಾಣನಿಂದ 'ತನುಭೃತಃ' ದೇಹವನ್ನು ಧರಿಸುವವರು. ನಿನಗೆ ಸಮಾನರಲ್ಲ. 'ಸರ್ವ' ಎಂದರೆ ಪೂರ್ಣನಾದ ಹರಿಯೆ! ಎಂದು ಸಂಬೋಧನೆ. 'ಏಕಮೇವಾದ್ವಿತೀಯಂ' 'ಏಕಂ ಪರಂಜ್ಯೋತಿರನನ್ಯಮದ್ವಯಂ' ಎಂದು ಮುಂತಾದ ಶ್ರುತಿಯಲ್ಲಿ 'ಬ್ರಹ್ಮ ಒಂದೇ ಇರುತ್ತದೆ' 'ಇನ್ನೊಂದು ಪದಾರ್ಥವಿಲ್ಲ' ಎಂದು ವಿಧಿ-ನಿಷೇಧರೂಪದ ನಿಯಮವು ಜೀವರಿಗೆ ಪರಮಾತ್ಮಾಧೀನತ್ವವಿಲ್ಲ ಎಂಬ ವಿಷಯದಲ್ಲಿ ಅಲ್ಲ. 'ಏಕಂ' ಎಂದು ಶ್ರೀಹರಿಗೆ ತನ್ನ ಗುಣ ಕರ್ಮ ಅವಯವ ರೂಪಗಳಲ್ಲಿ ಭೇದವಿಲ್ಲ ಎಂದು ನಿಷೇಧ ವಿವಕ್ಷಿತ. 'ಅದ್ವಿತೀಯಂ' ಎಂಬುದು ಇನ್ನೊಬ್ಬ ಸ್ವತಂತ್ರನನ್ನೂ ಹರಿಗೆ ಅಧೀನವಲ್ಲದ ಇನ್ನೊಂದು ಪದಾರ್ಥವನ್ನೂ ಇಲ್ಲವೆನ್ನುತ್ತದೆ. 'ಶ್ರೀಹರಿಗಿಂತ ಬೇರೆ ಎಲ್ಲರೂ ದುಃಖಿಗಳು. ಪರಮಾತ್ಮನಲ್ಲಿ ಗುಣಕರ್ಮಾದಿಗಳು ಅವನಿಂದಾಗಲಿ ಪರಸ್ಪರವಾಗಿಯಾಗಲಿ ಭಿನ್ನವಾಗಿ ಇಲ್ಲ. ಪರಮಾತ್ಮನಿಗೆ ಸಮನಿಲ್ಲ ಉತ್ತಮನೂ ಇಲ್ಲ ಎಂದು ಮುಂತಾದ ಶ್ರುತಿಸ್ಮೃತಿಗಳು ಹಾಗೇ ಹೇಳುತ್ತಿವೆ' ಎಂದು ಶ್ಲೋಕದ ಅರ್ಥ.

ತವ ಸ್ವತಂತ್ರೋ ನಾಪರೋ ಯದ್ವದತ್ರ
ಪ್ರಾಣಾನ್ನಾನ್ಯಸ್ತುಲ್ಯಶೂನ್ಯಸ್ಯ ಸಂಧಿನ್ ।
ಪ್ರಾಣಾಧೀನಾ ಅಮಿತಾ ಜೀವಸಂಘಾಃ
ಪ್ರಾಣೋ ವಶೇ ತೇ ಪ್ರಕೃತಿಶ್ಚ ಭೂಮನ್ ॥

ಇತಿ ಮಹಾಶಾಲೀನಶ್ರುತಿಃ ॥

'ಹೇ ಸರ್ವಧಾರಕನೇ ಅಸದೃಶನೇ ಜೀವವರ್ಗದಲ್ಲಿ ಪ್ರಾಣನಿಗೆ ಬೇರೆ ಸಮನಾಗಲಿ ಉತ್ತಮನಾಗಲಿ ಸ್ವತಂತ್ರನು ಹೇಗೆ ಇರುವುದಿಲ್ಲವೋ ಹಾಗೇ ಸಕಲ ಚೇತನವರ್ಗದಲ್ಲಿ ಸಮನಾಗಲಿ ಉತ್ತಮನಾಗಲಿ ಇಲ್ಲದ ನಿನಗೆ ಬೇರೆ ಸ್ವತಂತ್ರನು ಯಾರೂ ಇಲ್ಲ. ಹೇ ಪೂರ್ಣನೆ, ಅನಂತ ಜೀವರಾಶಿಗಳೂ ಪ್ರಾಣನ ಅಧೀನವಾಗಿವೆ. ಪ್ರಾಣನೂ ಲಕ್ಷ್ಮಿಯೂ ನಿನ್ನ ಅಧೀನ ದಲ್ಲಿದ್ದಾರೆ.' ಎಂದು ಮಹಾಶಾಲೀನ ಶ್ರುತಿ ಇದೆ.

ಸ್ವತಂತ್ರೋ ನಾಪರಃ ಕಶ್ಚಿದ್ ವಿಷ್ಣೋಃ ಪ್ರಾಣಪತೇಃ ಪ್ರಭೋಃ ।
ಯಥಾ ಪ್ರಾಣಾತ್ ಪರೋ ನಾಸ್ತಿ ಸ್ವತಂತ್ರೋ ಜಗತಿ ಕ್ವಚಿತ್ ।
ತಥಾ ಪ್ರಾಣೋ ರಮಾ ಚೈವ ನ ವಿಷ್ಣೋಃ ಪೃಥಗೀಶ್ವರೌ ।
ಯದ್ಯುಚ್ಯಂತೇ ಪ್ರಾಣತಂತ್ರಾ ಬಹವಃ ಪುರುಷಾ ಇತಿ ।
ಸತ್ಯಮೇವ ಹ್ಯಸಂಖ್ಯಾತಾ ನ ನಿಯಮ್ಯನಿಷೇಧಕಾಃ ।
ಏಕಾದ್ವಿತೀಯಶ್ರುತಯಃ ಕಿಂತ್ವೀಶಾಂತರವಾರಕಾಃ ।
ತಥಾ ಸ್ವಗತಭೇದಸ್ಯ ತದತಂತ್ರನಿಷೇಧಕಾಃ ॥ ಇತಿ ಬ್ರಹ್ಮಾಂಡೇ ॥

ಜೀವವರ್ಗದಲ್ಲಿ ಎಲ್ಲಿಯೂ ಪ್ರಾಣನಿಗಿಂತ ಬೇರೆಯಾಗಿ ಸ್ವತಂತ್ರನು ಹೇಗೆ ಇರುವುದಿಲ್ಲವೋ ಹಾಗೇ ಚೇತನಪ್ರಪಂಚದಲ್ಲಿ ಪ್ರಾಣನಾಥನಾದ ಪ್ರಭು ವಿಷ್ಣುವಿಗಿಂತ ಬೇರೆಯಾಗಿ ಯಾರೂ ಸ್ವತಂತ್ರನಿಲ್ಲ. ಪ್ರಾಣನೂ ರಮೆಯೂ ವಿಷ್ಣುವನ್ನು ಬಿಟ್ಟು ಸ್ವತಂತ್ರರಾಗಿ ನಿಯಾಮಕರಲ್ಲ. ಜೀವರು ಬಹಳ ಅಸಂಖ್ಯಾತರಾಗಿ ಇರುವರೆನ್ನುವುದಾದರೆ ಅದು ನಿಜವೆ. ಆದರೆ ಅವರೆಲ್ಲರೂ ಪ್ರಾಣನಿಗೆ ಅಧೀನರು. ಏಕ ಅದ್ವಿತೀಯ ಎಂದು ಮುಂತಾಗಿ ಹೇಳುವ ಶ್ರುತಿಗಳು ಪರಬ್ರಹ್ಮನಿಗಿಂತ ಬೇರೆ ಅವನಿಗೆ ನಿಯಮ್ಯವಾದ ಪ್ರಪಂಚವೆ ಇಲ್ಲವೆನ್ನುವುದಿಲ್ಲ. ಪರಬ್ರಹ್ಮನಿಗಿಂತ ಬೇರೆ ನಿಯಾಮಕ ನಿಲ್ಲವೆನ್ನುತ್ತವೆ. ಪರಬ್ರಹ್ಮನಲ್ಲಿ ಸ್ವಗತ ಭೇದವಿಲ್ಲವೆನ್ನುತ್ತವೆ ಅವನಿಗೆ ವಶವಲ್ಲದ ಬೇರೆ ವಸ್ತುವಿಲ್ಲ ಎನ್ನುತ್ತವೆ.' ಎಂದು ಬ್ರಹ್ಮಾಂಡಪುರಾಣ ಹೇಳಿದೆ.

ಸ್ವರೂಪಮಸ್ಮರತ್ ಕೃಷ್ಣ ಏಕಂ ಸ್ವಸ್ಮಿನ್ನಭೇದತಃ ।
ಅತತ್ತಂತ್ರಸ್ಯ ರಾಹಿತ್ಯಾದನನ್ಯಂ ಸದೃಶೋಜ್ಝಿತೇಃ ।
ಅದ್ವಯಂ ನಿತ್ಯನಿರ್ವೃತ್ತ್ಯಾ ಭಾವನಿರ್ವೃತಿಮೀಶ್ವರಂ ॥
ಇತಿ ತಂತ್ರಭಾಗವತೇ ॥

'ಶ್ರೀಕೃಷ್ಣ ತನ್ನ ಸ್ವರೂಪವನ್ನು ಧ್ಯಾನಮಾಡಿದ. ತನ್ನಲ್ಲಿ ಗುಣಕರ್ಮಾದಿ ಭೇದವಿಲ್ಲದ್ದರಿಂದ ತಾನು 'ಏಕಃ', ತನ್ನ ಅಧೀನವಿಲ್ಲದ್ದು ಬೇರೆ ಇಲ್ಲದವನಾದ್ದರಿಂದ 'ಅನನ್ಯ', ಸದೃಶರಹಿತನಾದ್ದರಿಂದ 'ಅದ್ವಯ', ನಿತ್ಯಾನಂದನಾದ್ದರಿಂದ 'ಭಾವನಿರ್ವೃತಿ' ಇಂಥ ಮಹಿಮೆ ಹೇಗೆ ಎಂದರೆ ತಾನು ಸರ್ವಸಮರ್ಥ. ಎಂದು ತಂತ್ರಭಾಗವತದಲ್ಲಿ ಹೇಳಿದೆ.

ಅಧಿಕಸ್ಯ ಸಮಸ್ಯಾಪಿ ಸ್ವತಂತ್ರಸ್ಯ ಚ ವರ್ಜನಾತ್ ।
ಏಕ ಏವಾದ್ವಿತೀಯೋಽಸೌ ನ ಶಾಸ್ಯಜನವರ್ಜನಾತ್ ॥

ಇತಿ ಕೌರ್ಮೇ ॥

ಶ್ರೀಹರಿಗೆ ಉತ್ತಮನಿಲ್ಲ ಸಮನೂ ಇಲ್ಲ. ಅದರಿಂದ ಅವನು 'ಏಕ ಏವ' ಎನಿಸಿದ್ದಾನೆ. ಬೇರೆ ಸ್ವತಂತ್ರನಿಲ್ಲದ್ದರಿಂದ 'ಅದ್ವಿತೀಯ'ನೆನಿಸಿದ್ದಾನೆ ಹೊರತು ಅವನ ವಶದಲ್ಲಿರಬಹುದಾದ ಜನರೇ ಇಲ್ಲದ್ದರಿಂದಲ್ಲ, ಎಂದು ಕೂರ್ಮಪುರಾಣದಲ್ಲಿ ಉಕ್ತವಾಗಿದೆ.

ಶ್ರುತಿಗೀತೆಯಲ್ಲಿ ಹದಿನೆಂಟನೆ ಪದ್ಯ—

ಅಜನ ಪರಿಮುಚ್ಯತೇಽತ್ರ ಭವಾತ್ ಸತತಾತ್
ಸಮಮನುಜಾನತಾ ತತಮನಂತಮದುಷ್ಟತಯಾ ।
ನ ಘಟತ ಉದ್ಭವಃ ಪ್ರಕೃತಿಪೂರುಷಯೋರಜಯೋ-
ರುಭಯಯುಜೋರ್ಭವಂತ್ಯಸುಭೃತೋ ಜಲಬುದ್ಬುದವತ್ ॥ ೩೨ ॥

ಜನನ ರಹಿತನೆ, ನೀನು ಎಲ್ಲೆಡೆ ವ್ಯಾಪಿಸಿದ್ದರೂ ಎಲ್ಲೆಡೆ ದೋಷರಹಿತನಾಗಿ ನಾಶರಹಿತನಾಗಿ ಸಮಾನನಾಗಿರುವೆ. ಇಂಥ ನಿನ್ನನ್ನು ಅರಿತಿರುವ ಗುರುವಿನ ಉಪದೇಶದಿಂದಲೇ ಅನಾದಿ ಸಂಸಾರದಿಂದ ಮುಕ್ತಿ ಸಾಧ್ಯ. 'ಅಜ'ರೆನಿಸಿರುವ ರಮಾನಾರಾಯಣರಿಗೆ ನಿಮಗೆ ಜನ್ಮ ಕೂಡುವುದಿಲ್ಲ, ಇಬ್ಬರೂ ದೇಶಕಾಲಗಳಲ್ಲಿ ಸಮವ್ಯಾಪ್ತರು. ಪ್ರಾಣಿಗಳೇ ನೀರಮೇಲಿನ ಗುಳ್ಳೆಗಳಂತೆ ನಿಮ್ಮಿಂದ ಹುಟ್ಟುತ್ತಾರೆ ಸಾಯುತ್ತಾರೆ.

ಅಜನ! ಅತ್ರ ಅದುಷ್ಟತಯಾ ಅನಂತಂ ಸಮಂ ತತಂ

ಜನನ ವರ್ಜಿತನೆ, ನೀನು ಎಲ್ಲೆಡೆ ದೋಷವರ್ಜಿತನಾಗಿ ನಾಶರಹಿತನಾಗಿ ಸಮನಾಗಿಯೇ ವ್ಯಾಪಿಸಿರುವೆ. ಎಲ್ಲೆಡೆ ವ್ಯಾಪಿಸಿದ್ದರೂ

ವಸ್ತುಗಳ ಸಂಬಂಧಪ್ರಯುಕ್ತವಾಗಿ ನಿನ್ನಲ್ಲಿ ದೋಷ ಉಂಟಾಗುವುದಿಲ್ಲ. ವಸ್ತುಗಳು ನಾಶಹೊಂದಿದರೂ ಅದರೊಳಗಿರುವ ನೀನು ನಾಶ ಹೊಂದುವುದಿಲ್ಲ. **ಎಲ್ಲೆಡೆ** ದೋಷರಹಿತನಾಗಿ ನಾಶರಹಿತನಾಗಿ ಸಮನಾಗಿಯೇ **ಇರುವೆ.**

ಅನುಜಾನತಾ ಸತತಾತ್ ಭವಾತ್ ಪರಿಮುಚ್ಯತೇ

ಇಂಥ ನಿನ್ನನ್ನು ಸರಿಯಾಗಿ ತಿಳಿದಿರುವ ಗುರುವಿನ ಉಪದೇಶ **ದಿಂದಲೇ ಅನಾದಿಕಾಲದಿಂದ ಸತತ** ಪೀಡಿಸುವ ಅನಾದಿ ಸಂಸಾರದಿಂದ **ಮುಕ್ತಿಹೊಂದುತ್ತಾನೆ.**

ಅಜಯೋಃ ಪ್ರಕೃತಿ ಪೂರುಷಯೋಃ ಉದ್ಭವಃ ನ ಘಟತೇ

ಚಿತ್‌ಪ್ರಕೃತಿ ರಮಾದೇವಿ 'ಅಜಾ' ಎನಿಸುತ್ತಾಳೆ. ಪರಮಪುರುಷ ನಾದ ನೀನು '**ಅಜ**' ಎನಿಸುವಿ. **ಅಜರೆನಿಸಿದ** ರಮಾನಾರಾಯಣರು ನೀವಿಬ್ಬರೂ ಜನನ ಮರಣ ರಹಿತರು ನಿತ್ಯಮುಕ್ತರು ಎಂದ ಮೇಲೆ ನಿಮಗೆ ಉತ್ಪತ್ತಿ ಕೂಡುವುದಿಲ್ಲ.

ಉಭಯಯುಜೋಃ ಅಸುಭೃತಃ ಜಲಬುದ್ಬುದವತ್ ಭವಂತಿ

ರಮಾನಾರಾಯಣರು ನಿರಂತರ ಬತ್ತದೇ ಇರುವ ಗಂಗಾ ಪ್ರವಾಹದಂತೆ **ಏಕಪ್ರಕಾರ ಇರುವವರು.** ಗಂಗಾಪ್ರವಾಹದಲ್ಲಿ ನೀರಿನಿಂದ ಗುಳ್ಳೆಗಳು ಎದ್ದು **ಕ್ಷಣದಲ್ಲಿ ಮರೆಯಾಗುತ್ತವೆ.** ಹಾಗೇ ರಮಾನಾರಾಯಣ ರಲ್ಲಿ ಪ್ರಾಣಿಗಳು **ಅವರಿಂದ ಹುಟ್ಟಿ** ಸಾಯುತ್ತವೆ. ನಿರಂತರವಾದ ಈ ಹುಟ್ಟುಸಾವುಗಳೇ **ಸಂಸಾರ. ಜೀವರ** ಸಂಸಾರಕ್ಕೆ ರಮಾನಾರಾಯಣರು ಆಧಾರಭೂತರು. **ಇವರು 'ಉಭಯ'** ದೇಶಕಾಲಗಳೆರಡರಲ್ಲಿ ಸಮಾನವಾಗಿ '**ಯುಜೌ' ವ್ಯಾಪಿಸಿರುವವರು. ಇದನ್ನು** ತಿಳಿದಿರುವ ಗುರುವಿನ ಉಪದೇಶ**ದಿಂದ ಸಂಸಾರಿಗಳಿಗೆ ಮೋಕ್ಷ** ಲಭ್ಯ.

ಇಲ್ಲಿ ಬೇರೆ ವ್ಯಾಖ್ಯಾನ**ಕಾರರ ಶ್ಲೋಕಪಾಠ ಹೀಗಿದೆ—**

ಅಜನಿ ಚ ಯನ್ಮಯಂ **ತದವಿಮುಚ್ಯ ನಿಯಂತೃ** ಭವೇತ್
ಸಮಮನುಜಾನತಾಂ **ಯದಮತಂ ಮತದುಷ್ಟ**ತಯಾ
ನ ಘಟತ ಉದ್ಭವಃ **ಪ್ರಕೃತಿಪೂರುಷ**ಯೋರಜಯೋ-
ರುಭಯಯುಜಾ **ಭವಂತ್ಯಸುಭೃತೋ** ಜಲಬುದ್ಬುದವತ್॥

ಇದಕ್ಕೆ ಅವರು ನೀಡಿರುವ **ವಿವರಣೆ—**

'ಯಾವುದು ಯಾವುದರ ವಿಕಾರವಾಗಿ ಜನಿಸುವುದೋ **ಅದು ಅದಕ್ಕೆ** ನಿಯಾಮಕ. ಜೀವ ಬ್ರಹ್ಮನ ವಿಕಾರದಂತಿದ್ದಾನೆ. ಅದರಿಂದ ಬ್ರಹ್ಮ **ಅವನೊಳಗೆ** ಹಾಸುಹೊಕ್ಕಾಗಿ ಇದ್ದು ಅವನಿಗೆ ನಿಯಾಮಕ. ಈ ಬ್ರಹ್ಮನನ್ನು ತಿಳಿಯಲಾಗುವು**ದಿಲ್ಲ**, ತಿಳಿದೆವೆಂದು ಹೇಳುವವರಿಗೆ ಅದು ತಿಳಿದಿಲ್ಲ, ತಿಳಿದದ್ದೆಲ್ಲವೂ ದೋಷಪೂರ್ಣ. ಪ್ರಕೃತಿಯಾಗಲಿ ಪುರುಷನಾಗಲಿ ಜೀವರೂಪದಿಂದ ಹುಟ್ಟಲಿಲ್ಲ. ಪ್ರಕೃತಿಯೇ ಜೀವರೂಪದಿಂದ ಹುಟ್ಟಿದರೆ ಜೀವನು ಜಡವಾಗಬೇಕಾದೀತು. ಪುರುಷನು ಜೀವರೂಪದಿಂದ ಹುಟ್ಟಿದರೆ ಪುರುಷನಿಗೆ ವಿಕಾರ ಬಂದೀತು. ಅದರಿಂದ ಪ್ರಕೃತಿ ಪುರುಷರಿಬ್ಬರೂ ಸೇರಿ ಅಂದರೆ ಪರಸ್ಪರ ಅಧ್ಯಸ್ತರಾಗಿ ಜೀವೋಪಾಧಿಯನ್ನು ಹುಟ್ಟಿಸುತ್ತಾರೆ. ಅದಕ್ಕೆ ಪುರುಷನು ಉಪಾದಾನ, ಪ್ರಕೃತಿ ನಿಮಿತ್ತ. ಉಪಾದಾನವೆಂದರೆ ವಿವರ್ತೋಪಾದಾನ ವಿವಕ್ಷಿತವಾದ್ದರಿಂದ ಜೀವ ವಿಕಾರದಂತೆ, ಹೊರತು, ವಿಕಾರವಲ್ಲ. ವಿಕಾರ ಪ್ರಸಕ್ತಿ ಇಲ್ಲ. ಹೀಗೆ ಜೀವೋಪಾಧಿ ಹುಟ್ಟುವುದರಿಂದ ಜೀವ ಹುಟ್ಟುವನೆಂದು ವ್ಯವಹಾರ. ನೀರಗುಳ್ಳೆಗೆ ನೀರು ಉಪಾದಾನ, ಗಾಳಿ ನಿಮಿತ್ತ. ಅದರಂತೆ ಜೀವೋಪಾಧಿಗೆ ಪುರುಷ ಉಪಾದಾನ, ಪ್ರಕೃತಿ ನಿಮಿತ್ತವೆನ್ನುವುದು ಕೂಡುತ್ತದೆ.'

'ಉಪಾದಾನಕಾರಣವೇ ಕಾರ್ಯಕ್ಕೆ ನಿಯಾಮಕ' ಎಂದು ತಾವೇ ನಿಯಮ ಮಾಡಿಕೊಂಡಿರುವುದು ವಿಚಿತ್ರವಾಗಿದೆ. ನಿಮಿತ್ತಕಾರಣವೋ ಕರ್ತನೋ ಅಥವಾ ನಿಯಮನಸಾಮರ್ಥ್ಯ ಉಳ್ಳವನು ಯಾರೋ ಒಬ್ಬ ಚೇತನ ಘಟಾದಿಗಳಿಗೆ ನಿಯಾಮಕನಾಗಿರುವುದು ಕಂಡಿದೆ ಹೊರತು ಘಟಕ್ಕೆ ಉಪಾದಾನವಾದ ಮಣ್ಣು ನಿಯಾಮಕವಾಗಿರುವುದು ಕಂಡಿಲ್ಲ. ಮಣ್ಣು ತಾನೇ ಘಟವಾಗಿರುತ್ತದೆ. ಭೃತ್ಯನಿಗೆ ಸ್ವಾಮಿ, ರಾಷ್ಟ್ರಕ್ಕೆ ರಾಜ ನಿಯಾಮಕನಾಗುವುದೇ ಕಂಡಿದೆ. ತತ್ವದೇವತೆಗಳೂ ಹರಿವಾಯುಗಳೂ ಜೀವರಿಗೆ ಅಂತರ್ಯಾಮಿಗಳಾಗುವುದು ಕಂಡಿದೆ. ಇವರು ಯಾರೂ ಉಪಾದಾನಕಾರಣರಲ್ಲ. ಅದ್ವೈತ ಮತದಲ್ಲಿ ಜೀವನಿಗೆ ನಿರ್ಗುಣ ಬ್ರಹ್ಮ ಉಪಾದಾನ ಕಾರಣವೂ ಅಲ್ಲ, ಕೇವಲ ಭ್ರಮಾಧಿಷ್ಠಾನ, ಹಾವಿಗೆ ಹಗ್ಗದಂತೆ. ಹಗ್ಗ ಹಾವಿಗೆ ಅಂತರ್ಯಾಮಿಯೆ? ನಿರ್ಗುಣಬ್ರಹ್ಮನಿಗೆ ನಿಯಮನಶಕ್ತಿಯಾದರೂ ಇದೆಯೆ?

ನೀರ ಗುಳ್ಳೆಗೆ ನೀರು ಗಾಳಿ ಎರಡೂ ಏಕೆ ಉಪಾದಾನವಾಗಲಾರದು? **ಗಾಳಿ** ಕೇವಲ ನಿಮಿತ್ತವಾದರೆ ಅದು ಹೊರಟು ಹೋದಾಗ ಗುಳ್ಳೆ ಏಕೆ ಮಾಯವಾಗುತ್ತದೆ?

ಅನಂತಮದುಷ್ಟತಯಾಽನುಜಾನತಾಽಽಚಾರ್ಯೇಣ ಸಂತತಾದ್ ಭವಾತ್ ಪರಿಮುಚ್ಯತೇ। ಅಬದ್ಧಶ್ಚ ಪ್ರಕೃತಿಪರೇಶೌ ವಿನಾಽನ್ಯೋ ನ ವಿದ್ಯತೇ। ಯತಸ್ತಯೋರೇವೋದ್ಭವೋ ನ ಘಟತೇ ಅತಸ್ತಯೋ-

ರಜಯೋರಸುಭೃತ ಉದ್ಭವಂತಿ । ದೇಶತಃ ಕಾಲತಶ್ಚ ಯತ್ರ ಪರಮಸ್ತತ್ರ ಪ್ರಕೃತಿರ್ಯತ್ರ ಪ್ರಕೃತಿಸ್ತತ್ರ ಪರಮ ಇತ್ಯುಭಯಯುಜೋಃ ॥

ಶ್ರೀಹರಿಯನ್ನು ದೋಷರಹಿತನೆಂದು ತಿಳಿಯುವ ಆಚಾರ್ಯನ ಉಪದೇಶದಿಂದಲೇ ಅನಾದಿಸಂಸಾರದಿಂದ ಬಿಡುಗಡೆ ಹೊಂದುತ್ತಾನೆ. ಪ್ರಕೃತಿ ಪುರುಷರು ಹೊರತು ಬೇರೆ ನಿತ್ಯಮುಕ್ತನಿಲ್ಲ. ನಿತ್ಯಮುಕ್ತರಾದ ಆ ಲಕ್ಷ್ಮೀನಾರಾಯಣರಿಗೆ ಮಾತ್ರ ಉತ್ಪತ್ತಿ ಕೂಡುವುದಿಲ್ಲ. ಅದರಿಂದ 'ಅಜ'ರೆನಿಸಿರುವ ಅವರಿಂದಲೇ ಜೀವರು ಜನಿಸುತ್ತಾರೆ. 'ಉಭಯಯುಜೋಃ' ಎಂದರೆ ದೇಶದಲ್ಲಿ ಮತ್ತು ಕಾಲದಲ್ಲಿ ಪರಮಾತ್ಮನಿರುವಲ್ಲಿ ಲಕ್ಷ್ಮಿ, ಲಕ್ಷ್ಮಿ ಇರುವಲ್ಲಿ ಪರಮಾತ್ಮ ಹೀಗೆ ಇಬ್ಬರೂ ಪರಸ್ಪರ ವ್ಯಾಪ್ತಿಸಂಬಂಧ ಉಳ್ಳವರೆಂದರ್ಥ.

ಮುಚ್ಯತೇ ತತ್ವಸಂಬುದ್ಧಾದಾಚಾರ್ಯಾತ್ ಪುರುಷೋ ಭವಾತ್ ।
ಏತಾವೇವ ಸ್ವತೋಽಬದ್ಧೌ ಪರಮಃ ಪ್ರಕೃತಿಸ್ತಥಾ ॥

ಇತಿ ಕಲಾಪಶ್ರುತಿಃ ॥

ಸಮ್ಯಗ್‌ಜ್ಞಾನವದಾಚಾರ್ಯಾನ್ಮುಚ್ಯತೇ ಪುರುಷೋ ಭವಾತ್ ।
ದ್ವಾವೇವ ನಿತ್ಯಮುಕ್ತೌ ತು ಪ್ರಕೃತಿಃ ಪರಮಸ್ತಥಾ ॥

ಇತಿ ವಾಮನೇ ॥

ದೇಶತಃ ಕಾಲತಶ್ಚೈವ ಸಮವ್ಯಾಪ್ತಾವುಭಾವಜೌ ।
ತಾಭ್ಯಾಮುಭಯಯೋಗಾಭ್ಯಾಂ ಜಾಯಂತೇ ಪುರುಷಾಃ ಪರೇ ॥

ಇತಿ ಕೌಂತರವ್ಯ ಶ್ರುತಿಃ ॥

ಒಳ್ಳೆಯ ತತ್ವಜ್ಞನಾದ ಆಚಾರ್ಯನ ಉಪದೇಶದಿಂದ ಜೀವನು ಅನಾದಿ ಸಂಸಾರದಿಂದ ಬಿಡುಗಡೆ ಪಡೆಯುತ್ತಾನೆ. ಪರಮಾತ್ಮ ಮತ್ತು ಲಕ್ಷ್ಮಿ ಇವರಿಬ್ಬರೇ ಸ್ವತಃ ಬಂಧರಹಿತರು ಎಂದು ಕಲಾಪಶ್ರುತಿ ಹೇಳುತ್ತಿದೆ.

ಒಳ್ಳೆಯ ಜ್ಞಾನಿಯಾದ ಆಚಾರ್ಯನ ಉಪದೇಶದಿಂದ ಜೀವನು ಮುಕ್ತಿ ಪಡೆಯುತ್ತಾನೆ. ಲಕ್ಷ್ಮಿ ಮತ್ತು ಪರಮಾತ್ಮರಿಬ್ಬರೇ ನಿತ್ಯಮುಕ್ತರು ಎಂದು ವಾಮನಪುರಾಣದಲ್ಲಿ ಹೇಳಿದೆ.

'ದೇಶದಲ್ಲಿಯೂ ಕಾಲದಲ್ಲಿಯೂ ಸಮಾನ ವ್ಯಾಪ್ತಿ ಉಳ್ಳವರು 'ಅಜ'ರೆನಿಸಿದ ಲಕ್ಷ್ಮೀನಾರಾಯಣರು. ಅದರಿಂದ ಉಭಯಯೋಗ

ಉಳ್ಳವರೆನಿಸಿದ ಆ ಇಬ್ಬರಿಂದಲೇ ಬೇರೆ ಚೇತನರು ಜನಿಸುತ್ತಾರೆ' ಎಂದು ಕೌಂಠರವ್ಯಶ್ರುತಿ ಇದೆ.

❖❖❖

ಶ್ರುತಿಗೀತೆಯಲ್ಲಿ ಹತ್ತೊಂಬತ್ತನೇ ಪದ್ಯ—

ತ್ವಯಿ ತ ಇಮೇ ತತೋ ವಿಬುಧನಾಮಗುಣಾಃ ಪರಮೇ
ಅಮೃತ ಇವಾರ್ಣವೇ ಮಧುನಿ ಲಿಲ್ಯುರಶೇಷರಸಾಃ ।
ನೃಷು ತವ ಮಾಯಯಾ ಸ್ವಗತಯಾ ಕುಶಲಂ
ತ್ವಯಿ ಸುಧಿಯೋಽಂಗ ಭೇದಮನುಧಾತುಮನು ಪ್ರಭವಃ ।
ಕಥಮನುವರ್ತಿನಾಂ ಭವಭಯಂ ತವ ಭ್ರುಕಟೀ ಸೃಜತಿ ಮುಹುರ್ನೃಣಾಂ
॥ ೩೩ ॥

ಜಗತ್‌ಪಿತನೆ, ಆನಂದರೂಪನೆ, ಸರ್ವೋತ್ತಮನೆ, ಎಲ್ಲ ದೇವತೆಗಳ ನಾಮಗಳು ಹೇಳುವ ಅವರ ಮಹಿಮೆಗಳು ಎಲ್ಲವೂ ನಿನ್ನಲ್ಲಿಯೇ ಇವೆ. ಮಧುರವಾದ ಅಮೃತರಸ ಸಮುದ್ರದಲ್ಲಿ ಎಲ್ಲ ರಸಗಳೂ ಅಡಗಿರುವಂತೆ. ಜ್ಞಾನಿಗಳಲ್ಲಿ ನಿನ್ನ ಅನುಗ್ರಹವಿರುವುದು ಇತರರಿಗೆ ಕಾಣುವುದಿಲ್ಲ. ಆ ಅನುಗ್ರಹದಿಂದ ಅವರು ನಿನ್ನಲ್ಲಿರುವ ಮಂಗಳಕರವಾದ ಸರ್ವವೈಲಕ್ಷಣ್ಯವನ್ನು ತಿಳಿಯಲು ಸಮರ್ಥರಾಗುತ್ತಾರೆ. ಅಂಥ ನಿನ್ನ ಭಕ್ತರಾದ ಜ್ಞಾನಿಗಳಿಗೆ ನಿನ್ನ ಹುಬ್ಬು ಹೇಗೆ ತಾನೆ ಮತ್ತೆ ಸಂಸಾರವನ್ನು ಉಂಟುಮಾಡುತ್ತದೆ?

ಹೇ ತತೋ

'ತತ' ತಾತ, ಜಗತ್ಪಿತನೆ! ಅ! ಆನಂದರೂಪನೆ! ಓ! ಉತ್ತಮನಾದ್ದರಿಂದ 'ಉ' ನಾಮಕನೆ,

'ಅ' ಮತ್ತು 'ಉ' ಇವೆರಡು ಸಕಲ ಪಾಪನಿವಾರಕವಾದ ವಿಷ್ಣುನಾಮಗಳು.

ತೇ ಇಮೇ ವಿಬುಧ ನಾಮಗುಣಾಃ ತ್ವಯಿ ನಿಲಿಲ್ಯುಃ

ಈ ದೇವತೆಗಳ ನಾಮಗಳು ಹೇಳುವ ಅವರ 'ಗುಣ' ಗಳು ಮಹಿಮೆಗಳು ಎಲ್ಲವೂ ಮುಖ್ಯವಾಗಿ ನಿನ್ನಲ್ಲಿಯೇ ಇವೆ. ಅವರಲ್ಲಿ ಅವು **ಅಮುಖ್ಯವಾಗಿ** ಇವೆ.

ಮಧುನಿ ಪರಮೇ ಅಮೃತೇ ಅರ್ಣವೇ ಅಶೇಷ ರಸಾ ಇವ

ವಿಷ್ಣುಲೋಕದಲ್ಲಿರುವ ಮಧುರವಾದ ಮಹಾ **ಅಮೃತ** ರಸ

ಸಮುದ್ರದಲ್ಲಿ ಎಲ್ಲ ರಸಗಳೂ ಅಡಗುವಂತೆ ದೇವತೆಗಳ ಮಹಿಮೆಗಳು ಎಲ್ಲವೂ ಮುಖ್ಯವಾಗಿ ನಿನ್ನಲ್ಲೇ ಇವೆ. ಅದರಿಂದಲೆ ಎಲ್ಲ ದೇವತಾನಾಮಗಳೂ ಮುಖ್ಯವಾಗಿ ನಿನ್ನ ನಾಮಗಳೇ ಆಗಿವೆ.

ಅಂಗ, ನೃಷು ಸುಧಿಯಃ ಸ್ವಗತಯಾ ತವ ಮಾಯಯಾ

ಪ್ರಿಯಕರನೆ, ಜೀವಾತ್ಮರಲ್ಲಿ ಜ್ಞಾನಿಗಳಾದವರು ನಿನ್ನ 'ಮಾಯಯಾ' ಅನುಗ್ರಹದಿಂದ ಕೂಡಿರುತ್ತಾರೆ. ಆ ಅನುಗ್ರಹ 'ಸು-ಅಗತಯಾ' ಇತರರಿಗೆ ಕಾಣಿಸದುದು. 'ಅಗತ' ಅನವಗತ, 'ಸು ಅನವಗತ' ಏನೂ ತಿಳಿಯಲಾಗದುದು, ಇತರರಿಗೆ. ಆದರೆ ಅಮೋಘವಾದ ಜೀವೇಶ್ವರ ಭೇದಜ್ಞಾನ ಯೋಗ್ಯರಿಗೆ ಉಂಟಾಗುವುದನ್ನು ಕಂಡಾಗ ಭಗವಂತನ 'ಮಾಯೆ' ಅನುಗ್ರಹ ಅವರಲ್ಲಿರುವುದು ಸ್ಪಷ್ಟವಾಗುತ್ತದೆ.

ಕುಶಲಂ ತ್ವಯಿ ಭೇದಂ ಅನು ಅನುಧಾತುಂ ಪ್ರಭವಃ

ಭಗವಂತನ ಅನುಗ್ರಹವಾಗಿರುವುದರಿಂದ ನಿನ್ನಲ್ಲಿರುವ 'ಕುಶಲಂ' ಮಂಗಳಕರವಾದ ಜೀವಭೇದವನ್ನು 'ಅನು' ಯೋಗ್ಯತಾನುಸಾರ 'ಅನುಧಾತುಂ' ತಿಳಿಯಲು ಜ್ಞಾನಿಗಳು 'ಪ್ರಭು' ಸಮರ್ಥರಾಗುತ್ತಾರೆ.

ತವ ಭ್ರುಕುಟೀ ಅನುವರ್ತಿನಾಂ ನೃಣಾಂ ಮುಹುಃ ಭವಭಯಂ ಕಥಂ ಸೃಜತಿ ?

ಜೀವೇಶ್ವರ ಭೇದವನ್ನು ಭಕ್ತರು ನಿನ್ನ ಅನುಗ್ರಹದಿಂದ ತಿಳಿದರೆಂದರೆ ಮತ್ತೆ ಸಂಸಾರಭಯವಿಲ್ಲ. ನೀನು ಅವರ ಮೇಲೆ ಹುಬ್ಬು ಗಂಟಿಕ್ಕಿ ಭವ ಭಯ ಉಂಟುಮಾಡುವುದಿಲ್ಲ.

'ತತೋ' ಎಂಬಲ್ಲಿ 'ತತ ಅ ಓ' ಸಂಧಿಯಾದಾಗ 'ತತೌ' ಎಂದಾಗಬೇಕಿತ್ತು. ಆದರೆ ವೃದ್ಧಿ ಬಾರದೆ ಪರಸವರ್ಣ ಬಂದಿದೆ. ಛಾಂದಸಪ್ರಯೋಗವಿದು. 'ಮಧುನಿ ನಿಲಿಲ್ಯುಃ' ಎಂಬಲ್ಲಿ 'ನಿನಿ' ಎಂದು ಸಮಾನಾಕ್ಷರಗಳೆರಡು ಬಂದಾಗ ಒಂದು ಲೋಪವಾಗುವುದುಂಟು. 'ಸಮಾನೇ ಲೋಪಃ' ಎಂದು ಸೂತ್ರವಿದೆ. ಆದರಿಂದ 'ಮಧುನಿಲಿಲ್ಯುಃ' ಎಂದಾಗಿದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಶ್ಲೋಕಪಾಠ ಹೀಗಿದೆ—

ತ್ವಯಿ ತ ಇಮೇ ತತೋ ವಿವಿಧನಾಮಗುಣೈಃ ಪರಮೇ
ಸರಿತ ಇವಾರ್ಣವೇ ಮಧುನಿ ಲಿಲ್ಯುರಶೇಷರಸಾಃ ।

ನೃಷು ತವ ಮಾಯಯಾ ಭ್ರಮಮಮೀಷ್ವವಗತ್ಯ ಭೃಶಂ
ತ್ವಯಿ ಸುಧಿಯೋಽಭವೇ ದಧತಿ ಭಾವಮನುಪ್ರಭವಂ ॥
ಕಥಮನುವರ್ತತಾಂ ಭವಭಯಂ ತವ ಯದ್ ಭ್ರುಕುಟಿಃ
ಸೃಜತಿ ಮುಹು ಸ್ತ್ರಿಣೇಮಿರಭವಚ್ಛರಣೇಷು ಭಯಂ ॥

ಇದಕ್ಕೆ ಶ್ರೀಧರವ್ಯಾಖ್ಯಾನದಲ್ಲಿ ನೀಡಿದ ವಿವರಣೆ—

ಜೀವರಿಗೆ ಉಪಾಧಿಗಳಿಂದಲೆ ಉತ್ಪತ್ತಿಯಾದ್ದರಿಂದ ಸುಪ್ತಿ ಪ್ರಳಯ ಮೋಕ್ಷಗಳಲ್ಲಿ ಉಪಾಧಿಗಳೊಂದಿಗೆ ಬ್ರಹ್ಮನಲ್ಲಿ ಲಯ. ಜೇನಿನಲ್ಲಿ ಪುಷ್ಪರಸಗಳು ಬೇರೆಬೇರೆಯಾಗಿ ಕಾಣದಿದ್ದರೂ ಸಾಮಾನ್ಯವಾಗಿ ಕಾಣುವಂತೆ ಲಯಹೊಂದುತ್ತವೆ. ಹಾಗೇ ಸುಪ್ತಿಪ್ರಳಯಗಳಲ್ಲಿ ಕಾರ್ಯೋಪಾಧಿಗಳು ಕಾರ್ಯರೂಪದಿಂದ ಕಾಣದಿದ್ದರೂ ಕಾರಣರೂಪದಿಂದ ಇದ್ದೇ ಇರುವಂತೆ ಕಾರಣೋಪಾಧಿಕ ಬ್ರಹ್ಮನಲ್ಲಿ ಲೀನವಾಗುವುವು. ಮೋಕ್ಷದಲ್ಲಿ ಮಾತ್ರ ಕಾರಣರೂಪದಿಂದಲೂ ಕಾಣದಂತೆ ನಿರುಪಾಧಿಕ ಬ್ರಹ್ಮನಲ್ಲಿ ಲಯಹೊಂದುವುವು, ನದಿಗಳು ಸಮುದ್ರದಲ್ಲಿ ಸೇರಿ ಲೀನವಾಗುವಂತೆ. ಅದರಿಂದ ಜಾಗ್ರತ್ತಿನಲ್ಲಿಯೂ ಸೃಷ್ಟಿಕಾಲದಲ್ಲಿಯೂ ಜೀವರ ಕಾರ್ಯೋಪಾಧಿಗಳು ಆವಿರ್ಭವಿಸುತ್ತವೆ. ಮೋಕ್ಷದಲ್ಲಿ ಲಯಹೊಂದಿದ ಬಳಿಕ ತಿರುಗಿ ಆವಿರ್ಭವಿಸುವುದಿಲ್ಲ. ಜೀವರು ಸಂಸಾರದಲ್ಲಿ ಭ್ರಮಣ ಮಾಡುವುದು ನಿನ್ನ ಮಾಯೆಯಿಂದ ಎಂದು ತಿಳಿದವರು ಸಂಸಾರ ನಿವರ್ತಕನಾದ ನಿನ್ನಲ್ಲಿ ಸೇವೆ ಗೈಯುತ್ತಾರೆ. ಅವರಿಗೆ ಸಂಸಾರ ಭಯವಿಲ್ಲ. ನಿನ್ನನ್ನು ಆಶ್ರಯಿಸದವರಿಗೆ ಮಾತ್ರ ನಿನ್ನ ಭ್ರೂವಿಲಾಸರೂಪವಾದ ಕಾಲಚಕ್ರ ಜನನಮರಣ ಭಯವನ್ನು ಉಂಟುಮಾಡುತ್ತದೆ.

[೧]ಶ್ರೀಧರವ್ಯಾಖ್ಯಾನದಲ್ಲಿ ಜೀವನ ಬ್ರಹ್ಮಲಯಕ್ಕೆ ಪುಷ್ಪರಸಮಧು ದೃಷ್ಟಾಂತ ಮತ್ತು ನದೀಸಮುದ್ರದೃಷ್ಟಾಂತಗಳನ್ನು ಕೊಟ್ಟು, ಅವುಗಳಲ್ಲಿ ವೈಲಕ್ಷಣ್ಯವನ್ನು ತೋರಿಸಲಾಗಿದೆ. ಸುಷುಪ್ತಿ ಪ್ರಳಯಗಳಲ್ಲಿ ಲಯ ಉಂಟಾಗುವುದಕ್ಕೆ ಪುಷ್ಪರಸ

---

೧. ತ್ವಯಿ ಕಾರಣಾತ್ಮನಿ। ತ ಇಮೇ ಜೀವಾಃ। ತತ ಇತಿ। ಯತೋ ನ ವಾಸ್ತವಂ ಜನ್ಮ ತಸ್ಮಾತ್। ವಿವಿಧ ನಾಮಗುಣೈರನೇಕ ಪ್ರಕಾರ ಕಾರ್ಯೋಪಾಧಿಭಿಃ ಸಹ ನಿಲಿಲ್ಯುಃ ಲೀನಾ ಬಭೂವುಃ। ತತ್ರ ಸುಷುಪ್ತಿ ಪ್ರಲಯಯೋಃ ಮಧುನ್ಯಶೇಷರಸಾ ಇವ ಲೀಯಂತೇ। ಯಥಾ ಮಧುನಿ ಸಕಲ ಕುಸುಮ ರಸಾ ವಿಶೇಷತೋಽನುಪಲಕ್ಷ್ಯಮಾಣಾ ಅಪಿ ಸಾಮಾನ್ಯೇನೋಪಲಕ್ಷ್ಯಂತೇ, ಏವಂ ಸ್ವಾಪಾದೌ ವಿಶೇಷಮಾತ್ರಲಯಾತ್ ಕಾರಣಸ್ಯ ವಿದ್ಯಮಾನತ್ವಾತ್ ಸಾಮಾನ್ಯತೋ ವರ್ತಂತೇ ಮುಕ್ತೌ ತು ಕಾರಣಸ್ಯಾಪಿ ಲಯಾತ್ ತ್ವಯಿ ಪರಮೇ ನಿರುಪಾಧೌ ಸರಿತ ಇವಾರ್ಣವೇ ಲೀಯಂತ ಇತಿ ವಿವೇಕಃ। -ಶ್ರೀಧರಃ

ಮಧು ದೃಷ್ಟಾಂತ. ಏಕೆಂದರೆ ಆಗ ಜೀವನ ಕಾರ್ಯೋಪಾಧಿಯಾದ ಅಂತಃಕರಣ ನಾಶವಾದರೂ ಕಾರಣೋಪಾಧಿಯಾದ ಅವಿದ್ಯೆ ಇರುತ್ತದೆ. ಹೀಗಾಗಿ ಬ್ರಹ್ಮಸ್ವರೂಪದಲ್ಲಿ ಅಭೇದರೂಪವಾದ ಲಯ ಉಂಟಾಗುವುದಿಲ್ಲ. ಮೋಕ್ಷದಲ್ಲಿ ಕಾರಣೋಪಾಧಿಗೂ ಲಯ ಉಂಟಾಗುವುದರಿಂದ ಅಭೇದ ಬರುತ್ತದೆ. ಅದಕ್ಕೆ ನದೀಸಮುದ್ರದೃಷ್ಟಾಂತ. ನದಿಗಳೆಲ್ಲವೂ ಸಮುದ್ರದಲ್ಲಿ ಸೇರಿ ಸಮುದ್ರವೇ ಆಗಿ ಬಿಡುತ್ತವೆ, ಅಭೇದವೇ ಬರುತ್ತದೆ ಎಂದು.

[೨]ವೀರರಾಘವ ಶುಕದೇವ ಮುಂತಾದವರು ದೃಷ್ಟಾಂತಗಳಲ್ಲಿ ವೈಲಕ್ಷಣ್ಯವನ್ನು ಒಪ್ಪಿಲ್ಲ. ಪುಷ್ಪರಸಮಧು ದೃಷ್ಟಾಂತದಲ್ಲಿ ಪುಷ್ಪರಸಗಳ ಬೇರೆಬೇರೆ ರುಚಿಗಳು ಜೇನಿನಲ್ಲಿ ಅನುಭವಕ್ಕೆ ಬರುತ್ತವೆ. ಬೇರೆಬೇರೆಯಾಗಿಯೇ ಇವೆ. ಅದರಿಂದಲೆ ಅದು ತ್ರಿದೋಷಹರ ಔಷಧಿಯೆನಿಸಿದೆ. ಅದರಂತೆ ನದೀಸಮುದ್ರ ದೃಷ್ಟಾಂತದಲ್ಲಿಯೂ ನದಿಗಳಿಗೆ ಸಮುದ್ರದ ಅಭೇದ ಬರುವುದಿಲ್ಲ. ಭಾಮತಿಯಲ್ಲಿಯೂ (ಬ್ರ.ಸೂ. ಶಾಂಕರಭಾಷ್ಯ ೧.೪.೨೨) ಇದು ಸ್ಪಷ್ಟವಿದೆ—

ನದೀಪಾಥಃಪರಮಾಣೂನಾಂ ತು ಸಮುದ್ರಪಾಥಃಪರಮಾಣುಭ್ಯೋ ಭೇದ ಏವ, ನಾಭೇದಃ। ಏವಂ ಸಮುದ್ರಾದಪಿ ತೇಷಾಂ ಭೇದ ಏವ।

'ನದೀ ಜಲ ಪರಮಾಣುಗಳಿಗೆ, ಸಮುದ್ರದಲ್ಲಿದ್ದ ಜಲ ಪರಮಾಣುಗಳಿಂದ ಭೇದವೇ ಇರುತ್ತದೆ, ಅಭೇದ ಬರುವುದಿಲ್ಲ. ಸಮುದ್ರಕ್ಕೂ ನದೀ ಜಲ ಪರಮಾಣುಗಳಿಗೂ ಹಾಗೆಯೇ ಭೇದವೇ ಇರುತ್ತದೆ.' ಎಂದು.

ಶ್ರೀಧರವ್ಯಾಖ್ಯಾನದಲ್ಲಿ ಸುಪ್ತಿಪ್ರಳಯಗಳಿಗೆ ಪುಷ್ಪರಸಮಧು ದೃಷ್ಟಾಂತ, ಮೋಕ್ಷಕ್ಕೆ ನದೀಸಮುದ್ರ ದೃಷ್ಟಾಂತವೆಂದು 'ವಿವೇಕ'ವನ್ನು ಹೇಳಿದ್ದೂ ತಿರುವು ಮುರುವಾಗಿದೆ. ಪುಷ್ಪರಸ ಮಧುವಿನಲ್ಲಿ ಸೇರಿದ ಬಳಿಕ ತಿರುಗಿ ಬೇರ್ಪಡಿಸಲಾಗುವುದಿಲ್ಲ. ಅದರಿಂದ ಮೋಕ್ಷಕ್ಕೇ ದೃಷ್ಟಾಂತವಾಗುವುದು ಉಚಿತ. [೩]ವಲ್ಲಭವ್ಯಾಖ್ಯಾನ ಹೇಳುವಂತೆ ನದಿಗಳು ಸಮುದ್ರವನ್ನು ಸೇರಿದ ಬಳಿಕ, ನದಿಯ ಸಿಹಿನೀರು

---

೨. ತ ಇಮೇಽಸುಭೃತಃ ಪರಮೇ ತ್ವಯಿ ನಿಲಿಲ್ಯುಃ ಪ್ರಲಯದಶಾಯಾಂ ನಾಮರೂಪೇ ವಿಹಾಯ ತ್ವಯ್ಯವಿಭಕ್ತತಾಮಾಪುರಿತ್ಯರ್ಥಃ। ಯಥಾ ಸರಿತಃ ಅರ್ಣವೇ, ಯಥಾ ಚ ಮಧುನಿ ಮಾಕ್ಷಿಕೇಽಶೇಷಾ ರಸಾ ಮಕರಂದಾಸ್ತದ್ವತ್। -ವೀರರಾಘವಃ

೩. ಮಧುನಿ ರಸವಿಶೇಷ ವೈಚಿತ್ರ್ಯಸ್ಯ ದೃಶ್ಯಮಾನತ್ವಾತ್। -ಶುಕದೇವ

ಸರ್ವಾಃ ಸರಿತಃ ಅರ್ಣವೇ ಭವಂತಿ। ಅರ್ಣವಾದೇವ ಮೇಘದ್ವಾರಾ ಉತ್ಪದ್ಯಂತೇ। ಅರ್ಣವೇ ಚ ಪ್ರವಿಶಂತಿ। -ವಲ್ಲಭಃ

ಸಮುದ್ರದಿಂದ ಬೇರ್ಪಟ್ಟು, ಮೋಡವಾಗಿ ನೆಲದ ಮೇಲೆ ಸುರಿಯುತ್ತದೆ. ಹರಿದು ನದಿಯಾಗುತ್ತದೆ. ಇದು ಸುಪ್ತಿಪ್ರಳಯಗಳಲ್ಲಿ ಬ್ರಹ್ಮನಲ್ಲಿ ಸೇರಿದ ಕಾರ್ಯೋಪಾಧಿಯಾದ ಅಂತಃಕರಣ ತಿರುಗಿ ಜಾಗರ ಸೃಷ್ಟಿಕಾಲಗಳಲ್ಲಿ ಆವಿರ್ಭವಿಸುವುದಕ್ಕೇ ಉದಾಹರಣೆ ಎನ್ನುವುದು ಉಚಿತವಾಗು ವುದು.

ಹೇ ತತ, ಓ, ತ ಇಮೇ ವಿಬುಧನಾಮಾರ್ಥಭೂತಾ ಗುಣಾಸ್ತ್ವಯಿ ನಿಲಿಲ್ಯುಃ, ಪರಮೇ ಅಮೃತಾರ್ಣವೇ ಮಧುನಿ ಅಶೇಷರಸಾ ಇವ। ಅತಃ ಪೂರ್ಣಗುಣತ್ವಾತ್ ಭವತಃ, ನೃಣಾಂ ಮಧ್ಯೇ ಸುಧಿಯಃ, ತವ ಮಾಯಯಾ ತ್ವದಿಚ್ಛಯೈವ, ತ್ವಯಿ ಕುಶಲಂ ವಿಧಾತುಂ ಪ್ರಭವಃ। ತಚ್ಚ ಕುಶಲಂ ಭೇದ ಏವ। ಸರ್ವಸ್ಮಾದನ್ಯೋ ವಿಶಿಷ್ಟಗುಣಃ ಪರಮ ಇತಿ ದರ್ಶನಂ। ಸ್ವಗತಯಾ ಸುಷ್ಠ್ವನ್ಯೈರನವಗತಯಾ। ತಥಾ ತ್ವತ್ಪ್ರಸಾದಾದನುವರ್ತಿನಾಂ ಕಥಂ ಮುಹುರ್ಭವಭಯಂ ತವ ಭ್ರುಕುಟೀ ಸೃಜತಿ?

ಹೇ ಜನಕನೆ, ಆನಂದರೂಪನೆ ಮತ್ತು ಸರ್ವೋತ್ತಮನೆ! ವೇದಾದಿಗಳಲ್ಲಿ ಹೇಳಿದ ದೇವತಾನಾಮಗಳ ಅರ್ಥವಾದ ಪರಮೈಶ್ವರ್ಯಾದಿ ಗುಣಗಳು ಎಲ್ಲವೂ ನಿನ್ನಲ್ಲಿ, ಮಧುರವಾದ ಅತ್ಯುತ್ತಮವಾದ ಅಮೃತ ಸಮುದ್ರದಲ್ಲಿ ಸಮಸ್ತಪುಷ್ಪರಸಗಳಂತೆ, ಅಡಗಿವೆ. ಹೀಗೆ ನೀನು ಗುಣಪೂರ್ಣನಾಗಿರುವುದರಿಂದ ಮನುಷ್ಯರಲ್ಲಿ ಜ್ಞಾನಿಗಳಾದವರು ನಿನ್ನ ಮಾಯೆಯಿಂದ ಅಂದರೆ ಇಚ್ಛೆಯಿಂದಲೆ ನಿನ್ನ ವಿಷಯದಲ್ಲಿ ಸತ್ಕರ್ಮಮಾಡಲು ಸಮರ್ಥರಾಗುತ್ತಾರೆ. ಆ ಸತ್ಕರ್ಮ ಏನೆಂದರೆ ಮುಖ್ಯವಾಗಿ ಭೇದವೆ, ಅಂದರೆ, ನಿನ್ನಲ್ಲಿರುವ ಸರ್ವವೈಲಕ್ಷಣ್ಯವನ್ನು ತಿಳಿದು ನಿನ್ನ ಪೂಜೆಗಾಗಿ ಮಾಡುವ ಸತ್ಕರ್ಮ. ಸರ್ವವಿಲಕ್ಷಣನಾಗಿದ್ದು ಉತ್ತಮಗುಣಉಳ್ಳವನು ಸರ್ವೋತ್ತಮ ಎಂದು ತಿಳಿಯುವುದೇ ಭೇದಜ್ಞಾನ. 'ಸ್ವಗತ' ಎಂದರೆ 'ಸು' ಅಗತ, ಅನವಗತ, ಬೇರೆಯವರಿಂದ ಚೆನ್ನಾಗಿ ತಿಳಿಯಲಾಗದಂಥ ಭಗವದಿಚ್ಛೆ. ನಿನ್ನ ಇಚ್ಛೆಯಿಂದಲೇ ಹೇಗೆ ಭೇದಜ್ಞಾನವನ್ನು ಹೊಂದುವರೋ ಹಾಗೆಯೇ ನಿನ್ನ ಅನುಗ್ರಹದಿಂದಲೇ ಜ್ಞಾನಿಗಳು ನಿನ್ನ ಆರಾಧನೆ ಮಾಡುತ್ತಾರೆ. ಅಂಥ ಜ್ಞಾನಿಗಳಿಗೆ ನಿನ್ನ ಹುಬ್ಬು ಹೇಗೆ ಮತ್ತೆ ಸಂಸಾರಭಯವನ್ನು ಉಂಟುಮಾಡುತ್ತದೆ? ಎಂದರ್ಥ.

ಯೋ ನಃ ಪಿತಾ ಜನಿತಾ ಯೋ ವಿಧಾತಾ
ಧಾಮಾನಿ ವೇದ ಭುವನಾನಿ ವಿಶ್ವಾ ।
ಯೋ ದೇವಾನಾಂ ನಾಮಧಾ ಏಕ ಏವ
ತಂ ಸಂಪ್ರಶ್ನಂ ಭುವನಾ ಯಂತ್ಯನ್ಯಾ ।

ತ ಆಽಯಜಂತ ದ್ರವಿಣಂ ಸಮಸ್ಮಾ
ಋಷಯಃ ಪೂರ್ವೇ ಜರಿತಾರೋ ನ ಭೂನಾ ।
ಅಸೂರ್ತೇ ಸೂರ್ತೇ ರಜಸಿ ನಿಷತ್ತೇ
ಯೇ ಭೂತಾನಿ ಸಮಕೃಣ್ವನ್ನಿಮಾನಿ ॥ ಇತ್ಯಾದಿ ಶ್ರುತಿಃ ॥

'ಯಾರು ನಮಗೆ 'ಜನಿತಾ ಪಿತಾ' ಜನ್ಮ ಕೊಟ್ಟ ತಂದೆಯೂ 'ವಿಧಾತಾ' ಪೋಷಕನೂ ಆಗಿರುವನೋ ಯಾರು ನಮಗೆ ಎಲ್ಲ ಲೋಕಗಳನ್ನೂ ಅವುಗಳಲ್ಲಿ ವಾಸಸ್ಥಾನಗಳನ್ನೂ ನೀಡುವನೋ ಯಾರು ಒಬ್ಬನೆ ಎಲ್ಲ ದೇವತೆಗಳ ನಾಮಗಳಿಗೆ ಪರಮಮುಖ್ಯವಾಚ್ಯನೋ 'ಸಂಪ್ರಶ್ನಂ' ವಿಚಾರಗಮ್ಯನಾದ ಆ ಪರಮಾತ್ಮನನ್ನು 'ಯಂತಿ' ತಿಳಿಯುತ್ತಾರೆ, ಆದರಿಂದ ಮುಕ್ತರಾಗಿ 'ಅನ್ಯಾ ಭುವನಾ' ಬೇರೆಬೇರೆ ಮುಕ್ತಿಲೋಕಗಳನ್ನು 'ಯಂತಿ' ಹೊಂದುತ್ತಾರೆ.'

'ಸೂರ್ತೇ' ಸುರಯುತಿ, 'ಸುರಾ ಹರೇರ್ಗುಣಾಃ ಪ್ರೋಕ್ತಾಃ' ಎಂಬಂತೆ ಸುರ ಎಂದರೆ ಹರಿಯ ಗುಣಗಳು. ಅವುಗಳನ್ನು ತಿಳಿಸಿಕೊಡುವುದು ಸುರ್ತ, ಸೂರ್ತ, ಪೃಷೋದರಾದಿಯಾದ್ದರಿಂದ ದೀರ್ಘ. ಪರಮಾತ್ಮ ತತ್ವಜ್ಞಾನವನ್ನು ನೀಡುವ ಸತ್ವಗುಣವಿರಲು, 'ಅಸೂರ್ತೇ' ಅದಕ್ಕೆ ವಿರುದ್ಧವಾದ ತಮೋಗುಣವಿರಲು ಮತ್ತು 'ರಜಸಿ' ರಜೋಗುಣವು 'ನಿಷತ್ತೇ' ನಿಷಣ್ಣೇ ಸೃಷ್ಟಿಗೆ ಪೂರ್ವದಲ್ಲಿ 'ಇರಲು', ಸೃಷ್ಟಿಗೆ ಉನ್ಮುಖವಾಗಿರಲು ಪೂರ್ವಿಕರಾದ ಋಷಿಗಳು ಬ್ರಹ್ಮಾದಿಗಳು ಈ ಪ್ರಾಣಿಗಳನ್ನು 'ಸಮಕೃಣ್ವನ್' ಸೃಷ್ಟಿ ಮಾಡಿದರು. ಅವರು 'ಜರಿತಾರಃ' ಪರಮಾತ್ಮನನ್ನು ಸ್ತುತಿಸುವವರು. ಆದರೆ 'ಜರಿತಾರೋ ನ' ತಾವೇ ಸ್ವತಂತ್ರವಾಗಿ ಸ್ತುತಿಸುವವರಲ್ಲ, 'ಭೂನಾ ಜರಿತಾರಃ' ಪೂರ್ಣನಾದ ಹರಿಯ ಅನುಗ್ರಹದಿಂದ ಸ್ತುತಿಸುವವರು. ಅವರು ಪರಮಾತ್ಮನಿಗೆ ಅವನ ಅನುಗ್ರಹದಿಂದಲೆ ತಾವು ಸೃಷ್ಟಿ ಮಾಡಿದ 'ದ್ರವಿಣಂ' ಸಂಪತ್ತನ್ನು 'ಆ ಸಮಯಜಂತ' ಸಮರ್ಪಿಸಿ ಆರಾಧಿಸಿದರು. ಆದರಿಂದ 'ಜರಿತಾರೋ ನ'

ಜರಾಮರಣರಹಿತರಾಗುತ್ತಾರೆ.' ಎಂದು ಮುಂತಾಗಿ ಶ್ರುತಿಗಳು ಇದನ್ನೇ ಹೇಳುತ್ತಿವೆ.

ಬ್ರಹ್ಮೇಶೇಂದ್ರಾದಿಸನ್ನಾಮ್ನಾಂ ಯೇಽರ್ಥಭೂತಾ ಗುಣಾ ಮತಾಃ
ಪೂರ್ತೀಶಿತೃತ್ವ ದ್ರಷ್ಟೃತ್ವ ಪ್ರಮುಖಾಸ್ತೇ ಹರೇಃ ಸದಾ
ಅತಸ್ತು ಸರ್ವನಾಮಾಽಸೌ ಸರ್ವಕರ್ತಾ ಚ ಕೇಶವಃ ॥

ಇತಿ ಪಾದ್ಮೇ ।

ಆನಂದತ್ವಾದನಾಮಾಽಸಾವುತ್ಕೃಷ್ಟತ್ವಾದುನಾಮಕಃ ।
ಏತನ್ನಾಮದ್ವಯಂ ವಿಷ್ಣೋ ಜ್ಞಾತ್ವಾ ಪಾಪೈಃ ಪ್ರಮುಚ್ಯತೇ ॥

ಇತಿ ಸ್ಕಾಂದೇ ।

'ಬ್ರಹ್ಮ ಈಶ ಇಂದ್ರ ಮುಂತಾದ ನಾಮಗಳ ಪರಮಮುಖ್ಯ ಅರ್ಥಗಳಾದ ಗುಣಪೂರ್ತಿ, ಸರ್ವನಿಯಾಮಕತ್ವ ಸರ್ವಜ್ಞತ್ವ ಮುಂತಾದ ಗುಣಗಳು ಹರಿಯಲ್ಲಿಯೇ ಸದಾ ಇರುವುದರಿಂದ ಅವನೇ ಸರ್ವನಾಮ, ಸರ್ವಕರ್ತ' ಎಂದು ಪದ್ಮಪುರಾಣ ಹೇಳಿದೆ.

'ವಿಷ್ಣು ಆನಂದಸ್ವರೂಪ ನಾದ್ದರಿಂದ ಅ ಎಂದೂ ಸರ್ವೋತ್ತಮನಾದ್ದರಿಂದ ಉ ಎಂದೂ ನಾಮಗಳುಳ್ಳವನು. ವಿಷ್ಣುವಿನ ಈ ಎರಡು ನಾಮಗಳನ್ನು ತಿಳಿದರೆ ಎಲ್ಲ ಪಾಪಗಳಿಂದ ಮುಕ್ತನಾಗುತ್ತಾನೆ' ಎಂದು ಸ್ಕಾಂದ ಪುರಾಣದಲ್ಲಿದೆ.

ಅನ್ಯಾವಿಜ್ಞಾತಯಾ ವಿಷ್ಣೋಃ ಶಕ್ತ್ಯೈವ ಕುಶಲಂ ಜನಾಃ ।
ಕುರ್ವಂತಿ ಕುಶಲೇ ತೂಚ್ಚಂ ಭೇದದರ್ಶನಮೇವ ತು ।
ಪೂರ್ಣಾನಂದಾದಿಸಂಪತ್ತಿಂ ವಿಷ್ಣೋರ್ಜ್ಞಾತ್ವೇತರೇಷು ಚ ।
ತದಪೇಕ್ಷ್ಯ ವಿಪ್ಲುಣ್ಮಾತ್ರತ್ವಜ್ಞಾನಂ ತದ್ ಭೇದದರ್ಶನಂ
ಅನಾದ್ಯನಂತ ಭೇದೋಽಯಂ ಸ್ವಭಾವಃ ಪರಜೀವಯೋಃ
ಸ್ವತೋ ವಾ ಪರತೋ ವಾಪಿ ನ ಕದಾಚಿತ್ ಪ್ರಣಶ್ಯತಿ ।
ಏವಂ ಜ್ಞಾನವತಾಂ ವಿಷ್ಣುರ್ಬಹುಜನ್ಮ ನ ದಾಸ್ಯತಿ
ಅನುವೃತ್ತಿರ್ಯದ್ಯನಲ್ಪಾ ಸ ಹಿ ಸರ್ವೇಶ್ವರಃ ಪ್ರಭುಃ ॥

ಇತಿ ಪ್ರಮಾಣ **ಸಂಹಿತಾಯಾಂ** ॥

'ಅನ್ಯರಿಗೆ ತಿಳಿಯಲಾಗದ ವಿಷ್ಣುವಿನ ಶಕ್ತಿಯಿಂದಲೇ ಜನರು ಸತ್ಕರ್ಮ ಮಾಡುತ್ತಾರೆ. ಸತ್ಕರ್ಮಗಳಲ್ಲಿ ಶ್ರೇಷ್ಠವಾದುದು ಭೇದ ದರ್ಶನವೆ. ವಿಷ್ಣುವಿನಲ್ಲಿ ಪೂರ್ಣಾನಂದಾದಿ ಗುಣಸಂಪತ್ತನ್ನು ತಿಳಿದು, ಅನ್ಯರಲ್ಲಿ, ಅವನಿಗೆ ಹೋಲಿಸಿದರೆ, ಬಿಂದುಮಾತ್ರ ಗುಣಸಂಪತ್ತು ಇರುತ್ತದೆ ಎಂದು ತಿಳಿಯುವುದೇ ಭೇದದರ್ಶನವೆನಿಸುತ್ತದೆ. ಈ ಭೇದ ಅನಾದಿ, ನಿತ್ಯ. ಪರಮಾತ್ಮಜೀವರಲ್ಲಿ ಸ್ವಭಾವಭೂತವಾಗಿದೆ. ತನ್ನಿಂದಾಗಲಿ ಪರರಿಂದಾಗಲಿ ಅದು ಎಂದೂ ನಶಿಸುವುದಿಲ್ಲ. ಹೀಗೆ ತಿಳಿದಿರುವವರು ಪರಮಾತ್ಮನನ್ನು ಬಹಳವಾಗಿ ಆರಾಧನೆ ಮಾಡಿದರೆ ಅವನು ಅವರಿಗೆ ಬಹುಜನ್ಮಗಳನ್ನು ಕೊಡುವುದಿಲ್ಲ' ಎಂದು ಪ್ರಮಾಣಸಂಹಿತೆಯಲ್ಲಿ ಇದೆ.

ಯಃ ಪಿತಾ ಜನಿತಾ ಚೈವ ಕಲ್ಪಕೋ ನಿತ್ಯಪೋಷಕಃ
ಪ್ರಾಪಕಃ ಸರ್ವದೇವಾನಾಂ ಪದಾನಾಂ ಪುರುಷೋತ್ತಮಃ
ಸರ್ವದೇವಾಭಿಧಾವಾಚ್ಯೋ ಭೂತಭವ್ಯಭವತ್ಪ್ರಭುಃ
ವಿಚಾರ್ಯ ಸರ್ವವೇದೈಶ್ಚ ಬ್ರಹ್ಮಾದ್ಯಾಶ್ಚ ಯಜಂತಿ ಚ ।
ತ್ರಿಗುಣಾತ್ಮಕಸ್ಯ ಸ್ರಷ್ಟಾರಸ್ತಥಾಪಿ ನ ಯಜಂತಿ ತಂ
ಯತಃ ಪೂರ್ಣೇಶ ಶಕ್ತ್ಯೈವ ತೇಷಾಂ ಯಜನಮಿಷ್ಯತೇ
ಅತಃ ಸರ್ವೇಶ್ವರೋ ವಿಷ್ಣುರೇಕ ಏವ ಮಹಾಗುಣಃ

ಇತಿ ಮಹಾಸಂಹಿತಾಯಾಂ ॥

'ಯಾರು ನಮಗೆ ಎಲ್ಲರಿಗೂ ಜನ್ಮಕೊಟ್ಟ ತಂದೆ, ಸ್ಥಾನಗಳನ್ನು ಕಲ್ಪಿಸಿಕೊಟ್ಟು ಸಾಕುವವನು, ಎಲ್ಲ ದೇವತೆಗಳಿಗೂ ಪದವಿಗಳನ್ನು ಕೊಡುವವನು, ಸರ್ವದೇವತಾ ನಾಮವಾಚ್ಯನು, ತ್ರಿಕಾಲಪ್ರಭುವಾಗಿರುವನೋ ಆ ವಿಷ್ಣುವನ್ನು ಸಕಲವೇದಗಳಲ್ಲಿ ಮನನ ಮಾಡಿ, ತ್ರಿಗುಣಾತ್ಮಕ ಪ್ರಪಂಚವನ್ನು ಸೃಷ್ಟಿಮಾಡುವ ಮೂಲಕ ಬ್ರಹ್ಮಾದಿ ದೇವತೆಗಳು ಪೂಜಿಸುತ್ತಾರೆ. ಆದರೂ ಪೂಜಿಸುವುದಿಲ್ಲ ಎನ್ನಲೂಬಹುದು. ಏಕೆಂದರೆ ಸರ್ವಶಕ್ತನಾದ ಅವನ ಶಕ್ತಿಯಿಂದಲೇ ಅವರು ಪೂಜಿಸಬಲ್ಲರು ಹೊರತು ತಮ್ಮ ಶಕ್ತಿಯಿಂದಲೇ ಅಲ್ಲ. ಅದರಿಂದ ಗುಣಪೂರ್ಣನಾದ ವಿಷ್ಣು ಒಬ್ಬನೆ ಸರ್ವೇಶ್ವರ' ಎಂದು ಮಹಾಸಂಹಿತೆಯಲ್ಲಿ ಹೇಳಿದೆ.

❖ ❖ ❖

ಶ್ರುತಿಗೀತೆಯಲ್ಲಿ ಇಪ್ಪತ್ತನೆ ಮತ್ತು ಇಪ್ಪತ್ತೊಂದನೆ ಶ್ಲೋಕಗಳು.

ಇಹ ಭವಚ್ಚರಣೇಷು ಸುಜಾತಭುವೋ
ಜಿತಹೃಷೀಕವಾಯುಭಿರುದಾತ್ತಮಹತ್ತುರಗೈಃ ।
ಯ ಇಹ ಯತಂತ್ಯಮತಿಲೋಲಮುಪಾಯವಿದೋ
ವ್ಯಸನಶತಾಬ್ಧಿತಾರಮಪಹಾಯ ಗುರೋಶ್ಚರಣಮ್ ॥ ೩೪ ॥
ವಣಿಜ ಇವೋಽಚ್ಛ ಸ್ವಸಂತ್ಯಕೃತಕರ್ಣಧರಾ ಜಲಧೌ
ಸ್ವಜನಸುತಾತ್ಮದಾರಧನಧಾಮಧರಾಃ ।
ಸುಖಶಾಂತಿಮತ್ತ್ವಯಿ ಹಿ ಸಂತಿ ನ ತಾನಿ ನೃಣಾಂ
ವಿಭವ ಉದ್ಯತಿ ಶ್ರಯತ ಆತ್ಮನಿ ಸರ್ವರಸೇ ॥ ೩೫ ॥

ನಿನ್ನ ಚರಣಗಳಲ್ಲಿ ಸ್ಥಾನ ದೊರಕಿಸಿಕೊಳ್ಳಬಲ್ಲ ಯೋಗ್ಯತೆ ಉಳ್ಳ ದೇವತೆಗಳು ಪ್ರಾಣಾಯಾಮ ಇಂದ್ರಿಯನಿಗ್ರಹ ಮನೋನಿಗ್ರಹ ಯುಕ್ತರಾಗಿ ಮೋಕ್ಷಸಾಧನೆಗೆ ಯತ್ನಿಸುತ್ತಾರೆ. ಆದರೆ ಅವರೂ ಕೂಡ ಒಂದು ವೇಳೆ ಸಂಸಾರಸಾಗರದಲ್ಲಿ ಬಂದೊದಗುವ ನೂರಾರು ದುಃಖಗಳ ಸಾಗರದಿಂದ ಪಾರುಮಾಡಬಲ್ಲ ಗುರುವಿನ ಚರಣಸೇವೆಯನ್ನು ಬಿಟ್ಟು ಯತ್ನ ಮಾಡಿದರೆ, 'ಸ್ವಜನ ಸುತ ಶರೀರ ಪತ್ನಿ ಧನಗೃಹ ಯುಕ್ತರಾಗಿ ಸಾಗರದಲ್ಲಿ ಕಪ್ತಾನನಿಲ್ಲದ ಹಡಗಿನಲ್ಲಿ ಪಯಣಿಸುವ ವರ್ತಕರಂತೆ ನಿಟ್ಟುಸಿರು ಬಿಡಬೇಕಾಗುತ್ತದೆ. ಏಕೆಂದರೆ ನಿರ್ದೋಷ ಸುಖಪೂರ್ಣನಾದ ನೀನು ಅವರ ಸಾಧನೆಗಳನ್ನು ಸ್ವೀಕರಿಸುವುದಿಲ್ಲ, ಜೀವನ್ಮುಕ್ತನಾದ ಒಬ್ಬ ನಿಯತ ಗುರು ದೊರೆತಾಗಲೇ ಅವರ ಎಲ್ಲ ಸಾಧನವೂ ಸರ್ವೋತ್ತಮ ಪರಮಾತ್ಮನಾದ ನಿನ್ನಿಂದ ಸ್ವೀಕೃತವಾಗುತ್ತದೆ.

ಇಹ ಭವಚ್ಚರಣೇಷು ಸುಜಾತ ಭುವಃ

ತಮ್ಮ ಉತ್ಪತ್ತಿ ಸ್ಥಾನವಾದ ಈ ನಿನ್ನ ಪಾದ ಮುಂತಾದ ಅವಯವಗಳಲ್ಲಿ ಸ್ಥಾನ ದೊರಕಿಸಿಕೊಳ್ಳಬಲ್ಲ ಯೋಗ್ಯತೆ ಇರುವವರು **ತತ್ವಾ**ಭಿಮಾನಿಗಳಾದ ದೇವತೆಗಳು. ಅವರಿಗೆ ಆ ಅವಯವಗಳಲ್ಲಿ **ಸಾಯುಜ್ಯ** ನಿಶ್ಚಿತವೆ.

ಜಿತಹೃಷೀಕ ವಾಯುಭಿಃ ಉದಾತ್ತ ಮಹತ್ತುರಗೈಃ

ಶರೀರವೆಂಬ ರಥದ ಸಾರಥಿಯಂತಿರುವ ಪ್ರಾಣವಾಯುಗಳನ್ನೂ **ಪ್ರಾಣಾಯಾಮದಿಂದ** ಗೆದ್ದಿರುತ್ತಾರೆ. ಉತ್ತಮವಾದ **ದೊಡ್ಡ** ಕುದುರೆ

ಗಳಂಥ ಇಂದ್ರಿಯಗಳನ್ನೂ **ಪ್ರತ್ಯಾಹಾರದಿಂದ** ಗೆದ್ದಿರುತ್ತಾರೆ. ಶರೀರ ರಥದಲ್ಲಿ ಕುಳಿತು **ಮುಕ್ತಿಲೋಕದೆಡೆಗೆ** ಪ್ರಯಾಣ ಮಾಡುತ್ತಾರೆ.

ಅಮತಿಲೋಲಂ

ಮನೋನಿಗ್ರಹವನ್ನೂ ಮಾಡಿಕೊಂಡು ಚಿತ್ತ ಚಾಂಚಲ್ಯವನ್ನು **ದೂರಮಾಡಿಕೊಂಡಿರುತ್ತಾರೆ**. ಆದರೇನು?

ಇಹ ವ್ಯಸನಶತಾಬ್ಧಿತಾರಂ ಗುರೋಶ್ಚರಣಮಪಹಾಯ ಯತಂತಿ

'ಇಹ' ಸಂಸಾರದಲ್ಲಿ ಬಂದೊದಗುವ ನೂರಾರು ವ್ಯಸನ **ಸಮುದ್ರದಿಂದ ದಾಟಿಸಬಲ್ಲ** ನಿಯತಗುರುವಿನ ಚರಣಸೇವೆಯನ್ನು ಬಿಟ್ಟು **ಯತ್ನಿಸಿದರೆ**....

ಸ್ವಜನ ಸುತಾತ್ಮದಾರಧನ ಧಾಮಧರಾಃ

ಬಂಧುಜನ ಮಕ್ಕಳು ತಮ್ಮ ಶರೀರ ಹೆಂಡಂದಿರು ಧನಸಂಪತ್ತು ಮನೆಮಠಗಳನ್ನು ನೋಡಿಕೊಳ್ಳುತ್ತಲೇ...

ಉಪಾಯವಿದಃ

ಸ್ವಜನ ಮುಂತಾದವರ ರಕ್ಷಣೋಪಾಯ ಬಲ್ಲವರಾಗಿದ್ದೇ....

ಜಲಧೌ ಅಕೃತಕರ್ಣಧರಾಃ ವಣಿಜ ಇವ ಇಹ ಉಚ್ಛ್ವಸಂತಿ

ಸಾಗರದಲ್ಲಿ ಕಪ್ತಾನನಿಲ್ಲದ ಹಡಗಿನಲ್ಲಿ ಪಯಣಿಸುವ ವರ್ತಕರಂತೆ **ಮೋಕ್ಷ ಮಾರ್ಗದಲ್ಲಿ** ಮುನ್ನಡೆಯಲಾರದೆ ನಿಟ್ಟುಸಿರು ಬಿಡಬೇಕಾಗುತ್ತದೆ. **ಏಕೆಂದರೆ-**

ನೃಣಾಂ ತಾನಿ ಸುಖಶಾಂತಿಮುತ್ತ್ವಯಿ ನಹಿ ಸಂತಿ

ದೇವತಾ ಪುರುಷರ ಆ ಸಾಧನೆಗಳು ನಿರ್ದುಷ್ಟ ಸುಖಪೂರ್ಣನಾದ ನಿನ್ನಲ್ಲಿ ಬಂದು **ಸೇರಿರುವುದಿಲ್ಲ**. ನೀನು ಅವನ್ನು ಸ್ವೀಕರಿಸಿರುವುದಿಲ್ಲ.

ವಿಭವೇ ಉದ್ಯತಿ **ಸರ್ವರಸೇ ಆತ್ಮನಿ ಶ್ರಯತೇ**

'ವಿ-ಭವ' **ಸಂಸಾರರಹಿತ ಜೀವನ್ಮುಕ್ತ**ನಾದ ಗುರು ಉದಿಸಿದಾಗಲೆ, ಅವನ ಚರಣಸೇವೆ **ಮಾಡಿದಾಗಲೇ** ಮೋಕ್ಷಸಾಧನೆ ಎಲ್ಲವೂ 'ಸರ್ವರಸ' ಸರ್ವೋತ್ತಮನಾದ **'ಆತ್ಮನಿ** ಸರ್ವಶಕ್ತನಾದ ಪರಮಾತ್ಮನಲ್ಲಿ 'ಶ್ರಯತೇ' ಹೋಗಿ ಸೇರುತ್ತದೆ. ಅಂದರೆ **ಅದನ್ನು** ನೀನು ಸ್ವೀಕರಿಸುವಿ. ಅದರಿಂದ ನೀನು 'ಗುರುದ್ವಾರಾ ಪ್ರಸಾದ**ಕೃತ್**'

'ಆತ್ಮ' ಪೂರ್ಣಶಕ್ತಿಉಳ್ಳವನು ನೀನು. ಅದರಿಂದ ಗುರ್ವನುಗ್ರಹ ವಿಲ್ಲದ ಸಾಧನಗಳನ್ನು ಕೂಡ ಮೋಕ್ಷಸಾಧನೆಗಾಗಿ ಸ್ವೀಕರಿಸಬಲ್ಲೆ. ಆದರೆ 'ಸುಖಶಾಂತಿಮಾನ್' ನಿರ್ದೋಷಸುಖಪೂರ್ಣನಾದ್ದರಿಂದ ಆ ಸಾಧನಗಳಿಂದ ನಿನಗೆ ಸಂತೋಷವಾಗಬೇಕಾಗಿಲ್ಲ. ಗುರು ಸಹಾಯದ ಅಪೇಕ್ಷೆಯೂ ಇಲ್ಲ. ನಿನ್ನಿಚ್ಛೆಯಂತೆ ಗುರ್ವನುಗ್ರಹರಹಿತ ಸಾಧನೆಗಳನ್ನು ನೀನು ನಿರಾಕರಿಸುವಿ. ಗುರ್ವನುಗ್ರಹ ಪೂರ್ವಕ ಸಾಧನೆಗಳನ್ನೇ ಸ್ವೀಕರಿಸುವಿ. ಇದು 'ಶಿಷ್ಯಾದಷ್ಟಗುಣಂ ಗುರೋಃ' ಎಂಬಂತೆ ಗುರುವಿಗೂ ಹೆಚ್ಚಿನ ಸಾಧನೆಯಾಗಲಿ ಎಂಬ ಉದ್ದೇಶದಿಂದ.

'ಗುರುಸೇವೆ ಇಲ್ಲದ ಇಂದ್ರಿಯಜಯಾದಿ ಸಾಧನೆಯನ್ನು ಶ್ರೀಹರಿ ಸ್ವೀಕರಿಸುವುದೇ ಇಲ್ಲ ಅನುಗ್ರಹ ಮಾಡುವುದೇ ಇಲ್ಲ' ಎಂದು ಭಾಗವತದ ಅಭಿಪ್ರಾಯವಲ್ಲ. ಸ್ವೀಕರಿಸುತ್ತಾನೆ, ಅಲ್ಪ ಅನುಗ್ರಹ ಮಾಡುತ್ತಾನೆ, ಪೂರ್ಣಾನುಗ್ರಹ ಮಾಡುವುದಿಲ್ಲ. ಮೋಕ್ಷ ಕೊಡುವುದಿಲ್ಲ. ಗುರುಸೇವೆ ಪ್ರಧಾನಸಾಧನವಾದ್ದರಿಂದ ಗುರುಸೇವೆಯೊಂದಿಗೆ ಇಂದ್ರಿಯಜಯಾದಿ ಸಾಧನಗಳಿದ್ದರೆ ಮಾತ್ರ ಹರಿ ಸ್ವೀಕರಿಸಿ ಪೂರ್ಣಾನುಗ್ರಹ ಮಾಡುತ್ತಾನೆ, ಮೋಕ್ಷ ನೀಡುತ್ತಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಶ್ಲೋಕಪಾಠ ಹೀಗಿದೆ—

ವಿಜಿತಹೃಷೀಕವಾಯುಭಿರದಾಂತಮನಸ್ತುರಗಂ
ಯ ಇಹ ಯತಂತಿ ಯಂತುಮತಿಲೋಲಮುಪಾಯಖಿದಃ
ವ್ಯಸನ ಶತಾನ್ವಿತಾಃ ಸಮವಹಾಯ ಗುರೋಶ್ಚರಣಂ
ವಣಿಜ ಇವಾಜ ಸಂತ್ಯಕ್ತ ಕರ್ಣಧರಾ ಜಲಧೌ
ಸ್ವಜನಸುತಾತ್ಮದಾರಧನಧಾಮಧರಾಸುರಥೈ
ಸ್ತ್ವಯಿ ಸತಿ ಕಿಂ ನೃಣಾಂ ಶ್ರಯತ ಆತ್ಮನಿ ಸರ್ವರಸೇ ॥

ಇಂದ್ರಿಯನಿಗ್ರಹ ಮತ್ತು ಪ್ರಾಣಾಯಾಮಗಳಿಂದಲೂ ನಿಗ್ರಹಿಸಲಾಗದುದು ಮನಸ್ಸೆಂಬ ಕುದುರೆ. ಬಹಳ ಚಂಚಲ. ಗುರುಚರಣವನ್ನು ಆಶ್ರಯಿಸದೆ ಅಂಥ ಮನಸ್ಸನ್ನು ನಿಗ್ರಹಿಸಲು ಯತ್ನಿಸುವವರು ತಮ್ಮ ಪ್ರಯತ್ನದಲ್ಲಿ ಸೋತು ನೂರಾರು ದುಃಖಗಳಿಂದ ಆಕುಲರಾಗಿ ಸಂಸಾರ ಸಮುದ್ರದಲ್ಲಿ ಬಿದ್ದಿರುತ್ತಾರೆ, ನಾವಿಕನಿಲ್ಲದ ಹಡಗಿನಲ್ಲಿ ಪ್ರಯಾಣ ಮಾಡುವ ವರ್ತಕರಂತೆ. ಬಂಧುಪುತ್ರರು ಶರೀರ ಸಂಪತ್ತು ಮನೆ ಭೂಮಿ ಪ್ರಾಣಗಳು ರಥಗಳಿದ್ದೇನು? ಪರಮಾನಂದ ಉಳ್ಳ ನಿನ್ನನ್ನು ಆಶ್ರಯಿಸಿದ ಬಳಿಕ ಅವುಗಳಿಂದೇನಾಗಬೇಕಾಗಿಲ್ಲ.

ಇವರ ಈ ಪಾಠದಲ್ಲಿ ಮೂರನೇ ಸಾಲು–

'ಯ ಇಹ ಯತಂತಿ ಯಂತುಮತಿಲೋಲಂ'

'ಅತ್ಯಂತ ಚಂಚಲವಾದ ಮನಸ್ಸನ್ನು ನಿಗ್ರಹಿಸಲು ಯತ್ನಿಸುತ್ತಾರೆ ಆದರೆ ಗುರ್ವನುಗ್ರಹವಿಲ್ಲದೆ ಮನೋನಿಗ್ರಹ ಸಾಧ್ಯವಿಲ್ಲ' ಎಂದಿದೆ. ನಮ್ಮ ಪಾಠದಲ್ಲಿ—

'ಯ ಇಹ ಯತಂತ್ಯಮತಿಲೋಲಂ'

'ಚಿತ್ತಚಾಂಚಲ್ಯವನ್ನು ಬಿಟ್ಟು ಮೋಕ್ಷಕ್ಕೆ ಯತ್ನಿಸುವವರಿಗೂ ಕೂಡ ಗುರುವಿನ ಅನುಗ್ರಹವಿಲ್ಲದೆ ಯತ್ನ ಕೈಗೂಡುವುದಿಲ್ಲ' ಎಂದಿದೆ. ಗುರುವಿನ ಅನುಗ್ರಹವಿಲ್ಲದ ದೈವಾನುಗ್ರಹವಿಲ್ಲ, ಅದಿದ್ದರೆ ಮಾತ್ರ ಯತ್ನ ಸಫಲವಾಗುವುದು. ದೈವಾನುಗ್ರಹ ಏಕೆ ಇಲ್ಲ ಎಂದರೆ,

'ಗುರೋರನುಗ್ರಹಮೃತೇ ಸಾಧನಂ ನ ಹರೇಃ ಪ್ರಿಯಂ'

ಗುರುವಿನ ಅನುಗ್ರಹವಿಲ್ಲದೆ ಪರಮಾತ್ಮನನ್ನು ಭಜಿಸಿದರೆ ಅದು ಪರಮಾತ್ಮನಿಗೆ ~~ಇಷ್ಟವಾಗುವುದಿಲ್ಲ ಎಂದು ಗುರುವಿವೇಕ ಎಂಬ ಗ್ರಂಥದಲ್ಲಿ ಹೇಳಿದೆ. ನಮ್ಮ~~ ಪಾಠದಲ್ಲಿ ಶ್ರುತಿಗೀತೆ ಅದನ್ನು ಹೇಳುತ್ತದೆ–

'ತ್ವಯಿ ಹಿ ಸಂತಿ ನ ತಾನಿ ನೃಣಾಂ'

'ಗುರ್ವನುಗ್ರಹವಿಲ್ಲದವನ ಪೂಜೆಯನ್ನು ಹರಿ ಒಲ್ಲನೆಂ'ದು. ಇಂಥ ಅಪೂರ್ವವಾದ ಅವಶ್ಯ ತಿಳಿಯಬೇಕಾದ ಪ್ರಮೇಯ ಬೇರೆ ವ್ಯಾಖ್ಯಾನಕಾರರ ಪಾಠದಲ್ಲಿ ಸಿಗುವುದಿಲ್ಲ

ಭವಚ್ಚರಣೇಷು ಸುಜಾತಸ್ಥಾನಾಃ ಉತ್ತಮಯೋಗ್ಯತಾಯುಕ್ತಾಃ ।
ಹೃಷೀಕಾಣ್ಯೇವ ಮಹತ್ತುರಗಾಃ । ವಾಯುರೇವೋದಾತ್ತಃ ।
ರಥೋಪರಿಸ್ವೀಕರಣಾದುದಾತ್ತಃ ಸಾರಥಿರ್ಮತಃ ।
ಇತಿ ವ್ಯಾಸನಿರುಕ್ತೇ ।

ಜಯೋ ವಿಷ್ಣೋಶ್ಚ ವಾಯೋಶ್ಚ ಭಕ್ತ್ಯಾ ತತ್‌ಪ್ರೀತಿಸಾಧನಂ ।
ಜಗದೀಶಯೋಃ ಕುತೋ ಹ್ಯೇನೋಃ ಸರ್ವಶಕ್ತ್ಯೋರ್ಬಲಾಜ್ಜಯಃ ॥
ಇತಿ ಪವನವಿಜಯೇ ॥

ನಿನ್ನ ಚರಣಗಳಲ್ಲಿ, ಚರಣ ಮುಂತಾದ ಅವಯವಗಳಲ್ಲಿ ಸ್ಥಾನವನ್ನು ಚೆನ್ನಾಗಿ ದೊರಕಿಸಿಕೊಂಡವರು, ಅಂದರೆ, ದೊರಕಿಸಿಕೊಳ್ಳುವ ಯೋಗ್ಯತೆ ಉಳ್ಳವರು ದೇವತೆಗಳು.

ಇಂದ್ರಿಯಗಳೆ ದೊಡ್ಡ ಕುದುರೆಗಳು, ವಾಯುವೆ ಸಾರಥಿ.

'ರಥದ ಮೇಲೆ ಸ್ಥಾನವನ್ನು ಸ್ವೀಕರಿಸುವುದರಿಂದ ಸಾರಥಿ ಉದಾತ್ತನೆನಿಸುತ್ತಾನೆ' ಎಂದು ವ್ಯಾಸನಿರುಕ್ತಗ್ರಂಥದಲ್ಲಿ ಹೇಳಿದೆ.

'ವಿಷ್ಣುಜಯ ಮತ್ತು ವಾಯುಜಯಗಳೆಂದರೆ ಭಕ್ತಿಯಿಂದ ವಿಷ್ಣುವಾಯು ಗಳ ಪ್ರೀತಿ ಸಂಪಾದನೆ ಮಾಡುವುದೇ ಹೊರತು ಶಕ್ತಿಯಿಂದ ಅವರನ್ನು ಗೆಲ್ಲುವುದು ಹೇಗೆ ಸಾಧ್ಯ? ಅವರು ಸರ್ವಶಕ್ತರಾದ ಜಗದೀಶರು' ಎಂದು ಪವನವಿಜಯ ಗ್ರಂಥದಲ್ಲಿದೆ.

'ಜಿತ ಹೃಷೀಕ ವಾಯುಭಿರುದಾತ್ತ ಮಹತ್ತುರಗೈಃ'

ಎಂಬಲ್ಲಿ ಇಂದ್ರಿಯ ಮತ್ತು ವಾಯುಗಳು ಮಹಾತುರಗ ಮತ್ತು ಸಾರಥಿಗಳಂತಿದ್ದಾರೆ. ಅವರನ್ನು ಗೆದ್ದವರು ಜಿತಹೃಷೀಕಮಹತ್ತುರ ಗೋದಾತ್ತವಾಯುಗಳು. 'ಉತ್' ರಥದ ಮೇಲೆ 'ಆತ್ತ' ಸ್ವೀಕರಿಸಲ್ಪಡುವವನು. ರಥಿಕ ಸಾರಥಿಯನ್ನು ರಥದ ಮೇಲೆ ಸ್ವೀಕರಿಸುತ್ತಾನೆ. ಅದರಿಂದ 'ಉದಾತ್ತ' ಎಂದರೆ ಸಾರಥಿ. ದೇಹರಥದಲ್ಲಿ ವಿಷ್ಣುವೇ ರಥಿಕ. ವಾಯುವು ಸಾರಥಿ. ಇಂದ್ರಿಯ ದೇವತೆಗಳು ಕುದುರೆಗಳು. ಜೀವನು ಇಂದ್ರಿಯಗಳನ್ನು ಪ್ರತ್ಯಾಹಾರದಿಂದಲೂ ವಾಯುವನ್ನು ಪ್ರಾಣಾಯಾಮದಿಂದಲೂ ವಿಷ್ಣುವನ್ನು ಧ್ಯಾನದಿಂದಲೂ ಭಕ್ತಿಯಿಂದಲೇ ವಶಮಾಡಿಕೊಳ್ಳಬೇಕು.

ತೇಷಾಂ ಸಾಧನಾನಿ ಸುಖಸ್ಯಾಪಿ ಶಾಂತಿಮತಿ ಪೂರ್ಣಸುಖೇ ತ್ವಯಿ ನ ಸಂತಿ, ಗುರ್ವಭಾವಾತ್ । ವಿಭವೇ ಜೀವನ್ಮುಕ್ತೇ ಗುರಾವುದ್ಯತಿ ಉಪದಿಶತಿ, ಸರ್ವರಸೇ ಪರಮಾತ್ಮನಿ ಶ್ರಯತ ಏವ ॥

ಮುಮುಕ್ಷುಗಳ ಮೋಕ್ಷಸಾಧನೆಗಳು ಗುರೂಪದೇಶವಿಲ್ಲದಿದ್ದರೆ 'ಸುಖ ಶಾಂತಿಮತ್ತ್ವಯಿ' ಅಂದರೆ ಸುಖದ ಪರಾಕಾಷ್ಠೆಯುಳ್ಳ ನಿನ್ನಲ್ಲಿ ಇರಲಾರವು, ಅಂದರೆ ನೀನು ಸ್ವೀಕರಿಸಲಾರೆ. 'ವಿ-ಭವ' ಸಂಸಾರವಿಲ್ಲದ ಜೀವನ್ಮುಕ್ತನಾದ ಗುರು ಯೋಗ್ಯಗುಣೋಪಾಸನೆಯನ್ನು ಉಪದೇಶಿಸಿದರೆ ಆಗ ಸರ್ವೋತ್ತಮನಾದ ಪರಮಾತ್ಮನಲ್ಲಿ ಅವರ ಮೋಕ್ಷಸಾಧನೆಗಳು ಬಂದು ಸೇರುತ್ತವೆ, ಅಂದರೆ ಅವುಗಳನ್ನು ಪರಮಾತ್ಮ ಸ್ವೀಕರಿಸುತ್ತಾನೆ. ಎಂದರ್ಥ.

ತಾತ್ಪರ್ಯದೀಪಿಕಾಕಾರರು ಇಲ್ಲಿ ಹೇಳುತ್ತಾರೆ—'ತಾನಿ **ಸುಖಸಾಧನಾನಿ ಪೂರ್ಣಸುಖೇ ನ ಸಂತೀತ್ಯುಕ್ತಿಸ್ತು** ಇಂದ್ರಿಯ ಜಯಾದೀನಾಂ **ಸರ್ವಶಕ್ತ್ಯುಪೇತೇ** ಭಗವತಿ **ಸಂಭವೇಽಪಿ, ಗುರುಸೇವಾ**ಲಕ್ಷಣ ಪ್ರಧಾನಸಾಧನವಿರಹೋ ಹಿ ತಸ್ಯ

ಗುರ್ವಭಾವಾನ್ನಿಶ್ಚೀಯತೇ ತತೋ ವಿಶಿಷ್ಟವ್ಯತಿರೇಕಾಭಿಪ್ರಾಯೇಣೇತಿ ಬೋಧ್ಯಂ।' ಇಂದ್ರಿಯಜಯಾದಿ ಸಾಧನಗಳು ಸರ್ವಶಕ್ತಿಯುಳ್ಳ ಭಗವಂತನಲ್ಲಿ ಇರುವ 'ಸಂಭವ' ಅಂದರೆ, ಅವುಗಳನ್ನು ಅವನು ಸ್ವೀಕರಿಸುವ ಸಂಭವವಿದ್ದರೂ ಗುರುವಿಲ್ಲದಿದ್ದ ಪ್ರಯುಕ್ತ ಗುರುಸೇವಾರೂಪ ಪ್ರಧಾನ ಸಾಧನವಿಲ್ಲ ಎಂದು ನಿಶ್ಚಿತವಾದ್ದರಿಂದ, ಪ್ರಧಾನ ಸಾಧನ ವಿಶಿಷ್ಟ ಇಂದ್ರಿಯಜಯಾದಿ ಸಾಧನವಿಲ್ಲ, ಅಂದರೆ, ಅದನ್ನು ಸ್ವೀಕರಿಸಲಿಲ್ಲ ಎಂಬ ಅಭಿಪ್ರಾಯದಿಂದ 'ಸಾಧನವಿಲ್ಲ' ಇರುವುದಿಲ್ಲ ಎಂದಿದೆ.

ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

ಇತಿ ಶ್ವೇತಾಶ್ವತರಶ್ರುತಿಃ ।

'ಯಾರಿಗೆ ಪರಮಾತ್ಮನಲ್ಲಿ ಪರಮಭಕ್ತಿಯೂ ಬೇರೆ ದೇವತೆಗಳಲ್ಲಿ ತಾರತಮ್ಯಾನುಸಾರ ಹೆಚ್ಚಿನ ಭಕ್ತಿಯೂ, ದೇವತೆಗಳಲ್ಲಿ ಹೇಗೋ ಹಾಗೆ ಗುರುಗಳಲ್ಲಿಯೂ ಯಥಾ ಯೋಗ್ಯವಾಗಿ ಹೆಚ್ಚಿನ ಭಕ್ತಿಯೂ ಇರುವುದೋ ಅಂಥ ಮಹಾತ್ಮನಿಗೆ ಮಾತ್ರ 'ಕಥಿತಾಃ ಅರ್ಥಾಃ' ಹಿಂದೆ ಹೇಳಿದ ಪ್ರಮೇಯಗಳು ಶಾಸ್ತ್ರಗ್ರಂಥಗಳಲ್ಲಿ ಚೆನ್ನಾಗಿ ಹೊಳೆಯುವುವು, ಶ್ರವಣಾದಿಪ್ರವೃತ್ತಿಗಳು ಸಫಲವಾಗುವುವು. 'ಅಕಥಿತಾ ಅಪ್ಯರ್ಥಾಃ' ಈ ಜನ್ಮದಲ್ಲಿ ಕೇಳದಿದ್ದ ಶಾಸ್ತ್ರಾರ್ಥಗಳು ಕೂಡ ಅವನಿಗೆ ಪ್ರತಿಭೆಯಿಂದ ತಿಳಿದುಬರುವುವು.' ಎಂದು ಶ್ವೇತಾಶ್ವತರ ಶ್ರುತಿಯು ಹೇಳುತ್ತಿದೆ.

ದೇವಾ ಅಪಿ ಸುಯೋಗಾಢ್ಯಾ ಯತಂತಃ ಸರ್ವಸಾಧನೈಃ ।
ಪುತ್ರದಾರಾದಿಭಿಃ ಸಾರ್ಧಂ ನಾಶ್ವಸಂತೀಹ ಸಂಸೃತೌ
ಗುರೋರನುಗ್ರಹಮೃತೇ ಸಾಧನಂ ನ ಹರೇಃ ಪ್ರಿಯಂ
ಗುರೂಪದೇಶಾತ್ತು ಪರಂ ಪ್ರಾಪ್ನೋತ್ಯೇವ ನ ಸಂಶಯಃ
ಷಣ್ಣವತ್ಯಂಗುಲೋ ಯಸ್ತು ತಾಲಾಸ್ಯೋ ದಶತಾಲಕಃ
ದಶಪ್ರಾದೇಶಕಃ ಸಪ್ತಪಾದೋ ಹಸ್ತಚತುಷ್ಟಯಃ
ಕಲಮತ್ರಯಾಂಗುಲಶ್ಚೈವ ವಾಗ್ಮೀ ಸಂದೇಹವರ್ಜಿತಃ
ವಾಸುದೇವೈಕಶರಣೋ ಗುರುರಿತ್ಯುಚ್ಯತೇ ಬುಧೈಃ
ಗುರುಲಕ್ಷಣಸಂಪೂರ್ಣಃ ಸಾಕ್ಷಾದೇವ ಚತುರ್ಮುಖಃ
ತತಃ ಶೇಷೇಂದ್ರವಹ್ನ್ಯಾದ್ಯಾಃ ಕ್ರಮೇಣೈವ ಪ್ರಕೀರ್ತಿತಾಃ ॥

ಇತಿ ಗುರುವಿವೇಕೇ ॥

'ಒಳ್ಳೆಯ ಯೋಗ್ಯತೆಯಿಂದ ಕೂಡಿದ ದೇವತೆಗಳೂ ಕೂಡ ಹೆಂಡತಿ ಮಕ್ಕಳೊಂದಿಗೆ ಸಕಲ ಸಾಧನ ಯುಕ್ತರಾಗಿ ಯತ್ನಿಸಿದರೂ ಗುರ್ವನುಗ್ರಹವಿಲ್ಲದಿದ್ದರೆ ಸಂಸಾರದಿಂದ ಮುಕ್ತಿ ಹೊಂದುವುದಿಲ್ಲ. ಗುರ್ವನುಗ್ರಹವಿಲ್ಲದಿದ್ದರೆ ಯಾವ ಸಾಧನವೂ ಹರಿಗೆ ಪ್ರಿಯವೆನಿಸುವುದಿಲ್ಲ. ಗುರೂಪದೇಶದಿಂದ ಪರಮಾತ್ಮನನ್ನು ನಿಶ್ಚಯವಾಗಿ ಹೊಂದುತ್ತಾನೆ, ಸಂಶಯವಿಲ್ಲ. ತೊಂಬತ್ತಾರು ಅಂಗುಲ ಎತ್ತರದವನಾಗಿರ ಬೇಕು. ಅವನ ಮುಖ ಒಂದು ಗೇಣವಿರಬೇಕು. ಹತ್ತು ಗೇಣ ಶರೀರದ ಎತ್ತರ ಅಥವಾ ಹತ್ತು ಚೋಟು ಎತ್ತರವಿರಬೇಕು. ಅದು ಪಾದದಿಂದ ಅಳೆದಾಗ ಏಳು ಪಾದ, ಹಸ್ತದಿಂದ ಅಳೆದಾಗ ನಾಲ್ಕು ಮೊಳವಿರಬೇಕು. ಬತ್ತದ ಮೂರುಕಾಳುಗಳ ಪ್ರಮಾಣಕ್ಕೆ ಅಂಗುಲ ಎಂದು ಹೆಸರು. ಇಂಥ ವ್ಯಕ್ತಿ, ಒಳ್ಳೆಯ ವಾಗ್ಮಿಯಾಗಿದ್ದು ತತ್ವವಿಷಯದಲ್ಲಿ ಸಂದೇಹವಿಲ್ಲದವನಾಗಿದ್ದು ವಾಸುದೇವನನ್ನು ಮೊರೆಹೊಕ್ಕವನು, ಜ್ಞಾನಿ, ಗುರು ಎನಿಸುತ್ತಾನೆ. ಈ ಎಲ್ಲ ಗುರುಲಕ್ಷಣ ಸಂಪೂರ್ಣವಾಗಿರುವುದು ಸಾಕ್ಷಾತ್ ಚತುರ್ಮುಖನಲ್ಲಿ. ಬಳಿಕ ಕ್ರಮವಾಗಿ ಶೇಷ ಇಂದ್ರ ವಹ್ನಿ ಮೊದಲಾದವರಲ್ಲಿರುತ್ತವೆ' ಎಂದು ಗುರುವಿವೇಕ ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

ದೇವಾ ಯೋಗ್ಯತಯಾ ಜಾತಾ ವಿಷ್ಣುಪಾದಾಂಬುಜಾಶ್ರಯಾಃ ।
ತಥಾಪಿ ಸಾಧನೈಸ್ತೇಷಾಂ ತತ್ಪ್ರಾಪ್ತಿರ್ಗುರ್ವನುಗ್ರಹಾತ್ ॥
ಇತಿ ತತ್ತ್ವೋದ್ಯೋಗೇ ॥

'ಮುಕ್ತಿಯಲ್ಲಿ ವಿಷ್ಣುವಿನ ಪಾದಕಮಲಾದಿ ಅವಯವಗಳಲ್ಲಿ ಸಾಯುಜ್ಯ ಪಡೆಯುವ ಯೋಗ್ಯತೆ ಉಳ್ಳವರಾಗಿಯೇ ದೇವತೆಗಳು ಹುಟ್ಟಿರುತ್ತಾರೆ ಆದರೂ ಅವರಿಗೂ ಕೂಡ ಸಾಧನೆಗಳಿಂದ ಭಗವತ್‌ಪ್ರಾಪ್ತಿಯಾಗುವುದು ಗುರುವಿನ ಅನುಗ್ರಹದಿಂದಲೆ' ಎಂದು ತತ್ತ್ವೋದ್ಯೋಗ ಗ್ರಂಥದಲ್ಲಿ ಉಕ್ತವಾಗಿದೆ.

❖❖❖

ಶ್ರುತಿಗೀತೆಯಲ್ಲಿ ಇಪ್ಪತ್ತೆರಡನೆ ಪದ್ಯ—

ಇತಿ ಸದಜಾನತಾಂ ಮಿಥುನತೋ ರತಯೇ ಚರತಾಂ
ಸುಖಯತಿ ಕೋ ನ್ವಿಹಾದ್ಯ ವಿಜನೇ ಸ್ವನಿರಸ್ತಭಗೇ ।

ಭುವಿ ಪುಣ್ಯತೀರ್ಥಸದನಾ ಹ್ಯೃಷಯೋ
ನಿವಿಶಂತ್ಯತಸ್ತು ಭವತಃ ಪದಾಂಬುಜಂ ಹೃದಾಽಘಭಿದಂ ।
ದಧತಿ ಸಕೃನ್ಮನಸ್ತ್ವಯಿ ಚಿದಾತ್ಮನಿ ನಿತ್ಯಸುಖೇ
ನ ಪುನರುಪಾಸತೇ ಪುರುಷಸಾರ ಹರಾವಸಥಮ್ ॥ ೩೬ ॥

ಹೀಗೆ ನಿರ್ದೋಷನಾದ ಭಗವಂತನನ್ನು ಅರಿಯದೆ ಸ್ತ್ರೀಸುಖವನ್ನು ಅರಸಿ ಹೋಗುವವರಿಗೆ ನಿತ್ಯೈಶ್ವರ್ಯಾದಿಯುಕ್ತವಾದ ಮತ್ತು ಜನನ ಮರಣರಹಿತವಾದ ಮೋಕ್ಷವನ್ನು ನೀಡಿ ಯಾರು ಸುಖಪಡಿಸುತ್ತಾರೆ. ಅದರಿಂದ ಜ್ಞಾನಯೋಗ್ಯರ ಕರ್ಮಭೂಮಿಯಲ್ಲಿ ಪುಣ್ಯತೀರ್ಥಗಳಲ್ಲಿ ವಾಸಮಾಡುತ್ತ ಶಾಸ್ತ್ರಾಭ್ಯಾಸ ಮಾಡು: ಪಾಪಪರಿಹಾರಕವಾದ ನಿನ್ನ ಪಾದಕಮಲವನ್ನು ಹೃದಯದಲ್ಲಿ ಧ್ಯಾನಿಸುತ್ತಾರೆ ನಿತ್ಯಾನಂದ ಜ್ಞಾನಾತ್ಮಕನಾದ ನಿನ್ನಲ್ಲಿ ನಿರಂತರ ಮನಸ್ಸಿಟ್ಟು ಒಮ್ಮೆ ಮಿಂಚಿನಂ: ಅಪರೋಕ್ಷ ಸಂಪಾದಿಸಿದರೆಂದರೆ ತಿರುಗಿ ಹಿಂದಿನಂತೆ ಸ್ವಾತಂತ್ರ್ಯಾಭಿಮಾನವನ ಮಾಡುವುದಿಲ್ಲ ಮುಕ್ತರಾಗುತ್ತಾರೆ.

ಹೇ ಆದ್ಯ ! ಪುರುಷಸಾರ ! ಇತಿ ಸದಜಾನತಾಂ ಮಿಥುನತೋ ರತಯೇ ಚರತಾಂ

ಹೇ ಪುರುಷೋತ್ತಮನೆ, ಹೀಗೆ ನಿರ್ದೋಷನಾದ ನಿನ್ನನ್ನು **ಅರಿಯದೆ ಸ್ತ್ರೀಸುಖವನ್ನೇ** ಅರಸಿ ಹೋಗುವವರಿಗೆ...

ಸ್ವನಿರಸ್ತಭಗೇ ವಿಜನೇ ಕೋ ನ್ವಿಹ ಸುಖಯತಿ ?

'ಸು ಅನಿರಸ್ತಭಗ' ನಿತ್ಯ ಐಶ್ವರ್ಯಾದಿ ಉಳ್ಳ 'ವಿ-ಜನ' **ಜನನವಿಲ್ಲದ ಮೋಕ್ಷದಲ್ಲಿ** ಇರಿಸಿ ಯಾರು ತಾನೇ ಸುಖ ನೀಡುತ್ತಾನೆ? **ಅದರಿಂದ...**

ಋಷಯ ಇಹ ಭುವಿ ಪುಣ್ಯತೀರ್ಥಸದನಾಃ

ಋಷಿಗಳು, ಜ್ಞಾನಿಗಳು, ಅಂದರೆ ಜ್ಞಾನಿಗಳಾಗಲಿರುವವರು 'ಇಹ **ಭುವಿ' ಈ ಕರ್ಮಭೂಮಿಯಲ್ಲಿ** ಪುಣ್ಯ ತೀರ್ಥಗಳಲ್ಲಿ ಅಂದರೆ ಭಾಗೀ**ರಥ್ಯಾದಿ ತೀರ್ಥಗಳಲ್ಲಿ ಮತ್ತು** ಸಚ್ಛಾಸ್ತ್ರಗಳೆಂಬ ತೀರ್ಥಗಳಲ್ಲಿ 'ಸದನ' **ಮನೆಮಾಡಿಕೊಳ್ಳುವವರು ತೀರ್ಥಯಾತ್ರೆ** ಮುಂತಾದ ನಿಷ್ಕಾಮ ಕರ್ಮದಿಂದ **ಅಂತಃಕರಣ ಶುದ್ಧಿ ಸಂಪಾದಿಸಿ**ಕೊಂಡು ಶಾಸ್ತ್ರಾಭ್ಯಾಸ ಮಾಡುವವರು...

ಅಘಭಿದಂ ಭವತಃ ಪದಾಂಬುಜಂ ಹೃದಾ ನಿವಿಶಂತಿ

ಪಾಪಪರಿಹಾರಕವಾದ **ನಿನ್ನ** ಪಾದಕಮಲವನ್ನು ಮನಸಿನಿಂದ ಪ್ರವೇಶಿಸುತ್ತಾರೆ. ನಿರಂತರ **ಧ್ಯಾನ**ಮಾಡುತ್ತಾರೆ.

ನಿತ್ಯಸುಖೇ ಚಿದಾತ್ಮನಿ ತ್ವಯಿ ಸಕೃತ್ ಮನಃ ದಧತಿ

ನಿತ್ಯಾನಂದ ಜ್ಞಾನಾತ್ಮಕನಾದ ನಿನ್ನಲ್ಲಿ ಒಮ್ಮೆ ಮನಸ್ಸಿಡುತ್ತಾರೆ, ಅಂದರೆ, ಒಮ್ಮೆ ಮಿಂಚಿನಂತೆ ನಿನ್ನನ್ನು ಪ್ರತ್ಯಕ್ಷ ಕಾಣುತ್ತಾರೆ.

ಪುನಃ ಹರಾವಸಥಂ ನೋಪಾಸತೇ

ತಿರುಗಿ ಹಿಂದಿನಂತೆ 'ಹರ-ಆವಸಥ' ಶಿವನ ಅಭಿಮಾನಾಸ್ಪದವಾದ ಅಹಂಕಾರವನ್ನು ಸ್ವಾತಂತ್ರ್ಯಾಭಿಮಾನವನ್ನು ಮಾಡುವುದಿಲ್ಲ. ಮೋಕ್ಷವನ್ನೇ ಸಂಪಾದಿಸುತ್ತಾರೆ.

ಬೇರೆ ವ್ಯಾಖ್ಯಾನಕಾರರ ಪಾಠದಲ್ಲಾಗಲಿ ವಿವರಣೆಯಲ್ಲಾಗಲಿ ಹೆಚ್ಚಿನ ವ್ಯತ್ಯಾಸವಿಲ್ಲ.

ಇತಿ ಲೋಕೇ ಪರಿದೃಶ್ಯಮಾನಪ್ರಕಾರೇಣ ಚರತಾಂ ವಿಜನೇ ಮೋಕ್ಷವಿಷಯೇ ಕಃ ಸುಖಯತಿ। ಸುಷ್ಠ್ವನಿರಸ್ತಭಗೇ। ಅತಸ್ತ್ವಾಮೇವ ಸಂತಂ ಜ್ಞಾತ್ವಾ ಭವತಃ ಪದಾಂಬುಜಂ ಹೃದಾ ನಿವಿಶಂತಿ। ಹರಾವಸಥಮಹಂಕಾರಂ ನ ಕುರ್ವಂತಿ।

'ಇತಿ ಎಂದರೆ, ಹೀಗೆ, ಲೋಕದಲ್ಲಿ ಕಾಣುವಂತೆ ನಡೆಯುವವರಿಗೆ 'ವಿಜನೇ' ಜನನ ಮರಣವಿಲ್ಲದ ಮೋಕ್ಷದಲ್ಲಿ ಇರಿಸಿ ಯಾರು ಸುಖ ನೀಡುತ್ತಾನೆ? 'ಸ್ವನಿರಸ್ತಭಗೇ' ಎಂದರೆ ಸು ಅನಿರಸ್ತಭಗ, ಐಶ್ವರ್ಯಾದಿಷಡ್ಗುಣಗಳು ಎಂದೂ ನಿರಸ್ತವಾಗದಂತೆ ಇರುವ, ನಿತ್ಯಷಡ್ಗುಣ ಸಂಪನ್ನವಾದ ಮೋಕ್ಷದಲ್ಲಿ ಎಂದರ್ಥ. ಅದರಿಂದ ನಿನ್ನನ್ನೇ ದೋಷರಹಿತನೆಂದು ತಿಳಿದು ನಿನ್ನ ಪಾದಕಮಲವನ್ನು ಮನಸ್ಸಿನಿಂದ ಪ್ರವೇಶಿಸುತ್ತಾರೆ, ಧ್ಯಾನ ಮಾಡುತ್ತಾರೆ. ಅಪರೋಕ್ಷದಿಂದ ಕಾಣುತ್ತಾರೆ ಬಳಿಕ ಪುನಃ ಹರಾವಸಥವನ್ನು ಹರನ ಅಭಿಮಾನಾಸ್ಪದವಾದ ಅಹಂಕಾರವನ್ನು, ಸ್ವಾತಂತ್ರ್ಯಾಭಿಮಾನವನ್ನು ಮಾಡುವುದಿಲ್ಲ.

ಈ ಪದ್ಯಕ್ಕೆ ಮೂಲಶ್ರುತಿ ಇದು—

ಬ್ರಹ್ಮಾಜ್ಞಾತ್ವೇತಿ ಲೋಕಪ್ರವೃತ್ತಿಂ
ಪ್ರವರ್ತತಾಂ ಕೋ ನು ಮೋಕ್ಷಂ ದದಾತಿ।
ಅತೋ ಬ್ರಹ್ಮೋಪಾಸತೇ ಸಾಧು ಧೀರಾ
ನಾಹಂಭಾವಸ್ತೇಷು ರುದ್ರಾಧಿವಾಸಃ॥ ಇತಿ ಮಹಾರವಶ್ರುತಿಃ॥

'ಪರಬ್ರಹ್ಮನನ್ನು ತಿಳಿಯದೆ ಕೇವಲ ಲೌಕಿಕ ವಿಷಯಭೋಗದಲ್ಲಿಯೆ ಪ್ರವೃತ್ತಿ ಮಾಡುವವರಿಗೆ ಯಾರು ಮೋಕ್ಷ ನೀಡುತ್ತಾನೆ? ಅದರಿಂದ ಬಲ್ಲವರು ಪರಬ್ರಹ್ಮನನ್ನು ಚೆನ್ನಾಗಿ ತಿಳಿಯುತ್ತಾರೆ. ಅವರಲ್ಲಿ ರುದ್ರನ ವಾಸಸ್ಥಾನವಾದ ಅಹಂಕಾರವಿರುವುದಿಲ್ಲ' ಎಂದು ಮಹಾರವಶ್ರುತಿ ಹೇಳುತ್ತಿದೆ.'

ಮಹಾಭಾಗ್ಯಂ ತು ಕೈವಲ್ಯಮಜ್ಞಾನಾಂ ಕಃ ಪ್ರದಾಸ್ಯತಿ ।
ಅತಃ ಸಂತೋ ವಿಜಾನಂತಿ ಹರಿಂ ತೇ ತ್ವನಹಂಕೃತಾಃ ॥

ಇತಿ ಸ್ಕಾಂದೇ ॥

'ಪರಮಪುರುಷಾರ್ಥವೆನಿಸಿರುವ ಮೋಕ್ಷವನ್ನು ಅಜ್ಞಾನಿಗಳಿಗೆ ಯಾರು ಕೊಡುತ್ತಾನೆ? ಅದರಿಂದ ಮುಮುಕ್ಷುಗಳು ಹರಿಯನ್ನು ತಿಳಿಯುತ್ತಾರೆ ಅಹಂಕಾರವನ್ನು ತೊರೆಯುತ್ತಾರೆ' ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ.

❖ ❖ ❖

ಶ್ರುತಿಗೀತೆಯಲ್ಲಿ ಇಪ್ಪತ್ತಮೂರನೆ ಮತ್ತು ಇಪ್ಪತ್ತನಾಲ್ಕನೆ ಪದ್ಯಗಳು—

ಇದಮಪ್ಯಥೋ ವದಂತಿ ಚೇ-
ನ್ನನು ತರ್ಕಾ ವ್ಯಭಿಚರಂತಿ ಕ್ವಚಿತ್ ಕ್ವಚಿನ್ಮೃಷಾ ಚ ।
ತತೋ ಭಯದೃಗ್‌ವ್ಯವಹಿತಯೇ ವಿಕಲ್ಪ ಉಷಿತೋಽನ್ವಹಂ ಪರಂಪರ ಯಾ
ಭ್ರಮತಿ ಭಾರತೀ ಚ ತವೋರುವೃತ್ತಿಭಿರೂಢಜವಾ ॥ ೩೭ ॥

ಈ ಜಗತ್ತು ಮಿಥ್ಯೆ, ಅದಕ್ಕೆ ಜೀವವ್ಯತಿರಿಕ್ತ ಪಾಲಕನೊಬ್ಬನಿಲ್ಲ ಎಂದು ಕೆಲವರು ಕುತರ್ಕದಿಂದ **ವಾದಿಸುವುದು ಕೂಡ** ಪಾಲಕನಾದ ಪರಮಾತ್ಮನ ಇಚ್ಛೆಯಿಂದಲೆ. ಏಕೆಂದರೆ **ತರ್ಕ ಕೆಲವೆಡೆ ವ್ಯಭಿಚರಿತ**, ಕೆಲವೆಡೆ ಬಾಧಿತವಾಗಿರುವುದು ಕಂಡಿದೆ. ಅದ್ವೈತ **ಶ್ರುತಿಯೂ ಕೂಡ** ನಾನಾರ್ಥಕ ಪದಪ್ರಯೋಗಗಳಿಂದ ತತ್ವನಿರ್ಣಯ ದಲ್ಲಿ ಸ್ಥಿರಚಿತ್ತತೆ **ಇಲ್ಲದವರಿಗೆ ಭ್ರಾಂತಿ ಹುಟ್ಟಿಸುತ್ತದೆ.** ಬಹುಗುಣಗಳನ್ನು ಅಲ್ಪಶಬ್ದಗಳಿಂದ **ಅದು ಹೇಳುತ್ತಿದೆ. ಅದರ** ತಾತ್ಪರ್ಯವನ್ನು ಸರಿಯಾಗಿ ತಿಳಿಯದವರು ಮೋಸ **ಹೋಗುತ್ತಾರೆ. ಹೀಗಾಗಿ** ವೇದ ವಿರುದ್ಧವಾದ ಕಲ್ಪನೆ ಅಂಧ ಪರಂಪರೆಯಿಂದಲೇ **ಲೋಕದಲ್ಲಿ** ಸದಾ ಹರಡಿರುತ್ತದೆ.

ಇದಂ ಅಪಿ ವದಂತಿ ಚೇದ್ ಅಥೋ

ಈ ಜಗತ್ತನ್ನು ಕೆಲವರು 'ಅ-ಪಿ' ಜೀವವ್ಯತಿರಿಕ್ತನಾದ

ಪಾಲಕನೋರ್ವನಿಲ್ಲದ್ದು ಮಿಥ್ಯೆ ಎಂದು ಕುತರ್ಕದಿಂದ ಹೇಳಿದರೆ ಅದು 'ಅಥೋ' ಪಾಲಕನಾದ ಆ ಪರಮಾತ್ಮನ ಇಚ್ಛೆಯಿಂದಲೆ. ಏಕೆಂದರೆ,

ತರ್ಕಾ ವ್ಯಭಿಚರಂತಿ ನನು ಕ್ವಚಿತ್, ಕ್ವಚಿತ್ ಮೃಷಾ ಚ

ತರ್ಕಗಳು ಕೆಲವೆಡೆ ವ್ಯಭಿಚಾರಿಯಾಗಿರುವುದು ಕಂಡಿದೆ. ಕೆಲವೆಡೆ ಬಾಧಿತವಾಗಿರುವುದೂ ಕಂಡಿದೆ. ಪ್ರತ್ಯಕ್ಷಾಗಮಗಳ ಬೆಂಬಲವಿಲ್ಲದಿದ್ದಲ್ಲಿ ವ್ಯಭಿಚಾರ ಬಾಧಗಳಿರುತ್ತವೆ.

ಭಾರತೀ ಚ ಭಯದೃಗ್ ವ್ಯವಹಿತಯೇ

'ಭಾರತಿ' ವೇದವಾಣಿಯೂ ಕೂಡ 'ಭಯದೃಕ್' ಅಂಜುಬುರುಕರಿಗೆ, ಚಿತ್ತಸ್ಥಿರತೆ ಇಲ್ಲದವರಿಗೆ, ಹೇಳಿದ್ದನ್ನು ಸರಿಯಾಗಿ ತಿಳಿಯುವ ಬುದ್ಧಿ ಇಲ್ಲದವರಿಗೆ 'ವ್ಯವಹಿತಿ' ಭ್ರಾಂತಿ ಹುಟ್ಟಿಸಲೆಂದೇ ಅದ್ವೈತ ಪರವೆಂಬಂತೆ ತೋರಿ ಕೊಳ್ಳುತ್ತದೆ.

ತವೋರು ವೃತ್ತಿಭಿರೂಢಜವಾ ಭ್ರಮತಿ

'ಉರುವೃತ್ತಿಭಿಃ' ನಿನ್ನ ಬಹುಗುಣಗಳನ್ನು ಅಲ್ಪಶಬ್ದಗಳಿಂದ ಹೇಳಲು 'ಊಢಜವಾ' ವೇಗವಾಗಿ ಧಾವಿಸುತ್ತ 'ಭ್ರಮತಿ' ನಾನಾರ್ಥಕ ಶಬ್ದಗಳನ್ನು ಬಳಸುತ್ತದೆ.

ತತೋ ವಿಕಲ್ಪಃ ಪರಂಪರಯಾ ಅನ್ವಹಂ ಉಷಿತಃ

ಅದರಿಂದ 'ವಿ-ಕಲ್ಪ' ವೇದ ವಿರುದ್ಧ ಕಲ್ಪನೆ ಅಂಧಪರಂಪರೆಯಿಂದ 'ಅನ್ವಹಂ' ಸದಾ 'ಉಷಿತಃ' ಹರಡಿದೆ.

ನ ಯದಿದಮಗ್ರ ಆಸ ನ ಭವಿಷ್ಯದತೋ ನಿಧನಾ-
ದನಿಮಿತ್ತಕಮಂತರಾ ತ್ವಯಿ ವಿಭಾತಿ ಮೃಷೈಕರಸೇ ।
ಅತ ಉಪಗೀಯತೇ ದ್ರವಿಣಜಾತಿವಿಕಲ್ಪಪಥೈ-
ರ್ವಿತಥಮನೋವಿಲಾಸಮಿದಮಿತ್ಯವಯಂತಿ ಬುಧಾಃ ॥ ೩೮ ॥

ಜೀವ ಹುಟ್ಟುವ ಮೊದಲು ಗರ್ಭದಲ್ಲಿ ದುಃಖಿಯಾಗಿರುವುದರಿಂದ ಆಗ ಅವನಿಗೆ **ಈಶ್ವರತ್ವವಿಲ್ಲ**, ಮರಣಾನಂತರ ನರಕಾದಿಗಳಿರುವುದರಿಂದ ಈಶ್ವರತ್ವವಿಲ್ಲ, ಹೀಗೆ **ಜೀವನಿಗೆ ಹಿಂದೆ** ಮುಂದೆ ಇಲ್ಲದಿದ್ದ ಈಶ್ವರತ್ವ ನಡುವೆ **ಜೀವಿತಕಾಲದಲ್ಲಿ** ಎಲ್ಲಿಂದ **ಬಂದೀತು? ಈಶ್ವರನಲ್ಲಿ** ಜೀವಾಭೇದವೂ ಈಶ್ವರ **ಪ್ರೇರಣೆಯಿಂದಲೇ** ಕೆಲವರಿಗೆ **ಭಾಸವಾಗುತ್ತದೆ. ಉತ್ತಮೋತ್ತಮನಾದ** ನಿನ್ನಲ್ಲಿ **ಜೀವಾಭೇದ ಬರಿ ಸುಳ್ಳು.**

ಈ ಅಭೇದ ಭ್ರಾಂತಿಯಿಂದಲೇ ಜೀವನನ್ನು ಶ್ರೀಮಂತ ಉತ್ತಮಜಾತಿಯವನೆಂದು ಮುಂತಾಗಿ ಸಾಕ್ಷಿವಿರುದ್ಧವಾದ ಕಲ್ಪನಾ ಮಾರ್ಗಗಳಿಂದ ಹೊಗಳುತ್ತಾರೆ. ಇದು ಆಸುರೀ ಬುದ್ಧಿಯ ಕಲ್ಪನಾಜಾಲವೆಂದು ಜ್ಞಾನಿಗಳು ತಿಳಿಯುತ್ತಾರೆ.

ಯದಿದಮಗ್ರೇ ನಾಸ, ನಿಧನಾದ್ ಭವಿಷ್ಯತ್‌ನ, ಅತೋಽಂತರಾ ಮೃಷಾ

ಜೀವನಿಗೆ ಹುಟ್ಟುವ ಮೊದಲು ಗರ್ಭದಲ್ಲಿ ದುಃಖವಿದ್ದುದರಿಂದ ಈಶ್ವರತ್ವವಿರಲಿಲ್ಲ. ಮರಣಾನಂತರವೂ ನರಕಾದಿ ದುಃಖವಿರುವುದ ರಿಂದ ಈಶ್ವರತ್ವ ಬರುವುದಿಲ್ಲ. ನಡುವೆ ಜೀವಿತಕಾಲದಲ್ಲಿ ಕಂಡರೆ ಅದು ಸುಳ್ಳು ತಾನೆ?

ಅನಿಮಿತ್ತಕಂ ವಿಭಾತಿ ಮೃಷಾ ಏಕರಸೇ ತ್ವಯಿ

ಆದರೂ ಜೀವನಲ್ಲಿ ಈಶ್ವರತ್ವವು 'ಅ-ನಿಮಿತ್ತಕಂ' ಅಕಾರ ವಾಚ್ಯನಾದ ಈಶ್ವರನ ಪ್ರೇರಣೆಯಿಂದಲೇ ಭಾಸವಾಗುತ್ತದೆ. ಏಕೆಂದರೆ ಜೀವನು 'ಮೃಷಾ ಏಕರಸ' ಮತ್ತು 'ಮೃಷಾ ತ್ವಂ' ಆಗಿದ್ದಾನೆ. ಅವನು 'ಏಕರಸ' ಸರ್ವೋತ್ತಮನೆಂಬುದು 'ಮೃಷಾ' ಸುಳ್ಳು. ಅವನು 'ತ್ವಂ' ನೀನೇ ಎನ್ನುವುದೂ 'ಮೃಷಾ' ಸುಳ್ಳು. ಹೀಗೆಂದ ಮೇಲೆ ಅವನಲ್ಲಿ ಈಶ್ವರತ್ವ ಕಾಣಲು ಈಶ್ವರಪ್ರೇರಣೆ ಹೊರತು ಬೇರೆ ಕಾರಣವಿಲ್ಲ. ಅವನಿಗೆ ತಮಃ ಸಾಧನೆಯಾಗಲೆಂದು ಈಶ್ವರ ಹಾಗೆ ಪ್ರೇರಿಸುತ್ತಾನೆ.

ಅತಃ ದ್ರವಿಣಜಾತಿ ವಿಕಲ್ಪಪಥೈಃ ಉಪಗೀಯತೇ

ಈಶ್ವರಾಭೇದ ಭ್ರಾಂತಿಯಿಂದಲೇ ಜೀವನು ಶ್ರೀಮಂತನೆಂದೂ ಉತ್ತಮ ಕುಲದವನೆಂದೂ 'ವಿ-ಕಲ್ಪಪಥ' ಸಾಕ್ಷಿ ವಿರುದ್ಧ ಕಲ್ಪನಾ ಮಾರ್ಗಗಳಿಂದ ಸ್ತುತಿಸಿಕೊಳ್ಳುತ್ತಾನೆ. ವಸ್ತುತಃ ಈಶ್ವರನೇ ನಿಜವಾಗಿ ಶ್ರೀಮಂತ, ನಿಜವಾಗಿ ಉತ್ತಮಕುಲದಲ್ಲಿ ಹುಟ್ಟಲು ಕಾರಣವಾದ ತಪಸ್ಸು ಮುಂತಾದ ಸದ್ಗುಣ ಉಳ್ಳವನು.

ಅತೋ ವಿತಥಮನೋವಿಲಾಸಮಿದಮಿತಿ ಬುಧಾ ಅವಯಂತಿ

ಅದರಿಂದ **ಇದು ಸುಳ್ಳಾದ ಆಸುರೀ**ಬುದ್ಧಿಯ ಕಲ್ಪನಾ ವಿಲಾಸ ಮಾತ್ರವೆಂದು **ಜ್ಞಾನಿಗಳು ತಿಳಿಯುತ್ತಾರೆ.**

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ ಹೀಗಿದೆ—

ಸತ ಇದಮುತ್ಥಿತಂ ಸದಿತಿ ಚೇನ್ನನು ತರ್ಕಹತಂ
ವ್ಯಭಿಚರತಿ ಕ್ವಚ ಕ್ವಚ ಮೃಷಾ ನ ತಥೋಭಯಯುಕ್

ವ್ಯವಹೃತಯೇ ವಿಕಲ್ಪ ಇಷಿತೋऽಂಧಪರಂಪರಯಾ
ಭ್ರಮಯತಿ ಭಾರತೀ ತ ಉರುವೃತ್ತಿಭಿರುಕ್ಥಜಡಾನ್
ನ ಯದಿದಮಗ್ರಆಸ ನ ಭವಿಷ್ಯದತೋ ನಿಧನಾ
ದನುಮಿತಮಂತರಾ ತ್ವಯಿ ವಿಭಾತಿ ಮೃಷೈಕರಸೇ
ಅತ ಉಪಮೀಯತೇ ದ್ರವಿಣಜಾತಿವಿಕಲ್ಪಪಥೈ
ರ್ವಿತಥಮನೋವಿಲಾಸಮೃತಮಿತ್ಯವಯಂತ್ಯಬುಧಾಃ ॥

ಇಲ್ಲಿ ಮೀಮಾಂಸಕ ಜಗತ್ತನ್ನು ಸತ್ಯ ಎನ್ನುತ್ತಾನೆ. ಅದ್ವೈತಿ ಮಿಥ್ಯೆ ಎನ್ನುತ್ತಾನೆ—

ಮೀಮಾಂಸಕ—ಪ್ರಪಂಚ ಸತ್ಯವಾದ ಬ್ರಹ್ಮದಿಂದಾಗಿದೆ. ಬಂಗಾರದಿಂದಾದ ಕುಂಡಲ ಬಂಗಾರವೇ. ಹಾಗೇ ಸತ್ಯದಿಂದಾದ ಜಗತ್ತು ಸತ್ಯವೆ. 'ಸತಃ ಉತ್ಪನ್ನತ್ವಾತ್' **ಅದ್ವೈತಿ**—ಬೆಟ್ಟದಿಂದ ಇಳಿದು ಬರುವ ನದಿ ಬೆಟ್ಟವೆನಿಸುವುದಿಲ್ಲ, ಹಾಗೆ ಬ್ರಹ್ಮನಿಂದ ಈಚೆಗೆ ಬಂದ ಜಗತ್ತು ಬ್ರಹ್ಮವಾಗಿಲ್ಲ. 'ಸತಃ' ಎಂದು **ಅಪಾದಾನಪಂಚಮಿ**. ಅದರಿಂದ ಬ್ರಹ್ಮಜಗತ್ತುಗಳಿಗೆ ಭೇದವನ್ನೇ ಹೇಳಿದಂತಾಯಿತು. ಇದು **ವಿರುದ್ಧ** ಹೇತು. **ಮೀಮಾಂಸಕ**—ನಾವು ಬ್ರಹ್ಮಜಗತ್ತುಗಳಿಗೆ ಭೇದವನ್ನು ಒಪ್ಪಿ ಸತ್ಯತ್ವಾಂಶದಲ್ಲಿ ಅಭೇದವಿದೆ ಎನ್ನುತ್ತೇವೆ. **ಅದ್ವೈತಿ**—ತಂದೆಯಿಂದ ಹುಟ್ಟಿದ ಮಗನಿಗೆ ಪಿತೃತ್ವಾಂಶದಲ್ಲಿ ಭೇದವಿದೆ. ಮಗ ತಂದೆ ಎನಿಸುವುದಿಲ್ಲ. **ಮೀಮಾಂಸಕ**—ತಂದೆ ನಿಮಿತ್ತ ಕಾರಣನಾಗಿದ್ದಾನೆ. ಉಪಾದಾನಕಾರಣ ಸ್ಥಳದಲ್ಲಿ ನಾವು ಅಭೇದವನ್ನು ಹೇಳುತ್ತೇವೆ. **ಅದ್ವೈತಿ**—ಹಗ್ಗ ಹಾವಿಗೆ ಉಪಾದಾನ. ಹಗ್ಗ ಹಾವೆನಿಸುವುದಿಲ್ಲ. ಅಭೇದವಿಲ್ಲ ಇದು ವ್ಯಭಿಚಾರ. **ಮೀಮಾಂಸಕ**—ಹಾವಿಗೆ ಹಗ್ಗ ಮಾತ್ರವಲ್ಲದೆ ಅಜ್ಞಾನವೂ ಕಾರಣ ವಾದ್ದರಿಂದ ಅದು ಮಿಥ್ಯೆ ಎನಿಸಿತು. ಜಗತ್ತಿಗೆ ಬ್ರಹ್ಮ ಒಂದೇ ಕಾರಣ. ಅದರಿಂದ ಸತ್ಯ. **ಅದ್ವೈತಿ**—ಜಗತ್ತಿಗೆ ಬ್ರಹ್ಮ ಒಂದೇ ಕಾರಣವಲ್ಲ, ಅಜ್ಞಾನವೂ ಕಾರಣವಾಗಿದೆ ಎನ್ನುತ್ತೇವೆ. ಅದರಿಂದ ಒಂದೇ ಕಾರಣವಾಗಿದೆ ಎನ್ನುವ ಹೇತು ಅಸಿದ್ಧ.

ಮೀಮಾಂಸಕ—ಹಾಗಾದರೆ ಬೇರೇ ಹೇತುವನ್ನು ಹೇಳುತ್ತೇನೆ. ಅರ್ಥಕ್ರಿಯಾಕಾರಿ ಯಾದ್ದರಿಂದ ಜಗತ್ತು ಸತ್ಯ. **ಅದ್ವೈತಿ**—ಖೋಟಾ ನಾಣ್ಯದಿಂದಲೂ **ತಿಳಿಯದೆ** ಕೆಲವೊಮ್ಮೆ ವ್ಯವಹಾರ ನಡೆಯುವುದುಂಟು. ಸತ್ಯದಿಂದಲೆ ಅರ್ಥ**ಕ್ರಿಯೆ** ಎಂದು ನಿಯಮಕ್ಕೆ ವ್ಯಭಿಚಾರವಿದೆ.

ಮೀಮಾಂಸಕ—ಜಗತ್ತು ಮಿಥ್ಯೆ ಎನ್ನುವುದಾದರೆ ಬ್ರಹ್ಮನಲ್ಲಿ **ಜಗತ್ತನ್ನು** ಆರೋಪಿಸಬೇಕು. ಅದಕ್ಕೆ ಮೊದಲು ಒಂದು ಸತ್ಯಜಗತ್ತನ್ನು ಹಿಂದೆ **ಕಂಡಿರಬೇಕು**. ಅದರಿಂದ **ಸತ್ಯಜಗತ್ತು** ಸಿದ್ಧವಾಗುತ್ತದೆ. **ಅದ್ವೈತಿ**—ಆರೋಪಕ್ಕೆ **ಸತ್ಯಜಗತ್ತನ್ನೇ** ಕಂಡಿರಬೇಕಾಗಿಲ್ಲ, **ಮಿಥ್ಯಾಜಗತ್ತನ್ನು** ಕಂಡರೂ ಆರೋಪ **ಕೂಡುತ್ತದೆ. ಅದರಿಂದ**

ಈಗಿನ ಜಗದ್‌ಭ್ರಮಕ್ಕೆ ಹಿಂದಿನ ಜಗದ್‌ಭ್ರಮ ಕಾರಣ. ಅದಕ್ಕೂ ಅದರ ಹಿಂದಿನ ಜಗದ್‌ಭ್ರಮ ಕಾರಣ. ಹೀಗೆ ಜಗದ್‌ಭ್ರಮ ಅಂಧ ಪರಂಪರೆಯೆಂದು ಒಪ್ಪುತ್ತೇವೆ.

ಮೀಮಾಂಸಕ—'ಅಕ್ಷಯ್ಯಂ ಹವ್ಯೈ ಚಾತುರ್ಮಾಸ್ಯಯಾಜಿನಃ ಸುಕೃತಂ ಭವತಿ' ಎಂದು ಕರ್ಮಫಲವನ್ನು ವೇದವು ಶಾಶ್ವತ ಸತ್ಯ ಎನ್ನುತ್ತಿದೆ. **ಅದ್ವೈತಿ**—ಗೌಣೀ ಲಕ್ಷಣಾ ಎಂದು ಮುಂತಾಗಿ ನಾನಾ ಶಬ್ದವೃತ್ತಿಗಳಿಂದ ವೇದ ಕರ್ಮವನ್ನು ಪ್ರಶಂಸೆ ಮಾಡುತ್ತಿದೆ. ವೇದಾಭ್ಯಾಸದಿಂದ ಮೀಮಾಂಸಕನ ಬುದ್ಧಿ ಜಡವಾಗಿರುವುದರಿಂದ ನಿನಗೆ ಇದು ತಿಳಿಯುವುದಿಲ್ಲ. ಕರ್ಮ ಪ್ರಶಸ್ತವಾಗಿದೆ, ಅದನ್ನು ಮಾಡೆಂದು ತಿಳಿಸಲು ಹೊರಟಿದೆ ವೇದ, ಕರ್ಮ ಫಲವನ್ನು ಶಾಶ್ವತವೆಂದು ತಿಳಿಸುವ ಉದ್ದೇಶ ಅದಕ್ಕೆ ಇಲ್ಲ. ಹೀಗೆ ಜಗತ್ತು ಸತ್ಯ ಎನ್ನಲು ಯಾವ ಪ್ರಮಾಣವೂ ಇಲ್ಲ.

ಮಿಥ್ಯೆ ಎನ್ನಲು ಶ್ರುತಿಯುಕ್ತಿಗಳಿವೆ. ಸೃಷ್ಟಿಗೆ ಮೊದಲು ಜಗತ್ತಿರಲಿಲ್ಲ. ತಿರುಗಿ ಲಯಾನಂತರವೂ ಇಲ್ಲ. ಸತ್ಯವೆನ್ನುವುದಾದರೆ ಮೂರುಕಾಲದಲ್ಲಿಯೂ ಇರಬೇಕು. ಬ್ರಹ್ಮ ಒಂದೇ ಸತ್ಯ. ಅದು ಮೂರು **ಕಾಲದಲ್ಲಿಯೂ** ಇದೆ. **ಜಗತ್ತು** ಆದ್ಯಂತಗಳಲ್ಲಿ ಇಲ್ಲದ್ದು ನಡುವೆ ಕಾಣಿಸಿಕೊಳ್ಳುವುದು ಅವಾಸ್ತವವಾದ ಮನಸ್ಸಿನ ಕಲ್ಪನೆಯೆ ಸರಿ **ಆದರೂ ಅದನ್ನು ಸತ್ಯವೆಂದೇ ಅಜ್ಞರು ಭಾವಿಸುತ್ತಾರೆ.'**

—ಇದು ಶ್ರೀಧರವ್ಯಾಖ್ಯಾನ.

ಇಲ್ಲಿ ಜಗತ್‌ಸತ್ಯತ್ವ **ಪ್ರತಿಪಾದನೆಯಂತೆ** ಕಂಡು ಬರುವುದೆಲ್ಲ ಪೂರ್ವಪಕ್ಷ, **ಅದ್ವೈತಪರವಾಗಿ ಮಾಡಲು** ಶಕ್ಯವಾದುದೆಲ್ಲ ಸಿದ್ಧಾಂತ ಎಂದಿಟ್ಟುಕೊಂಡು **ವ್ಯಾಖ್ಯಾನ ಮಾಡಿದ್ದಾರೆ.** ಬ್ರಹ್ಮಸೂತ್ರಗಳ ವಿಷಯದಲ್ಲಿ ಅವರ ಭಾಷ್ಯ ಹೀಗೇ **ಮಾಡಿದೆ. ಪರ್ಯಾಯವಾಗಿ** ಸೂತ್ರದ ನಿರಾಕರಣೆಯಾಗಿದೆ ಹೊರತು **ವ್ಯಾಖ್ಯಾನವಲ್ಲ, ಹಾಗೆ ಭಾಗವತದ** ವಿಷಯದಲ್ಲಿಯೂ ಮಾಡಿದ್ದಾರೆ. ವೀರರಾಘವ **ವ್ಯಾಖ್ಯಾನ ಹೇಳುವಂತೆ** ಜಗತ್ ಸತ್ಯತ್ವವಾದಿಗಳೂ 'ದ್ರವಿಣ ಜಾತಿ ವಿಕಲ್ಪಪಥೈಃ **ಉಪಮೀಯತೇ' ಎಂಬಲ್ಲಿವರೆಗೆ ಹೇಳಿದ್ದೆಲ್ಲ** ಮಿಥ್ಯಾತ್ವ ಸಾಧನೆಯ ಅನುವಾದ. **'ವಿತಥಮನೋವಿಲಾಸಂ ಋತಮಿತ್ಯವಯಂತ್ಯಬುಧಾಃ'** 'ಇದು ಕೇವಲ ವಿತಥ ಮನೋವಿಲಾಸ' **ವ್ಯರ್ಥವಾದ ಮನಸ್ಸಿನ ಅವಾಸ್ತವ** ಕಲ್ಪನೆ. ಅದನ್ನು ಅಜ್ಞಾನಿಗಳು 'ಋತಂ' ನಿಜವೆಂದು **ತಿಳಿಯುತ್ತಾರೆ' ಎಂದು ಒಂದೇ** ಮಾತಿನಲ್ಲಿ ನಿರಾಕರಣ ಮಾಡಲು ಶಕ್ಯವಿದೆ. **ಏಕೆಂದರೆ ಮಿಥ್ಯಾತ್ವ ಅನುಭವಬಾಧಿತವಾಗಿದೆ.** [೧]ಸುದರ್ಶನ ಸೂರಿಯ ಶುಕಪಕ್ಷಿಯ **ವ್ಯಾಖ್ಯಾನದಲ್ಲಿ ಹಾಗೇ ಹೇಳಿದೆ.**

---

೧. ಕುದೃಷ್ಟೀನಾಂ ವಿತಥಂ **ಮನೋವಿಲಸಿತಂ** । ಪ್ರತಿಪನ್ನೋಪಾಧೌ ಬಾಧಾದರ್ಶನಾತ್ ಕುದೃಷ್ಟ್ಯಭಿಮತಂ ಕಾರ್ಯಮಿಥ್ಯಾತ್ವಂ ಋತಂ ಪ್ರಾಮಾಣಿಕಮಿತಿ ಅಬುಧಾ ಅವಯಂತಿ ॥ ನ ತು ವಿದ್ವಾಂಸ ಇತ್ಯರ್ಥಃ ॥ -ಸುದರ್ಶನ ಸೂರಿಃ

'ಇದಂ ಅಪಿ, ಅಪಾಲಕಂ, ಈಶ್ವರ ವರ್ಜಿತಂ, ನ ಮತ್ತೋಽನ್ಯ ಈಶ್ವರಃ ಚೇತನತ್ವಾತ್' ಇತ್ಯಾದಿ ತರ್ಕೈರ್ವದಂತಿ ಚೇತ್। ಅಥೋ ಇತ್ಯನೇನ ತದಪಿ ವಚನಂ ಭಗವತ್ಪ್ರೇರಣಯೈವೇತ್ಯುಕ್ತಂ ।

ತಸ್ಮಾದಥೋ ಅಥೇತ್ಯೇತದ್ಧೇತ್ವರ್ಥೇ ಸಮುದೀರಿತಂ ।

ಇತಿ ಶಬ್ದನಿರ್ಣಯೇ ॥

ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಂ ॥ ಇತಿ ಚ ॥

ಈ ಜಗತ್ತು 'ಅಪಿ' ಅ-ಪಿ, ಪಾಲಕನಿಲ್ಲದ್ದು, ಈಶ್ವರನಿಲ್ಲದ್ದು, 'ಈಶ್ವರನೆನ್ನಲಾದ ವ್ಯಕ್ತಿಯೂ ಚೇತನನೇ ಎಂದಮೇಲೆ ಅವನು ಚೇತನನಾದ ನನ್ನಿಂದ ಬೇರೆಯಲ್ಲ' ಇತ್ಯಾದಿ ತರ್ಕಗಳಿಂದ ಈ ಜಗತ್ತು ನನಗಿಂತ ಬೇರೆ ಈಶ್ವರನಿಲ್ಲದ್ದೆಂದು ಹೇಳುವುದೂ ಕೂಡ 'ಅಥೋ' ಆ ಈಶ್ವರನ ಪ್ರೇರಣೆಯಿಂದಲೇ ಎಂದು 'ಅಥೋ' ಎಂಬುದರಿಂದ ಉಕ್ತವಾಯಿತು.

ತಸ್ಮಾತ್, ಅಥೋ ಅಥ ಎಂದು ಮೂರು ಶಬ್ದಗಳೂ ಹೇತ್ವರ್ಥಕವಾಗಿವೆ ಎಂದು ಶಬ್ದನಿರ್ಣಯದಲ್ಲಿ ಹೇಳಿದೆ.

'ಜಗತ್ತು ಅಸತ್ಯ, ಜ್ಞಾನಬಾಧ್ಯ, ಈಶ್ವರನಿಲ್ಲದ್ದು ಎಂದು ಅಸುರ ಸ್ವಭಾವದವರು ಹೇಳುತ್ತಾರೆ' ಎಂದು ಗೀತೆಯಲ್ಲಿ 'ಅನೀಶ್ವರ ವಾದಿಗಳಿದ್ದಾರೆ' ಎಂದಿದೆ.

ವೇದೋಕ್ತೋ ಜೀವವ್ಯತಿರಿಕ್ತೇಶ್ವರೋ ನ ತರ್ಕೈರಪನೇತುಂ ಶಕ್ಯಃ। ಯತಸ್ತರ್ಕಾ ವ್ಯಭಿಚಾರಿಣಃ। ಮೃಷೈವ ಚ ಕ್ವಚಿತ್ ತರ್ಕಃ। ಇಷ್ಟ ಸಾಧನಾದಿತರ್ಕಸ್ತು ವ್ಯಭಿಚಾರೀ। ಶರೀರಸಮ್ಮಿತ ಆತ್ಮೇತ್ಯಾದಿದರ್ಶನ ಪರಿಕಲ್ಪಿತಸ್ತು ಮೃಷೈವ ।

ವೇದೋಕ್ತನಾದ್ದರಿಂದ ಜೀವವ್ಯತಿರಿಕ್ತೇಶ್ವರನನ್ನು ಕೇವಲ ತರ್ಕಗಳಿಂದ ಅಪಲಾಪ ಮಾಡಲು ಶಕ್ಯವಿಲ್ಲ. ಏಕೆಂದರೆ ತರ್ಕಗಳು ಕೆಲವು ವ್ಯಭಿಚಾರಿ, ಕೆಲವು ಬಾಧಿತವಾಗಿವೆ. ಇಷ್ಟಸಾಧನಾದಿ ತರ್ಕ ವ್ಯಭಿಚಾರಿ. ಶರೀರ ಪರಿಮಾಣದವನು ಆತ್ಮ ಎಂದು ಮುಂತಾಗಿ ದರ್ಶನಗಳಲ್ಲಿ ಕಲ್ಪಿತವಾದ ತರ್ಕ ಬಾಧಿತ.

'ಈಗ ನಾನು ಉಣ್ಣುವ ಅನ್ನ ಇಷ್ಟ ಸಾಧನ, ಅನ್ನವಾದ್ದರಿಂದ, ನಿನ್ನೆ ಉಂಡ

ಅನ್ನದಂತೆ' ಇದೊಂದು ಇಷ್ಟಸಾಧನತರ್ಕ. ವಿಷಮಿಶ್ರಿತಾನ್ನದಲ್ಲಿ ಈ ಅನ್ನತ್ವ ಹೇತುವು ವ್ಯಭಿಚಾರಿ. 'ಜೀವಾತ್ಮ ಶರೀರಪರಿಮಾಣದವನು. ಶರೀರದಲ್ಲಿರುವ ಎಲ್ಲ ಇಂದ್ರಿಯಗಳ ಸಂಬಂಧವಿರುವುದರಿಂದ' ಎಂದು ಜೈನದರ್ಶನದಲ್ಲಿ ಕಲ್ಪಿತವಾದ ತರ್ಕ. 'ಜೀವಾತ್ಮ ವ್ಯಾಪಕ. ಎಲ್ಲೆಡೆ ಅವನ ಕಾರ್ಯಕಂಡುಬರುವುದರಿಂದ' ಎಂದು ವೈಶೇಷಿಕದರ್ಶನದಲ್ಲಿ ಕಲ್ಪಿತವಾದ ತರ್ಕ. ಬ್ರಹ್ಮಸೂತ್ರದಲ್ಲಿ ಜೀವಾಣುತ್ವವನ್ನು ನಿರ್ಣಯಿಸಿರುವುದರಿಂದ ಈ ತರ್ಕಗಳು ಬಾಧಿತ.

ಅತೋ ಭಯಬುದ್ಧೀನಾಂ ಬುದ್ಧಿವ್ಯವಹಿತಯ ಏವ ಭವಂತಿ । ನತು ಧೀರಾಣಾಂ । ವಿಕಲ್ಪಃ ವೇದವಿರುದ್ಧಕಲ್ಪನಾಽಂಧಪರಂಪರಯೈವಾನ್ವಹ ಮುಷಿತಃ । ಯಸ್ಮಾದ್ ಭಾರತ್ಯಪಿ ಭ್ರಮತಿ ಬಹುಧಾ ವದತಿ ।

ಬಹೂಕ್ತಿರನ್ಯಥಾಜ್ಞಪ್ತಿಃ ಪರಿವೃತ್ತಿಶ್ಚ ಕಥ್ಯತೇ ।
ಭ್ರಮ ಇತ್ಯೇವ ವಿದ್ವದ್ಭಿಸ್ತಥಾ ಚಂಕ್ರಮಣಂ ಕ್ವಚಿತ್ ॥

ಇತಿ ಶಬ್ದನಿರ್ಣಯೇ ॥

ಉರುವೃತ್ತಿಭಿರೂಢಜವಾ ಅನಂತಗುಣಕರ್ಮತ್ವಾದ್ ಭಗವತಃ ಬಹುಗುಣಕರ್ಮಾಣಿ ವಕ್ತುಂ ವೇಗವತೀ ವೇದವಾಕ್ । ಅತೋ ವೇದೇಽಪಿ ಬಹುಧಾವಚನಾತ್ ತದರ್ಥನಿರ್ಣಯಾಭಾವಾತ್ ವಿರುದ್ಧಕಲ್ಪನಾ ಯುಕ್ತಾಽಸುರಾಣಾಂ ।

ಆದರಿಂದ ಈ ತರ್ಕಗಳು ವೇದಾರ್ಥಗ್ರಹಣದಲ್ಲಿ ಸ್ಥಿರಬುದ್ಧಿ ಇಲ್ಲದವರಿಗೇ ಬುದ್ಧಿಹಲ್ಲಟಕ್ಕೆ ಕಾರಣವಾಗುವುವು. ಸ್ಥಿರಬುದ್ಧಿ ಇರುವವರಿಗೆ ಅಲ್ಲ. 'ವಿಕಲ್ಪ' ಅಂದರೆ ವೇದವಿರುದ್ಧವಾದ ಕಲ್ಪನೆ ಅಜ್ಞರ ಉಪದೇಶ ಪರಂಪರೆಯಿಂದ ಅವಿರತವಾಗಿ ಲೋಕದಲ್ಲಿ ಹರಡಿದೆ. ವೇದದಲ್ಲಿ ಕೆಲವು ಮಾತು ಅನೇಕಾರ್ಥಕವಾಗಿರುವುದೂ ಇದಕ್ಕೆ ಕಾರಣವಾಗುತ್ತದೆ.

'ಅನೇಕಾರ್ಥಕ ಶಬ್ದಗಳನ್ನು ಪ್ರಯೋಗಿಸುವುದು, ವಿಪರೀತಜ್ಞಾನ, ವಿನಿಮಯ ಮತ್ತು ಎಲ್ಲೆಲ್ಲೋ ಓಡಾಡುವುದು—ಇವುಗಳನ್ನು ಬಲ್ಲವರು 'ಭ್ರಮ' ಎಂದೇ ಕರೆಯುತ್ತಾರೆ' ಎಂದು ಶಬ್ದನಿರ್ಣಯದಲ್ಲಿದೆ.

ಭಗವಂತನ ಅನಂತಗುಣಕರ್ಮಗಳು 'ಉರು ವೃತ್ತಿ'ಗಳು ಜಗತ್ತಿನ ಸೃಷ್ಟ್ಯಾದಿಗಳಿಗೆ 'ವೃತ್ತಿ' ಪ್ರವರ್ತಕವಾಗಿದ್ದು 'ಉರು' ಅನಂತವಾಗಿರುವುದ ರಿಂದ. ಅವುಗಳನ್ನು 'ಊಢಜವಾ' ಅಲ್ಪಶಬ್ದಗಳಿಂದ ಹೇಳಲು ತ್ವರೆ

ಮಾಡುತ್ತ ವೇದವಾಣಿ ಕೆಲವೆಡೆ ಅನೇಕಾರ್ಥಕ ಶಬ್ದಗಳನ್ನು ಪ್ರಯೋಗಿಸುತ್ತದೆ. ಹೀಗಾಗಿ ಅಸುರರಿಗೆ ವೇದವಾಣಿಯ ವಿವಕ್ಷಿತಾರ್ಥ ನಿರ್ಣಯವಾಗದಿರುವುದರಿಂದ ವೇದವಿರುದ್ಧ ಕಲ್ಪನೆ ಉಂಟಾಗುವುದು ಸಹಜವೆ.

ಯಸ್ಮಾದ್ ಗರ್ಭಸ್ಥಸ್ಯ ಜೀವಸ್ಯೇಶ್ವರತ್ವಂ ನಾಸ್ತಿ ಅತೋ ನಿಧನಾನಂತರಂ ಚ ನರಕಾದಿಗಮನಾನ್ನ ವಿದ್ಯತೇ। ಅನಿಮಿತ್ತಕಂ ಭಗವನ್ನಿಮಿತ್ತಮೇವ ತಸ್ಯಾಂತರಾ ಭಾತಿ ಮೃಷಾತ್ವಯಿ ಜೀವೇ। ನ ತು ವಸ್ತುತಸ್ತ್ವಂ ಜೀವಃ। ಏಕರಸೇ ಪ್ರಧಾನಸಾರೇ। ನ ಚ ಜೀವೋ ವಸ್ತುತಃ ಸರ್ವೋತ್ತಮಸಾರಃ। ಮೃಷೈವ ತಥಾ ಮನ್ಯಂತೇ।

ಹುಟ್ಟುವುದಕ್ಕಿಂತ ಮೊದಲು ಜೀವರು ಗರ್ಭದಲ್ಲಿದ್ದಾಗ ದುಃಖಿಗಳಾಗಿದ್ದರಿಂದ ಆಗ ಅವರಲ್ಲಿ 'ಇದಂ ನಾಸ' ಈ ಈಶ್ವರತ್ವವಿಲ್ಲ. ಬಳಿಕ 'ನ ಭವಿಷ್ಯತ್' ಮರಣಾನಂತರವೂ ಕೂಡ ನರಕಾದಿಗಳಿಗೆ ಹೋಗುವುದರಿಂದ ಆಗಲೂ ಈಶ್ವರತ್ವವಿಲ್ಲ. 'ಅನಿಮಿತ್ತಕಂ' 'ಅ'ನಾಮಕನಾದ ಭಗವಂತನ ನಿಮಿತ್ತವಾಗಿಯೇ ಜೀವನಿಗೆ ಮಧ್ಯದ ಜೀವನ ಕಾಲದಲ್ಲಿ ತೋರುತ್ತದೆ. 'ಮೃಷಾತ್ವಯಿ' ನಿಜವಾಗಿ ನೀನಲ್ಲದ ಜೀವನಲ್ಲಿ ತೋರುತ್ತದೆ. ವಸ್ತುತಃ ಜೀವನು ನೀನಲ್ಲ, ಈಶ್ವರನಲ್ಲ. ಏಕೆಂದರೆ ನೀನು 'ಏಕರಸ' ಎಲ್ಲ ಉತ್ತಮರಲ್ಲಿ ಉತ್ತಮ, ಸರ್ವೋತ್ತಮೋತ್ತಮ. ಜೀವನು ವಸ್ತುತಃ ಸರ್ವೋತ್ತಮರಾದ ರಮಾಬ್ರಹ್ಮಾದಿಗಳಲ್ಲಿ 'ಸಾರ', ಉತ್ತಮನು ಅಲ್ಲ. ಭ್ರಾಂತಿಯಿಂದಲೇ ಹಾಗೆ ತಿಳಿಯುತ್ತಾರೆ.

ಅತೋ ಭ್ರಾಂತ್ಯಾ ದ್ರವಿಣವಾನ್ ಅಭಿಜನ್ಮವಾನ್ ಇತ್ಯಾದಿವಿರುದ್ಧ ಕಲ್ಪನಾಪಥ್ಯೈಃ ಉಪಗೀಯತೇ। ಯತೋ ಭವಾನೇವ ದ್ರವಿಣವಾನ್। ಯತಶ್ಚ ತಪೋದಮಾದ್ಯಾ ಅಭಿಜನ್ಮಕಾರಣಭೂತಾ ಗುಣಾಶ್ಚ ಭವತ ಏವ।

ಅತೋ ಮಿಥ್ಯಾಮನೋವಿಲಾಸಂ ಜೀವೇಶ್ವರತ್ವಂ ಬುಧಾ ಅವಯಂತಿ

ಗುಣಾ ಏವಾಭಿಜಾತ್ಯಾಖ್ಯಾಸ್ತದ್ವಾನೇವಾಭಿಜಾತಿಮಾನ್।
ಅತೋಽಭಿಜಾತ್ಯವಾನ್ ವಿಷ್ಣುಸ್ತದನ್ಯೇ ತೂಪಚಾರತಃ॥

ಇತಿ ಶಬ್ದನಿರ್ಣಯೇ॥

ಅದರಿಂದ ಭ್ರಾಂತಿಯಿಂದ 'ಆಢ್ಯೋಽಭಿಜನವಾನಸ್ಮಿ' ಎಂಬಂತೆ ನಾನೇ ಪೂರ್ಣಐಶ್ವರ್ಯ ಉಳ್ಳವನು, ನಾನೇ ಒಳ್ಳೆಯ ಕುಲದಲ್ಲಿ ಹುಟ್ಟಲು ಬೇಕಾಗುವ ತಪ ದಮ ಮುಂತಾದ ಸದ್ಗುಣಭರಿತನು ಎಂದು ಮುಂತಾಗಿ ವಿರುದ್ಧಕಲ್ಪನಾಮಾರ್ಗಗಳಿಂದ ಹೊಗಳಿಸಿಕೊಳ್ಳುತ್ತಾನೆ. ಏಕೆಂದರೆ ನೀನೆ ಪೂರ್ಣಐಶ್ವರ್ಯವುಳ್ಳವನು. ಮತ್ತು ಒಳ್ಳೆಯ ಕುಲದಲ್ಲಿ ಹುಟ್ಟುವವನಿಗೆ ಬೇಕಾಗುವ ತಪಸ್ಸು ದಮ ಮುಂತಾದ ಗುಣಗಳು ನಿನ್ನಲ್ಲಿಯೇ ಇರುವವುಗಳು.

ಅದರಿಂದ 'ಇದಂ ವಿತಥಮನೋವಿಲಾಸಂ' ಎಂದರೆ, ಈ ಜೀವನೇ ಈಶ್ವರನೆಂಬುದು ಅಯಥಾರ್ಥವಾದ ಮನಸ್ಸಿನ ಕಲ್ಪನೆ ಎಂದು ಜ್ಞಾನಿಗಳು ತಿಳಿಯುವರು.

'ತಪಸ್ಸು ದಮ ಮುಂತಾದ ಗುಣಗಳೇ ಒಳ್ಳೆಯ ಕುಲದಲ್ಲಿ ಹುಟ್ಟಲು ಕಾರಣವೆನಿಸುತ್ತವೆ. ಆ ಗುಣಉಳ್ಳವನೆ ಸತ್ಕುಲಪ್ರಸೂತನೆನಿಸುತ್ತಾನೆ. ಅದರಿಂದ ಮುಖ್ಯವಾಗಿ ಸತ್ಕುಲಪ್ರಸೂತನೆಂದರೆ ಆ ಗುಣಗಳುಳ್ಳ ವಿಷ್ಣುವೆ. ಇತರರು ಅಮುಖ್ಯವಾಗಿ ಹಾಗೆ ಕರೆಸಿಕೊಳ್ಳುತ್ತಾರೆ' ಎಂದು ಶಬ್ದನಿರ್ಣಯ ದಲ್ಲಿದೆ.

ಯೇ ಜೀವಮೀಶಂ ಪ್ರವದಂತಿ ತರ್ಕೈ–
ಸ್ತಚ್ಚೇಶ್ವರೋ ವಚನಂ ಸಂದಧಾತಿ ।
ನಾಸೀದಾದೌ ಮರಣೇ ನೋ ಭವಿಷ್ಯನ್
ಮೃಷಾ ತತೋ ಹೀಶಿತೃತ್ವಂ ಸ್ವಪೇಷು ॥

ಇತಿ ವಿಪರೀತಶ್ರುತಿಃ ॥

'ಯಾರು **ಶುಷ್ಕ ತರ್ಕ**ಗಳಿಂದ ಜೀವನನ್ನು ಈಶ್ವರನೆಂದು ಹೇಳುವರೋ ಅವರಿಗೆ **ಹಾಗೆ ಹೇಳಲು** ಆ **ಈಶ್ವರನೇ ಪ್ರೇರಣೆ** ಮಾಡುತ್ತಿದ್ದಾನೆ. ಏಕೆಂದರೆ ಅದು **ಬಾಧಿತ. ಮೊದಲಿಗೆ** ಗರ್ಭದಲ್ಲಿದ್ದಾಗ ಜೀವನಿಗೆ ಈಶ್ವರತ್ವವಿರಲಿಲ್ಲ. **ಸತ್ತನಂತರ** ಬರುವುದಿಲ್ಲ. ಅದರಿಂದ ಅಜ್ಞರಾದ ಜೀವರಲ್ಲಿ ಈಶ್ವರತ್ವ ಮಿಥ್ಯಾ' ಎಂದು ವಿಪರೀತಶ್ರುತಿ ಹೇಳಿದೆ.

ಇದು ಈ ಪದ್ಯಕ್ಕೆ ಮೂಲ **ಶ್ರುತಿ.** ಹೃಷೀಕೇಶತೀರ್ಥೀಯ ಪಾಠದಲ್ಲಿ ಇದು 'ವಿಪೀತಶ್ರುತಿ'.

ಯೇ ಜಗತ್ ಪ್ರವದಂತ್ಯಜ್ಞಾ ಜೀವಾದನ್ಯೇಶವರ್ಜಿತಂ ।
ತೇಷಾಮಪಿ ತು ತಾಂ ವಾಚಮೀಶ ಏವ ದದಾತ್ಯಜಃ ।
ನ ಚ ತರ್ಕೈರ್ಭವೇದೀಶೋ ಜೀವೋ ವೇದವಿರೋಧತಃ ।
ವ್ಯಭಿಚಾರಿಣೋ ಯತಸ್ತರ್ಕಾ ಇಷ್ಟಸಾಧನಗಾ ಅಪಿ ।
ಕ್ವಚಿತ್ ಕ್ವಚಿನ್ಮೃಷಾ ತರ್ಕಾಃ ಕಣಾದಾದಿ ಪ್ರದರ್ಶಿತಾಃ ।
ತತ್ವನಿರ್ಣಯಭೀರೂಣಾಂ ವ್ಯವಧಾನಕರಾಸ್ತತಃ ।
ನೈವ ತು ಸ್ಥಿರಬುದ್ಧೀನಾಂ ಕುರ್ಯುಸ್ತೇ ಬುದ್ಧಿಚಾಲನಂ ।
ಪಾರಂಪರ್ಯೇಣ ಚಾಜ್ಞಾನಾಮುಕ್ತ್ಯಾ ಲೋಕೇಷು ವಿಸ್ತೃತಂ ।
ಪಶ್ಯತೇ ಚಾಪ್ಯಹರಹರ್ನ ತು ವಿದ್ವನ್ಮುಖೋದ್ಗತಂ ।
ಅನಂತಗುಣಕರ್ಮತ್ವಾದೀಶಸ್ಯೋಕ್ತೌ ಸುವೇಗಿತಾ ।
ವಕ್ಯಭೇದಮಿವಾಜ್ಞಾನಾಂ ನಾಭೇದಂ ಕುತ್ರಚಿಚ್ಛ್ರುತಿಃ ।
ಏಕ ಆತ್ಮಾಽದ್ವಯೇತ್ಯಾದಿಪದಾನಾಮರ್ಥನಿರ್ಣಯೇ ।

ನ ವರ್ತತೇ ಶ್ರುತಿರ್ಯಸ್ಮಾದ್ ಗುಣಾಂತರಕುತೂಹಲಾತ್ ।
ಅಥವಾ ಮೋಹನಾರ್ಥಾಯ ಸುರಾರೀಣಾಮನರ್ಹತಃ ।
ಕುತ್ರಚಿನ್ನಿರ್ಣಯವಚಃ ಸುರಾಣಾಮರ್ಥಸಿದ್ಧಯೇ ।
ನಹೀಶಿತೃತ್ವಂ ಗರ್ಭಸ್ಥೇ ನಾಪ್ಯಸೌ ನಿರಯೋಪಗೇ ।
ಮೃಷಾ ತದೀಶ್ವರಾಭೇದಃ ಸರ್ವೋತ್ಕರ್ಷಶ್ಚ ಜೀವಗಃ ।
ಧನವತ್ತ್ವಂ ಚ ಕರ್ತೃತ್ವಂ ಬಲವತ್ತ್ವಂ ಚ ವಿಷ್ಣವಿ ।
ಅತೋ ಜೀವೇಶ್ವರಾಭೇದಂ ಮಿಥ್ಯೇತಿ ಕವಯೋ ವಿದುಃ ॥

ಇತಿ ತಂತ್ರಭಾಗವತೇ ।

'ಜಗತ್ತಿಗೆ ಜೀವನಿಂದ ಬೇರೆಯಾಗಿ ಒಬ್ಬ ಈಶ್ವರನಿಲ್ಲ ಎಂದು ಅಜ್ಞರು ಹೇಳುತ್ತಾರೆ. ಅವರಿಗೆ ಹಾಗೆ ಹೇಳಲು ಆ ಈಶ್ವರನೇ ಪ್ರೇರಣೆ ಮಾಡುತ್ತಾನೆ. ಏಕೆಂದರೆ ಜೀವನನ್ನು ಈಶ್ವರನೆಂದು ತರ್ಕಗಳಿಂದ ಸಾಧನೆ ಮಾಡಲಾಗದು. ವೇದ ವಿರೋಧವಿದೆ. ಮತ್ತು ಇಷ್ಟಸಾಧನತ್ವವನ್ನು ಸಾಧಿಸಲು ಹೊರಡುವ ತರ್ಕಗಳು ಕೂಡ ಕೆಲವು ಕಡೆ ವ್ಯಭಿಚಾರಿಗಳಾಗಿರುವುದು ಕಂಡಿದೆ. ಕಣಾದ ಜೈನ ಮುಂತಾದವರು ತೋರಿಸಿದ ಕೆಲವು ತರ್ಕಗಳು ಬಾಧಿತವಾಗಿರುವುದೂ ಕಂಡಿದೆ. ಇಂಥ ತರ್ಕಗಳು

ತತ್ವನಿರ್ಣಯ ವಿಷಯದಲ್ಲಿ ಬುದ್ಧಿಸ್ಥಿರತೆ ಇಲ್ಲದವರಿಗೆ ಬುದ್ಧಿಗೆ ತಡೆಯುಂಟು ಮಾಡುತ್ತವೆ. ಸ್ಥಿರಬುದ್ಧಿಯವರಿಗೆ ಅವು ಬುದ್ಧಿಯನ್ನು ವಿಚಲಿತಗೊಳಿಸಲಾರವು. ಪರಂಪರೆಯಿಂದ ಅಜ್ಞರು ಹೇಳಿಕೊಂಡು ಬಂದಿದ್ದರಿಂದ ಲೋಕದಲ್ಲಿ ಪ್ರಚಾರಕ್ಕೆ ಬಂದಿದ್ದು ಪ್ರತಿನಿತ್ಯ 'ನಾನೇ ಈಶ್ವರನೆಂ'ದು ಹೇಳಲ್ಪಡುತ್ತಿದೆ. ಜ್ಞಾನಿಗಳ ಮುಖದಿಂದ ಇಂಥ ಮಾತು ಬರುವುದಿಲ್ಲ. ಭಗವಂತನಿಗೆ ಅನಂತ ಗುಣಕರ್ಮಗಳಿರುವುದರಿಂದ ಅಲ್ಪಶಬ್ದಗಳಿಂದ ಬಹುಗುಣಗಳನ್ನು ಹೇಳುವಲ್ಲಿ ತ್ವರೆ ವೇದವಾಣಿಗೆ ಇರುತ್ತದೆ. ಅದರಿಂದ ಕೆಲವೆಡೆ ಅಜ್ಞರಿಗೆ ಜೀವೇಶ್ವರಾಭೇದವನ್ನು ಹೇಳುವಂತೆ ಕಾಣುತ್ತದೆ. ವಸ್ತುತಃ ಶ್ರುತಿ ಎಲ್ಲಿಯೂ ಅಭೇದವನ್ನು ಹೇಳುವುದಿಲ್ಲ. ಏಕಃ ಆತ್ಮಾ ಅದ್ವಿತೀಯಃ ಇತ್ಯಾದಿ ಪದಗಳಿಗೆ ಅನೇಕ ಅರ್ಥಗಳಿದ್ದರೂ ಅರ್ಥನಿರ್ಣಯ ಮಾಡಲು ಶ್ರುತಿ ಹೊರಡುವುದಿಲ್ಲ. ಏಕೆಂದರೆ ಪರಮಾತ್ಮನ ಬೇರೆ ಗುಣಗಳನ್ನು ಹೇಳುವ ಕುತೂಹಲ ವಿರುತ್ತದೆ. ಅಥವಾ ಅಸುರರಿಗೆ ಯೋಗ್ಯತೆ ಇಲ್ಲದಿರುವುದರಿಂದ ಅವರಿಗೆ ಮೋಹವನ್ನು ಉಂಟುಮಾಡುವುದಕ್ಕಾಗಿ ಅರ್ಥನಿರ್ಣಯ ಮಾಡಿ ತೋರಿಸುವುದಿಲ್ಲ. ಕೆಲವು ಕಡೆ ಅರ್ಥನಿರ್ಣಯ ಮಾಡುವ ಮಾತು ಬರುವುದು ಸುರರಿಗೆ ಅರ್ಥನಿರ್ಣಯ ಸಿದ್ಧಿಗಾಗಿ. ಜೀವನಿಗೆ ಈಶ್ವರತ್ವ ಅವನು ಗರ್ಭಾವಸ್ಥೆಯಲ್ಲಿದ್ದಾಗ ಇರಲಿಲ್ಲ. ನರಕಕ್ಕೆ ಹೋದಾಗಲೂ ಇಲ್ಲ. ಅದರಿಂದ ಅವನಿಗೆ ಈಶ್ವರಾಭೇದವೂ ಸರ್ವೋತ್ತಮತ್ವವೂ ಸುಳ್ಳೇ. ಶ್ರೀಮಂತಿಕೆ ಕರ್ತೃತ್ವ ಬಲಶಾಲಿತ್ವಗಳು ವಿಷ್ಣುವಿನಲ್ಲಿಯೇ ಪೂರ್ಣವಾಗಿ ಇರುತ್ತವೆ. ಅದರಿಂದ ಜೀವೇಶ್ವರಾಭೇದ ಮಿಥ್ಯೆ ಎಂದು ಜ್ಞಾನಿಗಳು ತಿಳಿಯುತ್ತಾರೆ' ಎಂದು ತಂತ್ರಭಾಗವತದಲ್ಲಿ ಹೇಳಿದೆ.

ಜೀವಸ್ಯ ಜಗತಶ್ಚೈವ ಯದೀಶಾಭೇದತೋ ವಚಃ ।
ಅತಾತ್ವಿಕಂ ಜಗಚ್ಚೇತಿ ವಿಷ್ಣ್ವಧೀನತ್ವವಾಚಕಂ ।
ಅಭೇದಸ್ತು ಕುತಸ್ತಸ್ಯ ಪರಮಸ್ಯಾವರೇಣ ತು ।
ಮಿಥ್ಯಾತ್ವಂ ಚ ಕುತಸ್ತಸ್ಯ ಜಗತೋ ನಿತ್ಯವರ್ತನಾತ್ ॥

ಇತಿ ವಾರಾಹೇ ॥

'ಜೀವನಿಗೂ ಜಗತ್ತಿಗೂ ಈಶ್ವರನ ಅಭೇದವನ್ನು ಹೇಳುವಂತೆ ಕಾಣುವ ವಚನವೂ ಜಗತ್ತು ಮಿಥ್ಯೆ ಎಂದು ಹೇಳುವಂತೆ ಕಾಣುವ ವಚನವೂ ಜೀವಜಗತ್ತುಗಳಿಗೆ ವಿಷ್ಣ್ವಧೀನತ್ವವನ್ನು ಹೇಳುತ್ತಿದೆ. ಸರ್ವೋತ್ತಮನಾದ

ಅವನಿಗೆ ಅಧಮನಾದ ಜೀವನಿಂದ ಅಭೇದ ಹೇಗೆ ಸಾಧ್ಯ ? ಜಗತ್ತು ಸದಾ ಅರ್ಥಕ್ರಿಯಾಕಾರಿಯಾಗಿರುವುದರಿಂದ ಮತ್ತು ಅಬಾಧಿತವಾಗಿ ಸದಾ ಇರುವುದರಿಂದ ಅದಕ್ಕೆ ಮಿಥ್ಯಾತ್ವ ಹೇಗೆ ಕೂಡುತ್ತದೆ ?' ಎಂದು ವರಾಹಪುರಾಣದಲ್ಲಿ ಹೇಳಿದೆ.

❖❖❖

ಶ್ರುತಿಗೀತೆಯಲ್ಲಿ ಇಪ್ಪತ್ತೈದನೆ ಪದ್ಯ—

ಉದಗಾತ್‌ಪುಮಾನನುಗೀತಗುಣಾಂಶ್ಚ ಜುಷನ್
ಭಜತಿ ಸರೂಪತಾಂ ತದನು ತ್ವಮುತ ಜಹಾಸಿ ಜಿಹಾಸಿ ತಾಮ್ ।
ಅಹಿರಿವ ತ್ವಚಂ ಪರಮಾತ್ತಭಗಾಂ
ಮಹಸಿ ಮಹೀಯಸೇಽಷ್ಟಗುಣೋಽಪರಿಮೇಯಭಗಃ ॥ ೩೯ ॥

ವೇದದಲ್ಲಿ ಕೊಂಡಾಡಲ್ಪಡುವ ನಿನ್ನ ಗುಣಕರ್ಮಗಳನ್ನು ಉಪಾಸನೆ ಮಾಡುವವನು, ಅಂದರೆ ಗುರೂಕ್ತ ಕ್ರಮದಿಂದ ಶ್ರವಣ ಮನನ ಧ್ಯಾನಗಳನ್ನು ನಡೆಸುವವನು ಅಪರೋಕ್ಷ ಸಂಪಾದಿಸಿ ಪ್ರಾರಬ್ಧವನ್ನು ಕಳೆದುಕೊಂಡ ಬಳಿಕ ಮುಕ್ತನಾಗುತ್ತಾನೆ. ಸಾರೂಪ್ಯಾದಿ ಮೋಕ್ಷಗಳನ್ನು ಹೊಂದುತ್ತಾನೆ. ಇದಕ್ಕೆ ಅವನು ಸ್ವತಂತ್ರನಲ್ಲ, ನೀನೇ ಅವನ ಜೀವಾಚ್ಛಾದಕ ಪರಮಾಚ್ಛಾದಕಗಳ ಬಂಧಕಶಕ್ತಿಯನ್ನು ಸೆಳೆದುಕೊಂಡು, ಹಾವು ಪೊರೆ ಬಿಡುವಂತೆ ಅವನು ಆ ಆಚ್ಛಾದಕ ಪ್ರಕೃತಿಗಳನ್ನು ಬಿಟ್ಟು ನಾಶಗೊಳಿಸುವಂತೆ ಮಾಡುವಿ. ಅಷ್ಟ ಐಶ್ವರ್ಯ ಉಳ್ಳವನು ಅಪರಿಮಿತ ಷಡ್ಗುಣ ಉಳ್ಳವನು ನೀನೇ ಅವನೊಳಗಿದ್ದು ಅವನ ಮೂಲಕ ನೀನೇ ನಿನ್ನನ್ನು ಪೂಜಿಸುವೆ ಪೂಜಿಸಿಕೊಳ್ಳುವೆ.

ಪುಮಾನ್ ಅನುಗೀತ ಗುಣಾಂಶ್ಚ ಜುಷನ್ ಅನುಉದಗಾತ್

ಜೀವನು 'ಅನುಗೀತ' ವೇದೋಕ್ತವಾದ ನಿನ್ನ ಗುಣಕರ್ಮಗಳನ್ನು ಗುರುಮುಖದಿಂದ 'ಜುಷನ್' ಶ್ರವಣಮಾಡಿ ಮನನಧ್ಯಾನಗಳಿಂದ ಅಪರೋಕ್ಷ ಸಂಪಾದಿಸಿ ಬಳಿಕ 'ಉದಗಾತ್' ಮುಕ್ತನಾಗುತ್ತಾನೆ.

ತದನು ಸರೂಪತಾಂ ಭಜತಿ

'ತದನು' ಅಪರೋಕ್ಷದಿಂದ ಲಿಂಗಭಂಗ ಮಾಡಿಕೊಂಡ **ಬಳಿಕ** ಗುಣೋಪಾಸನೆಗೆ ಅನುಸಾರವಾಗಿ 'ಸರೂಪತಾಂ' **ಸಾರೂಪ್ಯಾದಿ** ಮೋಕ್ಷವನ್ನು **'ಭಜತಿ'** ಹೊಂದುತ್ತಾನೆ.

ಪರಮಾತ್ತ ಭಗಾಂ ತಾಂ ತ್ವಂ ಅಹಿರಿವ ತ್ವಚಂ ಜಹಾಸಿ ಉತ ಜಿಹಾಸಿ

'ಪರಮ' ಪರಮಾತ್ಮ ಶ್ರೀಹರಿ, ನಿನ್ನಿಂದ 'ಆತ್ತ' ಸೆಳೆಯಲ್ಪಟ್ಟ 'ಭಗ' ಆಚ್ಛಾದನ ಶಕ್ತಿಉಳ್ಳ ಜೀವಾಚ್ಛಾದಕ ಪರಮಾಚ್ಛಾದಕ ಪ್ರಕೃತಿಯನ್ನು ಜ್ಞಾನಿಯು 'ಅಹಿರಿವ ತ್ವಚಂ' ಹಾವು ಪೊರೆ ಬಿಡುವಂತೆ 'ಜಹಾಸಿ' ಬಿಡಲು ಪ್ರೇರಿಸುವಿ, 'ಜಿಹಾಸಿ' ನಾಶಪಡಿಸಲು ಪ್ರೇರಿಸುವಿ.

ಅಷ್ಟಗುಣಃ ಅಪರಿಮೇಯಭಗಃ ತ್ವಂ ಮಹಸಿ ಮಹಿಯಸೇ ಚ

ಅಷ್ಟೈಶ್ವರ್ಯ ಸಂಪನ್ನನು, ಅಪರಿಮಿತ ಷಡ್ಗುಣಉಳ್ಳವನು ನೀನು ಆ ಜ್ಞಾನಿಯಲ್ಲಿದ್ದು ನಿನ್ನನ್ನು ನೀನೇ ಪೂಜಿಸುವೆ, ನೀನೇ ಪೂಜಿಸಿಕೊಳ್ಳುವೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ ಹೀಗಿದೆ—

ಸ ಯದಜಯಾ ತ್ವಜಾಮನುಶಯೀತ ಗುಣಾಂಶ್ಚ ಜುಷನ್
ಭಜತಿ ಸರೂಪತಾಂ ತದನು ಮೃತ್ಯುಮಪೇತಭಗಃ ।
ತ್ವಮುತ ಜಹಾಸಿ ತಾಮಹಿರಿವ ತ್ವಚಮಾತ್ತಭಗೋ
ಮಹಸಿ ಮಹೀಯಸೇಽಷ್ಟಗುಣಿತೇಽಪರಿಮೇಯಭಗಃ ॥

'ಜೀವನು ಮಾಯೆಯಿಂದ ಅವಿದ್ಯೆಯನ್ನು ಆಲಿಂಗಿಸುವುದರಿಂದ ದೇಹೇಂದ್ರಿಯಾದಿಗಳನ್ನು ತನ್ನಲ್ಲಿ ಆರೋಪಿಸಿಕೊಂಡು ಅವುಗಳ ದುಃಖಾದಿ ವಿಕಾರಗಳನ್ನು ತಾನು ಅನುಭವಿಸುತ್ತ ತನ್ನ ಆನಂದಾದಿಗಳನ್ನು ಮುಚ್ಚಿಕೊಂಡು ಸಂಸಾರವನ್ನು ಹೊಂದುತ್ತಾನೆ. ನೀನು ಮಾತ್ರ ನಿತ್ಯೈಶ್ವರ್ಯ ಉಳ್ಳವನು. ಅಷ್ಟವಿಧ ಪರಮೈಶ್ವರ್ಯಉಳ್ಳವನು. ಅಪರಿಮಿತ ಐಶ್ವರ್ಯ ಉಳ್ಳವನು. ಮಾಯೆಯನ್ನು ಬಿಟ್ಟಿರುವಿ ಅದು ನಿನ್ನಲ್ಲೇ ಇದ್ದರೂ ಅದರಲ್ಲಿ ನಿನಗೆ ಮೋಹವಿಲ್ಲ, ಹಾವಿನ ಪೊರೆಯಲ್ಲಿ ಹಾವಿಗೆ ಹೇಗೋ ಹಾಗೆ. ಇದು 'ದ್ವಾಸುಪರ್ಣಾ' ಶ್ರುತ್ಯರ್ಥ' ಎಂದು ಶ್ರೀಧರವ್ಯಾಖ್ಯಾನ ಹೇಳಿದೆ.

ಆದರೆ ಜೀವನನ್ನು ಆವರಿಸುವುದು ಅವಿದ್ಯೆಯ ಸ್ವಭಾವ. ಅದಕ್ಕೆ ಮಾಯೆ ಬೇಕಾಗಿಲ್ಲ. ಹೀಗಾಗಿ ಅವಿದ್ಯಾವೃತನಾಗಿದ್ದರೆ ಜೀವ ಈಶ್ವರನ ಮಾಯೆಯಿಂದ ಮೋಹಿತನಾಗುತ್ತಾನೆ. ಅವಿದ್ಯೆಯಿಂದ ಮುಕ್ತನಾದ ಬಳಿಕ ಮಾಯೆಯಿಂದ ಮೋಹಿತ ನಾಗುವುದಿಲ್ಲ. ಮಾಯಿಕವಾದ ಜಗತ್ತನ್ನು ಕಾಣುವುದೇ ಇಲ್ಲ. ಆದರಿಂದ 'ಮಾಯಾ ಮೋಹಿತನೇ ಅವಿದ್ಯಾವೃತನಾಗುವುದೆ'ಂದರೆ ಇದು ತಿರುವುಮುರು ವಾಯಿತು.

ಮಾಯೆಯಲ್ಲಿ ಈಶ್ವರನಿಗೆ ಮೋಹವಿಲ್ಲ ಏಕೆ? ಮೋಹವಿಲ್ಲವೆಂದಾದರೆ

ಅದನ್ನು ಅವನು ಏಕೆ ಇಟ್ಟುಕೊಳ್ಳುತ್ತಾನೆ? ಜೀವರನ್ನು ಮೋಹಗೊಳಿಸುವ ಕಾರ್ಯವನ್ನು ಸ್ವವ್ಯಾಮೋಹಕರೀ ಅವಿದ್ಯೆಯೆ ಮಾಡುತ್ತದೆ. ಉದಾ: ಕನಸು ಕಾಣುವುದು. ಏಕಜೀವವಾದದಲ್ಲಿ ಮಾಯೆಯೆ ಇಲ್ಲ ತಾನೆ?

'ಈಶ್ವರ'ನೆಂದರೆ ಮಾಯಾವಿ. ಅವನು ಉಣ್ಣುವ 'ಐಶ್ವರ್ಯ' ಮಾಯಿಕವೆಂದಮೇಲೆ, ನಿತ್ಯೈಶ್ವರ್ಯ ಅಷ್ಟವಿಧೈಶ್ವರ್ಯ ಅಪರಿಮಿತೈಶ್ವರ್ಯವೆಂದು ಎಲ್ಲ ಐಶ್ವರ್ಯ ಮಾಯೆಯಿಂದಲೆ ಬಂದಿರುವಾಗ ಮಾಯೆಯಲ್ಲಿ ಮೋಹವನ್ನು ಬಿಡುವುದು ಹೇಗೆ ಸಾಧ್ಯ? 'ಅನಶ್ನನ್' ಎಂದು ಶ್ರುತಿ ಅವನನ್ನು ಹೊಗಳುವುದು ಹೇಗೆ ಸಾಧ್ಯ?

ಐಶ್ವರ್ಯಗಳಲ್ಲಾಗಲಿ, ಅವನ್ನು ಕೊಟ್ಟಿರುವ ಮಾಯೆಯಲ್ಲಾಗಲಿ ಅವನಿಗೆ ಮಿಥ್ಯೆಯೆಂಬ ಜ್ಞಾನವಿರುವುದರಿಂದ ಮೋಹವಿಲ್ಲ ಎನ್ನುವುದಾದರೆ ಆ ಜ್ಞಾನವೂ ಮಾಯಿಕವೆ. ಅದು ಬೇಕು ತಾನೆ, ಅದರಲ್ಲಿ ಮೋಹವಿಲ್ಲವೆನ್ನಲಾದೀತೆ? ಐಶ್ವರ್ಯ ಮಿಥ್ಯೆ, 'ಗಜೋಽಪಿ ಮಿಥ್ಯಾ, ಪಲಾಯನಮಪಿ ಮಿಥ್ಯಾ' ಎಂಬಂತೆ ಉಣ್ಣುವುದೂ ಮಿಥ್ಯೆ!

ಶ್ರುತಿಷು ತವಾನುಗೀತಾನ್ ಗುಣಾನ್ ಜುಷನ್ ಪುಮಾನ್ ಉದಗಾದಸ್ಮಾತ್ ಸಂಸಾರಾತ್, ತವ ಸರೂಪತಾಂ ಚ ಭಜತಿ । ತದನು ಗುಣಸ್ಮರಣಮನು । ಗುಣಾಂಶ್ಚ ಜುಷನ್ನಿತಿ ಚಶಬ್ದಃ ಕರ್ಮಾಣಿ ಚೇತ್ಯಸ್ಮಿನ್ನರ್ಥೇ ।

ವೇದಗಳಲ್ಲಿ ಹೇಳಿದ ನಿನ್ನ ಗುಣಗಳನ್ನು ಉಪಾಸನ ಮಾಡುವ ಮುಮುಕ್ಷು ಸಂಸಾರದಿಂದ ಮುಕ್ತನಾಗುವನು ಮತ್ತು ನಿನ್ನ ಸಾರೂಪ್ಯವನ್ನು ಹೊಂದುವನು. 'ತದನು' ಎಂದರೆ ಗುಣ ಸ್ಮರಣೆಗೆ ಅನುಸಾರವಾಗಿ, ಸಾರೂಪ್ಯ ಬರುತ್ತದೆ. ('ಯಾದೃಶೋ ಭಾವಿತಸ್ತ್ವೀಶಸ್ತಾದೃಶೋ ಜೀವ ಆಭವೇತ್' ಪರಮಾತ್ಮನಲ್ಲಿ ಯಾವ ಗುಣವನ್ನು ಉಪಾಸನೆ ಮಾಡುವನೋ ಅದಕ್ಕೇ ಸದೃಶವಾದ ತನ್ನ ಗುಣ ವ್ಯಕ್ತವಾಗುವುದು. ಅದೇ ಸಾರೂಪ್ಯ.) 'ಗುಣಾಂಶ್ಚ ಜುಷನ್' ಎಂಬಲ್ಲಿ ಚಶಬ್ದ 'ಕರ್ಮಾಣಿ ಚ ಜುಷನ್' ಎಂಬ ಅರ್ಥದಲ್ಲಿ ಅನುಕ್ತಸಮುಚ್ಚಯಾರ್ಥದಲ್ಲಿದೆ.

ಯಚ್ಛಾಯಂ ಪುಮಾನ್ ಆತ್ತಭಗಾಂ ತ್ವಯಾಽಪಹೃತಭಗಾಂ ಪ್ರಾತಿಸ್ವಿಕೀಂ ಪೂರ್ವೋಕ್ತಾಂ ದ್ವಿವಿಧಾಂ ಕಷ್ಟಾಂ ಪ್ರಕೃತಿಂ ಜಹಾತಿ

ಜಿಹಾತಿ ಹಂತಿ ಚ, ತದಪಿ ತ್ವಮೇವ ಜಹಾಸಿ ಜಿಹಾಸಿ ಚ। ಉತೇತಿ ತ್ಯಾಗವಧಯೋಃ ಸಮುಚ್ಚಯಾರ್ಥೇ।

ಜಿಹಾತಿ ರಾವಣಂ ಸಂಖೇ ರಾಘವಃ ಪರಮಾಸ್ತ್ರವಿತ್ ।

ಇತಿ ಸ್ಕಾಂದೇ ।

ಸ್ವಾತಂತ್ರ್ಯಾತ್ ಪ್ರಕೃತಿತ್ಯಾಗಕರ್ತಾ ನಾರಾಯಣಃ ಪರಃ ।
ಯದ್ಯಪ್ಯೇಷಾ ಜೀವಸಂಸ್ಥಾ ಹಂತಾ ಚ ಭಗವಾನ್ ಪ್ರಭುಃ ॥

ಇತಿ ಗಾರುಡೇ ॥

'ಆತ್ತ ಭಗಾಂ' ನೀನು ಪ್ರಕೃತಿಯ ಬಂಧಕಶಕ್ತಿಯನ್ನು ಸೆಳೆದುಕೊಂಡಾಗ, ಪ್ರತಿ ಜೀವನಲ್ಲಿ ಬೇರೆಬೇರೆಯಾಗಿರುವ, ಹಿಂದೆ 'ಜಯ ಜಯ' ಎಂಬ ಮೊದಲನೆ ಪದ್ಯದಲ್ಲಿ ಹೇಳಿದ, ದುಃಖಕರವಾದ ಎರಡು ಬಗೆಯ ಪ್ರಕೃತಿಯನ್ನು ಜ್ಞಾನಿಯು 'ಜಹಾತಿ' ದೂರಮಾಡಿ ಕೊಳ್ಳುತ್ತಾನೆ, 'ಜಿಹಾತಿ' ಕೊಲ್ಲುತ್ತಾನೆ.' ಇದರ ಅರ್ಥ—'ನೀನೇ ದೂರಮಾಡುವಿ, ನೀನೇ ಕೊಲ್ಲುವಿ' ಎಂದು. ಏಕೆಂದರೆ ಜ್ಞಾನಿಗೆ ಸ್ವಾತಂತ್ರ್ಯವಿಲ್ಲ. ಅದರಿಂದ 'ತ್ವಂ ಜಹಾಸಿ ಉತ ಜಿಹಾಸಿ' ಎಂದು ಶ್ಲೋಕದಲ್ಲಿ ಹೇಳಿದೆ. 'ಉತ ಜಹಾಸಿ ಜಿಹಾಸಿ' ಎಂಬಲ್ಲಿ 'ಉತ' ಶಬ್ದ 'ಜಹಾಸಿ ಜಿಹಾಸಿ ಚ' ಎಂದು ತ್ಯಾಗ ವಧಗಳನ್ನು ಸಮುಚ್ಚಯ ಮಾಡುವ ಅರ್ಥದಲ್ಲಿದೆ.

'ಪರಮ ಅಸ್ತ್ರಜ್ಞಾನಿಯಾದ ಶ್ರೀರಾಮ ಯುದ್ಧದಲ್ಲಿ ರಾವಣನನ್ನು 'ಜಿಹಾತಿ' ಕೊಲ್ಲುತ್ತಾನೆ' ಎಂದು ಸ್ಕಾಂದಪುರಾಣ ಹೇಳಿದೆ. ಹನನಾರ್ಥದಲ್ಲಿ 'ಓಹಾಕ್' ಧಾತುಪ್ರಯೋಗವನ್ನು ಮಾಡಿದೆ.

'ಪ್ರಕೃತಿ ಜೀವನಲ್ಲಿಯೇ ಇದ್ದರೂ ಅದರ ತ್ಯಾಗವಧೆಗಳಲ್ಲಿ ಅವನಿಗೆ ಸ್ವಾತಂತ್ರ್ಯವಿಲ್ಲ, ಸ್ವತಂತ್ರವಾಗಿ ಪ್ರಕೃತಿಯ ತ್ಯಾಗಕರ್ತನೂ ವಧಕರ್ತನೂ ಸರ್ವೋತ್ತಮನಾದ ಸರ್ವಶಕ್ತನಾದ ಭಗವಾನ್ ನಾರಾಯಣನೆ' ಎಂದು ಗರುಡಪುರಾಣದಲ್ಲಿದೆ.

ಮಹಸಿ ಮಹೀಯಸೇ ಪೂಜಯಸಿ ಪೂಜ್ಯಸೇ ಚಾತ್ಮನ್ಯೇವ ॥

'ಮಹಸಿ' ಎಂದರೆ ಪೂಜಕನಲ್ಲಿದ್ದು ಪೂಜಿಸುವಿ, 'ಮಹೀಯಸೇ' ಎಂದರೆ ಪೂಜ್ಯನಲ್ಲಿದ್ದು ಪೂಜಿಸಿಕೊಳ್ಳುವಿ, ಪೂಜಕಪೂಜ್ಯರಿಗೆ ಸ್ವಾತಂತ್ರ್ಯವಿಲ್ಲ ಎಂದರ್ಥ. ಹೊರತು ಮುಕ್ತಿಯಲ್ಲಿ ಪೂಜ್ಯಪೂಜಕರಿಗೆ ಐಕ್ಯವೆಂದು ತಿಳಿಯಬಾರದು.

ಸ್ಮರನ್ ಬ್ರಹ್ಮಗುಣಾನ್ ನಿತ್ಯಂ ಮುಕ್ತೋ ಬ್ರಹ್ಮಸರೂಪತಾಂ ।
ದುರ್ಭಗಾಂ ಪ್ರಕೃತಿಂ ತ್ಯಕ್ತ್ವಾ ಹತ್ವಾ ಚಾನ್ಯಾಂ ದುರನ್ವಯಾಂ ।
ಯಾತಿ ತಚ್ಚ ಪರೇಶಾನಾತ್ ಸ ಹಿ ಪೂಜ್ಯೋಽಥ ಪೂಜಕಃ ।
ತಸ್ಯೈಕಸ್ಯ ಸ್ವತಂತ್ರತ್ವಾತ್ ಸ ಚಾನಂತಗುಣೋ ವಿಭುಃ ॥
ಇತಿ ಕೌಶಿಕ ಶ್ರುತಿಃ ॥

'ಪರಬ್ರಹ್ಮನ ಗುಣಗಳನ್ನು ಸದಾ ಸ್ಮರಿಸುವವನು ದುಷ್ಟವಾದ ಪರಮಾಚ್ಛಾದಕ ಪ್ರಕೃತಿಯನ್ನು ದೂರ ಮಾಡಿಕೊಂಡು ದುಷ್ಟವಾದ ಜೀವಾಚ್ಛಾದಕವಾದ ಇನ್ನೊಂದು ಪ್ರಕೃತಿಯನ್ನು ನಾಶಮಾಡಿಕೊಂಡು ಮುಕ್ತನಾಗಿ ಬ್ರಹ್ಮನ ಸಾರೂಪ್ಯವನ್ನು ಹೊಂದುತ್ತಾನೆ. ಅದು ಪರಮೇಶ್ವರನ ಅನುಗ್ರಹದಿಂದ. ಅವನು ಒಬ್ಬನೆ ಬ್ರಹ್ಮಾದಿಗಳಲ್ಲಿದ್ದು ಪೂಜ್ಯನೂ ರುದ್ರಾದಿಗಳಲ್ಲಿದ್ದು ಪೂಜಕನೂ ಆಗಿರುತ್ತಾನೆ. ಏಕೆಂದರೆ ಅವನೊಬ್ಬನಿಗೇ ಸ್ವಾತಂತ್ರ್ಯವಿರುತ್ತದೆ. ಅವನೇ ಅನಂತಗುಣಪೂರ್ಣ ಸರ್ವಶಕ್ತ' ಎಂದು ಕೌಶಿಕಶ್ರುತಿ ಇದೆ.

ಇದು ಕೌಶಿಕಶ್ರುತಿ. ಈ ಪದ್ಯದ ಮೂಲಶ್ರುತಿ. ಕೌಶಿಕಶ್ರುತಿ ಕಾಪಿಲಶ್ರುತಿ ಕಾಯಿಕಶ್ರುತಿ ಎಂದು ಬೇರೆಬೇರೆ ಹೆಸರುಗಳು ಬೇರೆಬೇರೆ ಪಾಠಗಳಲ್ಲಿವೆ.

❖❖❖

ಶ್ರುತಿಗೀತೆಯಲ್ಲಿ ಇಪ್ಪತ್ತಾರನೇ ಪದ್ಯ.

ಯದಿ ನ ಸಮುಚ್ಚರಂತಿ ಯತಯೋ ಹೃದಿ ಕಾಮಜಡಾ
ದುರಧಿಗಮೋಽಸತಾಂ ಹೃದಿ ಗತೋಽಸ್ಮೃತಕಂಠಮಣಿಃ ।
ಅನುತೃಪ್ತಯೋಗಿನಾಮುಭಯೋ ಭಗವನ್
ಅನವಗತಾಂತಕಾದನಧಿರೂಢಪದಾದ್ ಭವತಃ ॥ ೪೦ ॥

ಭಗವಂತನೆ, ಸಜ್ಜನರು ಹೊರಗೆ ಕಾವಿಬಟ್ಟೆ ವೇಷ ತೊಟ್ಟು ಯತಿ **ಎನಿಸಿ** ಹೃದಯದೊಳಗೆ ವಿಷಯಕಾಮನೆಗಳಿಂದ ಜ್ಞಾನಶೂನ್ಯರಾಗಿದ್ದರೆ **ಅವುಗಳಿಂದ** ಮೇಲೆ ಬಾರದಿದ್ದರೆ, ಅವರ ಹೃದಯದಲ್ಲಿಯೇ ನೀನಿರುತ್ತಿದ್ದರೂ **ಅವರಿಗೆ** ಸುಲಭವಾಗಿ ಕಾಣಸಲೊಲ್ಲೆ, ದುರ್ಜನರಿಗಂತೂ ಸರ್ವಥಾ **ಕಾಣಸಲೊಲ್ಲೆ, ತಾನು** ಕೊರಳಲ್ಲೇ ಮಣಿ ಧರಿಸಿರುವುದನ್ನು ಮರೆತವನಿಗೆ ಅದು **ಕಾಣಸಲಾರದು, ಹಾಗೇ** ಇದು. ವಿವೇಕಜ್ಞಾನದಿಂದ ವಿಷಯಭೋಗ ಇನ್ನು **ಸಾಕೆಂದು ತೃಪ್ತಿಪಟ್ಟ ಯೋಗಿಗಳಿಗೆ**

ನೀನು ಯಮನ ಭಯವನ್ನು ದೂರ ಮಾಡುವಿ. ಇಲ್ಲಿ ಸಂಸಾರದಲ್ಲಿ ವಿಷಯಾಸಕ್ತರನ್ನು ಯಮನು ಯಾರೂ ಅರಿಯದಂತೆ ಬಂದು ಸೆಳೆಯುತ್ತಾನೆ. ಅಲ್ಲಿ ವೈಕುಂಠದಲ್ಲಿ ಅವನ ದರ್ಬಾರು ಏನೂ ನಡೆಯದು.

ಹೇ ಭಗವನ್ ! ಯತಯೋ ಯದಿ ಹೃದಿ ಕಾಮಜಡಾಃ

ಭಗವಂತನೆ, ಸಜ್ಜನರು ಹೊರಗೆ ಯತಿವೇಷ ಧರಿಸಿ ಹೃದಯದೊಳಗೆ ವಿಷಯಕಾಮನೆಗಳಿಂದ ತುಂಬಿ ಜಡರಾಗಿದ್ದರೆ, ಜ್ಞಾನಶೂನ್ಯರಾಗಿದ್ದರೆ...

ಹೃದಿ ಗತೋಽಪಿ ದುರಧಿಗಮಃ, ಅಸತಾಂ

ಹೃದಯದಲ್ಲಿ ನೀನಿರುತ್ತಿದ್ದರೂ ಸುಲಭವಾಗಿ ಆ ಸಜ್ಜನರಿಗೆ ಕಾಣಿಸಲಾರೆ. ದುರ್ಜನರಿಗೆ ಸರ್ವಥಾ ಗೋಚರಿಸಲಾರೆ.

ಅಸ್ಮೃತ ಕಂಠಮಣಿಃ

ತಾನು ಕೊರಳಲ್ಲೇ ಮಣಿಯನ್ನು ಕಟ್ಟಿಕೊಂಡವನು ಅದನ್ನು ಮರೆತರೆ ಅವನಿಗೆ ಅದು ಕಾಣದು.

ಅನುತೃಪ್ತ ಯೋಗಿನಾಮಭಯಃ

ವಿಷಯಭೋಗ ಸಾಕೆಂದು ತೃಪ್ತಿಪಟ್ಟ ಯೋಗಿಗಳಿಗೆ ಮೋಕ್ಷದಲ್ಲಿ ಅಭಯ ನೀಡುವಿ.

ಭವತಃ ಅನವಗತಾಂತಕಾತ್ ಅನಧಿರೂಢಪದಾತ್ ಅಭಯಃ

'**ಭವತಃ**' ನಿನ್ನಾಜ್ಞೆಯಿಂದ 'ಅನವಗತ' ಇಲ್ಲಿ ಯಾರೂ ಅರಿಯದಂತೆ ಬರುವವನು '**ಅನಧಿರೂಢಪದ**' ಅಲ್ಲಿ ವೈಕುಂಠದಲ್ಲಿ ಏನೂ ದರ್ಬಾರು ನಡೆಸದವನು. ಇಂಥ '**ಅಂತಕಾತ್**' ಯಮನಿಂದ ಅಭಯವನ್ನು ನೀನು ಜ್ಞಾನಿಗೆ ನೀಡುವಿ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ ಹೀಗಿದೆ—

ಯದಿ ನ ಸಮುದ್ಧರಂತಿ ಯತಯೋ ಹೃದಿ ಕಾಮ ಜಟಾ
ದುರಧಿಗಮೋಽಸತಾಂ ಹೃದಿಗತೋಽಸ್ಮೃತಕಂಠಮಣಿಃ
ಅಸುತೃಪಯೋಗಿನಾಮುಭಯತೋಽಪ್ಯಸುಖಂ ಭಗವನ್
ಅನಪಗತಾಂತಕಾದನಧಿರೂಢಪದಾದ್ ಭವತಃ ॥

'ಹೃದಯದಲ್ಲಿರುವ ಮೂಲಾಜ್ಞಾನವಾಸನೆಯನ್ನು ಕಿತ್ತೊಗೆಯದಿರುವ ದುಷ್ಟಯತಿಗಳಿಗೆ ನೀನು, ಕೊರಳಲ್ಲಿ ಧರಿಸಿದ ಮಣಿ ಅದನ್ನು ಮರೆತವನಿಗೆ ಹೇಗೆ ಸಿಗುವುದಿಲ್ಲವೋ ಹಾಗೆ, ಸಿಗುವುದಿಲ್ಲ. ಇಂದ್ರಿಯ ತೃಪ್ತಿಯನ್ನೇ ಅರಸುತ್ತ ಯೋಗಿಗಳ ವೇಷ ತೊಡುವವರಿಗೆ ಇಹಪರಗಳಲ್ಲಿ ದುಃಖವೆ. ಇಹದಲ್ಲಿ ಮರಣ ದುಃಖವಿದ್ದೇ ಇದೆ. ಅಜ್ಞಾನಿಗಳಾಗಿದ್ದು ವಿಧಿಬದ್ಧರಾಗಿ ವಿಧಿಯನ್ನು ಅತಿಕ್ರಮಿಸುವುದರಿಂದ ಪರದಲ್ಲಿಯೂ ದುಃಖವೆ.' —ಇದು ಅವರ ವ್ಯಾಖ್ಯಾನ.

'ನ ಚ ರಮಂತ್ಯಹೋ ಅಸದುಪಾಸನಯಾऽऽತ್ಮಹನಃ'

ಎಂದು ಹಿಂದೆ (ಶ್ಲೋ.೧೦) ಹೇಳಿದ್ದನ್ನೇ ಇಲ್ಲಿ ತಿರುಗಿ ಹೇಳಿದ್ದರಿಂದ ವ್ಯರ್ಥ ಪುನರುಕ್ತಿ. ನಮ್ಮ ವ್ಯಾಖ್ಯಾನ ಪ್ರಕಾರ ಅಲ್ಲಿ ಹರಿವಾಯುಗಳನ್ನು ದ್ವೇಷಿಸುವವರಿಗೆ ನಿತ್ಯನರಕವನ್ನು ಹೇಳಿದೆ. ಇಲ್ಲಿ ಕಪಟ ಸನ್ಯಾಸಿಗಳಿಗೆ ಭಗವಂತ ಸಿಗುವದಿಲ್ಲ. ವಿರಕ್ತರಾದ ಯೋಗಿಗಳಿಗೆ ಸಿಗುತ್ತಾನೆ ಮೋಕ್ಷ ಕೊಡುತ್ತಾನೆ ಎನ್ನುತ್ತಿರುವುದರಿಂದ ಪುನರುಕ್ತಿ ಇಲ್ಲ.

ಅಜ್ಞಾನಾಮನವಗತಾಂತಕಾದ್ ಅನಧಿರೂಢ ಬ್ರಹ್ಮಪದಾತ್ ।

ಶ್ಲೋಕದಲ್ಲಿ 'ಅನವಗತಾಂತಕಾದನಧಿರೂಢಬ್ರಹ್ಮಪದಾತ್' ಎಂಬುದಕ್ಕೆ ಸಂಸಾರದಲ್ಲಿ ಅಜ್ಞಾನಿಗಳಿಗೆ ಮೃತ್ಯು ಯಾವಾಗ ಹೇಗೆ ಬರುವುದೆಂಬುದು ತಿಳಿಯುವುದಿಲ್ಲ. ಹಾಗೇ ಬಂದು ಬಿಡುತ್ತದೆ. ಮೋಕ್ಷದಲ್ಲಿ ಬರುವುದೇ ಇಲ್ಲ. ಏಕೆಂದರೆ 'ಬ್ರಹ್ಮಪದ'ದಲ್ಲಿ ಅಂದರೆ ವೈಕುಂಠದಲ್ಲಿ, ಮೃತ್ಯು 'ಅಧಿರೂಢಪದ'ವಾಗುವುದಿಲ್ಲ, ಅಂದರೆ ಅಧಿಕಾರ ಪಡೆಯುವುದಿಲ್ಲ. ತನ್ನ ಕಾರ್ಯ ಮಾಡಲು ಸಮರ್ಥವಾಗುವುದಿಲ್ಲ ಎಂದರ್ಥ.'

ಸ ಯಥಾಕಾಮೋ ಭವತಿ ತತ್‌ಕ್ರತುರ್ಭವತಿ ಯತ್‌ಕ್ರತುರ್ಭವತಿ ತತ್‌ಕರ್ಮ ಕುರುತೇ । ಯತ್‌ಕರ್ಮ ಕುರುತೇ ತದಭಿ ಸಂಪದ್ಯತೇ ಇತಿ ನು ಕಾಮಯಮಾನಃ । ಅಥಾಕಾಮಯಮಾನಃ। ಯೋऽಕಾಮೋ ನಿಷ್ಕಾಮ ಆಪ್ತಕಾಮ ಆತ್ಮಕಾಮೋ ನ ತಸ್ಯ ಪ್ರಾಣಾ ಉತ್ಕ್ರಾಮಂತಿ। ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ। ಇತಿ ಶ್ರುತಿಃ ॥

'ಜೀವನು ಹರೀಚ್ಛೆಯಿಂದ ಯಾವ ಕಾಮನೆ ಉಳ್ಳವನೋ ಆ ಕಾಮನೆಗೆ ಅನುಗುಣವಾಗಿ ಸಂಕಲ್ಪ ಮಾಡುತ್ತಾನೆ. ಅದಕ್ಕನುಸಾರ ಕರ್ಮ ಮಾಡುತ್ತಾನೆ. ಯಾವ ಕರ್ಮ ಮಾಡುತ್ತಾನೋ ಅದರ ಫಲವನ್ನು

ಪಡೆಯುತ್ತಾನೆ. ಇದು ಕಾಮ್ಯಕರ್ಮಿಯ ಸ್ಥಿತಿ. ನಿಷ್ಕಾಮಕರ್ಮಿ ಹೀಗಿರುತ್ತಾನೆ—ಯಾರು ಅಯೋಗ್ಯ ಕಾಮನೆ ಇಲ್ಲದವನು ನಿಷ್ಕಾಮ ಕರ್ಮ ಮಾಡುವವನು ಆಪ್ತಕಾಮ, ಅಂದರೆ, ತಾನು ಬಯಸಿದ್ದನ್ನು ಪಡೆದಿರುತ್ತಾನೆ, 'ಆತ್ಮಕಾಮ' ಅಂದರೆ ಪರಮಾತ್ಮನ ಅನುಗ್ರಹವನ್ನು ಬಯಸಿ ಅದನ್ನೂ ಪಡೆದಿರುತ್ತಾನೆ, ಉತ್ಕ್ರಮಣ ಕಾಲದಲ್ಲಿ ಅವನ ಶರೀರದಲ್ಲಿರುವ ಇಂದ್ರಿಯಾಭಿಮಾನಿಗಳು ಅಂಶರೂಪದಿಂದಲೂ ಹೊರಗೆ ತಮ್ಮ ಮೂಲರೂಪದೊಂದಿಗೆ ಸೇರಲು ಹೋಗುವುದಿಲ್ಲ. ಅವನ ಜೊತೆಗೇ ಮುಕ್ತರಾಗುತ್ತಾರೆ. 'ಬ್ರಹ್ಮೈವ ಸನ್' ಸಾತ್ವಿಕ ಜೀವನು 'ಬ್ರಹ್ಮ'ನೇ ಸ್ವರೂಪತಃ ಸ್ವಯೋಗ್ಯ ಜ್ಞಾನಾದಿಗುಣಪೂರ್ಣನೇ ಆಗಿದ್ದು ಪರಮಾತ್ಮನ ಅನುಗ್ರಹದಿಂದ 'ಬ್ರಹ್ಮಾಪ್ನೋತಿ' ಆ ಬ್ರಹ್ಮತ್ವವನ್ನೇ ಅಂದರೆ ಆವಿರ್ಭೂತವಾದ ಪೂರ್ಣಗುಣತ್ವವನ್ನೇ ಹೊಂದುತ್ತಾನೆ. ಪರಬ್ರಹ್ಮತ್ವವನ್ನು ಹೊಂದುವುದಿಲ್ಲ' ಎಂದು ಶ್ರುತಿ ಇದೆ.

ನಿಷಿದ್ಧಕಾಮಯುಕ್ತಾನಾಮಸತಾಂ ತು ವಿಶೇಷತಃ।
ದುರ್ಜ್ಞೇಯೋ ಭಗವಾನ್ ವಿಷ್ಣುರ್ಹೃದಿಸ್ಥೋಽಸ್ಮೃತಹಾರವತ್।
ಅಕಾಮತ್ವೇನ ಭಜತಾಂ ದದಾತ್ಯಭಯಮಂತಕಾತ್ ।
ಪೂರ್ಣಾನಂದಾದಿ ತೇಽಶ್ನಂತಿ ಪೂರ್ಣಾನಂದಾದಿಕಾಃ ಸ್ವತಃ ।
ಬ್ರಹ್ಮಣೋ ಬ್ರಹ್ಮಸಂಪತ್ತಿಮತ ಆಹ ಶ್ರುತಿಃ ಸ್ಫುಟಂ ।
ನ ಪರಬ್ರಹ್ಮತಾವಾಪ್ತಿರ್ನ ತೇ ವಿಷ್ಣವಿತಿ ಶ್ರುತೇಃ ।
ಪರಮಬ್ರಹ್ಮತಾ ಚೈಷಾಂ ಬ್ರಹ್ಮಲೋಕಾತ್ ಪರಾ ಗತಿಃ ।
ನ ಪರಬ್ರಹ್ಮರೂಪತ್ವಮೇತಮೇವೇತಿ ಚ ಶ್ರುತೇಃ ।
ಅನ್ಯೇಷಾಂ ಮ್ರಿಯಮಾಣಾನಾಂ ಪ್ರಾಣಾ ಭಾಗತ ಏವ ತು ।
ದೇವತಾಸ್ವೇಕತಾಂ ಯಾಂತಿ ಭಾಗತೋಽನುವ್ರಜಂತಿ ತಂ ।
ಜ್ಞಾನಿನಾಂ ಮುಚ್ಯಮಾನಾನಾಂ ನೈವ ಯಾಂತಿ ಸ್ವದೇವತಾಃ ।
ತೇನೈವ ಸಹ ಸಂಯಾಂತಿ ತತೋಽನುತ್ಕ್ರಮಣ ಶ್ರುತಿಃ ।
ಇತಿ ಬ್ರಹ್ಮತರ್ಕೇ ॥

ದೇವಾಶ್ಚ ಋಷಯಶ್ಚೈವ ಸುಭಕ್ತ್ಯಾ ಕಾಮಿನೋಽಪಿ ತು ।
ಮುಚ್ಯಂತೇ ನಿಯಮಾದೇವ ಪಶ್ಯಂತಿ ಚ ಹರಿಂ ನ ನ ॥
ಇತಿ ಸ್ಕಾಂದೇ ॥

'ನಿಷಿದ್ಧಕಾಮನೆ ಉಳ್ಳವರಿಗೆ, ವಿಶೇಷವಾಗಿ ದುಷ್ಟರಿಗೆ ಭಗವಾನ್ ವಿಷ್ಣು ಹೃದಯದಲ್ಲಿದ್ದರೂ ಕೊರಳಲ್ಲಿಯೆ ಇರುವ ಹಾರ ಅದನ್ನು ಮರೆತವನಿಗೆ ಹೇಗೆ ಕಾಣುವುದಿಲ್ಲವೋ ಹಾಗೆ ದುರ್ಜ್ಞೇಯನೆನಿಸುತ್ತಾನೆ. ನಿಷ್ಕಾಮನೆ ಯಿಂದ ಭಜಿಸುವವರಿಗೆ ಮೃತ್ಯುವಿನಿಂದ ರಕ್ಷಣೆ ನೀಡುತ್ತಾನೆ. ಅವರು ಸ್ವತಃ ಸ್ವಯೋಗ್ಯಪೂರ್ಣಾನಂದಾದಿ ಸ್ವರೂಪರಾದ್ದರಿಂದ ಮುಕ್ತಿಯಲ್ಲಿ ಸ್ವಯೋಗ್ಯಪೂರ್ಣಾನಂದಾದಿಗಳನ್ನು ಅನುಭವಿಸುವರು. ಅದರಿಂದ 'ಬ್ರಹ್ಮೈವ ಸನ್ ಬ್ರಹ್ಮಾಪ್ನೋತಿ' ಸ್ವಯೋಗ್ಯ ಗುಣಪೂರ್ಣಸ್ವರೂಪನಾದ ಜೀವನೇ ಮುಕ್ತಿಯಲ್ಲಿ ಬ್ರಹ್ಮವನ್ನು, ಅಂದರೆ ಸ್ವಯೋಗ್ಯ ಅಭಿವ್ಯಕ್ತಗುಣಪೂರ್ಣತ್ವರೂಪ ಬ್ರಹ್ಮತ್ವವನ್ನು ಹೊಂದುತ್ತಾನೆ ಎಂದು ಶ್ರುತಿಯು ಸ್ಪಷ್ಟವಾಗಿ ಹೇಳುತ್ತದೆ ಹೊರತು ಪರಬ್ರಹ್ಮತ್ವ ಪ್ರಾಪ್ತಿ ಶ್ರುತಿಯ ಅರ್ಥವಲ್ಲ. 'ನ ತೇ ವಿಷ್ಣೋ ಜಾಯಮಾನೋ ನ ಜಾತೋ ದೇವ ಮಹಿಮ್ನಃ ಪರಮಂತಮಾಪ' 'ನಿನ್ನ ಮಹಿಮೆಯನ್ನು ಯಾರೂ ಹೊಂದಲಾರರು' ಎಂದು ಶ್ರುತಿ ಇದೆ. ಹಾಗಾದರೆ 'ಬ್ರಹ್ಮಾಣಿ ಜೀವಾಃ ಸರ್ವೇಽಪಿ ಪರಬ್ರಹ್ಮಾಣಿ ಮುಕ್ತಿಗಾಃ' 'ಎಲ್ಲ ಜೀವರೂ ಬ್ರಹ್ಮರೇ ಮುಕ್ತಿಯಲ್ಲಿ ಪರಬ್ರಹ್ಮರೇ ಆಗುವರು' ಎಂದು ಹೇಳಿದ್ದು ಹೇಗೆ ಎಂದರೆ ಮುಕ್ತಿಯಲ್ಲಿ ಜೀವರಿಗೆ ಪರಬ್ರಹ್ಮತ್ವವೆಂದರೆ ಬ್ರಹ್ಮಲೋಕಕ್ಕಿಂತ ಮೇಲಿನದಾದ ವೈಕುಂಠಲೋಕದಲ್ಲಿ ತಮ್ಮ ಗುಣಪೂರ್ಣತ್ವಕ್ಕೆ ಹೆಚ್ಚಿನ ಅಭಿವ್ಯಕ್ತಿ ಪ್ರಾಪ್ತಿಯೇ ಹೊರತು 'ಪರ'ಬ್ರಹ್ಮಸ್ವರೂಪತ್ವ ಪ್ರಾಪ್ತಿಯಲ್ಲ. 'ಏತಮೇವ ಬ್ರಹ್ಮೇತ್ಯಾಚಕ್ಷತೇ' ಎಂದು ಶ್ರುತಿ ಇರುವುದರಿಂದ 'ಭಗವಂತನನ್ನೇ ಬ್ರಹ್ಮ ಎನ್ನುತ್ತಾರೆ' ಅರ್ಥಾತ್, ಉಳಿದವರಿಗೆ ಬ್ರಹ್ಮತ್ವವೇ ಇಲ್ಲ ಎಂದಮೇಲೆ ಪರಬ್ರಹ್ಮತ್ವವೆಲ್ಲಿಯದು ?

'ನ ತಸ್ಯ ಪ್ರಾಣಾ ಉತ್ಕ್ರಾಮಂತಿ' ಎಂದು ಬೃಹದಾರಣ್ಯಕದಲ್ಲಿ ಹೇಳಿದ್ದರ ವಿವರಣೆ—'ಬೇರೆಯವರು ಸಾಯುವಾಗ ಇಂದ್ರಿಯದೇವತೆಗಳು ತಮ್ಮ ಒಂದಂಶದಿಂದ ತಮ್ಮ ಅಂಶಿದೇವತೆಗಳಲ್ಲಿ ಸೇರಿ ಒಂದಾಗುವರು, ಒಂದಂಶದಿಂದ, ಸಾಯುವವರ ಜೊತೆಗೆ ಹೋಗುವರು. ಆದರೆ ಜ್ಞಾನಿಗಳು ಮುಕ್ತಿಗೆ ಹೋಗಲು ಉತ್ಕ್ರಮಣ ಮಾಡುವಾಗ ಇಂದ್ರಿಯ ದೇವತೆಗಳು ಒಂದಂಶದಿಂದಲೂ ತಮ್ಮ ಅಂಶಿದೇವತೆಗಳನ್ನು ಹೋಗಿ ಸೇರುವುದಿಲ್ಲ, ಆ ಜ್ಞಾನಿಗಳ ಜೊತೆಗೆ ಮೋಕ್ಷಕ್ಕೇ ಹೋಗುವರು. ಅದರಿಂದ ಅನುತ್ಕ್ರಮಣವನ್ನು ಹೇಳುವ ಬೃಹದಾರಣ್ಯಕ ಶ್ರುತಿ ಯುಕ್ತವೇ ಆಗಿದೆ.' ಎಂದು ಬ್ರಹ್ಮತರ್ಕದಲ್ಲಿದೆ.

'ದೇವತೆಗಳೂ ಋಷಿಗಳೂ ಕಾಮನೆ ಉಳ್ಳವರಾದರೂ ಕಾಮನೆಗೆ ವಿರೋಧಿಯಾಗದ ಒಳ್ಳೆಯ ಭಕ್ತಿಯಿಂದ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯದಿರುವುದಿಲ್ಲ. ಅದರಿಂದ ನಿಶ್ಚಯವಾಗಿ ಮುಕ್ತಿ ಹೊಂದುತ್ತಾರೆ.' ಎಂದು ಸ್ಕಾಂದಪುರಾಣ ದಲ್ಲಿ ಹೇಳಿದೆ.

❖❖❖

ಶ್ರುತಿಗೀತೆಯಲ್ಲಿ ಕೊನೆಯದಾದ ಇಪ್ಪತ್ತೇಳನೆ ಪದ್ಯ.

ತದವಗಮಾರ್ಥಸಿತಾಸಿತಯೋ-
ರ್ಗುಣವಿಗುಣಯೋರ್ನಹಿ ದೇಹಭೃತಾಂ ಸಗಿರಃ
ಅನುಯಯುರತ್ರ ಹಂಸಕುಲಗೀತಪರಂಪರಯಾ ।
ನ ತುಷಾವರಣಾ ಇವ ರಜಾಂಸಿ
ವಾಂತಿ ವಯಸಾ ಸಹ ಯಚ್ಛ್ರುತಯ-
ಸ್ತ್ವಯಿ ಸಫಲಂ ಪತಂತಿ ನ ಪತಂತಿ ಬಂಧನಾಃ ॥ ೪೧ ॥

ಎಲ್ಲರಿಗಿಂತ ಹೆಚ್ಚಾಗಿ ಹರಿಯನ್ನು ಅರಿತುಕೊಳ್ಳಬಲ್ಲವಳು ಲಕ್ಷ್ಮೀದೇವಿ. ಅವಳನ್ನು ಆತ ಆಳುತ್ತಾನೆ. ಅವನನ್ನು ಯಾರೂ ಆಳುವುದಿಲ್ಲ. ಅಂಥ ಲಕ್ಷ್ಮೀನಾರಾಯಣರ ವಿಷಯದಲ್ಲಿ ಕೇವಲ ಶರೀರಿಗಳ ಮಾತಾಗಲಿ ಕೇವಲ ಶ್ರುತಿಗಳಾಗಲಿ ಬೋಧಕವಾಗಲಾರವು. ಋಜುಯೋಗಿಗಳ ಉಪದೇಶ ಪರಂಪರೆಯ ಸಹಾಯದಿಂದಲೆ ಅವು ಬೋಧಕವಾಗ ಬಲ್ಲುವು. ಏಕೆಂದರೆ ಅದರ ಸಹಾಯವಿಲ್ಲದೆ ಎಷ್ಟು ಕಾಲ ಅಧ್ಯಯನ ಮಾಡಿದರೂ ಜನರಿಗೆ ಅವು ಬೆಳಕು ನೀಡಲಾರವು. ಮತ್ತು ಯೋಗ್ಯತೆಯೂ ಬೇಕು. ಹೊಟ್ಟಿನೊಳಗೆ ಸುರಕ್ಷಿತವಾಗಿರುವ ಕಾಳು ಎಂದೂ ದೂಳಿನ ಸಂಪರ್ಕಕ್ಕೆ ಬರಲಾರವು. ಹಾಗೆ ತಾಮಸರಿಗೆ ಶ್ರುತಿಗಳ ಹಾರ್ದ ಸರ್ವಥಾ ಗೋಚರವಾಗದು. ರಾಜಸರಿಗೆ ಕೆಲವೊಮ್ಮೆ ಅಲ್ಪಸ್ವಲ್ಪ ಗೋಚರಿಸೀತು. ಸಾತ್ವಿಕರಿಗೆ ಮಾತ್ರ ಯೋಗ್ಯತೆ ಇರುವುದರಿಂದ ಋಜುಕುಲದವ ರಾದ ಶ್ರೀಮಧ್ವಾಚಾರ್ಯರ ಸರ್ವಮೂಲ ಉಪದೇಶ ಪರಂಪರೆಯ ಸಹಾಯದಿಂದ ಚೆನ್ನಾಗಿ ಅರಿವಾಗುವುದು. ಅವರು ಮಾತ್ರ ವೇದೋಕ್ತ ಕರ್ಮ ಮಾಡಿ ಮೋಕ್ಷಫಲ ಭಾಗಿಗಳಾಗುವರು.

ತದವಗಮಾರ್ಥಸಿತಾಸಿತಯೋಃ

'ತದವಗಮಾ' ಆ ಪರಮಾತ್ಮನನ್ನು ಅರಿಯಬಲ್ಲವಳು ರಮಾದೇವಿ.

'ಅರ್ಥ' ಎಂದರೆ ಜ್ಞಾನಗೋಚರ. ರಮಾದೇವಿಯ ಅರಿವಿಗೆ ನಿಲುಕುವವನು ಆ ಪರಮಾತ್ಮನೆ. ಅವನಿಂದ 'ಸಿತಾ' ಬಂಧಿಸಲ್ಪಡುವವಳು, ಅಂದರೆ, ಅವನಿಗೆ ಅಧೀನಳೆಂದು ಮಾತ್ರ ವಿವಕ್ಷಿತವಾಗಿದೆ. ಅವನು 'ಅ-ಸಿತ' ಯಾರಿಗೂ ಅಧೀನನಲ್ಲ. ಪರಮಾತ್ಮನಿಗೆ ಅಧೀನಳಾದ ರಮೆ, ಮತ್ತು ಯಾರಿಗೂ ಅಧಿನನಲ್ಲದ ನಾರಾಯಣ, ಇವರೇ ತದವಗಮಾರ್ಥಸಿತ ಮತ್ತು ಅಸಿತರು.

ಗುಣವಿಗುಣಯೋಃ

ತ್ರಿಗುಣಾಭಿಮಾನಿನಿಯಾದ್ದರಿಂದ 'ಗುಣ'ಳೆನಿಸುವ ರಮೆ ಮತ್ತು 'ವಿ- ಗುಣ'ತ್ರಿಗುಣರಹಿತನಾದ ನಾರಾಯಣ, ಇವರೇ 'ಗುಣ ವಿಗುಣ'ರು.

ದೇಹಭೃತಾಂ ಸಗಿರಃ ನ ಅನುಯಯುಃ

'ಸ-ಗಿರಃ' ಗೀಃ ಎಂದರೆ ವಾಗಿಂದ್ರಿಯ. ಅದರಿಂದ ಯುಕ್ತವಾದ ಪಂಚಜ್ಞಾನೇಂದ್ರಿಯಗಳು. ಮತ್ತು ಗೀಃ ಎಂದರೆ ಮಾತು, ವೇದ ವಾಣಿಯೂ ಹೌದು. ದೇಹಧಾರಿಗಳ ಪಂಚೇಂದ್ರಿಯಗಳಾಗಲಿ ಮಾತು ಗಳಾಗಲಿ ವೇದಗಳಾಗಲಿ ಮಧ್ವಶಾಸ್ತ್ರಾನುಸಾರಿಯಾಗದಿದ್ದರೆ 'ನ ಅನು ಯಯುಃ ರಮಾನಾರಾಯಣರನ್ನು 'ಅನು' ಯೋಗ್ಯತಾನುಸಾರ ತಿಳಿಸಲಾರವು.

ಅತ್ರ ಹಂಸಕುಲ ಗೀತ ಪರಂಪರಯಾ ಅನುಯಯುಃ

'ಅತ್ರ' ಈ ಸಂಸಾರದಲ್ಲಿ 'ಹಂಸ'ರೆನಿಸುವ ಋಜುಯೋಗಿಗಳ ಕುಲದವರು ಸನಕಾದಿ ಪರಂಪರೆಯವರು ಶ್ರೀಮಧ್ವಾಚಾರ್ಯರು ನೀಡುವ ಉಪದೇಶ ಪರಂಪರೆಯ ಸಹಾಯದಿಂದಲೇ 'ಅನು ಯಯುಃ' ಅವರವರ ಯೋಗ್ಯತಾನುಸಾರ ನಿಶ್ಚಿತವಾಗಿ ಬೋಧಿಸುವವು.

ಶ್ರುತಯಃ ತುಷಾವರಣಾ ಇವ ವಯಸಾ ಸಹ ರಜಾಂಸಿ ನ ವಾಂತಿ

'ತುಷಾವರಣಾಃ' ಹೊಟ್ಟಿನ ಆವರಣದೊಳಗಿರುವ ಕಾಳುಗಳು 'ವಯಸಾ ಸಹ' ಎಷ್ಟು ಕಾಲ ಕಳೆದರೂ 'ರಜಾಂಸಿ ನ ವಾಂತಿ' ದೂಳಿನ ಸಂಪರ್ಕಕ್ಕೆ ಬರಲಾರವು. ಹಾಗೇ ಶ್ರುತಿಗಳೂ ಎಷ್ಟು ವಯಸ್ಸು ಅಭ್ಯಾಸ ಮಾಡಿದರೂ ರಾಜಸತಾಮಸ ಜನರಿಗೆ ಬೋಧಕವಾಗಲಾರವು.

ಬಂಧನಾಃ ತ್ವಯಿ ಸಫಲಂ ಪತಂತಿ, ನ ಪತಂತಿ, ಪತಂತಿ ನಪತಂತಿ ।

ವಿಧಿ ನಿಷೇಧರೂಪದಿಂದ ಬಂಧಕವಾದ ಶ್ರುತಿಗಳು ಸಾತ್ವಿಕರಿಗೆ 'ತ್ವಯಿ' ನಿನ್ನ ವಿಷಯದಲ್ಲಿ ಯಥಾರ್ಥವಾಗಿ ಬೋಧನ ಮಾಡಿ ಮುಕ್ತಿಫಲ ನೀಡುತ್ತವೆ, ಸಫಲಂ ಪತಂತಿ. ತಾಮಸರಿಗೆ 'ನ ಪತಂತಿ' ಸಫಲವಾದ ಬೋಧನೆ ನೀಡುವುದಿಲ್ಲ. ರಾಜಸರಿಗೆ 'ಪತಂತಿ ನ ಪತಂತಿ' ಕೆಲವೊಮ್ಮೆ ಬೋಧ ಉಂಟುಮಾಡುತ್ತವೆ, ಕೆಲವೊಮ್ಮೆ ಇಲ್ಲ.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ ಹೀಗಿದೆ—

ತ್ವದವಗಮೀ ನ ವೇತ್ತಿ ಭವದುತ್ಥಶುಭಾಶುಭಯೋ
ರ್ಗುಣವಿಗುಣಾನ್ವಯಾಂಸ್ತರ್ಹಿ ದೇಹಭೃತಾಂ ಚ ಗಿರಃ
ಅನುಯುಗಮನ್ವಹಂ ಸಗುಣ ಗೀತಪರಂಪರಯಾ
ಶ್ರವಣಭೃತೋ ಯತಸ್ತ್ವಮಪವರ್ಗಗತಿರ್ಮನುಜೈಃ
~~ದ್ಯುಪತಯ ಏವ ತೇ ನ ಯಯುರಂತಮನಂತತಯಾ~~
ತ್ವಮಪಿ ಯದಂತರಾಂಡ ನಿಚಯಾ ನನು ಸಾವರಣಾಃ
ಖ ಇವ ರಜಾಂಸಿ ವಾಂತಿ ವಯಸಾ ಸಹ ಯಚ್ಛ್ರುತಯ
ಸ್ತ್ವಯಿ ಹಿ ಫಲಂತ್ಯತನ್ನಿರಸನೇನ ಭವನ್ನಿಧನಾಃ ।

[೧]ನಿನ್ನ ಜ್ಞಾನಿಯು ಕರ್ಮಫಲವಾದ ಸುಖದುಃಖಗಳನ್ನು ತಿಳಿಯುವುದಿಲ್ಲ. ಕರ್ಮವಿಧಾಯಕ ವೇದವಾಕ್ಯಗಳಿಂದ ಅವನಿಗೆ ಕಾರ್ಯ ಅಕಾರ್ಯ ಬೋಧವೂ

---

೧. **ತ್ವದವಗಮೀ ತ್ವಜ್ಜ್ಞಾನವಾನ್** ಭವತಃ ಕರ್ಮಫಲದಾತುರೀಶ್ವರಾದ್ಧೇತೋರುತ್ಥಯೋ **ರಾವಿರ್ಭೂತಯೋಃ ಶುಭಾಶುಭಯೋಃ** ಪ್ರಾಚೀನಪುಣ್ಯಾಪುಣ್ಯಕರ್ಮಣೋಃ ಫಲ **ಭೂತಾನ್ ಗುಣವಿಗುಣಾನ್ವಯಾನ್** ಸುಖದುಃಖಸಂಬಂಧಾನ್ **ನ ವೇತ್ತಿ** ನಾನುಸಂಧತ್ತೇ। ತರ್ಹಿ **ತದಾನೀಂ ಚ ದೇಹಭೃತಾಂ** ದೇಹಾಭಿಮಾನಿನಾಂ ಪ್ರವೃತ್ತಿನಿವೃತ್ತಿಕರೀರ್ಗಿರೋ ವಿಧಿ ನಿಷೇಧಲಕ್ಷಣಾ **ನ ವೇತ್ತಿ।** ವಿಗತದೇಹಾಭಿಮಾನತಯಾ ಕಾರ್ಯಾಕಾರ್ಯ ಬೋಧಾಭಾವಾನ್ನ **ನಿಯುಜ್ಯತ ಇತ್ಯರ್ಥಃ। ಏತದುಕ್ತಂ** ಭವತಿ। ಯೇ ತಾವತ್ ತತ್ವಜ್ಞಾನಿನೋ **ನ ತೇಷಾಂ ಕರ್ಮಾಧಿಕಾರ ಶಂಕಾ**ಽಪಿ। ಯೇ ಚಾನವರತಂ ತ್ವತ್‌ಕಥಾಶ್ರವಣಾದಿನಿಷ್ಠಾಃ **ತೇಷಾಮಪ್ಯಾಸನ್ನ ಭವತ್ವಾ**ದಾನಾಂ ನ ವಿಧಿನಿಷೇಧ ಬಾಧಃ। ಇತರೇಷಾಂ ತು ಯೋಗಭ್ರಷ್ಟಾನಾ ಇಂದ್ರಿಯಲಾಲಸಾನಾಮುಭಯತೋಽಪ್ಯಸುಖಮಿತಿ।

ತೇ ಅಂತಂ ದ್ಯುಪತಯಃ ಸ್ವರ್ಗಾದಿಲೋಕಪತಯೋ ನ ಪ್ರಾಪುಃ। ತತ್ ಕುತಃ ? ಯದಂತವದ್ ವಸ್ತು ತತ್‌ಕಿಮಪಿ ತ್ವಂ ನ **ಭವಸಿ। ಆಸ್ತಾಂ** ತಾವತ್ ದ್ಯುಪತಯೋ ನ ಯಯುರಿತಿ।

ಬರುವುದಿಲ್ಲ. ಏಕೆಂದರೆ ಅವನಿಗೆ ದೇಹಾಭಿಮಾನವಿರುವುದಿಲ್ಲ. ಅದರಿಂದ ಜ್ಞಾನಿಗೆ ಕರ್ಮಾಧಿಕಾರ ಶಂಕೆಯೆ ಇಲ್ಲ. ಭಕ್ತನಿಗೂ ಕೂಡ ಶ್ರವಣಾದಿಗಳಲ್ಲಿ ಆಸಕ್ತನಾಗಿರುವುದರಿಂದ ವಿಧಿನಿಷೇಧಗಳು ಬಾಧಿಸುವುದಿಲ್ಲ. ಇಂದ್ರಿಯಲಾಲಸೆಯುಳ್ಳ ಕಳ್ಳ ಸನ್ಯಾಸಿಗೆ ಮಾತ್ರ ವಿಧ್ಯತಿಕ್ರಮ ಪ್ರಯುಕ್ತ ಇಹಪರಗಳಲ್ಲಿ ದುಃಖವೆ. ಪರಮಾತ್ಮನಲ್ಲಿ ಅನಂತಗುಣಗಳಿವೆ. ದೇವತೆಗಳೂ ಅವನ್ನು ತಿಳಿಯಲಾರರು. ಸ್ವತಃ ಪರಮಾತ್ಮನೇ ತಿಳಿಯಲಾರ, ಇಲ್ಲದ ಪರಿಮಿತಿಯನ್ನು ತಿಳಿಯದಿದ್ದ ಮಾತ್ರಕ್ಕೆ ಪರಮಾತ್ಮ ಸರ್ವಜ್ಞನಲ್ಲ ಎಂದಾಗುವುದಿಲ್ಲ. ಶಶವಿಷಾಣವನ್ನು ತಿಳಿಯದ ಮಾತ್ರಕ್ಕೆ ಯಾರೂ ಅಜ್ಞಾನಿಗಳೆನಿಸುವುದಿಲ್ಲ. ಹೀಗೆ ಗುಣಗಳು ಅನಂತ ಇರುವುದರಿಂದ ಶಬ್ದಗಳು ನೇರವಾಗಿ ಇವನು ಇಷ್ಟು ಗುಣಗಳು ಉಳ್ಳವನೆನ್ನುವುದಿಲ್ಲ. 'ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ' ಎಂದು ಮುಂತಾಗಿ ಎಲ್ಲವನ್ನೂ ನಿಷೇಧ ಮಾಡುವ ಮೂಲಕ ತಾತ್ಪರ್ಯವೃತ್ತಿಯಿಂದ ಪರಮಾತ್ಮನನ್ನು ವೇದಗಳು ಬೋಧಿಸುತ್ತವೆ. ನಿಷೇಧದಲ್ಲಿ ಪರ್ಯವಸಾನವಾದ ಮಾತ್ರಕ್ಕೆ ಶೂನ್ಯವೇ ವೇದತಾತ್ಪರ್ಯ ಗೋಚರವೆನ್ನಲಾಗದು. ನಿಷೇಧಕ್ಕೆ ಒಂದು ಸ್ಥಳ, ಆಶ್ರಯ ಬೇಕು. ಆಶ್ರಯವಿಲ್ಲದೆ ನಿಷೇಧವಿಲ್ಲ. ಆಶ್ರಯವಾದ ಬ್ರಹ್ಮವೇ ವೇದತಾತ್ಪರ್ಯ ಗೋಚರ' ಎಂದು ಶ್ರೀಧರ ವ್ಯಾಖ್ಯಾನ ಹೇಳಿದೆ.

'ಜ್ಞಾನಿಗೆ ದೇಹಾಭಿಮಾನವಿಲ್ಲದ್ದರಿಂದ ವೇದ ಅವನಿಗೆ ಏನು ಹೇಳಿದರೂ ತಿಳಿಯದು, ಅದರಿಂದ ವಿಧಿನಿಷೇಧಗಳಿಗೆ ಅವನು ಒಳಗಾಗುವುದಿಲ್ಲ' ಎನ್ನುವುದು ಸರಿಯಲ್ಲ. ಜ್ಞಾನಿ ಜೀವನ್ಮುಕ್ತನಾಗಿದ್ದು ಭಿಕ್ಷಾಟನಾದಿ ಸರ್ವವ್ಯವಹಾರ ಮಾಡುವುದು ದೇಹಾಭಿಮಾನವಿರುವುದರಿಂದ ಮಾತ್ರ ಸಾಧ್ಯ. ಶಿಷ್ಯರಿಗೆ ಉಪದೇಶ ಮಾಡುವಾಗ

ಯದ್ಯಸ್ಮಾತ್ ತ್ವಮಪ್ಯಾತ್ಮನೋಽಂತಂ ನ ಯಾಸಿ। ಯಸ್ಯ ತವಾಂತರಾ ಮಧ್ಯೇ ನನ್ವಹೋ ಸಾವರಣಾ ಅಂಡನಿಚಯಾಃ ಪರಿಭ್ರಮಂತಿ। ವಯಸಾ ಕಾಲಚಕ್ರೇಣ ಖೇ ರಜಾಂಸೀವ ಇಹ ಏಕದೈವ ನತು ಪರ್ಯಾಯೇಣ। ಹಿ ಯಸ್ಮಾದೇವಂ ಅತಃ ಶ್ರುತಯಸ್ತ್ವಯಿ ಫಲಂತಿ। ತಾತ್ಪರ್ಯ ವೃತ್ತ್ಯಾ ಪರ್ಯವಸ್ಯಂತಿ। ನತು ಸಾಕ್ಷಾದ್ ವದಂತ್ಯಯಮೇತಾವಾನಿತಿ। ಸಗುಣಸ್ಯ ಗುಣಾನಂತ್ಯಾತ್ ನಿರ್ಗುಣಸ್ಯ ಚಾಗೋಚರತ್ವಾತ್। ಕಥಂ ತರ್ಹ್ಯಪದಾರ್ಥೇ ತಾತ್ಪರ್ಯಮಿತಿ। ತತ್ರ ವಿಧಿಮುಖವಾಕ್ಯೇ ಭವೇದಯಂ ನಿಯಮಃ ಪದಾರ್ಥಸ್ಯೈವ ವಾಕ್ಯಾರ್ಥತ್ವಮಿತಿ। ನಿಷೇಧಮುಖೇ ತು ನಾಯಂ ನಿಯಮ ಇತ್ಯಾಹ ಅತನ್ನಿರಸನೇನೇತಿ। ಅನ್ಯದೇವ ತದ್ವಿದಿತಾದಥೋ ಅವಿದಿತಾದಧೀತ್ಯಾದಿ ಪ್ರಕಾರೇಣ ಲಕ್ಷಣಯಾ ಚ ತತ್ತ್ವಮಸೀತ್ಯಾದಯಃ ಪರ್ಯವಸ್ಯಂತಿ। ನಚ ವಾಚ್ಯಂ ನಿಷೇಧ್ಯೈಃ ಶೂನ್ಯಮೇವ ಜ್ಞಾಪ್ಯತ ಇತಿ। ಯತೋ ಭವನ್ನಿಧನಾ ಭವತಿ ತ್ವಯಿ ನಿಧನಂ ಸಮಾಪ್ತಿರ್ಯಾಸಾಂ ತಾಸ್ತಥಾ। ನಹಿ ನಿರವಧಿನಿಷೇಧಃ ಸಂಭವತಿ ಅತೋಽವಧಿಭೂತೇ ತ್ವಯಿ ಫಲಂತೀತ್ಯರ್ಥಃ। -ಶ್ರೀಧರಃ

ಶಿಷ್ಯರ ಪ್ರಶ್ನೆಗಳನ್ನು ಕೇಳಿ ತಿಳಿಯಬಲ್ಲವನಾದರೆ ವೇದದ ವಿಧಿನಿಷೇಧಗಳನ್ನು ಏಕೆ ತಿಳಿಯಲಾರ? ಕರ್ಮಫಲವಾದ ಸುಖದುಃಖಗಳ ಅನುಭವ ಅವನಿಗಿಲ್ಲವಾದರೆ ಹಸಿವಿನಿಂದ ಬಳಲಿ ಭಿಕ್ಷಾಟನೆಗೆ ಏಕೆ ಹೋಗುತ್ತಾನೆ?

'ಪರಮಾತ್ಮನಲ್ಲಿ ಅನಂತಗುಣಗಳಿರುವುದರಿಂದ ವಿಧಿಮುಖವಾಗಿ 'ಇವನು ಇಷ್ಟು ಗುಣ ಉಳ್ಳವನು' ಎಂದು ವೇದವು ಹೇಳುವುದಿಲ್ಲ' ಎನ್ನುವುದೂ ಸರಿಯಲ್ಲ. 'ಏತಾವಾನಸ್ಯ ಮಹಿಮಾ ಅತೋ ಜ್ಯಾಯಾಂಶ್ಚ ಪೂರುಷಃ' 'ಪರಮಪುರುಷ ಇಷ್ಟು ಮಹಿಮೆ ಉಳ್ಳವನು. ಹೀಗೆಂದ ಮಾತ್ರಕ್ಕೆ ಇಷ್ಟೇ ಮಹಿಮೆ ಎಂದು ಅಭಿಪ್ರಾಯವ ಇದಕ್ಕೂ ಹೆಚ್ಚಿನ ಮಹಿಮೆ ಉಳ್ಳವನು' ಎಂದು ಪುರುಷಸೂಕ್ತ ಅನಂತಗುಣಗಳ ವಿಧಿಮುಖವಾಗಿಯೇ ಹೇಳುತ್ತಿದೆ.

ವಿಧಿಮುಖವಾಗಿ ಭಗವಂತನನ್ನು ಹೇಳಲು ಬರುವಾಗ ನಿಷೇಧಮು ವಾಗಿಯೇ ಹೇಳಬೇಕೆನ್ನುವ ಆವಶ್ಯಕತೆ ಇಲ್ಲ. ಅವನು ಸರ್ವವಿಲಕ್ಷಣನಾದ್ದರಿಂ ನಿಷೇಧಮುಖವಾಗಿಯೂ ವೇದ ಅವನನ್ನು ಸ್ತುತಿಸುತ್ತದೆ.

ನಿಷೇಧಕ್ಕೆ ಒಂದು ಅವಧಿ, ಆಶ್ರಯ ಹೇಳಬೇಕೆಂಬ ನಿಯಮವೂ ಇಲ್ಲ. 'ಶಶವಿಷಾಣವಿಲ್ಲ' ಎನ್ನಲು ಎಲ್ಲಿ ಎಂದು ಆಶ್ರಯವನ್ನು ಹೇಳಬೇಕಾಗಿಲ್ಲ. ಅದರಿಂದ 'ನಿರ್ಗುಣಬ್ರಹ್ಮನನ್ನು ವಿಧಿಮುಖವಾಗಿ ಹೇಳಲು ಬರುವುದಿಲ್ಲ ನಿಷೇಧ ಮುಖವಾಗಿ ಮಾತ್ರ ಹೇಳಲು ಬರುತ್ತದೆ' ಎಂದರೆ, ಅದು ಶೂನ್ಯವೇ ಸರಿ.

ಪರಮೇಶ್ವರಸ್ಯಾವಗಮಾತ್ ತದವಗಮಾ ಶ್ರೀಃ। ತಯಾಽವ ಗಮ್ಯತ್ವಾದರ್ಥಃ ಪರಮಃ। ತೇನ ಬದ್ಧತ್ವಾತ್ ಸಿತಾ ಶ್ರೀಃ ಗುಣಾತ್ಮಿಕಾ ಚ। ಸಗಿರಃ ವಾಕ್‌ಪೂರ್ವಕಾಣೀಂದ್ರಿಯಾಣಿ ಶ್ರಿಯೋ ವಿಷ್ಣೋಶ್ಚ ನಾನುಕೂಲ್ಯೇನ ಯಯುಃ। ಅನುಯಯುಶ್ಚ ಹಂಸಕುಲಗೀತ-ಪರಂಪರಯಾ।

'ತದವಗಮಾರ್ಥಸಿತಾಸಿತಯೋಃ ಗುಣವಿಗುಣಯೋಃ' ಎಂಬಲ್ಲಿ 'ತತ್' ಎಂದರೆ ಪರಮಾತ್ಮನೆ, ಪ್ರಸಿದ್ಧನಾದ್ದರಿಂದ. ಅವನ 'ಅವಗಮ' ಜ್ಞಾನ ಎಲ್ಲರಿಗಿಂತ ಹೆಚ್ಚಾಗಿ ಇರುವುದು ಲಕ್ಷ್ಮಿಗೆ ಮಾತ್ರ. ಅದರಿಂದ 'ತದವಗಮ'ಳು ಲಕ್ಷ್ಮಿ. ಅವಳಿಂದ ಜ್ಞೇಯನಾದ್ದರಿಂದ ಪರಮಾತ್ಮ 'ತದವಗಮಾರ್ಥ'ನೆನಿಸುತ್ತಾನೆ. ಅವನಿಂದ ಸಿತ, ಬದ್ಧ, ಅಧೀನಳಾದ್ದರಿಂದ 'ತದವಗಮಾರ್ಥಸಿತಾ' ಎಂದರೆ ಲಕ್ಷ್ಮಿ. ತ್ರಿಗುಣಾಭಿಮಾನಿನಿಯಾದ್ದರಿಂದ 'ಗುಣ' ಎಂದರೆ ಲಕ್ಷ್ಮಿ. 'ವಿಗುಣ'ನೆಂದರೆ ಗುಣರಹಿತನಾದ ಪರಮಾತ್ಮ.

'ಸಗಿರಃ' ಎಂದರೆ ವಾಗಿಂದ್ರಿಯ ಸಹಿತವಾಗಿ ಎಲ್ಲ ಇಂದ್ರಿಯಗಳು ಈ ಲಕ್ಷ್ಮೀನಾರಾಯಣರ ವಿಷಯದಲ್ಲಿ 'ನ ಅನುಯಯುಃ' ಅನುಕೂಲವಾಗಿ ಪ್ರವೃತ್ತಿ ಮಾಡಲಿಲ್ಲ. ಎಂದರೆ ಸರಿಯಾಗಿ ಅವರ ಬಗ್ಗೆ ತಿಳಿವಳಿಕೆ ನೀಡಲಿಲ್ಲ. ಆದರೆ ಹಂಸಕುಲಗೀತ ಪರಂಪರೆಯಿಂದ, ಅಂದರೆ, 'ಹಂಸ'ರೆಂದರೆ ಋಜುಗಳು ಅವರ ಕುಲದವನಾದ ಚತುರ್ಮುಖನ ಮುಖ್ಯಪ್ರಾಣನ ಉಪದೇಶ ಪರಂಪರೆಯಿಂದ ವಾಗಾದಿ ಇಂದ್ರಿಯಗಳಾಗಲಿ ವೇದಾದಿಶಾಸ್ತ್ರಗಳಾಗಲಿ ಅನುಕೂಲವಾಗಿ ಪ್ರವೃತ್ತಿ ಮಾಡಿದುವು. ಯಥಾರ್ಥ ಜ್ಞಾನ ಉಂಟು ಮಾಡಿದುವು.

ಯಥಾ ತುಷಾವೃತಾನಾಂ ತಂಡುಲಾನಾಂ ರಜಃಸ್ಪೃಷ್ಟಿರ್ನಾಸ್ತಿ ಏವಂ ರಜೋರೂಪಾನ್ ಮನುಷ್ಯಾನ್ ನ ಯಾಂತಿ ಶ್ರುತಯಃ । ವಯಸಾ ಸಹ ಮಹತಾ ಕಾಲೇನಾಪಿ । ಅತಸ್ತ್ವಯಿ ಸಫಲಂ ಪತಂತಿ ನ ಪತಂತಿ ಚ ವಿಧಿ ನಿಷೇಧರೂಪೇಣ ಬಂಧನಾತ್ಮಿಕಾಃ ।

'ನ ತುಷಾವರಣಾ ಇವ' ಎಂಬಲ್ಲಿ ಹೊಟ್ಟಿನಿಂದ ಆವೃತವಾದ ಅಕ್ಕಿಕಾಳುಗಳಿಗೆ ದೂಳಿನ ಸಂಪರ್ಕ ಹೇಗೆ ಆಗುವುದಿಲ್ಲವೋ ಅದರಂತೆ ಶ್ರುತಿಗಳು ರಜೋಗುಣತಮೋಗುಣ ಸ್ವಭಾವದವರಾದ ನಿತ್ಯಸಂಸಾರಿ ಮನುಷ್ಯರನ್ನೂ ಅಸುರರನ್ನೂ ಅವರು ಬಹುಕಾಲ ವಿಚಾರಮಾಡಿದರೂ 'ನ ವಾಂತಿ' ಮುಟ್ಟಲಾರವು ತತ್ವಜ್ಞಾನವನ್ನು ನೀಡಲಾರವು. ('ರಜಾಂಸಿ' ಎಂಬುದು ದೃಷ್ಟಾಂತವಾದ ದೂಳನ್ನೂ ದಾರ್ಷ್ಟಾಂತಿಕರಾದ ರಜೋಗುಣ ಸ್ವಭಾವದವರನ್ನೂ ಹೇಳುತ್ತದೆ. ಉಪಲಕ್ಷಣಯಾ ಅಸುರರನ್ನೂ ಇಟ್ಟುಕೊಳ್ಳಬೇಕು. ತತ್ವಜ್ಞಾನಕ್ಕೆ, ಇಂದ್ರ ವಿರೋಚನರಿಗೆ ಚತುರ್ಮುಖನ ಉಪದೇಶದಂತೆ ಜೀವರಲ್ಲಿ ಸ್ವರೂಪ ಯೋಗ್ಯತೆಯೂ ಆವಶ್ಯಕ. 'ಬಂಧನಾಃ' ಎಂದರೆ ವಿಧಿನಿಷೇಧರೂಪದಿಂದ ಬಂಧಿಸುವ ವೇದಗಳು. 'ಪತಂತಿ ನ ಪತಂತಿ' ಎಂಬುದನ್ನು ಪತಂತಿ, ನ ಪತಂತಿ, ಪತಂತಿ ನ ಪತಂತಿ' ಎಂದು ಮೂರು ವಾಕ್ಯಗಳಾಗಿ ಮಾಡಿಕೊಳ್ಳಬೇಕು.) ಸಾತ್ವಿಕರಿಗೆ 'ಸಫಲಂ ಪತಂತಿ' ಮೋಕ್ಷಫಲ ನೀಡುವಂತೆ ತತ್ವಜ್ಞಾನವನ್ನೇ ಶ್ರುತಿಗಳು ನೀಡುತ್ತವೆ. ತಾಮಸರಿಗೆ 'ಸಫಲಂ ನ ಪತಂತಿ' ಮೋಕ್ಷಫಲ ನೀಡುವ ತತ್ವಜ್ಞಾನವನ್ನು ನೀಡುವುದಿಲ್ಲ, ರಾಜಸರಿಗೆ 'ಸಫಲಂ ಪತಂತಿ, ನ ಪತಂತಿ' ಸ್ವರ್ಗಾದಿ ಫಲವನ್ನು ಕೆಲವೊಮ್ಮೆ ಕೊಡುವಂತೆ ಕೆಲವೊಮ್ಮೆ ಕೊಡದಂತೆ ಮಿಶ್ರಜ್ಞಾನವನ್ನು ನೀಡುತ್ತವೆ.

ಜಾನಾತಿ ಪ್ರಕೃತಿರ್ವಿಷ್ಣುಂ ಜ್ಞೇಯೋ ವಿಷ್ಣುಸ್ತು ನಿರ್ಗುಣಃ ।
ತಾವುಭೌ ನ ವಿಜಾನಂತಿ ಋತೇ ಬ್ರಹ್ಮಪರಂಪರಾಂ ॥
ಇತಿ ಮಹೋಪನಿಷದಿ ॥

ಅನ್ಯೇ ಸರ್ವೇ ಶ್ರಿಯಾ ಬದ್ಧಾಃ ಶ್ರೀರ್ಬದ್ಧಾ ವಿಷ್ಣುನೈವ ತು ।
ಬಂಧಶ್ಚ ವಿಷ್ಣುತಂತ್ರತ್ವಂ ಮುಕ್ತಾನಾಂ ಚ ಶ್ರಿಯಸ್ತಥಾ ।
ಅಮುಕ್ತಾನಾಂ ತು ಬದ್ಧತ್ವಂ ಜನ್ಮಮೃತ್ಯಾದಿದುಃಖಿತಾ ।
ಹೇಯೋ ಬಂಧಶ್ಚ ನೈವ ಸ್ಯಾನ್ನತು ಸ್ವೋಚ್ಚವಶೇ ಸ್ಥಿತಿಃ ।
ಗುಣಾತ್ಮಿಕಾ ಚ ಸಾ ದೇವೀ ನಿರ್ಗುಣಃ ಪುರುಷೋತ್ತಮಃ ।
ಸೈವ ವಿಷ್ಣುಂ ವಿಜಾನಾತಿ ಜ್ಞೇಯೋ ಜ್ಞಾತಾ ಚ ಕೇಶವಃ ।
ನ ತಾವನ್ಯೇ ವಿಜಾನಂತಿ ವಿನಾ ಹಂಸಪರಂಪರಾಂ ॥
ತಯಾಪಿ ನೈವ ಜಾನಂತಿ ಮಾನುಷಾ ಅಸುರಾಸ್ತಥಾ ।
ನಿಷ್ಫಲೈವಾಸುರೇ ತಸ್ಮಾಚ್ಛ್ರುತಿರ್ಬಂಧಾಯ ಕೇವಲಂ ।
ನಿಷೇಧವಿಧ್ಯುತ್ಕ್ರಮಣಾತ್ ತಮಸ್ಯೇವ ವಿನಿಕ್ಷಿಪೇತ್ ।
ನಿಷ್ಫಲಾ ಸಫಲಾ ಚೈವ ಮಾನುಷಾಣಾಂ ತು ಮಧ್ಯತಃ ।
ಸಫಲೈವ ತು ದೇವಾನಾಂ ನಿಯತಂ ಮುಕ್ತಿದಾಯಿನೀ ।

'ಲಕ್ಷ್ಮೀದೇವಿ ವಿಷ್ಣುವನ್ನು ತಿಳಿಯುತ್ತಾಳೆ. ವಿಷ್ಣು ಜ್ಞೇಯನಾಗಿದ್ದಾನೆ. ಲಕ್ಷ್ಮೀದೇವಿ ತ್ರಿಗುಣಾಭಿಮಾನಿನಿ. ವಿಷ್ಣು ನಿರ್ಗುಣ. ಮೋಕ್ಷಯೋಗ್ಯರೂ ಕೂಡ ಬ್ರಹ್ಮಪರಂಪರೆಯ ಉಪದೇಶವಿಲ್ಲದೆ ಆ ಲಕ್ಷ್ಮೀನಾರಾಯಣರನ್ನು ಇಬ್ಬರನ್ನು ತಿಳಿಯಲಾರರು.' ಎಂದು ಮಹೋಪನಿಷತ್ತು ಹೇಳುತ್ತದೆ.

'ಬೇರೆ ಎಲ್ಲರೂ ಲಕ್ಷ್ಮಿಯಿಂದ ಬದ್ಧರು. ಲಕ್ಷ್ಮಿ ವಿಷ್ಣುವಿನಿಂದ ಮಾತ್ರ ಬದ್ಧಳು. ಲಕ್ಷ್ಮೀದೇವಿಗೂ ಮುಕ್ತರಿಗೂ ವಿಷ್ಣುವಿನ ಅಧೀನತೆಯೆ ಬಂಧ ಹೊರತು ಜನನಮರಣಾದಿ ರೂಪವಾದ ಪ್ರಕೃತಿಬಂಧವಲ್ಲ. ಅಮುಕ್ತರಿಗೆ ಜನನಮರಣಾದಿ ದುಃಖ ಉಂಟಾಗುವುದೇ ಬಂಧ. ಹೇಯವಾದ ಬಂಧವೆಂದರೆ ಇದೇ ಹೊರತು ಲಕ್ಷ್ಮಿಯಂತೆ, ಮುಕ್ತರಂತೆ, ಸ್ವೋತ್ತಮರ ಅಧೀನದಲ್ಲಿರುವುದು ಹೇಯವಾದ ಬಂಧವಲ್ಲ. ಆ ಲಕ್ಷ್ಮೀದೇವಿ ಗುಣಾಭಿಮಾನಿನಿ. ವಿಷ್ಣು ನಿರ್ಗುಣ. ಅವಳೇ ವಿಷ್ಣುವನ್ನು ತಿಳಿಯುವವಳು. ವಿಷ್ಣು ಜ್ಞೇಯ ಮತ್ತು ಸರ್ವಜ್ಞ. ಅವರಿಬ್ಬರನ್ನು ಬೇರೆಯವರು ಋಜು

ಪರಂಪರೆಯ ಉಪದೇಶವಿಲ್ಲದೆ ತಿಳಿಯಲಾರರು. ಋಜು ಪರಂಪರೆಯ ಉಪದೇಶವಿದ್ದರೂ ನಿತ್ಯಸಂಸಾರಿಗಳೂ ತಮೋಯೋಗ್ಯರೂ ಸರಿಯಾಗಿ ತಿಳಿಯಲಾರರು. ಆದರಿಂದ ಶ್ರುತಿಯು ಅಸುರರಿಗೆ ಮೋಕ್ಷಫಲಪ್ರದ ವಾಗುವುದಿಲ್ಲ. ಕೇವಲ ತಮಸ್ಸಿನ ಬಂಧಕ್ಕೇ ಕಾರಣವಾಗುವುದು. (ವಿರೋಚನನಿಗೆ ಬ್ರಹ್ಮನ ಉಪದೇಶ ಹೀಗೆ ಅನರ್ಥವನ್ನೇ ಉಂಟುಮಾಡಿತು) ಏಕೆಂದರೆ ಅಸುರರು ಶ್ರುತ್ಯುಕ್ತವಾದ ನಿಷೇಧವನ್ನೂ ವಿಧಿಯನ್ನೂ ಉಲ್ಲಂಘಿಸುವುದರಿಂದ ಶ್ರುತ್ಯಭಿಮಾನಿನಿ ದುರ್ಗೆ ಅವರನ್ನು ತಮಸ್ಸಿನಲ್ಲಿಯೇ ಹಾಕುವಳು. ಮನುಷ್ಯ ಮಧ್ಯಮರಿಗೆ ಸಫಲ-ನಿಷ್ಫಲಗಳಲ್ಲಿ ಮಧ್ಯಳು ಅಂದರೆ ಮಿಶ್ರಫಲದಾಯಕಳಾಗುವಳು. ದೇವತೆಗಳಿಗೆ ಮಾತ್ರ ನಿಶ್ಚಯವಾಗಿ ಮುಕ್ತಿದಾಯಕಳಾಗುವುದರಿಂದ ಸಫಲಳೇ ಆಗುವಳು.

ಶ್ರೀ ಗರುಡ ಉವಾಚ—

ಕೇ ಹಂಸಾಃ ಕಃ ಪರೋ ಹಂಸಃ ಕೇ ಚ ಪಾರಾವತಾ ಗಣಾಃ ।
ಕೇ ಚ ತಿತ್ತಿರಯಸ್ತತ್ರ ಕೇ ಶುಕಾಃ ಕೇ ಚ ವಾಯಸಾಃ ॥

ಶ್ರೀಭಗವಾನುವಾಚ—

ಪರೋ ಹಂಸೋಽಹಮೇವೈಕೋ ಹಂಸಾ ಬ್ರಹ್ಮಾಣ ಏವ ತು ।
ಪಾರಾವತಾ ದೇವತಾಸ್ತು ಮುನಯಸ್ತಿತ್ತಿರಾಃ ಸ್ಮೃತಾಃ ।
ಮಾನುಷಾಸ್ತು ಶುಕಾಃ ಪ್ರೋಕ್ತಾ ಆಸುರಾಶ್ಚೈವ ವಾಯಸಾಃ
ಪ್ರಾಪ್ಯಂ ಪ್ರಾಪ್ತಂ ಯತೋ ನಿತ್ಯಂ ಪೂರ್ಣಂ
ಸರ್ವೋತ್ತಮಂ ಮಯಾ
ಅತಃ ಪರಮಹಂಸೋಽಹಂ ಮದನಂತರಮೇವ ತು
ಯತಃ ಪ್ರಾಪ್ತಮಿವಾಶೇಷಂ ಸರ್ವಜೀವೋತ್ತಮಂ ಶುಭಂ
ಅತೋ ಬ್ರಹ್ಮಪದೇ ಯೋಗ್ಯಾ ಜೀವಾ ಹಂಸಾಃ ಪ್ರಕೀರ್ತಿತಾಃ
ತೇಷಾಂ ಪರಂಪರಾಪ್ರಾಪ್ತಂ ಯೈರ್ಜ್ಞಾನಂ ನಿಯಮೇನ ತು
ತೇ ಮುಚ್ಯಂತೇ ನೈವ ಚಾನ್ಯೇ ಗುರುರ್ಬ್ರಹ್ಮಾ ಯತೋ ನೃಣಾಂ
ದೈವತಂ ತ್ವಹಮೇವೈಕೋ ಮಾಮವಿತ್ವಾ ನ ಮುಚ್ಯತೇ
ಪರಂ ಪ್ರತಿ ಯತೋ ನೀಚಾ ಬ್ರಹ್ಮಣಃ ಸರ್ವದೇವತಾಃ
ಪಾರಾವತಾಸ್ತತಃ ಪ್ರೋಕ್ತಾಸ್ತೈಸ್ತೀರ್ಣಾ ಸಂಸೃತಿರ್ಯತಃ

ತಿತ್ತಿರಾ ಮುನಯಸ್ತಸ್ಮಾತ್ ಕಾಸುಖಿತ್ವಾತ್ತು ಮಾನುಷಾಃ
ಶುಕಾ ಇತಿ ಸಮುದ್ದಿಷ್ಟಾ ವಯೋಮಾತ್ರಸುಖಿತ್ವತಃ
ವಯಸೋಽಂತೇ ತು ದುಃಖಿತ್ವಾದಸುರಾ ವಾಯಸಾ ಸ್ಮೃತಾಃ ।
ಏವಂ ಪಂಚವಿಧಾ ಜೀವಾಃ ಷಷ್ಠೋಽಹಂ ಪರಮೇಶ್ವರಃ
ನ ಮತ್ಸಮೋಽಧಿಕೋ ವಾಪಿ ಕಶ್ಚಿದಸ್ತಿ ದ್ವಿಜೋತ್ತಮ ॥

ಇತಿ ಗಾರುಡೇ ॥

ಶ್ರೀ ಗರುಡ ನುಡಿದ—

ಹಂಸರು ಯಾರು? ಪರಮಹಂಸನು ಯಾರು? ಯಾರು ಪಾರಾವತ ಗಣದವರು? ಯಾರು ತಿತ್ತಿರರು? ಯಾರು ಶುಕರು ಮತ್ತು ಯಾರು ವಾಯಸರು?

ಶ್ರೀ ಭಗವಂತ ನುಡಿದ—

ಪರಮಹಂಸ ನಾನೊಬ್ಬನೆ. ಹಂಸರು ಬ್ರಹ್ಮಪದವಿಗೆ ಯೋಗ್ಯರಾದ ಋಜುಗಳು. ಪಾರಾವತರು ದೇವತೆಗಳು, ಮುನಿಗಳು ತಿತ್ತಿರರು. ಮನುಷ್ಯರು ಶುಕರು. ಅಸುರರು ವಾಯಸರು. ಪ್ರಾಪ್ಯವಾಗಿರುವ ನಿತ್ಯಪೂರ್ಣಸರ್ವೋತ್ತಮತ್ವವನ್ನು ನಾನು ಹೊಂದಿರುವುದರಿಂದ ''ಪರಮತ್ವಂ ಹಂತಿ ಗಚ್ಛತಿ ಸಂ ಸಂಪೂರ್ಣಂ' ಪರಮಹಂಸನೆನಿಸಿದ್ದೇನೆ. ನನ್ನ ಅನಂತರದಲ್ಲಿ ಪೂರ್ಣಸರ್ವೋತ್ತಮತ್ವಕ್ಕೆ ಸದೃಶವಾದ ಸರ್ವಜೀವೋತ್ತಮತ್ವವೆಂಬ ಶುಭವನ್ನು ಪೂರ್ಣವಾಗಿ ಬ್ರಹ್ಮಪದವಿಗೆ ಯೋಗ್ಯರಾದ ಜೀವರು ಹೊಂದಿರುವುದರಿಂದ ಅವರು ಹಂಸರೆನಿಸಿದ್ದಾರೆ. ಅವರ ಪರಂಪರೆಯಿಂದ ಜ್ಞಾನವನ್ನು ಪಡೆದವರು ನಿಶ್ಚಯವಾಗಿ ಮುಕ್ತಿಯನ್ನು ಹೊಂದುವರು ಹೊರತು ಬೇರೆಯವರು ಹೊಂದುವುದಿಲ್ಲ. ಏಕೆಂದರೆ ಎಲ್ಲ ಜೀವರಿಗೆ ಗುರು ಬ್ರಹ್ಮ. ದೇವನು ನಾನೊಬ್ಬನೆ. ನನ್ನನ್ನು ತಿಳಿಯದೆ ಯಾರೂ ಮುಕ್ತಿಯನ್ನು ಹೊಂದುವುದಿಲ್ಲ. ಪರಮಾತ್ಮನಿಗಿಂತ ಕೆಳಗೆ ಬ್ರಹ್ಮನಿಂದಲೂ ಕಡಿಮೆಯವರಾಗಿರುವವರು 'ಪರ ಅವತ'ರಾದ್ದರಿಂದ 'ಪಾರಾವತರು' ಎಲ್ಲ ದೇವತೆಗಳು. ಸಂಸಾರವನ್ನು ದಾಟಿದವರು ಮುನಿಗಳು 'ತಿತ್ತಿರ'ರೆನಿಸಿದ್ದಾರೆ. ಮನುಷ್ಯರು 'ಕಾಸುಖಿ'ರು, ಅಲ್ಪಸುಖಿರು. (ಸ್ವಿತ್ಯಾನಂದಃ ಸಮುದ್ದಿಷ್ಟಃ ಎಂಬಂತೆ 'ಸು' ಎಂದರೆ ಆನಂದ. 'ತಾಲವ್ಯಾಶ್ಚೈವ ದಂತ್ಯಾಶ್ಚ' ಎಂಬಂತೆ 'ಶು' ಎಂದರೂ ಆನಂದ.

ಇದು 'ಕ' ಕುತ್ಸಿತ, ಅಲ್ಪ) ಅದರಿಂದ ಮನುಷ್ಯರು 'ಶುಕ'ರೆನಿಸಿದ್ದಾರೆ. ವಯಸಿದ್ದಾಗ ಬದುಕಿರುವಾಗ ಮಾತ್ರ ಸುಖಿಗಳು. ಅದು ಕಳೆದಾಗ ಸತ್ತಮೇಲೆ ನರಕದಲ್ಲಿ ದುಃಖಿಗಳಾಗುವುದರಿಂದ ಅಸುರರು 'ವಾಯಸ' ರೆನಿಸಿದ್ದಾರೆ. ಹೀಗೆ ಜೀವರು ಐದು ಬಗೆಯವರು, ಆರನೆಯವನು ನಾನು ಪರಮೇಶ್ವರ. ನನಗೆ ಸಮಾನನಾಗಲಿ ಉತ್ತಮನಾಗಲಿ ಯಾರೂ ಇಲ್ಲ.' ಎಂದು ಗರುಡಪುರಾಣದಲ್ಲಿ ಹೇಳಿದೆ.

❖❖❖

ಈ ಶ್ರುತಿಗೀತೆಯ ರೂಪದಲ್ಲಿ ಸಕಲಶಾಸ್ತ್ರಸಾರವನ್ನು ಸನಕಾದಿಗಳು ಲೋಕಕ್ಕೆ ತೆಗೆದುಕೊಟ್ಟರು ಎಂದು ಬದರಿಕಾಶ್ರಮದಲ್ಲಿ ನಾರಾಯಣಮುನಿ ನಾರದರಿಗೆ ಹೇಳುತ್ತಾರೆ.

ಇತ್ಯಶೇಷಸಮಾಮ್ನಾಯಪುರಾಣೋಪನಿಷದ್ರಸಃ ।
ಸಮುದ್ಧೃತಃ ಪೂರ್ವಜೈಸ್ತ್ಯೈರ್ವ್ಯೋಮಾಯನಮಹಾತ್ಮಭಿಃ ॥ ೪೨ ॥

ಪೂರ್ವಿಕರಾದ ಸನಕಾದಿಗಳು ಆಕಾಶನಾಮಕ ಪರಮಾತ್ಮನನ್ನು ಆಶ್ರಯಿಸಿರುವವರಲ್ಲಿ ಮಹಾತ್ಮರು. ಅವರು ಹೀಗೆ ಸಕಲ ವೇದ ಪುರಾಣ ಉಪನಿಷತ್ತುಗಳ ಸಾರವನ್ನು ತೆಗೆದುಕೊಟ್ಟಿದ್ದಾರೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ವ್ಯೋಮಯಾನೈರ್ಮಹಾತ್ಮಭಿಃ' ಎಂದು ಪಾಠವನ್ನಿಟ್ಟುಕೊಂಡು 'ಆಕಾಶದಲ್ಲಿ ಸಂಚರಿಸುವ ಮಹಾತ್ಮರು' ಎಂದು ವ್ಯಾಖ್ಯಾನ ಮಾಡಿದ್ದಾರೆ. ಆದರೆ ಈ ಅರ್ಥ ಪ್ರಕೃತದಲ್ಲಿ ಹೊಂದುವುದಿಲ್ಲ. ಯಕ್ಷರಾಕ್ಷಸ ಪಿಶಾಚರೂ ಆಕಾಶಚಾರಿಗಳೇ. ಸನಕಾದಿಗಳಲ್ಲಿ ಏನು ವಿಶೇಷ? ಸರ್ವನಿರಪೇಕ್ಷರಾಗಿ, ಸರ್ವತ್ರ ಅನಾಸಕ್ತಿಯಿಂದ ಆಕಾಶದಲ್ಲಿ ಸಂಚರಿಸುವವರು ಎಂದು ಯೋಗಿರಾಮಾನುಜ ಸನಾತನ ಜೀವಗೋಸ್ವಾಮಿ ಮುಂತಾದವರು ವಿವರಣೆ ನೀಡುತ್ತಾರೆ. ಅದು ಆ ಶಬ್ದದಿಂದ ಸ್ವರಸವಾಗಿ ತಿಳಿದುಬರುವುದಿಲ್ಲ. ಮತ್ತು ಭಾಗವತಶಾಸ್ತ್ರ, ಶಾಸ್ತ್ರದಲ್ಲಿ ಶಾಸ್ತ್ರಪ್ರಸಿದ್ಧವಾದ ವಿವರಣೆ ಉಚಿತ.

ವ್ಯೋಮೇತಿ ವಿಷ್ಣುನಾಮ ಸ್ಯಾದ್ ವಿಶೇಷಾದೋತತಾ ಯತಃ ।

'ವಿಶೇಷವಾಗಿ ವ್ಯಾಪ್ತನಾದ್ದರಿಂದ ವಿಷ್ಣು 'ವ್ಯೋಮ'ನೆನಿಸಿದ್ದಾನೆ.'

ಅಥವಾ **ಆಕಾಶದಂತೆ ವ್ಯಾಪ್ತನಾಗಿದ್ದಾನೆ** ಅಸಂಗನಾಗಿದ್ದಾನೆ **ಎಂದು ವ್ಯೋಮ** ವಿಷ್ಣುನಾಮ. ಬ್ರಹ್ಮಸೂತ್ರದಲ್ಲಿ **'ಆಕಾಶಸ್ತಲ್ಲಿಂಗಾತ್' ಎಂದು** 'ಆಕಾಶ' ಶಬ್ದ ಸಮನ್ವಯ ಮಾಡಿದ್ದಾರೆ. **ಅಲ್ಲಿ ಅದರ ಪರ್ಯಾಯಶಬ್ದಗಳಿಗೂ** ಸಮನ್ವಯ

ವಿವಕ್ಷಿತವಾಗಿದೆ, 'ಪೂರ್ಣಾನಂದೋಽಂತರಃ ಖವತ್' ಎಂದು 'ಖ' ಶಬ್ದವನ್ನು ಅಣುಭಾಷ್ಯದಲ್ಲಿ ಹೇಳಿರುವುದರಿಂದ. ಅದರಂತೆ ವ್ಯೋಮಶಬ್ದವೂ ವಿಷ್ಣುನಾಮ. ಅದರಿಂದ ವ್ಯೋಮಾಯನರೆಂದರೆ ಭಗವಂತನನ್ನು ಆಶ್ರಯಿಸಿದವರು, ಭಾಗವತರು, ಅವರಲ್ಲಿಯೂ ಮಹಾತ್ಮರು ಎಂದರೆ, ಸನಕಾದಿಗಳು ಎಂದಂತಾಗುವುದು.

'ವ್ಯೋಮಾಯನ ಮಹಾತ್ಮಭಿಃ' ಬ್ರಹ್ಮಾಶ್ರಯೇಷೂತ್ತಮೈಃ॥

'ವ್ಯೋಮಾಯನಮಹಾತ್ಮಭಿಃ' ಅಂದರೆ ಭಾಗವತೋತ್ತಮರಿಂದ ಎಂದರ್ಥ.

❖❖❖

ನಾರಾಯಣ ಮುನಿಯಿಂದ ಶ್ರುತಿಗೀತೆಯ ಉಪದೇಶ ಪಡೆದ ನಾರದರು ವೇದವ್ಯಾಸರ ಬಳಿಗೆ ಬಂದು ಅವರನ್ನು ಸ್ತುತಿಸಿದರು.

ಏವಂ ಸ ಗುರುಣಾದಿಷ್ಟೋ ಗೃಹೀತ್ವಾ ಶ್ರದ್ಧಯಾಽಽತ್ಮವಾನ್ ।
ಪೂರ್ಣಃ ಸದ್ಯಸ್ತತೋ ರಾಜನ್ ಪ್ರಾಹ ವೀರವ್ರತೋ ಗುರುಮ್ ॥ ೪೫ ॥

ರಾಜನೆ, ಹೀಗೆ ನಾರದರು ಗುರು ನಾರಾಯಣ ಮುನಿಗಳಿಂದ ಶ್ರದ್ಧೆಯಿಂದ ಉಪದೇಶ ಪಡೆದು ಒಡನೆ ಮನೋನಿಗ್ರಹ ಮಾಡಿಕೊಂಡು ಪರಲೋಕ ಸಾಧನೆಯಲ್ಲಿ ವೀರವ್ರತವನ್ನು ಕೈಗೊಂಡು ಕೃತಕೃತ್ಯರಾಗಿ ಗುರುಗಳ ಮುಂದೆ ಹೇಳಿದರು.

ನಮಸ್ತಸ್ಮೈ ಭಗವತೇ ಕೃಷ್ಣಾಯಾಮಲಮೂರ್ತಯೇ ।
ಯೋ ಧಾತಾ ಸರ್ವಭೂತಾನಾಮಭಯೋ ಯಸ್ಯ ತೇ ಕಲಾಃ ॥ ೪೬ ॥

ತನ್ನ ಪ್ರತಿ ಬಿಂಬಾಂಶರಾದ ಸಮಸ್ತ ಪ್ರಾಣಿಗಳಿಗೆ ಯಾರು ಧಾರಕವಾಗಿ ಅಭಯದಾಯಕನಾಗಿರುವನೋ ನಿರ್ಮಲಸ್ವರೂಪನಾದ ಆ ಭಗವಾನ್ ಶ್ರೀಕೃಷ್ಣನಿಗೆ ನಮಸ್ಕಾರ.

ಇತ್ಯಾದ್ಯಮೃಷಿಮಾಮಂತ್ರ್ಯ ತಚ್ಛಿಷ್ಯಾಂಶ್ಚಾಮಲಾತ್ಮಕಾನ್ ।
ತತೋಽಗಾದಾಶ್ರಮಂ ಸಾಕ್ಷಾತ್ಪಿತುರ್ದ್ವೈಪಾಯನಸ್ಯ ಮೇ ॥ ೪೭ ॥

ಹೀಗೆ ನಾರದರು ಆದಿಋಷಿಯಾದ ನಾರಾಯಣಮುನಿಯನ್ನು ನಮಿಸಿ ನಿರ್ಮಲ ಅಂತಃಕರಣದ ಅವರ ಶಿಷ್ಯರಲ್ಲಿ ಹೋಗಿ ಬರುವೆವೆಂದು ಹೇಳಿ ನನ್ನ (ಶುಕಮುನಿಗಳ) ಸಾಕ್ಷಾತ್ ಪಿತನಾದ ಬಾದರಾಯಣರ ಆಶ್ರಮಕ್ಕೆ ಬಂದರು.

ಸಭಾಜಿತೋ ಭಗವತಾ ಕೃತಾಸನಪರಿಗ್ರಹಃ ।
ತಸ್ಮೈ ತದ್ವರ್ಣಯಾಮಾಸ ನಾರಾಯಣಮುಖಾಚ್ಛ್ರುತಮ್ ॥ ೪೮ ॥

ಭಗವಾನ್ ವೇದವ್ಯಾಸರು ನಾರದರನ್ನು ಸತ್ಕರಿಸಿದರು. ಬಳಿಕ ನಾರದರು ಆಸನವನ್ನು ಸ್ವೀಕರಿಸಿ ತಾನು ನಾರಾಯಣಮುನಿಗಳ ಮುಖದಿಂದ ಉಪದೇಶ ಪಡೆದ ಹರಿತತ್ವವನ್ನು ವೇದವ್ಯಾಸರಿಗೆ ಹೇಳಿ ಸ್ತುತಿಸಿದರು.

'ವರ್ಣಯಾಮಾಸ' ಉಪದಿದೇಶೇತ್ಯರ್ಥಃ' ನಾರದರು ವೇದವ್ಯಾಸರಿಗೆ 'ವರ್ಣಿಸಿ'ದರೆಂದರೆ ಉಪದೇಶಿಸಿದರೆಂದರ್ಥ' ಎಂದು ವೀರರಾಘವ ವ್ಯಾಖ್ಯಾನದಲ್ಲಿ ಹೇಳಿದೆ. ಆದರಿಂದ ವ್ಯಾಸರಿಗೆ ತಿಳಿಯದಿದ್ದುದನ್ನು ನಾರದರು ಉಪದೇಶಿಸಿದರೆಂದು ಬೇರೆ ವ್ಯಾಖ್ಯಾನಕಾರರ ಅಭಿಪ್ರಾಯ ತಿಳಿದುಬರುತ್ತದೆ. ಸಾಕ್ಷಾತ್ ನಾರಾಯಣನ ಅವತಾರರಾದ ವ್ಯಾಸರಿಗೆ ತಿಳಿಯದುದೇನಿದೆ? ಅವರಿಗೆ ಉಪದೇಶ ಮಾಡುವವರು ಯಾರಿದ್ದಾರೆ? 'ಪರಂಪರಯಾ ಪ್ರಾಪ್ತಂ ಮಯಾऽಪಿ ತೇ ವರ್ಣಿತಂ' 'ನಾರದರು ವ್ಯಾಸರಿಗೆ ವ್ಯಾಸರು ನನಗೆ ವರ್ಣಿಸಿದರು, ಹೀಗೆ ಪರಂಪರೆಯಿಂದ ಹರಿದು ನನಗೆ ಬಂದುದನ್ನು ನಾನೂ ನಿನಗೆ ವರ್ಣಿಸಿದೆನೆಂದು ಶುಕಮುನಿ ಹೇಳುತ್ತಾರೆ' ಎಂದು ವಲ್ಲಭವ್ಯಾಖ್ಯಾನ.

ಆದರೆ ನಾರದರು ಸುಮ್ಮನೆ ವರ್ಣಿಸಲಿಲ್ಲ, ವರ್ಣಿಸಿ ಸ್ತುತಿಸಿದರು.

ಕಥಾಃ ಕಥಯತೀಶಸ್ಯ ವ್ಯಾಸಸ್ಯಾಂತೇ ಸ ನಾರದಃ।
ಸ್ತುತ್ಯರ್ಥಂ ತಸ್ಯ ದೇವಸ್ಯ ಜ್ಞಾಪನಾಯ ನ ತು ಕ್ವಚಿತ್ ।
ಪೂರ್ಣಜ್ಞಾನಾಮೃತಸ್ಯಾಸ್ಯ ನ ತು ಜ್ಞಪ್ತಿಃ ಪರಾದ್ ಭವೇತ್ ।
ಋಷಿರೂಪೀ ಯತೋ ವಿಷ್ಣುಃ ಸ್ವಯಮೇವ ಜನೈಃ ಶ್ರುತಃ ।
ಇತಿ ಬ್ರಾಹ್ಮೇ ॥

'ನಾರದರು ವೇದವ್ಯಾಸರ ಸನ್ನಿಧಿಯಲ್ಲಿ ಅವರ ಸ್ತೋತ್ರ ಮಾಡುವುದಕ್ಕಾಗಿ ಶ್ರುತಿಗೀತೆಗಳನ್ನು ಹೇಳುತ್ತಾರೆ ಹೊರತು ಉಪದೇಶಿಸುವುದಕ್ಕಾಗಿ ಅಲ್ಲ. ಪೂರ್ಣಜ್ಞಾನಾಮೃತ ಸ್ವರೂಪಿಯಾದ ವ್ಯಾಸರಿಗೆ ಬೇರೆಯವರಿಂದ ಜ್ಞಾನ ಬರುವುದಿಲ್ಲ. ಜ್ಞಾನಸ್ವರೂಪಿಯಾದ ವಿಷ್ಣುವೆ ಋಷಿರೂಪ ಧರಿಸಿದವನೆಂದು ಲೋಕಪ್ರಸಿದ್ಧವೇ ಆಗಿದೆ' ಎಂದು ಬ್ರಾಹ್ಮಪುರಾಣದಲ್ಲಿ ಹೇಳಿದೆ.

❖❖❖

ದಶಮಸ್ಕಂಧ ತಾತ್ಪರ್ಯದಲ್ಲಿ ಇದು ಅಂತಿಮ ಭಾಗವತ ಪದ್ಯ—

ಯೋ ಹ್ಯಾತ್ಮಾ ಜಗದಾದಿಮಧ್ಯನಿಧನೋ ಯೋಽವ್ಯಕ್ತಜೀವೇಶ್ವರೋ
ಯಃ ಸೃಷ್ಟ್ವೇದಮನುಪ್ರವಿಷ್ಟ ಋಷಿಣಾ ಚಕ್ರೇ ಪುನಃ ಸಂಹಿತಾಮ್ ।
ಯಂ ಸಂಪದ್ಯ ಜಹಾತ್ಯಜಾಮನುಶಯೀ ಸುಪ್ತಃ ಕುಲಾಯಂ ಯಥಾ
ತಂ ಕೈವಲ್ಯನಿರಸ್ತಯೋನಿಮಭಯಂ ಧ್ಯಾಯೇದಜಸ್ರಂ ಹರಿಮ್ ॥ ೫೦ ॥

ಪರಮಾತ್ಮ ಜಗತ್ತಿನ ಉತ್ಪತ್ತಿ ಸ್ಥಿತಿ ಸಂಹಾರಗಳಿಗೆ ಕರ್ತ. ಪ್ರಕೃತಿ ಪುರುಷರಿಗೆ ನಿಯಾಮಕ, ಜಗತ್ತನ್ನು ಸೃಜಿಸಿ ನಿಯಮನಕ್ಕಾಗಿ ಒಳಗೆ ಪ್ರವೇಶಿಸಿದ್ದಾನೆ. ಋಷಿರೂಪದಿಂದ ಭಾಗವತ ಪುರಾಣವನ್ನು ರಚಿಸಿದ್ದಾನೆ. ಅವನ ಅಪರೋಕ್ಷ ಪಡೆದ ಸಂಸಾರಿ ಜೀವ ಗೂಡಿನಲ್ಲಿ ಮಲಗಿದ ಹಕ್ಕಿ ಬೆಳಗಾದಾಗ ಗೂಡನ್ನು ಬಿಡುವಂತೆ ಬಂಧಕವಾದ ಎರಡು ಬಗೆಯ ಪ್ರಕೃತಿಯನ್ನು ಬಿಟ್ಟುಬಿಡುತ್ತಾನೆ. ಆ ಪರಮಾತ್ಮ ಸರ್ವೋತ್ತಮನಾದ್ದರಿಂದ ಯಾರಿಂದಲೂ ಹುಟ್ಟುವವನಲ್ಲ, ಭಯರಹಿತ, ಭಯನಿವಾರಕ. ಅಂಥ ಹರಿಯನ್ನು ನಿರಂತರ ಧ್ಯಾನ ಮಾಡಬೇಕು.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ ಹೀಗಿದೆ—

ಯೋಽಸ್ಯೋತ್ಪ್ರೇಕ್ಷಕ ಆದಿಮಧ್ಯನಿಧನೇ ಯೋಽವ್ಯಕ್ತ ಜೀವೇಶ್ವರೋ
ಯಃ ಸೃಷ್ಟ್ವೇದಮನುಪ್ರವಿಶ್ಯ ಋಷಿಣಾ ಚಕ್ರೇ ಪುರಃ ಶಾಸ್ತಿ ತಾಃ ।
ಯಂ ಸಂಪದ್ಯ ಜಹಾತ್ಯಜಾಮನುಶಯೀ ಸುಪ್ತಃ ಕುಲಾಯಂ ಯಥಾ
ತಂ ಕೈವಲ್ಯನಿರಸ್ತಯೋನಿಮಭಯಂ ಧ್ಯಾಯೇದಜಸ್ರಂ ಹರಿಂ ॥

[೧] **ಶ್ರೀಹರಿ** ಜಗತ್ತಿನ ಸೃಷ್ಟ್ಯಾದಿಕಾರ್ಯವನ್ನು ಸಂಕಲ್ಪಿಸುವವನು. ಆ ಕಾರ್ಯವನ್ನು **ಮಾಡುವವನು. ಪ್ರಕೃತಿ** ಜೀವರಿಗೆ ಒಡೆಯನಾಗಿದ್ದಾನೆ. ಜಗತ್ತನ್ನು ಸೃಷ್ಟಿ ಮಾಡಿ **ಜೀವರೂಪದಿಂದ ಪ್ರವೇಶಿಸಿ ಶರೀರಗಳನ್ನು** ನಿರ್ಮಿಸುತ್ತಾನೆ. ಅವುಗಳನ್ನು **ರಕ್ಷಿಸುತ್ತಾನೆ. ಅವನನ್ನು ಹೊಂದಿದವನು,** ನಿದ್ರಿಸುವವನು ಮೈಮರೆಯುವಂತೆ,

---

೧. **ಪೂರ್ವೋಕ್ತಪ್ರಕಾರೇಣೇದಂ ಸೃಷ್ಟ್ವಾ ಯದರ್ಥಮೇತತ್** ಸೃಷ್ಟಂ ತೇನ ಋಷಿಣಾ ಸೃಷ್ಟೇ **ಕಾರ್ಯೇಽಹಮಿತಿ ದರ್ಶನಾತ್ ಋಷಿರ್ಜೀವಃ ।** ತೇನ ಸಹ ಅನುಪ್ರವಿಷ್ಟಃ ಪುರಃ ಶರೀರಾಣಿ ತಸ್ಯಭೋಗಾಯತನಾನಿ **ಚಕ್ರೇ ತಾಃ ಪುರಃ ಶಾಸ್ತಿ** ತಸ್ಯ ಭೋಗ್ಯಂ ದದತ್ ಪರಿಪಾಲಯತಿ । ಯಂ ಸಂಪದ್ಯ ಸ **ಜೀವೋಽಜಾಂ ಕಾರ್ಯ**ಕಾರಣರೂಪಾಮವಿದ್ಯಾಂ ತ್ಯಜತಿ । ಸುಪ್ತಃ ಕುಲಾಯಂ ಯಥೇತಿ । **ಯಥಾ ಸುಪ್ತಂ ಶರೀರವಂತಮನ್ಯೇ** ಪಶ್ಯಂತಿ, ಸ ತು ನಾತ್ಮಾನಂ ತಥಾ ಪಶ್ಯತಿ, ಏವಂ ಜೀವನ್ಮುಕ್ತಮಪ್ಯನ್ಯೇ **ದೇಹ**ವಂತಂ ಪಶ್ಯಂತಿ, ಸ ತು ನ ಕಿಂಚಿತ್ ಪಶ್ಯತೀತಿ ತಂ ಹರಿಮಜಸ್ರಂ ಅನವರತಂ **ಧ್ಯಾಯೇತ್ ।** ಕೈವಲ್ಯೇನ ಅಪ್ರಚ್ಯುತ ಸ್ವರೂಪಾವಸ್ಥಾನೇನ ನಿರಸ್ತಾ ತಿರಸ್ಕೃತಾ ಯೋನಿರ್ಮೂಲಕಾರಣಂ ಮಾಯಾ ಯೇನ ತಂ । -ಶ್ರೀಧರಃ

ಅವಿದ್ಯೆಯನ್ನು ಪರಿತ್ಯಾಗ ಮಾಡುವನು. ಆ ಹರಿ ಸ್ವರೂಪಶಕ್ತಿಯಿಂದ ಮಾಯೆಯನ್ನು ತಿರಸ್ಕರಿಸಿದವನು ಭಯ ಕಳೆವವನು. ಅಂಥ ಹರಿಯನ್ನು ಧ್ಯಾನಿಸಬೇಕು.' ಎಂದು ವ್ಯಾಖ್ಯಾನ.

ದೇಹಾದಿಕಾರ್ಯದಲ್ಲಿ ಅಹಂ ಎಂದು ಅಭಿಮಾನಪಡುವುದರಿಂದ ಜೀವ 'ಋಷಿ' ಎನಿಸುತ್ತಾನೆ ಎಂದು ಶ್ರೀಧರ ಮುಂತಾದವರು ಹೇಳುತ್ತಾರೆ. ಜೀವರಲ್ಲಿ ಯಾರಲ್ಲಿಯೂ ವಸ್ತುತಃ ಇಲ್ಲದಿರುವ ದೇಹಾತ್ಮೈಕ್ಯ ಭ್ರಮ ಎಲ್ಲರಿಗೂ ಇದೆ ಎನ್ನುತ್ತಾರೆ. ಆ ಭ್ರಮದಿಂದಲೆ ಜೀವ 'ಋಷಿ' ಎನಿಸುತ್ತಾನೆ ಎನ್ನುವುದು ವ್ಯಾಹತ. 'ಋಷಿ' ಎಂದರೆ ಜ್ಞಾನಿ ಯಥಾರ್ಥಜ್ಞಾನಿ. ಹೊರತು ಭ್ರಾಂತನಲ್ಲ. [1]ವೀರರಾಘವ ವ್ಯಾಖ್ಯಾನ ಪ್ರಕಾರ ಋಷಿ ಎಂದರೆ ಚತುರ್ಮುಖ ಅವನ ದ್ವಾರಾ ಭಗವಂತ ಪ್ರವಿಷ್ಟನಾಗುತ್ತಾನೆ. ಚತುರ್ಮುಖ 'ಋಷಿ' ಏಕೆ ಎಂಬುದನ್ನು ಅವರು ಹೇಳಿಲ್ಲ. [2]ಕವಿಚೂಡಾಮಣಿ ವ್ಯಾಖ್ಯಾನದಲ್ಲಿ ಆದಿಸೃಷ್ಟಿಯಲ್ಲಿ ಜೀವ ಜನಿಸಿ ಸುತ್ತಲೂ ಯಾರನ್ನೂ ಕಾಣದೆ 'ಅಹಂ' ಎಂದನಂತೆ. ಅದರಿಂದ ಅವನು 'ಅಹಂ' ಎನಿಸಿದನಂತೆ. 'ಋಷಿ' ಎನಿಸಿದನಂತೆ! 'ಅಹಂ' ನಾನು ಎನ್ನುವವರೆಲ್ಲರೂ ಅಂದರೆ ~~ಎಲ್ಲ ಜೀವರೂ ಋಷಿಗಳು. ಏಕೆ ಎನ್ನುವುದು ತಿಳಿಯುವುದಿಲ್ಲ.~~

ಶ್ರೀಮದಾಚಾರ್ಯರು ಹೇಳುತ್ತಾರೆ—

ಋಷಿಣಾ ಋಷಿರೂಪೇಣ ।

'ಋಷಿಣಾ' ಎಂದರೆ, ವೇದವ್ಯಾಸಋಷಿರೂಪದಿಂದ ಪುರಾಣಗಳನ್ನು ಶ್ರೀಹರಿ ನಿರ್ಮಿಸಿದ್ದಾನೆ ಎಂದರ್ಥ.

('ಅ ಆ ಅಂ ಅಃ ಪುರಾಣರ್ಷಿರ್ವ್ಯಾಸಃ ಶಾಖಾಸಹಸ್ರಕೃತ್' ಎಂದು ವಾಸುದೇವ ಸಹಸ್ರನಾಮದಲ್ಲಿ ಎಂದು ಶ್ರುತಿಯಲ್ಲಿ ವೇದವ್ಯಾಸರೇ ಪುರಾಣಗಳಿಗೆ ಋಷಿ ಎಂದು ಪ್ರಸಿದ್ಧರಾಗಿದ್ದಾರೆ.)

❖❖❖

---

೧. ಋಷಿಣಾ ಚತುರ್ಮುಖಾಖ್ಯ ಜೀವೇನಾನುಪ್ರವಿಶ್ಯ ಜೀವದ್ವಾರಾಽನುಪ್ರವಿಶ್ಯೇತ್ಯರ್ಥಃ ।
-ವೀರರಾಘವಃ

ಋಚ್ಛತಿ ಕಾರ್ಯಂ ದೇಹಾದಿಕಮಹಮಿತಿ ಜಾನಾತಿ ಅಭಿಮನ್ಯತೇ ಇತಿ ಋಷಿರ್ಜೀವಃ ।
-ರಾಧಾರಮಣದಾಸಗೋಸ್ವಾಮೀ

೨. ಸೃಷ್ಟೇ ಕಾರ್ಯೇ ಸೋಽಹಮಿತಿ ದರ್ಶನಾತ್ ಋಷಿರ್ಜೀವಃ **ತಥಾಚ ಶ್ರುತಿಃ ।** ಆತ್ಮೈವೇದಮಗ್ರ ಆಸೀತ್ ಪುರುಷವಿಧಃ । ಸೋನುವೀಕ್ಷ್ಯನಾನ್ಯದಾತ್ಮನೋಽಪಶ್ಯತ್ ಸೋಹಮಸ್ಮೀತ್ಯೇವ ವ್ಯಾಹರತ್ ತತೋಽಹಂನಾಮಾಭವತ್ ।
-ಕವಿಚೂಡಾಮಣಿ ಚಕ್ರವರ್ತೀ

ಅಧ್ಯಾಯ - ೯೭

ಅಧ್ಯಾಯ ಸಾರಾಂಶ

ಪಾಂಡವರು ವನವಾಸ ಅಜ್ಞಾತವಾಸಗಳನ್ನು ಮುಗಿಸಿ ಏಳು ಅಕ್ಷೋಹಿಣಿ ಸೈನ್ಯವನ್ನು ಕೂಡಿಸಿ ಉಪಪ್ಲಾವ್ಯನಗರದಲ್ಲಿ ಬೀಡು ಬಿಟ್ಟಿರುವರೆಂಬ ವಾರ್ತೆಯನ್ನು ಕೇಳಿ ಶ್ರೀಕೃಷ್ಣ ಭೂಭಾರಹರಣಕ್ಕೆ ಕಾಲ ಒದಗಿಬಂದಿತೆಂದು ಸಂತಸಗೊಂಡ. ಸಾತ್ಯಕಿ ಕೃತವರ್ಮ ಉದ್ಧವ ಶಠ ಸಾರಣ ಅಭಿಮನ್ಯುಗಳನ್ನು ಮುಂದೆ ಮಾಡಿಕೊಂಡು ದೊಡ್ಡ ಸೈನ್ಯದೊಂದಿಗೆ ಉಪಪ್ಲಾವ್ಯಕ್ಕೆ ತೆರಳಿದ.

ಕೌರವಪಾಂಡವರಿಗೆ ಸಂಧಿ ಮಾಡಿಸಲು ಯತ್ನಿಸುತ್ತಿದ್ದ ಶ್ರೀಕೃಷ್ಣನನ್ನು ಮೂರ್ಖ ದುರ್ಯೋಧನ ಕಟ್ಟಿಹಾಕಲು ಹೊರಟಾಗ ಶ್ರೀಕೃಷ್ಣ ವಿಶ್ವರೂಪವನ್ನು ತೋರಿದ. ಕೌರವರಿಗೆ ಘೋರ ಭಯವನ್ನು ಉಂಟುಮಾಡಿ ಹಿಂತಿರುಗಿದ. ಕೌರವರ ಕಡೆಯ ರಾಜರು ಮತ್ಸರದಿಂದ ಯುದ್ಧಕ್ಕಾಗಿ ಒಂದುಗೂಡಿದರು. ಸಂಧಿಯನ್ನು ಒಪ್ಪಲಿಲ್ಲ. ಅದರಿಂದ ಧರ್ಮರಾಜ ಶ್ರೀಕೃಷ್ಣನನ್ನು ಮುಂದೆ ಮಾಡಿಕೊಂಡು ತಮ್ಮಂದಿರೊಂದಿಗೆ ಕುರುಕ್ಷೇತ್ರಕ್ಕೆ ತೆರಳಿದ. ವಿರಾಟರಾಜ, ದ್ರುಪದ, ಶಿಖಂಡಿ, ಧೃಷ್ಟದ್ಯುಮ್ನ, ಐವರು ಕೇಕಯರಾಜರು, ಧೃಷ್ಟಕೇತು, ಶೈಬ್ಯ ಇವರು ಒಂದೊಂದು ಅಕ್ಷೋಹಿಣಿ ಸೈನ್ಯದೊಂದಿಗೆ ಧರ್ಮರಾಜನ ಸಹಾಯಕ್ಕಾಗಿ ಹಿಂಬಾಲಿಸಿದರು. ಅಹಂಕಾರಿಯಾದ ದುರ್ಯೋಧನ ನೂರು ಮಂದಿ ಕೌರವರೊಂದಿಗೆ ದ್ರೋಣ, ಭೀಷ್ಮ, ಕೃಪ, ಅಶ್ವತ್ಥಾಮ, ಕರ್ಣ, ಬಾಹ್ಲೀಕ, ಶಕುನಿ, ಹಾರ್ದಿಕ್ಯ, ಸಾಲ್ವ, ಶಲ್ಯ, ಭಗದತ್ತ ಜಯದ್ರಥರೊಂದಿಗೆ ಕುರುಕ್ಷೇತ್ರಕ್ಕೆ ಬಂದ. ಕುರುಪಾಂಡವರು ಕುರುಕ್ಷೇತ್ರದಲ್ಲಿ ಸೇರಿ ಸಮಂತಪಂಚಕದಲ್ಲಿ ಸುರ್ಯೋದಯ ಕಾಲದಲ್ಲಿ ವ್ಯೂಹಗಳನ್ನು ರಚಿಸಿ ನಿಂತರು. ಕೌರವರ ಸೈನ್ಯ ಹನ್ನೊಂದು ಅಕ್ಷೋಹಿಣಿಗಳಷ್ಟಿತ್ತು. ವನವಾಸ ಕ್ಲೇಶಗಳನ್ನು ಅನುಭವಿಸುತ್ತಿದ್ದ ಪಾಂಡವರಿಗೆ ಕೇವಲ ಏಳು ಅಕ್ಷೋಹಿಣಿ ಸೈನ್ಯ ದೊರಕಿತ್ತು.

ಗಾಂಡೀವ ಹಿಡಿದಿದ್ದ ಅರ್ಜುನ ರಥವೇರಿ ಬಂದು ಶತ್ರುಸೈನ್ಯವನ್ನು ವೀಕ್ಷಿಸಿದಾಗ ಅವನಿಗೆ ಭೀಷ್ಮದ್ರೋಣ ಮುಂತಾದ ಗುರುಹಿರಿಯರು ಬಂಧುಗಳೇ ಕಂಡುಬಂದುದರಿಂದ ಅವರನ್ನು ಕೊಲ್ಲಲು ಮನಸ್ಸಾಗಲಿಲ್ಲ. ವಿಷಾದಗೊಂಡು ಶತ್ರುವಧೆ ಮಾಡಲು ಒಪ್ಪದಿದ್ದ ಅರ್ಜುನನಿಗೆ ಶ್ರೀಕೃಷ್ಣ ಗೀತೋಪದೇಶದಿಂದ ಕರ್ತವ್ಯವನ್ನು ಬೋಧಿಸಿದ. ಒಳಗೆ ಅಂತರ್ಯಾಮಿಯಾಗಿ ಪ್ರೇರಣೆ ನೀಡಿಯೂ ಒಪ್ಪಿಸಿದ ವಿಶ್ವರೂಪವನ್ನೂ ತೋರಿದ. ಅದರಿಂದ ಅರ್ಜುನ ಪುನಃ ಗಾಂಡೀವವನ್ನು ಎತ್ತಿಕೊಂಡ. ಭಾರತ ಯುದ್ಧ ಪ್ರಾರಂಭವಾಗುವುದನ್ನು ಕೇಳಿ ಬಲರಾಮ ಅದನ್ನು ತಡೆಯಲಾಗದೆ ತೀರ್ಥಯಾತ್ರೆಯ ನೆಪದಿಂದ ದೂರಕ್ಕೆ ಹೊರಟುಹೋದ.

ಪಾಂಡವರಿಗೆ ಧೃಷ್ಟದ್ಯುಮ್ನ ಸೇನಾಪತಿಯಾದ. ಕೌರವರಿಗೆ ಭೀಷ್ಮ ಸೇನಾಪತಿಯಾಗಿ ಘೋರಯುದ್ಧವನ್ನು ಮಾಡುತ್ತಲೇ ಹತ್ತನೆ ದಿನದಲ್ಲಿ ಬಿದ್ದ. ಬಳಿಕ ದ್ರೋಣಾಚಾರ್ಯರು ಸೇನಾಧಿಪತಿಯಾಗಿ ಐದುದಿನ ಯುದ್ಧ ಮಾಡಿದರು. ಅವರ ಸೇನಾಧಿಪತ್ಯದಲ್ಲಿ ದುರಾತ್ಮನಾದ ಜಯದ್ರಥ ಅಭಿಮನ್ಯುವನ್ನು ಮೋಸದಿಂದ ಕೊಲ್ಲಿಸಿದ. ಪುತ್ರಶೋಕದಿಂದ, ಬೆಂದ ಅರ್ಜುನ ನಾಳೆ ಸಂಜೆಯೊಳಗಾಗಿ ಜಯದ್ರಥನನ್ನು ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದ. ಅಂದು ರಾತ್ರಿ ಮಲಗಿದ್ದ ಅರ್ಜುನನನ್ನು ಸ್ವಪ್ನದಲ್ಲಿ ಶ್ರೀಕೃಷ್ಣ ಕೈಲಾಸಕ್ಕೆ ಕರೆದೊಯ್ದು ಶಿವನಿಂದ ಪಾಶುಪತಾಸ್ತ್ರಮಂತ್ರೋಪದೇಶ ವನ್ನು ಕೊಡಿಸಿದ. ತಾನು ಸಂಕಲ್ಪಿಸಿದ್ದ ಕಾರ್ಯವನ್ನು ಹೀಗೆ ಅಚಿಂತ್ಯಶಕ್ತಿಯಿಂದ ಸಾಧಿಸಿ ಬೆಳಗ್ಗೆ ಬೇಗನೆ ರಣರಂಗಕ್ಕೆ ಆಗಮಿಸಿದ. ಆ ದಿನದ ಕೊನೆಯಲ್ಲಿ ಅರ್ಜುನ ಜಯದ್ರಥನನ್ನು ವಧಿಸಿದ. ದ್ರೋಣಾಚಾರ್ಯರು ಐದು ದಿನ ಯುದ್ಧ ಮಾಡಿ ಐದನೇ ದಿನ ಸಂಜೆ ಧೃಷ್ಟದ್ಯುಮ್ನನಿಂದ ಹತರಾದರು. ಕರ್ಣ ಎರಡು ದಿನ ಯುದ್ಧಮಾಡಿ ಅರ್ಜುನನಿಂದ ಹತನಾದ. ಶಲ್ಯ ಅರ್ಧದಿನ ಯುದ್ಧಮಾಡಿ ಮಧ್ಯಾಹ್ನದಲ್ಲಿ ಧರ್ಮರಾಜನಿಂದ ಹತನಾದ. ಅದೇದಿನ ಭೀಮ ದುರ್ಯೋಧನರಿಗೆ ಗದಾಯುದ್ಧ ನಡೆಯಿತು. ಹದಿನೆಂಟು ಅಕ್ಷೋಹಿಣಿ ಸೈನ್ಯ ಮತ್ತು ಅವುಗಳ ಅಧಿಪತಿಗಳಾದ ರಾಜರೆಲ್ಲರ ಮಹಾವಿನಾಶ ಅರ್ಧಕಡಿಮೆ ಹದಿನೆಂಟು ದಿನಗಳಲ್ಲಿ ನಡೆದು ಹೋಯಿತು.

❖❖❖

ಅಧ್ಯಾಯ - ೯೮

ಅಧ್ಯಾಯ ಸಾರಾಂಶ

ಕೌರವ ಪಾಂಡವರ ನಡುವೆ ತಟಸ್ಥನಾಗಿದ್ದ ಬಲರಾಮ ತೀರ್ಥ ಯಾತ್ರೆಯ ನೆಪದಿಂದ ದೂರಹೋಗಿ ಪ್ರಭಾಸಕ್ಷೇತ್ರ ಪೃಥೂದಕ ಬಿಂದುಸರ ತ್ರಿತಕೂಪ ಸುದರ್ಶನತೀರ್ಥ ವಿಶಾಲತೀರ್ಥ, ಬ್ರಹ್ಮತೀರ್ಥ ಚಕ್ರತೀರ್ಥ ಪ್ರಾಚೀನಸರಸ್ವತೀ ತೀರ್ಥಗಳನ್ನು ಸೇವಿಸಿ ನೈಮಿಷಾರಣ್ಯವನ್ನು ಹೋಗಿ ಸೇರಿದ. ಅಲ್ಲಿ ಮಹರ್ಷಿಗಳು ದೀರ್ಘಸತ್ರವನ್ನು ನಡೆಸುತ್ತಿದ್ದರು. ಬಲರಾಮನಿಗೆ ಮುನಿಗಳು ಎದ್ದುನಿಂತು ನಮಸ್ಕಾರ ಮಾಡಿ ಸ್ತೋತ್ರ ಮಾಡಿದರು. ವಿಧ್ಯುಕ್ತವಾದ ಸ್ವಾಗತ ಸತ್ಕಾರಗಳನ್ನು ನೀಡಿದರು.

ಅಲ್ಲಿ ವೇದವ್ಯಾಸರ ಶಿಷ್ಯನಾದ ರೋಮಹರ್ಷಣನೆಂಬ ಸೂತಪುರಾಣಿಕ ಕುಳಿತಿದ್ದ. ಆತ ಮಾತ್ರ ತಾನು ಬಂದಾಗ ಎದ್ದುನಿಂತು ತಲೆಬಾಗಿ ನಮಿಸದಿದ್ದುದನ್ನು ಗಮನಿಸಿ ಬಲರಾಮ ಕುಪಿತನಾದ. 'ಇವನು ಸೂತ. ಆದರೂ ಬ್ರಾಹ್ಮಣರ ಮುಂದೆ ಅವರಿಗಿಂತ ಎತ್ತರದ ಆಸನದಲ್ಲಿ ಧರ್ಮರಕ್ಷಕರಾದ ನಮಗಿಂತಲೂ ಉನ್ನತವಾದ ಸ್ಥಾನದಲ್ಲಿ ಕುಳಿತುಕೊಳ್ಳುತ್ತಾನೆ, ದುರಹಂಕಾರಿ. ಭಗವಾನ್ ವ್ಯಾಸಮುನಿಯ ಶಿಷ್ಯನಾಗಿದ್ದೂ ಬಹಳ ಅಧ್ಯಯನ ಮಾಡಿಯೂ ಹೀಗೆ ಏಕೆ ಮಾಡುತ್ತಾನೆ? ಈತ ಮಾಡುವ ಪುರಾಣ ಪ್ರವಚನ ನಟನು ರಂಗದ ಮೇಲೆ ಮಾಡುವ ನಟನೆಯಂತೆ ಏನೂ ಪ್ರಯೋಜನಕ್ಕೆ ಬಾರದು. ಇಂಥ ದುಷ್ಟರ ನಿಗ್ರಹಕ್ಕಾಗಿಯೆ ನಾನು ಅವತಾರ ಮಾಡಿದ್ದೇನೆ. ಧರ್ಮದ ಮುಖವಾಡ ಹಾಕಿಕೊಂಡು ಹೆಚ್ಚು ಪಾಪ ಮಾಡುವ ಇಂಥವರನ್ನು ನಾನು ಕೊಲ್ಲಬೇಕು.' ಹೀಗೆ ಯೋಚಿಸಿ ಬಲರಾಮ ತೀರ್ಥಯಾತ್ರಾಕಾಲದಲ್ಲಿ ದುಷ್ಟನಿಗ್ರಹ ಕಾರ್ಯವನ್ನು ಬಿಟ್ಟವನಾಗಿದ್ದರೂ ಕೈಯಲ್ಲಿದ್ದ ದರ್ಭೆಯ ತುದಿಯಿಂದಲೆ ಹೊಡೆದು ಅವನನ್ನು ಕೊಂದು ಬಿಟ್ಟ. ಭಗವದಿಚ್ಛೆಯಿಂದ ಇದು ಹೀಗೆ ನಡೆಯಬೇಕಾಗಿದ್ದರಿಂದ ಬಲರಾಮ ಹೀಗೆ ಮಾಡಿದ್ದ. ಋಷಿಗಳೆಲ್ಲರೂ ಮನಸ್ಸಿನಲ್ಲಿ ನೊಂದು ಹಾಹಾ ಎಂದರು.

'ಪ್ರಭು ಬಲರಾಮ, ನೀನು ಹೀಗೆ ಮಾಡಬಾರದಿತ್ತು. ನಾವು ಈತನಿಗೆ ಪುರಾಣ ಹೇಳೆಂದು ಉನ್ನತವಾದ ಆಸನ ನೀಡಿದ್ದೆವು. ಸತ್ರ ಸಮಾಪ್ತಿಯಾಗುವವರೆಗೂ ತೀರದ ದೀರ್ಘಾಯುಷ್ಯವನ್ನೂ ಕೊಟ್ಟಿದ್ದೆವು. ನೀನು ಅಜ್ಞನಂತೆ ಈತನನ್ನು ಕೊಂದು ಬ್ರಹ್ಮಹತ್ಯೆ ಮಾಡಿರುವೆ. ಯೋಗೇಶ್ವರನಾದ ನಿನಗೆ ವೇದದ ವಿಧಿನಿಷೇಧಗಳ ಕಟ್ಟುಪಾಡು ಇರದಿದ್ದರೂ ಲೋಕಶಿಕ್ಷಣಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳುವುದು ಒಳ್ಳೆಯದು' ಎಂದರು.

ಬಲರಾಮ ನುಡಿದ, 'ಹಾಗಾದರೆ ನಾನು ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆ ಉತ್ತಮಕಲ್ಪದಲ್ಲಿ ಪ್ರಾಯಶ್ಚಿತ್ತ ನಿಯಮವೆಷ್ಟಿದೆಯೋ ಅಷ್ಟನ್ನು ಹೇಳಿರಿ. ಮತ್ತು ನೀವು ಈತನಿಗೆ ದೀರ್ಘಾಯುಷ್ಯ ಪ್ರವಚನ ಸಾಮರ್ಥ್ಯ ಮುಂತಾಗಿ ಏನೇನು ವರಗಳನ್ನು ನೀಡಲು ಬಯಸುವಿರೋ ಅವೆಲ್ಲವನ್ನೂ ಯೋಗಬಲದಿಂದ ನಾನು ಸಾಧಿಸಿ ಕೊಡುವೆನು. ಋಷಿಗಳು ಹೇಳಿದರು, 'ನಿನ್ನ ದರ್ಭಾಸ್ತ್ರ ಯೋಗ ಸಾಮರ್ಥ್ಯಗಳಾಗಲಿ ಈತನಿಗೆ ಬಂದ ಮರಣವಾಗಲಿ ನಾವು ಈತನಿಗೆ ಕೊಟ್ಟಿದ್ದ ವರಗಳಾಗಲಿ ಯಾವುದೂ ಸುಳ್ಳಾಗಬಾರದು, ಹಾಗೆ ಮಾಡು.'

ಬಲರಾಮ ನುಡಿದ, 'ಹಾಗಾದರೆ ಈತನ ಮಗನೇ ಮುಂದೆ ಆಯುಷ್ಯ ಪ್ರವಚನಸಾಮರ್ಥ್ಯಯುಕ್ತನಾಗಿ ಪುರಾಣ ಹೇಳಲಿ. ಏಕೆಂದರೆ 'ತಂದೆ ತಾನೇ ತನ್ನ ಮಗನ ರೂಪದಲ್ಲಿ ಜನಿಸುತ್ತಾನೆ' ಎಂದು ಶ್ರುತಿ ಹೇಳುತ್ತಿದೆ.

ಇದಕ್ಕೆ ಋಷಿಗಳು ಒಪ್ಪಿ ಬಲರಾಮ ಮಾಡಬೇಕಾಗಿದ್ದ ಪ್ರಾಯಶ್ಚಿತ್ತವಿಧಿಯನ್ನೂ ಹೇಳಿದರು. 'ಇಲ್ವಲನ ಮಗ ಬಲ್ವಲನೆಂಬ ದಾನವ ಪ್ರತಿ ಪರ್ವಕಾಲದಲ್ಲಿಯೂ ನಮ್ಮ ಸತ್ರಕ್ಕೆ ಬಂದು ಎಲ್ಲವನ್ನೂ ಕೆಡಿಸುತ್ತಿದ್ದಾನೆ. ಆ ಪಾಪಿಯನ್ನು ಸಂಹರಿಸು. ಅವನು ಇಲ್ಲಿ ಕೀವು ನೆತ್ತರು ಮಲ ಮೂತ್ರಗಳನ್ನು ಮದ್ಯಮಾಂಸಗಳನ್ನು ಸುರಿಸುತ್ತಾನೆ. ಅವನ ಸಂಹಾರಾನಂತರ ಹನ್ನೆರಡು ತಿಂಗಳ ಕಾಲ ಭಾರತ ದೇಶದಲ್ಲಿ ಸಂಚರಿಸಿ ತೀರ್ಥಸ್ನಾನ ಮಾಡು.'

❖❖❖

ಅಧ್ಯಾಯ - ೯೯

ಅಧ್ಯಾಯ ಸಾರಾಂಶ

ಪರ್ವಕಾಲದಲ್ಲಿ ಪ್ರಚಂಡ ವೇಗದಿಂದ ದೂಳನ್ನು ಸುರಿಸುತ್ತ ಕೀವಿನ ದುರ್ವಾಸನೆಯನ್ನು ಹರಡುತ್ತ ಭಯಂಕರ ಬಿರುಗಾಳಿ ಬೀಸಿತು. ಮಲಮೂತ್ರ ಸುರಿಸುತ್ತ ಶೂಲಧಾರಿಯಾಗಿ ಬಲ್ವಲ ಕಾಣಿಸಿಕೊಂಡ. ಕಾಡಿಗೆಬೆಟ್ಟದಂಥ ಮಹಾಕಾಯದ ತಾಮ್ರದಂತೆ ಕೆಂಪಾದ ಕೂದಲು ಮೀಸೆಗಳು, ಕೋರೆದಾಡೆಗಳು, ಉಗ್ರವಾದ ಹುಬ್ಬುಗಂಟಿಕ್ಕಿದ ಮುಖದವನು. ಅವನನ್ನು ಕಂಡ ಬಲರಾಮ ಒಡನೆ ಒನಕೆ ನೇಗಿಲುಗಳನ್ನು ನೆನೆದ. ಅವು ಆತನ ಬಳಿಯಲ್ಲಿ ಬಂದು ನಿಂತುವು. ಆಕಾಶದಲ್ಲಿ ನಿಂತಿದ್ದ ಬಲ್ವಲನನ್ನು ನೇಗಿಲಿನಿಂದ ಸೆಳೆದು ತಲೆಯ ಮೇಲೆ ಒನಕೆಯಿಂದ ಹೊಡೆದ. ಆ ಏಟಿಗೆ ಬಲ್ವಲನ ತಲೆ ಒಡೆಯಿತು. ರಕ್ತಕಾರುತ್ತ ಆರ್ತಧ್ವನಿ ಗೈಯುತ್ತ ವಜ್ರಾಯುಧದೇಟಿಗೆ ಬೀಳುವ ಬೆಟ್ಟದಂತೆ ನೆಲದ ಮೇಲೆ ಬಿದ್ದ. ಮುನಿಗಳು ಬಲರಾಮನನ್ನು ಆಶೀರ್ವದಿಸಿದರು. ಮುತ್ತುರತ್ನ ಗಳಿಂದ ಅಭಿಷೇಕ ಮಾಡಿದರು. ಬಾಡದ ಕಮಲದ ವೈಜಯಂತೀ ಮಾಲೆಯನ್ನು ನೀಡಿದರು. ದಿವ್ಯ ವಸ್ತ್ರಾಭರಣಗಳನ್ನು ನೀಡಿದರು.

ಬಳಿಕ ಮುನಿಗಳ ಆಜ್ಞೆ ಪಡೆದು ಬಲರಾಮ ಬ್ರಾಹ್ಮಣ ಪರಿವಾರದೊಂದಿಗೆ ಕೌಶಿಕೀತೀರಕ್ಕೆ ಬಂದು ಸ್ನಾನ ಮಾಡಿದ. ಸರಯೂನದಿಯ ಉಗಮಸ್ಥಾನವಾದ ಮಾನಸಸರೋವರಕ್ಕೆ ನಡೆದ. ಬಳಿಕ ಪ್ರಯಾಗದಲ್ಲಿ ಸ್ನಾನ ದೇವಋಷಿ ಪಿತೃತರ್ಪಣಗಳನ್ನು ಮಾಡಿ ಪುಲಹಾಶ್ರಮವನ್ನು ಕಂಡು ಗೋಮತೀ ಗಂಡಕೀ ವಿಪಾಶಾನದಿಗಳಲ್ಲಿ ಶೋಣಮಹಾನದದಲ್ಲಿ ಸ್ನಾನ ಮಾಡಿ ಗಯಾಕ್ಷೇತ್ರದಲ್ಲಿ ಪಿತೃಯಜ್ಞ ಮಾಡಿದ. ಗಂಗಾಸಾಗರ ಸಂಗಮಸ್ನಾನ ಮಾಡಿದ. ಮಹೇಂದ್ರಪರ್ವತದಲ್ಲಿ ಪರಶುರಾಮನನ್ನು ಕಂಡು ನಮಿಸಿ, ಗೋದಾವರೀ ಸಂಗಮದಲ್ಲಿ ವೇಣೀ ಪಂಪಾ ಭೀಮರಥೀ ನದಿಗಳಲ್ಲಿ ಸ್ನಾನ ಮಾಡಿದ. ಷಣ್ಮುಖನ ದರ್ಶನ ಮಾಡಿ ಶ್ರೀಶೈಲ ವೆಂಕಟಾದ್ರಿ ಕಾಮಕೋಷ್ಠಿ ಕಾಂಚೀಪುರ ಶ್ರೀರಂಗ ಋಷಭಾಚಲ ಮಧುರೆ

ಸಮುದ್ರಸೇತುಗಳನ್ನು ದರ್ಶನ ಮಾಡಿದ. ಕೃತಮಾಲಾ ತಾಮ್ರಪರ್ಣೀ ಸ್ನಾನ ಮಾಡಿ ಮಲಯಪರ್ವತದಲ್ಲಿ ಅಗಸ್ತ್ಯಮುನಿಯನ್ನು ನಮಿಸಿ ಆಶೀರ್ವಾದ ಪಡೆದ. ಕನ್ಯಾಕುಮಾರಿ ಫಾಲ್ಗುನತೀರ್ಥ ಪಂಚಾಪ್ಸರತೀರ್ಥ ಅನಂತಶಯನ ಗೋಕರ್ಣ ಶೂರ್ಪಾಲಿಗಳನ್ನು ಸಂದರ್ಶಿಸಿ ತಾಪೀ ಪಯೋಷ್ಣೀ ನಿರ್ವಿಂಧ್ಯಾನದೀ ಸ್ನಾನ ಮಾಡಿ ದಂಡಕಾರಣ್ಯವನ್ನು ಪ್ರವೇಶಿಸಿದ. ನರ್ಮದಾ ನದಿಗೆ ಬಂದು ಅನುತೀರ್ಥಸ್ನಾನ ಮಾಡಿ, ಮತ್ತೆ ಪ್ರಭಾಸಕ್ಷೇತ್ರಕ್ಕೆ ಹೊರಟು ಬಂದ.

ಅಲ್ಲಿ ಬ್ರಾಹ್ಮಣರ ಮುಖದಿಂದ ಕೌರವ ಪಾಂಡವರ ಯುದ್ಧದಲ್ಲಿ ಎಲ್ಲ ಕ್ಷತ್ರಿಯರು ಹತರಾದುದನ್ನು ಕೇಳಿ ಶ್ರೀಕೃಷ್ಣ ಹೀಗೆ ಭೂಭಾರವನ್ನು ಕಳೆದನೆಂದು ಹೇಳಿಕೊಂಡ. ಭೀಮ ದುರ್ಯೋಧನರು ಗದಾಯುದ್ಧಕ್ಕೆ ಪ್ರಾರಂಭಿಸಿದ್ದನ್ನು ಕೇಳಿ ಅದನ್ನು ತಡೆಯಲು ರಣರಂಗಕ್ಕೆ ನಡೆದ ಅಲ್ಲಿ ಧರ್ಮರಾಜ ನಕುಲ ಸಹದೇವರು ಕೃಷ್ಣಾರ್ಜುನರು ಬಲರಾಮನನ್ನು ನಮಿಸಿದರು. ಅವನು ಏನು ಹೇಳಲು ಬಂದನೆಂದು ತಿಳಿಯದೆ ಸುಮ್ಮನೆ ನಿಂತರು. ಬಲರಾಮ 'ದುರ್ಯೋಧನ, ಭೀಮ, ನೀವಿಬ್ಬರೂ ವೀರರು ಬಲದಲ್ಲಿ ಸಮಾನರು. ಯಾರಿಗೂ ಜಯವಾಗಲಿ ಪರಾಜಯವಾಗಲಿ ಆಗುವಂತೆ ಕಾಣುವುದಿಲ್ಲ. ಯುದ್ಧ ವ್ಯರ್ಥ. ಸಾಕು ಮಾಡಿ' ಎಂದ. ಆದರೆ ಇಬ್ಬರೂ ಅವನ ಮಾತನ್ನು ಆದರಿಸಲಿಲ್ಲ. ಪರಸ್ಪರ ವೈರವನ್ನೇ ನೆನೆದರು. ಇದು ಪ್ರಾರಬ್ಧ ಭಗವಂತನ ಇಚ್ಛೆ ಯಾರಿಂದಲೂ ತಪ್ಪಿಸಲಾಗದು ಎಂದು ನಿಶ್ಚಯಿಸಿ ಬಲರಾಮ ದ್ವಾರಕೆಗೆ ಮರಳಿದ.

❖❖❖

ಅಧ್ಯಾಯ -೧೦೦

ಅಧ್ಯಾಯ ಸಾರಾಂಶ

ದುರ್ಯೋಧನ ಭೀಮನ ಗದೆಯಿಂದ ಹತನಾದ ಬಳಿಕ ಶ್ರೀಕೃಷ್ಣ ಹಸ್ತಿನಾವತಿಗೆ ಹೊರಟ. ಕೌರವಸೈನ್ಯದಲ್ಲಿ ಕೃಪ ಕೃತವರ್ಮ ಅಶ್ವತ್ಥಾಮರು ಪಾಂಡವಸೈನ್ಯದಲ್ಲಿ ಪಂಚಪಾಂಡವರು ಸಾತ್ಯಕಿ ಯುಯುತ್ಸುಗಳು ಮಾತ್ರ ಉಳಿದಿದ್ದರು. ಇವರನ್ನು ಮುಂದೆ ಮಾಡಿಕೊಂಡು ಶ್ರೀಕೃಷ್ಣ ಹಸ್ತಿನಾವತಿಗೆ ಹೋಗಿ ಧೃತರಾಷ್ಟ್ರ ಗಾಂಧಾರಿ ವಿದುರರನ್ನು ಸಂತೈಸಿದ. ಪಾಂಡವರನ್ನು ರಾಜ್ಯದಲ್ಲಿ ಕೂಡಿಸಿ ದ್ವಾರಕೆಗೆ ಮರಳಿದ.

~~ಶ್ರೀಕೃಷ್ಣನಿಗೆ ಮಿತ್ರನಾದ ಸುದಾಮನೆಂಬ ಬ್ರಾಹ್ಮಣನಿದ್ದ. ಅವನು~~ ಇಂದ್ರಿಯ ನಿಗ್ರಹ ಉಳ್ಳವನು. ವಿಷಯಾಸಕ್ತಿಯನ್ನು ತೊರೆದವನು. ಹರೀಚ್ಛೆಯಿಂದ ಸಿಕ್ಕಿದಷ್ಟರಲ್ಲಿಯೇ ತೃಪ್ತಿಪಟ್ಟವನು. ಹರಕು ಬಟ್ಟೆ ಉಟ್ಟು ಕುಚೇಲ ನೆನೆಸಿದವನು. ಅವನ ಹೆಂಡತಿಯೂ ಹಾಗೇ ಇದ್ದಳು. ಹಸಿವಿನಿಂದ ಸೊರಗಿದ್ದಳು. ಪತಿವ್ರತೆ ಸಾಧುಸ್ವಭಾವ ದವಳು. ಒಮ್ಮೆ ಆಕೆ ಹಸಿವಿನಿಂದ ನಡುಗುತ್ತ ಬಾಡಿದ ಮುಖದಿಂದ ಪತಿಯ ಬಳಿಗೆ ಬಂದು ಹೇಳಿದಳು. 'ಸಾಕ್ಷಾತ್ ಲಕ್ಷ್ಮೀಪತಿ ಭಗವಾನ್ ಶ್ರೀಕೃಷ್ಣ ನಿನ್ನ ಸ್ನೇಹಿತ ತಾನೆ? ಅವನು ಬ್ರಾಹ್ಮಣಪ್ರಿಯ ಶರಣಾಗತ ರಕ್ಷಕ. ಅವನ ಬಳಿಗೆ ಒಮ್ಮೆ ಹೋಗು. ಹೇರಳ ಧನವನ್ನು ನೀಡುತ್ತಾನೆ. ತನ್ನ ಚರಣಗಳನ್ನು ನೆನೆವವನಿಗೆ ತನ್ನನ್ನೇ ಕೊಡುವವನು. ಅರ್ಥಕಾಮಗಳನ್ನು ಕೊಡುವನೆಂದು ಬೇರೇನು ಹೇಳಬೇಕು?' ಎಂದು. ಸುದಾಮ ಮನಸ್ಸಿನಲ್ಲಿ ಹೇಳಿಕೊಂಡ, ಶ್ರೀಕೃಷ್ಣನ ದರ್ಶನವೇ ದೊಡ್ಡ ಲಾಭ. ಅದನ್ನು ನಾನು ಕಳೆದುಕೊಳ್ಳಬಾರದು.' ಎಂದು. ಪತ್ನಿಗೆ ಹೇಳಿದ, 'ಕಾಣಿಕೆ ವಸ್ತು ಏನಾದರೂ ಮನೆಯಲ್ಲಿದೆಯೆ, ಇದ್ದರೆ ಕೊಡು' ಪತ್ನಿ ಪಕ್ಕದ ಮನೆಯ ಬ್ರಾಹ್ಮಣರಲ್ಲಿ ಬೇಡಿ ನಾಲ್ಕು ಮುಷ್ಟಿ ಅವಲಕ್ಕಿ ತಂದು ಹರಕು ಬಟ್ಟೆ ತುಂಡಿನಿಂದ ಕಟ್ಟಿ ಪತಿಯ ಕೈಯಲ್ಲಿ ಜಗತ್‌ಪತಿಗೆ ಕಾಣಿಕೆಯಾಗಿ ಕೊಟ್ಟಳು. ಬ್ರಾಹ್ಮಣೋತ್ತಮ ಅದನ್ನು ಹಿಡಿದುಕೊಂಡು ದ್ವಾರಕೆಗೆ ನಡೆದ.

ಶ್ರೀಕೃಷ್ಣನ ಹದಿನಾರು ಸಾವಿರ ಪತ್ನಿಯರ ಮನೆಗಳ ಕಡೆಗೆ ಹೋಗಿ ಸ್ವರೂಪಾನಂದಾಭಿವ್ಯಕ್ತಿಯನ್ನು ಹೊಂದಿದ ಮುಕ್ತ ಪರಬ್ರಹ್ಮನನ್ನು ಪ್ರವೇಶಿಸುವಂತೆ ಒಂದು ಮನೆಯನ್ನು ಪ್ರವೇಶಿಸಿದ. ಮಿತ್ರವಿಂದಾ ದೇವಿಯ ಮನೆ. ಅಲ್ಲಿ ಅವಳ ಮಂಚದಲ್ಲಿ ಕುಳಿತಿದ್ದ ಶ್ರೀಕೃಷ್ಣ ಸುದಾಮನನ್ನು ದೂರದಿಂದ ಕಂಡು ಬೇಗನೆ ಎದ್ದು ಇದಿರು ಗೊಂಡು ಆನಂದದಿಂದ ಎರಡು ತೋಳುಗಳಿಂದ ಆಲಿಂಗಿಸಿದ. ಎರಡು ಕಣ್ಣುಗಳಿಂದ ಆನಂದಬಾಷ್ಪ ಸುರಿಸಿದ. ಮಂಚದಲ್ಲಿ ಜೊತೆಗೆ ಕೂಡಿಸಿಕೊಂಡು ಕಾಲು ತೊಳೆದು ಜಲವನ್ನು ಶಿರದಲ್ಲಿ ಧರಿಸಿದ. ಗಂಧ, ಧೂಪದೀಪ, ತಾಂಬೂಲ ನೀಡಿ ಸ್ವಾಗತಿಸಿದ. ಸುದಾಮ ಹರಕು ಬಟ್ಟೆ ಉಟ್ಟಿದ್ದ. ಮಲಿನನಾಗಿದ್ದ ಆಯಾಸ ಗೊಂಡಿದ್ದ. ಮೈಯಲ್ಲಿ ನರಮಂಡಲಗಳು ಎದ್ದು ಕಾಣುತ್ತಿದ್ದವು. ದೇವಿ ಅವನಿಗೆ ಚಾಮರ ಬೀಸಿದಳು. ಶ್ರೀಕೃಷ್ಣ ಅವನಿಗೆ ನೀಡಿದ ಸತ್ಕಾರವನ್ನು ಕಂಡು ಅಂತಃಪುರದ ಜನರು ವಿಸ್ಮಿತರಾದರು. 'ಈತ ಭಿಕ್ಷುಕನಂತಿದ್ದಾನೆ. ಎಲ್ಲರ ತಿರಸ್ಕಾರಕ್ಕೆ ಪಾತ್ರನಾಗಿದ್ದಾನೆ. ಆದರೂ ಮೂಲೋಕದೊಡೆಯನಾದ ಶ್ರೀನಿವಾಸ ಗೌರವಿಸುತ್ತಿದ್ದಾನೆ ಎಂದರೆ, ಇವನೇನು ಪುಣ್ಯ ಮಾಡಿರುವನೋ! ಮಂಚದಲ್ಲಿ ಜೊತೆಗಿದ್ದ **ಲಕ್ಷ್ಮಿ**ಯನ್ನು ಆಚೆ ಕಳಿಸಿ ಈತನನ್ನು ಕೂಡಿಸಿಕೊಂಡು ಅಣ್ಣ **ಬಲ**ರಾಮನಿಗೆ ನೀಡುವಂಥ ಆಲಿಂಗನವನ್ನು ನೀಡಿದ್ದಾನೆ' **ಎಂದುಕೊಂ**ಡರು.

ಶ್ರೀಕೃಷ್ಣ ಸುದಾಮರು ಕೈಕೈ ಹಿಡಿದುಕೊಂಡರು. 'ಮುನಿಯೆ, ನೀನು **ಗುರುದಕ್ಷಿಣೆ ಕೊಟ್ಟು** ಸಮಾವರ್ತನ ಮಾಡಿಕೊಂಡ ಬಳಿಕ ಯೋಗ್ಯ **ಭಾರ್ಯೆಯನ್ನು** ಮದುವೆಯಾದೆ ತಾನೆ? ಲೌಕಿಕರಂತೆ ನಿನ್ನ ಮನಸ್ಸು **ಗೃಹಸೌಖ್ಯದಲ್ಲಿ ಆ**ಸಕ್ತವಾಗಿರಲಾರದು. ಏಕೆಂದರೆ ನಿನ್ನಂಥವರು **ಲೋಕದಲ್ಲಿ ವಿಷಯಾ**ಸೆಗೆ ಬಲಿಯಾಗದೆ ನನ್ನಂತೆ ನಿಷ್ಕಾಮಕರ್ಮ ನಡೆಸುತ್ತಾರೆ. **ನಮ್ಮ ಅಂ**ದಿನ ಗುರುಕುಲವಾಸವನ್ನು ನೆನೆಯುತ್ತಿರುವೆ ತಾನೆ? **ಅಜ್ಞಾನವನ್ನು ಕಳೆ**ದುಕೊಂಡು ವಿಷ್ಣು ಲೋಕವನ್ನು ಪಡೆಯಬೇಕಾದರೆ **ಗುರು**ಕುಲವಾಸ ಆವಶ್ಯಬೇಕು. ಸತ್ಕರ್ಮಾಚಾರಣೆಗೆ **ಗುರುಕುಲ ವಾ**ಸದಲ್ಲಿ ಗುರುವಾದ ಬ್ರಾಹ್ಮಣ ಮಾಡುವ ಅನುಗ್ರಹ **ಆವಶ್ಯಕ. ಗುರೂ**ಪದೇಶದಿಂದ ಸಂಸಾರ

ಸಾಗರವನ್ನು ಚೆನ್ನಾಗಿ ದಾಟುವವರೆ ನಿಜವಾಗಿ ಜಾಣರು. ಸರ್ವಾಂತರ್ಯಾಮಿಯಾದ ನಾನು ಗುರುಸೇವೆಗೆ ಒಲಿಯುವಷ್ಟು ಯಜ್ಞಗಳಿಗಾಗಲಿ ತಪಸ್ಸುಗಳಿಗಾಗಲಿ ಒಲಿಯುವುದಿಲ್ಲ. ನಾವು ಗುರುಕುಲದಲ್ಲಿದ್ದಾಗ ಒಮ್ಮೆ ಹೋಮದ ಕಟ್ಟಿಗೆ ತರಲು ಹೋಗಿ ಮಳೆಯಲ್ಲಿ ಸಿಕ್ಕಿಕೊಂಡವು. ಆಗಲೆ ಸೂರ್ಯಾಸ್ತವಾಯಿತು. ಎಲ್ಲೆಲ್ಲೂ ಕತ್ತಲು ಆವರಿಸಿತು. ನೀರಿನ ಪ್ರವಾಹದಲ್ಲಿ ತಗ್ಗು ದಿನ್ನೆಯೊಂದೂ ತಿಳಿಯದಾಯಿತು. ಬಿರುಗಾಳಿ ಮಳೆಗಳಲ್ಲಿ ಕಷ್ಟ ಪಡುತ್ತ ನೀರಿನ ಪ್ರವಾಹದಲ್ಲಿ ಒಬ್ಬರಿಗೊಬ್ಬರು ಕೈಹಿಡಿದುಕೊಂಡು ರಾತ್ರಿ ಇಡೀ ಕಾಡಿನಲ್ಲಿ ಅಲೆದವು. ಬೆಳಕಾದಾಗ ಗುರು ಸಾಂದೀಪನಿ ಮುನಿ ನಮ್ಮನ್ನು ಹುಡುಕಿ ಕಾಣದೆ ಅತ್ತುಬಿಟ್ಟರು. 'ಅಯ್ಯೋ ನನ್ನ ಮಕ್ಕಳೆ, ಮಳೆ ಪ್ರಾರಂಭವಾದೊಡನೆ ಆಶ್ರಮಕ್ಕೆ ಓಡಿಬಾರದೆ ನೀವು ನಮ್ಮ ಸಲುವಾಗಿ ಬಹಳ ದುಃಖದಲ್ಲಿ ಸಿಲುಕಿಕೊಂಡಿರಿ. ಎಲ್ಲ ಜಂತುಗಳಿಗೂ ಎಲ್ಲಕ್ಕಿಂತ ಇಷ್ಟ ತಮ್ಮ ಶರೀರ. ಅಂಥ ಶರೀರಕ್ಕೆ ಪೀಡೆಯಾಗುತ್ತಿದ್ದರೆ ಅದನ್ನು ಲೆಕ್ಕಿಸದೆ ನೀವು ನಮ್ಮ ಸೇವೆ ಮಾಡಿದಿರಿ. ಒಳ್ಳೆಯ ಶಿಷ್ಯ ಗುರುವಿಗೆ ಪ್ರತ್ಯುಪಕಾರವಾಗಿ ಮಾಡಬೇಕಾದುದು ಇದು. ತಮಗೆ ಸರ್ವಾಭೀಷ್ಟ ಸಾಧಕವೆನಿಸಿರುವ ತಮ್ಮ ಶರೀರವನ್ನು ನಿರ್ಮಲ ಮನಸ್ಸಿನಿಂದ ಗುರುಸೇವೆಗೆ ಮುಡಿಪಾಗಿಡಬೇಕು. ನಾನು ನಿಮ್ಮಲ್ಲಿ ಪ್ರಸನ್ನನಾಗಿದ್ದೇನೆ. ನಿಮ್ಮ ಮನೋರಥಗಳು ಈಡೇರಲಿ. ನೀವು ಅಧ್ಯಯನ ಮಾಡಿದ ವೇದಗಳು ನಿಮಗೆ ಇಹ ಪರಗಳಲ್ಲಿ ಫಲ ನೀಡಲು ಸಮರ್ಥವಾಗಲಿ' ಹೀಗೆ ಗುರುಗಳು ಹರಸಿದರು. ಗುರುಕುಲವಾಸ ದಲ್ಲಿ ಇಂಥ ಕಷ್ಟಗಳು ಬರುವುದು ಸ್ವಾಭಾವಿಕ. ಗುರುವಿನ ಅನುಗ್ರಹದಿಂದ ಪಾರಾಗಿ ಶಿಷ್ಯ ಮೋಕ್ಷ ಭಾಗಿಯಾಗಿ ಧನ್ಯನೆನಿಸಬೇಕು.' ಎಂದು ಶ್ರೀಕೃಷ್ಣ ನುಡಿದ.

ಸುದಾಮನೆಂದ, 'ದೇವದೇವ, ಜಗನ್ನಾಥ, ನಿನ್ನೊಂದಿಗೆ ಗುರುಕುಲವಾಸ ಮಾಡಿದ್ದೇನೆ ಎಂದ ಮೇಲೆ ನಾನು ಎಲ್ಲ ಪುಣ್ಯಕರ್ಮಗಳನ್ನೂ ಮಾಡಿದಂತಾಯಿತು. ನಿನ್ನ ಸ್ವರೂಪವೇ ಸಕಲವೇದ ಪ್ರತಿಪಾದ್ಯ ಅಂಥ ನೀನು ವೇದ ಓದಲು ಗುರುಕುಲವಾಸ ಮಾಡಿದ್ದು ಅತ್ಯಂತ ಲೋಕವಿಡಂಬನೆಯೆ ಸರಿ.'

❖❖❖

ಅಧ್ಯಾಯ -೧೦೧

ಅಧ್ಯಾಯ ಸಾರಾಂಶ

ಸುದಾಮನೊಂದಿಗೆ ನಗುನಗುತ್ತ ಹೀಗೆ ಸಂಭಾಷಣೆ ನಡೆಸಿದ ಶ್ರೀಕೃಷ್ಣ ಪ್ರೀತಿಯಿಂದ ನೋಡುತ್ತ ಕೇಳಿದ. 'ಮುನಿಯೆ, ನೀನು ಮನೆಯಿಂದ ನನಗೆ ಏನು ಉಡುಗೊರೆ ತಂದಿರುವೆ? ಭಕ್ತರು ನನಗೆ ಎಷ್ಟು ಅಲ್ಪವಾದ ಕಾಣಿಕೆ ನೀಡಿದರೂ ನನಗೆ ಅದು ಮಹತ್ತೇ ಆಗುವುದು. ಬೇರೆಯವರು ಎಷ್ಟು ದೊಡ್ಡ ಕಾಣಿಕೆ ನೀಡಿದರೂ ನನಗೆ ಸಂತೋಷವಾಗುವುದಿಲ್ಲ. ಪತ್ರ ಪುಷ್ಪ ಫಲ ಜಲವನ್ನು ಯಾವುದನ್ನೇ ಆಗಲಿ ಭಕ್ತಿಯಿಂದ ನೀಡಿದರೆ ಅದನ್ನು ನಾನು ಸ್ವೀಕರಿಸುತ್ತೇನೆ.'

ಶ್ರೀಕೃಷ್ಣ ಹೀಗೆ ಹೇಳಿದರೂ ಸುದಾಮ ಲಜ್ಜೆಯಿಂದ ಮುಖ ತಗ್ಗಿಸಿಕೊಂಡು ಸುಮ್ಮನೆ ಕುಳಿತ. ಎಲ್ಲ ಜೀವಿಗಳ ಅಂತರಂಗವನ್ನು ಅರಿಯುವ ಭಗವಂತ ಆಲೋಚನೆ ಮಾಡಿದ. 'ಈತ ಹಿಂದೆ ಎಂದೂ ಸಂಪತ್ತನ್ನು ಬಯಸಿ ನನ್ನನ್ನು ಆರಾಧಿಸಲಿಲ್ಲ. ಈಗ ಪತ್ನಿಯ ಮನಃ ಸಮಾಧಾನಕ್ಕಾಗಿ ನನ್ನ ಬಳಿಗೆ ಬಂದಿದ್ದಾನೆ. ನಾನೀಗ ಈತನಿಗೆ ದೇವತೆಗಳಿಗೂ ಲಭ್ಯವಾಗದಂಥ ಸಂಪತ್ತುಗಳನ್ನು ನೀಡುತ್ತೇನೆ.' ಹೀಗೆ ಆಲೋಚಿಸಿ ಸುದಾಮನ ಬಟ್ಟೆಯೊಳಗಿಂದ ಚಿಂದಿ ಬಟ್ಟೆಯಲ್ಲಿ ಕಟ್ಟಿದ್ದ ಅವಲಕ್ಕಿಯನ್ನು ಇದೇನೆಂದು ಕೇಳುತ್ತ ತಾನೆ ತೆಗೆದುಕೊಂಡ. ಒಂದು ಮುಷ್ಟಿ ಅವಲಕ್ಕಿ ತಿಂದು ಇನ್ನೊಂದು ಮುಷ್ಟಿ ತಿನ್ನಲು ಹೊರಟಾಗ ದೇವಿ ಬೇಗನೆ ಭಗವಂತನ ಕೈಹಿಡಿದು ತಡೆದಳು. 'ನೀನಿಷ್ಟೇ ತಿಂದಿದ್ದು ಸಾಕು. ಇಹಪರಗಳಲ್ಲಿ ಸರ್ವಸಂಪತ್ ಸಮೃದ್ಧಿ ಈತನಿಗೆ ಸಿಗಲು ಇನ್ನು ಬೇರೇನೂ ಬೇಡ' ಎಂದಳು.

ಸುದಾಮ ಆ ರಾತ್ರಿ ಶ್ರೀಕೃಷ್ಣನ ಅರಮನೆಯಲ್ಲಿಯೇ ವಾಸಮಾಡಿದ. ಮಿಷ್ಟಾನ್ನ ಉಂಡು ಒಳ್ಳೆಯ ಪಾನೀಯವನ್ನು ಕುಡಿದು ಸುಖನಿದ್ರೆಗೈದ. ದೇವೇಂದ್ರನಂತೆ ಸುಖಿಯಾಗಿದ್ದೇನೆಂದುಕೊಂಡ. ಮರುದಿನ ಬೆಳಿಗ್ಗೆ ಜಗದ ತಂದೆಯಾದ ಸ್ನೇಹಿತನಾದ ಶ್ರೀಕೃಷ್ಣ ಸುದಾಮನಿಗೆ ನಮಿಸಿ ಮಾರ್ಗದಲ್ಲಿ ಸ್ವಲ್ಪ ದೂರ ಹಿಂಬಾಲಿಸಿ ಅಭಿನಂದಿಸಿ ಬೀಳ್ಕೊಟ್ಟ.

ಸುದಾಮ ನಡೆಯುತ್ತ 'ಶ್ರೀಕೃಷ್ಣ ನನಗೆ ಏನೂ ಧನ ಸಂಪತ್ತನ್ನು ಕೊಡಲಿಲ್ಲ. ಕೊನೆಗೆ ಭೋಜನದಕ್ಷಿಣೆ ಯನ್ನೂ ಕೊಡಲಿಲ್ಲ. ಹೆಂಡತಿಗೆ ಏನು ಹೇಳಲಿ' ಎಂದು ಲಜ್ಜಿತನಾದ. ಭಗವಂತನ ದರ್ಶನಭಾಗ್ಯ ದೊರಕಿದ್ದಕ್ಕೇ ಅತ್ಯಂತ ತೃಪ್ತನಾಗಿ ಮನೆಯ ಕಡೆಗೆ ಹೆಜ್ಜೆ ಹಾಕಿದ. ಆಗ ಮನಸ್ಸಿನಲ್ಲಿ ಹೀಗೆ ಹೇಳಿಕೊಂಡ.

'ಏನಾಶ್ಚರ್ಯ! ಬ್ರಾಹ್ಮಣಪ್ರಿಯನೆನಿಸಿರುವ ಶ್ರೀಕೃಷ್ಣನ ಬ್ರಾಹ್ಮಣ ವಾತ್ಸಲ್ಯವನ್ನು ನಾನು ಕಣ್ಣಾರೆ ಕಂಡೆ! ಲಕ್ಷ್ಮಿಯನ್ನು ಧರಿಸುವ ಎದೆಯಿಂದ ದರಿದ್ರನಾದ ನನ್ನನ್ನು ಆಲಿಂಗಿಸಿದ. ಮಹಾಪಾಪಿ ದರಿದ್ರ ನಾನೆಲ್ಲಿ! ಶ್ರೀನಿವಾಸನಾದ ಕೃಷ್ಣನೆಲ್ಲಿ! ಕೇವಲ ಬ್ರಾಹ್ಮಣನಾಗಿದ್ದೇನೆ ಬಂಧುವಾಗಿದ್ದೇನೆ ಎಂದು ನನ್ನನ್ನು ಎರಡು ಬಾಹುಗಳಿಂದ ತಬ್ಬಿಕೊಂಡ. ಪ್ರಿಯೆಯ ಮಂಚದಲ್ಲಿ ಅಣ್ಣತಮ್ಮಂದಿರಂತೆ ನನ್ನನ್ನು ಕೂಡಿಸಿಕೊಂಡ. ಪ್ರಿಯೆಯ ಕೈಯಿಂದ ಚಾಮರ ಸೇವೆ ಮಾಡಿಸಿದ. ಆದರೆ ದರಿದ್ರನಿಗೆ ಸಂಪತ್ತನ್ನು ಕೊಟ್ಟರೆ ಧನಮದದಿಂದ ತನ್ನನ್ನು ಮರೆತಾನೆಂದು ಕರುಣೆಯಿಂದ ನನಗೇನೂ ಕೊಡಲಿಲ್ಲ ಕೃಷ್ಣ!'

ಹೀಗೆ ಆಲೋಚಿಸುತ್ತ ಸುದಾಮ ತನ್ನ ಮನೆಗೆ ಬಂದರೆ ಅಲ್ಲಿ ಸೂರ್ಯ ಅಗ್ನಿ ಚಂದ್ರರಂತೆ ಹೊಳೆಯುವ ಬಂಗಾರ ಮಾಣಿಕ್ಯ ಬೆಳ್ಳಿಗಳ ವಿಮಾನಗಳಿಂದ, ಅರಳಿದ ತಾವರೆಗೊಳಗಳಿಂದ ವಿಚಿತ್ರ ಉದ್ಯಾನ ಉಪವನಗಳಿಂದ ಸುತ್ತುವರಿಯಲ್ಪಟ್ಟ, ಅಲಂಕೃತರಾದ ದಾಸದಾಸಿಯರಿಂದ ತುಂಬಿದ ಅರಮನೆಯನ್ನುಕಂಡ. 'ಏನಿದು, ಇದು ಯಾರ ಮನೆ? ನನ್ನ ಹಳೆಮನೆ ಅರಮನೆ ಹೇಗಾಯಿತು?' ಎಂದು ಅಚ್ಚರಿಪಟ್ಟ. ದೇವತೆಗಳಂತೆ ಬೆಳಗುವ ನರನಾರಿಯರು ಗೀತವಾದ್ಯಗಳೊಂದಿಗೆ ಅವನನ್ನು ಬರಮಾಡಿಕೊಂಡರು. ಬಲು ಸಂತೋಷದಿಂದ ಸಂಭ್ರಮದಿಂದ ಮನೆಯೊಳಗಿಂದ ಬಂದಳು ಪತ್ನಿ. ಕಮಲವನದಿಂದ ಮೂರ್ತಿಮತ್ತಾಗಿ ಎದ್ದು ಬಂದ ಸಾಕ್ಷಾತ್ ಲಕ್ಷ್ಮಿಯಂತೆ ಕಂಗೊಳಿಸಿದಳು. ಪತಿವ್ರತೆಯಾದ ಪತ್ನಿ ಪತಿಯನ್ನು ಕಂಡು ಪ್ರೇಮೋತ್ಕಂಠೆಯಿಂದ ಕಣ್ಣಲ್ಲಿ ನೀರು ತುಂಬಿಕೊಂಡು ಕಣ್ಣುಮುಚ್ಚಿ ನಮಿಸಿದಳು. ಮನಸಿನಿಂದಲೆ ಆಲಿಂಗಿಸಿದಳು.

ಮಣಿಮಯವಾದ ದೇವೇಂದ್ರನ ಭವನದಂತಿದ್ದ ಮನೆಯನ್ನು ಸುದಾಮ ಪತ್ನಿಯೊಂದಿಗೆ ಪ್ರವೇಶಿಸಿದ. ಹಾಲಿನ ನೊರೆಯಂಥ

ಬಿಳುಪಿನ ಆನೆದಂತ ನಿರ್ಮಿತವಾದ ಮಂಚಗಳು ಬಂಗಾರದ ಪೀಠೋಪಕರಣಗಳು ಬಂಗಾರದ ಹಿಡಿಯುಳ್ಳ ಚಾಮರಬೀಸಣಿಗೆಗಳು ಬಂಗಾರದ ಸಿಂಹಾಸನಗಳು ಮಾಲೆ ವಸ್ತ್ರಾಭರಣಗಳು ಮುತ್ತಿನ ಹಾರಗಳನ್ನು ಇಳಿಬಿಟ್ಟಿದ್ದ ಮೇಲ್ಕಟ್ಟುಗಳು ಮಹಾಮರಕತಮಣಿಯಿಂದ ಚಿತ್ರಿತವಾದ ಸ್ವಚ್ಛ ಸ್ಫಟಿಕದ ಗೋಡೆಗಳಲ್ಲಿ ಕೈಯಲ್ಲಿ ರತ್ನದೀಪಗಳನ್ನು ಹಿಡಿದ ರತ್ನನಿರ್ಮಿತ ಸ್ತ್ರೀ ವಿಗ್ರಹಗಳು— ಇವೆಲ್ಲವನ್ನೂ ಕಂಡು ಸುದಾಮ, 'ಆಜನ್ಮ ದರಿದ್ರನಾದ ನನ್ನ ಈ ಸಮೃದ್ಧಿಗೆ ಕೃಷ್ಣದರ್ಶನ ಹೊರತು ಬೇರೇನೂ ಕಾರಣವಿಲ್ಲ. ಅವನು ನನ್ನ ಮನದ ಆಸೆಯನ್ನು ತಾನೇ ತಿಳಿದು 'ತಾನು ಕೊಡುತ್ತಿದ್ದೇನೆ' ಎಂದು ಮುಂದೆ ಏನೂ ಹೇಳದೆ ಹಿಂದಿನಿಂದ ಬಹಳವಾಗಿ ಕೊಡುತ್ತಾನೆ, ಮಳೆಮೋಡ ಸದ್ದಿಲ್ಲದೆ ಮಳೆಗರೆಯುವಂತೆ. ಶ್ರೀಹರಿ ಭಕ್ತರು ಮಾಡಿದ ಸೇವೆ ಅಲ್ಪವಾದರೂ ಮಹತ್ತೆಂದು ತಿಳಿಯುತ್ತಾನೆ. ತಾನು ನೀಡಿದ ಸಂಪತ್ತು ಮಹತ್ತಾದರೂ ಕಿಂಚಿತ್ತೆಂದು ತಿಳಿಯುತ್ತಾನೆ. ಅವನ ಸೌಹಾರ್ದ ಸಖ್ಯ ಮೈತ್ರಿ ದಾಸ್ಯಗಳೇ ನನಗೆ ಜನುಮಜನುಮಗಳಲ್ಲಿ ದೊರಕಲಿ. ಅವನ ಸಂಗ, ಅವನ ಭಕ್ತರ ಸಂಗವೇ ನನಗಿರಲಿ. ಧನಿಕರಿಗೆ ಧನಮದದಿಂದಾಗುವ ಅಧಃಪತನವನ್ನು ದೀರ್ಘಾಲೋಚನೆಯಿಲ್ಲದ ಭಕ್ತ ಕಾಣದಿದ್ದರೂ ಸರ್ವಜ್ಞನಾದ ಭಗವಂತ ಮೊದಲೇ ಕಂಡು ಸಂಪತ್ತನ್ನು ನೀಡದಿರುವುದು ಉಂಟು' ಸುದಾಮ ಹೀಗೆ ವಿವೇಕದಿಂದ ನಿಶ್ಚಯಿಸಿ ವಿಷಯಭೋಗಗಳನ್ನು ಹರಿಯಲ್ಲಿ ಅನನ್ಯ ಭಕ್ತಿಯಿಂದ ಸಮರ್ಪಿಸಿ ಅವುಗಳಲ್ಲಿ ಅತಿಯಾದ ಆಸಕ್ತಿ ತೋರದೆ ಪತ್ನಿಯೊಂದಿಗೆ ಅನುಭವಿಸಿದ. ದೇವದೇವ ಯಜ್ಞೇಶ್ವರ ನಾದ ಶ್ರೀಕೃಷ್ಣನಿಗೆ ಬ್ರಾಹ್ಮಣನೆ ದೈವ. ಸುದಾಮ ಕೃಷ್ಣಧ್ಯಾನದಿಂದ ಸಂಸಾರಬಂಧನವನ್ನು ಕಳಚಿಕೊಂಡು ವೈಕುಂಠಲೋಕವನ್ನು ಹೊಂದಿದ. ಮಾನವನು ಹೀಗೆ ಶ್ರೀಹರಿಯ ಬ್ರಾಹ್ಮಣವಾತ್ಸಲ್ಯ ಗುಣವನ್ನು ಶ್ರವಣ ಮಾಡಿದರೆ ಪಕ್ವವಾದ ಭಕ್ತಿಯಿಂದ ಕರ್ಮಬಂಧನವನ್ನು ತೊಡೆದುಕೊಳ್ಳುತ್ತಾನೆ.

❖❖❖

ಅಧ್ಯಾಯ - ೧೦೨

ಅಧ್ಯಾಯ ಸಾರಾಂಶ

ಒಮ್ಮೆ ಶ್ರೀಕೃಷ್ಣ ಅಶ್ವಮೇಧಯಾಗಕ್ಕೆ ಸಂಕಲ್ಪಿಸಿ ಯಜ್ಞಾಶ್ವವನ್ನು ಮಂತ್ರಪೂರ್ವಕ ಪ್ರೋಕ್ಷಣ ಮಾಡಿ ಭೂಪ್ರದಕ್ಷಿಣೆಗೆ ಕಳಿಸಿದ. ಕೃತವರ್ಮ ಸಾತ್ಯಕಿಗಳನ್ನೂ ಚಾರುದೇಷ್ಣ ಸುದೇಷ್ಣ ಪ್ರದ್ಯುಮ್ನ ಸಾಂಬ ಅಂಶುಮಂತ ಸುಭಾನು ಎಂಬ ಮಕ್ಕಳನ್ನೂ ಬಹು ಸೈನ್ಯದೊಂದಿಗೆ ಬೇರೆ ಯಾದವರನ್ನೂ ಅಶ್ವದ ಬೆಂಗಾವಲಿಗೆ ಕಳಿಸಿದ. ಅವರೆಲ್ಲರೂ ಕುದುರೆಯನ್ನು ಭೂಪ್ರದಕ್ಷಿಣೆ ಮಾಡಿಸಿ ಅಲ್ಪಕಾಲದಲ್ಲಿ ತಿರುಗಿ ತಂದರು.

ತಪಸ್ವಿಗಳಾದ ಮುನಿಗಳನ್ನು ಹೋತೃ ಅಧ್ವರ್ಯು ಉದ್ಗಾತೃ ಮುಂತಾಗಿ ಋತ್ವಿಜರಾಗಲು ವರಣ ಮಾಡಿ ಶ್ರೀಕೃಷ್ಣ ಯಜ್ಞದೀಕ್ಷೆಯನ್ನು ಪಡೆದ. ಯಜ್ಞವನ್ನು ನೋಡಲು ಪಾಂಡವರೂ ಬೇರೆ ರಾಜರೂ ಬಂದರು. ಬ್ರಾಹ್ಮಣರು ಬಂದು ಅನ್ನ ವಸ್ತ್ರ ಗೋ ಭೂ ಹಿರಣ್ಯದಾನಗಳನ್ನು ಪಡೆದು ಸುಪ್ರೀತರಾದರು. ಶ್ರೀಕೃಷ್ಣ ಬ್ರಾಹ್ಮಣರಿಗೆ ಅವರ ಅಭೀಷ್ಟಗಳನ್ನು ನೀಡಿ ತೃಪ್ತಿಪಡಿಸಿ ಅವರು ಉಂಡ ಬಳಿಕ ಅವರ ಆಶೀರ್ವಾದಗಳನ್ನು ಪಡೆದ.

ಯಜ್ಞಶಾಲೆಯ ದ್ವಾರದಲ್ಲಿ ಒಬ್ಬ ಬ್ರಾಹ್ಮಣ ಬಂದು ದುಃಖದಿಂದ ಕೈಮೇಲೆ ಮಾಡಿ ಕೂಗಿದ, ಹಸಿವಿನಿಂದ ಆತನ ಗಂಟಲು ಒಣಗಿತ್ತು ಮುಖ ಬಾಡಿತ್ತು ಕಣ್ಣುಗಳಿಂದ ನೀರು ಸುರಿಯುತ್ತಿತ್ತು. ಅವನು ನುಡಿದ 'ಬ್ರಹ್ಮದ್ವೇಷಿ ಧೂರ್ತಬುದ್ಧಿಯವನು ಲೋಭಿ ವಿಷಯಲಂಪಟನಾದ ದುಷ್ಟಕ್ಷತ್ರಿಯರಾಜನ ಪಾಪಕರ್ಮದಿಂದ ನನ್ನ ಮಕ್ಕಳೆಲ್ಲರೂ ಸತ್ತುಹೋದರು. ದುಷ್ಟರಾಜನ ಸೇವೆ ಮಾಡುವ ಪ್ರಜೆಗಳು ನಿತ್ಯ ದರಿದ್ರರೂ ದುಃಖಿಗಳೂ ಆಗುತ್ತಾರೆ.' ಹೀಗೆ ಆ ಮುನಿ ಪುನಃ ಎರಡನೇ ಬಾರಿಯೂ ಹೇಳಿದ, ಮೂರನೇ ಬಾರಿಯೂ ಹೇಳಿದ. ಅದನ್ನು ಕೇಳಿ ಅರ್ಜುನ ಅಹಂಕಾರದಿಂದ ತಾನೇ ಕೃಷ್ಣನ ಬಳಿಯಲ್ಲಿದ್ದ ತನ್ನ ಆಸನದಿಂದ ಎದ್ದು ಬಂದು ಬ್ರಾಹ್ಮಣನಿಗೆ ಹೇಳಿದ,

'ನಿನ್ನ ಮಕ್ಕಳೇನಾದರು? ನೀನೇಕೆ ದುಃಖಿಸುವೆ? ಹೇಳು, ನಾನಿಂದೇ ನಿನ್ನನ್ನು ಸುಖಿಯಾಗಿ ಮಾಡುವೆನು' ಬ್ರಾಹ್ಮಣ ನುಡಿದ, 'ಅರ್ಜುನ, ಹುಟ್ಟಿದ ಹುಟ್ಟಿದ ನನ್ನ ಮಕ್ಕಳೆಲ್ಲರನ್ನೂ ಯಾರೋ ಒಬ್ಬ ಭೂತ ತಕ್ಷಣ ಹೆರಿಗೆ ಮನೆಯಿಂದಲೇ ಎತ್ತಿ ಕೊಂಡೊಯ್ಯುತ್ತಾನೆ.' ಅರ್ಜುನ ನಗುತ್ತ ನುಡಿದ 'ನಿನ್ನ ಮನೆಯ ಬಳಿ ಧನುರ್ಧಾರಿಯಾದ ಕ್ಷತ್ರಿಯ ಯಾರೂ ಇಲ್ಲವೇನು? ಬ್ರಾಹ್ಮಣರು ಹಣ ಹೆಂಡತಿ ಮಕ್ಕಳನ್ನು ಕಳೆದು ಕೊಂಡು ಶೋಕಿಸುತ್ತಿದ್ದರೆ ರಾಜರು ರಾಜರೇ ಅಲ್ಲ, ರಾಜವೇಷದ ನಟರು, ಹೊಟ್ಟೆಪಾಡಿಗಾಗಿ ನಟಿಸುವವರು ಎಂದೇ ಹೇಳಬೇಕಾಗುತ್ತದೆ. ಅದ್ದರಿಂದ ನಾನು ನಿನ್ನ ಮಕ್ಕಳನ್ನು ಕಾಪಾಡುತ್ತೇನೆ. ಇಲ್ಲದಿದ್ದರೆ ಅಗ್ನಿಪ್ರವೇಶ ಮಾಡುತ್ತೇನೆ.' ಬ್ರಾಹ್ಮಣ ನುಡಿದ, 'ಅರ್ಜುನ! ಸಂಕರ್ಷಣ ವಾಸುದೇವ ಪ್ರದ್ಯುಮ್ನ ಅನಿರುದ್ಧರೆ ನನ್ನ ಮಕ್ಕಳನ್ನು ಕಾಪಾಡಲಿಲ್ಲ, ನಿನ್ನಿಂದ ಈ ಕೆಲಸವಾದೀತೆಂದು ನಾನು ವಿಶ್ವಾಸಪಡುವುದಿಲ್ಲ.' ಅರ್ಜುನನೆಂದ, 'ನಾನು ಬಲರಾಮನಲ್ಲ ಕೃಷ್ಣನಲ್ಲ ಪ್ರದ್ಯುಮ್ನನಲ್ಲ. ಅರ್ಜುನ. ನೋಡು ನನ್ನ ಈ ಗಾಂಡೀವವನ್ನು, ರುದ್ರನನ್ನೂ ಯುದ್ಧದಲ್ಲಿ ಸಂತೋಷಗೊಳಿಸಿದ ನನ್ನ ಪರಾಕ್ರಮವನ್ನು ಅವಮಾನಿಸಬೇಡ. ಯಮನನ್ನೂ ಗೆದ್ದು ನಾನು ನಿನ್ನ ಮಕ್ಕಳನ್ನು ಕರೆತರುವೆನು.' ಅರ್ಜುನ ಹೀಗೆ ಬ್ರಾಹ್ಮಣನಿಗೆ ಭರವಸೆ ನೀಡಿ ಕೃಷ್ಣನ ಅನುಜ್ಞೆಯನ್ನು ಕೇಳಿದ. 'ಬ್ರಾಹ್ಮಣನ ಕೆಲಸಕ್ಕಾಗಿ ಹೋಗುತ್ತಿದ್ದೇನೆ ಅನುಮತಿ ನೀಡು. ನೀನು ಇಲ್ಲಿಯೇ ಇದ್ದು ಋತ್ವಿಜರ ಸಹಾಯದಿಂದ ಯಾಗ ಮಾಡುತ್ತಿರು' ಎನ್ನುತ್ತ ಬಿಲ್ಲುಬಾಣ ಧರಿಸಿ ಹೊರಟುಬಿಟ್ಟ. ಶ್ರೀಕೃಷ್ಣ ನಗುತ್ತ ನುಡಿದ, 'ಅರ್ಜುನ, ನಾನೂ ಬರುತ್ತೇನೆ. ಈ ಕೆಲಸ ನಿನ್ನಿಂದಾಗದು. ಮಗುವನ್ನು ಒಯ್ಯುವ ಆ ಭೂತ ಸಾಮಾನ್ಯ ವಾದುದಲ್ಲ ಎಂದು ನನ್ನ ಅನಿಸಿಕೆ' ಅರ್ಜುನನೆಂದ, 'ಕೃಷ್ಣ ನನ್ನನ್ನು ಏಕೆ ಹೆದರಿಸುವೆ? ನಾನು ಖಾಂಡವದಹನಕಾಲದಲ್ಲಿ ದೇವೇಂದ್ರನನ್ನು ಗೆದ್ದೆ. ಕಿರಾತರೂಪದಿಂದ ಬಂದ ರುದ್ರನನ್ನೂ ಯುದ್ಧದಲ್ಲಿ ಮೆಚ್ಚಿಸಿದೆ. ದೇವೇಂದ್ರನಿಗೂ ಗೆಲ್ಲಲಾಗದಿದ್ದ ನಿವಾತಕವಚರನ್ನೂ ಕಾಲಕೇಯರನ್ನೂ ಪೌಲೋಮರನ್ನೂ ನಾನೊಬ್ಬನೆ ಯುದ್ಧದಲ್ಲಿ ಸಂಹರಿಸಿದೆ. ಅವರಿಗಿಂತಲೂ ಹೆಚ್ಚಿನ ಭೂತ ಇನ್ನಾವುದು ಇದ್ದೀತು? ಕೃಷ್ಣ ನನಗೆ ಅನುಜ್ಞೆ ನೀಡು.'

ಶ್ರೀಕೃಷ್ಣ ಅನುಜ್ಞೆ ನೀಡಿದ. ಅರ್ಜುನ ಬ್ರಾಹ್ಮಣನೊಂದಿಗೆ ತನ್ನ

ಕಪಿಧ್ವಜಯುಕ್ತವಾದ ರಥದಿಂದ ಬ್ರಾಹ್ಮಣನ ಊರಿಗೆ ಹೋಗಿ, 'ಬ್ರಾಹ್ಮಣ, ನೀನು ನಿನ್ನ ಮನೆಯೊಳಗೆ ಹೋಗು, ಹೆಂಡತಿಗೆ ಧೈರ್ಯಹೇಳು. ನಿನಗೆ ಎಲ್ಲ ಕಡೆಯಿಂದಲೂ ರಕ್ಷಣೆ ನೀಡುತ್ತೇನೆ.' ಬ್ರಾಹ್ಮಣ ಅರ್ಜುನನ ಸಾಮರ್ಥ್ಯವನ್ನು ಅವನ ಬಾಯಿಯಿಂದಲೇ ಕೇಳಿ ವಿಶ್ವಾಸಪಟ್ಟು ಸಂತೋಷದಿಂದ ತನ್ನ ಮನೆಯೊಳಗೆ ನಡೆದ. ಹೆಂಡತಿಯ ಪ್ರಸವಕಾಲ ಬರುತ್ತಿದ್ದಂತೆ, 'ಅರ್ಜುನ, ಬಾ, ಸಿದ್ಧನಾಗು. ನೀನು ಹೇಳಿದ ನಿನ್ನ ಪೌರುಷಗಳಿಗೆ ನಿದರ್ಶನವಾಗಬಲ್ಲ ಸಮಯ ಇದು.' ಎಂದ.

ಒಡನೆ ಅರ್ಜುನ ಹೆರಿಗೆಮನೆಯ ಬಳಿಗೆ ಧಾವಿಸಿದ. ಬ್ರಾಹ್ಮಣ ಹೆರಿಗೆ ಮನೆಯನ್ನು ಪ್ರವೇಶಿಸಿ ಪ್ರಸವಕಾಲದಲ್ಲಿ ಕಾತರತೆಯಿಂದ 'ಕಾಪಾಡು ಕಾಪಾಡು' ಎಂದು ಕೂಗಿದ. ಅರ್ಜುನ ನಿರ್ಮಲ ಜಲದಿಂದ ಆಚಮನ ಮಾಡಿ ಭೂತನಾಥನಾದ ರುದ್ರನನ್ನು ನಮಿಸಿ ದಿವ್ಯಾಸ್ತ್ರಗಳನ್ನು ಸ್ಮರಿಸಿ ಹೆದೆಯೇರಿಸಿದ್ದ ಗಾಂಡೀವವನ್ನು ಎತ್ತಿಕೊಂಡ. ಹೆರಿಗೆಮನೆಯ ಸುತ್ತಲೂ ಅಸ್ತ್ರಮಂತ್ರಗಳಿಂದ ಅಭಿಮಂತ್ರಿಸಿದ ಬಾಣಗಳಿಂದ ಸುತ್ತಲೂ ಮೇಲೂ ಕೆಳಗೂ ದಿಗ್ಬಂಧನ ಮಾಡಿದ. ಶರಪಂಜರವನ್ನು ನಿರ್ಮಿಸಿದ. ಆದರೆ, ಗಂಡು ಮಗು ಜನಿಸಿತು, ಅಳುತ್ತಲೆ ಆಕಾಶಮಾರ್ಗದಿಂದ ಹೋಗಿ ಮರೆಯಾಯಿತು. ಬ್ರಾಹ್ಮಣ ನುಡಿದ, 'ನಪುಂಸಕನೆ, ಕೃಷ್ಣನ ಮುಂದೆ ನೀನು ಪೌರುಷವನ್ನು ಕೊಚ್ಚಿಕೊಂಡೆ. ನಾನೂ ಮೂರ್ಖತನದಿಂದ ಅದನ್ನು ನಂಬಿಬಿಟ್ಟೆ. ನನ್ನ ಮಗುವನ್ನು ಕಾಪಾಡುವುದು ಪ್ರದ್ಯುಮ್ನ ಅನಿರುದ್ಧ ರಿಂದಾಗಲಿಲ್ಲ. ಬಲರಾಮಕೃಷ್ಣರಿಂದಾಗಲಿಲ್ಲ ಅವರಿಗಿಂತಲೂ ಶಕ್ತಿಶಾಲಿ ಬೇರೆ ಯಾರಿದ್ದಾನೆ? ಜಂಬ ಕೊಚ್ಚಿಕೊಳ್ಳುವ ಅರ್ಜುನನಿಗೆ ಅವನ ಧನುಸ್ಸಿಗೆ ಧಿಕ್ಕಾರ. ದೈವಪೀಡಿತನಾದ ನನಗೆ ದುರ್ಬುದ್ಧಿಯ ಈ ಅರ್ಜುನ ಮೂರ್ಖತನದಿಂದ ಮಗುವನ್ನು ತಂದುಕೊಡಲು ಹೊರಟುಬಿಟ್ಟ!'

ಬ್ರಾಹ್ಮಣ ಹೀಗೆ ನಿಂದಿಸುತ್ತಿದ್ದಾಗ ಅರ್ಜುನ ಯೋಗಬಲದಿಂದ ಯಮ ಇಂದ್ರ ಅಗ್ನಿ ಸೋಮ ವಾಯು ವರುಣರ ಪಟ್ಟಣಗಳಿಗೂ ಎಲ್ಲ ಊರ್ಧ್ವ ದಿಕ್ಕುಗಳಿಗೂ ಧಾವಿಸಿದ. ರಸಾತಲವನ್ನೂ ಹೊಕ್ಕು ಶೋಧಿಸಿದ. ಬ್ರಾಹ್ಮಣನ ಪುತ್ರ ಸಿಗಲಿಲ್ಲ. ಅದರಿಂದ ಅಗ್ನಿಪ್ರವೇಶಕ್ಕೆ ಸಿದ್ಧನಾದ. ಆಗ ಶ್ರೀಕೃಷ್ಣ ತಡೆದು ಹೇಳಿದ, 'ನಾನು ಬ್ರಾಹ್ಮಣನ ಪುತ್ರರೆಲ್ಲರನ್ನೂ

ನಿನಗೆ ತಂದು ತೋರಿಸುತ್ತೇನೆ. ಆತ್ಮಹತ್ಯೆ ಮಾಡಿಕೊಳ್ಳಬೇಡ.' ಹೀಗೆ ಹೇಳಿ ಶ್ರೀಕೃಷ್ಣ ಅರ್ಜುನ ಮತ್ತು ಬ್ರಾಹ್ಮಣನೊಂದಿಗೆ ರಥವನ್ನೇರಿ ಸಪ್ತ ದ್ವೀಪ ಸಾಗರಗಳನ್ನೂ ಲೋಕಾಲೋಕಪರ್ವತವನ್ನೂ ದಾಟಿ ಮಹಾತಮಸ್ಸನ್ನು ಪ್ರವೇಶಿಸಿದ. ಅಲ್ಲಿ ರಥಚಕ್ರಗಳು ಕೆಸರಿನಂತೆ ಗಟ್ಟಿಯಾದ ತಮಸ್ಸಿನಲ್ಲಿ ಹೂತು ಹೋದುವು. ಮುಂದೆ ಬೆಟ್ಟದಂತೆ ಗಟ್ಟಿಯಾದ ತಮಸ್ಸು, ಶ್ರೀಕೃಷ್ಣ ಸುದರ್ಶನ ಚಕ್ರದಿಂದ ತಮಸ್ಸನ್ನು ಸೀಳಿ ದಾರಿಮಾಡಿಕೊಂಡು ಘನೋದಕ ಸಮುದ್ರಕ್ಕೆ ಪ್ರಯಾಣ ಮಾಡಿದ. ಆ ಸಮುದ್ರದ ನಡುವೆ ಅನಂತಾಸನಲೋಕದಲ್ಲಿ ರತ್ನಸ್ತಂಭಗಳಿಂದ ಉಜ್ವಲವಾಗಿ ಶೋಭಿಸುವ ಅದ್ಭುತವಾದ ಭಗವಂತನ ಅರಮನೆಯನ್ನು ಕಂಡ.

ತಾನೊಬ್ಬನೆ ರಥದಿಂದ ಇಳಿದು ಮುಕ್ತಶೇಷನ ಮೈಮೇಲೆ ಕುಳಿತ ಮುಕ್ತರಿಗೊಡೆಯನಾದ ಹರಿಯನ್ನು ಬೆಟ್ಟಿ ಮಾಡಿ ಹೊರಗೆ ಅರ್ಜುನನ ಬಳಿಗೆ ಬಂದ. ಶ್ರೀಹರಿ ಕೃಷ್ಣಾರ್ಜುನರಿಗೆ ನುಡಿದ, 'ನಾನು ನಿಮ್ಮನ್ನು ಇಲ್ಲಿ ನೋಡುವ ಸಲುವಾಗಿ ಬ್ರಾಹ್ಮಣಪುತ್ರರನ್ನು ಇಲ್ಲಿಗೆ ತಂದೆ. ನೀವಿಬ್ಬರು ನರ ನಾರಾಯಣರು, ಶ್ರೇಷ್ಠ ಋಷಿಗಳು. ಪೂರ್ಣಕಾಮರು. ಭೂಭಾರಹರಣಕ್ಕಾಗಿ ಅವತರಿಸಿರುವಿರಿ. ಲೋಕಶಿಕ್ಷಣಕ್ಕಾಗಿ ಧರ್ಮಾಚರಣೆ ಮಾಡಿ ನನ್ನ ಬಳಿಗೆ ಬನ್ನಿರಿ' ಕೃಷ್ಣಾರ್ಜುನರು 'ಹಾಗೇ ಆಗಲಿ' ಎನ್ನುತ್ತ ಬ್ರಾಹ್ಮಣಪುತ್ರರನ್ನು ಕರೆದುಕೊಂಡು ಹಿಂತಿರುಗಿ ಬಂದರು. ನಾಲ್ಕು ಮಂದಿ ಮಕ್ಕಳನ್ನೂ ಪ್ರಸವವಾಗುವಾಗ ಇದ್ದ ಆಕೃತಿಯಲ್ಲಿಯೇ ಬ್ರಾಹ್ಮಣನಿಗೆ ನೀಡಿದರು.

ಅನಂತಾಸನಲೋಕವನ್ನು ಕಂಡ ಅರ್ಜುನ ವಿಸ್ಮಯಗೊಂಡು ಜನರ ಬಲ ಪೌರುಷಗಳು ಕೃಷ್ಣನ ಅನುಗ್ರಹವನ್ನೇ ಅವಲಂಬಿಸಿರುತ್ತವೆ ಎಂದು ತಿಳಿದ. ಶ್ರೀಕೃಷ್ಣ ಯಾಗಶಾಲೆಯನ್ನು ಪ್ರವೇಶಿಸಿ ಯಜ್ಞದೀಕ್ಷೆಯಲ್ಲಿರುವ ಯಜಮಾನ ಯಜ್ಞಶಾಲೆಯನ್ನು ಬಿಟ್ಟು ಹೊರಗೆ ಹೋಗಬೇಕಾಗಿಬಂದ ಸಂದರ್ಭದಲ್ಲಿ ಮಾಡಬೇಕಾದ ಪ್ರಾಯಶ್ಚಿತ್ತವನ್ನು ಅನುಷ್ಠಾನ ಮಾಡಿ ಯಜ್ಞವನ್ನು ಪೂರ್ತಿಗೊಳಿಸಿದ. ಬ್ರಾಹ್ಮಣರನ್ನೂ ಋತ್ವಿಜರನ್ನೂ ತೃಪ್ತಿಪಡಿಸಿ ಯಮುನಾನದಿಯಲ್ಲಿ ಮಹರ್ಷಿಗಳೊಂದಿಗೆ ಅವಭೃಥ ಸ್ನಾನ ಮಾಡಿ ಯಥೇಚ್ಛ ವಿಹರಿಸಿದ.

❖❖❖

ಅಧ್ಯಾಯ - ೧೦೩

ಅಧ್ಯಾಯ ಸಾರಾಂಶ

ಯಾಗದ ಅವಭೃಥ ಸ್ನಾನಕ್ಕೆ ಶ್ರೀಕೃಷ್ಣ ಯಮುನಾನದಿಗೆ ಬಂದ ವಾರ್ತೆಯನ್ನು ಕೇಳಿ ಕಳಿಂಗರಾಜ ದಂತವಕ್ರ ತಮ್ಮನಾದ ವಿದೂರಥನೊಂದಿಗೆ ದೊಡ್ಡ ಗಜಸೈನ್ಯಯುಕ್ತನಾಗಿ, ದ್ವಾರಕೆಯ ಕಡೆಗೆ ಹೊರಟಿದ್ದ ಶ್ರೀಕೃಷ್ಣನನ್ನು ದಾರಿಯಲ್ಲಿ ತಡೆದ. ಆಗ ಶ್ರೀಕೃಷ್ಣ ಯದುಕುಮಾರರೊಂದಿಗೆ ಹದಿನಾರು ಸಾವಿರದ ನೂರೆಂಟು ಪತ್ನಿಯರ ಮೇನೆಗಳೊಂದಿಗೆ ಪ್ರಯಾಣ ಮಾಡುತ್ತಿದ್ದ. ಕ್ಷತ್ರಿಯರು ಬ್ರಾಹ್ಮಣರು ಋತ್ವಿಜರು ಪುರೋಹಿತರು ಆಚಾರ್ಯರು ಅವನೊಂದಿಗೆ ಇದ್ದರು. ಸಿಂಹವನ್ನು ತಡೆಯಲು ನರಿ ಬಂದಂತೆ ದಂತವಕ್ರ ಕೃಷ್ಣನನ್ನು ತಡೆಯಲು ಬಂದಿದ್ದ. ರುಕ್ಮಿ ಶಿಶುಪಾಲ ಪೌಂಡ್ರಕರು ಹತರಾಗಿದ್ದರಿಂದ ಅವರಿಗೆ ತೃಪ್ತಿ ನೀಡಲೆಂದು ಗದೆಯನ್ನು ಹಿಡಿದು ಕಾಲ್ನಡಿಗೆಯಿಂದ ಭೂಮಿಯನ್ನು ಕಂಪಿಸುತ್ತ ಗೋಚರನಾದ. ಕೃಷ್ಣನೂ ಗದೆಯನ್ನು ಹಿಡಿದು ರಥದಿಂದ ಜಿಗಿದು, ಮಳೆನೀರಿನ ಪ್ರವಾಹ ನದಿಯ ದಂಡೆಯ ಮೇಲೆ ನುಗ್ಗುವಂತೆ ನುಗ್ಗಿ ಬಂದ.

'ಕೃಷ್ಣ ನೀನು ಇಂದು ನನ್ನ ಕಣ್ಣಿಗೆ ಬಿದ್ದುದು ತುಂಬ ಒಳ್ಳೆಯದಾಯಿತು. ಇಂದೇ ನಿನ್ನನ್ನು ದ್ವಂದ್ವ ಯುದ್ಧದಲ್ಲಿ ಕೊಲ್ಲುವೆನು. ನೀನು ನನಗೆ ಸೋದರಮಾವನ ಮಗ. ಆದರೆ ಮಿತ್ರದ್ರೋಹಿ. ಪರಸ್ತ್ರೀಲಂಪಟ, ವಿಶ್ವಾಸಘಾತಕ, ಬಂಧುನಾಶಕ, ಜಗಳಗಂಟ. ನನ್ನ ಸೋದರಮಾವನಾದ ಪೌಂಡ್ರಕನನ್ನೂ ಚಿಕ್ಕಮ್ಮನ ಮಕ್ಕಳಾದ ಶಿಶುಪಾಲ ರುಕ್ಮಿಗಳನ್ನೂ ಕೊಂದಿರುವೆ. ಆದರಿಂದ ನಾನು ನಿನ್ನನ್ನು ಕೊಂದು ಸ್ನೇಹಿತರ ಬಂಧುಗಳ ಋಣದಿಂದ ಮುಕ್ತನಾಗುವೆ. ನೀನು ಬಂಧುವಾಗಿದ್ದರೂ ಬಂಧುರೂಪದ ಶತ್ರು. ಶರೀರದಲ್ಲಿ ಹುಟ್ಟಿದ್ದೆಂದು ರೋಗವನ್ನು ನಾಶಮಾಡದೆ ಉದಾಸೀನ ಮಾಡುವುದುಂಟೆ?' ಎಂದು ಆನೆಯನ್ನು ಅಂಕುಶದಿಂದ ತಿವಿಯುವಂತೆ ಕೃಷ್ಣನನ್ನು ದಂತವಕ್ರ ಕೆಟ್ಟ ಮಾತುಗಳಿಂದ ತಿವಿದು

ಗದೆಯಿಂದ ಹೊಡೆದ. ಸಿಂಹದಂತೆ ಗರ್ಜಿಸಿದ. ಒಡನೆ ಶ್ರೀಕೃಷ್ಣ ಕೌಮೋದಕೀ ಗದೆಯಿಂದ ಅವನೆದೆಗೆ ಹೊಡೆದ. ಅವನು ಎದೆ ಒಡೆದುಕೊಂಡು ಬಾಯಿಂದ ರಕ್ತ ಕಾರುತ್ತ ಕೈಕಾಲುಗಳನ್ನು ಚಾಚಿ ಸತ್ತುಬಿದ್ದ. ಎಲ್ಲ ಜನರೂ ನೋಡುತ್ತಿದ್ದಂತೆ, ಶಿಶುಪಾಲನಂತೆ, ದಂತವಕ್ರನ ಚೈತನ್ಯಪ್ರಕಾಶ ಎದ್ದು ಬಂದು ಶ್ರೀಕೃಷ್ಣನನ್ನು ಪ್ರವೇಶಿಸಿತು.

ಅಣ್ಣನಾದ ದಂತವಕ್ರ ಹತನಾದಾಗ ವಿದೂರಥ ಭ್ರಾತೃಶೋಕದಿಂದ ಒಂದುಕ್ಷಣ ಮೈಮರೆತ, ಒಡನೆ ಚೇತರಿಸಿಕೊಂಡು ಕತ್ತಿ ಗುರಾಣಿಗಳನ್ನು ಹಿಡಿದ. ಶ್ರೀಕೃಷ್ಣ ಬಾಣದಿಂದ ಅವನ ಕತ್ತಿಯನ್ನು ಕತ್ತರಿಸಿದ. ಆತ ಶಕ್ತ್ಯಾಯುಧವನ್ನು ಹಿಡಿದು ಬಾಣದಂತೆ ವೇಗವಾಗಿ ಕೃಷ್ಣನೆದುರಿಗೆ ಧಾವಿಸಿಬಂದ. ಶ್ರೀಕೃಷ್ಣ ಚಕ್ರದಿಂದ ಅವನ ಶಿರವನ್ನು ತರಿದ. ಹೀಗೆ ದಂತವಕ್ರ ವಿದೂರಥರನ್ನು ಕೊಂದು ಅವರ ಸೈನ್ಯವನ್ನು ಓಡಿಸಿ ಅವರ ಆನೆ ಕುದುರೆಗಳನ್ನು ವಶಪಡಿಸಿಕೊಂಡ. ಅಲಂಕೃತವಾದ ದಿವ್ಯವಾದ ತನ್ನ ರಥವನ್ನೇರಿ ದೇವಮಾನವರಿಂದ ಸ್ತುತಿಸಿಕೊಳ್ಳುತ್ತ ಹೂಮಳೆಗರೆಸಿಕೊಳ್ಳುತ್ತ ದ್ವಾರಕೆಯನ್ನು ಪ್ರವೇಶಿಸಿದ. ಹೀಗೆ ಶ್ರೀಕೃಷ್ಣ ರಾಕ್ಷಸಿಯಾದ ಪೂತನೆಯ ಸಂಹಾರದಿಂದ ತೊಡಗಿ ಭೂಮಿಗೆ ಭಾರಭೂತರಾದ ಎಲ್ಲ ಅಸುರರನ್ನು ಸಂಹರಿಸಿದ.

❖❖❖

ಅಧ್ಯಾಯ - ೧೦೪

ಅಧ್ಯಾಯ ಸಾರಾಂಶ

ಶ್ರೀಕೃಷ್ಣ ಸರ್ವಸಂಪತ್ ಸಮೃದ್ಧವಾದ ದ್ವಾರಕಾ ಪಟ್ಟಣದಲ್ಲಿ ಸುಖವಾಗಿ ವಾಸಮಾಡಿದ. ಆ ದ್ವಾರಕೆಯಲ್ಲಿ ಎತ್ತರದ ಅರಮನೆ ಮಾಳಿಗೆಗಳ ಮೇಲೆ ಸ್ತ್ರೀಯರು ಮಿಂಚಿನಂತೆ ಹೊಳೆಯುತ್ತ ಚೆಂಡಾಟವಾಡುತ್ತಿದ್ದರು. ಮಾರ್ಗಗಳಲ್ಲಿ ಚತುರಂಗ ಸೈನ್ಯ ಶೋಭಿಸುತ್ತಿತ್ತು. ಉದ್ಯಾನ ಕೈದೋಟಗಳು ದುಂಬಿ ಹಕ್ಕಿಗಳ ಧ್ವನಿಗಳಿಂದ ಕೂಡಿದ ಹೂಬಿಟ್ಟ ಮರಗಳು ಶೋಭಿಸುತ್ತಿದ್ದವು. ಶ್ರೀಕೃಷ್ಣ ತನ್ನ ಯೋಗ ಸಾಮರ್ಥ್ಯವನ್ನು ತೋರಿಸಲು ಹದಿನಾರು ಸಾವಿರದ ನೂರೆಂಟು ಪತ್ನಿಯರ ಮನೆಗಳಲ್ಲಿ ಹದಿನಾರು ಸಾವಿರದ ನೂರೆಂಟು ರೂಪಗಳಿಂದ ವಿಹರಿಸಿದ. ನದಿಗಳಲ್ಲಿ ಪೂರ್ಣಾನಂದ ನಾದ ಶ್ರೀಕೃಷ್ಣ ಪತ್ನಿಯರೊಂದಿಗೆ ಜಲಕ್ರೀಡೆಯಾಡಿದ. ಆ ಜಲವಿಹಾರವನ್ನು ಗಂಧರ್ವರೂ ಸೂತ ಮಾಗಧ ವಂದಿಗಳೂ ಮೃದಂಗ ಪಣವ ಆನಕಗಳನ್ನು ಬಾರಿಸುತ್ತ ವೀಣೆ ನುಡಿಸುತ್ತ ಹಾಡಿ ಕೊಂಡಾಡಿದರು. ನಗುತ್ತ ಪಿಚಕಾರಿಯಿಂದ ನೀರೆರೆಚುತ್ತಿದ್ದ ಪತ್ನಿಯರಿಗೆ ತಾನೂ ನೀರೆರೆಚುತ್ತ ವಿಹಾರ ಮಾಡಿದ ಶ್ರೀಕೃಷ್ಣ. ಒದ್ದೆ ಬಟ್ಟೆಯಲ್ಲಿ ಸ್ತ್ರೀಯರ ಅಂಗಾಂಗಗಳು ವ್ಯಕ್ತವಾದುವು. ತುರುಬಿಂದ ಹೂಗಳು ಉದುರಿದುವು. ಕಾಂತನ ಕೈಯಿಂದ ಪಿಚಕಾರಿಯನ್ನು ಕಸಿದುಕೊಳ್ಳಲೆಂದು ಮುಗಿಬಿದ್ದು ಅವರು ಅವನನ್ನು ಆಲಿಂಗಿಸಿ ಕಾಮೋದ್ರೇಕಗೊಂಡರು. ಅವರ ಸ್ತನಗಳ ಕುಂಕುಮಕೇಸರಿ ಯಿಂದ ಕೃಷ್ಣನ ವನಮಾಲೆ ಕೆಂಪಾಯಿತು. ಅವನ ಮೈಯ ಕುಂದಪುಷ್ಪ ಸುಗಂಧ ನೀರಲ್ಲಿ ಬೆರೆತಿತು. ಪರಸ್ಪರ ನೀರೆರೆಚುತ್ತ ಹೆಣ್ಣಾನೆಗಳಿಂದ ಸುತ್ತುವರಿಯಲ್ಪಟ್ಟ ಗಜರಾಜನಂತೆ ಶ್ರೀಕೃಷ್ಣ ನೀರಾಟವಾಡಿದ. ಬ್ರಹ್ಮಾದಿ ದೇವತೆಗಳಿಗೂ ತಿಳಿಯಲಾಗದ ಸ್ವರೂಪದವನಾದ ಶ್ರೀಕೃಷ್ಣನನ್ನು ಪತಿಯಾಗಿ ಪಡೆದ ಆ ಸ್ತ್ರೀಯರು ಸದಾ ಉಕ್ಕುವ ಅನುರಾಗದಿಂದ ನಗುತ್ತ ನೋಡುತ್ತ ಚಿರನೂತನವಾದ ಅಂಗಸಂಗದಿಂದ ನಾಚುತ್ತ ಅವನನ್ನು ಸೇವಿಸಿದರು.

❖❖❖

ಅಧ್ಯಾಯ - ೧೦೫

ಅಧ್ಯಾಯ ಸಾರಾಂಶ

ಶ್ರೀಕೃಷ್ಣ ಭೂಮಂಡಲವನ್ನು ಆಳುತ್ತಿದ್ದಾಗ ದ್ವಾರಕೆಯಲ್ಲಿ ವೇದೋಕ್ತ ಧರ್ಮಾನುಷ್ಠಾನ ಮಾಡುತ್ತ ಜನರಿಗೆ ಗೃಹಸ್ಥನು ಧರ್ಮ ಅರ್ಥಕಾಮಗಳೆಂಬ ತ್ರಿವರ್ಗಕ್ಕೆ ಹೇಗೆ ಆಶ್ರಯನಾಗಿರಬೇಕೆಂದು ತೋರಿಸಿದ. ಹನ್ನೆರಡು ಯೋಜನ ವಿಸ್ತಾರದ ದ್ವಾರಕೆ ಮುನಿಗಳಿಂದಲೂ ಬ್ರಾಹ್ಮಣ ಕ್ಷತ್ರಿಯರಿಂದಲೂ ವಂದಿಗಳಿಂದಲೂ ತುಂಬಿಕೊಂಡು ಸದಾ ಅಲಂಕೃತವಾಗಿತ್ತು. ಪಿಂಡಾರಕಕ್ಷೇತ್ರ ಕುರುಕ್ಷೇತ್ರ ಶಾಲಗ್ರಾಮ ಪುಷ್ಕರ ವಾರಣಾಸಿ ಪ್ರಯಾಗ ವೇಂಕಟಾದ್ರಿ ಶ್ರೀಶೈಲ ಗೋಕರ್ಣ ಸಹ್ಯಾದ್ರಿ ಕುಮಾರಾದ್ರಿ ಗೋದಾವರೀ ~~ನರ್ಮದಾತೀರ ಶೂರ್ಪಾರಕ ಪ್ರಭಾಸ ಬದರಿಕಾಶ್ರಮ ನೈಮಿಷಾರಣ್ಯ~~ ಮುಂತಾದ ಎಲ್ಲ ಪುಣ್ಯಕ್ಷೇತ್ರಗಳಿಂದಲೂ ಮುನಿಗಳು ದ್ವಾರಕೆಗೇ ಬಂದು ಭಗವಂತನಲ್ಲಿ ನಿಷ್ಠೆಯಿಂದ ನಿತ್ಯವ್ರತ ಪರಾಯಣರಾಗುತ್ತಿದ್ದರು. ಅವರಲ್ಲಿ ಕೆಲವರು ಬರಿ ನೀರು ಗಾಳಿ **ಸೇವಿಸುತ್ತ** ಕೆಲವರು ನಿರಾಹಾರರಾಗಿ ವ್ರತನಿಷ್ಠರಾಗುತ್ತಿದ್ದರು. **ಅಧ್ಯ**ಯನ ಧ್ಯಾನ ಸಮಾಧಿ ನಿರತರಾಗುತ್ತಿದ್ದರು. ಮೈಯಲ್ಲಿ ಅಸ್ಥಿ **ಚರ್ಮ ಮಾತ್ರ**ವಿದ್ದು ನರನಾಡಿಗಳು ಎದ್ದು ಕಾಣಿಸುತ್ತಿದ್ದವು. ಆದರೆ **ಸದಾ ತತ್ವವಿಚಾರ ನಡೆಸುತ್ತ** ಶ್ರೀಕೃಷ್ಣನನ್ನು ಸೇವಿಸುತ್ತಿದ್ದರು. ರಾಜರು **ಮುನಿಗಳು ಸೂತಮಾಗಧರು** ಕೃಷ್ಣನ **ಉಪಾಸನೆ ಮಾಡುತ್ತ ಮಂಗಲಧ್ವನಿಯಿಂದ ವೇದಘೋಷ ವಾದ್ಯಘೋಷಗಳಿಂದ ನಗರದಲ್ಲಿ ಪ್ರತಿಧ್ವನಿ ಹಬ್ಬುವಂತೆ ಮಾಡಿದರು. ಹೀಗೆ** ಶ್ರೀಕೃಷ್ಣನ ಸನ್ನಿಧಾನದಿಂದ **ಸಕಲ ತೀರ್ಥಕ್ಷೇತ್ರಗಳಿಗೂ** ದ್ವಾರಕೆಯೆ ಅಗ್ರಗಣ್ಯ**ವೆನಿಸಿತು.**

ಸರ್ವೇಶ್ವರನಾದ **ಶ್ರೀಕೃಷ್ಣ ಹದಿನಾರು** ಸಾವಿರದ ನೂರೆಂಟು ಪತ್ನಿಯರಲ್ಲಿ ಪ್ರತಿ**ಯೊಬ್ಬರಲ್ಲಿಯೂ ಹತ್ತು** ಹತ್ತು ಮಕ್ಕಳನ್ನು ಹುಟ್ಟಿಸಿದ. ಅವರೆಲ್ಲರೂ ಮಹಾ**ಪರಾಕ್ರಮಿಗಳು**. ಅವರಲ್ಲಿ ಹದಿನೆಂಟು ಮಂದಿ ಮಹಾರಥರೆನಿಸಿದರು. **ಪ್ರದ್ಯುಮ್ನ ಚಾರು**ದೇಷ್ಣ ದೀಪ್ತಿಮಂತ ಭಾನು

ಸಾಂಬ ಮಿತ್ರ ಬೃಹದ್ಭಾನು ಭಾನುವಿಂದ ವೃಕ ಅರುಣ ಪುಷ್ಕರ ದೇವಬಾಹು ಚಕ್ರದೇವ ಸುನಂದನ ಚಿತ್ರಭಾನು ವರೂಥ ಕವಿ ನ್ಯಗ್ರೋಧ—ಇವರು ಹದಿನೆಂಟು ಮಹಾರಥರು. ತ್ರಿವಕ್ರೆಯ ಪುತ್ರನಾದ ವಿಶೋಕ ಶ್ರೀಕೃಷ್ಣನ ಭಕ್ತ. ನಾರದರ ಶಿಷ್ಯ. ಅವರು ಅವನಿಗೆ ಪೂರ್ಣಜ್ಞಾನ ನೀಡಿದರು. ಪಂಚರಾತ್ರವನ್ನು ಉಪದೇಶಿಸಿದರು. ಪಂಚರಾತ್ರವನ್ನು ತಿಳಿದರೆ ಮುಕ್ತಿ ಲಭಿಸುತ್ತದೆ. ಸ್ವರೂಪಶರೀರ ವ್ಯಕ್ತವಾಗುತ್ತದೆ. ಆ ಶಾಸ್ತ್ರದಲ್ಲಿ ಸ್ತ್ರೀಶೂದ್ರರಿಗೂ, ಬೆಸ್ತರಿಗೂ ಕೂಡ ವೈಷ್ಣವ ಸಂಸ್ಕಾರಗಳು ಉಕ್ತವಾಗಿವೆ.

ಪ್ರದ್ಯುಮ್ನ ಶ್ರೀಕೃಷ್ಣನಿಂದ ರುಕ್ಮಿಣಿಯಲ್ಲಿ ಜನಿಸಿದ ಜ್ಯೇಷ್ಠಪುತ್ರ. ಅವನು ರುಕ್ಮಿಯ ಮಗಳಾದ ರುಕ್ಮವತಿಯಲ್ಲಿ ಅನಿರುದ್ಧನೆಂಬ ಮಗನನ್ನು ಪಡೆದ. ರುಕ್ಮಿಯ ಮಗಳ ಮಗನಾದ ಅನಿರುದ್ಧ ರುಕ್ಮಿಯ ಮಗನ ಮಗಳಾದ ರೋಚನೆಯನ್ನು ಮದುವೆಯಾದ. ಅವಳಲ್ಲಿ ವಜ್ರ ಜನಿಸಿದ

ಯಾದವೀಕಲಹದಲ್ಲಿ ಎಲ್ಲ ಯಾದವರೂ ಹತರಾದಾಗ ಶ್ರೀಕೃಷ್ಣನ ಇಚ್ಛೆಯಿಂದ ವಜ್ರ ಮಾತ್ರ ಉಳಿದುಕೊಂಡ. ಅರ್ಜುನ ಅವನಿಗೆ ಉಗ್ರಸೇನನ ರಾಜ್ಯದಲ್ಲಿ ಅಭಿಷೇಕಗೈದ. ವಜ್ರನಿಂದ ಪ್ರತಿಬಾಹು ಜನಿಸಿದ. ಅವನಿಂದ ಸುಬಾಹು ಸುಬಾಹುವಿನ ಪುತ್ರ ಉಗ್ರಸೇನ. ಅವನ ಪುತ್ರ ಶತಸೇನ. ಈ ಯಾದವಕುಲದಲ್ಲಿ ದರಿದ್ರರು ಬಹುಸಂತತಿ ಇಲ್ಲದವರು ಅಲ್ಪಾಯುಷಿಗಳು ಅಲ್ಪಶಕ್ತರು ಬ್ರಾಹ್ಮಣ ಭಕ್ತಿ ಇಲ್ಲದವರು ಯಾರೂ ಹುಟ್ಟಲಿಲ್ಲ.

ಯದುಕುಲದಲ್ಲಿ ಹುಟ್ಟಿದ ಜನರ ಸಂಖ್ಯೆಯನ್ನು ಹತ್ತು ಸಾವಿರ ವರ್ಷಕಾಲ ಎಣಿಸಿದರೂ ಎಷ್ಟೆಂದು ಹೇಳಲು ಶಕ್ಯವಾಗದು. ಯಾದವರ ಮಕ್ಕಳಿಗೆ ಉಪಾಧ್ಯಾಯರು ಮೂರುಕೋಟಿ ಎಂಬತ್ತೆಂಟು ಸಾವಿರದ ಮುನ್ನೂರು ಜನರಿದ್ದರು. ಹೀಗಿರುವಾಗ ಯಾದವರ ಜನಸಂಖ್ಯೆಯನ್ನು ಯಾರು ಹೇಳಬಲ್ಲ? ಉಗ್ರಸೇನನ ತಂದೆ ಆಹುಕನೊಬ್ಬನೆ ಹತ್ತುಸಾವಿರ ಯಾದವರನ್ನು ಆಳಿದ. **ದೇವಾಸುರ ಸಂಗ್ರಾಮದಲ್ಲಿ ಹತರಾದ ದಾನವರು ಮಾನವರಾಗಿ ಜನಿಸಿ ಜನರಿಗೆ ಪೀಡೆ ಉಂಟುಮಾಡಿದ್ದರಿಂದ ಶ್ರೀಹರಿಯಾಜ್ಞೆಯಂತೆ ದೇವತೆಗಳೂ ಯಾದವಕುಲದಲ್ಲಿ ಅವತರಿಸಿದರು. ಅವರ ಕುಲಗಳು ನೂರಾಒಂದು. ಯಾದವರಲ್ಲಿ ಅವತರಿಸಿದ ದೇವತೆಗಳಿಗೆ ಸಾಮರ್ಥ್ಯ**.

ನೀಡಿದವನು ಭಗವಾನ್ ಶ್ರೀಕೃಷ್ಣ ಅವನ ಪರಿವಾರದವರಾಗಿ ಅವರೆಲ್ಲರೂ ಪ್ರವರ್ಧಮಾನರಾದರು. ಮಲಗುವುದು ಕೂಡುವುದು ಓಡಾಡುವುದು ಮುಂತಾದ ಎಲ್ಲ ಕಾಲಗಳಲ್ಲಿ ಯಾದವರಿಗೆ ಶ್ರೀಕೃಷ್ಣ ಜೊತೆಗೇ ಇರುತ್ತಿದ್ದುದರಿಂದ ಅವರು ತಮ್ಮನ್ನು ತಾವೇ ತಿಳಿಯುತ್ತಿರಲಿಲ್ಲ. ಮರೆತುಬಿಡುತ್ತಿದ್ದರು. ವೇದದ ಎಲ್ಲ ವಿಧಿ ನಿಷೇಧಗಳೂ ಶ್ರೀಕೃಷ್ಣನ ಆರಾಧನೆಗಾಗಿಯೆ. ಆದರೂ ಶ್ರೀಕೃಷ್ಣ ಕುರುಕ್ಷೇತ್ರದಲ್ಲಿ ಹನ್ನೆರಡು ವರ್ಷಕಾಲ ಯಜ್ಞಮಾಡಿ ತನ್ನನ್ನು ತಾನೇ ಆರಾಧಿಸಿಕೊಂಡ. ಆಗ ಶ್ರೀವೇದವ್ಯಾಸರು ವಿಶ್ವಾಮಿತ್ರರು ಅಸಿತಮುನಿ ಸಾಂದೀಪನಿ ಮತ್ತು ಪರಶುರಾಮ ಇವರು ಶ್ರೀಕೃಷ್ಣನಿಗೆ ಪುರೋಹಿತರು ಮತ್ತು ಉದ್ಧವ ಮಂತ್ರಿಯಾಗಿದ್ದ.

ಶ್ರೀಕೃಷ್ಣನ ಮಂಗಳ ಕಥೆಯ ಕಥನ ಶ್ರವಣ ಧ್ಯಾನಗಳನ್ನು ಮಾಡಿದರೆ ಸಾಕು, ದುಷ್ಕರವಾದ ತಪಸ್ಸಿನಿಂದ ಹೊಂದಬಹುದಾದ ವಿಷ್ಣುಲೋಕವನ್ನೇ ಪಡೆಯಬಹುದು.

❖❖❖

ಕರಡುಪ್ರತಿ ತಿದ್ದಿದ್ದು ಮುದ್ರಣಕಾರ್ಯದಲ್ಲಿ ಕೆಲವು ತಪ್ಪುಗಳು ಕಂಡಿದ್ದು - ಈ ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ. ಈ ಅನಿವಾರ್ಯಕ್ಕೆ ತಮ್ಮ ಕ್ಷಮೆ ಇರಲಿ.

ಪುಟ ಸಂಖ್ಯೆ	ಸಾಲು	ತಪ್ಪು	ಒಪ್ಪು
277	26	ನ	ಮ
353	12	ಲ್ಲಿ	ಲ್ಪಿ
359	07	ರ	ನ

386 ಪ್ಯಾರಾ 3ಕ್ಕೆ ಪದ್ಯ 1 ಅಂತ ಮುಂದಿನ ಪುಟಗಳಿಂದ ಪ್ರತಿ ಪ್ಯಾರಾಕ್ಕೆ 1 ಪದ್ಯವೆಂದು ಭಾವಿಸಿ ಪುಟ ಸಂಖ್ಯೆ 392 ಪ್ಯಾರಾ 2ರ ವರೆಗೂ 27 ಪದ್ಯವೆಂದು ಓದಬೇಕು (ಶೃತಿ ಗೀತೆ 1ರಿಂದ 27ರ ತನಕ)

398	10	ರೂಪವೇಕೆ	ರೂಪಕವೇಕೆ.
462	11	ಸ್ವ	ಸ್ಮ
520	15	ಪರಂಪರ ಯಾ	ಪರಂಪರಯಾ
~~549~~	~~22~~	~~ಭಾಗವತಶಾಸ~~	~~ಭಾಗವತ ಶಾಸ~~